

ಹಾಜರಾ




ತುರ್ಕೀ ದೇಶದ

ಕಥೆ

"ಅದಾಲತ್"

ಂಬ ನಾಮಾಂಕಿತದಿಂದ ಒಬ್ಬ ತುರ್ಕೀ ಸ್ತ್ರೀ
ಯಿಂದ ಬರೆಯಲ್ಪಟ್ಟಿದ್ದು



ಶ್ರೀಮತಿ ಸಾವಿತ್ರಮ್ಮನವರಿಗೆ
ರಾಜೇಶ್ವರಿ ಚಾಟರ್ಜಿಯಿಂದ
ವಿಶ್ವಾಸದಿಂದ

ಪ್ರಥಮ ಭಾಗ

ಹಾಜಿರಾ

(ತುರ್ಕಿ ದೇಶದ ಕಾದಂಬರಿ)

ಮೂಲ : ಅದಾಲತ್

ಕನ್ನಡಕ್ಕೆ ಅನುವಾದ : ಪುಟ್ಟಮ್ಮ ಸೇತೂರಾವ್

ಪ್ರಕಾಶಕರು :
ವಿಜಯ ಶ್ರೀಕಂಠಯ್ಯ
ನಂ. ೧೦೦೫ "ವ್ರೋಷನ್ ವ್ಯೂ"
ಕಾರ್ಟರ್ ರಸ್ತೆ ಬಳಿ
ಪಶ್ಚಿಮಖಾರ್, ಮುಂಬೈ-೪೦೦ ೦೫೨.

"HAZIRA"—a social Novel in Kannada by Puttamma Sethurao, a translation of original 'Hazira' in Turkish by 'Adalatou'
First Edition 1990.

ಬೆಲೆ ರೂ. 36/-

Printed at : Sudarshan Enterprises, No. 287, Ramanuja Road, Mysore-4.

ಅರ್ಪಣೆ



ನನ್ನ ಪೂಜ್ಯ ತಾಯಿಯವರಾದ

ದಿ|| ಪುಟ್ಟಮ್ಮ ಸೇತೂರಾವ್

ಅವರ ಪುಣ್ಯಸ್ಮರಣೆಗೆ ಅರ್ಪಿತ

ಮುನ್ನುಡಿ

ಆದಿಲ್ ಎಂಬುವರ ಒಂದು ತುರ್ಕಿಸ್ಥಾನದ ಕಥೆ. ಅದನ್ನು ಪುಟ್ಟಮ್ಮಾ ಸೇತುರಾವ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಹಾಜಿರಾ ಎಂಬುವಳು ಖಸ್‌ತಂತನಿಯಾದ ಒಂದು ಶ್ರೀಮಂತ ಕುಟುಂಬದಲ್ಲಿ ಸೇವಕಿ. ನಸಿರುಲ್ಲಾ ಪಾಷಾ ಎಂಬುವರು ಆ ಕುಟುಂಬದ ಯಜಮಾನರು. ಅವರು ಅಲ್ಲಿಯ ಗವರ್ನರ್ ಸಹ. ಈತನ ಮೂರನೆ ಮಗನು, ಹಾಜಿರಾಳನ್ನು ಪ್ರೀತಿಸುತ್ತಾನೆ. ಮದುವೆಯಾಗಲು ಇಚ್ಛೆಯನ್ನೂ ಪ್ರಕಟಿಸುತ್ತಾನೆ. ಆದರೆ ಅವರ ತಾಯಿ ತಂದೆಯರು ಇದಕ್ಕೆ ಒಪ್ಪುವುದಿಲ್ಲ. ಹಾಜಿರಾಳನ್ನು ಯಾವುದೋ ಒಂದು ಸ್ಥಳಕ್ಕೆ ಕರೆದೊಯ್ಯುವರು. ಸುಮಾರು ಐದು ವರ್ಷದಕಾಲ ಆಕೆಯು ತನ್ನ ಹುಟ್ಟಿದ ಊರಿನಲ್ಲಿಯೇ ಕಾಲ ಕಳೆಯುವಳು. ಇದು ಅವಳ ಪ್ರೇಮಿಯಾದ ನಾಫಿಜ್‌ಬೇಗೆ ಗೊತ್ತಾಗುವುದಿಲ್ಲ. ಅವನು ಅವಳನ್ನು ಹುಡುಕಿ ಹುಡುಕಿ, ಕಡೆಗೆ ಬೇಸತ್ತು ಮತ್ತೊಬ್ಬಳನ್ನು ಮದುವೆಯಾಗಲು ಒಪ್ಪುತ್ತಾನೆ. ಅನಾತೂಲಿಯಾದ ಇನ್ನೊಬ್ಬ ಶ್ರೀಮಂತನ ಮನೆತನದಲ್ಲಿ ಮದುವೆಯಾಗುವನು. ಆದರೆ ಈ ವಿವಾಹ ಅಷ್ಟೇನು ಸ್ವಾರಸ್ಯಕರವಾಗಲಿಲ್ಲ. ಅವನ ಹೆಂಡತಿ ಅವನಿಂದ ಬಿಡುಗಡೆ ಪಡೆಯುವಳು ಸ್ವೇಚ್ಛೆಯಿಂದ (ಖುಲಾ) ಆಗ ನಾಫಿಜ್‌ಬೇ ಹಾಜಿರಾಳನ್ನು ಹುಡುಕಲು ಪ್ರಯತ್ನಿಸುವನು. ಮುಂದೆ ಏನಾಗುವುದು ಈ ಕಥೆಯನ್ನು ಓದಿಯೇ ಅರಿಯಬೇಕು. ಇದು ಕಥೆಯ ಸಾರಾಂಶ.

ಇಲ್ಲಿ ಎರಡು ಕುಟುಂಬಗಳ ಮನೆಯ ಶಿಸ್ತು ಮತ್ತು ಪರಂಪರೆಯನ್ನು ತಿಳಿಸಲಾಗಿದೆ. ಖಸ್‌ತಂತನಿಯಾದ ಮನೆಯಲ್ಲಿ ಅತಿ ಶಿಸ್ತು ಮತ್ತು ಪರಂಪರೆಗು ದಾಸರಾಗಿ ಒಂದು ಜೀವನವನ್ನೆ ಹಾಳುಮಾಡುವುದು. ಅನಾತೂಲಿಯಾದ ಮನೆತನದಲ್ಲಿ ಸ್ವೇಚ್ಛಾಚಾರಕ್ಕೆ ಆಸ್ಪದ ಕೊಟ್ಟು, ವಿವಾಹ ವಿಚ್ಛೇದನವಾಗಿ, ದಾಂಪತ್ಯ ಜೀವನವೇ ಹಾಳಾಗಿಹೋಗುವುದು.

ಹಾಜಿರೆ, ತನ್ನ ನಿರ್ಮಲ ಶೀಲವನ್ನು ಕಾಯ್ದುಕೊಂಡು ಬರುವಳು. ಎಷ್ಟೇ ಸಮಸ್ಯೆಗಳು ಬಂದರೂ, ಅವುಗಳನ್ನು ಎದುರಿಸುವ ಸಾಹಸ ಅವಳದು. ಕಡೆಗೆ ಅವಳು ಜಯಶೀಲಳಾಗುತ್ತಾಳೆ.

ನಾಫಿಜ್‌ಬೇ-ಅವನ ಪ್ರೇಮದ ಹುಚ್ಚು ಮೆಚ್ಚ ತಕ್ಕಂತಹದು.

ತನ್ನ ಮನೆತನದ ಗೌರವಕ್ಕೆ ಕುಂದು ತರದೆ, ಅವನೂ, ಜಯಶೀಲನಾಗುತ್ತಾನೆ.

ಈ ಕತೆಯಲ್ಲಿ ಪಾತ್ರಗಳು ಸಜೀವವಾಗಿ ಬೆಳಸಲ್ಪಟ್ಟಿವೆ. ತುರ್ಕಿ ದೇಶದ ಸಂಸ್ಕೃತಿ ಬಹಳ ಚೆನ್ನಾಗಿ ನಿರೂಪಿಸಲ್ಪಟ್ಟಿದೆ. ಅಲ್ಲಿಯ ಜನರ ಆತ್ಮಗೌರವ, ಹಿರಿಯರಿಗೆ ಮಾನಮರ್ಯಾದೆ, ಪರಂಪರೆಯಲ್ಲಿ ವಿಶ್ವಾಸ, ದೇಶಪ್ರೇಮ ಎಲ್ಲವೂ ಚೆನ್ನಾಗಿ ವರ್ಣಿಸಲ್ಪಟ್ಟಿವೆ.

ತುರ್ಕಿ ದೇಶವು ಕೆಲವು ಕಾಲ ಇಂಗ್ಲೀಷರ ಆಡಳಿತದಲ್ಲಿತ್ತು. ಆ ಕಾಲದ ಸಂಸ್ಕೃತಿ ಹೇಗಿತ್ತೆಂದು ಇಲ್ಲಿ ತಿಳಿಯಬಹುದು. ಕೆಲವು ದಿನಗಳಾದ ಮೇಲೆ ತುರ್ಕಿದೇಶವು ರಷಿಯಾದೇಶದೊಡನೆ ಹೋರಾಡಬೇಕಾಯಿತು. ಪ್ರತಿಯೊಬ್ಬ ನಾಗರೀಕನೂ ತನ್ನ ದೇಶಕ್ಕಾಗಿ ಹೋರಾಡಲು ಸಿದ್ಧನಾಗುತ್ತಾನೆ.

ಇಲ್ಲಿ ಭಾಷೆ ಸ್ವಲ್ಪ ಕೃತ್ರಿಮವಾದರೂ, ಶುಷ್ಕತೆ ಎಲ್ಲಿಯೂ ಸುಳಿದಿಲ್ಲ. ಕಾದಂಬರಿಯ ಜೀವಾಳ ಕಾತುರತೆ ಮತ್ತು ಉತ್ಸಾಹ. ಇವುಗಳನ್ನು ಕತೆಯು ಮುಗಿಯುವವರೆಗೂ ಕಾದಿರಿಸಲಾಗಿದೆ. ಶೈಲಿ ಸಹಜ ಮತ್ತು ಸುಂದರ. ಸಂಭಾಷಣೆ ಸರಳ ಮತ್ತು ಗಂಭೀರ. ಭಾವಕ್ಕೆ ತಕ್ಕಂತೆ ಭಾಷೆ ಬಳಸಲ್ಪಟ್ಟಿದೆ.

ಹೆಣ್ಣಿನ ಮನೋಧರ್ಮ, ನಿಸರ್ಗದ ವರ್ಣನೆ, ಧರ್ಮದ ಪರಿಪಾಲನೆ, ಆಗಿನ ರೀತಿನೀತಿಗಳನ್ನು ಮನಮುಟ್ಟುವಂತೆ ವರ್ಣಿಸಲಾಗಿದೆ.

ಒಟ್ಟಿನಲ್ಲಿ ಕಾದಂಬರಿಯು ತುರ್ಕಿದೇಶದ ಸಂಸ್ಕೃತಿಯ ಕೈಗನ್ನಡಿಯಾಗಿದೆ.

"ಸತ್ಯಾನಂದ"
24-12-89

Dr. K. Muddanna
M.B.B.S., F.C.G.P. (India)
Regd. (No.) (10753)
Chatuar Bhasha Chatur
Sahitya Marthanda
Khayyam-E-Karnataka

656, 100 feet Road,
I Stage, Indiranagar,
Bangalore-560 038.
Tel : 577266

ಲೇಖಕಿಯ ಪರಿಚಯ

ನಮ್ಮ ತಾಯಿ ಶ್ರೀಮತಿ ಪುಟ್ಟಮ್ಮ ಸೇತೂರಾವ್ ಅವರು ಜನ್ಮವೆತ್ತಿದ್ದು ೧೯೦೨ರಲ್ಲಿ. ಕೇವಲ ನಲವತ್ತೈದು ಸಂವತ್ಸರಗಳು ಮಾತ್ರ ಬದುಕಿ ೧೯೪೭ರಲ್ಲಿ ಕಣ್ಮರೆಯಾದರು.

ಹಾಡ್ಯ ದಾಸಪ್ಪ ಮತ್ತು ಕಮಲಮ್ಮ ದಾಸಪ್ಪ ಇವರ ಹಿರೇಮಗಳು ನಮ್ಮಮ್ಮ. ದಾಸಪ್ಪನವರು ಹಳೇ ಮೈಸೂರು ಸಿವಿಲ್ ಸರ್ವಿಸ್‌ನಲ್ಲಿ ಒಳ್ಳೆಯ ಪದವಿಯಲ್ಲಿದ್ದು ಒಂದು ದಿನ ನಂಜನಗೂಡಿನ ಕಪಿಲಾನದಿಯಲ್ಲಿ ಮುಳುಗಿದವರು ಪುನಃ ಹಿಂದಿರುಗಲಿಲ್ಲ. ಅಂದು ಅವರ ಇಪ್ಪತ್ತೈದನೆಯ ಹುಟ್ಟು ಹಬ್ಬವಾಗಿತ್ತು.

ಅಜ್ಜಿ ಕಮಲಮ್ಮನಿಗೆ ಆಗ ತಾನೇ ಹದಿನೆಂಟು ವರ್ಷ ತುಂಬಿತ್ತು. ಅವರ ತಂದೆ ಕುಣಿಗಲು ರಾಮಸ್ವಾಮಯ್ಯನವರ ಉತ್ತೇಜನದ ಫಲವಾಗಿ ಆಕೆ ಕಾಲೇಜಿನಲ್ಲಿ ಓದಿ ಮದರಾಸ್ ವಿಶ್ವವಿದ್ಯಾನಿಲಯದಿಂದ ೧೯೧೬ರಲ್ಲಿ ಬಿ.ಎ. ಡಿಗ್ರಿಯನ್ನು ಪಡೆದರು. ಉನ್ನತ ಶಿಕ್ಷಣ ಪಡೆದ ಆಗಿನ ಕಾಲದ ಕೆಲವೇ ಮಹಿಳೆಯರಲ್ಲಿ ಇವರು ಒಬ್ಬರು.

೧೯೧೬ರ ತರುವಾಯ ೧೯೬೫ರ ವರೆಗೂ ಅವರು ಬೆಂಗಳೂರಿನ ಕೃಷ್ಣರಾಜೇಂದ್ರ ರಸ್ತೆಯಲ್ಲಿರುವ ಮಹಿಳಾ ಸೇವಾ ಸಮಾಜದ ಕಾರ್ಯದರ್ಶಿ ಪದವಿಯಲ್ಲಿ ಮಹಿಳೆಯರ ವಿದ್ಯಾಭ್ಯಾಸ ಅಭ್ಯುದಯಗಳಿಗಾಗಿ ಬಿಡದೆ ದುಡಿದರು. ಅನೇಕ ಅನಾಥ ಮಹಿಳೆಯರನ್ನೂ, ವಿಧವೆಯರನ್ನೂ ಪೋಷಿಸಿ ಅವರನ್ನು ಉದ್ಯಮಗಳಿಗೂ ಹಚ್ಚಿ ನೆರವಾದ ಈ ಸಂಸ್ಥೆ ಇಂದಿಗೂ ಮಹಿಳಾ ವಿದ್ಯಾಭ್ಯಾಸದ ಒಂದು ಮಾದರಿ ಕೇಂದ್ರವಾಗಿ ಕಾರ್ಯಗತವಾಗಿದೆ.

ಇಂಥ ಹಿನ್ನೆಲೆಯಲ್ಲಿ ಆಡಿಪಾಡಿ ಬೆಳೆದ ಪುಟ್ಟಮ್ಮ ಚಿಕ್ಕವಯಸ್ಸಿನಲ್ಲಿ ಮದುವೆಯಾದರೂ ತಾಯಿಯ ಪ್ರೋತ್ಸಾಹದಿಂದ ವಿದ್ಯಾಭ್ಯಾಸವನ್ನು ಮುಂದುವರಿಸಿ ಸುಶಿಕ್ಷಿತರಾದರು. ಮೊದಲು ಮದ್ರಾಸಿನಲ್ಲೂ—ಆಗ ಅವರಮ್ಮ ಅಲ್ಲಿ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುತ್ತಿದ್ದರು—ಅನಂತರ ಬೆಂಗಳೂರಿನಲ್ಲಿ—ಈಗ ಮಿತ್ರಾಲಯ ಹೆಣ್ಣು ಮಕ್ಕಳ ಶಾಲೆಯೆಂದು ಕರೆಸಿಕೊಳ್ಳುವ ಲಂಡನ್ ಮಿಷನ್ ಬಾಲಕಿಯರ ಶಾಲೆಯಲ್ಲೂ ಓದಿದರು. ಕನ್ನಡ, ಇಂಗ್ಲಿಷ್ ಜೊತೆಗೆ ತಮಿಳನ್ನೂ ಚೆನ್ನಾಗಿ ಅಭ್ಯಾಸಮಾಡಿದರು. ಕರ್ನಾಟಕ ಸಂಗೀತದಲ್ಲಿ ಬಹಳ ಆಸಕ್ತಿ ತಳೆದು, ಶಿಕ್ಷಣ ಪಡೆದು ಇಂಪಾಗಿ ಹಾಡು

ವುದನ್ನೂ, ನುರಿತ ಕೈಯಿಂದ ನುಡಿಸುವ ಪಿಟೀಲು ವಾದನವನ್ನೂ ಕಲಿತರು. ಮನೆ ಜವಾಬ್ದಾರಿ ನಿರ್ವಹಿಸುವ ಕಾರ್ಯದಲ್ಲೂ ಪ್ರವೀಣೆ ಎನಿಸಿದರು.

ಅವರಿಗೆ ಉರ್ದು ಭಾಷೆಯ ಮೇಲೆ ಆಸಕ್ತಿ ಗರಿಗೆದರಿದ್ದು ಸುಮಾರು ೧೯೩೦ರ ಹೊತ್ತಿಗೆ, ಅವರ ಚಿಕ್ಕಪ್ಪ ದಿವಂಗತ ಎಚ್. ಎಸ್. ನಂಜುಂಡಯ್ಯನವರಿಂದ ಬಂದ ದೊಡ್ಡ ಪ್ರೋತ್ಸಾಹ ಅವರ ಉರ್ದು ಭಾಷೆಯ ಬೆಳವಣಿಗೆಗೆ ನೀರೆರೆಯಿತು. ನಂಜುಂಡಯ್ಯನವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದೊಂದೇ ಅಲ್ಲದೇ, ಉರ್ದು, ಹಿಂದಿ, ಫಾರ್ಸಿ ಭಾಷೆಗಳಲ್ಲೂ ಅಪಾರ ಪಾಂಡಿತ್ಯಗಳಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯ ಅವರನ್ನು ಉರ್ದು, ಹಿಂದಿ ಬೋರ್ಡಿನ ಸದಸ್ಯರಾಗಿ ಸಹ ನೇಮಕ ಮಾಡಿತ್ತು. ಇವರ ಆಸರೆಯಿಂದ ಉರ್ದು ಕಲಿಯಲು ಮುಂದಾದ ಮಗಳಿಗೆ ತಾಯಿ ಕಮಲಮ್ಮ ಪಾಠ ಕಲಿಸಲು ಉರ್ದು ಮುನ್ಷಿಯೊಬ್ಬರನ್ನು ಗೊತ್ತು ಮಾಡಿದರು. ಆಗಿನ ಕಾಲದ ಶ್ರೀಮತಿ ಹಮೀದ್‌ಅಲಿ ಮುಂತಾದ ಪ್ರಮುಖ ಮಹಿಳೆಯರ ಉರ್ದು ಭಾಷಣಗಳನ್ನು ಆಗಿಂದಾಗ್ಗೆ ಕೇಳುತ್ತಿದ್ದ ಅವರಿಗೆ, ಏನಾದರೂ ಆಗಲಿ, ಉರ್ದು ಭಾಷೆಯನ್ನು ಕಲಿಯಲೇ ಬೇಕೆಂಬ ಹಠಮೂಡಿಬಂತು. ಹಿಂದಿನ ಮೈಸೂರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲೂ ಉರ್ದು ಭಾಷೆಯನ್ನೇ ದ್ವಿತೀಯ ಭಾಷೆಯಾಗಿ ಆರಿಸಿಕೊಂಡು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದರು.

ಹೀಗೆ ಬಹುಮುಖ ಪ್ರತಿಭೆಯಿಂದೊಡಗೂಡಿದ ಪುಟ್ಟಮ್ಮನ ವ್ಯಕ್ತಿತ್ವ, ಸಾಹಿತ್ಯ, ಸಂಗೀತ, ಭಾಷಾವಿಜ್ಞಾನಗಳೊಡನೆ ಚಿತ್ರಕಲಾ ಕಡೆಗೂ ತೆರಳಿ ಜೀವನವನ್ನು ವಿಕಾಸಗೊಳಿಸಿಗೊಂಡಿತು. ಶುದ್ಧ ಚಾರಿತ್ರ್ಯ, ವಿಶಾಲ ದೃಷ್ಟಿ, ತುಂಬು ಪ್ರೀತಿಯಿಂದ ಚಲಿಸುತ್ತಿದ್ದ ಅವರಿಗೆ ಅಭಾವಗಳಿಂದ ನೋಯುತ್ತಿದ್ದ ಜನರ ಬಗೆಗೆ ಅತಿ ಮರುಕ, ಚಿಂತನೆ, ಮೂಕವೇದನೆ, ಸದಾ ಅವರ ಕಣ್ಣೊರೆಸುವ ಹಂಬಲ.

ಅವರ ಮನಸೆಳೆದ ಈ "ಹಾಜಿರಾ" ಕಾದಂಬರಿಯನ್ನು ಅವರು ಅನುವಾದಿಸಿದ್ದು ಸುಮಾರು ಐವತ್ತು ವರ್ಷಗಳ ಹಿಂದೆ. ತುರ್ಕೀ ಭಾಷೆಯಿಂದ ಉರ್ದುವಿಗೆ ಅನುವಾದಿಸಲ್ಪಟ್ಟ ಕಥೆಯನ್ನು ಅವರು ಉರ್ದುವಿನಿಂದ ತನ್ನ ಮಾತೃಭಾಷೆಯಾದ ಕನ್ನಡಕ್ಕೆ ಭಾಷಾಂತರಿಸಿದರು. ಇದರ ಹಸ್ತಪ್ರತಿ ಬಹುಕಾಲ ನನ್ನಲ್ಲೇ ಉಳಿದು ಹೊರತರಬೇಕೆನ್ನುವ ಆಶಯ ಮಸುಕಾಗಿದ್ದಾಗ, ನಮ್ಮ ತಾಯಿಯ ತಂಗಿ ಲಲಿತಮ್ಮ ಶಿವರಾಮಯ್ಯನ

ಮಗಳು, ಡಾ. ರಾಜೇಶ್ವರಿ ಚಟರ್ಜಿ ಇದನ್ನು ತೆಗೆದುಕೊಂಡು ಹೋಗಿ ನಮ್ಮ ಸಂಬಂಧೀಕರಾದ ದಿವಂಗತ ಪ್ರೊ. ಬಿ. ಎಂ. ಶ್ರೀಕಂಠಯ್ಯನವರ ಮೊಮ್ಮಗಳು ಶ್ರೀಮತಿ ವಿಶಾಲಾಕ್ಷಿಗೆ ತೋರಿಸಿದಳು. ಅವರಿಂದ ಪ್ರೋತ್ಸಾಹ ಪ್ರೇರಣೆಗಳು ಹೇರಳವಾಗಿ ದೊರೆತು ಪುಸ್ತಕವನ್ನು ಮುದ್ರಿಸುವ ಯೋಜನೆಯಲ್ಲೂ ಅವರು ನೆರವಾದರು.

ಮೊದಲಿನಿಂದ ಕಡೆಯವರೆಗೂ ಕೃತಿಯನ್ನು ಸೂಕ್ತ ಸಲಹೆ ನೀಡಿ, ಉತ್ಕೃಷ್ಟ ಮುನ್ನುಡಿಯನ್ನು ಬರೆದುಕೊಟ್ಟಿರುವವರು ಚತುರ್ಭಾಷಾ ಕವಿತಾ ಚತುರರೆಂದೂ, ಸಾಹಿತ್ಯ ಮಾರ್ತಾಂಡರೆಂದು, ಕರ್ನಾಟಕದ ಉಮರ್ ಖಯಾಮ್ ಎಂದು ಹೆಸರಿಸಲ್ಪಟ್ಟು ಸಾಹಿತ್ಯಕ್ಷೇತ್ರದಲ್ಲಿ ಚಿರಪರಿಚಿತರಾಗಿರುವ ಡಾ. ಕೆ. ಮುದ್ದಣ್ಣ ಅವರು. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಸಕಾಲದಲ್ಲಿ ಮುದ್ರಿಸಿ ಕೊಟ್ಟಿರುವ ಸುದರ್ಶನ್ ಎಂಟರ್‌ಪ್ರೈಸಸ್ ಅವರಿಗೂ ನನ್ನ ವಿಶ್ವಾಸಪೂರ್ವಕ ಧನ್ಯವಾದಗಳು.

ನನ್ನ ಪೂಜ್ಯ ತಾಯಿ ಪುಟ್ಟಮ್ಮನವರ ಪುಣ್ಯ ಸ್ಮರಣೆಗೆ ಅರ್ಪಿತ ಮಾಡಿ ಈ ಕೃತಿಯನ್ನು ಹೊರತೆಗೆಯುತ್ತಲಿದ್ದೇವೆ.

ವಿಜಯಲಕ್ಷ್ಮಿ ಶ್ರೀಕಂಠಯ್ಯ

ವಿಳಾಸ :
ನಂ. ೧೦೦೫ "ಪ್ರೋಸ್ಪನ್ ವ್ಯೂ"
ಕಾರ್ಟರ್ ರಸ್ತೆ ಬಳಿ
ಪಶ್ಚಿಮಬಾರ್, ಮುಂಬೈ-೪೦೦೦೫೦.

ಹಾಜೀರಾ

ಎಂದು ನಾನು ಮೊದಲನೆಯ ಸಾರಿ ಖಸ್‌ತಂತನಿಯಾ* ನಗರಕ್ಕೆ ಬಂದೆನೋ ಅಂದಿನ ದಿನ ನನಗೆ ಇನ್ನೂ ಚೆನ್ನಾಗಿ ಜ್ಞಾಪಕವಿದೆ. ಸೇತುವೆಯ ಮೇಲೆ ಕಾಲಿಟ್ಟೊಡನೆಯೇ ಕಂಡ ಜನಸಂದಣಿ-ಆ ವೇಳೆಯ ಗದ್ದಲಗಲಾಟೆ-ಗಾಡಿಗಳ ಹೋಗಿಬರುವಿಕೆ-ಜನರ ಅವಸರದ ಓಡಾಟ-ಮಂಜನಗೆಡ್ಡೆ ಮಾರುವವರ ಕೂಗು-ಹಬೆಜಹಜುಗಳ ಜೋರಾದ ಸೀಟಿ-ಜನಸಮೂಹದಿಂದ ರಸ್ತೆ ಕಟ್ಟಲ್ಪಟ್ಟಿರುವುದು-ಇವೆಲ್ಲವೂ ಸೇರಿ ನನ್ನಲ್ಲಿ ಒಂದು ವಿಧವಾದ ಭೀತಿಯನ್ನುಂಟುಮಾಡಿದವು. ಅವುಗಳ ನಕ್ಷೆಯು ಇನ್ನೂ ನನ್ನ ಮನಸ್ಸಿನಲ್ಲಿ ನಿಂತುಬಿಟ್ಟಿದೆ. ನನ್ನ ತಂದೆತಾಯಿಗಳು ಬಹಳ ಬಡವರಾಗಿದ್ದರು. ನಮ್ಮ ಹಳ್ಳಿಯು ಅನಾತೂಲಿಯದಲ್ಲಿತ್ತು. ಅಲ್ಲಿ ಬಹಳ ಕಮ್ಮಿ ಜನರು ವಾಸಿಸುತ್ತಿದ್ದರು. ಖಸ್‌ತಂತನಿಯಾ ನಗರದ ಈ ಸಿರಿಯನ್ನು ನೋಡಿ, ನನಗೆ ನಮ್ಮ ಪಾಠಶಾಲೆಯ ಉಪಾಧ್ಯಾಯರು ಯಾವಾಗಲೂ ವರ್ಣಿಸುತ್ತಿದ್ದ ಸ್ವರ್ಗಲೋಕವೆಂಬುದರ ಮೈದಾನದಲ್ಲಿ ಬಂದಿಳಿದೆನೋ ಎಂಬಂತಾಯಿತು. ನೊವೆಂಬರ್ ತಿಂಗಳಾದುದರಿಂದ ಕೊಂಚಕೊಂಚ ಮಳೆಯಾಗುತ್ತಿತ್ತು. ನನ್ನ ಬಟ್ಟೆಗಳು ನೆನೆದುಹೋಗಿ ನಾನು ಭಯದಿಂದಲೂ ಛಳಿಯಿಂದಲೂ ನಡಗುತ್ತಾ ನನ್ನ ಜೊತೆಯಲ್ಲಿದ್ದ ಮಹಮೂದರ ಬಳಿಸಾರಿ ನಿಂತೆನು. ನನಗೆ ಈ ವಿಷಯದಲ್ಲಿ ಸಂಶಯವುಂಟಾಗುತ್ತಿತ್ತು. ಏನೆಂದರೆ ಇಷ್ಟು ಗದ್ದಲದಲ್ಲಿ ನಮಗೆ ದಾರಿ ಹೇಗೆ ತಾನೆ ಸಿಗುವದೆಂದು. ಹೀಗೆ ಯೋಚಿಸುತ್ತಾ ಮಹಮೂದರೊಡನೆ "ಈಗ ನಾವು ಎಲ್ಲಿಗೆ ಹೋಗುತ್ತಿದ್ದೇವೆ" ಎಂದು ಕೇಳಿದೆನು.

ವಯೋವೃದ್ಧರೂ ಪುಣ್ಯಶಾಲಿಗಳೂ ಆದ ಆ ಮನುಷ್ಯರು "ನಿಮ್ಮ

*ಖಸ್‌ತಂತನಿಯಾ – Constantinople

ಅಜ್ಜಿಯ ಮನೆಗೆ" ಎಂದು ಜವಾಬನ್ನಿತ್ತರು. ನನ್ನಿಂದ ಇನ್ನು ನಡೆಯಲಾಗದಿರುವುದನ್ನು ಕಂಡು, ಅವರು ನನ್ನನ್ನು ತಮ್ಮ ಭುಜದ ಮೇಲೆ ಕುಳ್ಳಿರಿಸಿಕೊಂಡು ಬೇಗಬೇಗನೆ ಅಬಾಸೂಫಿಯಾದಕಡೆ ಹೊರಟರು. ದಾರಿಯಲ್ಲಿ ಎಂದೂ ದೃಷ್ಟಿಗೆ ಬೀಳದಿದ್ದಂಥಾ ಸಾವಿರಾರು ವಸ್ತುಗಳನ್ನು ಕಂಡು ಆಶ್ಚರ್ಯಭರಿತಳಾಗುತ್ತಿದ್ದೆನು. ಸ್ವಪ್ನದಲ್ಲಿಯೂ ಸಹ ಇಂಥಾ ವಿಶಾಲವಾದ ರಸ್ತೆಗಳನ್ನೂ ಇಷ್ಟು ಸುಂದರವಾದ ಮನೆಗಳನ್ನೂ ನೋಡಿರಲಿಲ್ಲ. ವಸ್ತುಗಳ ಈ ರಾಶಿಯೂ ಹಣ್ಣುಗಳ ಈ ಗುಡ್ಡೆಗಳೂ ಎಂದೂ ಕಣ್ಣಿಗೆ ಬಿದ್ದಿರಲಿಲ್ಲ. ಆದರೆ ಈಚೆಗೆ ಕೇಳಿದ್ದುದರಲ್ಲಿ, ಖಸ್ತಂತನಿಯಾವು ಹಳೇತರಹದ ಪಟ್ಟಣವೆಂದೂ, ಶುಭ್ರವಾಗಿಲ್ಲವೆಂದೂ, ಬೇರೆ ಬೇರೆ ಇತರ ನಗರಗಳಲ್ಲಿ ಇದಕ್ಕಿಂತ ದಿವ್ಯವಾದ ಭವನಗಳಿವೆಯೆಂದೂ ಕಂಡು ಬಂದಿದೆ. ಆ ಕಾಲದಲ್ಲಿ ನನಗೆ ಅದು ಎರಡನೆಯ ಸ್ವರ್ಗವಾಗಿ ತೋರಿತು.

ಸ್ವಲ್ಪ ಹೊತ್ತಾದ ಬಳಿಕ ಮಹಮೂದರು "ನಿಮ್ಮ ಅಜ್ಜಿಯ ಮನೆಯು ಇನ್ನು ಹತ್ತಿರ ಬಂತು" ಎಂದರು. ಇದನ್ನು ಕೇಳಿ ನಾನು ಪುನಃ ನಡುಗಲಾರಂಭಿಸಿದೆನು. ಇತ್ತೀಚೆಗೆ ಕೆಲದಿವಸಗಳಿಂದ ಯಾವ್ಯಾವ ಕಷ್ಟಗಳು ನನ್ನ ಎಳೆಯದ ಮನಸ್ಸನ್ನು ನೋಯಿಸಿದ್ದವೊ ಅವೆಲ್ಲವೂ ಮತ್ತೆ ಒಟ್ಟುಗೂಡಿ ಬಂದಂತಾಯಿತು. ನನ್ನ ತಂದೆಯು ಅನಾತೂಲಿಯದ ಒಬ್ಬ ಬಡ ಕಮ್ಮಾರನಾಗಿದ್ದನು. ಅವನು ಸತ್ತು ಇನ್ನೂ ಕೆಲವು ದಿವಸಗಳು ಮಾತ್ರ ಆಗಿದ್ದವು ಅವನ ಸಂಪಾದನೆಯು ಕಷ್ಟದಿಂದ ಜೀವನ ನಡೆಸಲು ಕೂಡ ಸಾಕಾಗುತ್ತಿರಲಿಲ್ಲ. ಆತನು ಸತ್ತಾಗ ನನಗೆ ಉಣ್ಣತಿನ್ನುವುದಕ್ಕೆ ಒಂದು ಧಮಡಿ ಸಹ ಇರಲಿಲ್ಲ. ಸಾಯುವ ವೇಳೆಯಲ್ಲಿ ಆತನಿಗೆ ತನ್ನ ಅತ್ತೆಯ ಜ್ಞಾಪಕ ಬಂದಿತು. ಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ನಮ್ಮ ಹಳ್ಳಿಯ ಶೇಕ್‌ರೊಡನೆ ನಮ್ಮ ಅಜ್ಜಿಗೆ ನನ್ನನ್ನು ಕರೆಸಿಕೊಳ್ಳುವಂತೆ ಪತ್ರ ಬರೆಯಲು ಹೇಳಿದ್ದನು. ನನ್ನ ತಂದೆಯು ಮದುವೆಮಾಡಿಕೊಂಡು ಹಳ್ಳಿಗೆ ಬಂದು, ನನ್ನ ತಾಯಿಯು ಬಹಳ ಕಷ್ಟ ದಾರಿದ್ರ್ಯವಸ್ಥೆಯಲ್ಲಿ ಪ್ರಾಣನೀಗುವವರೆಗೂ, ಅವನಿಗೂ ನನ್ನ ಅಜ್ಜಿಗೂ ಯಾವ ವಿಧವಾದ ಪತ್ರ ವ್ಯವಹಾರಗಳೂ ಇರಲಿಲ್ಲ. ಶೇಕ್‌ರು ನನ್ನ ತಂದೆಯು ಹೇಳಿಕೆಯ ಪ್ರಕಾರ ಪಾಷಾರವರ ಮನೆಯಲ್ಲಿ ಬಹುಕಾಲದಿಂದ ದಾದಿಯಾಗಿದ್ದ ನನ್ನ ಅಜ್ಜಿಗೆ ಪತ್ರ ಬರೆದರು. ಅದರ ಜವಾಬು ನಾಲ್ಕು ತಿಂಗಳುಗಳ ತರುವಾಯ ಬಂದಿತು. ತಂದೆಯ ಮರಣಾನಂತರ ನಾನು ನೆರೆಯವರೊಬ್ಬರ ಮನೆಯಲ್ಲಿದ್ದೆನು. ಇಷ್ಟು ದಿವಸಗಳಾದರೂ ಉತ್ತರ ಬಾರದ ಕಾರಣ ಅವರಿಗೆ ನನ್ನ ಅಜ್ಜಿಯ ವಿಷಯ

ದಲ್ಲಿ ಬಹಳ ನಿರಾಶೆಯಾಯಿತು. ನನ್ನನ್ನು ಕರೆದೊಯ್ಯಲು ಒಂದು ವೇಳೆ ಯಾರೂ ಬರದಿದ್ದರೆ ಏನು ಮಾಡೋಣವೆಂಬ ಯೋಚನೆಯಲ್ಲಿ ಮುಳುಗಿದರು. ಆದರೆ ಅದೃಷ್ಟವಶಾತ್ ಒಂದು ದಿನ ಸಂಜೆ ಒಬ್ಬ ಮನುಷ್ಯರು ನಮ್ಮ ಹಳ್ಳಿಗೆ ಬಂದು ನನ್ನ ಅಜ್ಜಿಯಾದ ಫಿತ್‌ಖಾನಮ್‌ರವರಿಂದ ಕಳುಹಿಸಲ್ಪಟ್ಟವರೆಂದು ಹೇಳಿದರು. ನಾನು ಆಗತಾನೆ ನಿದ್ರೆಹೋಗಲು ಮಲಗಿದ್ದೆ. ಆತನ ಧ್ವನಿಯನ್ನು ಕೇಳಿದೊಡನೆಯೇ ಮಹಡಿಯಿಂದ ಕೆಳಗೆ ಇಳಿದೋಡಿ ಬಂದು ಅಡಿಗೆಯ ಮನೆಯ ಬಾಗಿಲ ಹಿಂದಿನಿಂದ ಆತನನ್ನು ಇಣಿಕಿ ನೋಡಲಾರಂಭಿಸಿದೆ. ಆತನು ವಯಸ್ಸಾದವನಾಗಿದ್ದನು. ಆತನ ಬಿಳಿಚಾದ ಕಣ್ಣುಗಳಿಂದ ದಯಾಹೃದಯತೆಯು ಯಾವ ರೀತಿ ಹೊರಬೀಳುತ್ತಿತ್ತೆಂದರೆ, ನನಗೆ ಒಡನೆಯೇ ಆತನ ಸಮೀಪ ಹೋಗಿ ನಿಲ್ಲಲು ಧೈರ್ಯವುಂಟಾಯಿತು. ನಾನು ಹೋಗಿ ಆತನ ಮೊಣಕಾಲನ್ನು ಒರಗಿಕೊಂಡು ನಿಂತೆನು. ಆತನು ನನ್ನನ್ನು ನೋಡದೆಯೇ, ಮಾತನಾಡುತ್ತಾ ಈ ರೀತಿ ಹೇಳುತ್ತಿದ್ದನು—

“ಹೌದು. ಸರಿ, ಅವಳು ಬಹುಕಾಲದಿಂದ ಪಾಷಾರವರ ಮನೆಯಲ್ಲಿ ಚಾಕರಿಯಾಗಿದ್ದಾಳೆ. ಕೊಂಚ ಗರ್ವಿಷ್ಠೆಯೂ ಹೌದು. ಹಸನ್ಮುಖಿಯಂತೂ ಅಲ್ಲ. ಆದರೆ ಬಹಳ ಒಳ್ಳೆಯ ಮನಸ್ಸುಳ್ಳವಳಾಗಿದ್ದಾಳೆ. ತನ್ನ ಮೊಮ್ಮಗಳ ವಿಷಯವನ್ನು ಕೇಳಿ ತಕ್ಷಣವೇ ಅವಳನ್ನು ಕರೆಯಿಸಿಕೊಳ್ಳುವ ಇಚ್ಛೆಯನ್ನು ಸೂಚಿಸಿದಳು. ನಾನು ಅವಳ ನೆರೆಯವನು ಒಂದು ಜರೂರಾದ ಕೆಲಸದ ಮೇಲೆ ಖೌನಿಯಾಕ್ಕೆ ಬರಬೇಕಾಗಿದ್ದುದರಿಂದ, ಹಿಂತಿರುಗುವಾಗ ಹುಡುಗಿಯನ್ನು ಕರೆದುಕೊಂಡು ಬರುವೆನೆಂದು ಆಕೆಯೊಡನೆ ಮಾತು ಕೊಟ್ಟು ಬಂದಿದ್ದೇನೆ. ಖೌನಿಯದಲ್ಲಿ ಅವಶ್ಯಕ್ಕಿಂತ ಹೆಚ್ಚಾಗಿ ಉಳಿಯಬೇಕಾಗಿ ಬಂದುದರಿಂದ ಇಂದು ತಾನೆ ಇಲ್ಲಿಗೆ ಬಂದು ತಲುಪಿದೆನು.”

ತರುವಾಯ ಆತನ ದೃಷ್ಟಿಯು ನನ್ನ ಮೇಲೆ ಬಿತ್ತು. “ಏನು, ಇವಳೇಯೋ ಆ ಹುಡುಗಿ” ಎಂದು ಕೇಳಿ ನನ್ನ ಕೈಹಿಡಿದುಕೊಂಡು “ಕೊಂಚ ನನ್ನ ಹತ್ತಿರ ಬಾಮ್ಮಾ. ನಿನ್ನನ್ನು ಚೆನ್ನಾಗಿ ನೋಡುವೆನು. ನಿಮ್ಮ ಅಜ್ಜಿಯು ವಿಚಿತ್ರವಾದ ಹೆಂಗಸು.” ಎಂದನು. ಪುನಃ ನನ್ನನ್ನು ನೋಡುತ್ತಾ “ನಾನಾದರೂ ಏನ ಹೇಳುವೆನೆಂದರೆ ನಿನ್ನನ್ನು ನೋಡಿಕೊಂಡು ಆಕೆಯು ಸಂತೋಷ ಚಿತ್ತಳಾಗಬೇಕು” ಎಂದನು. ಆತನ ಈ ವಿನೋದದ ಮಾತುಗಳಿಂದ ಅಜ್ಜಿಯೆಂದರೆ ಈಗಿನಿಂದಲೂ ನನ್ನ ಮನಸ್ಸಿನಲ್ಲಿ ಭಯ ಹುಟ್ಟಿತು. ಇದುವರೆಗೆ ನನ್ನನ್ನು ಕಂಡರೆ ಎಲ್ಲರೂ ಕರುಣೆಯಿಂದ ವರ್ತಿಸುತ್ತಿದ್ದರು. ಆದರೆ ಈ ತೆರನಾದ ಮಾತುಗಳನ್ನು ಕೇಳಿ ನನ್ನ ಅಜ್ಜಿಯು ನನ್ನನ್ನು

ಕಣ್ಣಿಡಿಸಿಕೊಳ್ಳದಿದ್ದರೆ ಚೆನ್ನಾಗಿರುತ್ತಿತ್ತೆಂದು ಮನಸ್ಸು ಇಚ್ಛಿಸಲಾರಂಭಿಸಿತು. ಬಾಲ್ಯ ಬುದ್ಧಿಗನುಗುಣವಾಗಿ, ನಾನು ದಾರಿಯಲ್ಲಿ ಏನಾದರೂ ಕಷ್ಟನೇರುವುದಕ್ಕಾಗಿ ಅಜ್ಜಿಯ ಮನೆಯನ್ನು ತಲಪಲು ತಡವಾಗಲೆಂದು ಪ್ರಾರ್ಥಿಸುತ್ತಿದೆನು ಆದರೆ ಈ ಹರಕೆಯು ಸುಳ್ಳಾಯಿತು. ಸ್ವಲ್ಪ ಹೊತ್ತಿನಲ್ಲೇ ಅಜ್ಜಿಯ ಮನೆಯ ಬಾಗಿಲಲ್ಲಿ, ಹೆದರುತ್ತಾ ನಡಗುತ್ತಾ ಬಂದು ನಿಂತವನಾದೆನು. ಆಕೆಯ ಭೀತಿಯು ನನ್ನ ಮನಸ್ಸಿನಲ್ಲಿ ಎಷ್ಟರಮಟ್ಟಿಗಿತ್ತೆಂದರೆ ಆಕೆಯನ್ನು ಕಾಣಲು ಎಷ್ಟು ತಡವಾದರೆ ಅಷ್ಟು ಕ್ಷೇಮವೆಂದು ಹೃದಯಸ್ಪರ್ಶಕವಾಗಿ ಆಶಿಸುತ್ತಿದ್ದೆನು. ಆಕೆಯು ಈ ವೇಳೆಯಲ್ಲಿ ಮನೆಯಲ್ಲಿರಬಾರದೆಂದು ಪಾಷಾರವರ ಮನೆಗೆ ಹೊರಟುಹೋಗಿರಲೆಂದೂ ದೇವರೊಡನೆ ಪ್ರಾರ್ಥಿಸುತ್ತಿದ್ದೆನು—ಏಕೆಂದರೆ ಆಕೆಯು ಆಗಾಗ್ಗೆ ಪಾಷಾರವರ ಮನೆಯಲ್ಲಿ ಒಟ್ಟಿಗೆ ಮೂರುಮೂರು ನಾಲ್ಕುನಾಲ್ಕು ತಿಂಗಳುಗಳಿರುತ್ತಿದ್ದಳೆಂದು ಮಾತು ಬಹಳದಿಂದ ಕೇಳಿ ಬಂದಿತ್ತು. ಆದರೆ ಈ ಪ್ರಾರ್ಥನೆಯೂ ವ್ಯರ್ಥವಾಯ್ತು.

ಮಹಮೂದರು ಬಾಗಿಲು ತಟ್ಟಿದೊಡನೆಯೇ ಒಬ್ಬ ನಗುಮುಖದ ಸೇವಕಿಯು ಬಂದು ಬಾಗಿಲನ್ನು ತೆಗೆದು ನಮ್ಮನ್ನು ಒಂದು ಶುಭ್ರವೂ ಸುಂದರವೂ ಆದ ಕೊಠಡಿಯಲ್ಲಿ ಕರೆದುಕೊಂಡು ಹೋದಳು. ನೆಲದ ಮೇಲೆ ರತ್ನಗಂಬಳಿಯೂ, ಬಿಳಿಯ ಬಟ್ಟೆ ಹೊದಿಸಿದ್ದ ಎರಡು ಮೆತ್ತೆಗಳೂ ಹಾಸಲ್ಪಟ್ಟಿದ್ದುವು. ಒಂದು ಮೆತ್ತೆಯ ಮೇಲೆ ಶುಭ್ರವಾದ ಮುಖಭರದಿಯ [illegible] ಒಬ್ಬ ವೃದ್ಧನಾರಿಯು ಕುಳಿತಿದ್ದಳು. ಒಮ್ಮೆ ಜಪಸರವನ್ನು ಎಣಿಸುತ್ತಿದ್ದಳು ಒಮ್ಮೆ ಹುಕ್ಕವನ್ನು ಕುಡಿಯುತ್ತಿದ್ದಳು. ನನ್ನನ್ನು ಕಂಡು ಎದ್ದು ನಿಂತು ಮಹಮೂದನಿಗೆ ಸಲಾಂ ಮಾಡಿ "ಏನು ನಮ್ಮ ಅದೃಷ್ಟ?" ಎಂದು, ಪುನಃ ನನ್ನ ಕಡೆಗೆ ತಿರುಗಿ ಮೆಲ್ಲಗೆ [illegible] "[illegible] ಮಗು" ಎಂದು, ಕೊಂಚ ಹೊತ್ತಿನ ತರುವಾಯ ನನ್ನನ್ನು ಎದೆಗಪ್ಪಿಕೊಂಡು ಅಳುತ್ತಾ ಮಹಮೂದರೊಡನೆ ಹೀಗೆಂದು ಹೇಳತೊಡಗಿದಳು—

"ನಾನು ನಿಮ್ಮ [illegible] ಕೇಳಿಕೊಳ್ಳುತ್ತೇನೆ ಇದೀಗ ನಿಮಗೆ ಗೊತ್ತಾದ ವಿಷಯ [illegible] ಅದರಿಂದ ನಮ್ಮೆಲ್ಲರ ಭಾಗಕ್ಕೆ ಕವಿದ ಹೋಗಿದೆ [illegible], ನಾನು ಎಂಥೆಂಥಹ ಕಷ್ಟಗಳನ್ನು ಅನುಭವಿಸಬೇಕಾಯಿತು. ನನ್ನ ಗಂಡನು ಮಕ್ಕಳೆಲ್ಲ ಸ್ವರ್ಗಸ್ಥರಾದರು. ನನ್ನ ಹೆಣ್ಣು ಮಕ್ಕಳು ಬಹಳ [illegible] ಸಂಸಾರದಲ್ಲಿ [illegible]. ಈ ಮಗುವನ್ನು

ಬಿಟ್ಟು ನನ್ನವರು ಮತ್ತಾರು ಈ ಪ್ರಪಂಚದಲ್ಲಿಲ್ಲ. ಇವಳು ನನ್ನ ಮುಂದೆ ಬಂದು ನಿಂತಾಗ ತನ್ನ ಅಮ್ಮನಂತೆಯೇ ಕಾಣುತ್ತಿದ್ದಳು. ನನ್ನ ಮುದ್ದು ಮಗಳಾದ ಮಂಜುಳನ್ನ ನೋಡುತ್ತಿರುವೆನೋ ಎಂಬಂತಾಯಿತು."

ಮುಹಮೂದರು ನನ್ನ ಅಜ್ಜಿಯು ವಿಷಯವಾಗಿ ಆಡಿದ್ದ ಮಾತುಗಳ ರೀತಿಯಿಂದ ನಾನಾಕೆಯನ್ನೆಂತು ಪ್ರೀತಿಸುವೆನೋ ಎಂಬ ಶಂಕೆಯು ಮನಸ್ಸಿನಲ್ಲುಂಟಾಗಿತ್ತು. ಆದರೆ ಈ ಸಂಭಾಷಣೆಯನ್ನು ಕೇಳಿ ನನಗೆ ಆ ವಿಷಯದಲ್ಲೇನೂ ಕಷ್ಟವಿರುವುದಿಲ್ಲವೆಂಬ ಭರವಸೆಯಾಯಿತು. ನನ್ನ ವಯಸ್ಸು ಇನ್ನೂ ಹನ್ನೆರಡು ವರುಷಮಾತ್ರವಾಗಿದ್ದರೂ ಇತರರ ಕಷ್ಟವನ್ನು ನೋಡಿ ಮನಸ್ಸು ಕರಗಿ ನೀರಾಗುತ್ತಿತ್ತು. ಅಜ್ಜಿಯು ಈ ಅನುರಾಗ ವ್ಯಕ್ತತೆಯನ್ನು ಕಂಡು, ದುಃಖದಿಂದ ಕಂಪಿಸುತ್ತಿರುವ ಆಕೆಯ ಧ್ವನಿಯನ್ನೂ ಕೇಳಿ ನನ್ನ ಹೃದಯದಲ್ಲಿ ಒಂದು ವಿಚಿತ್ರ ಸ್ಥಿತಿಯುಂಟಾಯಿತು. ಆ ಸ್ಥಿತಿಯಲ್ಲಿ ನಾನು ಆಕೆಯ ಕೊರಳಿನ ಮೇಲೆ ಬಾಹುಗಳನ್ನು ಹಾಕಿಕೊಂಡು ಆಕೆಯನ್ನು ಚೆನ್ನಾಗಿ ಮುದ್ದಿಸಿದೆನು. ಅವಳೂ ನನ್ನನ್ನು ಎದೆಗಪ್ಪಿಕೊಂಡು ಬಹು ಪ್ರೇಮದಿಂದಲೂ ದಯದಿಂದಲೂ "ನಿನಗೂ ನನಗೂ ಚೆನ್ನಾಗಿ ಮಮತೆಯಿರುವುದು. ಮುಹಮೂದ್ ಆಗಾ, ಕುಳಿತುಕೊಳ್ಳಿ ನಿಮಗಾಗಿ ಒಂದು ಬಟ್ಟಲು ಕಾಫಿ ಮಾಡುತ್ತೇನೆ. ಅದುವರೆವಿಗೆ ಈ ಹುಕ್ಕವನ್ನು ಕುಡಿಯಿರಿ. ಮಾರ್ಗಾಯಾಸವನ್ನು ಪರಿಹರಿಸಲು ಇದು ಅವಶ್ಯಕವು. ಹಾಜಿರೇ ಚಿಲುಮನ್ನು ಭರ್ತಿಮಾಡಮ್ಮಾ. ಈಗಿನಿಂದಲೂ ನೀನು ನನ್ನ ಸಹಾಯಕಳಾಗಬೇಕು." ಎಂದು ಹೇಳಿ ಒಲೆಯ ಕೆಂಡವನ್ನು ಕೆದಕಿ ಕಾಫಿಯ ಪಾತ್ರೆಯನ್ನಿಟ್ಟಳು. ನಾನು ಬಗ್ಗಿಕೊಂಡು ಚಿಲುಮನ್ನು ತುಂಬಲಾರಂಭಿಸಿದೆನು. ಆಕೆಯು ಪುನಃ ಮುಹಮೂದನೊಡನೆ ಇಂತೆನ್ನಲಾದಳು.

"ನಿಮ್ಮ ಪತ್ನಿಯು ಕ್ಷೇಮದಿಂದಿದ್ದಾಳೆ. ನಾನು ನಿನ್ನೆ ತಾನೆ ಅವಳನ್ನು ನೋಡಲು ಹೋಗಿದ್ದೆ. ಹಿಂದಿನವಾರ ನಿಮ್ಮ ಮಗನಿಂದ ಕಾಗದ ಬಂದಿತ್ತು. ಅವನು ಯಾರ ಬಳಿ ಕೆಲಸಮಾಡಲು ಹೋಗಿದ್ದಾನೋ ಆ ಯಜಮಾನನು ಅವನನ್ನು ಬಹಳ ಕರುಣೆಯಿಂದ ಕಂಡನಂತೆ."

ಮುಹಮೂದ್—(ಸಂತೋಷದಿಂದ) ಸರಿಯೇ ಏತಕ್ಕೆಂದರೆ ಅದು ಅವನ ಭಾವನ ಮನೆಯೇ ಆಗಿದೆ.

ನನ್ನ ಅಜ್ಜಿ—(ಪಾತ್ರೆಯಲ್ಲಿ ಕಾಫಿಪುಡಿಹಾಕಿ) ಹಾಗಾದರೆ ಅವನು ಅಲ್ಲಿಗೆ ಹೋದದ್ದು ಬಹಳ ಒಳ್ಳೆಯದಾಯಿತು. ನಿಮ್ಮ ಹುಡುಗಿಯು ಒಳ್ಳೆಯ ಕಡೆ ವಿವಾಹವಾಗಿದ್ದಾಳೆ.

ಮಹಮೂದ್—ನಿಜ-ಅದು ಹಾಗಿರಲಿ-ಕೊಂಚ ಹೇಳಿ-ನಸಿರುಲ್ಲಾಪಾಷರವರ ಮನೆಯವರ ಏನು ಸಮಾಚಾರ.

ನನ್ನ ಅಜ್ಜಿ—ಸರ್ವವೂ ಸುಕುಶಲ. ನಾಫಿಜ್‌ಬೇಯು ಅನಾತೂಲಿಯಾಕ್ಕೆ ಹೋಗಿದ್ದಾನೆ.

ಮಹಮೂದ್—ಹೌದು ನೀವೇ ಅವನನ್ನೂ ಸಾಕಿದುದು ಅಲ್ಲವೇ.

ನನ್ನ ಅಜ್ಜಿ—(ಗರ್ವದಿಂದ ತಲೆಯೆತ್ತಿ) ಹೌದು ಸ್ವಾಮಿ. ನಾಫಿಜ್‌ಬೇಯು ಅಸಮಾನ ಪುರುಷನು. ಅವನಿಗಿನ್ನೂ ಮೂವತ್ತು ವರ್ಷ. ಆ ಮನೆಯ ಎಲ್ಲಾ ಮಕ್ಕಳು ನನ್ನ ಕೈಲೇ ಬೆಳೆದವು. ಅಥಮ್ ಎಲ್ಲರಿಗಿಂತಲೂ ದೊಡ್ಡವನು-ಮೂವತ್ತು ಮೂರು ವಯಸ್ಸು. ಎಲ್ಲರಿಗಿಂತಲೂ ಕಿರಿಯ ಮಗಳಾದ ಮಹೀವಳ ವಿವಾಹವಾದ ಮೇಲೆ ನಾನು ನನ್ನ ಮನೆಯಲ್ಲಿರಲು ಅಪ್ಪಣೆ ಪಡೆದು ಕೊಂಡು ಬಂದೆನು. ನನ್ನ ಪತಿಯು ಬದುಕಿರುವಾಗ, ಮಹೀವಳ ಮದುವೆಗೆ ಮೊದಲೇ, ಅಂದರೆ, ನಾಫಿಜ್‌ನು ಶಾಲೆಗೆ ಹೋಗಲಾರಂಭಿಸಿದೊಡನೆಯೇ ಮನೆಗೆ ಬಂದು ಬಿಡುವ ಆಲೋಚನೆ ಮಾಡಿದ್ದೆ. ಆದರೆ ವಿಧಿಬರಹವನ್ನಾರು ತಿಳಿಯುವರು! ನನ್ನ ಪತಿಯು ಮರಣವನ್ನು ಹೊಂದಿದನು. ನಸಿರುಲ್ಲಾಪಾಷಾರವರ ಮನೆಯಿಂದಲೇ ನನ್ನ ಮಗಳು ಮದುವೆಯಾದಳು. ಅವರ ಸಿಫಾರಿಷಿನಿಂದಲೇ ನನ್ನ ಮಗನು ಒಂದು ತುರ್ಕಿ ಜಹಜಿನಲ್ಲಿ ಕ್ಯಾಪ್ಟನ್ ಆದನು. ಆದುದರಿಂದ, ಅವರು ನನ್ನೊಡನೆ, ಮಹೀವಳ ಮದುವೆಯವರೆಗೆ ಇರಬೇಕೆಂದು ಹೇಳಲು ನಾನು ಒಪ್ಪಿಕೊಂಡುಬಿಟ್ಟೆನು. ಮಹೀವಳ ವಿವಾಹದ ಸಮಯದಲ್ಲಿ ನಾಫಿಜ್‌ನು ಹದಿನೈದು ವರ್ಷದವನಾಗಿದ್ದನು. ಆಗ ಯಾವ ಮಕ್ಕಳಿಗೂ ನನ್ನ ಸೇವೆಯ ಅವಶ್ಯಕತೆ ಇಲ್ಲದಿದ್ದುದರಿಂದ ನನ್ನ ಮನಸ್ಸು ನನ್ನೊಡನೆ-ನಡಿ, ಇನ್ನು ನಿನ್ನ ಮನೆಯಲ್ಲಿ ಮಗನ ಜತೆ ಇರು ಎಂದು ಹೇಳಿತು. ಆದರೆ ಅಯ್ಯೋ-ಅದು ಜಗದೀಶ್ವರನಿಗೆ ಇಷ್ಟವಾಗಿರಲಿಲ್ಲ. ನನ್ನ ಮಗನು ಅದೇ ವರ್ಷ ಸತ್ತುಹೋದನು. ನಾನು ಒಬ್ಬಂಟಿಯಾದೆನು.

ಮಹಮೂದ್—(ಕಾಫಿ ಕುಡಿದುಬಿಟ್ಟು ಹುಕ್ಕವನ್ನು ಸೇದುತ್ತಾ)ಆದರೂ, ಈಗಲೂ ನೀವು ನಿಮ್ಮ ಮನೆಗಿಂತ ಜಾಸ್ತಿ ಅಲ್ಲಿಯೇ ಇರುತ್ತೀರಿ.

ನನ್ನ ಅಜ್ಜಿ—ನಿಜ. ಈಗಲೂ ನಾನು ಇಷ್ಟಪಟ್ಟರೆ ಅಲ್ಲಿಯೇ ಇರಬಹುದು. ಆದರೆ ವೃದ್ಧಳಾದೆನು. ಸ್ವಂತಮನೆಯಲ್ಲೇ ಜನ್ಮ ಪೂರೈಸಬೇಕೆಂಬ ಅಭಿಲಾಷೆಯಿದೆ.

ನಾನು ಈ ಸಂಭಾಷಣೆಯನ್ನು ಬಹಳ ಗಮನವಿಟ್ಟು ಕೇಳಿದೆನು.

ನನ್ನ ಅಜ್ಜಿಗೆ ಒಬ್ಬ ಪಾಷಾರವರ ಗೃಹದಲ್ಲಿ ಇಷ್ಟೊಂದು ಬಳಕೆಯಿರುವವನ್ನು ಕಂಡು ನನಗೆ ಆಕೆಯ ವಿಷಯದಲ್ಲಿ ಇನ್ನೂ ಗೌರವ ಹೆಚ್ಚಾಯಿತು. ತುರ್ಕಿ ಭಾಷೆಯನ್ನು ಆಕೆಯು ಬಹಳ ಸ್ವಚ್ಛವಾಗಿ ಆಡುತ್ತಿದ್ದಳು. ಆಕೆಯ ರೀತಿ ನಡವಳಿಕೆಗಳು, ನಾನು ಇದುವರೆಗೆ ಬೆರೆತ ಎಲ್ಲಾ ಜನರಿಗಿಂತಲೂ ಅತಿ ಶ್ರೇಷ್ಠವಾಗಿದ್ದವು. ನನ್ನ ದೃಷ್ಟಿಯಲ್ಲಿ, ಆಕೆಯು ನಮ್ಮ ಹಳ್ಳಿಯ ಮೂಢ ಜನರೆಲ್ಲರಿಂದ ಪ್ರತ್ಯೇಕವಾಗಿಯೂ, ಉತ್ತಮವಾಗಿಯೂ ಇದ್ದಳು.

ಖಸ್ ತಂತನಿಯಾ ನಗರದ, ಕಡಿಮೆ ದರ್ಜೆಯ ಜನರು, ಅನಾತೂಲಿಯಾ-ರುಮೇಲಿಯಾ ಗ್ರಾಮವಾಸಿಗಳಿಗಿಂತ ಯಾವ ವಿಧದಲ್ಲೂ ಹೆಚ್ಚು ವಿದ್ಯಾವಂತರಲ್ಲ ನನ್ನ ಅಜ್ಜಿಯೂ ಮಹಮೂದರೂ ಇಬ್ಬರೂ ವಿದ್ಯಾ ಸಂಪದ್ವಿಹೀನರಾಗಿ, ಮೂಢರಲ್ಲೂ ಮೂಢರಾದ ಹಳ್ಳಿಯವರಷ್ಟೇ ಅರಿವಿಲ್ಲದವರಾಗಿದ್ದರು. ಆದರೆ ಉತ್ತಮ ವರ್ಗದ ಜನರೊಡನೆ ಕಲೆತು ಬೆರೆತು ಅವರ ನಡನುಡಿಗಳಲ್ಲಿ ತಮ್ಮ ಸರಿಯವರಲ್ಲಿಲ್ಲದಂಥಾ ಒಂದು ತರಹ ಮೆರಗು ಬಂದಿತ್ತು.

ನನ್ನ ಅಜ್ಜಿ—ನಾನು ನಾಳೆ ಹಾಜಿರಾಳನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ದೇವರು ಖಾನಮ್‌ರವರನ್ನು ಚೆನ್ನಾಗಿಟ್ಟಿರಲಿ. ಎಷ್ಟೋ ಬಾರಿ ಕೇಳಿದ್ದಾರೆ. ಈ ಹುಡುಗಿಯು ಅವರಮ್ಮನ ಜೀವನದ ಪ್ರತಿಕೃತಿ ಯೆಂಬುದನ್ನು ಆಕೆಗೆ ತೋರಿಸಲು ಇಚ್ಛಿಸುತ್ತೇನೆ. ಯಾತಕ್ಕೆ, ಮಿತ್ರನೇ ಈಗಲೇ ಹೊರಟು ಹೋಗುವಿರಾ ?

ಮಹಮೂದ್—ಹೌದು ತಾಯಿ, ನನ್ನ ಪತ್ನಿಯು ನನ್ನ ಕ್ಷೇಮದಿಂದ ಬರುವಿಕೆಯನ್ನೆ ಎದುರು ನೋಡುತ್ತಿರಬಹುದು.

ನನ್ನ ಅಜ್ಜಿ—ಒಳ್ಳೇದು. ಹೋಗಿರಿ, ನನಗೋಸ್ಕರ ನೀವು ಇಷ್ಟು ತೊಂದರೆ ತೆಗೆದುಕೊಂಡದಕ್ಕಾಗಿ ನಿಮಗೆ ವಂದಿಸುತ್ತೇನೆ. ಭಗವಂತನು ನಿಮ್ಮನ್ನು ಸಂಸಾರದೊಂದಿಗೆ ಸುಖವಾಗಿಟ್ಟಿರಲಿ.

ಮಹಮೂದರು ಆಕೆಗೆ ವಂದಿಸಿ, ಬಗ್ಗಿ ನನ್ನ ಕೆನ್ನೆಯ ಮೇಲೆ ಮುದ್ದಿಟ್ಟು ಹೊರಟರು. ನನ್ನ ಅಜ್ಜಿಯು ಅವರನ್ನು ಬಾಗಿಲವರೆಗೆ ಕಳುಹಿಸುವುದಕ್ಕೆ ಹೊರಡಲು, ನಾನು ಒಬ್ಬಳೇ ಆಗಿದ್ದುದರಿಂದ ಕಿಟಕಿಯ ಬಳಿ ತಮಾಷೆ ನೋಡಲು ಓಡಿಹೋದೆನು. ಆ ಜಾಗದಲ್ಲಿ ರಸ್ತೆಯು ಬಹಳ ಕಿಷ್ಕಿಂಧವಾಗಿತ್ತು. ಏಕೆಂದರೆ ಅಭಾಸೂಫಿಯಾ ಕಡೆಯಿಂದ ಬರುವ ರಾಜಮಾರ್ಗದ ಇದು ಒಂದು ಶಾಖೆಯಾಗಿತ್ತು. ಮಹಮೂದರ ಮನೆಯು ನಮ್ಮ ಮನೆಗೆ ಸರಿಯಾಗಿ ಎದುರಿನಲ್ಲಿತ್ತು. ಅವರು ಒಳಗೆ ಹೋಗುತ್ತಿರು

ವುದನ್ನು ನಾನು ನೋಡುತ್ತಾ ಇರುವಾಗ ಯಾರೋ ಹಿಂದಿನಿಂದ ಬಂದು ನನ್ನ ಭುಜದ ಮೇಲೆ ಕೈಯಿಟ್ಟರು.

ನನ್ನ ಅಜ್ಜಿ—(ನನ್ನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು) ಇನ್ನೂ ನಾನು ನಿನ್ನ ವಿಚಾರ ಒಂದನ್ನೂ ಕೇಳಲಿಲ್ಲ. ಇದುವರೆಗೆ ನಡೆದ ನಿನ್ನ ಸಮಾಚಾರವನ್ನೆಲ್ಲಾ ತಿಳಿಸಮ್ಮಾ.

ನಾನು ಅವರ ಅಪ್ಪಣೆಯನ್ನು ಅಂಗೀಕರಿಸಿ, ಅವಳನ್ನು ತಬ್ಬಿಕೊಂಡು ನನಗೆ ಜ್ಞಾಪಕವಿರುವವರೆಗೂ ಎಲ್ಲಾ ವಿಷಯಗಳನ್ನೂ ತಿಳಿಯ ಹೇಳಿದೆನು—ಯಾವದೆಂದರೆ ಹಳ್ಳಿಯಲ್ಲಿ ಹೇಗೆ ಜೀವನ ಹೊರೆಯುತ್ತಿತ್ತೆಂದೂ, ನನ್ನ ತಂದೆಯು ತನ್ನ ದೇಶವಾದ ಅರಕನಿಯಿಂದ ಅಲ್ಲಿಗೆ ಹೇಗೆ ಬಂದು ಇದ್ದನೆಂದೂ, ಎಡಬಿಡದೆ ದುಡಿದರೂ ಹೇಗೆ ದಾರಿದ್ರ್ಯದಲ್ಲೇ ಜೀವನ ಕಳೆಯುತ್ತಿದ್ದನೆಂದೂ, ಒಂದು ದಿನ ತೋಟದಲ್ಲಿ ಹುಲ್ಲು ಕೊಯ್ಯುತ್ತಿರುವಾಗ ನನ್ನ ಅಮ್ಮನನ್ನು ಹಾವು ಕಡಿದದ್ದೂ, ಆಕೆಯ ಮರಣ, ಈ ಅಪಾರವಾದ ದುಃಖವು ನನ್ನ ತಂದೆಯನ್ನು ಜನ್ಮಾವಧಿ ಹಿಂಬಾಲಿಸಿದುದೂ, ಎಲ್ಲವನ್ನೂ ಹೇಳಿದೆನು.

ನನ್ನ ಅಜ್ಜಿ—(ನಿಟ್ಟುಸಿರುಬಿಟ್ಟು) ಹೌದು, ನಿಜ. ಆವನಿಗೆ ತನ್ನ ಹೆಂಡತಿಯಲ್ಲಿ ಬಹಳ ಅನುರಾಗವಿತ್ತು. ದರಿದ್ರನಾದರೂ ಬಹಳ ಸತ್ಯಸಂಧನಾಗಿದ್ದನು. ಆದರೆ ನಿನ್ನನ್ಯಾಕೆ ಅವನು ಮೊದಲೇ ನನ್ನ ಬಳಿ ಕಳುಹಿಸಲಿಲ್ಲ. ನೀನು ಇರುವುದೇ ನನಗೇ ತಿಳಿದಿರಲಿಲ್ಲ. ನಸಿರುಲ್ಲಾ ಪಾಷಾರವರು ನಿನ್ನ ತಂದೆಗಾಗಿ ಇಲ್ಲಿ ಏನಾದರೂ ಕೆಲಸ ಮಾಡಿಸಿ ಕೊಡಬೇಕೆಂದಿದ್ದರು. ಆದರೆ ನಿನ್ನ ತಂದೆಯು ಹಳ್ಳಿಗಾಡಿನ ಜೀವನವೆಂದರೆ ಪ್ರಾಣಬಿಡುತ್ತಿದ್ದನಾದುದರಿಂದ ಇಲ್ಲಿ ಇರಲು ಇಷ್ಟಪಡಲಿಲ್ಲ. ಶಹರಿನಲ್ಲಿ ಖೈದಿಯಂತೆ ಇದ್ದು ನಾನು ಜೀವಿಸಲಾರೆನೆಂದು ಹೇಳುತ್ತಿದ್ದನು. ನಿಮ್ಮ ಅಮ್ಮನು ಖಸ್‌ತಂತನಿಯಾಯೊಡನೆ ದೂರ ಹೋಗುವುದು ನನಗೆ ಇಷ್ಟವಿರಲಿಲ್ಲ. ಆದರೆ ಅವಳು ತನ್ನ ಗಂಡನ ಸಂಗಡ ಹೋಗುವೆನೆಂದು ಹಠ ಹಿಡಿದಳು. ಇದರಿಂದ ನಮ್ಮಿಬ್ಬರಿಗೂ ಸ್ವಲ್ಪ ಮನಸ್ತಾಪವುಂಟಾಯಿತು. ಕೆಲವು ದಿನಗಳ ತರುವಾಯ ನಾನು ಅವಳನ್ನು ಮನ್ನಿಸಿ, ಒಂದು ಕಾಗದ ಬರೆದೆನು. ಅವಳು ತನ್ನ ಗಂಡನೊಡನೆ ಅರಕನಿಯಲ್ಲಿದ್ದಾಳೆಂದು ನೆನಸಿ ಅಲ್ಲಿಗೇ ಪತ್ರವನ್ನು ಕಳುಹಿಸಿದೆನು. ಆದರೆ ಜವಾಬು ಬರಲಿಲ್ಲ. ಹೂಂ—ಇವತ್ತಿಗೆ ಎರಡು ವರ್ಷದಲ್ಲಿ ಬಂದ ಕಾಗದದಿಂದ, ಅವಳ ಮರಣ ವೃತ್ತಾಂತವು ತಿಳಿಯಿತು. ಆದರೆ ಅದರಲ್ಲಿ ನಿನ್ನ ವಿಷಯವೇ ಇರಲಿಲ್ಲ.

ನಾನು ನನ್ನ ತಾಯಿಯ ರೂಪವನ್ನು ಹೋಲುತ್ತಿದ್ದುದರಿಂದ ನನ್ನ ತಂದೆಯು ನನ್ನನ್ನು ಮತ್ತಷ್ಟು ಹೆಚ್ಚಾಗಿ ಪ್ರೀತಿಸುತ್ತಿದ್ದನೆಂದೂ, ನನ್ನನ್ನು ಅಗಲಿ ಆತನು ಇರಲು ಇಷ್ಟ ಪಡುತ್ತಿರಲಿಲ್ಲವೆಂಬುದೂ ತಿಳಿಸಿದೆನು.

ನನ್ನ ಅಜ್ಜಿ—(ಬಹು ಪ್ರೀತಿಯಿಂದ) ಇದು ಬಹಳ ನಿಜ. ನಿನ್ನ ಸುವರ್ಣ ರಂಗಿನ ಕೂದಲೂ, ನೀಲವಾದ ಕಣ್ಣುಗಳೂ ನಿನ್ನ ತಾಯಿಯವಂತೇ ಇವೆ. ಇನ್ನು ನನ್ನ ಜತೆ ಇದ್ದು ನಿನಗೆ, ನಿನ್ನ ತಂದೆಯು ವಿನಾ ಬೇರೆಯವರೂ ನಿನ್ನನ್ನು ಅಷ್ಟೇ ಪ್ರೀತಿಸುವರೆಂಬುದು ಗೊತ್ತಾಗುವದು.

ನನ್ನ ಅಜ್ಜಿಯು ತನ್ನ ಈ ಮಾತನ್ನು ಎಂದೆಂದಿಗೂ ನಡೆಸಿದವಳಾದಳು. ಇತರರೊಡನೆ ಸ್ನೇಹಪರತೆ ಇಲ್ಲದಿದ್ದರೂ, ತನಗಿಂತ ಕಡಿಮೆ ದರ್ಜೆಯವರೊಡನೆ ಕೊಂಚ ಕಠಿನತೆಯಿಂದ ವರ್ತಿಸುತ್ತಿದ್ದರೂ, ನನ್ನನ್ನು ಕಂಡರೆ ಮಾತ್ರ ಯಾವಾಗ್ಗೂ ಬಹಳ ದಯಾವತಿಯಾಗಿದ್ದಳು. ನಾನು ಕ್ಷಿಪ್ರದಲ್ಲೇ ಅನಾತೂಲಿಯದಲ್ಲಿದ್ದಂತೆಯೇ ಅವಳೊಡನೆ ಬಹಳ ಸುಖಸಂತೋಷದಿಂದಿರಲಾರಂಭಿಸಿದೆನು.

ನಸಿರುಲ್ಲಾ ಪಾಷಾರವರ ಮನೆಯಲ್ಲಿ ನಾನು ಬಹು ಶೀಘ್ರದಲ್ಲಿಯೇ ಎಲ್ಲರಿಗೂ ಬೇಕಾದವಳೆನಿಸಿಕೊಂಡೆನು. ಅಲ್ಲಿ ನಾನು ಆಗಾಗ್ಗೆ ತಿಂಗಳುಗಟ್ಲೆ ಇರುತ್ತಿದ್ದೆನು. ನಸಿರುಲ್ಲಾ ಪಾಷಾರವರು ವಿದ್ಯಾವಂತರು, ಬುದ್ಧಿಶಾಲಿಗಳು, ಶಕ್ತಿವಂತರಾದ ಮನುಷ್ಯರು. ಮೊದಲಿನಿಂದ ಅವರು ತುರ್ಕೀ ಪರಕೀಯ ಸರ್ಕಾರದಲ್ಲಿ ನೌಕರರಾಗಿದ್ದರು. ಅವರ ಸ್ವಭಾವದಲ್ಲಿ ಸುಖಾಭಿಲಾಷೆಯು ಬಹಳವಿದ್ದುದರಿಂದ ಸ್ವಲ್ಪ ದಿನದಲ್ಲಿಯೇ ಆ ಕೆಲಸವನ್ನು ಬಿಟ್ಟುಬಿಟ್ಟರು. ಅದುವರೆವಿಗೆ ಸರ್ಕಾರದಲ್ಲಿ ಅವರ ಮಾತು ನಡೆಯುತ್ತಿದ್ದ ಕಾರಣ ತಮ್ಮ ಮಕ್ಕಳಿಗೂ ಅಳಿಯಂದಿರಿಗೂ ದೊಡ್ಡ ದೊಡ್ಡ ಕೆಲಸಗಳನ್ನು ಕೊಡಿಸಲು ಶಕ್ತರಾಗಿದ್ದರು. ಅವರ ಪತ್ನಿ ಬಹಳ ಗರ್ವಿಷ್ಠೆ, ಸಿಡುಕು ಸ್ವಭಾವದವಳು. ತನ್ನ ಬಳಿ ಚೆನ್ನಾಗಿ ಕೆಲಸ ಮಾಡುವವರನ್ನು ಚನ್ನಾಗಿ ಕಾಣುತ್ತಿದ್ದಳು. ಆದರೆ ಮುಯ್ಯಿ ತೀರಿಸಿಕೊಳ್ಳುವುದರಲ್ಲಿ ಘಟ್ಟಿಗಳು. ತನ್ನ ಠೀವಿಗೆ ಲೋಪ ಬರುವಂಥದು, ಅವಮಾನಿಸುವ ಅಣುಮಾತ್ರದ ತಪ್ಪಿಗಾಗಿ ಶಿಕ್ಷೆ ಮಾಡದೇ ಬಿಡುತ್ತಿರಲಿಲ್ಲ. ಜಾತಿಯಲ್ಲಿ ತನ್ನ ಗಂಡನನ್ನು ಎಷ್ಟರ ಮಟ್ಟಿಗೆ ಹಿಡಿಯಲ್ಲಿಟ್ಟುಕೊಂಡಿದ್ದಳೆಂದರೆ ಆತನು ಬೇರೊಂದು ಮದುವೆಯನ್ನೂ ಮಾಡಿಕೊಳ್ಳಲಿಲ್ಲ. ಆಕೆಯ ಹುಷಾರಾದ, ಚಾಲಾಕಿಗಾಗಿ ಮನೆಯವರೆಲ್ಲರೂ ಅವಳಿಗೆ ಕೈಮುಗಿದು ಕೊಂಡಿದ್ದರು. ಎಲ್ಲರ ಮೇಲೂ ಆಕೆಯ ದರ್ಪವೂ ಅಧಿಕಾರವೂ ನಡೆಯುತ್ತಿತ್ತು. ಪ್ರತಿಯೊಬ್ಬರೂ ಅವಳನ್ನು

ನೋಡಿದರೆ ಹೆದರುತ್ತಿದ್ದರು. ಆಕೆಯ ಮಕ್ಕಳೇ ಆಕೆಯನ್ನು ಕಂಡರೆ ನಡುಗುತ್ತಾ ಹೆಚ್ಚು ಕಡಿಮೆ ಗುಲಾಮರಂತೆ ಆಕೆಗೆ ಮರ್ಯಾದೆ ತೋರಿಸುತ್ತಿದ್ದರು ಈ ಘಳಿಗೆಗ ಸಹ ಆಕೆಯ ಮುಖವು, ನಾನು ಚಿಕ್ಕಂದಿನಲ್ಲಿ ನೋಡುತ್ತಿದ್ದ ರೀತಿಯೇ, ನನ್ನ ಕಣ್ಣ ಮುಂದೆ ಬಂದು ನಿಂತಂತಿದೆ. ಉದ್ದ ಗಾತ್ರ, ರೂಪುರೇಖೆ ಎಲ್ಲವೂ ಹದನಾಗಿದ್ದವು. ನೆಶ್ಯದ ಬಣ್ಣದ ಕಣ್ಣುಗಳು ಅತಿ ಚುರುಕು. ಯಾರ ಮೇಲಾದರೂ ದೃಷ್ಟಿ ಬಿದ್ದರೆ ತಕ್ಷಣವೇ ಅವರ ಮನಸ್ಸಿನಲ್ಲಿರುವ ವಿಷಯವನ್ನು ಗ್ರಹಿಸಿ ಬಿಡುತ್ತಿದ್ದಳು ಯಾವಾಗಲೂ ಸಾಧಾರಣವಾದ, ಆದರೆ ಅತಿ ಶುಭ್ರವಾಗಿಯೂ ಮೃದುವಾಗಿಯೂ ಇರುವ ಖಾಕಿ ಬಣ್ಣದ ಉಡುಪನ್ನು ಧರಿಸುತ್ತಿದ್ದಳು. ತಲೆಯ ಮೇಲೆ ಅದೇ ಖಾಕಿ ಬಣ್ಣದ ರುಮಾಲು, ಕೊನೆಗಳನ್ನು ಗಂಟು ಹಾಕುವುದಕ್ಕೆ ಬದಲು ವಜ್ರ ಹೂಳಿರುವ ಒಂದು ಸೂಜಿ ಸಿಕ್ಕಿರುತ್ತಿತ್ತು. ಈ ಸೂಜಿಯ ವಿನಹಾ ನಾನು ಮತ್ಯಾವ ಒಡವೆಯನ್ನೂ ಆಕೆ ಇಟ್ಟಿದ್ದುದನ್ನು ನೋಡಿರಲಿಲ್ಲ. ನನ್ನ ಮೇಲೆ ಯಾವತ್ತೂ ಕ್ರೌರ್ಯವನ್ನು ತೋರಿಸದಿದ್ದರೂ ನಾನು ಆಕೆಯನ್ನು ಕಂಡರೆ ಭಯ ಪಡುತ್ತಿದ್ದೆನು. ಆಕೆಯ ಮುಂದೆ ಬಾಯನ್ನೆ ತೆರೆಯುತ್ತಿರಲಿಲ್ಲ.

ಆಕೆಯ ಹಿರಿಯ ಮಗನು ಹೆಚ್ಚು ಕಡಿಮೆ ಆಕೆಯ ತರಹವೇ ಇದ್ದರು. ಬಹುಶ್ರಮಿ, ಮಿತಭಾಷಿ, ಗಂಭೀರ ಸ್ವಭಾವದವರು. ನೋಡಿದರೆ ಪ್ರಪಂಚದಲ್ಲಿ ಬಹಳ ಏಳಿಗೆಗೆ ಬರುವಂತೆ ಕಾಣುತ್ತಿದ್ದರು. ನನ್ನೊಡನೆ ಮಾತನಾಡುತ್ತಲೇ ಇರಲಿಲ್ಲ. ಆತನ ತಂಗಿಯಾದ ವಹೀದಳು ಇದಕ್ಕೆ ಪ್ರತಿಯಾದ ಸ್ವಭಾವದವಳು. ಈ ಮಗಳೊಬ್ಬಳೇ ಇದುವರೆವಿಗೂ ತಂದೆ ತಾಯಿಗಳ ಜತೆಯಲ್ಲಿ ಇರುತ್ತಿದ್ದುದು. ಅವಳ ಪತಿಯೂ ಸಹ ಇಲ್ಲಿಯೇ ಇದ್ದರು. ವಹೀದಳ ವಯಸ್ಸು ಇಪ್ಪತ್ತು ವರ್ಷಗಳು. ಬಹು ಮನೋಹರವಾದ ಸ್ವಭಾವ. ಕಣ್ಣುಗಳು ಕಪ್ಪು ತರಹದ ನೆಶ್ಯದ ಬಣ್ಣ ಕೂದಲು ಅತಿ ಸುಂದರವಾಗಿತ್ತು. ಅವಳನ್ನು ನೋಡಿದಂದಿನಿಂದ ನನಗೆ ಅವಳಲ್ಲಿ ಒಂದು ವಿಧವಾದ ಪ್ರೀತಿಪೂರ್ವಕವಾಯಿತು. ಅದೇ ತರಹ ಅವಳೂ ಸಹ ನನ್ನನ್ನು ಪ್ರೀತಿಸುತ್ತಿದ್ದಳು ನಾನಲ್ಲಿರುವಾಗ ತನ್ನ ಮಕ್ಕಳೊಡನೆ ನನ್ನನ್ನೂ ಶಾಲೆಗೆ ಕಳುಹಿಸುತ್ತಿದ್ದಳು. ಹೊಲಿಗೆ, ಕಸೂತಿ ಮುಂತಾದುದನ್ನೆಲ್ಲಾ ನಾನು ಆಕೆಯಿಂದಲೇ ಕಲಿತೆನು.

ನಸಿರುಲ್ಲಾ ಸಾಹೇಬರವರ ಬೇರೊಬ್ಬ ಮಗಳು ತನ್ನ ಗಂಡನೊಡನೆ

ಏಷ್ಯಾಕೂಚಕ್‌ನಲ್ಲಿ ಇದ್ದ ನಿಮಿತ್ತ ಆ ಕಾಲದಲ್ಲಿ ನಾನಾಕೆಯನ್ನು ನೋಡ ಲಿಲ್ಲ. ಎಲ್ಲರಿಗಿಂತಲೂ ಚಿಕ್ಕವನಾದ ಹಾಫಿಜ್‌ನು ತನ್ನ ಪಲ್‌ಟನ್ ಸಂಗಡ ಅನಾತೂಲಿಯದಲ್ಲಿದ್ದನು. ಮನೆಯಲ್ಲಿ ಎಲ್ಲರಿಗೂ ಬಹಳ ಮುದ್ದೆನಿಸಿದನು. ಅಥವರ್‌ಬೇಯವರಂಥ ಗಂಭೀರ ಸ್ವಭಾವದವರೂ ಸಹ ಆತನ ವಿಷಯ ಮಾತನಾಡುವಾಗ ಪ್ರಫುಲ್ಲಚಿತ್ತರಾಗುತ್ತಿದ್ದರು. ಅಥವರ್‌ಬೇಯವರ ಪತ್ನಿ ಯಾದ ವಲಿಯಾಖಾನಮ್‌ಳಂತೂ ಯಾವಾಗಲೂ ನನ್ನೊಡನೆ, "ಮನೆಯಲ್ಲಿ ಏನು ಸಂತೋಷವುಂಟಾದರೂ ಹಾಫಿಜ್‌ಬೇಯು ಇಲ್ಲದಿದ್ದರೆ ರುಚಿಸುವುದೇ ಇಲ್ಲ. ಆತನಿಂದ ಎಲ್ಲಾ ವಸ್ತುವಿನಲ್ಲೂ ಒಂದು ಹೊಸ ಜೀವಕಳೆ ಬರುವುದು. ಆತನಿಲ್ಲದಿರುವುದರಿಂದ ಮನೆಯು ನಿರ್ಜನವಾಗಿ ಕಾಣುವದು" ಎಂದು ಹೇಳುತ್ತಿದ್ದಳು. ವಲಿಯಾಖಾನಮ್‌ಳು ಬಹಳ ಹರ್ಷಚಿತ್ತಳಾದ ಹೆಂಗಸು. ಹದಿನಾಲ್ಕು ವರ್ಷ ವಯಸ್ಸಿನಲ್ಲಿ ವಿವಾಹಿತಳಾಗಿ ಈಗ ಹತ್ತೊಂಭತ್ತನೆಯ ವಯಸ್ಸಿನಲ್ಲಿ ಮೂರು ಮಕ್ಕಳ ತಾಯಿಯಾಗಿದ್ದಳು. ಹಾಫಿಜ್‌ಬೇಯವರ ತಾಯಿಯೂ ಸಹ ತನ್ನ ಈ ಮಗನ ವಿಚಾರ ಹೇಳುವಾಗ ಬಹಳ ಗರ್ವದಿಂದ ಮಾತನಾಡುತ್ತಿದ್ದರು. ನೌಕರಚಾಕರರಂತೂ ಆತನನ್ನು ಎಷ್ಟು ಕೊಂಡಾಡುತ್ತಿದ್ದರೆಂದರೆ ನನಗೂ ಸಹ ಇಂಥಾ ಮನುಷ್ಯನನ್ನು ಬೇಗ ನೋಡಬೇಕೆಂಬ ಆಸೆಯುಂಟಾಯಿತು. ಆದರೆ ದೀರ್ಘಕಾಲದವರೆಗೆ ನನ್ನ ಇಚ್ಛೆಯು ನೇರವೇರಲಿಲ್ಲ, ಏಕೆಂದರೆ ಐದು ವರ್ಷಗಳ ತನಕ ಹಾಫಿಜ್‌ನ ಪಲ್‌ಟನ್ ಅನಾತೂಲಿಯದಲ್ಲಿದ್ದುದರಿಂದ ಆತನು ಖಸ್‌ತಂತನಿಯಾಕ್ಕೆ ಬರಲಾಗಲಿಲ್ಲ.

ಇಲ್ಲಿ ನಾನು ಬರೆಯುತ್ತಿರುವ ವಿಷಯಗಳು ನನ್ನ ಸಂಪೂರ್ಣ ಜೀವನ ಚರಿತ್ರೆಯಲ್ಲವು. ಇದು ನನ್ನ ಜೀವನದ ಒಂದು ಭಾಗದ ವಿಚಾರ ಮಾತ್ರವಾಗಿದೆ. ಆದುದರಿಂದ ಈ ಐದು ವರ್ಷಗಳ ಕಾಲವನ್ನು ಬಿಟ್ಟು ಆರನೆಯ ವರ್ಷದ ಮಾರ್ಚ್‌ತಿಂಗಳಿನಲ್ಲಿ ನನಗುಂಟಾದ ವಿಪತ್ತಿನ ವಿಷಯವಾಗಿ ಹೇಳುವೆನು. ಈ ದುರ್ಘಟನೆಯು ನನ್ನ ಸ್ಥಿತಿಯಲ್ಲಿ ಒಂದು ದೊಡ್ಡ ಬದಲಾವಣೆಯನ್ನುಂಟು ಮಾಡಿ, ಪ್ರಕೃತದಲ್ಲಿ ಇನ್ನೂ ಹೆಚ್ಚು ಕಷ್ಟಗಳಿಗೆ ಕಾರಣವಾಯಿತು. ಅದು ಏನೆಂದರೆ ನನ್ನ ಅಜ್ಜಿಯು ಒಂದು ದಿನ ಇದ್ದಕ್ಕಿದ್ದ ಹಾಗೆ ನಸಿರುಲ್ಲಾಪಾಷಾರವರ ಮನೆಯಲ್ಲಿರುವಾಗ ಸಖತ್ ಕಾಯಿಲೆಯಾದಳು. ಇಲಾಜು ಮುಂತಾದುವರಲ್ಲಿ ಎಷ್ಟು ಪ್ರಯತ್ನ

*ಏಷ್ಯಾಕೂಚಕ್ = Assiaminor

*ಪಲ್‌ಟನ್ = ಸೈನ್ಯದೊಂದು ಸಮೂಹ, Regiment

ಮಾಡಿದರೂ ಸಫಲವಾಗಲಿಲ್ಲ. ಹಠಾತ್ತಾಗಿ ತನ್ನ ಮನೆಗೆ ಬಂದು ಬಿಟ್ಟಳು. ತಾನು ಬಂದ ಕಾರಣವನ್ನು ಈ ರೀತಿ ಹೇಳಿದಳು.

"ನಸಿರುಲ್ಲಾ ಪಾಷಾರವರ ಮನೆಯೆಂದರೆ ನನಗೆ ಬಹಳ ವಿಶ್ವಾಸವಿರುವುದು. ಆದರೆ ಅಲ್ಲಿಂದ ಗುಲಾಮರ ತರಹ ದಫನ್ ಮಾಡಲ್ಪಡುವದು ನನಗೆ ಇಷ್ಟವಿಲ್ಲ." ಈ ಮಾತುಗಳನ್ನು ಕೇಳಿ ನನ್ನ ಕಣ್ಣಿನಲ್ಲಿ ನೀರು ತುಂಬಿ ಹೋಯಿತು. ನನ್ನ ಅಜ್ಜಿಯು ನನ್ನನ್ನು ಬಹು ಪ್ರೀತಿಯಿಂದ ಮುದ್ದಿಸಿ ಹೀಗೆನ್ನಲಾದಳು.

"ಕಂದಾ ನೀನು ಅಳಬೇಡ. ನೀನು ಏಕಾಂಗಿಯಾಗುವುದಿಲ್ಲ. ದಯಾಳುವಾದ ನನ್ನ ಧಣಿಯು ನಿನ್ನನ್ನು ನೋಡಿಕೊಳ್ಳುವನು." ಆದರೂ ನನ್ನ ಕಣ್ಣೀರು ನಿಲ್ಲದಿದ್ದುದರಿಂದ ಹೀಗೆಂದು ಸಮಾಧಾನ ಮಾಡಿದಳು, "ಒಳ್ಳೇದು ಸುಮ್ಮನಿರು. ಈಗ ನಾನು ಸ್ವಸ್ಥವಾಗುವ ಆಲೋಚನೆ ಮಾಡುತ್ತೇನೆ. ಅದೃಷ್ಟದಲ್ಲೇನಿರುವುದೋ, ಖಂಡಿತವಾಗಿಯೂ ನಡೆದು ಹೋಗುವುದು. ಆದುದರಿಂದ ಹಣೇಬರಹದ ವಿಷಯದಲ್ಲಿ ಯಾರಿಗೂ ಏನೂ ಸಾಧ್ಯವಿಲ್ಲ. ಈ ಡಾಕ್ಟರುಗಳಲ್ಲಿ ನನಗೆ ಕೊಂಚವೂ ನಂಬಿಕೆಯಿಲ್ಲ. ಆದರೆ ಕಲವು ಮಂತ್ರವಾದಿಗಳಿದ್ದಾರೆ ಸಾವಿರಾರು ಡಾಕ್ಟರುಗಳಿಗಿಂತ ಉತ್ತಮರಾಗಿದ್ದಾರೆ. ಯಾರಾದರೊಬ್ಬ ಮಂತ್ರವಾದಿಯನ್ನು ಬರಹೇಳುವದು ಒಳ್ಳೇದು. ಕಂದಾ, ಮಹಮೂದರ ಹೆಂಡತಿಯಾದ ಹಮೀದಳ ಬಳಿ ಹೋಗಿ ನಿನ್ನನ್ನು ಷೇಕ್ ಮೋಸಾರವರ ಹತ್ತಿರ ಕರೆದುಕೊಂಡು ಹೋಗಲು ಹೇಳು. ನನ್ನ ಅದೃಷ್ಟದಲ್ಲಿ ಒಳ್ಳೆಯದಾಗುವುದಿದ್ದರೆ ಈ ಮನುಷ್ಯನೊಬ್ಬನೇ ಒಳ್ಳೆಯದನ್ನು ಮಾಡಬಲ್ಲನು."

ನಾನು ಒಡನೆಯೇ ಒಪ್ಪಿಕೊಂಡೆನು. ಏತಕ್ಕೆಂದರೆ ನಮ್ಮ ಹಳ್ಳಿಯಲ್ಲೇ ಅನೇಕ ಮಂತ್ರವಾದಿಗಳಿದ್ದರು. ರೋಗಿಗಳಿಗೆ ಮಂತ್ರಿಸಿ ಊದಿದರೆ ಗುಣಹೊಂದುತ್ತಿದ್ದರು. ಆದರೆ ಇದರೊಡನೆ ವಿಧಿಯನ್ನು ಮೀರಿ ಬರಬೇಕಾಗಿತ್ತು, ಇಲ್ಲವಾದರೆ ಜೀವವೆಂಬ ವೃಕ್ಷಕ್ಕೆ ವಿನಾಶಕಾಲ ಬರಬೇಕೆಂದು ಅದೃಷ್ಟದಲ್ಲಿದ್ದರೆ ಯಾವ ಡಾಕ್ಟರನೇ ಆಗಲೀ ಹಕೀಮನಾಗಲಿ, ಫಕೀರನಾಗಲಿ ಆ ವೃಕ್ಷದ ಉದುರಿಹೋದ ಎಲೆಗಳನ್ನು ಪುನಃ ವೃಕ್ಷಕ್ಕೆ ಸೇರಿಸಬಲ್ಲನೆ! ಬುದ್ಧಿವಂತನಾದ ವೈದ್ಯನಾದರೆ ಈ ಸ್ಥಿತಿಯನ್ನು ತಕ್ಷಣವೇ ತಿಳಿದುಕೊಂಡು ದ್ರವ್ಯವನ್ನೆಂದಿಗೂ ತೆಗೆದುಕೊಳ್ಳುವನಲ್ಲ. ಆದರೆ ಮೊದಲೇ ದುಡ್ಡನ್ನು ತೆಗೆದುಕೊಂಡು—ಅದೂ ದೊಡ್ಡ ಸಂಖ್ಯೆಯಲ್ಲೇ—ರೋಗಿಗೆ ಗುಣಮಾಡುವುದಕ್ಕೆ ಬದಲಾಗಿ ಅವನನ್ನು ಇನ್ನೂ ಹಾಳು ಮಾಡುವಂಥವರೂ ಪ್ರಪಂಚದಲ್ಲಿದ್ದಾರೆ. ನಾನೂ

ಹವೀದಳು ಇಬ್ಬರೂ ಯಾರ ಬಳಿಗೆ ಹೋದೆವೋ ಆ ಮನುಷ್ಯನು ಇಂಥಹ ವಿಸಾರ್ಗ್ಯನೆಂಬುದು ಮುಂದೆ ತಿಳಿಯುವುದು. ಹವೀದಳು ಬಹು ಒಳ್ಳೆಯ ಸ್ವಭಾವದ ಹೆಂಗಸು. ಕೂಡಲೇ ನನ್ನೊಡನೆ ಬರಲು ಒಪ್ಪಿ, ಮುಖಕ್ಕೆ ಘಡವೆ ಹಾಕಿಕೊಂಡು, ಚಾದರವನ್ನು ಹೊದ್ದು ಜತೆಯಲ್ಲಿ ಹೊರಟಳು. ಶೇಕ್ ಮಹಮ್ಮದನ ಮನೆಯು ಗ್ರಾಮದಾಚೆಯಾದ ಬೇರೊಂದು ದಿಕ್ಕಿನಲ್ಲಿ ನಮ್ಮ ಮನೆಗೆ ಹತ್ತಿರವೇ ಇತ್ತು. ನಾವು ಆತನ ಮನೆಯನ್ನು ತಲಪಲು, ಆತನ ಹೆಂಡತಿಯು ಬಾಗಿಲನ್ನು ತೆರೆದು, ಅನೇಕ ಮೆಟ್ಟಲುಗಳನ್ನು ಹತ್ತಿದ ಬಳಿಕ ಒಂದು ಕೋಣೆಯಲ್ಲಿ ಕರೆದುಕೊಂಡು ಹೋದಳು. ಅಲ್ಲಿ ಚಾಪೆಯ ಮೇಲೆ ಒಬ್ಬ ಮನುಷ್ಯನು ಜಪಸರವನ್ನು ಎಣಿಸುತ್ತಾ, ನಮ್ಮ ಕಡೆ ಗಮನಿಸದೆಯೇ ತಲೆಯನ್ನು ಬಗ್ಗಿಸಿಕೊಂಡು ಕುಳಿತಿದ್ದನು. ಆದರೆ ಹವೀದಳು ಆತನ ಸ್ವಭಾವವನ್ನು ಚೆನ್ನಾಗಿ ಅರಿತವಳಾಗಿದ್ದುದರಿಂದ ನನ್ನೊಡನೆ ಆತನ ಹೆಂಡತಿಗೆ ಕೊಂಚ ಸಮಯವನ್ನು ಕೊಡಲು ಹೇಳಿದಳು. ನನ್ನ ಕೈಲಿದ್ದ ಒಂದು ಪ್ಯಾಸ್ಟರನ್ನು (ತುರ್ಕಿ ದೇಶದ ಒಂದು ಬೆಳ್ಳಿಯ ನಾಣ್ಯ. ನಾಲ್ಕು ಆಣೆಗೆ ಸಮ) ಕೊಟ್ಟು, ಬಿಟ್ಟೆನು. ಆತನ ಹೆಂಡತಿಯು ಅದನ್ನು ತೆಗೆದು ಚಾಪೆಯ ಕೆಳಗಿಟ್ಟಳು. ಇದರ ಗುಣವು ಆ ಮನುಷ್ಯನ ಮೇಲೆ ಹೇಗುಂಟಾಯಿತೆಂದರೆ, ತಕ್ಷಣವೇ ಆತನಲ್ಲಿ ಜೀವ ಬಂದಂತಾಗಿ ತಲೆಯನ್ನು ಮೇಲಕ್ಕೆತ್ತಿದನು. ಇನ್ನು ನಮ್ಮ ಕಡೆ ನೋಡದೆಯೇ ಹೀಗೆಂದು ಹೇಳಲಾರಂಭಿಸಿದನು:—

"ನಾನಾಗಲೇ ಗೊಂಬೆಯೊಳಗೆ ಕಾಲಿಟ್ಟು ಕುಳಿತಿದ್ದೇನೆ. ಹುಡುಗಿಯ ಮೇಲೆ ನನಗೆ ಬಹಳ ಪ್ರೀತಿಯುಂಟಾಗುವುದು. ಗೊಂದಲಿನೆಟಿಗೆ ಮರವು ಬೀಳುವುದು. ಅವಳನ್ನು ಗುಣಮಾಡುವೆನೆಂಬ ಭರವಸೆಯೆನಗಿದೆ"

ಇದರ ಮರ್ಮವು ನನ್ನ ಬುದ್ಧಿಗಂತೂ ಗೊತ್ತಾಗಲಿಲ್ಲ. ಆದರೆ ಹವೀದಳನ್ನು ಕರೆದುಕೊಂಡು "ನಿನ್ನ ಅಜ್ಜಿ ಸ್ವಸ್ಥಳಾಗುವಳು" ಎಂದು ಹೇಳಿ ಮತ್ತೆ ಹೀಗೆನ್ನುತಲೆ ಬಹು ವಿನಯದಿಂದ "ಹಜರತ್, ಹಾಗಾದರೆ ನಾನಿನ್ನೇನನ್ನು ಮಾಡಬೇಕು. ಪಾಪ, ಅವಳು ಬಹಳ ಸಖತ್ ಖಾಯಿಲೆಯಾಗಿದ್ದಾಳೆ." ಎಂದಳು.

"ಆಗ ನಿನ್ನ ತಂದೆ ಮೆಕ್ಕೆಗೆ ಹೋಗಿದ್ದಾಗ ಅವನು ತೂಫಾನಿನಲ್ಲಿ ಸಿಕ್ಕಿ ನಾಶವಾಗಿ ಹೋಗುವುದರಲ್ಲಿದ್ದನು. ನಾನೇ ಅವನ ಕಾಪಾಡಿದೆನೆಂಬುದು ನಿನಗೆ ಗೊತ್ತು. ಹೋಗಿಯ ಒಂದು ಬಸುರಿಯನ್ನು ಎರಡು ಅಷ್ರಫಿಯನ್ನು ನನಗೆ ತಂದು ಕೊಡು. ಖಂಡಿತವಾಗಿ ನಾನು ನೋಡಿಕೊಳ್ಳುವೆನು.

ಹವೀದಳು ಇದನ್ನು ಕೇಳಿ ಬಹಳ ಸಂತೋಷಗೊಂಡು, ಒಂದು

ಪ್ಯಾಸ್ತರನ್ನು ತೆಗೆದು ನನ್ನೊಡನೆ "ಇದನ್ನು ಕೊಟ್ಟು ನಿನ್ನ ವಿಷಯ ಕೇಳುತ್ತೇನೆ" ಎಂದು ಹೇಳಿದಳು. ಪ್ಯಾಸ್ತರು ಸಿಕ್ಕಲು ವೃದ್ಧನು ಈ ಸಲ ನನ್ನ ಕಡೆ ತಿರುಗಿ ಕಣ್ಣು ತುಂಬಾ ನೋಡಿ ಹೀಗೆಂದು ನುಡಿದನು—

"ನೀನು ಒಂದು ಗುಲಾಬಿ ಹೂ. ಈ ಸಮಯದಲ್ಲಿ ನಿನ್ನ ಸಂಪೂರ್ಣ ಅಂದ ಸೌಂದರ್ಯಗಳನ್ನು ಬೀರುತ್ತಿದ್ದಿ. ಗಾಳಿಯ ಹೊಡೆತದಿಂದ ಇಲ್ಲಿ ಅಲ್ಲಿ ಎಸೆದಾಡಲ್ಪಡುತ್ತಿ. ನಿನ್ನನ್ನು ಕಾಪಾಡುವವರ್‍ಯಾರೂ ಇರುವದಿಲ್ಲ" ಎಂದು ನಿಟ್ಟುಸಿರುಬಿಟ್ಟು, ತನ್ನ ಪೇಟಾವನ್ನು ತೆಗೆದು, ನನ್ನ ತಲೆಯ ಮೇಲಿಟ್ಟು, "ಈ ಪೇಟಾ ಇವಳ ತಲೆಯ ಮೇಲೆ ಇರಲೆಂದು ನಾನು ಆಶಿಸುತ್ತೇನೆ. ಇದನ್ನು ಈಗ ಯಾರು ತಾನೆ ಕೆಳಗಿಳಿಸಲು ಶಕ್ತರು, ಪ್ರಪಂಚವೆಲ್ಲಾ ನನ್ನ ಇಷ್ಟವನ್ನು ಬದಲಾಯಿಸಲಾರದು. ಆದರೆ ನೀನಾಗಿಯೇ ಇದನ್ನು ತೆಗೆದೆಸೆದರೆ ನಾನಾಗ ಅದನ್ನು ತೆಗೆದುಕೊಳ್ಳುವೆನು. ಸಂಗಡನೇ ನಿನ್ನನ್ನೂ ಮರೆತು ಬಿಡುವೆನು" ಎಂದು ಹೇಳಿದನು.

ಹಮೀದಾ—ಆದರೆ ಇವಳಿನ್ನೂ ಯೌವ್ವನವತಿಯೂ, ಸುಂದರಿಯೂ ಆಗಿದ್ದಾಳೆ. ದಯಾಳುವಾದ ಭಗವಂತನು ಇವಳಿಗೆ ಶೀಘ್ರದಲ್ಲೇ ಒಬ್ಬ ಒಳ್ಳೆಯ ಪತಿಯನ್ನು ದಯಪಾಲಿಸುವದಿಲ್ಲವೇ.

ಶೇಕ್—(ಅವಸರದಿಂದ ತಲೆಯಾಡಿಸುತ್ತಾ) ಈಗ ಹೊರಟು ಹೋಗಿ. ಬೇಗನೆ ರುಮಾಲನ್ನು ತೆಗೆದುಕೊಂಡು ಬನ್ನಿ. ರೋಗಿಯ ಜೀವನ ಬೆಳಕು ಖಂಡಿತವಾಗಿ ದೀರ್ಘವಾಗಿದೆ. ಆದರೆ ಬೇಗನೆ ಆರಿಹೋಗುವ ಸಂಭವವಿದೆ

ಹೀಗೆಂದು ಅವನು ಪುನಃ ಜಪಸರವನ್ನೆಣಿಸಲು ಪ್ರಾರಂಭ ಮಾಡಿದನು. ಅವನ ಹೆಂಡತಿಯು ಸನ್ನೆಯನ್ನು ತಿಳಿದುಕೊಂಡು ನಾವು ಸಪ್ಪಳಮಾಡದೆ ಹೊರಗೆ ಹೊರಟು ಬಂದೆವು. ರಸ್ತೆಯುದ್ದಕ್ಕೂ ನಾನು ಶೇಕನ ಸಂಭಾಷಣೆಯ ವಿಷಯವಾಗಿಯೇ ಯೋಚಿಸುತ್ತಿದ್ದೆನಾದರೂ ಅದಕ್ಕಾವ ಅರ್ಥವನ್ನೂ ಹೊಂದಿಸಲಾರದೆ ಸೋತೆನು. ನಾನಿನ್ನು ಹದಿನೇಳು ವರ್ಷದವಳಾಗಿದ್ದೆನು. ಈ ವಯಸ್ಸು ಎಂಥದೆಂದರೆ ಇದರಲ್ಲಿ ಭವಿಷ್ಯವು ವರ್ತಮಾನದ ಸೌಂದರ್ಯದಿಂದ ಕೂಡಿ ಬಣ್ಣ ಬಣ್ಣವಾಗಿ ಕಾಣುವದು. ಭವಿಷ್ಯದಾಗಮನದ ಭಯವು ಲೇಶವೂ ಇರುವದಿಲ್ಲ. ಆದರೆ ಶೇಕನ ಮಾತುಗಳು ನನ್ನ ಬುದ್ಧಿಗೆ ತಿಳಿಯದಿದ್ದರೂ ಅವನಾಡಿದ ಒಳ್ಳೆಯ ಸೂಚನೆಯನ್ನು ಕಂಡು ಹಿಡಿಯಲಾರದೆ ಹೋದೆನು. ನನ್ನ ಅಜ್ಜಿಯೂ ಸಹ ಶೇಕನ ಸಂಭಾಷಣೆಯನ್ನು ಕೇಳಿ ತಲೆಯಲ್ಲಾಡಿಸಿಬಿಟ್ಟು, ಸುಮ್ಮನಾಗಿ ಹೋದಳು. ತದನಂತರ ಆವಳು ನನ್ನನ್ನು ಬಹಳ ವ್ಯಾಕುಲತೆಯಿಂದ ನೋಡುತ್ತಿದ್ದು ಸನಿಯ ಶೇಕನ

ಮಾತಿನ ವಿಷಯವಾಗಿಯೇ ದಿನವೆಲ್ಲಾ ಅವಳು ಯೋಚಿಸುತ್ತಿದ್ದಳೆಂದು ನಾನು ಕೇಳಬಲ್ಲೆನು. ವಾಯಿದೆ ಕೊಟ್ಟದ್ದ ಪ್ರಕಾರ ರುಮಾಲನ್ನೂ ನಗದು ಹಣವನ್ನೂ ಶೇಕನ ಬಳಿ ಕಳುಹಿಸಿದಳು. ಅದು ಕೈಗೆ ಬರಲು ಶೇಕನು ಖುದ್ದಾಗಿ ನಮ್ಮ ಮನೆಗೆ ಬಂದುಬಿಟ್ಟನು. ನನ್ನ ಅಜ್ಜಿಗೋಸ್ಕರ ವಾಗಿ ಪ್ರಾರ್ಥನೆಯನ್ನು ಮಾಡಿ, ಕೊಂಚ ಮಂತ್ರಿಸಿ ಮುಖದ ಮೇಲೆ ಊದಿ ಸ್ವಲ್ಪ ಸಾಂಬ್ರಾಣಿಯನ್ನು ಕೊಟ್ಟು, ಪ್ರತಿ ದಿನವೂ ಸೂರ್ಯ ಮುಳುಗಿದ ನಂತರ ಹೊತ್ತಿಸಲು ಹೇಳಿದನು. ಗುಲಾಬಿ ಮತ್ತು ಇತರ ಪದಾರ್ಥಗಳು ಸೇರುವಂಥದ ಶೀಶೆಯನ್ನೂ ತೆಗೆದುಕೊಂಡು ಹೋದನು. ಇವೆಲ್ಲದಕ್ಕೂ ಐದು ಪೌಂಡುಗಳನ್ನು ತೆಗೆದುಕೊಂಡು ಹೋದನು. ನನ್ನ ಅಜ್ಜಿಯು, ಬೇರೆ ಇನ್ನೂ ಮೂರು ಪೌಂಡುಗಳನ್ನು ಹೆಚ್ಚಾಗಿ ಕೊಟ್ಟು, ನನ್ನನ್ನು ಕೆಟ್ಟಕಣ್ಣುಗಳಿಂದ ರಕ್ಷಿಸಲು ಒಂದು ಯಂತ್ರವನ್ನು ಬರೆದು ಕಟ್ಟಲು ಹೇಳಿದಳು.

ಆದರೆ ಅವನ ಇಲಾಜಿನಿಂದ ನನ್ನ ಅಜ್ಜಿಗೆ ಸ್ವಲ್ಪವೂ ಪ್ರಯೋಜನ ವಾಗಲಿಲ್ಲ. ಮೂರು ದಿನಗಳವರೆಗೆ ರೋಗಿಯ ಸ್ಥಿತಿಯು ಬಹಳ ಕೇಡಾಗಿ, ನನಗೆ ಒಂದು ನಿಮಿಷವೂ ವಿಶ್ರಾಂತಿ ತೆಗೆದುಕೊಳ್ಳಲು ಸಮಯ ಸಿಕ್ಕಲಿಲ್ಲ. ನಾಲ್ಕನೆಯ ದಿನ ಅವಳ ಸ್ಥಿತಿಯು ಕೊಂಚ ಸ್ಥಿಮಿತಕ್ಕೆ ಬಂದಿತು. ಹಮೀದಳು ಬಂದಿದ್ದುದರಿಂದ, ರೋಗಿಯ ವಿಚಾರಣೆಯನ್ನು ಬಿಟ್ಟುಬಿಟ್ಟು ನಾನು ಸ್ವಲ್ಪ ಹೊತ್ತು ಆರಾಮ ತೆಗೆದುಕೊಳ್ಳಲು ಬೇರೆ ಕೊಠಡಿಯಲ್ಲಿ ಹೋಗಿ ಮಲಗಿಕೊಂಡೆನು. ಆದರೆ ಇಷ್ಟು ಆತಂಕದಲ್ಲಿ ನಿದ್ರೆಯೆಲ್ಲಿ! ನಾನು ಮಲಗಿಕೊಂಡು ಅಜ್ಜಿಯ ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತಿದ್ದಾಗ ಹಮೀದಳ ಬಾಯಿಂದ ನನ್ನ ಹೆಸರನ್ನು ಶೇಕ್ ಮುಜಾವರನ ಹೆಸರನ್ನೂ ಕೇಳಿ ಆ ಕಡೆ ತಿರುಗಿದೆನು. ಹಮೀದಳಿಗೂ ನನ್ನ ಅಜ್ಜಿಗೂ ಇಬ್ಬರಿಗೂ ಈ ಸಂಭಾಷಣೆ ನಡೆಯುತ್ತಿತ್ತು :

ಹಮೀದಾ—ಹಾಜಿರೆಯ ವಿಷಯವಾಗಿ ಮುಜಾವರವರು ಹೇಳಿದ್ದು ಅತ್ಯಾಶ್ಚರ್ಯಕರವಾಗಿದೆ. ದೇವರಿಗೇ ಗೊತ್ತು. ಆತನ ಉದ್ದೇಶವೇನಿರಬಹುದೋ.

ನನ್ನ ಅಜ್ಜಿ ...ನನ್ನ ಮುದ್ದು ಮಗುವೇ! ನನ್ನ ತರುವಾಯ ಕೃಪಾಳುವಾದ ಭಗವಂತನು ಅವಳ ಪಾಲಕನಾಗಿದ್ದಾನೆ. ಖಾನಂದವರು ಹಾಜಿರಳನ್ನು ತಮ್ಮ ಹತ್ತಿರ ಇಟ್ಟುಕೊಳ್ಳುವೆನೆಂದು ಮಾತು ಕೊಟ್ಟಿರುವುದು ಸ್ತುತ್ಯ ವಾಗಿದೆ. ಇಲ್ಲದಿದ್ದರೆ ನನಗೆ ಬಹಳ ಚಿಂತೆಯಾಗುತ್ತಿತ್ತು.

ಹಮೀದಾ—ಆದರೆ ಫಿತ್ನಾ ನಿಮ್ಮ ಬಳಿಯಲ್ಲಿ ಸಾಕಾದಷ್ಟು ಧನವಿರುವುದರಿಂದ

ಹಾಜಿರಳು ಬದುಕಿರುವವರೆಗೂ ಯಾರ ಕೈಕೆಳಗೂ ಬಿದ್ದಿರಬೇಕಾಗಿಲ್ಲ.

ನನ್ನ ಅಜ್ಜಿ—ನಿಜ, ಆದರೆ ಬರೀ ಹಣವೇ ಎಲ್ಲ ಕೆಲಸಕ್ಕೂ ಬರುವುದಿಲ್ಲ. ಇಷ್ಟು ಚಿಕ್ಕ ವಯಸ್ಸಿನಲ್ಲಿ ದೊಡ್ಡವರಾರೂ ರಕ್ಷಕರಿಲ್ಲದಿರುವುದು ಬಹಳ ವ್ಯಥೆಕರವಾದ ವಿಷಯ.

ಹವಿವಾದ—ನನ್ನದೊಂದು ಸಲಹೆಯನ್ನು ಕೇಳುವುದಾದರೆ, ನಾವು ಗಂಡ ಹೆಂಡಿರು ಬದುಕಿರುವವರೆಗೂ, ಹಾಜಿರೆಯು ಮುಂದೆ ಕೂಡಾ ಒಬ್ಬಂಟಿಯಾಗಲಾರಳು.

ಆಮೇಲೆ ಅವಳು ತನ್ನ ಕುರ್ಚಿಯನ್ನು ನನ್ನ ಅಜ್ಜಿಯ ಹತ್ತಿರ ಎಳೆದುಕೊಂಡು ಹೀಗೆಂದು ಹೇಳಲಾರಂಭಿಸಿದಳು:—

ಹಾಜಿರೆಯು ಬಹು ರೂಪವತಿಯಾದ ಹುಡುಗಿ. ಅವಳ ಸುವರ್ಣ ರಂಗಿನ ಕೂದಲು ಎಷ್ಟು ಸುಂದರವಾಗಿದೆ ಮುಖವು ಹಾಲಿನಂತೆ ಬೆಳ್ಳಗಿದೆ. ಇದರ ಜೊತೆಗೆ ಬಹಳ ಮನೋಹರ ಸ್ವಭಾವ ಚಟುವಟಿಕೆಯುಳ್ಳವಳು ನನ್ನ ಮಗನೊಡನೆ ಅವಳ ಮದುವೆ ಮಾಡಿಬಿಡಿ. ಇನ್ನೊಂದು ವಾರದಲ್ಲೇ ಅವನು ಇಲ್ಲಿಗೆ ಬರುವವನಾಗಿದ್ದಾನೆ. ಬಸೂರಾ ಪಟ್ಟಣವು ಇಲ್ಲಿಂದ ದೂರವಿಲ್ಲ. ನನ್ನ ಮಗನಿಗೆ ಮಕ್ಕಳಿಲ್ಲದಿರುವುದರಿಂದ ನನ್ನ ಅಣ್ಣನು ತನ್ನ ಕಾರುಭಾರ ನ್ನೆಲ್ಲಾ ನನ್ನ ಮಗನಿಗೇ ಕೊಟ್ಟುಬಿಡುವೆನೆಂದು ವಾಯಿದೆ ಕೊಟ್ಟಿದ್ದಾನೆ. ಹಾಜಿರೆ ಎಷ್ಟು ಸುಖದಿಂದಿರಬಹುದೆಂಬುದು ಈಗ ನಿಮಗೆ ಗೊತ್ತಾಗುವುದೇ. ನಾನು ಅವಳನ್ನು ಮಗಳಂತೆ ಪ್ರೀತಿಸುವೆನು. ಅವಳು ಇಲ್ಲಿಗೆ ಬಂದಾಗಿನಿಂದ ಅವಳನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ನನ್ನ ಪತಿಯವರೋ ಅವಳನ್ನು ಕಂಡರೆ ಎಷ್ಟು ಪ್ರೀತಿ ತೋರುತ್ತಾರೆಂದರೆ ಅವಳ ಕಾಲ ಕೆಳಗಿನ ನೆಲಕ್ಕೆ ಮುತ್ತು ಕೊಡಲು ಸಿದ್ಧನಾಗಿದ್ದಾನೆ. ನೀವು ನನ್ನ ಮಾತನ್ನು ಕೇಳಿದೇ ಆದರೆ ಈ ವಿಚಾರ! "ನಮ್ಮ ಎ[illegible] ನಮ್ಮ ದೀಪವನ್ನು ಉರಿಸಿದಂತೆ" ಆಗುವುದು.

ನನ್ನ ಅಜ್ಜಿಯು ತಕ್ಷಣವೇ ಉತ್ತರ ಕೊಡಲಿಲ್ಲ. ಅವಳು ಸುಮ್ಮನಿರುವವರೆಗೂ ಜವಾಬಿನ ನಿರೀಕ್ಷಣೆಯಲ್ಲಿ ನನ್ನ ಹೃದಯವು ನಿಮಿತ್ತವಾಗಿ ಬಡಿದುಕೊಳ್ಳುತ್ತಿತ್ತು. ಕೊನೆಗೆ ಅಂದಳು, "ಅದೃಷ್ಟದಲ್ಲಿರುವುದು ನಡೆದು ಹೋಗುವುದು. [illegible] ಒಂದು ವೇಳೆ ಅವಕಾಶ[illegible] ಕೇತಾ [illegible] ನಿಮ್ಮ ಮಗ [illegible] ನಾನು ಒಂದು [illegible] ಅವಳ ಮದುವೆಯ ವಿಷಯ ಏನೂ [illegible] ಅವನನ್ನು ಈಗ ಐದು ವರ್ಷಗಳಿಂದಲೂ

ನೋಡಿಲ್ಲ. ಪ್ರಾಯಶಃ ಇಷ್ಟು ಕಾಲದಲ್ಲಿ ಅವನ ನಡತೆ ನುಡಿತೆಗಳಲ್ಲಿ ಅನೇಕ ಬದಲಾವಣೆಗಳಾಗಿರಬಹುದು. ಏಕೆಂದರೆ ಒಬ್ಬ ನವಯುವಕನ ಜೀವಮಾನದಲ್ಲಿ ಐದು ವರ್ಷಗಳ ಕಾಲವು ಅನೇಕ ಸ್ಥಿತಿಗತಿಗಳನ್ನುಂಟು ಮಾಡುತ್ತದೆ. ಅವನು ಬರುತ್ತಿದ್ದ ಹಾಗೆ ನನ್ನ ಹತ್ತಿರ ಕಳುಹಿಸಿಕೊಡು. ಒಂದು ವೇಳೆ ಅವನು ಈಗಲೂ ಮೊದಲಿದ್ದಂತೆಯೇ ಇದ್ದರೆ ಹಾಜಿರೆಯನ್ನು ಅವನಿಗೆ ಕೊಡುವುದರಲ್ಲಿ ನನಗಾವ ಅಭ್ಯಂತರವೂ ಇಲ್ಲ. ಇವರಿಬ್ಬರ ಮದುವೆ ಯನ್ನು ನೋಡುವಂಥಾ ಪುಣ್ಯ ನನ್ನ ಜನ್ಮದಲ್ಲಿ ದೇವರು ನನಗೆ ಕೊಡಲಿ" ಎಂದಳು.

ಹಮೀದಾ ಆಮಿನಾನ್: ಅದೇ ನಿಮಗಾವ ವಿಷಯದಲ್ಲಿ ಭಯವುಂಟೆಂದು ನನಗೆ ಗೊತ್ತಾಗುವುದಿಲ್ಲ. ದಾವೂದನು ಬಹಳ ಧೈರ್ಯಶಾಲಿ–ಕಷ್ಟಪಟ್ಟು ಕೆಲಸಮಾಡುವವನು. ಅವನೆಂದಿಗೂ ಬದಲಾಯಿಸುವವನಲ್ಲ.

ಇಷ್ಟು ಹೊತ್ತಿಗೆ ನನ್ನ ಅಜ್ಜಿಗೆ ಕೆಮ್ಮು ಹತ್ತಿಬಿಟ್ಟುದುದರಿಂದ ಅವಳು ಇದಕ್ಕೆ ಪ್ರತ್ಯುತ್ತರ ಕೊಡಲಿಲ್ಲ. ಅದೂ ಅಲ್ಲದೆ ನಾನು ಅವಳಿಗೆ ಔಷಧವನ್ನು ಕೊಡಲು ಹೋದುದರಿಂದ ಈ ಸಂಭಾಷಣೆಯು ಅಲ್ಲಿಗೇ ಪೂರೈಸಲ್ಪಟ್ಟಿತು. ಆದರೆ ಈ ಮಾತು ನನ್ನ ಮನಸ್ಸಿನಲ್ಲಿ ಅನೇಕ ದಿನಗಳ ವರೆಗೆ ನಿಂತುಬಿಟ್ಟಿತು. ವಿವಾಹದ ವಿಷಯದಲ್ಲಿ ನನ್ನ ಹೇಳಿ ಕೇಳಿಕೆ ಏನಿಲ್ಲ ವೆಂಬುದನ್ನೂ, ಇಷ್ಟು ಮುಖ್ಯ ವಿಚಾರದಲ್ಲಿ ನಾನು ಏನನ್ನೂ ಇತ್ಯರ್ಥ ಮಾಡಲಾಗದೆಂಬುದನ್ನೂ ತಿಳಿದವಳಾಗಿದ್ದರೂ ನನ್ನ ಮನಸ್ಸಿಗೆ ಕೊಂಚ ಯೋಚನೆಯೇ ಆಯಿತು. ಅನೇಕ ಸಲ ಮನಸ್ಸಿನಲ್ಲಾವ ಇರಾದೆಯಿಲ್ಲದೆಯೇ ನನ್ನ ದೃಷ್ಟಿಯು ಮಹಮೂದರ ಮನೆಯ ಮೇಲೆ ಬಿದ್ದು ಒಂದು ವೇಳೆ ದಾವೂದನು ಕರೆಸಲ್ಪಡುವನೋ ಏನೋ ಎಂಬ ಯೋಚನೆಯಾಗುತ್ತಿತ್ತು. ಅಂತು ಆರೇಳು ದಿನಗಳವರೆಗೆ ಯಾರೂ ಬರಲಿಲ್ಲ. ಇಷ್ಟು ಕಾಲದಲ್ಲಿ ನನ್ನ ಅಜ್ಜಿಯ ಸ್ಥಿತಿಯು ದಿನೇ ದಿನೇ ಕೇಡಾಗುತ್ತಾ ಬಂದುದರಿಂದ ನಾನು ಈ ವಿಚಾರವನ್ನು ಸಂಪೂರ್ಣವಾಗಿ ಮನಸ್ಸಿನಿಂದ ದೂರಮಾಡಿ ಬಿಟ್ಟೆನು. ಮಳನೆಯ ದಿನ ನಾನು ಅವಳಿಗಾಗಿ ಅಡಿಗೆ ಮಾಡುತ್ತಿದ್ದಾಗ ಯಾರೋ ಬಾಗಿಲನ್ನು ತಟ್ಟಿದರು.

ನನ್ನ ಅಜ್ಜಿ—(ಬಹು ಮೆತ್ತಗಿರುವ ಧ್ವನಿಯಿಂದ–ಏಕೆಂದರೆ ಈಗ ಅವಳಿಗೆ ಮಾತನಾಡಲು ಬಹಳ ಕಷ್ಟವಾಗುತ್ತಿತ್ತು.) ಮಗೂ, ಬಾಗಿಲು ತೆಗೆ ಯಮ್ಮಾ. ಖಂಡಿತವಾಗಿಯೂ ಯಾರೋ ಖಾನಸಾಹೇಬರವರ ಬಳಿಯಿಂದ

*ಆಮೀನ್ = ತಥಾಸ್ತು

ಬಂದಿದ್ದಾರೆ.

ಅನೇಕ ದಿನಗಳಿಂದ ನಸಿರುಲ್ಲಾ ಪಾಷಾರವರ ಪರಿಚಾರಿಕೆಯರು ನನ್ನ ಅಜ್ಜಿಯನ್ನು ನೋಡಲು ತಪ್ಪದೇ ಬರುತ್ತಿದ್ದರು. ನಾನು ಮೆಟ್ಟಲನ್ನು ಹತ್ತಿಹೋಗಿ (ಸಣ್ಣ ಸಣ್ಣ ಮನೆಗಳಲ್ಲಿ ಕೊಂಡಿಗೆ ಕಟ್ಟಿರುವಂಥಾ) ಹಗ್ಗವನ್ನು ಎಳೆಯಲು, ಬಾಗಿಲು ತೆರೆಯಲ್ಪಟ್ಟು, ಒಬ್ಬ ಮನುಷ್ಯನು ಅತಿ ಮೃದುವಾದ ಸ್ವರದಿಂದ "ಫಿತ್ನಾ ಇಲ್ಲೇ ಇರುವಳೇ" ಎಂದು ಕೇಳಿದನು.

ನಾನು—ಹೌದು, ಸ್ವಾಮಿ.

ಒಡನೆಯೇ ಇವನು ಒಂದು ವೇಳೆ ಮಹಮೂದರ ಮಗನಾಗಿರಬಹುದು ಎಂದು ಯೋಚಿಸಿಕೊಂಡು ಮನಸ್ಸಿಗೆ ಒಂದು ವಿಧವಾದ ಕಳವಳ ಉಂಟಾಯಿತು. ಆ ಮನುಷ್ಯನು ಮಹಡಿಯನ್ನು ಹತ್ತಿ ಬರುತ್ತಿರುವುದನ್ನು ನೋಡಿಕೊಂಡು ಕೊಠಡಿಯೊಳಗೆ ಬಂದು ಬಿಟ್ಟು ಅಜ್ಜಿಯೊಡನೆ "ಯಾರೋ ಗಂಡಸರು", ಎಂದು ಹೇಳಿದೆನು.

ಅಜ್ಜಿ—ಖಂಡಿತವಾಗಿಯೂ ದಾವೂದನೇ. ಅವನು ಬಂದುದು ನನಗೆ ಬಹಳ ಸಂತೋಷವಾಗಿದೆ. ಸ್ವಲ್ಪ ಹೊತ್ತು ನೀನು ಈ ಕೊಠಡಿಯಿಂದ ಹೊರಟು ಹೋಗಮ್ಮಾ.

ನಾನು ಹೋಗುವುದಕ್ಕೆ ಹಿಂತಿರುಗಲು, ಬಾಗಿಲು ತೆರೆಯಲ್ಪಟ್ಟು, ಫೀಸರ ಉಡುಪನ್ನು ಧರಿಸಿದ ಒಬ್ಬ ನವ ಯೌವ್ವನಸ್ಥನ ಎವರು ಬದರಿನಲ್ಲಿ ನಿಂತವಳಾದೆನು. ಅವನನ್ನು ನೋಡಿ "ಇವನು ದಾವೂದನಿರಲಾರನೆಂದು" ಯೋಚಿಸಲಾರಂಭಿಸಿದೆ. ಆದರೆ ನನ್ನಾಲೋಚನೆಯು ಇನ್ನೂ ನಿರ್ಧಾರವಾಗುವುದಕ್ಕೆ ಮೊದಲೇ ನನ್ನ ಅಜ್ಜಿಯು ಕೊಂಚ ಮೇಲಕ್ಕೆದ್ದು, ಅವನ ಕೊರಳಿನ ಮೇಲೆ ಕೈಹಾಕಿಕೊಂಡು ಹೀಗೆಂದು ಹೇಳುತ್ತಿದ್ದಳು.

"ನಾಫಿಜ್‌ಬೇ ನನ್ನ ಮುದ್ದಿನ ಮಗುವೇ, ದೇವರು ನಿನಗೋಸ್ಕರವಾಗಿಯಾದರೂ ನನ್ನನ್ನು ಪುನಃ ಜೀವಂತಳನ್ನಾಗಿ ಮಾಡಲಿ"

ನಾಫಿಜ್—(ರೋಗಿಯ ಹತ್ತಿರ ಕುಳಿತು, ಹರ್ಷದಿಂದ) ನಾನು ನಿನ್ನೆ ಬಂದೆನು. ನಿನ್ನ ಖಾಯಿಲೆಯ ಸಮಾಚಾರ ಕೇಳಿ, ಎಲ್ಲರಿಗಿಂತ ಮೊದಲು ನಿನ್ನ ಬಳಿ ಬರಬೇಕೆಂದು ಆಲೋಚನೆ ಮಾಡಿದೆನು.

ಅಜ್ಜಿ—ದೇವರು ನಿನ್ನ ಯೌವನವನ್ನು ಎಂದೆಂದಿಗೂ ಶಾಶ್ವತವಾಗಿಟ್ಟಿರಲಿ. ನೀನು ಯಾವಾಗಲೂ ಸುಗುಣನೂ ದಯಾಳುವೂ ಆಗಿದ್ದೀ. ಆದರೆ ಎಲ್ಲಕ್ಕಿಂತ ಹೆಚ್ಚು ದಯಾಳತ್ವವನ್ನು ಇಂದು ತೋರಿಸಿದ್ದೀ—ಏನೆಂದರೆ ಸಾಯುವುದಕ್ಕೆ ಮೊದಲು ನಿನ್ನ ಮುಖವನ್ನು ನೋಡುವ ಅವಕಾಶ ನನಗೆ

ಸಿಕ್ಕಿತಲ್ಲಾ-

ನಾಫಿಜ್—ಅಮ್ಮಾ-ಆದಿನವೆಂದಿಗೂ ಬರದಿರಲಿ. ನನ್ನ ಮಕ್ಕಳನ್ನೂ ಸಹ ಆಡಿಸುವಷ್ಟು ನಿನಗೆ ಆಯುಸ್ಸಿರಬಹುದು. ಏನು, ಇವಳೇ ನಿನ್ನ ಮೊಮ್ಮಗಳೇ. ನಮ್ಮ ತಾಯಿಯು ಇವಳ ವಿಷಯವೇ ಅಲ್ಲವೇ ಹೇಳುತ್ತಿದ್ದುದು ?

ಇಷ್ಟು ಹೊತ್ತಿನವರೆಗೂ ನಾನು ಮೌನದಿಂದ ಇವರ ಮಾತುಗಳನ್ನು ಕೇಳುತ್ತಾ ಇದ್ದೆನು. ನಾಫಿಜ್ ಬೇಯು ಬಂದುದು ಕೇವಲ ಆತನ ಮಮತೆ, ಸೌಹಾರ್ದತೆಯ ಫಲವೆಂದೂ, ಲೋಕದಲ್ಲಿ ಬಹು ಕಡಿಮೆ ಜನರು ಈ ರೀತಿಯಾದ ಕರುಣತೆಯನ್ನು ಬಳಕೆಯಲ್ಲಿಟ್ಟು ಕೊಂಡಿರುತ್ತಾರೆಂದೂ ತಿಳಿದುಕೊಳ್ಳುವಷ್ಟು ನನಗೆ ಪ್ರಾಸಂಗಿಕ ಅನುಭವವಿತ್ತು. ನಾಫಿಜ್‌ಬೇಯು ಅತಿ ನಿರ್ಮಲ ಸ್ವಭಾವದವನು. ಆತನ ಮಧುರವಾಕ್ಯ, ಆತನು ತನ್ನ ದಾತ್ರಿಯನ್ನು ಕಂಡು ಆನಂದ ಭರಿತನಾಗುತ್ತಿದ್ದುದು-ಇವುಗಳಿಂದ ಆತನು ನಮ್ಮ ಮನೆಗೆ ಬಂದುದು ನೋಡಿದವರಿಗಾಗಿ ಅಲ್ಲವೆಂಬುದು ಗೊತ್ತಾಗುತ್ತಿತ್ತು. ರೂಪು, ಆಕಾರದಲ್ಲಿ ತಂದೆಯನ್ನು ಮಿತಿಮೀರಿ ಹೋಲುತ್ತಿದ್ದನು. ಈರ್ವರಿಗೂ ಬಿಳೀತರಹದ ನೆಶ್ಯದ ಬಣ್ಣದ ಕಣ್ಣುಗಳು. ಬಹು ಹದನಾದ ನೀಳವಾದ ದೇಹ. ಬಾಯಿ ಸ್ವಲ್ಪ ದೊಡ್ಡದು. ತುಂಬುತುಟಿಗಳು. ತೆಳುವಾದ ಮೀಸೆ. ಆದರೆ ನಾಫಿಜ್ ಬೇಯು ಮುಖದ ಕೆಳಭಾಗ ಕೊಂಚ ಭಾರಿಯಾಗಿದ್ದ ಕಾರಣ, ಶಾಂತ, ಸೌಜನ್ಯದೊಡನೆ ಹಠವಾದಿತ್ವ, ಕಾರ್ಯಸಾಧಕತೆಯ ಸೂಚನೆ ಸಹ ಕಾಣಬರುತ್ತಿತ್ತು.

ನನ್ನ ಅಜ್ಜಿ—ಹಾಜಿರೇ, ಮುಂದೆ ಬಂದು ನಿನ್ನ ಒಡೆಯನ ಕೈಗೆ ಮುತ್ತು ಕೊಡಮ್ಮಾ

ನಾನು ಮೆಲ್ಲನೆ ಮುಂದಕ್ಕೆ ಬಂದೆನು. ಆದರೆ ದೃಷ್ಟಿ ಕೆಳಗೆ ಇತ್ತು. ನಾಫಿಜ್‌ಬೇಯು ನನ್ನನ್ನು ದುರದುರನೆ ನೋಡುತ್ತಿದ್ದಾನೆಂಬ ಯೋಚನೆಯು ನನ್ನ ಮನಸ್ಸಿಗೆ ಏಕೋ ಕಾಣೆ ಉಂಟಾಯಿತು.

ನಾಫಿಜ್—(ನಸುನಗುತ್ತಾ ಕೈ ಮುಂದಕ್ಕೆ ನೀಡಿ) ಎಷ್ಟು ಚೆಲುವಾದ ಹುಡುಗಿ! ಹಾಜಿರೇ, ನಾವಿಬ್ಬರೂ ದಾತ್ರಿಯ ಎಲ್ಲರಿಗಿಂತ ಕಿರಿಯ ಮಕ್ಕಳಾಗಿದ್ದೇವೆ (ಪುನಃ ಅಜ್ಜಿಯ ಕಡೆ ತಿರುಗಿ) ನಮ್ಮ ಮನೆಯಲ್ಲಿ ಹಾಜಿರೆಯು ಸರ್ವರಿಗೂ ಪ್ರಿಯಳೆನಿಸಿಕೊಂಡಿದ್ದಾಳೆ. ಷಹೀದಾ, ವಲಿಯಾ ಅಮ್ಮಾ ಎಲ್ಲರೂ ಇವಳನ್ನು ಕೊಂಡಾಡುವವರಾಗಿದ್ದಾರೆ. ಅಥರ್‌ಗೆ ಸಹ ಎರಡು ಸ್ತೋತ್ರಾರ್ಹವಾದ ಮಾತುಗಳನ್ನಾಡುವಷ್ಟು ಪುರಸೊತ್ತು ಸಿಕ್ಕಿತು-

ಇದನ್ನು ಕೇಳಿ ನನಗಾಶ್ಚರ್ಯವುಂಟಾಯಿತು. ಯಾಕೆಂದರೆ ಅಧಮ್ ಜೀಯವರು ಯಾವಾಗಲೂ ತನ್ನ ಆಲೋಚನೆಗಳಲ್ಲೇ ಮುಳುಗಿರುತ್ತಿದ್ದುದರಿಂದ ನನ್ನ ವಿಷಯ ಯೋಚಿಸಲು ಸಹ ಅವರಿಗೆ ಅವಕಾಶ ವಿರುತ್ತಿರಲಿಲ್ಲವೆಂದು ನಾನು ತಿಳಿದಿದ್ದೆನು. ಒಂದಾನೊಂದು ದಿನ ಇವರಲ್ಲದೆ ಮತ್ತಾರೂ ನನ್ನ ಮಿತ್ರರೂ ಸಹಾಯಕರೂ ಇರುವುದಿಲ್ಲವೆಂಬ ಸಂದೇಹ ಸಹ ನನಗಾಗಿರಲಿಲ್ಲ.

ನನ್ನ ಅಜ್ಜಿ—(ಮೆಲ್ಲನೆ ನಗುತ್ತಾ) ದೇವರು ಅವರೆಲ್ಲರನ್ನೂ ಚೆನ್ನಾಗಿಟ್ಟಿರಲಿ. ಹಾಜಿರಳನ್ನು ಎಲ್ಲರೂ ಬಹಳ ಚೆನ್ನಾಗಿ ಕಾಣುತ್ತಾರೆ. ನನ್ನ ಮುದ್ದು ಮಗನೇ ಇದುವರೆವಿಗೂ ನಿನ್ನ ವಿಷಯವೇನನ್ನೂ ಹೇಳಲಿಲ್ಲ. ಅನಾತೂಲಿಯದಲ್ಲಿ ನೀನು ಹೇಗಿದ್ದೆ—ಏನು ಮಾಡುತ್ತಿದ್ದೆ.

ನಾಫಿಜ್—(ನಗುತ್ತಾ) ಏನ ಹೇಳಲಿ. ನನ್ನ ಜೊತೆಗಾರರ ಜೀವನವು ಹೇಗೆ ಕಳೆಯುತ್ತಿತ್ತೋ, ಅದೇ ರೀತಿಯಲ್ಲಿ ನನ್ನದೂ ಕಳೆಯುತ್ತಿತ್ತು. ಅಪರೂಪವಾದ ಸಂಗತಿಯೇನೂ ನಡೆಯಲಿಲ್ಲ. ನಡೆಯಲು ಸಹ, ನಾವಿದ್ದ ಆ ಸಣ್ಣ ಕೋಟೆಯಲ್ಲಿ ಅವಕಾಶ ಸಿಕ್ಕುತ್ತಿರಲಿಲ್ಲ. ಸತ್ಯವಾಗಿಯೂ ಬಹು ಕಷ್ಟದಿಂದ ಹೊತ್ತು ಹೋಗುತ್ತಿತ್ತು. ಇಸ್ತಂತಿನಿಯಾಕ್ಕೆ ವಾಪಸು ಬಂದು ಬಿಡಬೇಕೆಂದು ನಾವೆಲ್ಲರೂ ಮನಃಪೂರ್ವಕವಾಗಿ ಆಶಿಸುತ್ತಿದ್ದೆವು. ನಮಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬೇಗ ಬೇಗನೆ ವರ್ಗವಾಗುತ್ತಿದ್ದುದರಿಂದ ಅನಾತೂಲಿಯವನ್ನು ಚೆನ್ನಾಗಿ ತಿರುಗಿದೆ. ಎಲ್ಲಿಯ ಇಸ್ತಂತಿನಿಯಾ! ಎಲ್ಲಿಯ ಆ ಸ್ಥಳಗಳು! ಮಾಡುವುದಕ್ಕೆ ಕೆಲಸವಿಲ್ಲದುದರಿಂದ ಒಂದೊಂದು ಸಲ ಹೊತ್ತು ಕಳೆವುದೇ ಕಷ್ಟವಾಗಿತ್ತು. ಒಳ್ಳೇದು ಇದೆಲ್ಲಾ ಹಾಗಿರಲಿ ಫಿತ್‌ನಾ, ನಾನು ಇಜ್ಜತ್‌ಪಾಷಾರವರನ್ನು ನೋಡಿದ್ದೆ. ಅವರ ತಂದೆಯು ಕೆಲಸದಿಂದ ನಿವೃತ್ತರಾಗಲು ಅದೇ ಗೌರ್ನರಿಯನ್ನು ನಮ್ಮ ತಂದೆಯು ಇಜ್ಜತ್ ಪಾಷಾರವರಿಗೆ ಕೊಡಿಸಿದರೆಂಬುದು ನಿನಗೆ ಗೊತ್ತಿರಲಾರದು.

ನನ್ನ ಅಜ್ಜಿ—ಹಾಗಾದರೆ ಸನಿಯಾಖಾನಮ್‌ಳು ಖೌನಿಯಾದಲ್ಲಿರಬಹುದು. ಅವಳನ್ನೂ ಕಂಡಿದ್ದೆಯಾ?

ನಾಫಿಜ್—ಇಲ್ಲ, ತಾಯಿ, ನಾನು ಅವರನ್ನು ನೋಡಿದನಂತರ ಇಜ್ಜತ್ ಪಾಷಾರವರಿಗೆ ಗೌರ್ನರಿ ಸಿಕ್ಕಿತು. ನಾನು ಹೋಗಬೇಕಾಗಿರುವುದರಿಂದ ಇನ್ನು ಹೊರಡುವೆನು. ಅಭಿವೃದ್ಧಿಸ್ಥಿತಿಗೆ ಬಂದ ಕೂಡಲೇ ಇಲ್ಲಿ ನನಗೆ ಸ್ಥಳ ಸಿಕ್ಕುವುದು.

ನನ್ನ ಅಜ್ಜಿ—(ಬಹು ಸಂತೋಷಗೊಂಡು)ಇದನ್ನು ಕೇಳಿ ನನಗೆ ಬಹಳ ಆನಂದವಾಯಿತು. ಹಾಗಾದರೆ ನೀನು ಇನ್ನು ಇಲ್ಲೇ ಇರುವಿಯೇನು ?

ನಾಫಿಜ್—ಹೌದು, ತಾಯಿ, ಅದೃಷ್ಟದಿಂದ. ಇನ್ನು ನನ್ನಿಂದ ಸೂಬೆಗಳಲ್ಲಿ ಒಂದು ವರ್ಷವೂ ಇರಲಾಗುವುದಿಲ್ಲ. ಒಳ್ಳೇದು ಬರುವೆನು.

ಹೀಗೆಂದು ಹೇಳಿ ನಾಫಿಜ್‌ಬೇ ಬೊಗ್ಗಿ ನನ್ನ ಅಜ್ಜಿಗೆ ಮುದ್ದಿಟ್ಟು ಬಾಗಿಲ ಕಡೆ ಹೊರಟನು. ಅವನನ್ನು ಬೀಳ್ಕೊಡಲು ನಾನು ಸಂಗಡ ಹೋದೆನು. ಮೆಟ್ಟಿಲ ಬಳಿ ಹೋಗಲು ನನ್ನ ಮನಸ್ಸಿನಲ್ಲಿ ಇವನನ್ನು ನಿಲ್ಲಿಸಿಕೊಳ್ಳಬೇಕೆಂಬ ಯೋಚನೆಯಾಗಿ ಈ ಪ್ರಶ್ನೆ ಹಾಕಿದೆನು.

ಏನು "ನಿಜವಾಗಿಯೂ ನೀವು ನನ್ನ ಅಜ್ಜಿ ಸ್ವಸ್ಥಳಾಗುವಳೆಂದು ಯೋಚಿಸುತ್ತೀರಾ. ಅಥವಾ ಅವಳ ಸಮಾಧಾನಕ್ಕೋಸ್ಕರ ಹಾಗೆ ಹೇಳಿದಿರೋ"

ನಾಫಿಜ್‌ಬೇಯು ಮುಂದೆ ನಿಂತಿದ್ದವನು, ಈ ಪ್ರಶ್ನೆ ಕೇಳಿ ನನ್ನ ಕಡೆ ತಿರುಗಿ, ಕೊಂಚ ಹೊತ್ತು ಮೌನದಿಂದ ನನ್ನನ್ನು ನೋಡುತ್ತಿದ್ದು, ಆಮೇಲೆ ತನ್ನ ಕೈಯಿಂದ ನನ್ನ ಕೂದಲನ್ನು ಸವರಿ, ಅತಿ ದಯಾಭರಿತವಾದ ಸ್ವರ ದಿಂದ "ಅಯ್ಯೋ, ಪಾಪ, ಹುಡುಗಿ" ಎಂದು ಬಿಟ್ಟು, ಮತ್ತೇನನ್ನೂ ಹೇಳದೆ ಸರಸರನೆ ಮೆಟ್ಟಿಲನ್ನಿಳಿದು ಹೊರಟು ಹೋದನು. ಆದರೆ ನಾನಿದರರ್ಥವನ್ನು ತಿಳಿದುಕೊಂಡೆನು. ಬಾಗಿಲು ಮುಚ್ಚಿದೊಡನೆಯೇ ಅಡಿಗೆ ಮನೆಗೆ ಹೋಗಿ ಕುರ್ಚಿಯ ಮೇಲೆ ಕುಳಿತುಕೊಂಡು ತಡೆಯಿಲ್ಲದೆ ಅತ್ತೆನು. ಅಯ್ಯೋ ಮೊದಲೇ ನನಗೆ ಅವಳು ಸ್ವಸ್ಥವಾಗುವ ಆಶೆ ಬಹು ಕಮ್ಮಿ ಇತ್ತು. ನಾಫಿಜ್‌ಬೇಯು ನೋಟವು ಆ ಕಳೆದುಳಿದಾಶೆಯನ್ನೂ ಇರಗೊಡಲಿಲ್ಲ.

ಅಂದು ಸಾಯಂಕಾಲ ನನ್ನ ಅಜ್ಜಿಯು ನಸಿರುಲ್ಲಾಪಾಷಾರವರ ಮನೆಯವರ ಮತ್ತು ಆ ಜನರ ಉಪಕಾರದ ವಿಷಯವಾಗಿ ಬಹಳವಾಗಿ ಹೇಳುತ್ತಾ ನನ್ನ ಕೈಲಿ ಹೀಗೆಂದಳು.

"ನನ್ನ ತಂದೆಯು ಖಾನಮ್ ಅಫಂದಿಯವರ ಹತ್ತಿರ ನಾವಿಕನಾಗಿದ್ದ ನೆಂಬುದು ನಿನಗೆ ಒಂದು ವೇಳೆ ಗೊತ್ತಿರಲಾರದು. ನಾನು ಅಲ್ಲಿಯೇ ಹುಟ್ಟಿ ಬೆಳೆದೆನು. ನನ್ನಗಂಡನಿಗೂ ಇದೇ ವೃತ್ತಿಯಿತ್ತು. ಅವನು ಬಹಳ ಬಡವನಾಗಿದ್ದುದರಿಂದ ಖಾನಮ್ ಅಫಂದಿಯವರ ಮೊದಲನೆಯ ಶಿಶುವು ಜನಿಸಿದಾಗ ಅವರು ನನಗೆ ಕೆಲಸಕ್ಕೆ ಹೇಳಲು ನಾನು ತಕ್ಷಣವೇ ಸಂತೋಷ ದಿಂದ ಒಪ್ಪಿಕೊಂಡುಬಿಟ್ಟೆನು. ಆಗಿನಿಂದಲೂ ಅವರು ನನಗೆ ಅನೇಕ ಉಪ ಕಾರವನ್ನು ಮಾಡಿದ್ದಾರೆ. ಕಷ್ಟಕಾಲಗಳಲ್ಲೆಲ್ಲಾ ಬಹಳ ಸಹಾಯ ಮಾಡಿ

ದ್ದಾರೆ. ಅದಕ್ಕೆ ಪ್ರತ್ಯುಪಕಾರವಾಗಿ ನನ್ನ ಬಳಿ ಕೇವಲ ವಂದನೆ ಮಾತ್ರ ಇದೆ. ಹಾಜಿರೇ, ನಾನು ಇನ್ನು ಎರಡು ಘಳಿಗೆಯ ಅತಿಥಿಯಾಗಿದ್ದೇನೆ. ಆ ಮನೆಯವರ ಉಪಕಾರವನ್ನೆಂದಿಗೂ ಮರೆಯುವುದಿಲ್ಲವೆಂದು ಮಾತುಕೊಡು. ಅವರ ಉಪಕಾರಕ್ಕೆ ಬದಲು, ಅದರಲ್ಲೂ ಖಾನಮ್ ಆಫಂದಿಯವರಿಗೆ ನೀನು ಎಷ್ಟು ಕೃತಜ್ಞಳಾಗಿರಬೇಕೆಂಬುದನ್ನು ನೆನಪಿನಲ್ಲಿಡು. ಆವ ಸಮಯದಲ್ಲೂ ಖಾನಮ್ ಆಫಂದಿಯವರ ಮರ್ಜಿಗೆ ಪ್ರತಿಕೂಲವಾಗಿ ಆವ ಕೆಲಸವನ್ನೂ ಮಾಡುವುದಿಲ್ಲವೆಂದು ಆಣೆ ಇಡಮ್ಮಾ."

ನಾನು—(ಬಿಕ್ಕಿ ಬಿಕ್ಕಿ ಅಳುತ್ತಾ) ದೇವರ ಸತ್ಯವಾಗಿ ಎಂದಿಗೂ ಮಾಡುವುದಿಲ್ಲ. ಅಜ್ಜಿ, ಈ ವಿಧವಾದ ಮಾತುಗಳನ್ನಾಡಬೇಡ. ನನ್ನಿಂದ ಕೇಳಲು ಆಗುವುದಿಲ್ಲ.

ನನ್ನ ಅಜ್ಜಿ—(ನನ್ನನ್ನು ಪ್ರೀತಿಯಿಂದ ಮುದ್ದಿಸುತ್ತಾ) ಅನಾಥಳಾದ ಹಾಜಿರೇ, ನನ್ನ ಕಾಲವು ಹತ್ತಿರ ಸಮೀಪಿಸಿರುವುದರಿಂದ ಈ ಮಾತನ್ನೆಲ್ಲಾ ಹೇಳಬೇಕಾಗಿದೆ. ನಾನು ಸಾಯುವುದಕ್ಕೆ ಮೊದಲು ನನ್ನ ಕೊನೆಯ ಮಾತುಗಳನ್ನು ಕೇಳುವುದು ನಿನಗೆ ಅವಶ್ಯಕವಾಗಿದೆ. ನಾನು ಸತ್ತ ಮೇಲೆ ನೀನು ಖಾನಮ್‌ರವರ ಬಳಿ ಹೋಗಿ ಇರಮ್ಮಾ. ಅವರು ನಿನ್ನನ್ನು ಎಲ್ಲಾ ವಿಧದಲ್ಲೂ ರಕ್ಷಿಸುವರು. ಖಾನಮ್‌ರವರು ಇರುವವರೆಗೂ ನಿನಗೆ ಯಾವ ವಿಧವಾದ ತೊಂದರೆಯೂ ಇರುವುದಿಲ್ಲ. ಆದರೆ ಈ ವಿಷಯ ಮಾತ್ರ ಜ್ಞಾಪಕವಿರಲಿ-ಅವರ ಮನಸ್ಸನ್ನು ಮಾತ್ರ ಎಂದಿಗೂ ನೋಯಿಸಬಾರದು. ಅಯ್ಯೊ, ನಾನು ಸಾಯುವುದರೊಳಗೆ ದಾವೂದನು ಬಂದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ನನ್ನ ಮನಸ್ಸು ಎಷ್ಟು ಹಗುರವಾಗುತ್ತಿತ್ತು. ಅವನನ್ನು ನೋಡದೆ ಮಾತ್ರ ನಾನು ಎಂದಿಗೂ ನಿನ್ನನ್ನು ಅವನಿಗೆ ಕೊಟ್ಟು ಮದುವೆ ಮಾಡುವುದಕ್ಕೆ ಒಪ್ಪುವುದಿಲ್ಲ.

ಸ್ವಲ್ಪ ಹೊತ್ತು ಸುಮ್ಮನಿದ್ದು, ಪುನಃ ಮೆಲ್ಲನೆ "ಈವತ್ತು ನನಗೆ ಬಹಳ ಆಯಾಸವಾಗಿರುವುದರಿಂದ ಕೊಂಚ ಮಲಗಲು ಇಷ್ಟ ಪಡುತ್ತೇನೆ. ಹೋಗಿ ಹಮಿದಾದಳನ್ನು ಬರಹೇಳು. ಇಂದು ಮಾತ್ರ ಅವಳು ನಿನ್ನ ಜತೆ ಇರಲಿ," ಎಂದಳು.

ನಾನು ಹೊರಗೆ ಹೋಗಿ ಹಮಿದಾದಳನ್ನು ಕರೆತಂದೆನು. ಆದರೆ ಅವಳು ಬರುವ ಹೊತ್ತಿಗೆ ನನ್ನ ಅಜ್ಜಿಯ ನಾಲಿಗೆ ನಿಂತು ಹೋಗಿತ್ತು. ಇನ್ನೂ ಬೆಳಗಾಗುವುದರೊಳಗೇ ನಾನು ಎರಡನೆಯ ಬಾರಿ ಅನಾಥೆಯಾದೆನು. ಈ ಅಗಾಧವಾದ ದುಃಖದಿಂದ ನನ್ನ ಜ್ಞಾನವೇ ಆಗ ಸರಿಯಾಗಿರಲಿಲ್ಲ. ನನಗೆ

ಸ್ನಾನ ಮಾಡಿಸಿ ಪೆಟ್ಟಿಗೆಯಲ್ಲಿರಿಸುವ ಸಂಸ್ಕಾರದಲ್ಲಿ ಸಹ ನಾನು ಭಾಗಿಯಾಗಲಾರದೆ ಹೋದೆನು. ಏನೇನು ನಡೆಯಿತೆಂಬುದು ಕೂಡ ನನಗೆ ಜ್ಞಾಪಕವಿಲ್ಲ. ಸಾಮಾನುಗಳೆಲ್ಲಾ ಖಂಡಿತವಾಗಿ ದೊಡ್ಡ ಮನೆಯಿಂದ ಬಂದಿರಬೇಕು. ನಾನಾದರೋ ಇಷ್ಟು ಮಾತ್ರ ಮಾಡಿದೆ–ಏನೆಂದರೆ ಆಳು ಕಾಳುಗಳನ್ನು ಶವದ ಹತ್ತಿರ ಬಿಟ್ಟು ಅಡಿಗೆ ಮನೆಗೆ ಹೋಗಿ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ನೆಲದ ಮೇಲೆ ಬಿದ್ದುಕೊಂಡೆನು. ಕೊಂಚ ಹೊತ್ತಾದ ಬಳಿಕ ಯಾರೋ ನನ್ನ ಭುಜದ ಮೇಲೆ ಕೈಯಿಟ್ಟು ಅತಿ ನಯದಿಂದ "ಕಷ್ಟಜೀವಿಯಾದ ಹುಡುಗಿ, ಏಳು, ಕುಳಿತುಕೋ, ಹೀಗೆ ಮಾಡಬಾರದು. ಮಿಕ್ಕ ಹುಡುಗಿಯರೆಲ್ಲಾ ಎಲ್ಲಿ. ನಿನ್ನನ್ನು ಒಂಟಿಯಾಗಿ ಈ ರೀತಿ ಏತಕ್ಕೆ ಬಿಟ್ಟು ಹೋದರು" ಎಂದರು.

ನಾನು ಮೆಲ್ಲನೆ ಎದ್ದು ನೋಡಲು ನಾಥೆಜ್‌ಬೇಯು ಮುಂದೆ ನಿಂತಿದ್ದನು. ಅವನ ಕೈ ಇನ್ನೂ ನನ್ನ ಭುಜದ ಮೇಲೆಯೇ ಇತ್ತು. ಮತ್ತೊಂದು ಕೈಯನ್ನು ನೀಡಿ ಕುರ್ಚಿಯನ್ನು ಎಳೆದುಕೊಂಡು ನನ್ನನ್ನು ಕುಳಿತುಕೊಳ್ಳಲು ಬಹಳ ಬಲವಂತ ಮಾಡಿದನು. ನನ್ನ ತಲೆಯ ಕೂದಲು ಕೆದರಿ ಮುಖದ ಮೇಲೆಲ್ಲಾ ಬಿದ್ದಿತ್ತು. ಅದನ್ನು ಅವನು ಮೆಲ್ಲನೆ ಹಿಂದಕ್ಕೆ ಮಾಡಿದನು. ಅವನ ಸ್ಪರ್ಶ ಗುಣದಿಂದ ನನ್ನ ಕಣ್ಣೀರು ತನ್ನಷ್ಟಕ್ಕೆ ತಾನೇ ಬಂದು ಬಿಟ್ಟಿತು. ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಮನಬಂದಂತೆ ಅತ್ತೆನು. ಸ್ವಲ್ಪ ಹೊತ್ತು ಅವನು ಸುಮ್ಮನಿದ್ದು ಪುನಃ ನನ್ನ ಕಡೆ ಬಗ್ಗಿ ದಯನಾಗಿ ನನ್ನ ಕೈ ತನ್ನ ಕೈಯಲ್ಲಿ ಹಿಡಿದುಕೊಂಡು ಇಂತೆಂದನು –

"ದುಃಖಿಯಾದ ಹಾಜಿರೇ, ನಿನ್ನನ್ನು ಅಳಬೇಡವೆಂದು ನಾನು ಹೇಳುವುದಿಲ್ಲ. ಏಕೆಂದರೆ ಅಳುವುದರಿಂದ ಮನಸ್ಸು ಹಗುರವಾಗುತ್ತದೆಂಬುದು ನನಗೆ ಗೊತ್ತು. ಆದರೆ ನಡಿ ಬೇರೆ ಕೊಠಡಿಗೆ ಹೋಗೋಣ. ಇನ್ನು ಐದು ನಿಮಿಷದಲ್ಲಿ ಜನರೆಲ್ಲಾ ಇಲ್ಲಿಗೆ ಬಂದು ಬಿಡುವರು."

ನಾನು ಇದರರ್ಥವನ್ನು ತಿಳಿದೆನು. ಏನೆಂದರೆ ಶವಕ್ಕೆ ಈ ಕೋಣೆಯಲ್ಲಿ ಸ್ನಾನ ಮಾಡಿಸಬೇಕೆಂಬ ಉದ್ದೇಶವಿತ್ತು. ಅಲ್ಲಲ್ಲಿ ನೋಡಲು ಬೆಂಕಿ ಆರಿಹೋಗಿತ್ತು. ಇನ್ನೂ ನೀರು ಬಿಸಿಯಾಗಿಯೂ ಇರಲಿಲ್ಲ. ಬೇಗನೆ ಸ್ವಲ್ಪ ಕಟ್ಟಿಗೆ ತಂದು ಬೆಂಕಿ ಹೊತ್ತಿಸಲು ಪ್ರಯತ್ನ ಪಟ್ಟೆನು. ಆದರೆ ಕಣ್ಣೀರಿನಿಂದ ಕಣ್ಣುಗಳು ಮುಚ್ಚಿ ಹೋಗುತ್ತಿದ್ದವು. ಇನ್ನೂ ಕಡ್ಡಿ ಗೀಚಿ ಬೆಂಕಿ ಹೊತ್ತಿಸುವಷ್ಟರಲ್ಲೇ ಮೃತದೇಹಕ್ಕಾಗಿ ಪ್ರಾರ್ಥನೆ ಮಾಡುತ್ತಿರುವ ವಿದ್ಯಾರ್ಥಿಗಳ ಧ್ವನಿಯು ಕೇಳಬಂತು. ನಾನು ಪುನಃ ಜ್ಞಾನತಪ್ಪಿದವಳಂತಾಗಿ

ಗೋಡೆಯನ್ನೊರಗಿಕೊಂಡು ನಿಂತುಬಿಟ್ಟೆನು.

ನಾಫಿಜ್‌ಬೇಯು ಒಬ್ಬ ಚಾರಿಕೆಯೊಡನೆ ಜೋರಿನಿಂದ "ಬೂಹಾವರ್, ನೀನೇ ಬೆಂಕಿಯನ್ನು ಹೊತ್ತಿಸು," ಎಂದು ಹೇಳಿ ನನ್ನ ಕಡೆ ಬಾಗಿ "ನಡಿ, ಬಾ, ನಿನ್ನನ್ನು ದುಪಡಿಯ ಮೇಲೆ ಕರೆದುಕೊಂಡು ಹೋಗಲೇ? ಆ...., ಏನು ಬರಿಯಕಾಲಿನಲ್ಲಿದ್ದೀಯಾ? ನಿಜವಾಗಿಯೂ ಬೆಳಗಿನಿಂದ ಈ ರೀತಿಯೇ ನಿಂತಿದ್ದೀಯಾ? ನಡಿ, ನಿನ್ನ ಕೊಠಡಿಯನ್ನು ತೋರಿಸು. ಇನ್ನು ಮೂರು ನಾಲ್ಕು ನಿಮಿಷಗಳೊಳಗಾಗಿ ನಾವೆಲ್ಲರೂ ಹೊರಟು ಹೋಗುತ್ತೇವೆ. ಆಮೇಲೆ ನೀನು ತಕ್ಷಣವೇ ಮನೆಗೆ ಹೊರಟು ಹೋಗಬೇಕು." ಎಂದನು.

ನಾನೇನೂ ಜವಾಬನ್ನು ಕೊಡಲಿಲ್ಲ. ಇನ್ನೊಂದು ರಾತ್ರಿಯಾದರೂ ಇಲ್ಲೇ ಇರಬೇಕೆಂಬ ಆಸೆಯಿತ್ತು. ಆದರೆ ಬಹಳ ಚಿಂತಾಗ್ರಸ್ತಳಾಗಿಯೂ ನಿಶ್ಶಕ್ತಳಾಗಿಯೂ ಇದ್ದುದರಿಂದ ಆಜ್ಞೆಯನ್ನು ನಡೆಸುವುದರ ವಿನಾ ಮಾತನಾಡಲೂ ಸಮರ್ಥಳಾಗದೆ, ಆತನೊಡನೆ ನನ್ನ ಕೋಣೆಯ ಬಾಗಿಲ ವರೆಗೆ ಹೋದೆನು. ನಾಫಿಜ್‌ಬೇಯು ಅಲ್ಲಿ ನಿಂತು ಒಬ್ಬ ಪರಿಚಾರಿಕೆಯೊಡನೆ ಮಾಹೂರ್, ಪಾಪ, ಈ ಹುಡುಗಿಗೆ ಉಡುಪನ್ನು ತೊಡಿಸು ಎಂದಪ್ಪಣೆ ಮಾಡಿ, ಮತ್ತೆ ತನ್ನ ಕೈಗಳಿಂದ ಮೆಲ್ಲನೆ ನನ್ನ ತಲೆಯನ್ನು ಸವರಿ "ಹಾಜಿರೇ, ದೇವರು ಕಾಪಾಡಲಿ, ಸಾಯಂಕಾಲ ಮನೆಯಲ್ಲಿ ನೋಡುವೆನು" ಎಂದು ಹೇಳಿ ಕೆಳಗೆ ಹೊರಟು ಹೋದನು.. ನಾನು ಮಾಹೂರ್‌ಳ ಜತೆಯಲ್ಲಿ ನನ್ನ ಕೊಠಡಿಯೊಳಗೆ ಹೋದೆನು. ಇನ್ನೂ ಪೂರ ಉಡುಪನ್ನು ಧರಿಸುವುದರಲ್ಲೇ ಗಂಡಸರ ಮಾತುಕಥೆಗಳು ಕಿವಿಗೆ ಬಿದ್ದವು. ಜನಾಜವನ್ನು ತೆಗೆದುಕೊಂಡು ಹೋಗಲು ಬಂದಿರುವರೆಂದು ತಿಳಿಯಿತು. ಆ ಕ್ಷಣವೇ ರಸ್ತೆಯಲ್ಲಿ ಜನಾಜವನ್ನು ತೆಗೆದುಕೊಂಡು ಹೋಗುವುದನ್ನು ನೋಡಲು ಪರಿಚಾರಿಕೆಯರು ನನ್ನ ಕೊಠಡಿಯೊಳಗೆ ಓಡಿಬಂದರು. ಪಾಪ ಹಮಿದಾಳ ಕೆನ್ನೆಗಳು ಅಶ್ರುವಿನಿಂದ ತೊಯಿದು ಹೋಗಿದ್ದವು. ನನ್ನ ಕೈಹಿಡಿದು ಕಿಟಕಿಯ ಬಳಿ ಕರೆದೊಯ್ದು "ಮೃತಳ ಕಡೆ ಕೊಂಚ ನೋಡು ಅವಳ ಆತ್ಮವು ಈಗ ತಾಬೂತಿನ ತಲೆಕಡೆ ಇದೆ. ಇನ್ನೊಂದು ಸಲ ಅವಳು ನಿನ್ನನ್ನು ನೋಡಿದರೆ ಅವಳ ಮನಸ್ಸಿಗೆ ಶಾಂತಿಯಾಗುವುದು," ಎಂದು ಪುನಃ ಮೆಲ್ಲನೆ "ನೋಡು ನಾಫಿಜ್ ಬೇಯು ಸಹ ಜನಾಜದ ಜತೆ ಇದ್ದಾನೆ. ಇದು ಅವನ ಕೃತಜ್ಞತೆಯೇ ಸರಿ. ಅವನ ಜತೆಯಲ್ಲಿರುವ ಹುಡುಗನೇ ನನ್ನ ಮಗ ದಾವೂದನ್ನು" ಎಂದಳು.

*ಜನಾಜ = ಶವದಮೆರವಣಿಗೆ *ತಾಬೂತ್ = ಶವದಪೆಟ್ಟಿಗೆ

ನಾನು ಕೊಂಚ ಅಲಕ್ಷ್ಯದಿಂದ ಆಕಡೆ ದೃಷ್ಟಿ ಬೀರಿದೆನು-ಏಕೆಂದರೆ ದಾವೂದನ ವಿಷಯವಾಗಿ ನನಗೆ ಮೊದಲಿದ್ದ ಆಲೋಚನೆಯು ಈಗ ಹೊರಟು ಹೋಗಿತ್ತು. ಅವನು ಕುಳ್ಳಾಗಿಯೂ ಬಲಿಷ್ಟನಾಗಿಯೂ ಇದ್ದನೆಂದು ತಿಳಿದುಕೊಳ್ಳುವಷ್ಟರಲ್ಲೇ ಜನಾಜವು ಗೋಚರವಾಯಿತು. ನಸಿರುಲ್ಲಾ ಸಾಹಾರವರು ಜನಾಜ ಮುಂತಾದ್ದಕ್ಕಾಗಿ ಎಷ್ಟು ಮಾಡಬಹುದಾಗಿತ್ತೋ ಅದಕ್ಕಿಂತಲೂ ಹೆಚ್ಚಾಗಿಯೇ ಏರ್ಪಾಡು ಮಾಡಿದ್ದರು. ಜನಾಜದ ಮೇಲೆ ಅಮೂಲ್ಯವಾದ ಹಿಂದುಸ್ಥಾನೀ ಶಾಲು ಹೊದ್ದಿಸಿತ್ತು. ನೌಕರ ಚಾಕರರು ಲೂಬಾನ್‌ದಾನ್ (ಸಾಂಬ್ರಾಣಿಯ ಪಾತ್ರೆ)ನ್ನು ಹಿಡಿದು ಮುಂದೆಮುಂದಿದ್ದರು. ಅವರಿಗಿಂತ ಮುಂದೆ ಅನೇಕ ಷೇಕರೂ, ವಿದ್ಯಾರ್ಥಿಗಳೂ ಇದ್ದರು. ಜನಾಜದ ನೋಟ ಸಾಂಬ್ರಾಣಿಯ ವಾಸನೆ, ಹುಡುಗರ ಎಳೆದಾದ ಧ್ವನಿಯೊಡನೆ ಸೇರಿಕೊಂಡಿದ್ದ ಷೇಕರ ಗಂಭೀರ ಸ್ವರ, ಇವೆಲ್ಲವೂ ನನ್ನಂಥ ದುಃಖದಿಂದ ನಿಶ್ಶಕ್ತಳಾದವಳಿಗೆ ಸಹಿಸಲಸಾಧ್ಯವಾಯಿತು. ನನ್ನ ಕಿವಿಯಲ್ಲಿ ಕೊಂಚ ಗಾಳಿಯಂತೆ ಕೇಳಿಬಂತು-ಬೇಗಬೇಗನೆ ಕಷ್ಟದಿಂದ ಉಸಿರು ಬಿಡಲು ಆರಂಭಿಸಿದೆ-ನನ್ನ ಜನ್ಮದಲ್ಲಿ ಮೊದಲನೆಯ ಬಾರಿ ಜ್ಞಾನತಪ್ಪಿ ಹಿಂದಕ್ಕೆ ಬಿದ್ದೆನು. ಜ್ಞಾನ ಬಂದು ಕಣ್ಣು ತೆರೆದಾಗ ವಹೀದಾ ಖಾನಮ್‌ಳ ಭುಜದ ಮೇಲೆ ತಲೆಯಿಟ್ಟು ಕೊಂಡವಳಾಗಿದ್ದೆನು. ಆಶ್ಚರ್ಯದಿಂದ ನಾಲ್ಕೂ ಕಡೆ ನೋಡಲು ಅವಳು ಬಹಳ ಕನಿಕರದಿಂದಕೂಡಿ ಹೀಗೆಂದಳು "ನನ್ನನ್ನು ಕರೆದುತರಿಸಿದ ನಾಫಿಜ್‌ಬೇಗಂ ಬಹಳ ಒಳ್ಳೇ ಕೆಲಸ ಮಾಡಿದಳು. ನಿಜವಾಗಿಯೂ ಹಾಜಿರೆಯು ಈ ದುಃಖವನ್ನು ಸಹಿಸಲು ಶಕ್ತಳಲ್ಲ. ಏಳಮ್ಮಾ ಚೇತರಿಸಿಕೋ ಬಹಳ ಹೊತ್ತಾಯಿತು. ಇನ್ನು ಮನೆಗೆ ಹೊರಡಬೇಕು. ತಾ, ನಿನ್ನ ಮುಖ ಪರದೆಯನ್ನು ಸರಿಮಾಡುವೆನು. ಮಾಹೂರ್ ಒಂದು ಲೋಟ ನೀರನ್ನು ಕೊಡು".

ನಾನು ಘಾಬರಿಗೊಂಡು ಅವಳ ಕಡೆ ನೋಡಲು ಅವಳ ಕಣ್ಣಿನಿಂದ, ನೀರು ಧಾರೆಧಾರೆಯಾಗಿ ಸುರಿಯುತ್ತಿತ್ತು. ಇದನ್ನು ಕಂಡು ಏಕೋ ಕಾಣೆ ನನಗೆ ಕೊಂಚ ಸಮಾಧಾನವಾಯಿತು. ಮಾತನಾಡುತ್ತಾಡುತ್ತ ಮುಖ ಪರದೆಯನ್ನು ಸರಿಮಾಡಿ, ನನ್ನನ್ನು ಎದೆಗಪ್ಪಿಕೊಂಡು ಚೆನ್ನಾಗಿ ಮುದ್ದಿಸಿದಳು. ನಾನೂ ಸುಮ್ಮನೆ ಅವಳನ್ನು ತಬ್ಬಿಕೊಂಡಿದ್ದೆನು. ಆ ಸಮಯದಲ್ಲಿ ಈ ಪ್ರಪಂಚದಲ್ಲಿ ಅವಳೊಬ್ಬಳೇ ನನ್ನ ಬಂಧುವಾಗಿದ್ದಳು ಕೊಂಚ ಹೊತ್ತಾದ ಮೇಲೆ ಅವಳು ಮೆಲ್ಲನೆ ಎದ್ದು ನನ್ನನ್ನು ಹಿಡಿದುಕೊಂಡು ಬಾಗಿಲ ಕಡೆ ಕರೆದುಕೊಂಡು ಹೋಗಿ ಬಹು ಕರುಣೆಯಿಂದ "ಹಾಜಿರೇ, ಇನ್ನು ನಾವು ಹೊರಡ

ಬೇಕು. ಹವಿಾದಳೂ ಬೂಹಾವರೆಯೂ ಇಲ್ಲಿ ಷೇಕರ ಜತೆ ಇರುವರು"
ಎಂದು ಹೇಳಿದಳು.

ಈ ಮಾತಿಗೆ, ಬದಲು ಏನ ಹೇಳಲು ನನ್ನಲ್ಲಿ ಶಕ್ತಿ ಇಲ್ಲದುದರ ಕಾರಣ ನಾನು ಅವಳ ಭುಜವನ್ನೂರಿಕೊಂಡು ಕೆಳಗಿಳಿಸ ಹೋದೆನು. ಗಾಡಿಯಲ್ಲಿ ಕುಳಿತುಕೊಳ್ಳುವಾಗ ಮನೆಯ ಕಡೆ ಮತ್ತೊಂದು ಸಲ ಆಶೆಯಿಂದ ನೋಡಿದೆನು. ಒಂದು ನಿಮಿಷ ತರುವಾಯ ಗಾಡಿಯು ಹೊರಟಿತು. ನನ್ನ ಜನ್ಮದ ಎರಡನೆಯ ಪರಿಚ್ಛೇದವನ್ನು ಮುಗಿಸಿ–ಇದುವರೆಗೆ ನಡೆದುದನ್ನೆಲ್ಲಾ ಮೊಹರು ಮಾಡಿ, ಪುನಃ ಮೊದಲಿನಿಂದ ಜೀವಮಾನ ಹಾದಿಯನ್ನು ಪ್ರಾರಂಭ ಮಾಡಿದೆನು.

ಎರಡನೆಯ ಪರಿಚ್ಛೇದ

ವಸಂತಋತು–ಸೂರ್ಯನು ಯಥಾಪ್ರಕಾರ ತನ್ನ ಕಾಂತಿಯನ್ನು ಬೀರುತ್ತಿರುವನು. ಎದುರಿಗೆ, ಪಡವಲ್ಲಿರುವ ಮನೆಗಳ ಮೇಲೆ ಅವನ ಕಿರಣಗಳು ಹೇಗೆ ಬಿದ್ದಿವೆ ಎಂದರೆ, ಅವುಗಳಲ್ಲೊಂದಾದ ಕೆಂಪು ಬಣ್ಣದ ಮನೆಯು, ಜ್ಯೋತಿಸ್ಸಿನ ಕಡಿಷಮುದ್ರಾಯದಂತೆ ಕಾಣುತ್ತಿರುವುದು. ಅರಿಗಳು ಘಟ್ಟಕ್ಕೆ ಬಂದು ಬಡಿ ಬಡಿದುಕೊಂಡು ಸುಮ್ಮನೆ ಹಿಂತಿರುಗಿ ಹೊರಟು ಹೋಗುತ್ತಿರುವುದನ್ನು ನೋಡಿದರೆ: ಅವುಗಳಲ್ಲಿಸೋನಾರಿತನವು ಹೆಚ್ಚಿ, ಕೊಂಚ ಗೊಣಗುವುದುವಿನಾ–ಅದೂ ಸಹ ಅತಿ ಸಣ್ಣ ಧ್ವನಿಯಿಂದ–ಮತ್ತೇನೂ ಅವುಗಳ ಕೈಲಿ ಹರಿಯುವುದಿಲ್ಲನೆಂಬಂತೆ ಕಾಣುವುದು. ಆದರೆ ಈ ಮಧುರ ಶಬ್ದದ ಗುಣವು ಮನಸ್ಸಿಗೆ ಹೇಗೆ ತೋರುವುದೆಂದರೆ ತಾಯಿಯು ಮಗುವನ್ನು ಅತಿ ಪ್ರೇಮದಿಂದ ತಟ್ಟಿ ತಟ್ಟಿ ಮಲಗಿಸುವಂತಿದೆ. ಆಕಾಶವು ಬಹು ಶುಭ್ರನಾಗಿದೆ. ನಾನು ನಿಂತಿರುವ ಸ್ಥಳದಿಂದ ಒಲಿಂಪಸ್ ಪರ್ವತದ ಹಿಮಗ್ರಸ್ಥವಾದ ಶಿಖರಗಳು ದೂರ ಬಿಸಿಲಿನಲ್ಲಿ ಮಿರಮಿರನೆ ಮಿರುಗುತ್ತಿವೆ–ಎದುರಿಗೆ ಸರಿಯಾಗಿರುವ ಮೇಡನ್ಸ್ ಟವರಿನ ಬಿಳಿಯ ಗೋಡೆಗಳು ಬಿಸಿಲಿನಲ್ಲಿ ಮಿಂದು, ಗುಳೂಪಿನಂತೆ ಪ್ರಕಾಶಿಸುತ್ತಿರುವುವು. ಸಮಿಾಪದಲ್ಲಿರುವ ಒಂದು ಜಹಜಿನಿಂದ ಮಧ್ಯಾಹ್ನದ ಘಂಟೆಯು ಸ್ಪಷ್ಟವಾಗಿ ಕೇಳಿ ಬರುತ್ತಿದೆ. ಅದರಲ್ಲಿ ಜನರು ಕುಳಿತು, ಶೀಘ್ರಾತಿಶೀಘ್ರವಾಗಿ ಬರುತ್ತಿರುವರು. ನಾನು ಕೆಲಸವಿಲ್ಲದಿರುವುದರಿಂದ ಸುಮ್ಮನೆ ಕುಳಿತು. ಅವರ ಹೋಗಿ ಬರುವಿಕೆಯನ್ನು ನೋಡಿಕೊಂಡಿರುವೆನು.

ಎರಡನೆಯ ದಿನ ಸಹ ಹೀಗೆಯೇ ಇರುವುದರಿಂದ, ಶರೀರದಲ್ಲಿ ಸುಸ್ಥಿ ಸೋಮಾರಿತನವು ತಾನಾಗಿಯೇ ಉಂಟಾಗುವುದು. ನನ್ನ ಅಜ್ಜಿಯು ಸತ್ತು ಬಹುಕಾಲವಾಗಿ ಹೋಯಿತು. ಆದರೆ ಅವಳನ್ನು ಪೂರಾ ಮರೆಯುವಷ್ಟು ದಿನಗಳಿನ್ನೂ ಆಗಿಲ್ಲವಾದರೂ ಈ ನನ್ನ ಹೊಸ ಜೀವನಮಾನದಲ್ಲಿ ಪಳಗಿ ಹೋಗುವಷ್ಟು ಕಾಲವೇನೋ ಆಗಿಹೋಗಿದೆ. ನಸಿರುಲ್ಲಾ ಪಾಷಾರವರ ಮನೆಯಲ್ಲಿ ಪ್ರತಿಯೊಬ್ಬರೂ ನನ್ನನ್ನು ಕರುಣೆಯಿಂದ ಕಾಣುತ್ತಿರುವರು. ಖಾನಮ್ ಅಫಂದಿಯವರು ನನ್ನನ್ನು ತನ್ನ ಮಗಳನ್ನು ಕಂಡಂತೆ ಕಾಣುವರು. ನಸಿರುಲ್ಲಾ ಪಾಷಾರವರು ಕೂಡ ನನ್ನೊಡನೆ ಬಹಳ ಸಂತೋಷ ಚಿತ್ತರಾಗಿರುವರು. ಅವರ ಹೆಣ್ಣು ಮಕ್ಕಳು ನನ್ನನ್ನು ಬಹು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಗಂಡು ಮಕ್ಕಳಲ್ಲಿ ಅಥಮ್‌ಜೀಯವರು ಬಹಳ ಮಾತನಾಡದಿದ್ದರೂ, ಆಡಿದಾಗ ಅತಿ ಕರುಣೆಯಿಂದಲೂ ನಯದಿಂದಲೂ ಆಡುವರು. ಮನೆಯಲ್ಲಿ ಎಲ್ಲರಿಗಿಂತಲೂ ಹೆಚ್ಚಾಗಿ ನಾಫಿಜ್‌ಬೇಯು ನನ್ನಲ್ಲಿ ಇಷ್ಟಪಟ್ಟವನಾಗಿದ್ದಾನೆ. ನನ್ನ ಅಜ್ಜಿಯು ಸತ್ತದಿನ ಆತನು ನನ್ನನ್ನು ಎಷ್ಟು ಪ್ರೀತಿಯಿಂದ ಕಂಡನೋ ಅದೇ ವರ್ತನೆಯು ಇದುವರೆವಿಗೂ ಅವನಲ್ಲಿದೆ.

ನಾನು ಸುಮ್ಮನೆ ಕುಳಿತು, ಈ ಆಲೋಚನೆಗಳನ್ನು ಮಾಡಿಕೊಳ್ಳುತ್ತಿದ್ದಾಗ ಏಕಾಏಕಿ ನನ್ನ ಕಿವಿಗೆ ಈ ಶಬ್ದವು ಬಿತ್ತು–"ಹಾಜಿರೇ, ಅಮ್ಮನವರು ಹೇಳುತ್ತಾರೆ–ನೀನು ಕೆಲಸದವರಿಗೆ ಬಟ್ಟೆಗಳನ್ನು ಇಸ್ತ್ರಿ ಮಾಡುವುದರಲ್ಲಿ ಸಹಾಯ ಮಾಡಬೇಕಂತೆ. ಏಕೆಂದರೆ ಇವತ್ತು ಅವರಿಗೆ ಬಹಳ ಕೆಲಸವಿರುವುದರಿಂದ ಆ ಕಾರ್ಯವನ್ನು ಅವರು ಈ ದಿನ ಪೂರೈಸಲಾರರು."

ನಾನು ತಕ್ಷಣವೇ ಎದ್ದು ನಿಂತು ಚಾಕರಿಯವರು ಇಸ್ತ್ರಿ ಮಾಡುತ್ತಿದ್ದ ಕೋಣೆಯ ಕಡೆ ಹೊರಟೆನು. ಬಾಗಿಲ ಬಳಿ ಹೋಗಲು ಯಾರೋ ಒಬ್ಬರ ಕಿಲಕಿಲಾ ಎಂದು ನಗುವ ಶಬ್ದವು ಕೇಳಿ ಬಂದು ನನ್ನ ಕೆನ್ನೆಗಳು ಸ್ವತಯೇವ ಕೆಂಪಾಗಿ ಹೋದವು. ಈಚೆಗೆ ಕೆಲದಿನಗಳಿಂದ ನನಗೆ ಈ ನಗುವನ್ನು ಕೇಳಿದಾಗೆಲ್ಲ ಲಜ್ಜೆಯುಂಟಾಗುತ್ತಿತ್ತು. ಎಷ್ಟೇ ನನ್ನನ್ನು ನಾನು ಸಮಾಧಾನ ಮಾಡಿಕೊಂಡರೂ ಈ ದುರಭ್ಯಾಸವು ಏನಾದರೂ ಹೋಗುತ್ತಿರಲಿಲ್ಲ. ಕೊಠಡಿಯೊಳಗೆ ಹೋಗಿ ನೋಡಲು ನಾಫಿಜ್‌ಬೇಯು ಕಿಟಕಿಯ ಚೌಕಟ್ಟಿನ ಮೇಲೆ ಕುಳಿತು ದಾಸಿಯೊಡನೆ ಹಾಸ್ಯವಾಡುತ್ತಿದ್ದನು. ನನ್ನನ್ನು ಕಂಡು ಎದ್ದು, ನಗುತ್ತಾ ನನ್ನ ಕಡೆ ಬಂದು–

"ಇದೇನು ನೀನಿಲ್ಲಿ! ಈಗ ತಾನೆ ಐದು ನಿಮಿಷಗಳ ಕೆಳಗೆ ನಾನು

ಬೈಠಕ್ ಖಾನೆಗೆ ಹೋಗಿದ್ದಾಗ, ಅಲ್ಲಿ ನೀನು ಬಹಳ ಆರಾಮದಿಂದ ಕು
ತಿರುವುದನ್ನು ಕಂಡು, ನಿನಗೆ ತೊಂದರೆ ಕೊಡಲು ಅಪೇಕ್ಷಿಸದೆ ಇಲ್ಲಿಗೆ
ಹೊರಟು ಬಂದೆನು. ಏನು, ನಿನಗೂ ಇಸ್ತ್ರಿ ಮಾಡುವ ಇರಾದೆಯುಂಟೋ
(ಇಸ್ತ್ರಿಯನ್ನು ನನ್ನ ಕೈಯಿಂದ ತೆಗೆದುಕೊಂಡು ಬಿಟ್ಟು) ಇಲ್ಲ, ಈ
ಕೆಲಸವು ನಿನಗೆ ಯೋಗ್ಯವಾದುದಲ್ಲ. ಬೆಳಿಗ್ಗೆ ತಲೆ ನೋಯುತ್ತಿರುವುದೆಂದು
ಹೇಳಿದ್ದು ನಿನಗೆ ಜ್ಞಾಪಕವಿಲ್ಲವೇ ?" ಎಂದನು.

ನಾನು—ನಿಮ್ಮ ದಯೆ. ಆದರೆ ಈಗ ನಾನು ಸ್ವಸ್ಥವಾಗಿದ್ದೇನೆ. ತಲೆ
ನೋವು ಸಹ ಬಹಳ ಕಡಿಮೆಯೇ ಇತ್ತು.

ನಾಫಿಜ್ ಬೇ—ಎಲ್ಲಾ ಸರಿ, ಆದರೆ ಬೆಂಕಿಯ ಹತ್ತಿರ ಇದ್ದರೆ ಮೈಗೆ ಒಳ್ಳೆ
ಯದಲ್ಲ ನಡಿ, ಉದ್ಯಾನವನಕ್ಕೆ ಹೋಗೋಣ. ಅಲ್ಲಿ ಎಷ್ಟು ರಮ್ಯವಾದ ಗಾ
ಬೀಸುತ್ತಿದೆ.

ನಾನು—ಅಪ್ಪ, ನಾನು ಬರಲಶಕ್ತಳು. ನನ್ನನ್ನು ಕ್ಷಮಿಸಬೇಕು.
ಖಾನಮ್ ಅಫಂಧಿಯವರು ನನ್ನನ್ನು ಇಲ್ಲಿ ಕಳುಹಿಸಿರುವರು. ಅವರ
ಆಜ್ಞಾಪಾಲನೆಯು ಅವಶ್ಯಕವು.

ಇದನ್ನು ಕೇಳಿ, ಆವನು ಇಸ್ತ್ರಿಯನ್ನು ಹಿಂದಕ್ಕೆ ಕೊಟ್ಟು ಬಿಟ್ಟು
ಕಿಟಕಿಯ ಬಳಿ ಹೋಗಿ ಮೆಲ್ಲನೆ ಸಿಳ್ಳೆಯನ್ನು ಹಾಕಲಾರಂಭಿಸಿದನು ನಾನು
ಒಂದು ಬಾರಿ ಕಣ್ಣೆತ್ತಿ ನೋಡಲು ಅವನ ದೃಷ್ಟಿಯು ನನ್ನ ಮೇಲೆ ನೆಟ್ಟು
ಬಿಟ್ಟಿರುವುದನ್ನು ಕಂಡು ನನ್ನ ಮುಖವು ಅತಿ ಕೆಂಪಾಗಿ ಹೋಯಿತು
ಇದನ್ನು ಮರೆಮಾಚಲು, ಇಸ್ತ್ರಿ ಮಾಡುವ ಬಟ್ಟೆಗಳನ್ನಿಟ್ಟಿದ್ದ ಕುಕ್ಕೆಯ
ಮೇಲೆ ತುಂಬಾ ಬಾಗಿಕೊಂಡು ನಿಂತೆನು. ಆಗ ಯಾರೋ ಬಹಳ ಕೋ
ದಿಂದ ಹೀಗೆ ಕೂಗಿ ಹೇಳಿದರು.

"ಈ ಇಸ್ತ್ರಿಗಳಿಂದ ಜೀವಕ್ಕೆ ಕೇಡುಗಾಲ ಬಂತು. ಎಂದಿಗೂ ಬಿಸಿ
ಯಾಗುವುದಿಲ್ಲ. ನನ್ನಿಂದ ಇದರಲ್ಲಿ ಕೆಲಸ ಮಾಡಲಾಗುವುದಿಲ್ಲ." ತಕ್ಷಣವೇ
ಒಂದು ಇಸ್ತ್ರಿಯು ಜೋರಿನಿಂದ ನನ್ನ ಕಡೆ ಎಸೆಯಲ್ಪಟ್ಟು ನನ್ನ ತಲೆ
ಉಳಿದುದೇ ಕಷ್ಟವಾಯಿತು.

ನಾನು, ಧ್ವನಿಯಿಂದ ಬೂಹವರ್ ಎಂದು ತಿಳಿದುಕೊಂಡೆನು. ಅವಳು
ಬೆಂಕಿಯ ಹತ್ತಿರ ನಿಂತುಕೊಂಡಿದ್ದಳು. ಕಣ್ಣುಗಳು ಬಹಳ ರೋಷದಿಂದ
ವಾಗಿ ಕೇವಲ ಇಸ್ತ್ರಿ ತಣ್ಣಗಾದುದರಿಂದ ಅವಳ ಈ ಸ್ಥಿತಿಯುಂಟಾಯಿ
ತೆಂದು ಹೇಳಲಾಗುತ್ತಿರಲಿಲ್ಲ.

ನಾಫಿಜ್—(ಬೇಗನೆದ್ದು ಕಿಡುಕಿನಿಂದ) ಬೂಹಾವರ್, ಇದರರ್ಥವೇನು

ಏನು ಹುಚ್ಚು ಹಿಡಿಯಿತೇ ?

ಬೂಹಾವರ್‌ಳು ಹುಬ್ಬು ಗಂಟಿಕ್ಕಿಕೊಂಡು, ಕಣ್ಣು ತಿಕ್ಕುತ್ತಾ ಜವಾಬು ಕೊಡದೆಯೇ ಕಿಟಕಿಯ ಕಡೆ ತಿರುಗಿಕೊಂಡು ಬಿಟ್ಟಳು. ಅವಳ ಕೋಪವನ್ನು ನೋಡಿ ನಾನು ಆಶ್ಚರ್ಯಭರಿತಳಾದೆನು. ನೌಕರಚಾಕರರು ಅರ್ಥಗರ್ಭಿತವಾದ ದೃಷ್ಟಿಯಿಂದ, ಒಬ್ಬರನ್ನೊಬ್ಬರು ನೋಡುತ್ತಿರುವುದನ್ನೂ ಕಂಡೆನು.

ನಾಫಿಜ್‌ಬೇಯು ಏನು ಮಾಡಲೂ ತೋರದವನಂತಿದ್ದನು. ಮೊದಲು ಬೂಹಾವರಳ ಕಡೆ ಹೊರಟು, ನಿಂತುಬಿಟ್ಟು, ನನ್ನ ಹತ್ತಿರ ಬಂದು ಬಹಳ ಮೃದುತೆಯಿಂದ, "ತಗಲಲಿಲ್ಲ ತಾನೆ ? ನಿಜವಾಗಿಯೂ ನಿನಗೆ ತಗಲಲಿಲ್ಲವೆ !" ಎಂದನು.

ನಾನು—(ನಕ್ಕು) ಇಲ್ಲ ಸ್ವಾಮಿ ನಿಜವಾಗಿಯೂ ತಗಲಲಿಲ್ಲ. ತಗಲಿತೋ ಇಲ್ಲವೋ ಎಂಬುದನ್ನು ನನ್ನ ವಿನಾ ಮತ್ತಾರೂ ಸರಿಯಾಗಿ ಹೇಳಲಾರರೆಂಬುದನ್ನು ನೀವು ಸಹ ಒಪ್ಪಿಕೊಳ್ಳುವಿರಿ.

ನಾಫಿಜ್—ಹಾಗನ್ನಬೇಡ. ಬೂಹಾವರಳನ್ನು ರಕ್ಷಿಸಲು ಒಂದು ವೇಳೆ ನೀವು ನಿಜವನ್ನಾಡದಿರಬಹುದೆಂದು ಯೋಚಿಸಿದೆನು.

ನಾನು—ಬೇರೆ ಫಲವೇ-ಆದೇತಕ್ಕೆ ? ಬೂಹಾವರ್‌ಳು ಬೇಕೆಂದು ಹೀಗೇನೂ ಮಾಡಲಿಲ್ಲ.

ನಾಫಿಜ್‌ಬೇಯು ಜವಾಬೇನನ್ನೂ ಕೊಡಲಿಲ್ಲ. ಮೇಜಿನ ತುದಿಯ ಮೇಲೆ ಕುಳಿತುಕೊಂಡು, ಕೊಂಚ ಹೊತ್ತಾದ ಮೇಲೆ,

"ನನಗೆ ದೊಡ್ಡ ಕೆಲಸವಾದುದಕ್ಕೆ ನೀನು ಸಂತೋಷವನ್ನೇ ಸೂಚಿಸಲಿಲ್ಲ. ಸೈನ್ಯದಲ್ಲಿ ಒಂದು ಕೆಲಸಕ್ಕೆ ನೇಮಿಸಲ್ಪಟ್ಟಿರುವೆನು" ಎಂದನು.

ನಾನು—(ಬಹಳ ಸಂತೋಷದಿಂದ) ನಿಜವಾಗಿಯೂ ! ಖಾನಂಅಫಂದಿಯವರು ಎಷ್ಟು ಸಂತೋಷಪಟ್ಟಾರು ! ಅವರ ಮನೋರಥವಿದೇ ಆಗಿತ್ತು.

ಷಾಯಿಸ್ತ—(ನನ್ನೊಡನೆ ಇದೇ ಮೇಜಿನ ಮೇಲೆ ಕೆಲಸ ಮಾಡುತ್ತಿದ್ದ ಒಬ್ಬ ಶ್ಯಾಮವರ್ಣದ, ಹಸನ್ಮುಖಿಯಾದ ಚಾರಿಕೆ) ನಮ್ಮೆಲ್ಲರಿಗೂ ಸಹ ಇದೇ ಇಚ್ಛೆಯಿತ್ತು. ಬೇಲಿಅಫಂದಿ, ಇನ್ನು ಮೇಲೆ ನೀವು ಇಲ್ಲಿಯೇ ಇರುತ್ತೀರಷ್ಟೆ ?

ನಾಫಿಜ್—(ಸಿಗರೆಟ್ ಹಚ್ಚಿಕೊಂಡು) ಯಾವ ಮನುಷ್ಯನ ತಂದೆಗೆ ಅಧಿಕಾರವಿದೆಯೋ ಅವನಿಗೆ ಇಂಥಾ ಲಾಭವು ದೊರೆತೇ ದೊರೆಯುವುದು. ಯಾವ ಪ್ರಯತ್ನ ಮಾಡಿದರೂ ಒಳ್ಳೆಯದೇ ಆಗುವುದು. ಹಾಗು, ಮತ್ಯಾವನು

ವರ್ಷಾಂತರಗಳಿಂದ ಈ ಸ್ಥಾನಕ್ಕಾಗಿ ನಿರೀಕ್ಷಿಸಿಕೊಂಡಿದ್ದನೋ, ಇದಕ್ಕಾಗಿ ಎಷ್ಟು ದಿನಗಳಿಂದ ಹೆಣಗಾಡುತ್ತಿದ್ದನೋ! ಅವನ ಕಷ್ಟದ ಫಲವೇನಾಯಿತೆಂದರೆ, ಇಗೋ, ಈಗ ನೀನು ಕೇಳಿದ ವಿಷಯವೇ ನನ್ನಂಥವ ನಾಲಾಯಕ್ಕಾದ ಮನುಷ್ಯನಿಗೆ ಈ ಕೆಲಸ ಸಿಕ್ಕಿಹೋಯಿತು.

ನಾನು ಕೊಂಚ ಲಜ್ಜಿತದೃಷ್ಟಿಯಿಂದ ಅವನ ಕಡೆ ನೋಡಿದೆನು. ನನ್ನ ಮನಸ್ಸಿನಲ್ಲಾದರೋ, ಸೈನ್ಯದಲ್ಲೆಲ್ಲಾ ಅತ್ಯುನ್ನತ ಸ್ಥಾನಕ್ಕೆ, ಸುಂದರನೂ ಸುಗುಣನೂ ಆದ ಈ ಯುವಕನಿಗಿಂತ ಮತ್ತಾರು ಯೋಗ್ಯರಿರಲಿಲ್ಲ. ಆಕಸ್ಮಾತ್ ನಾಫಿಜ್‌ಬೇಯೂ ನನ್ನ ಕಡೆ ನೋಡಿದನು. ನಮ್ಮಿಬ್ಬರ ಕಣ್ಣುಗಳೂ ಐಕ್ಯವಾದವು. ನಾನು ನೋಡಿದುದರ ಅರ್ಥವನ್ನು ಅವನು ಬೇರೆಯಾಗಿ ಎಣಿಸಿ ಹೀಗೆಂದನು–

"ನಾನು ಹೇಳಿದ ಮಾತನ್ನು ನೀನು ಒಪ್ಪಿದೆಯೆಂದು ಕಾಣುತ್ತದೆ. ನಾನು ಬಹಳ ಸೋಮಾರಿಯೂ, ಕೆಲಸಕ್ಕೆಬಾರದ ಮನುಷ್ಯನೂ ಎಂಬುದರಲ್ಲಿ ಅಡ್ಡಿಯಿಲ್ಲ. ಆದರೆ ಅದೃಷ್ಟವಶದಿಂದ ಒಳ್ಳೇ ಪದಾರ್ಥ ಕೈಸೇರಿದರೆ ನಾನದಕ್ಕೆ ಯೋಗ್ಯವಲ್ಲವೆಂದು ಬೇಡವೆನ್ನುವುದು ಮೂರ್ಖತನವೇ ಸರಿ."

ತಕ್ಷಣವೇ ನಾನು ಈ ಅಭಿಪ್ರಾಯವನ್ನು ದೂರಮಾಡಲು ಯತ್ನಿಸಿ ಘಾಬರಿಯಿಂದ "ಇದೆಂದಿಗೂ ನನ್ನರ್ಥವಲ್ಲ" ಎಂದು ಬಿಟ್ಟು, ಮತ್ತೆ ಕೊಂಚ ಹೆದರಿ ಸುಮ್ಮನಾಗಿ ಹೋದೆನು–ಏಕೆಂದರೆ, ನನ್ನ ಮನಸ್ಸಿನಲ್ಲಿದ್ದುದಕ್ಕೆ ಪ್ರತಿಯಾಗಿ ಅವನು ಯೋಚಿಸಿದನೆಂದು ಅವನಿಗೆ ತಿಳಿಯಹೇಳಲು ನನಗೆ ಶಕ್ತಿಯಿರಲಿಲ್ಲ.

ನಾಫಿಜ್‌ಜೇ—(ನನ್ನನ್ನು ಕೀಟಲೆ ಮಾಡಲು, ಹಾಸ್ಯದಿಂದ) ಒಳ್ಳೇದು. ಹಾಗಾದರೆ ನಿನ್ನ ಅರ್ಥವೇನು! ನೀನು ನನ್ನನ್ನು ನೋಡಿದ ರೀತಿಯಿಂದ ನನ್ನ ವಿಷಯವಾಗಿ ನಾನು ಹೇಳಿದ ಮಾತನ್ನು ನೀನು ಪೂರಾ ಒಪ್ಪಿದೆಯೆಂದು ತಿಳಿದೆನು. ಈಗ ನೀನೇ ತಿಳಿಸು–ಆ ಸಮಯದಲ್ಲಿ ನೀನು ಏನು ಯೋಚಿಸುತ್ತಿದ್ದೆ?

ಖಿನ್‌ಜಾ—(ಅಫಮ್ ಪಾಷಾರವರ ಸೇವಕಿ, ನನ್ನ ಪರಮ ಸ್ನೇಹಿತೆ) ಯೋಚಿಸುತ್ತಾಳೇನಪ್ಪ? ಬೇಅಫಂದೆ, ಪಾಪ ಇವಳನ್ನೇಕೆ ತಾವು ಇಷ್ಟು ಕೀಟಲೆ ಮಾಡುವಿರಿ? ಈಗ ತಾವು ಇಲ್ಲಿಂದ ದಯಮಾಡಿಸಿದರೆ ಒಳ್ಳೇದು–ಯಾಕೆಂದರೆ ತಾವಿಲ್ಲಿರುವವರೆಗೂ ಕೊಂಚವೂ ಕೆಲಸ ನಡೆಯುವುದಿಲ್ಲ.

ನಾಫಿಜ್—ಹುಡುಗಿಯನ್ನು ನೋಡು–ನಾನು ನಿನ್ನನ್ನೇನೂ ಕಾಡಿಸುತ್ತಿಲ್ಲವಲ್ಲಾ. ನಿನ್ನ ಕೆಲಸವನ್ನು ನೀನು ನೋಡಿಕೊ. ಏನು, ಕೆಲಸವೂ ಮಾತೂ ಒಟ್ಟಿಗೆ

ಆಗುವುದಿಲ್ಲವೆ? ಕೆಲಸವನ್ನೂ ಮಾಡು, ಮಾತನ್ನೂ ಆಡು.

ಖನ್‌ಜೆ ಮುಖವನ್ನು ಆ ಕಡೆ ತಿರುಗಿಸಿಕೊಂಡು ಬಿಟ್ಟಳು. ನಾಫಿಜ್‌ಬೇಯು ನನ್ನ ಕಡೆ ಬಾಗಿಕೊಂಡು ಅತಿ ದೀನ ಧ್ವನಿಯಿಂದ "ಹಾಜಿರೇ. ನಿಜವನ್ನು ಹೇಳು. ನೀನು ನನ್ನನ್ನು ಎಂಥಹವನೆಂದು ಭಾವಿಸಿದ್ದಿ?" ಎಂದು ಪ್ರಶ್ನಿಸಿದನು. ಅವನ ಈ ಧ್ವನಿಯನ್ನು ಕೇಳಿ ನನ್ನ ಹೃದಯವು ನಿರ್ನಿಮಿತ್ತವಾಗಿ ತಲ್ಲಣಿಸಲಾರಂಭಿಸಿತು.

ನಾನಿನ್ನೂ ಜವಾಬು ಕೊಡುವುದಕ್ಕೆ ಮೊದಲೇ ಯಾರದೋ ವಸ್ತ್ರವು ನನ್ನ ಉಡುಗೆಗೆ ಸೋಕಿದಂತಾಯಿತು. ಹಿಂತಿರುಗಿ ನೋಡಲು, ಬೂಹಾವರ್‌ಳು ಕೊಠಡಿಯಿಂದ ಹೊರಗೆ ಹೊರಟು ಹೋಗುತ್ತಿದ್ದಳು. ನನ್ನನ್ನು ಬಹು ಕ್ರೋಧದಿಂದ ದುರದುರನೆ ನೋಡಿ, ಬಾಗಿಲನ್ನು ರಪ್ಪನೆ ಹಾಕಿಕೊಂಡು ಮಾಯವಾದಳು. ಸ್ವಲ್ಪ ಹೊತ್ತು ನಾನು ಇಸ್ತರಿಯಿಂದ ಕೈ ತೆಗೆದು ನಿಂತುಬಿಟ್ಟೆನು. ಬೂಹಾವರ್‌ಳ ಕಪ್ಪು ಕಣ್ಣುಗಳಿಂದ ಕ್ರೋಧವು ಹೊರಸೂಸುತ್ತಿತ್ತು. ಅಯ್ಯೋ ದೇವರೆ, ಇವಳೇತಕ್ಕೆ ನನ್ನೊಡನೆ ಇಷ್ಟು ಕೋಪ ಗೊಂಡಳೆಂಬಾಲೋಚನೆಯಲ್ಲಿ ಮುಳುಗಿದೆನು. ಇವಳು ನನ್ನ ಅಜ್ಜಿಯು ಎಂದರಿಗೆ ನನ್ನನ್ನು ಬಹಳ ಪ್ರೀತಿಸುತ್ತಿದ್ದಳು.

ನಾನು ಹೀಗೆ ಯೋಚಿಸುತ್ತಿರುವಾಗ ನಾಫಿಜ್‌ಬೇಯು ನನ್ನ ಭುಜದ ಮೇಲೆ ಕೈಯಿಟ್ಟು, ಕೊಂಚ ನಾಚಿಕೆಗೊಳ್ಳುತ್ತಾ,(ಏಕೆಂದರೆ ಅವನ ಕೆನ್ನೆಗಳು ಕೆಂಪೇರುತ್ತಿದ್ದವು) ಹೀಗೆಂದು ಕೇಳಿದನು "ಏನ ಯೋಚಿಸುತ್ತಿರುವೆ ಹೇಳು. ಬೂಹಾವರ್‌ಳು ಯಾವಾಗ್ಲೂ ದುಸ್ವಭಾವದವಳು. ಅವಳಿಗೆ ಆಗಾಗ್ಗೆ ಕೋಪಜ್ವರವು ಬರುತ್ತಿರುವುದು. ಇಂದು ಅದರ ಬಾರಿಯಾಗಿದೆ. ನಮಗಿದು ಅಭ್ಯಾಸವಾಗಿ ಹೋಗಿರುವುದು. ಆದರೆ ಈ ಸಂಗತಿಯನ್ನರಿಯದ ಇತರರಿಗೆ, ಇದು ಅತಿಶಯವಾಗಿ ಕಾಣುವುದು. ಅದರಲ್ಲೂ ಹೇರಗೆ.ನೂ ಈ ರೋಗದ ಕಾರಣವು ಕಾಣದಿರುವುದರಿಂದ, ಇನ್ನೂ ಅಧಿಕವಾಗಿಯೇ ತೋರುವುದು. ಆದರೆ ನಮ್ಮ ತಂದೆಯ ಆಣೆಯಾಗಿಯೂ, ತನ್ನ ಕೋಪವನ್ನು ನಿನ್ನ ಮೇಲೆ ತೀರಿಸಿಕೊಳ್ಳಲು ಅವಳಿಗೆ ಧೈರ್ಯವಿಲ್ಲ"

ಈ ಮಾತನ್ನು ಕೇಳುವುದಕ್ಕೆ ಮೊದಲೇ ನಾಫಿಜ್‌ಬೇಗೆ ಬೂಹಾವರ್‌ಳ ಕೋಪದ ಕಾರಣವು ಗೊತ್ತಿದೆಯೆಂದು ನಾನು ತಿಳಿದುಕೊಂಡು ಬಿಟ್ಟೆನು. ಆದರೆ ಈ ಆಲೋಚನೆಗೆ ಮನಸ್ಸಿನಲ್ಲಿ ಜಾಗಕೊಡಲಿಲ್ಲ. ನಾಫಿಜ್‌ಬೇಗೆ ಏನೂ ಗೊತ್ತಿರಲಾರದೆಂದೇ ಮನಸ್ಸಿಗೆ ತಿಳಿಯ ಹೇಳುತ್ತಿದ್ದು, ಅವನ ಕಡೆ ತಿರುಗಿ, ಹೀಗೆಂದು ಕೇಳಿದೆನು.

"ಅವಳು ನನ್ನೊಡನೆ ಕೋಪಗೊಳ್ಳಲು ಕಾರಣ ತಾನೆ ಏನಿರುವುದು. ನನಗೆ ತಿಳಿದಮಟ್ಟಿಗೆ ಅವಳಿಗೆ ನಾನೇನು ಅನ್ಯಾಯ ಮಾಡಿಲ್ಲ"

ನಾಫಿಜ್‌ಬೇ—ನಿಜವನ್ನು ಹೇಳುತ್ತಿದ್ದಿ. ([illegible] ಗಡಿಯಾರವನ್ನು ತೆಗೆದು ನೋಡಿ) ಓಹೋ, ಒಂದು ಹೊಡೆದು ಹೋಯಿತು. ಇನ್ನು ನಾನು ಹೊರಡಬೇಕು. ಹುಡುಗಿಯರೇ, ನಿಮ್ಮ ಕೆಲಸವನ್ನು ಮಾಡಿಕೊಳ್ಳಿ. ಇನ್ನು ನಿಮ್ಮನ್ನು ಹೆಚ್ಚು ಸತಾಯಿಸುವುದಿಲ್ಲ.

ಇನ್ನು ಬಾಗಿಲು ಸರಿಯಾಗಿ ಮುಚ್ಚಿಕೊಳ್ಳುವುದಕ್ಕೆ ಮೊದಲೇ ಎಲ್ಲರೂ ಕಹಕಹ ಎಂದು ನಗಲಾರಂಭಿಸಿದರು. ಒಬ್ಬಳಂತೂ ಎಷ್ಟು ನಕ್ಕಳೆಂದರೆ ಇಂದು ನಕ್ಕು ಮುಂದೆ ಎಂದಿಗೂ ನಗಲಾರದಂತೆ. ಇದನ್ನು ನೋಡಿ ನನಗೆ ಮತ್ತಷ್ಟು ಹೆಚ್ಚು ಆಶ್ಚರ್ಯವುಂಟಾಯಿತು.

ಮಾಹೂರ್—(ನಸಿರುಲ್ಲಾ ಪಾಷಾರವರ ಬಳಿ ಇಪ್ಪತ್ತು ವರ್ಷಗಳಿಗಿಂತ ಹೆಚ್ಚಾಗಿ ಕೆಲಸಮಾಡಿಕೊಂಡಿದ್ದ ಒಬ್ಬ ಪ್ರೌಢ ಹೆಂಗಸು) ಪಾಪ ಬೂಹಾವರ್ ನಿಜವನ್ನು ಹೇಳುವುದಾದರೆ ನನಗೆ ಅವಳ ಮೇಲೆ ಕನಿಕರವುಂಟಾಗುತ್ತದೆ.

ಖುಸ್‌ಜಾ—(ಕೊಂಚ ವ್ಯಸನದಿಂದ) ಬೂಹಾವರ್‌ಳ ಕೈಯಿಂದ, ಪಾಪ, ಈ ಹುಡುಗಿಗೆ ಏನಾದರೂ ಕೆಡುಕಾಗಬಹುದೆಂದು ನನಗೆ ಭಯವುಂಟಾಗುತ್ತದೆ.

ಮರಿಯಮ್—(ವಹೀದಾಖಾನಮ್‌ರ ಪ್ರೇಮದ ಬಾಂದಿ. ಆಶ್ಚರ್ಯದಿಂದ) ಯಾವ ಹುಡುಗಿಗೆ? (ಆಮೇಲೆ ನನ್ನ ಕಡೆ ಕೊಂಚ ತುಚ್ಛವಾದ ದೃಷ್ಟಿಯಿಂದ ನೋಡಿ) ಎಂದಿಗೂ ಇಲ್ಲ. ತಪ್ಪಾಯಿತು ಎನ್ನು. ಇಂಥಾ ಪೆದ್ದುತನವೂ ಉಂಟೆ? ಹಾಜಿರಾಯಿಂದ ಅವಳಿಗೆ ಯಾವ ವಿಷಯಕ್ಕೆ ಭಯ?

ಬನ್‌ದಜರ್—(ಬಹಳ ಚೆನ್ನಾಗಿ ಹಾಡುವಳು. ಇವಳ ಸುಶ್ರಾವ್ಯ ಕಂಠದ ಕಾರಣ ಒಂದುಸಲ ವಹೀದಾಖಾನಮ್‌ಳಿಗೂ ಅವಳ ಪತಿಗೂ ಕೊಂಚ ಮನಸ್ತಾಪ ಉಂಟಾಗಿ ನಿಂತು ಹೋಗಿತ್ತು) ನನಗಾದರೋ ನಾಫಿಜ್‌ಬೇಯು ತಪ್ಪಿತಸ್ಥನೆಂದು ಕಾಣುತ್ತದೆ. ಇಷ್ಟು ದಿವಸವೂ ಬೂಹಾವರ್‌ಗೆ ಆಶೆ ತೋರಿಸಿದ ಮೇಲೆ ಅವಳನ್ನು ಮದುವೆ ಮಾಡಿಕೊಳ್ಳುವುದು ನ್ಯಾಯವಾಗಿದೆ.

ಮರಿಯಮ್—ಯಾವ ವಿಷಯಕ್ಕೆ ಆಶೆ? ಯಾವಾಗಲೋ ಒಂದು ಸಲ ನಾಫಿಜ್‌ಬೇಯು, ತನಗೆ ತುರ್ಕಿ ಹುಡುಗಿಗಿಂತ ಸರ್ಕೇಷಿಯಾ ಹುಡುಗಿ ಚೆನ್ನಾಗಿ ಇರುವಳೆಂದು ಹೇಳಿದ್ದುದರಿಂದ, ಬೂಹಾವರ್‌ಳು ಪರೀಕ್ಷೆಗಾಗಿ ಕೊಳ್ಳಲ್ಪಟ್ಟಿದ್ದಳು. ಬೂಹಾವರ್‌ಳ ವಿಷಯವಾಗಿ ಅವನು "ಅವಳೇನೋ ಸುಂದರಳು. ಆದರೆ ನಾನು ಅನಾಟೋಲಿಯದಿಂದ ಬರುವವರೆಗೆ ಅವಳ

ವಿಷಯವೇನನ್ನೂ ಇತ್ಯರ್ಥ ಮಾಡಲಾರೆನು" ಎಂದು ಹೇಳಿದ್ದನು. ಈಗ ಅವನು ಹಿಂತಿರುಗಿ ಬಂದಿದ್ದಾನೆ. ಆದರೆ ಅವನಿಗೆ ಬೂಹಾವರ್‌ಳು ಇಷ್ಟ ವಿಲ್ಲ-ಎಂದರೆ,ಬೂಹಾವರ್‌ಳು ಪರೀಕ್ಷೆಯಲ್ಲಿ ಉತ್ತೀರ್ಣಳಾಗಲಿಲ್ಲವೆಂದರ್ಥ. ಹೇಗೆಯೋ ಅವನು ನಿರ್ಧರಿಸಿದರೆ, ಆಮೇಲೆ ತಂಟೆಯೇನು ? ಬೂಹಾವರ್‌ಳು ಕೂಡ ಇತರ ಬಾಂದಿಗಳಂತೆ ತನ್ನ ಕೆಲಸವನ್ನು ತಾನು ಮಾಡಬೇಕು; ಬೆರಳು ತೋರಿಸಿದರೆ ಹಸ್ತವನ್ನು ನುಂಗುವ ಜನರು-ನಾಜೂಕಾದ ಅಸ್ತಿ ಭಾರದ ಮೇಲೆ ಈ ಕಟ್ಟಡವನ್ನು ಕಟ್ಟಲು ಯತ್ನಿಸುವವರು-ನನಗೆ ಇಷ್ಟವಿಲ್ಲ.

ಈಗ ನನಗೆ ಈ ವಿಷಯ ಕೊಂಚ ಅರ್ಥವಾಗಲು ಪ್ರಾರಂಭವಾಯಿತು. "ಏನು ನೀವುಗಳು ಬೂಹಾವರ್‌ಳ ವಿಷಯ ಮಾತನಾಡುತ್ತಿದ್ದೀರಾ" ಎಂದು ಕೇಳಿದೆನು.

ಮರಿಯಮ್—ಏನು, ನೀನು ಈ ಸಮಾಚಾರವನ್ನು ಮೊದಲೆಂದೂ ಕೇಳಿರಲಿಲ್ಲವೇ ?

ನಾನು—(ಮೆಲ್ಲನೆ) ಇಲ್ಲ. ಅವಳು ನಾಫಿಜ್‌ಬೇಗಾಗಿ ಕೊಳ್ಳಲ್ಪಟ್ಟವ ಳೆಂಬುದು ನನಗೆ ಗೊತ್ತಿರಲಿಲ್ಲ.

ಷಾಯಿಸ್ತ—ಮೊದಲನೆಯದಾಗಿ, ಇದನ್ನೇನೂ ನಿನ್ನೊಡನೆ ಹೇಳತಕ್ಕಂಥಾ ವಿಚಾರವೆಂದು ನಾವು ಗಣಿಸಿರಲಿಲ್ಲ. ಎರಡನೆಯದಾಗಿ, ಇದರ ನಿಜಸಂಗತಿ ಯನ್ನು ನೀನೇ ಮೊದಲು ಚೆನ್ನಾಗಿ ತಿಳಿದುಕೊಳ್ಳುವುದು ಉತ್ತಮವೆಂದು ಯೋಚಿಸಿದೆವು. ಈಗ ನಿನಗೆ ಗೊತ್ತಾಗಿಯೇ ಆಯಿತಲ್ಲ. ನಾಫಿಜ್‌ಬೇಯು ಅವಳನ್ನು ಮದುವೆಯಾಗದಿದ್ದುದಕ್ಕೆ ಅವಳಿಗೆ ಬಹಳ ವ್ಯಸನ. ಅದೂ ಅಲ್ಲದೆ ಈಗ ಐದು ವರ್ಷಗಳಿಂದ ಅವಳು ಶ್ರೀಮಂತಳೆನಿಸಿಕೊಳ್ಳುವ ಪ್ರಯತ್ನ ದಲ್ಲಿದ್ದು, ತನ್ನ ಮಾತುಕಥೆ, ಕೂತುನಿಲ್ಲುವುದನ್ನೆಲ್ಲಾ ಹಾಗೆಯೇ ಮಾಡಿ ಕೊಳ್ಳುತ್ತಿದ್ದುದರಿಂದ, ಇನ್ನೂ ಹೆಚ್ಚು ವ್ಯಸನ.

ಖನ್‌ಜಾ—(ತುಟಿಯ ಮೇಲೆ ಬೆರಳಿಟ್ಟು) ಸುಮ್ಮನಿರಿ. ಅವಳು ಬರುತ್ತಿ ರುವಳು. ದಯವಿಟ್ಟು ನಿನ್ನೊಡನೆ ಅವಳು ಜಗಳವಾಡಲು ಅವಕಾಶ ಕೊಡದಿರಿ.

ಆ ಕ್ಷಣವೇ ಬೂಹಾವರ್‌ಳು ಬಂದುಬಿಟ್ಟಳು. ಪರಿಚಾರಿಕೆಯರೆಲ್ಲಾ ಸುಮ್ಮನಾಗಿಬಿಟ್ಟರು. ನಾನು ಬಹಳ ವ್ಯಥೆಯಿಂದ ಅವಳ ಕಡೆ ನೋಡಿ ದೆನು. ಪಾಪ, ಅವಳ ಮನಸ್ಸಿನಲ್ಲಿ ಎಷ್ಟೆಷ್ಟು ಆಶೆಗಳಿದ್ದವೋ ! ಅವೆಲ್ಲಾ ಭಂಗವಾಗಿ ಹೋದುದಕ್ಕಾಗಿ ಅವಳಿಗೆ ಎಷ್ಟು ವ್ಯಸನ ಉಂಟಾಗಿರಬಹುದು!

ಏಕೆಂದರೆ, ಅನಾತಶಾಲೆಯಿಂದ ಬಂದ ಮೇಲೆ ನಾಫಿಜ್‌ಬೇಯ ವರ್ತನೆಯು ಬೂಹಾವರ್‌ಳಿಗೆ ಯಾವ ವಿಧವಾದ ಆಶೆಯನ್ನೂ ಹುಟ್ಟಿಸುವಂತಿರಲಿಲ್ಲ. ಈಗ, ಬೂಹಾವರ್‌ಳು ಹೊರಗೆ ಹೋಗಿ ಬಂದ ಮೇಲೆ ಅವಳ ಕೋಪವು ಕೊಂಚ ತಣ್ಣಗಾಗಿತ್ತು. ಆದರೆ ಅವಳ ತುಟಿಗಳಿಂದ ಸಿಟ್ಟು ಹೊರ ಬೀಳುತ್ತಿತ್ತು. ಅವಳ ನೋಟವು, ಇತರ ಬಾಂದಿಯರೊಡನೆ, "ನೋಡಿ, ಇನ್ನು ನನ್ನನ್ನು ರೇಗಿಸಬೇಡಿ" ಎಂದು ಹೇಳುವಂತಿತ್ತು. ಮಿಕ್ಕವರೆಲ್ಲಾ ಹಾಸ್ಯ ಹುಡುಗಾಟ ಮಾಡಿಕೊಂಡಿರುವಾಗ ಬೂಹಾವರ್‌ಳು ಮಾತ್ರ ಮೌನದಿಂದ ಕೆಲಸ ಮಾಡುತ್ತಿದ್ದಳು. ಇಸ್ತ್ರಿ ಮುಗಿದ ಮೇಲೆ ಅವಳ ಸುಪರ್ದಿನಲ್ಲಿದ್ದ ನಾಫಿಜ್‌ಬೇಯ ಬಟ್ಟೆಗಳನ್ನು ತೆಗೆದುಕೊಂಡು ಕೊಠಡಿಯಿಂದ ಸುಮ್ಮನೆ ಹೊರಟು ಹೋದಳು.

ನಾನು ಖಂಜಳಿಗೆ ವಲಿಯಾಖಾನಮ್‌ಳ ಬಟ್ಟೆಗಳನ್ನು ತೆಗೆದು ಕೊಡುವುದರಲ್ಲಿ ಸಹಾಯಮಾಡಿ, ಅವರ ಕೋಣೆಗೆ ಹೋಗಿ, ಬೀರುವಿನಲ್ಲಿ ಬಟ್ಟೆಗಳನ್ನೆಲ್ಲಾ ಸರಿಯಾಗಿಟ್ಟೆನು. ನಾನು, ಖಂಜೇ ಇಬ್ಬರು ಮೊದಲು ಮಾತನಾಡದೇ ಈ ಕೆಲಸದಲ್ಲಿ ತೊಡಗಿದ್ದೆವು. ಸ್ವಲ್ಪ ಹೊತ್ತಾದ ಮೇಲೆ ಅವಳು ಕೊಂಚ ವ್ಯಸನದಿಂದ "ನಾಫಿಜ್‌ಬೇಯು ನಿನ್ನೊಡನೆ ಇಷ್ಟೊಂದು ಮಾತನಾಡದಿದ್ದರೆ ಒಳ್ಳೆಯದೆಂದು ನಾನು ಇಷ್ಟಪಡುತ್ತೇನೆ" ಎಂದಳು.

ನಾನು—(ಬಹಳ ನಾಚಿಕೆಗೊಂಡು) ನಿನ್ನ ಮಾತಿನ ಅರ್ಥ ನನಗಾಗುವುದಿಲ್ಲ. ನಾಫಿಜ್‌ಬೇಯು ನನ್ನನ್ನು ಏನ ಮಾಡುವನು ?

ಖಂಜಾ—ನಿಶ್ಚಯವಾಗಿಯೂ ಏನೂ ಇಲ್ಲ. ಹುಡುಗಾಟ ಮಾತ್ರ ಮಾಡುತ್ತಾನೆ. ಒಂದನೆಯದಾಗಿ, ನೀನು ಅವನ ದಾತ್ರಿಯ ಹುಡುಗಿ. ಎರಡನೆಯದು, ನೀನು ಅನಾಥೆ. ನಾಫಿಜ್‌ಬೇಯು ಬಹಳ ಒಳ್ಳೆಯ ಮನಸ್ಸಿನವನು-ಅದುದರಿಂದಲೇ ಅವನಿಗೆ ನಿನ್ನ ಮೇಲೆ ಕರುಣೆ. ಇದೇ ಸರಿಯಾದ ಮತ್ತು ಸತ್ಯವಾದ ನಡವಳಿಕೆ. ಹೀಗೇಯೇ ಇರಲೂ ಬೇಕು. ಆದರೆ ದುರಾದೃಷ್ಟದಿಂದ ಬೂಹಾವರ್‌ಳು ಇದರ ಬೇರೊಂದರ್ಥವನ್ನು ಮಾಡುತ್ತಾಳೆ. ನಾಫಿಜ್‌ಬೇಯ ದೆಸೆಯಿಂದ ಅವಳಿಗುಂಟಾಗಿರುವ ನಿರಾಶೆಯ ಕಾರಣ ಅವಳು ಹುಚ್ಚಿಯಾಗುತ್ತಿದ್ದಾಳೆ. ಸಣ್ಣ ಸಣ್ಣ ವಿಷಯಗಳಲ್ಲಿ ಅವಳಿಗೆ ಅಸೂಯೆಯುಂಟಾಗುತ್ತದೆ.

ನಾನು—(ಆತುರದಿಂದ) ಅಸೂಯೆ ಆವ ವಿಷಯಕ್ಕಾಗಿ ? ನಾಫಿಜ್‌ಬೇಯು ಅವಳ ಮುಂದೆ ನನಗೆ ಹೆಚ್ಚು ಗಮನ ಕೊಡುತ್ತಾನೆಂದು ಅವಳು ತಿಳಿದುಕೊಂಡಿರುವಳೆಂದು ಹೇಳುತ್ತೀಯಾ ?

ಖಂಜಾ—(ನಸುನಗುತ್ತಾ) ಹೌದು, ಸರಿಯಾಗಿ ಯೋಚಿಸಿದೆ. ನಾನು ಹೀಗೆಯೇ ಯೋಚಿಸುತ್ತೇನೆ. ಆದರೆ ಅವಳ ತಲೆಯಲ್ಲಿ ಇದು ಹೇಗೆ ನೆಟ್ಟಿತೆಂಬುದು ನನಗೆ ಗೊತ್ತಾಗುವುದಿಲ್ಲ. ಬಾ, ಈಗ ಕೆಳಗೆ ಹೋಗೋಣ. ಮನೆಯ ಹೆಂಗಸರೆಲ್ಲಾ ಈಗ ಎಲ್ಲಿರುವರೋ ತಿಳಿಯದು.

ನಾನು—(ಅಜ್ಞಾನದಿಂದ) ನನಗೆ ಗೊತ್ತಿಲ್ಲ.

ಹೀಗೆಂದ ಮೇಲೆ ನನ್ನ ಯೋಚನೆಯು ಪುನಃ ಬೂಹಾವರ್ಳ ಕಡೆ ಹೋಯಿತು. ನಾಫಿಜ್‌ಬೇಯು ನನ್ನನ್ನು ಪ್ರೀತಿಸುತ್ತಾನೆಂಬ ನಂಬುಗೆಯು ಅವಳಿಗೆ ಹೇಗೆ ತಾನೆ ಉಂಟಾಯಿತೆಂಬುವನ್ನು ಅರ್ಥ ಮಾಡಲು ಯತ್ನಿಸಿದೆನು. ನನ್ನ ವಿಷಯದಲ್ಲಿ ಅವನಿಗೆ ಬಹಳ ಶ್ರದ್ಧೆಯಿತ್ತೆಂಬುದರಲ್ಲೂ, ನನ್ನನ್ನು ಅವನು ಬಹಳ ಕರುಣೆಯಿಂದ ಕಾಣುತ್ತಿದ್ದನೆಂಬುದರಲ್ಲೂ ಸಂಶಯವಿರಲಿಲ್ಲ. ನನ್ನೊಡನೆ ಸಂಭಾಷಣೆ, ಪರಿಹಾಸ್ಯ ಮಾಡುತ್ತಿದ್ದಂತೆ ಅವನು ಇತರ ಚಾರಿಕೆಯರೊಡನೆ ಮಾಡುತ್ತಿರಲಿಲ್ಲವೆಂಬುದನ್ನೂ ಅರಿತಿದ್ದೆನು. ಅವನ ಈ ನಡವಳಿಕೆಯು ನನಗೆ ಬಹಳ ಪ್ರಿಯವಾಗಿತ್ತೆಂದೂ ಇದಕ್ಕಾಗಿ ನಾನು ಅವನಿಗೆ ಕೃತಜ್ಞಳಾಗಿದ್ದೆನೆಂದೂ ಹೇಳಬಲ್ಲೆನು. ಇದೆಲ್ಲಾ ಕೇವಲ ಅವನ ದಯಾಪರತೆ, ದೀನರಕ್ಷತೆಯೇ ಹೊರತು ಮತ್ತೇನು ಅಧಿಕವಾದದ್ದೆಂದೂ ನಾನು ಯೋಚಿಸಲಿಲ್ಲ. ಖಂಜೆಯು ಆಡಿದ ಮಾತುಗಳನ್ನೂ ಕೇಳಿದ ಮೇಲು ಸಹ ನಾನು ಹೀಗೆಯೇ ತಿಳಿದುಕೊಂಡಿದ್ದೆನು. ಬೂಹಾವರ್ಳ ತಪ್ಪು ಅಭಿಪ್ರಾಯವನ್ನು ಅವಳ ಮನಸ್ಸಿನಿಂದ ದೂರ ಮಾಡಲು ಅಪೇಕ್ಷಿಸಿದೆನು. ಆದರೆ ಜಯವಾಗಲಿಲ್ಲ. ನನ್ನ ವಿವೇಚನಾ ಶಕ್ತಿಯು, ಬೂಹಾವರ್ಳು ಯೋಚಿಸಿದುದು ಒಂದು ವೇಳೆ ಸರಿಯಾಗಿರಬಹುದೆಂದು ಎಂದಿಗೂ ಒಪ್ಪದಿದ್ದುದರಿಂದ ಹೃದಯವು ತಲ್ಲಣಿಸಲಾರಂಭಿಸಿತು. ಕಡೆಗೆ ಇದೇ ಆಲೋಚನೆಯಲ್ಲಿ ಉದ್ಯಾನವನಕ್ಕೆ ಓಡಿಹೋಗಿ, ನೆಟ್ಟಗೆ ಸಮುದ್ರ ಜಲದಿಂದ ತುಂಬಿರುವ ಪುಷ್ಕರಿಣಿಯ ಕಡೆ ಹೋದೆನು. ಈ ವೇಳೆಯಲ್ಲಿ ಅಲ್ಲಿಗೆ ಯಾರೂ ಬರುವುದಿಲ್ಲವೆಂದು ತಿಳಿದು, ಅದರ ಕಟ್ಟೆಯ ಮೇಲೆ ಕುಳಿತುಕೊಂಡು, ನನ್ನೊಡನೆ ತಂದಿದ್ದ ಬರಬತ್ತನ್ನು ನುಡಿಸಲಾರಂಭಿಸಿದೆನು. ಕೊಂಚ ಹೊತ್ತಿನಲ್ಲೇ ಅದನ್ನು ತೊಡೆಯ ಮೇಲಿಟ್ಟುಕೊಂಡು ಪುನಃ ನನ್ನಾಲೋಚನೆಗಳಲ್ಲಿ ಮುಳುಗಿದೆನು. ಬಹಳವಾಗಿ ಯೋಚಿಸಿದ ನಂತರ ಈ ವಿಷಯವನ್ನು ಒಪ್ಪಿಕೊಳ್ಳಬೇಕಾಯಿತು. ಏನೆಂದರೆ—

—ನಾಫಿಜ್‌ಬೇಯು ನಿಜವಾಗಿಯೂ ನನ್ನ ಮೇಲೆ ಬಹಳ ಕರುಣೆಯುಳ್ಳವನಾಗಿದ್ದನು. ಹೊರಗಿನವರ್ಯಾರಿಗಾದರೂ ಅವನ ಈ ನಡುವಳಿಕೆಯು ಕೇವಲ ಕರುಣಾಶೆ ಮತ್ತು ದೀನರಕ್ಷತೆಯ ಎಲ್ಲೆಯನ್ನು ಮೀರಿದ್ದಂತೆ

ಕಾಣಬಹುದಾಗಿತ್ತು. ಅವನು ಯಾವಾಗಲೂ ನನ್ನ ಕ್ಷೇಮ ವಿಚಾರಣೆಯನ್ನು ಪ್ರಧಾನವಾಗಿಟ್ಟುಕೊಂಡಿದ್ದನು. ಅವನ ದಯಾ ಪೂರಿತ ಪ್ರೀತಿಯಲ್ಲಿಯೂ, ಕನಿಕರ ಮತ್ತು ಭೂತದಯಾಪಶ್ಚಾತ್ತಾಪದಲ್ಲಿಯೂ ನಾನು ಯಾವಾಗಲೂ ಮುಳುಗಿರುತ್ತಿದ್ದೆನು. ಇಂಥೇ ಮುಂತಾದ ಅವನ ಮನರಂಜಕವಾದ ಗುಣಗಳು ಜ್ಞಾಪಕಬಂದಾಗ, ನನ್ನ ಕೆನ್ನೆಗಳು ಕೆಂಪೇರುತ್ತಿದ್ದವೆಂದು ನನಗೆ ತಿಳಿಯಿತು. ನಾಫಿಜ್‌ಬೇಯ ರೀತಿಯು ಬೂಹಾವರ್‌ಳು ಯೋಚಿಸಿದಂತೆಯೇ ಇತ್ತೆಂದು ನನಗೂ ಕಂಡು ಬಂದುದೇ ಇದರ ಕಾರಣ. ಇದುವರೆಗೆ ಅವನ ಈ ಮನೋಹರ ಸ್ವಭಾವವನ್ನು ಕಂಡು ನಾನು ಹರ್ಷಿತಳಾಗುತ್ತಿದ್ದೆನು. ಅದು ನನಗೆ ಅತಿ ಪ್ರಿಯವಾಗಿತ್ತು. ಆದರೆ, ಈಗ, ನಾಫಿಜ್‌ಬೇಯ ವರ್ತನೆಯು ಕೇವಲ ದಯಾಪರತೆಯ ಪ್ರತಿಫಲವಲ್ಲವೆಂದು ಬಲಾತ್ಕಾರದಿಂದ ಒಪ್ಪಿಕೊಳ್ಳಬೇಕಾಯಿತು. ಇದರೊಡನೆ–ಒಂದುವೇಳೆ, ಅವನಿಗೆ ನನ್ನ ವಿಷಯದಲ್ಲಿ ಬೇರೆ ಆವ ಯೋಜನೆಯಿದ್ದರೂ, ಅದು ನೀರುಗುಳ್ಳೆಯಂತೆ ಕ್ಷಣಿಕವಾಗಿರಬಹುದೆಂದೂ ನಂಬುಗೆಯುಂಟಾಯಿತು. ಅವನು ನನ್ನನ್ನು ಪ್ರೀತಿಸುವದು ಅಸಾಧ್ಯವಾಗಿ ಕಾಣಬರುತ್ತಿತ್ತು. ಈ ವಿಷಯವನ್ನು ನ್ಯಾಯರೀತಿಯಲ್ಲೇ ಮನಸ್ಸಿನಲ್ಲಿ ಒಪ್ಪಿಕೊಳ್ಳಬೇಕಾಯಿತು. ಈ ಚಿಂತಾಸ್ಥಿತಿಯಲ್ಲಿ ನನ್ನ ಕೈ ಇಳಿಬಿದ್ದು ಬರಬತ್ತಿನ ತಂತಿಯನ್ನು ತಗಲಿತು. ನಾನು ಅದನ್ನು ನಿಜವಾಗಿ ನುಡಿಸುತ್ತಿರಲಿಲ್ಲ. ಇಷ್ಟರಲ್ಲೇ ನನ್ನ ಹಿಂದುಗಡೆ ಉದ್ಯಾನವಸದ ಬಾಗಿಲು ತೆರೆಯಲ್ಪಟ್ಟು, ನಾಫಿಜ್‌ಬೇಯು ಬಂದು ಎದುರಿನಲ್ಲಿ ನಿಂತವನಾದನು. ನನ್ನನ್ನು ನೋಡಿ ಮುಗುಳ್ನಗೆ ನಕ್ಕು, ತಾನು ಏಕಾಏಕಿ ಬಂದುಬಿಟ್ಟುದರಿಂದ ನನಗೆ ಉಂಟಾದ ಘಾಬರಿಯನ್ನು ಗಮನಿಸದೆ, ಪುಷ್ಕರಿಣಿಯ ಕಟ್ಟೆಯನ್ನು ಒರಗಿಕೊಂಡು ನನ್ನನ್ನು ಹೀಗೆ ಕೇಳಲಾರಂಭಿಸಿದನು.

"ಹಾಜಿರಾ. ಇಲ್ಲಿ ನೀನು ಏನು ಮಾಡುತ್ತಿರುವೆ? ಏನು, ವಾದ್ಯವನ್ನು ನುಡಿಸುತ್ತಿರುವಿಯಾ? ಒಳ್ಳೇದು. ಇಸ್ತ್ರಿಮಾಡುವದಕ್ಕಿಂತ ಇದು ಎಷ್ಟೋ ಉತ್ತಮ. ನೀನು ಆಯಾಸಮಾಡಿಕೊಳ್ಳದೆ, ಕೆಲಸವನ್ನು ಬಿಟ್ಟು ಇಲ್ಲಿಗೆ ಬಂದುದು ನನಗೆ ಬಹಳ ಸಂತೋಷ.

ನಾನು— (ಸಣ್ಣನೆ ಧ್ವನಿಯಿಂದ) "ಆದರೆ ಕೆಲಸವನ್ನೆಲ್ಲಾ ಪೂರೈಸಿಕೊಂಡೇ ನಾನಿಲ್ಲಿಗೆ ಬಂದಿರುವೆನು." ನಾಫಿಜ್‌ಬೇಯೊಡನೆ ಸಂಗತವಾಗಲು ನನಗೆ ಇದೇ ಮೊದಲನೆಯ ಸಾರಿ. ಅವನೊಡನೆ ಏಕಾಂಗಿಯಾಗಿರಲು ನನಗೆ ಬಹಳ

ಬರಬತ್— ಒಂದು ವಾದ್ಯ

ಲಜ್ಜೆಯುಂಟಾಯಿತು. ಆದರೆ ಅವನಿಗೆ ಈ ವಿಧವಾದ ಯೋಚನೆ ಇದ್ದಂತೆ ಕಾಣಲಿಲ್ಲ. ಕೈನೀಡಿ ಸಮೀಪದಲ್ಲೇ ಇದ್ದ ಒಂದು ಅರಳಿದ ಪುಷ್ಪವನ್ನು ಕೊಯ್ದು ಅದರೊಡನೆ ಆಡಲು ಪ್ರಾರಂಭಿಸಿದನು. ನೋಡಲು, ಅವನಿಗೆ ಅಲ್ಲಿಂದ ಹೊರಡುವ ಇರಾದೆಯಿದ್ದಂತೆ ಕಾಣಲಿಲ್ಲ. ನನ್ನೊಡನೆ ಬಹು ಕನಿಕರದಿಂದ:-

"ನನ್ನ ಶೋಚನೀಯ ಹಾಜಿರೇ, ನೀನು ಕೆಲಸಮಾಡುವದು ನನಗೆ ಇಷ್ಟವಿಲ್ಲ. ಲೌಂಡಿಯರ ಕೆಲಸವನ್ನು ನಿನ್ನಿಂದ ತೆಗೆಯಲು ನೀನೇನೂ ಸೇವಕಳಲ್ಲ. ಈ ರೀತಿಯೇ ಆದರೆ, ನಾನು ಅಮ್ಮನೊಡನೆ ಈ ವಿಷಯವನ್ನು ಮಾತನಾಡುವೆನು" ಎಂದನು.

ನಾನು— (ಬಹಳ ತ್ವರೆಯಿಂದ) ತಾವು ಈ ವಿಷಯವನ್ನು ಮಾತನಾಡಿದ್ದರೆ ದೊಡ್ಡ ಉಪಕಾರವಾದೀತು. ನನಗೆ ಕೆಲಸ ಮಾಡಲು ಬಹಳ ಇಷ್ಟ. ನಿಮ್ಮ ತಾಯಿಯವರು ಮಾಡಿರುವ ಉಪಕಾರಕ್ಕಾಗಿ ನಾನು ಎಷ್ಟು ಕೃತಜ್ಞಳಾಗಿದ್ದೇನೆಂಬುದನ್ನು ಒಂದುವೇಳೆ ತಾವು ತಿಳಿಯದಿರಬಹುದು. ಅವರನ್ನು ಸಂತೋಷಪಡಿಸುವ ಸಮಯ ಸಿಕ್ಕಿದರೆ ನನಗೆ ಎಷ್ಟು ಸಂತೋಷವಾಗುವದು! ಈ ವಿಷಯ ನಿಮಗೆ ತಿಳಿದಿದ್ದರೆ ನಾನು ಕೆಲಸ ಮಾಡುವದು ಕೆಟ್ಟದೆಂದು ನೀವೆಂದಿಗೂ ಯೋಚಿಸುತ್ತಿರಲಿಲ್ಲ.

ನಾಫಿ— (ನಕ್ಕು) ಒಳ್ಳೇದು. ಇದು ನಿನ್ನಿಷ್ಟವಾದರೆ ನಾನು ಈ ವಿಷಯವನ್ನೆಂದಿಗೂ ಮಾತನಾಡುವದಿಲ್ಲ. ಆದರೆ ನೀನು ಸಹ ನಿನ್ನ ಶಕ್ತಿಯನ್ನು ಮೀರಿ ಶ್ರಮಮಾಡಿಕೊಳ್ಳುವದಿಲ್ಲವೆಂದು ನನಗೆ ಮಾತು ಕೊಡು. ಹಾಜಿರೇ ನೀನು ಕಷ್ಟಪಡಲು ಕೊಂಚವೂ ಯೋಗ್ಯಳಲ್ಲವೆಂದು ನಾನು ತಿಳಿದಿರುವೆನು.

ನಾನು— (ವೇಗದಿಂದ) ಯಾಕಲ್ಲ. (ಪುನಃ ನನ್ನ ಕೈಗಳನ್ನು ನಿಕೃಷ್ಟದಿಂದ ನೋಡಿಕೊಂಡು.) ನಾನು ಕೃಶಳೂ, ನಿಸ್ತೇಜಸ್ಕಳೂ ನಿಶಕ್ತಳಾಗಿಯೂ ಆಗುತ್ತಿರುವೆನು. ಆದರೆ ತಿಳಿಯಿರಿ-ಶಕ್ತಿವಂತಳಾಗಿದ್ದೇನೆ. ಇದುವರೆಗೆ ನಾನು ಎಂದೂ ಹಾಯಿಲೆ ಬೀಳಲಿಲ್ಲ. ಇದಕ್ಕಿಂತ ಇನ್ನು ಬೇರೆ ಸಾಕ್ಷಿಯಾವದಿರುವುದು ?

ನಾಫಿಜ್‌ಬೇಯು ಜವಾಬೇನನ್ನೂ ಕೊಡದೆ ಆ ಸುವಾಸನಾ ಪುಷ್ಪವನ್ನು ನನ್ನ ನಾಸಿಕದ ಹತ್ತಿರ ಹಿಡಿದು, "ಆಹಾ, ಎಷ್ಟು ಮನೋಹರವಾದ ಗಂಧ ; ಈ ಪುಷ್ಪದ ಅರ್ಥವೇನೆಂಬುದು ನಿನಗೆ ಗೊತ್ತೆ ?" ಎಂದನು.

ನಾನು— ನನಗೆ ತಿಳಿಯದು. ನೀವೇ ಹೇಳಿ.

*ಲೌಂಡಿ= ಗುಲಾಮಳು

ನಾಫಿಜ್— ನನಗೂ ತಿಳಿಯದಿರುವದು ವ್ಯಸನಕರವಾಗಿದೆ. ನಾನು ಈ ಶಾಸ್ತ್ರವನ್ನು ಚನ್ನಾಗಿ ಅರಿತವನಲ್ಲ. ಆದರೆ ಪ್ರತಿಯೊಂದು ಹೂವುಒಂದೊಂದು ಪ್ರತ್ಯೇಕ ಅರ್ಥದಲ್ಲಿ ಉಪಯೋಗಿಸಲ್ಪಡುತ್ತದೆ ಎಂಬಿಷ್ಟು ಮಾತ್ರ ಗೊತ್ತಿದೆ. ನೀನಿವನ್ನು ಚೆನ್ನಾಗಿ ತಿಳಿವಿರಬೇಕು-ಏಕೆಂದರೆ-ಪ್ರತಿಯೊಬ್ಬ ತುರ್ಕಿ ಹುಡುಗಿಯೂ ಇವನ್ನು ಪ್ರಾರಂಭದಲ್ಲೇ ಕಲಿತಿರುತ್ತಾಳೆ.

ನಾನು— (ನಮ್ಮ ಸಂಭಾಷಣೆಯು ನೀತಿಯ ಎಲ್ಲೆಯನ್ನು ಮೀರುತ್ತಿದ್ದುದರಿಂದ, ಕೊಂಚ ನಾಚಿಕೆಗೊಂಡು) ನಾನು ಕಲಿಯಲಿಲ್ಲ.

ನಾಫಿಜ್— ಇಲ್ಲವೆ ? ಹಾಗಾದರೆ ನೀನೊಬ್ಬ ಪ್ರಿಯತಮನನ್ನು ಹೊಂದಿದಾಗ ಅವನೊಡನೆ ಯಾವ ತರಹ ಮಾತುಕಥೆಯಾಡುವೆ ? ಬಾ, ನಾವಿಬ್ಬರೂ ಒಟ್ಟಿಗೆ ಈ ಪಾಠವನ್ನು ಕಲಿಯೋಣ. ಒಂದಾನೊಂದು ಸಲ ಇದರ ಅವಶ್ಯಕತೆ ಬೀಳಬಹುದು. (ಒಂದು ಗುಲಾಬಿ ಹೂವನ್ನು ಕಿತ್ತುಕೊಂಡು) ಇಗೋ ಹೇಳು, ಇದರರ್ಥವೇನು ?

ಈ ಸಲ ಇದರರ್ಥವನ್ನು ತಿಳಿದವಳಾಗಿದ್ದರೂ ನಾನು ಪ್ರತ್ಯುತ್ತರ ಕೊಡಲಿಲ್ಲ.

ನಾಫಿಜ್— (ಕುತೂಹಲದಿಂದ) ಇದನ್ನಂತೂ ನೀನು ಖಂಡಿತವಾಗಿಯೂ ತಿಳಿದಿರುವೆ.

ನಾನು— (ಕೊಂಚವ್ಯಾಕುಲತೆಯಿಂದ) ಹೌದು. ಆದರೆ ನಿಮ್ಮೊಡನೆ ಹೇಳಬೇಕಾದ ಕಾರಣವೇನಿಲ್ಲ.

ನಾಫಿಜ್— (ಸಂತೋಷಗೊಂಡು, ನಗುತ್ತಾ) ಒಳ್ಳೇದು, ಕೇಳು, ಗುಲಾಬಿಯ ಅರ್ಥವು ಇದು– "ನನ್ನಲ್ಲಿ ನಿನಗೆ ಪ್ರೀತಿಯಿಲ್ಲದಿದ್ದರೆ ಹೋಗಲಿ, ನನ್ನನ್ನು ನೋಡಿ ನಕ್ಕಾದರೂ ನಗು." ಎಂದು ಗುಲಾಬೀಪುಷ್ಪವನ್ನು ಯಾರ ಬಳಿಗೂ ಕಳುಹಿಸಬಾರದೆಂಬುದು ನನ್ನ ಇರಾದೆಯು. ಇಗೊ ಇದು ಹೇಳು. ಗುಲಾಬಿಯ ಲೇಕೆಯು ಏನೆನ್ನುತ್ತದೆ ಅದು ಹೀಗೆನ್ನುತ್ತದೆ. "ನನ್ನನ್ನು ಪ್ರೀತಿಸು, ಇಲ್ಲವಾದರೆ ನನ್ನ ಹತ್ತಿರ ಮುಖವನ್ನೂ ತರಬೇಡ" ಎಂದು,ಏನು ಇದು ಚೆನ್ನಾಗಿದೆಯೋ ಇಲ್ಲವೋ ? (ಪ್ರತ್ಯುತ್ತರ ಸಿಕ್ಕದ ಕಾರಣ) ಇವೆರಡರಲ್ಲಿ ನಿನಗೆ ಯಾವುದು ಇಷ್ಟ ?

ನಾನು— (ಕೋಪದಿಂದೆದ್ದು ನಿಂತು) ನನಗೆ ತಿಳಿಯದು. ನೀವು ಈ ವಿಧವಾದ ಸಂಭಾಷಣೆಯನ್ನು ನನ್ನೊಡನೆ ಮಾಡದಿರಿ.

ನಾಫಿಜ್— (ನಸುನಗುತ್ತಾ) ಯಾಕೆ (ನಾನು ವಾದ್ಯವನ್ನೂ ಹಾಡಿನ ಪುಸ್ತಕವನ್ನೂ ತೆಗೆದುಕೊಳ್ಳಲುದ್ಯುಕ್ತಳಾದೆನು) ಹೋಗಬೇಡ, ನೋಡು,

ಎಷ್ಟು ವಿಶ್ರಾಂತಿಯಿಂದ ಕುಳಿತಿರುವೆವು,ಒಳ್ಳೆಯದು,ಇನ್ನು ನಿನ್ನನ್ನು ಕೀಟಲೆಮಾಡುವದಿಲ್ಲ. ಇೀಸು ಬಹಳ ಒಳ್ಳೆಯ ಹುಡುಗಿ. ಇನ್ನೂ ಊಟದ ಹೊತ್ತಾಗಿಲ್ಲ. ಇಗೋ, ಈಗ ಕುಳಿತುಕೊ.

ಎಂದು ನನ್ನ ಕೈಹಿಡಿದು ಕುಳ್ಳಿರಿಸಿ, ಹಾಡಿನ ಪುಸ್ತಕವನ್ನು ನನ್ನ ಕೈಯಿಂದ ತೆಗೆದುಕೊಂಡು, ನಾನು ಕಲಿಯುತ್ತಿದ್ದ ಗೀತವನ್ನು ಓದಲಾರಂಭಿಸಿದನು.

ನಾಫಿಜ್— ಈ ಗೀತವು ಇನ್ನೂ ನಿನಗೆ ಬಂದಿತೋ ಇಲ್ಲವೋ

ನಾನು— (ಏನೂ ತೋರದೆ) ಸ್ವಾಮಿ, ನಾನಿದನ್ನು ಇನ್ನೂ ಕಲಿಯುತ್ತಿರುವೆನು.

ಈಗ ಒಂದು ವೇಳೆ ಭೂಹಾವರಳೇನಾದರೂ ಇಲ್ಲಿಗೆ ಬಂದಿದ್ದೇ ಆದರೆ ನನ್ನನ್ನು ಈ ಸ್ಥಿತಿಯಲ್ಲಿ ಕಂಡು ಅವಳೇನು ತಿಳಿದುಕೊಂಡಾಳೆಂದು ಯೋಚಿಸಲಾರಂಭಿಸಿದೆನು. ನಾಫಿಜ್‌ಬೇಯ ಮೇಲೆ ನನ್ನ ಶಕ್ತಿ ಏನೂ ಇಲ್ಲದಿದ್ದುದರಿಂದಲೂ, ಅವನಾಜ್ಞೆಯನ್ನು ಮೀರುವದು ಮರ್ಯಾದೆಗೆ ವಿರೋಧವಾಗಿದ್ದುದರಿಂದಲೂ, ಮನಸ್ಸಿನಲ್ಲೇ "ದೇವರೆ, ಅವಳಿಲ್ಲಿಗೆ ಬರದಿರಲಿ" ಎಂದು ಪ್ರಾರ್ಥಿಸುತ್ತಿದ್ದೆನು.

ನಾಫಿಜ್— ಎಲ್ಲಿ ನಾನು ನಿನಗೆ ಕಲಿಸಿಕೊಡುವೆನು, ಈ ಹಾಡನ್ನು ನುಡಿಸು ನೋಡೋಣ ಹೇಗೆ ನುಡಿಸುವೆಯೆಂದು.

ನಾನು ಆಜ್ಞೆಯನ್ನು ಅಂಗೀಕರಿಸಿ, ವಾದ್ಯವನ್ನು ತೆಗೆದುಕೊಂಡೆನು. ಆದರೆ ಇನ್ನೂ ಶುರುಮಾಡುವದರಲ್ಲೇ ಒಂದು ತಂತಿ ಕಿತ್ತುಹೋಯಿತು. ನನ್ನ ಹತ್ತಿರ ತಂತಿ ಇದ್ದುದರಿಂದ ನಾಫಿಜ್‌ಬೇಯು ನನ್ನ ಕೈಯಿಂದ ವಾದ್ಯವನ್ನು ತೆಗೆದುಕೊಂಡು ಸರಿ ಪಡಿಸಲಾರಂಭಿಸಿದನು. ಕೊಂಚ ಹೊತ್ತಾದ ಬಳಿಕ ಕಣ್ಣೆತ್ತಿ ನನ್ನ ಕಡೆ ನೋಡಿ ಹೀಗೆ ಂದನು :–

"ಪ್ರಣಯ ಸಂಬಂಧವಾದ ಸಂಭಾಷಣೆ ಮಾಡಲು ನಿನಗೆ ಅಭ್ಯಂತರವು! ಆದರೆ ಈ ವಿಧವಾದ ಗೀತವನ್ನು ಹಾಡಲು ಆಕ್ಷೇಪಣೆ ಇಲ್ಲ! ಒಂದನ್ನು ಕಂಡರೆ ನಾಚಿಕೆ-ಮತ್ತೊಂದನ್ನು ಕಂಡರೆ ಇಲ್ಲ! ಇವಕ್ಕೇನು ಉತ್ತರ ಹೇಳುವಿ ?"

ನಾನು— (ಮೆಲ್ಲನೆ) ಎರಡಕ್ಕೂ ಬಹಳ ವ್ಯತ್ಯಾಸವಿದೆ.

ಇಷ್ಟು ಹೇಳುವದರಲ್ಲೇ ಅವನು ತಡೆದು, "ಅದು ಹೇಗೆ ? ನನಗೆ ಗೊತ್ತಾಗುವದಿಲ್ಲ. ಗುಲಾಬಿಯ ಗೂಢಾರ್ಥವನ್ನು ವಿವರಿಸುವದಕ್ಕೂ,ನನ್ನ ಮುಂದೆ ಈಗ ನೀನು ಹೇಳಬೇಕೆಂದಿರುವ ಈ "ಪ್ರಿಯನ ವಿರಹದಿಂದುಂಟಾದ

ದುಃಖವನ್ನು ಸೂಚಿಸಲು ನನ್ನ ಅಶ್ರುವೆಂಬ ಮೌಕ್ತಿಕವನ್ನು ಅವನಿಗೆ ಪಾರಿತೋಷಕವಾಗಿ ಕಳುಹಿಸಿರುವೆನು" ಎಂಬ ಹಾಡನ್ನು ಹಾಡುವದಕ್ಕೂ ಏನು ವ್ಯತ್ಯಾಸವಿರುವದು ? " ಎಂದನು.

ನಾನು— (ನಸುನಗುತ್ತಾ) ಹಾಗಾದರದನ್ನೆಂದಿಗೂ ನಾನು ಹಾಡುವದಿಲ್ಲ ಅದು ನಿಮಗೆ ಸರಿಯಾಗಿಲ್ಲವೆಂದು ತೋರಿದರೆ ಅದನ್ನು ಹಾಡಲು ನೀವು ನನ್ನನ್ನು ಬಲಾತ್ಕಾರ ಮಾಡುವವಿಲ್ಲವೆಂದು ನನಗೆ ನಂಬುಗೆಯುಂಟು.

ನಾಫಿಜ್— (ತಲೆಯಲ್ಲಾಡಿಸಿ) ಇಲ್ಲ, ಇಲ್ಲ, ಇದು ನನಗೆ ಕಠಿಣ ಶಿಕ್ಷೆಯು ಸರಿಯಲ್ಲವೆಂದು ನಾನಾವಾಗ ಹೇಳಿವೆನು ? ಇದೋ ನಿನ್ನ ವಾದ್ಯವು ಸರಿಹೋಯಿತು ಇವರ ಶೃತಿಯನ್ನು ನೀನೇ ಸರಿಪಡಿಸಿಕೊ. ನನ್ನ ಅಭ್ಯಾಸವೇನೆಂದರೆ, ಇನ್ನೊಬ್ಬರಿಂದ ಸರಿಪಡಿಸಲ್ಪಟ್ಟ ವಾದ್ಯವನ್ನು ನಾನು ನುಡಿಸಲಾರೆ.

ನಾನು ವಾದ್ಯವನ್ನು ತೆಗೆದುಕೊಳ್ಳಲು, ನಾಫಿಜ್‌ಬೇಯು ಬಾಗಿಕೊಂಡು ನನ್ನ ಬಳಿ ನಿಂತುಕೊಂಡನು. ನನ್ನ ಸ್ಥಿತಿಯು ಆಗ ವಿಚಿತ್ರವಾಗಿತ್ತು. ನಾಫಿಜ್‌ಬೇಯು ಒಂದು ವಿಧವಾದ ಮಾಧುರ್ಯ ಪ್ರೇಮಯುತ ದೃಷ್ಟಿಯಿಂದ ನನ್ನನ್ನು ನೋಡುತ್ತಿದ್ದುದರಿಂದ ನಾನು ಕಣ್ಣನ್ನು ಮೇಲಕ್ಕೆತ್ತಲಾರದೆ ಪುಸ್ತಕದ ಮೇಲೆಯೇ ದೃಷ್ಟಿಯಿಟ್ಟವಳಾದೆನು-ಹೃದಯವು ಉದ್ವೇಗದಿಂದ ತಲ್ಲಣಿಸಲಾರಂಭಿಸಿ ಲಜ್ಜೆಯಿಂದ ಮುಖವು ಒಂದುಸಲ ಕೆಂಪಗೂ ಒಂದುಸಲ ಬೆಳ್ಳಗೂ ಆಗುತ್ತಿತ್ತು. ಇನ್ನೂ ವಾದ್ಯವನ್ನು ಸರಿಪಡಿಸಿಕೊಳ್ಳುವವರಲ್ಲೇ ಉದ್ಯಾನವನದ ಬಾಗಿಲು ತೆರೆಯಲ್ಪಟ್ಟು, ಅಧಮ್‌ಬೇ ಬರುತ್ತಿರುವದನ್ನು ನಾವಿಬ್ಬರೂ ಕಂಡೆವು. ಮರ್ಯಾದೆಯು ಸಲುವಾಗಿ ನಾನು ಎದ್ದು ನಿಂತೇನೋ ನಿಂತುಕೊಂಡೆನು-ಆದರೆ ಮನಸ್ಸಿನಲ್ಲಿ ಒಂದು ಹೊಸ ವಿಧವಾದ ಭಯವನ್ನು ಧರಿಸಿ-ಯಾಕೆಂದರೆ ನನ್ನ ಮುಖದ ಬಣ್ಣವು ಇಷ್ಟು ಹೊತ್ತಿಗೆ ಬದಲಾಯಿಸಿತ್ತಾದರೂ, ಕ್ಷೀಣವಾಗುತ್ತಿದ್ದ ದಿನದಲ್ಲಿ ಇನ್ನೂ ಕೊಂಚ ಬೆಳಕಿದ್ದುದರಿಂದ ಅವರು ಅದನ್ನು ಚೆನ್ನಾಗಿ ನೋಡಬಹುದಾಗಿತ್ತು.

ಅಧಮ್‌ಬೇ— (ಕೊಂಚ ಕೋಪಗೊಂಡು) ನಾಫಿಜ್, ನೀನು ಮನೆಯಲ್ಲೇ ಇದ್ದರೆ ಒಳ್ಳೆಯದು.ತಂದೆಯವರು ಹೊರಗೆ ಹೋಗಿದ್ದಾರೆ. ಯೂಸಫ್ ಪಾಷಾರವರು ಬಂದು, ಹೆಚ್ಚುಕಡಿಮೆ ಒಂದು ಘಂಟೆಯಿಂದ ಅವರನ್ನು ಕಾದುಕೊಂಡಿದ್ದಾರೆ. ನನಗೆ ಬಹಳ ಕೆಲಸವಿದ್ದರೂ ಆತನು ಕುಳಿತುಕೊಂಡು ಮಾತನಾಡಬೇಕಾಯ್ತು. ಎಲ್ಲಿ ನಿನ್ನ ಅವಶ್ಯಕತೆಯುಂಟೋ ಅಲ್ಲಿ ನೀನಿ

ದ್ದರೆ ನನ್ನದೇನೂ ಅಡ್ಡಿಯಿಲ್ಲ. ಇವತ್ತು ನೀನು ಮನೆಯಲ್ಲಿದ್ದದ್ದರೆ ನಿನ್ನನ್ನು ಯೂಸಫ್ ಪಾಷಾರವರ ಬಳಿ ಬಿಟ್ಟು ನಾನು ಬಂದುಬಿಡುತ್ತಿದ್ದೆನು.

ನಾಫಿಜ್— (ಹರ್ಷಚಿತ್ತತೆಯಿಂದ) ಯೂಸಫ್ ಪಾಷಾರವರ ಮಾತಿನಲ್ಲಿ ಕೊಂಚವೂ ಸ್ವಾರಸ್ಯವಿರುವುದಿಲ್ಲ. ಅವರ ಸಂಗವು ಬಹಳ ಸಪ್ಪೆ, ಆದರೆ ನಿಮಗೆ ಬಿಡುವಿಲ್ಲವೆಂಬುದು ನನಗೆ ಗೊತ್ತಿದ್ದರೆ, ಹೋಗಿ ಅವರ ಬಳಿ ಕುಳಿತಿರುತ್ತಿದ್ದೆನು. ನಿಜವನ್ನು ಹೇಳುವುದಾದರೆ, ಅವರಿಂದ ತಪ್ಪಿಸಿಕೊಳ್ಳಲು ನಾನು ಇಲ್ಲಿಗೆ ಹೊರಟುಬಂದೆನು. ಆತನ ದೀರ್ಘಸಂಭಾಷಣೆಯು ಬಹಳ ಬೇಸರವನ್ನುಂಟು ಮಾಡುವದು. ಅದನ್ನು ನಾನು ಸಹಿಸಲಾರೆ-ನಿಮಗೂ ನನಗೂ ಬಹಳ ವ್ಯತ್ಯಾಸವಿದೆ.

ಅಥಮ್— ಅಥವಾ ಹೀಗೆಂದು ಹೇಳು-ನನ್ನಲ್ಲಿ ನಿನಗಿಂತ ಸ್ವಾರ್ಥತೆ ಕಡಮೆ ಇರುವದೆಂದು. ನನಗೆ ಬಿಡುವಿಲ್ಲವೆಂಬುದು ನಿನಗೆ ಖಂಡಿತವಾಗಿಯೂ ಗೊತ್ತಿತ್ತು. ನೀನು ಅಲ್ಲಿ ಹೊರಟು ಹೋಗಿದ್ದರೆ ಇಷ್ಟು ತೊಂದರೆಯಾಗುತ್ತಿರಲಿಲ್ಲ. ಇಲ್ಲಿಯೂ ಸಹ ಅದಕ್ಕಿಂತ ಉತ್ತಮವಾದ ಕೆಲಸದಲ್ಲೇನೂ ತೊಡಗಿಲ್ಲವೆಂಬುದನ್ನು ನೋಡುತ್ತಿರುವೆನು.

ಅಥಮ್ ಬೇಯವರಿಗೆ ಕೋಪಗೊಳ್ಳುವ ಸ್ವಭಾವವೇ ಇರುತ್ತಿರಲಿಲ್ಲವಾದಕಾರಣ ನಾವಿಬ್ಬರೂ ಇವತ್ತು ಅವರನ್ನು ಆಶ್ಚರ್ಯದಿಂದ ನೋಡತೊಡಗಿದೆವು.

ನಾಫಿಜ್— (ನಗುತ್ತಾ) ಆ ವಿಷಯದಲ್ಲಿ ನನಗೆ ಸಂದೇಹವಾಗುತ್ತದೆ. ಯೂಸಫ್ ಪಾಷಾರವರ ಮಾತಿನ ಪ್ರತಿಫಲವು ನಿಮ್ಮ ಮೇಲೆ ಉಂಟಾಗುವಂತೆ ನನ್ನ ಮೇಲೂ ಆಗುವದಾದರೆ ನಾನು ಇಲ್ಲಿಗೆ ಓಡಿಬಂದುದೇ ಒಳ್ಳೇದೆಂದು ಕಾಣುತ್ತದೆ.

ಅಥಮ್ ಬೇಯವರು ಉತ್ತರವನ್ನು ಕೊಡದೆ ಮನೆಯಕಡೆ ಹಿಂತಿರುಗಿದರು. ನಾಫಿಜ್ ಬೇಯ ಮುಖದ ಮೇಲೆ ಕಳವಳ ಚಿಹ್ನೆಯುಂಟಾಯಿತು— ಆದರೆ ಕೊಂಚಹೊತ್ತು ಮಾತ್ರ. ಆಮೇಲೆ ನನ್ನ ಕೈಯ್ಯನ್ನು ಹಿಡಿದುಕೊಂಡು ತಾನೂ ಅದೇ ಕಡೆ ಹೊರಟನು.

ನಾಫಿಜ್— (ನಿಂತು ಒಂದು ನರೂವೃಕ್ಷವನ್ನು ಒರಗಿಕೊಂಡು) ನನ್ನಾಲೋಚನೆ ಏನೆಂದರೆ ನಾವು ಈಗ ಮನೆಗೆ ಹೋಗುವದು ಒಳ್ಳೇದು.

ನಾನು ಬಹಳ ಆತುರದಿಂದ ಒಪ್ಪಿಗೆಯನ್ನು ಸೂಚಿಸಿದೆನು. ಏಕೆಂದರೆ ಅಥಮ್ ಬೇಯವರು ಬಂದಾಗಿನಿಂದ ವಿಧವಿಧವಾದ ಚಿಂತೆಗಳು ನನ್ನನ್ನು ಕಾಡಿಸುತ್ತಿದ್ದು, ನಾನೇನೋ ಬಹಳ ದೊಡ್ಡ ಅಪರಾಧವನ್ನು ಮಾಡಿದಂತಾ

ಗಿತ್ತು. ನಾಫಿಜ್‌ಬೇಯು ಅಲ್ಲೇ ನಿಂತು ಸಮುದ್ರದ ಕಡೆ ನೋಡತೊಡಗಿದನು. ಎದುರಿನಲ್ಲಿ ಸೂರ್ಯನು ಅತಿಮೆಲ್ಲ ಮೆಲ್ಲನೆ ಪರ್ವತಗಳ ಹಿಂದೆ ಮುಳುಗುತ್ತಿದ್ದನು. ಅವನ ಅಸ್ತಮಯಕಾಲ ಕಿರಣಗಳು ಜಗುಲಿಯ ಮೇಲಿಟ್ಟಿದ್ದ ನೀಲಿಯ ಹೂಗಳ ಮೇಲೆ ಬಹು ಅಂದವಾಗಿ ಪ್ರಕಾಶಿಸುತ್ತಿದ್ದವು. ಇನ್ನೊಂದು ನಿಮಿಷದೊಳಗಾಗಿ ಕತ್ತಲೆಯು ಕವಿಮಕೊಳ್ಳುತ್ತಿತ್ತು ಇದನ್ನು ನಾಫಿಜ್‌ಬೇಗೆ ಸೂಚಿಸಿಯೂಸೂಚಿಸಿದೆನು. ಆದರವನು ಲಕ್ಷಿಸದೆ "ನಿನಗೆ ಕೆಲಸವೇನೂ ಇಲ್ಲವಲ್ಲಾ, ಇನ್ನು ಹೋಗಲು ಅವಸರವೇನು." ಎಂದು ಎರಡು ಮೂರು ಹೆಜ್ಜೆ ಮುಂದಕ್ಕೆ ಹೋಗಿ, ಉದ್ಯಾನವನ್ನೂ ಘಟ್ಟವನ್ನೂ ಭಾಗಿಸುತ್ತಿದ್ದ ಕೆಳಗಿನ ಗೋಡೆಯನ್ನು ಒರಗಿಕೊಂಡು ನಿಂತನು. ಈ ಗೋಡೆಯ ಮೇಲೆ ಕಟ್ಟಿಗೆ ಕಟ್ಟಲ್ಪಟ್ಟು, ಅದರ ಮೇಲೆ ಜಾಜೀಬಳ್ಳಿಯು ಹಬ್ಬಿಸಲ್ಪಟ್ಟಿತ್ತು.

ಇನ್ನೂ ನನ್ನ ಒಂದು ಕೈ ಅವನ ಕೈಯ್ಯೊಳಗೇ ಇತ್ತು. ಮತ್ತೊಂದು ಕೈಯ್ಯಿಂದ ಜಾಜೀಬಳ್ಳಿಗಳನ್ನು ಓರೆಮಾಡಿ, ನನ್ನನ್ನು ಅತಿ ಮೆಲ್ಲನೆ ತನ್ನ ಸಮೀಪಕ್ಕೆ ಎಳೆದುಕೊಂಡು, "ಬಾ, ಸಮುದ್ರದ ಚೆಂದವನ್ನು ನೋಡೋಣ" ಎಂದನು.

ನಾನು, ಮನಸ್ಸಿನಲ್ಲಿ ಮನೆಗೆ ಹೋಗಬೇಕೆಂದು ಆಶಿಸುತ್ತಿದ್ದರೂ, ವಿನಯದ ಸಲುವಾಗಿ ಅವನ ಸಮೀಪದಲ್ಲಿ ನಿಂತೆನು. ನಾಫಿಜ್‌ಬೇಯ ಸಾಮೀಪ್ಯ, ಸಂಧ್ಯಾಕಾಲದ ಸುಸಮಯ, ಜಾಜೀಪುಷ್ಪದ ಸುಗಂಧ, ಇವೆಲ್ಲಾ ಒಟ್ಟುಗೂಡಿದ ಆ ಮಾಯಾಜಾಲದಲ್ಲಿ ನನಗೆ ಮಾತೇ ಹೊರಡಲಿಲ್ಲ—ನಾನು ಮೌನವಾಗಿದ್ದೆನು.

ನಾಫಿಜ್— (ಸ್ವಲ್ಪ ಹೊತ್ತು ಮೌನವಿಂದಿದ್ದು) ತಂದೆಯವರು ಬರುತ್ತಿದ್ದಾರೆ.

ನಾನು ಕತ್ತೆತ್ತಿ ನೋಡಲು ನಸಿರುಲ್ಲಾಪಾಷಾರವರ ದೋಣಿಯು ಅತಿವೇಗದಿಂದ ಮುಂದೆ ಹೋಗುತ್ತಿತ್ತು.

ನಾನು— ಏನು ನೀವು ಅವರನ್ನು ಎದುರುಗೊಳ್ಳಲು ಹೋಗುವದಿಲ್ಲವೇ ?

ನಾಫಿಜ್— (ನಸುನಗುತ್ತಾ) ನಾನು ಯಾವ ವಿಧವಲ್ಲಾದರೂ ಹೊರಟು ಹೋಗಲೆಂಬುದೇ ನಿನ್ನ ಮನಸ್ಸಿನ ಇಷ್ಟವಾಗಿದೆಯೆಂದು ತೋರುತ್ತದೆ. ಇಲ್ಲ ನಾನು ಹೋಗುವುದಿಲ್ಲ. ಏತಕ್ಕಾಗಿ ಹೋಗಲಿ.

ನಾಫಿಜ್‌ಬೇಯು ಬಂಧನದಿಂದ ತಪ್ಪಿಸಿಕೊಳ್ಳುವ ಯುಕ್ತಿಯನ್ನು ನಾನು ಸೂಚಿಸುತ್ತಿದ್ದುದರಿಂದ ಅವನ ಪ್ರಶ್ನೆಗೆ ಜವಾಬನ್ನು ಕೊಡಲು ಸಿದ್ಧಳಾಗಿರ

ಲಿಲ್ಲ. ನಿಜವಾಗಿ, ಅವನು ತಂದೆಯನ್ನು ಹೋಗಿ ನೋಡಬೇಕಾದ ಕಾರಣ ವೇನಿರಲಿಲ್ಲ. ನನ್ನ ಮನಸ್ಸಿನಲ್ಲೀನೊ ಅವನು ಹೊರಟುಹೋಗಲು ಆವು ದಾದರು ಕಾರಣ ಸಿಕ್ಕಿದರೆ ಸಾಕೆಂದಿತ್ತು.

ನಾಫಿಜ್— ಹಾಜಿರೇ, ಸ್ವಸ್ಥಳಾಗಿದ್ದೀ ತಾನೆ ? ನಾನೇನನ್ನು ಮಾಡಿದೆ ?

ನಾನು— ಬೇ ಆಫಂದೆ, ನಿಮ್ಮ ಪ್ರಶ್ನೆಯ ಅರ್ಥವು ನನಗೆ ಸ್ವಲ್ಪವೂ ತಿಳಿಯಲಿಲ್ಲ.

ನಾಫಿಜ್— ನಿನ್ನನ್ನು ಯಾರೂ ಬೈಯ್ಯಲಿಲ್ಲವಲ್ಲಾ. ನನ್ನೊಡನೆ ಏಕಾಂಗಿ ಯಾಗಿರಲು ನೀನು ಏತಕ್ಕೆ ಇಷ್ಟು ಘಾಬರಿಸಡುನೆ ? ಮೊದಲು ಹೀಗಿರ ಲಿಲ್ಲವಲ್ಲಾ.

ನಾನು ಮೌನದಿಂದಿದ್ದೆನು. ಲಜ್ಜೆಯಿಂದ ನನ್ನ ಮುಖದ ವರ್ಣವು ಪುನಃ ವ್ಯತ್ಯಾಸಹೊಂದಲು ಆರಂಭಿಸಿದುದರಿಂದ, ಮನಸ್ಸಿನಲ್ಲಿ–ಬೇಗ ಕತ್ತಲೆ ಯಾದರೆ ಸಾಕು ನಾಫಿಜ್‌ಬೇಯು ಅದನ್ನು ಕಂಡು ಹಿಡಿಯದಿರಲೆಂದು ಆಶೆಪಟ್ಟೆನು.

ನಾಫಿಜ್— (ನನ್ನ ಕಡೆ ಬಾಗಿ ನನ್ನ ಕಣ್ಣುಗಳನ್ನು ದೃಷ್ಟಿಸಿ ನೋಡುತ್ತಾ) ಯಾಕೆ, ನಾನು ನಿಜವನ್ನು ಹೇಳಲಿಲ್ಲವೇ ? ಯಾರೋ ನಿನ್ನನ್ನು ಏನೋ ಅಂದಿರಬೇಕು ಎಂದು ಎಲ್ಲಿ ಈಗ ಹೇಳು–ನೀನು ಏನು ಮಾತನ್ನು ಕೇಳಿದೆ ?

ಈ ಪ್ರಶ್ನೆಯನ್ನು ನಾಫಿಜ್‌ಬೇಯು ಕೊಂಚ ಆತುರತೆಯಿಂದಲೂ ಕಾತುರತೆಯಿಂದಲೂ ಕೇಳಿದನು. ಆದರೆ ನಾನು ಜವಾಬನ್ನು ಕೊಡಲಿಲ್ಲ. ಒಳ್ಳೇದು, ಯಾವ ರೀತಿಯಲ್ಲಿ ತಾನೆ ನಾನು ಇವನೊಡನೆ ಬೂಹಾವರೆಯ ಮತ್ತು ಅವಳ ಹಿಂದುಮುಂದಿಲ್ಲದ ಸಂಶಯದ ವಿಚಾರವನ್ನು ಹೇಳಲಿ ? ಹೇಳಲಾರೆ. ಆದರೇನು, ಬೂಹಾವರೆಯ ಸಂಶಯವು ಆಧಾರವಿಲ್ಲದುದಾಗಿತ್ತೆ? ಇದುವರೆವಿಗೇನೋ ನಾನು ಅದು ಹಾಗೆಯೇ ಆಗಿರಲೆಂದುಇಷ್ಟಪಡುತ್ತಿದ್ದೆನು ಆದರೆ ಇಂದು ಯಾರಾದರೂ ನಾಫಿಜ್ ಬೇಯನ್ನೂ ನನ್ನನ್ನೂ ನೋಡಿದ್ದರೆ, ಬೂಹಾವರೆಯ ಅಭಿಪ್ರಾಯವನ್ನು ಖಂಡಿತವಾಗಿಯೂ ಸಮರ್ಥಿಸುತ್ತಿದ್ದ ರೆಂದು ನಾನು ಒಪ್ಪಿಕೊಳ್ಳಬೇಕಾಯಿತು. ಈ ವಿಧವಾದ ಆಲೋಚನೆಯುಂ ಟಾದ ಕೂಡಲೆ ನಾನು ಕೈಯನ್ನು ಬಿಡಿಸಿಕೊಳ್ಳಲು ಯತ್ನಿಸಿದೆನು–ಆದರೆ ಪ್ರಯೋಜನವಾಗಲಿಲ್ಲ. ನಾಫಿಜ್‌ಬೇಯು ಅದನ್ನು ಘಟ್ಟಿಯಾಗಿ ಹಿಡಿದು ಕೊಂಡುಬಿಟ್ಟಿದ್ದನು

ನಾನು— (ನಿಶ್ಶಕ್ತಿಯಿಲ್ಲದೆ) ಬೇಆಫಂದೆ, ನನ್ನ ಕೈಯನ್ನು ಬಿಡಿ. ನಾನು ಇನ್ನು ಹೋಗಬೇಕು. ಖಾನಮ್ ಆಫಂದಿಯವರು ಕೇಳುತ್ತಿರಬಹುದು.

ನಾಫಿಜ್— (ಉದಾಸೀನತೆಯಿಂದ) ಕೇಳಲಿ. ಮೊದಲು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡು. ಬೂಹಾವರ್ಳು ಏನೆಂದಳು ?

ನಾಫಿಜ್‌ಬೇಯು ಈ ರೀತಿ ಪ್ರಶ್ನಿಸಿದುದಕ್ಕಾಗಿ ನನ್ನ ಮನಸ್ಸಿನಲ್ಲಿ ಬಹಳ ಸಂತೋಷ ಉಂಟಾಯಿತು. ತಕ್ಷಣವೇ ಹಿಂದುಮುಂದು ಯೋಚಿಸದೆ ಹೀಗೆಂದುಬಿಟ್ಟೆನು. "ಏನೂ ಇಲ್ಲ ಪಾಪ ಅವಳೇನೆನ್ನುವಳು."

ನಾಫಿಜ್— (ಭ್ರೂಭಂಗದಿಂದ) ಪಾಪಯೆನ್ನುವದೇತಕ್ಕೆ ? ಅವಳೇನು ಜಾಣ್ನಾಗಿಲ್ಲವೇ ?

ಇದಕ್ಕೆ ಉತ್ತರ ಕೊಡಲು ನನ್ನಿಂದಾಗದೆ, ನನ್ನ ಘಾಬರಿಯನ್ನು ಮರೆಮಾಡಿಕೊಳ್ಳಲು, "ಭೂದೇವಿಬಾಯ್ದೆರೆದು ಆದರಿಸೆನ್ನನು" ಎಂಬುದಾಗಿ ಆಶಿಸಿದೆನು.

ಆದರೆ ನಾಫಿಜ್‌ಬೇಯು ಪುನಃ ಈ ಪ್ರಶ್ನೆಯನ್ನು ಹಾಕದಿದ್ದುದರಿಂದ ಕ್ಷೇಮವುಂಟಾಯಿತು. ಒಂದು ನಿಮಿಷ ಸುಮ್ಮನಿದ್ದು ಪುನಃ ನಾನು ಕೈ ಬಿಡಿಸಿಕೊಳ್ಳುವ ಪ್ರಯತ್ನದಿಂದ ಎಳೆಯಲು ಅವನು "ನೀನು ನಿಜವಾಗಿಯೂ ಹೋಗಬೇಕಾದರೆ ಈಗಲೇ ಹೋಗುವದು ಒಳ್ಳೆಯದು" ಎಂದನು.

ಆದರೆ ನನ್ನ ಕೈಯನ್ನು ಮಾತ್ರ ಬಿಡಲಿಲ್ಲ.

ನಾನು— (ದಿಕ್ಕು ತೋಚದೆ, ನಾಫಿಜ್‌ಬೇಯ ಕಡೆ ನೋಡುತ್ತ) ನೀವು ಹೋಗಲು ಬಿಡದಿದ್ದರೆ ನಾನು ಹೇಗೆ ತಾನೆ ಹೋಗಲಿ ?

ನಮ್ಮಿಬ್ಬರ ಕಣ್ಣುಗಳೂ ಒಂದಾಗಿ ಸೇರಿದವು. ಇದಕ್ಕೆ ಜವಾಬೇ ನನ್ನು ಹೇಳುವನೋ ಎಂದು ನಾನು ಯೋಚಿಸುತ್ತಿರುವಲ್ಲಿಯೇ ನಾಫಿಜ್ ಬೇಯು ಬಾಗಿ ನನ್ನ ಅಧರಗಳನ್ನು ಚುಂಬಿಸಿಬಿಟ್ಟನು. ತಕ್ಷಣವೇ ಅಧಮ್ ಬೇಯುವರು ನಾಫಿಜ್‌ಬೇಯನ್ನು ಕೂಗುತ್ತಿರುವ ಧ್ವನಿಯು ಕೇಳಬಂತು. ನಾನು ಹಿಂತಿರುಗಿ ನೋಡಲು ಅಧಮ್‌ಬೇಯು ನಮ್ಮೆದುರಿಗೆ ಸರಿಯಾಗಿ ಮನೆಯ ಒಳಗೆ ಹೋಗುವ ಮೆಟ್ಟಲಿನ ಮೇಲೆ ನಿಂತಿದ್ದಾರೆ !

ಅಧಮ್‌ಬೇ— (ವೇಗದಿಂದ) ತಂದೆಯವರು ಬಂದುಬಿಟ್ಟರು. ಇವತ್ತೇನು ನಿನಗೆ ಊಟಮಾಡುವ ಇರಾದೆಯುಂಟೋ ಇಲ್ಲವೋ. ಕಾದುಕೊಂಡಿರುವದು ಅವರಿಗೆ ಇಷ್ಟವಿಲ್ಲವೆಂಬುದು ನಿನಗೆ ಗೊತ್ತುಂಟೋ ?

ನಾಫಿಜ್‌ಬೇಯು ಅಧಮ್‌ಬೇಯ ಕಡೆ ಹೊರಟಕೂಡಲೆ ನಾನು ಗೋಡೆಯ ಹತ್ತಿರ ಬಗ್ಗಿ ನಿಂತುಕೊಂಡು ಮುಖವನ್ನು ಕೈಗಳಿಂದ ಮುಚ್ಚಿಕೊಂಡೆನು-ಅವಮಾನದ ದೆಸೆಯಿಂದ ಮೈಯ್ಯೊಳಗಾಗಿ ಪೇರಿಸಿದರೂ ಒಂದು ಬೊಟ್ಟು ರಕ್ತವಿರಲಿಲ್ಲ. ನಾಫಿಜ್‌ಬೇಯು ಹೀಗೇಕೆ ಮಾಡಿದನು ? ಅವನಿಗೆ

ಹೇಗೆ ತಾನೆ ಇಷ್ಟು ಧೈರ್ಯವುಂಟಾಯಿತು-ಎಂದು ಮೇಲಿಂದ ಮೇಲೆ ಯೋಚನೆಯಾಗುತ್ತಿತ್ತು. ನಾನು ಕೆಲಸದವಳೇನು ಆಗಿರಲಿಲ್ಲ. ಒಂದು ವೇಳೆ ಅವನಿಗೆ ನಾನು ಮೊದಲಿನಿಂದಲೂ ಆಸ್ಪದ ಕೊಡದಿದ್ದರೆ ಇಷ್ಟು ಮುಂದುವರಿಯಲು ಅವನಿಗೆ ಧೈರ್ಯವೆಲ್ಲಿಂದ ಬರುತ್ತಿತ್ತು ? ಆದರೆ ಎರಡನೆಯ ಸಾರಿ ನನ್ನ ನಡೆನುಡಿಗಳನ್ನು ವಿಚಾರಿಸಿ ನೋಡಿಕೊಂಡದುದರಲ್ಲಿ, ಆಕ್ಷೇಪಣೆಗೆ ಗುರಿಯಾಗುವಂಥಹ ಆವ ವಿಷಯವೂ ಇರಲಿಲ್ಲ. ಕನ್ಯೆಯ ಭಯಲಜ್ಜಾದಿ ಗುಣಗಳಿಗೆ ವಿರುದ್ಧವಾಗಿ ನಾನು ಆವ ಕಾರ್ಯವನ್ನೂ ಮಾಡಿರಲಿಲ್ಲ. ಒಂದು ವೇಳೆ ನನ್ನದಾವುದಾದರೂ ಅಪರಾಧವಿದ್ದಲ್ಲಿ ಅದು ನಾಫಿಜ್‌ಬೇಯೊಡನೆ ಏಕಾಂಗಿಯಾಗಿ ಉದ್ಯಾನವನದಲ್ಲಿದ್ದುದು ಮಾತ್ರ. ಅಲ್ಲೂ ಸಹ ನನಗೆ ಬೇರೆ ದಾರಿಯಾವದೂ ಇರಲಿಲ್ಲ. ಮರ್ಯಾದೆಯ ಕಡೆ ಗಮನವಿಡಬೇಕಾದುದರಿಂದ ಅಲ್ಲಿಂದ ತಪ್ಪಿಸಿಕೊಂಡು ಬರಲಾಗಲಿಲ್ಲ. ಇಷ್ಟೆಲ್ಲಾ ಯೋಚಿಸಿದನಂತರ, ಇನ್ನು ಮೇಲೆ ನಾನು ನಾಫಿಜ್‌ಬೇಯೊಡನೆ ಅವನ ತಾಯಿಯ ಎದುರಿಗೆ ಮಾತ್ರ ಇರುವೆನೆಂದೂ, ನನ್ನ ಯಜಮಾನನ ಮಗ ನೆನಿಸಿರುವದರಿಂದ ಅವನಿಗೆ ನನ್ನ ಮೇಲಿರುವ ಸ್ವತಂತ್ರವನ್ನು ಅವನು ತಪ್ಪುರೀತಿಯಲ್ಲಿ ಉಪಯೋಗಿಸಿ ವ್ಯರ್ಥವಾದ ಕಷ್ಟವನ್ನು ಅನುಭವಿಸದಿರಲೆಂದೂ, ಮತ್ತಾವ ಸಮಯದಲ್ಲೂ ಅವನೊಡನೆ ಸೇರಬಾರದೆಂದೂ ಮನಸ್ಸಿನಲ್ಲಿ ಘಟ್ಟಿಯಾಗಿ ಪ್ರತಿಜ್ಞೆ ಮಾಡಿಕೊಂಡೆನು. ತತ್ಕಾರಣ, ನಾನು ಅಂದು ಬೆಳಿಗ್ಗೆ ಮುಂಜಾನೆಯೆದ್ದು, ಕುಳಿತುಕೊಳ್ಳುವ ಕೊಠಡಿಗೆ ಹೋಗಿ, ನಸಿರುಲ್ಲಾ ಪಾಷಾರವರೂ ಅವರ ಗಂಡುಮಕ್ಕಳೂ ಹರಮ್‌ಸರಾಕ್ಕೆ ಬರುವದಕ್ಕೆ ಮೊದಲೇ ಖಾನಮ್ ಆಫಂದಿಯವರ ಹಿಂದೆ ಮರೆಯಾಗಿ ಕುಳಿತುಕೊಂಡೆನು. ವಲಿಯಾ ಖಾನಮ್‌ಳು ತನ್ನ ಕಿರೀಮಗಳಿಗಾಗಿ ಬಟ್ಟೆಯನ್ನು ಹೊಲಿಯುತ್ತಿದ್ದಳು. ನನಗೂ ಕೈಹಾಕಲು ಹೇಳಲು ಅವಳ ಹತ್ತಿರ ಹೋಗಿ ಕುಳಿತುಕೊಂಡು ಹೊಲಿಯಲುದ್ಯುಕ್ತಳಾದೆನು. ಆದರೆ ಮನಸ್ಸಿನೊಳಗೆ, ಒಂದುವೇಳೆ ನಾಫಿಜ್‌ಬೇಯು ಬಂದರೆ ಅವನನ್ನು ಹೇಗೆ ತಾನೆ ನೋಡಲಿ ಎಂದು ಅಂದುಕೊಳ್ಳುತ್ತಿದ್ದೆನು. ಒಂದು ಘಳಿಗೆಯ ಮೇಲೆ ವರಾಂಡದಿಂದ ಮಾತಿನ ಧ್ವನಿಯು ಕೇಳಬಂತು.

ಮಹೇದಾಖಾನಮ್— (ರೇಶ್ಮೆಯ ಗೋಜನ್ನು ಬಿಡಿಬಿಡಿಸುತ್ತಾ) ತಂದೆಯವರು ಊಟಮಾಡಿಯಾಯಿತೆಂದು ಈಗ ಕಾಣುತ್ತದೆ. ಎಲ್ಲರೂ ಬೇಗ ಬಂದುಬಿಟ್ಟರೆ ಎಷ್ಟು ಚೆನ್ನಾಗಿರುವದು ! ನಾನು ಅರಿಯುವರೊಡನೆ (ತುರ್ಕಿಯ

*ಹರಮ್‌ಸರಾ = ಜನಾನ (ಸ್ತ್ರೀಯರಿರುವ ಸ್ಥಳ)

ವರಲ್ಲಿ ಮನೆಯ ಹಿರಿಯ ಮಗನನ್ನು ತಮ್ಮ ಮತ್ತು ತಂಗಿಯರು ಇದೇ ಹೆಸರಿನಿಂದ ಕರೆಯುವರು)ಔದತ್‌ನನ್ನು ಯೂರೋಪ ಪಾಠಶಾಲೆಗೆ ಕಳುಹಿಸ ಬೇಕೆಂದು ಕೇಳಲಪೇಕ್ಷಿಸುತ್ತೇನೆ. ಅವರು ಹೇಗಾದರೂ ಅವನನ್ನು ಪ್ಯಾರಿಸ್‌ಗೆ ಕಳುಹಿಸಲು ತಂದೆಯವರನ್ನು ಒಪ್ಪಿಸಿದರೆ ಸಾಕು.

ಖಾನಮ್ ಆಫಂದಿ—ನನಗೆ ಅದು ಇಷ್ಟವಿಲ್ಲ. ನನಗಾದರೋ, ಇಷ್ಟು ಚಿಕ್ಕ ವಯಸ್ಸಿನ ಮಕ್ಕಳನ್ನು ಮುಸಲ್ಮಾನೇತರ ದೇಶಗಳಿಗೆ ಖಂಡಿತವಾಗಿಯೂ ಕಳುಹಿಸಬಾರದೆಂದು. ಏಕೆಂದರೆ ನಮ್ಮ ಮತದ ಪರಿಚಯವೇ ಉಂಟಾಗು ವುದಿಲ್ಲ. ನನ್ನ ಮಗನು ಇಲ್ಲೇ ಇರಬೇಕೆಂದು ಅಧಮ್‌ನ ಆಲೋಚನೆಯಾದರೆ ನೀನು ಅಡ್ಡಿ ಮಾಡಕೂಡದು.

ವಹೀದಾ ಖಾನಮ್‌ಳ ಉತ್ತರವನ್ನು ನಾನು ಕೇಳಲಿಲ್ಲ. ಆ ಸಮಯ ದಲ್ಲಿ ನಾನು ಕಿವಿಗಳನ್ನು ನೆಟ್ಟಗೆ ಮಾಡಿಕೊಂಡು, ಬಾಗಿಲ ಕಡೆ ಆರೋ ಬರುವ ಸದ್ದಾದುದರಿಂದ ಆ ಶಬ್ದವನ್ನು ತಿಳಿದುಕೊಳ್ಳಲು ನನ್ನ ಶ್ರೋತ್ರೇಂ ದಿಯಾ ಶಕ್ತಿಯನ್ನೆಲ್ಲಾ ವ್ಯಯ ಮಾಡುತ್ತಿದ್ದೆನು. ಖಾನಮ್‌ಆಫಂದಿಯವರ ಆಲೋಚನೆಯನ್ನು ವಹೀದಳು ಒಪ್ಪಿಕೊಂಡಳೆಂಬುದು ಆಮೇಲೆ ನನಗೆ ತಿಳಿ ಯಿತು. ಇಷ್ಟರೊಳಗೆ ಬಾಗಿಲು ತೆರೆಯಲ್ಪಟ್ಟಿತು-ನಸಿರುಲ್ಲಾ ಪಾಷಾರವರೂ ವಹೀದಾಖಾನಮ್‌ಳ ಪತಿ ಅಲಿಬೇಯೂ ಬಂದರು. ಕೊಂಚ ಆಶ್ಚರ್ಯದಿಂದ ಅಲ್ಲಿ ಇಲ್ಲಿ ನೋಡಿ-

ನಸಿರುಲ್ಲಾ ಪಾಷಾ—ಆ ಅಧಮ್‌ನೂ ನಾಫಿಜ್‌ನೂ ಎಲ್ಲಿ! ನಮ್ಮ ಬಳಿಯಿಂದ ಹೊರಟು ಬಂದು ಆಗಲೇ ಹದಿನೈದು ನಿಮಿಷಗಳಾಗಿರಬಹುದು.

ವಲಿಯಾಖಾನಮ್—(ಮಾವನವರ ಕೈಗೆ ಮುದ್ದಿಟ್ಟು, ತನ್ನ ಕೆನ್ನೆಗಳನ್ನು ಮುದ್ದಿಸಿಕೊಳ್ಳಲು ಅವರ ಕಡೆ ತಿರುಗಿಸಿ) ಇದುವರೆವಿಗೂ ಇಲ್ಲಿ ಬರಲಿಲ್ಲ. ಈ ಹೊತ್ತಿನಲ್ಲಿ ಎಲ್ಲಿ ಹೋಗಿರುವರೋ ಗೊತ್ತಿಲ್ಲ. ಅವರಿಬ್ಬರಿಲ್ಲದಿದ್ದರೆ ಸಂಜೆಯ ಹೊತ್ತು ಬಹಳ ಬೇಜಾರಿನಿಂದ ತಳ್ಳುವುದು.

ಅಲಿಬೇ—(ನಕ್ಕು) ಎಷ್ಟು ಮನೋಹರವಾದ ಸ್ವಭಾವ! ಅದೋ ಅಧಮ್‌ಬೇ ಬಂದು ಬಿಟ್ಟರು. ಓಹೋ ಸ್ವಾಮಿ, ಶೀಘ್ರವಾಗಿ ಬನ್ನಿ. ನಿಮ್ಮ ಪತ್ನಿ ಯವರಿಗೆ ನೀವಿಲ್ಲದಿದ್ದರೆ ನಮ್ಮ ಸಂಗಡ ಹೊತ್ತು ಹೋಗುವುದಿಲ್ಲವಂತೆ. ಈಗ ತಾನೆ ಪೇಚಾಡುತ್ತಿದ್ದರು.

ಅಧಮ್‌ಬೇಯವರನ್ನು ನೋಡಲು ನನಗೆ ಕೊಂಚ ನಾಚಿಕೆಯೇ ಆಯಿತು. ಅವರು, ನನ್ನನ್ನೂ ನಾಫಿಜ್‌ಬೇಯನ್ನೂ ಒಂದು ವೇಳೆ ವರಾಂಡ ದಿಂದ ನೋಡಿದರೋ ಅಥವ ಇಲ್ಲವೊ ಎಂಬುದು ನನಗೆ ಸರಿಯಾಗಿ ಗೊತ್ತ

ಲಿಲ್ಲ. ಮುಸಲ ನೋಡಿದ್ದರಾದರೂ ಈ ಹೊತ್ತು ಅವರಿಗೆ ಅದರ ಯೋಚನೆ ಯಿರಲಿಲ್ಲವೆಂಬುದು ತಿಳಿಯಿತು. ಏಕೆಂದರೆ ನಾನು ಅವರನ್ನು ಕಂಡು ಮರ್ಯಾದಾರ್ಥವಾಗಿ ಎದ್ದು ನಿಲ್ಲಲು ನನ್ನ ಭುಜದ ಮೇಲೆ ಕೈಯಿಟ್ಟು, ಕುಳಿತುಕೊಳ್ಳಲು ಬಹಳವಾಗಿ ಹೇಳಿದರು.

ಅಧಮ್‌ಬೇ—(ಅಲಿಬೇಯುವರೊಡನೆ, ನಗುತ್ತಾ) ಸಹೋದರರೇ ನೀವು ತಪ್ಪು ತಿಳಿದುಕೊಂಡಿದ್ದೀರಿ. ನನ್ನ ಇರುವಿಕೆಯಾಗಲೀ ಇಲ್ಲದಿರುವಿಕೆಯಾಗಲೀ ಇಲ್ಲಿ ಏನೂ ಲೆಕ್ಕಿಸಲ್ಪಡುವುದಿಲ್ಲ. ಖಾನಮ್‌ಳು ಹೇಳಿದ್ದು, ನಾಫಿಜ್‌ಬೇ ತಡ ಮಾಡಿದುದಕ್ಕಾಗಿ ಇರಬಹುದು. ನಾಫಿಜ್‌ಬೇಯ ವಿನಾ ಮತ್ತ್ಯಾರೊಡನೆಯೂ ಅವಳಿಗೆ ಸರಿ ಹೋಗುವುದಿಲ್ಲ.

ವಲಿಯಾಖಾನಮ್—(ನಾಚಿಕೆಗೊಂಡು, ನಗುತ್ತಾ) ನಿಮ್ಮ ಇಲ್ಲದಿರುವಿಕೆಯನ್ನು ಜನರು ತಿಳಿದು ಕೊಳ್ಳುವಂತೆ ನೀವು ಪ್ರಯತ್ನ ಸಹ ಮಾಡುವುದಿಲ್ಲ. ನಾಫಿಜ್‌ಬೇಯು ನಮ್ಮ ಜೊತೆಯಲ್ಲಿರುವವರಿಗೂ ತನ್ನ ಮಾತಿನಿಂದ ಎಲ್ಲರನ್ನೂ ಸಂತೋಷಪಡಿಸುತ್ತಾನೆ ಮತ್ತು ಹೊತ್ತು ಹೋಗಿಸುತ್ತಾನೆ.

ಅಧಮ್‌ಬೇ—ನಾಫಿಜ್‌ಬೇಯಲ್ಲಿ ಈ ಗುಣವಿರುವುದು ನನಗೆ ಬಹಳ ಸಂತೋಷ. ಇಲ್ಲವಾದರೆ ನನ್ನೊಡನಂತೂ ಏನೂ ಸಾಧ್ಯವಿಲ್ಲ. ಈ ವಿಚಾರದಲ್ಲಿ ನಾನು ಎಷ್ಟೇ ಮಾಡಿದರೂ ಅವನ ಸಮಕ್ಕೆ ಬರಲಾರೆ.

ವಲಿಯಾಖಾನಮ್‌ಳು ತನ್ನ ಪತಿಯೊಡನೆ ಯಾವಾಗಲೂ ಕೊಂಚ ನಾಚುತ್ತಿದ್ದುದರಿಂದ ಈ ಮಾತಿಗೆ ಪ್ರತ್ಯುತ್ತರ ಕೊಡಲಿಲ್ಲ. ಮತ್ತೆ ಬೇರೆ ವಿಷಯಗಳೂ ಆಡಲ್ಪಟ್ಟವು. ಆದರೆ ನಾನು ಅವುಗಳಲ್ಲಿ ಭಾಗಿಯಾಗಲಿಲ್ಲ-ನನ್ನ ಧ್ಯಾನವು ನಾಫಿಜ್‌ಬೇಯ ಬರುವಿಕೆಯ ಕಡೆಯೇ ಇತ್ತು. ಆದರೆ ಅವನು ಬಂದಾಗ ಅವನ ಮುಖದಲ್ಲಿ ಅತಿ ಚಿಂತೆಯು ಕಾಣುತ್ತಿತ್ತು. ಅವನ ಈ ಅತ್ಯಂತ ಚಿಂತಾಸ್ಥಿತಿಯನ್ನು ಕಂಡು, ಎಂದಿನಂತೆ ನನ್ನ ಸ್ವಭಾವಕ್ಕನುಸಾರವಾಗಿ ಕೆನ್ನೆಗಳು ಲಜ್ಜೆಯಿಂದ ಕೆಂಪೇರುತ್ತಿರುವುದೂ ನನಗೆ ಮರೆತು ಹೋಯಿತು. ಅವನು ನೆಟ್ಟಗೆ ತನ್ನ ತಾಯಿಯ ಬಳಿ ಹೋಗಿ ಅವರ ಕೆನ್ನೆಗೆ ಮುದ್ದಿಟ್ಟು ಮೌನದಿಂದ ತಂದೆಯ ಸಮೀಪದಲ್ಲಿ ಬಂದು ನಿಂತನು.

ನಾಫಿಜ್‌ಬೇ—(ಪತ್ರಿಕೆಗಳ ಮೇಲೆ ಕೈಯಿಟ್ಟು) ತಂದೆಯವರು ಇವುಗಳನ್ನು ಓದಿಯಾಯಿತೋ ಅಥವಾ ನಾನು ಓದಿ ಹೇಳಲೋ ?

ನಸಿರುಲ್ಲಾಪಾಷಾರವರು ಎಲ್ಲರ ಕಡೆಯೂ ಆಶ್ಚರ್ಯದಿಂದ ನೋಡಿದರು. ನಾಫಿಜ್‌ಬೇಯ ಬಾಯಿನಿಂದ ಈ ವಿಧವಾದ ಮಾತುಗಳು ಸ್ವಾಭಾವಿಕವಲ್ಲವಾಗಿದ್ದವು. ನಗುತ್ತಾ ಇಂತೆಂದರು.

"ಬಹಳ ಉಪಕಾರವಾಯಿತು. ಆದರೆ ಇದರ ಅವಶ್ಯಕತೆ ಏನು ?

ಹುಡುಗಿಯರ ಬಳಿ ಹೋಗು. ಅವರು ನಿನಗೋಸ್ಕರ ಪ್ರಾಣ ಬಿಡುತ್ತಿದ್ದಾರೆ."

ನಾಫಿಜ್‌ಬೇಯು ನಮ್ಮ ಕಡೆ ನೋಡಿ ಮತ್ತೆ ಕುಳಿತುಕೊಂಡು ಬಿಟ್ಟನು. ಅವನ ಮುಖದಲ್ಲಿ ಅತಿ ಚಿಂತೆಯು ಕಾಣುತ್ತಿತ್ತು. ನನ್ನಿಂದ ಮುಖವನ್ನು ಮರೆ ಮಾಡುವಂತಿತ್ತು.

ನಾಫಿಜ ಬೇ— (ಬಲಾತ್ಕಾರವಾಗಿ ನಕ್ಕು) ಅಫಂದೀಮ್, (ತುರ್ಕಿಯರಲ್ಲಿ ದೊಡ್ಡ ದೊಡ್ಡ ಮನೆತನದವರಲ್ಲಿ ಮಗನು ತಂದೆಯನ್ನು ಈ ವಿಧವಾಗಿ ಕರೆಯುವನು) ಈವತ್ತು ನನ್ನ ಮನಸ್ಸು ಧೃಢಸ್ಥೈರ್ಯಗಳಿಂದ ಕೆಲಸ ಮಾಡಲು ಇಷ್ಟಪಡುತ್ತಿದೆ. ತಂದೆಯವರೇ ನನ್ನ ಈ ಸಂಕಲ್ಪಕ್ಕೆ ಭಂಗ ಬರುವಂಥಾ ಯಾವ ಕೆಲಸವನ್ನೂ ಹೇಳಬೇಡಿ. ಈ ಸ್ಥಿತಿಯು ಇನ್ನೆಷ್ಟು ಹೊತ್ತು ಇದ್ದೀತೆಂಬುದು ಏನು ಗೊತ್ತು ? ನಿನ್ನೆ ನೀವು ಕೆಲವು ಲೆಖ್ಖಾಚಾರಗಳನ್ನು ನೋಡಬೇಕೆಂಬ ವಿಚಾರ ಮಾಡುತ್ತಿದ್ದಿರಿ. ಅಪ್ಪಣೆಯಾದರೆ ನಾನು ನೋಡಲೇ ?

ನಸಿರುಲ್ಲಾಪಾಷಾ— ಹಾಗಾದರೆ ನೀನು ಈ ಕೆಲಸದಲ್ಲೇ ಮನಸ್ಸು ಮಾಡಿರುವುದಾದರೆ ನಿನ್ನ ಧ್ಯಾನವನ್ನು ಇವತ್ತೆಲ್ಲ ನನ್ನ ಕಡೆಯೇ ಇಡುವುದು ಉತ್ತಮ. ಹೋಗಿ ಪುಸ್ತಕಗಳನ್ನು ತೆಗೆದುಕೊಂಡು ಬಾ. ನಾನು ಓದುವ ಕೋಣೆಯಲ್ಲಿದೆ.

ನಾಫಿಜ್‌ಬೇಯು ಪುಸ್ತಕಗಳನ್ನು ತೆಗೆದುಕೊಂಡು ಬಂದು ಬಹಳ ಶ್ರದ್ಧೆಯಿಂದ ಓದಲಾರಂಭಿಸಿದನು. ಮುಗಿಸಿದ ನಂತರ ನಿಂತುಕೊಂಡು ಗಡಿಯಾರವನ್ನು ನೋಡಿ ಹೀಗೆಂದನು.

"ಹತ್ತು ಹೊಡೆಯಿತು. ಈಗ ನಾನು ಕೊಂಚ ಹೋಗಿ, ನಿದ್ದೆ ಬರುವವರೆಗೂ ಘಟ್ಟದ ಅಂಚಿನಲ್ಲಿ ಸುತ್ತಾಡುವೆನು."

ಅನಂತರ ತಂದೆ ತಾಯಿಗಳಿಗೆ ಸಲಾಂ ಮಾಡಿ, ತಾಯಿಗೆ ಮುದ್ದಿಟ್ಟು, ನಮ್ಮ ಕಡೆ ಸಲಾಂ ಸೂಚಿಸಿ, ಹೊರಗೆ ಹೊರಟು ಹೋದನು.

ವಲಿಯಾಖಾನಮ್— ಇವತ್ತು ನಾಫಿಜ್‌ಬೇಗೆ ಏನಾಗಿರುವುದು ? ಮುಖವನ್ನೇತಕ್ಕೆ ಚಪ್ಪನಾಗಿ ಮಾಡಿಕೊಂಡಿದ್ದಾನೆ ?

ನಸಿರುಲ್ಲಾಪಾಷಾರವರ ಕಡೆ ನೋಡಿ, ವಲಿಯಾಖಾನಮ್‌ಳು ಈ ಪ್ರಶ್ನೆ ಹಾಕಿದುದರಿಂದ ಅವರು ನಕ್ಕು ತಲೆಯಲ್ಲಾಡಿಸಿ ಹೀಗೆಂದರು:—

"ನನಗೊಂದೂ ಗೊತ್ತಿಲ್ಲ. ನಾಫಿಜ್‌ಬೇಯು ಇವತ್ತು ಇಷ್ಟು ಬುದ್ಧಿ ತಿಳುವಳಿಕೆಯು ಪೆಚ್ಚ ಮಾಡಿದುದಕ್ಕಾಗಿ, ನಾನು ಕಾರಣನೆಂದು ಎಂದಿಗೂ ತಿಳಿಯಬೇಡಿ. ಅವನು ನನ್ನೊಡನೆ ಎಷ್ಟು ಪ್ರೀತಿಯಿಂದ ಮಾತನಾಡಿದ

ನೆಂಬುದನ್ನು ನೀವು ನೋಡಿದಿರಿ ಇದರ ಚೋರನೆಲ್ಲಾದರಿದ್ದರೆ ನಿಮ್ಮಲ್ಲೇ ಇರಬಹುದು. ನಿಮ್ಮೊಳಗೇ ಹುಡುಕಿ".

ವಲಿಯಾಖಾನಮ್—(ನಗುತ್ತಾ) ನಾನಂತೂ ಎಂದಿಗೂ ಅಲ್ಲ ನಾಫಿಜ್ ಬೇಯು ನನಗೆ ಬೇಕಾದವನಾದುವದರಿಂದ, ಅವನ ಮನಸ್ಸನ್ನು ನೋಯಿಸುವದಾಗಲೀ, ಅವನಿಂದ ಮನನೋಯುವದಾಗಲೀ ನನಗೆ ಯೋಚನೆಯೇ ಇಲ್ಲ.

ಅಥಮ್ ಬೇ— (ನಕ್ಕು) ಅಹಾ, ನಾಫಿಜ್ ಬೇಯುದಾದರೋ ವಿಚಿತ್ರವಾದ ಅದೃಷ್ಟ. ನಾನು ಸಹ ಜನರಿಗೆ ಇಷ್ಟೇ ಬೇಕಾದವನಾಗಿರುತ್ತಿದ್ದರೆ!

ಈಗ ನಾನು ಹೊರಡಲು ಎದ್ದೆನು. ದಿನವೆಲ್ಲಾ ಕೆಲಸಮಾಡಿ ಆಯಾಸಗೊಂಡಿದ್ದುದರಿಂದ, ಮಲಗುವುದಕ್ಕೆ ಮೊದಲು ಕೊಠಡಿಯಲ್ಲಿ ಹೋಗಿ ಕೊಂಚಹೊತ್ತು ಸುಮ್ಮನೆ ಕುಳಿತಿರಲು ಮನಸ್ಸಾಯಿತು. ನಸಿರುಲ್ಲಾ ಪಾಷಾರವರಿಗೆ ಹೇಳಿ ಬರಲುಹೋಗಿ, ಅವರ ಅಂಗಿಯ ತುದಿಗೆ ಮುದ್ದಿಟ್ಟೆನು. ಅವರು ಬಹಳ ಪ್ರೀತಿಯಿಂದ ನನ್ನ ತಲೆಯನ್ನು ಸವರಿ, ನಗುತ್ತಾ ಹೀಗೆಂದರು :-

"ಮಗಳೇ, ನಿನಗೆ ಎಷ್ಟು ಒಳ್ಳೆಯ ವರ್ಣ ಬರುತ್ತಿರುವದು. ಗುಲಾಬಿಯ ತರಹ ಕೆಂಪಾಗುತ್ತಿದ್ದೀ."

ನನಗೆ ಇನ್ನೂ ಹೆಚ್ಚು ಲಜ್ಜೆಯುಂಟಾಗಿ ನನ್ನ ಮುಖದ ಘಾಬರಿಯು ಅವರಿಗೆ ತಿಳಿಯದಿರಲೆಂದು, ಮುಖವನ್ನು ತಿರುಗಿಸಿಕೊಂಡೆನು. ಆ ಸಮಯದಲ್ಲಿ ಅಥಮ್ ಬೇಯುವರ ಕಣ್ಣುಗಳು ನನ್ನ ಕಣ್ಣುಗಳೂ ಸೇರಿದವು. ಅವರು ನನ್ನನ್ನು ದುರದುರನೆ ನೋಡುತ್ತಿದ್ದಂತೆ ಕಂಡಿತು. ಆದರೆ ಅವರೇನನ್ನೂ ಹೇಳಲಿಲ್ಲ. ನಾನು ಇದೇ ಕಾತುರತೆಯ ಮತ್ತು ಕಳವಳದ ಸ್ಥಿತಿಯಲ್ಲಿ ಅಲ್ಲಿಂದ ಹೊರಟುಹೋದೆನು.

ಮೂರನೆಯ ಪರಿಚ್ಛೇದ

ಮಾರನೆಯದಿನ ನಾಫಿಜ್ ಬೇಯು ಹರಮ್ ಸರಾಕ್ಕೆ ಮುಖವನ್ನೇ ಇಕ್ಕಲಿಲ್ಲ. ಊರೊಳಗೆ ಅವನಿಗೆ ಊಟವಿತ್ತೆಂದು ಅಥಮ್ ಬೇಯುವರಿಂದ ತಿಳಿದುಬಂತು. ಅನಂತರ ಕೆಲವು ದಿನಗಳತನಕ ಅವನು ಪ್ರತಿನಿತ್ಯವೂ ಸಂಜೆಯುಹೊತ್ತು ಹೊರಗೇಕಳೆಯಲು ಆರಂಭಿಸಿದನು. ಮನೆಯಲ್ಲಿ ಊಟ

ಮಾಡಿದರೂ, ತಕ್ಷಣವೇ ವೈರಾಕ್ಕೆ ಹೊರಟುಹೋಗುತ್ತಿದ್ದನು. ಹಗಲು ಹೊತ್ತೆಲ್ಲಾ ಸೈನ್ಯದೊಂದಿಗಿರುತ್ತಿದ್ದನು. ಇದನ್ನು ನೋಡಿ ಅವನ ಸಹೋದರಿಯರಿಗೆ ಬಹಳ ವ್ಯಥೆಯುಂಟಾಗುತ್ತಿತ್ತು. ವಲಿಯಾಖಾನಮ್‌ಳು ನಗುನಗುತ್ತಲೇ ಹೀಗೆಂದು ಹೇಳುತ್ತಿದ್ದಳು, "ಅನಾತೂಲಿಯವೆಂದರೆ ನನಗೆ ಆಗುವುದಿಲ್ಲ. ಅಲ್ಲಿದ್ದುದರ ಕಾರಣ ನಾಫಿಜ್‌ಬೇಗೂ, ನನ್ನ ಪತಿಯಂತೆಯೇ ಅತಿ ಸ್ಥಿರ ಗಂಭೀರಭಾವವು ಬಂದುಬಿಟ್ಟದೆ." ವಹೀದಾಖಾನಮ್‌ಳು ನಾಫಿಜ್‌ಬೇಯನ್ನು ಮನೆಯಲ್ಲಿರಲೆಂದು ತರಹ ತರಹವಾಗಿ ಸ್ತುತಿಮಾಡುತ್ತಿದ್ದಳು. ಆದರೆ ಪ್ರಯೋಜನವಾಗಲಿಲ್ಲ, ಕೆಲವು ದಿನಗಳವರೆಗೆ ಇದೇ ಸ್ಥಿತಿಯಾಗಿತ್ತು. ಕೊನೆಗೆ ನಾಫಿಜ್‌ಬೇಯ ವಿಷಯವಾಗಿ ಚಿತ್ರವಿಚಿತ್ರವಾದ ಸಂಗತಿಗಳು ಹೊರಬೀಳಲಾರಂಭಿಸಿದವು. ಒಂದು ದಿನ ಅಥವರ್‌ಬೇಯು ತಮ್ಮ ತಾಯಿಯೊಡನೆ "ನಾಫಿಜ್‌ಬೇಯು ಈಚೆಗೆ ದುಸ್ಸಹವಾಸದಲ್ಲಿ ಬಿದ್ದಿದ್ದಾನೆ. ಅದರಿಂದವನಿಗೆ ಕೆಡಕುಂಟಾಗುವದು" ಎಂದು ಹೇಳುತ್ತಿದ್ದರೆಂದು ಖಂಜೆಯಿಂದ ತಿಳಿಯಬಂತು. ಇನ್ನು ಕೆಲವುದಿನಗಳ ನಂತರ, ನಾಫಿಜ್‌ಬೇಯು ಜೂಜಾಡಲಾರಂಭಿಸಿ ಸಾಲಗಾರನಾಗಿದ್ದಾನೆಂದು ತಿಳಿಯಿತು. ಈ ವಿಷಯ ನನಗೆ ಷಾಯಿಸ್ತಳಿಂದ ಗೊತ್ತಾಯಿತು. ಅವಳು, ಅಥವರ್‌ಬೇ ಮತ್ತು ಅಲಿಬೇಯವರು ಈ ವಿಚಾರ ಮಾತನಾಡುತ್ತಿದ್ದುದನ್ನು ಕೇಳಿದಳಂತೆ, ನನಗಂತೂ ಈ ಸಮಾಚಾರಗಳನ್ನು ಕೇಳಿಕೇಳಿ ಬಹಳ ದುಃಖವುಂಟಾಗಿ, ಎಲ್ಲಾದರೂ ನಸಿರುಲ್ಲಾಪಾಷಾರವರ ಕಿವಿಗೆ ಈ ಸಂಗತಿಗಳು ಬಿದ್ದರೇನಾಗುವದೋ ಎಂಬ ಶಂಕೆಯಾಗುತ್ತಿತ್ತು.

ಒಂದು ದಿನ ಮಧ್ಯಾಹ್ನ ನಾನು ಕಿಟಕಿಯಬಳಿ ಕುಳಿತಿರುವಾಗ ನಸಿರುಲ್ಲಾಪಾಷಾರವರ ದೋಣಿಯು ಎದುರಿಗೆ ಕಾಣಿಸಿತು. ನನ್ನ ಪಕ್ಕದಲ್ಲಿ ನಿಂತಿದ್ದ ಮರಿಯಮ್‌ಳು ಕತ್ತೆತ್ತಿ ನೋಡಿ ಹೀಗೆಂದಳು.

"ನಾಫಿಜ್‌ಬೇಯು ಬರುತ್ತಿರುವನೇನು ? ಅವನು ಬರುತ್ತಲೇ ತಮ್ಮ ಬಳಿ ಕಳುಹಿಸಬೇಕೆಂದು ನಸಿರುಲ್ಲಾಪಾಷಾರವರ ಆಜ್ಞೆಯಾಗಿದೆ. ಏನು ಹೇಳುವರೋ ಗೊತ್ತಿಲ್ಲ".

ನಾನು— ಪಾಷಾಸಾಹೇಬರು ಎಲ್ಲಿರುವರು ?

ಮರಿಯಮ್–ವಿಹಾರಾಂಗಣದಲ್ಲಿರುವರು. ಬಲುಬಲಿಯನೊಡನೆ ನಾಫಿಜ್‌ಬೇಯನ್ನು ಕರೆತರಲು ಹೇಳಿದ್ದಾರು.

ಅವತ್ತು ನಾಫಿಜ್‌ಬೇಯ ವಿಷಯವಾಗಿ ಮತ್ತೇನೂ ಹೆಚ್ಚು ಸಂಗತಿ ತಿಳಿಯಲಿಲ್ಲ. ಅವನಿಗೂ ಅವನ ತಂದೆಗೂ ನಡೆದ ಮಾತುಕಥೆಯ ವಿಚಾರ

ಹರಮ್‌ನವರಲ್ಲಿ ಯಾರಿಗೂ ಏನೂ ಗೊತ್ತಾಗಲಿಲ್ಲ. ಸಂಜೆ ಅಥವ್‌ಬೇಯವರು ಎಂದಿಗಿಂತ ಹೆಚ್ಚು ಆಯಾಸಗೊಂಡಿದ್ದಂತೆ ಕಂಡರು. ಮಾಮೂಲಿನಂತೆ ಬರೆಯುವವನ್ನು ಬಿಟ್ಟು, ಕಿಟಕಿಯ ಬಳಿ ಪುಸ್ತಕವನ್ನಿಟ್ಟುಕೊಂಡು ಕುಳಿತುಕೊಂಡರು. ಬೆಳಕು ಬಹು ದೂರವಾಗಿದ್ದುದರಿಂದ ಓದುವದು ಸಾಧ್ಯವಾಗಿ ಕಾಣಬರುತ್ತಿರಲಿಲ್ಲ. ನಸಿರುಲ್ಲಾ ಪಾಷಾರವರು ಅತಿ ಮೌನದಿಂದ ಪತ್ರಿಕಾವಲೋಕನ ಮಾಡುತ್ತಾ ನಮ್ಮ ಕಡೆ ತಿರಿಗಿಯೂ ನೋಡಲಿಲ್ಲ ಇವರಿಬ್ಬರೇ ಅಲ್ಲ, ಆವತ್ತಿನ ದಿನ ಎಲ್ಲ ಮಾತಿಲ್ಲದೆ ಚಿಂತಾಗ್ರಸ್ಥರಾಗಿದ್ದರು. ವಲಿಯಾಖಾನಮ್‌ಳು ಎಂದಿನಂತೆ ಮಕ್ಕಳೊಡನೆ ಆಟಪಾಠದಲ್ಲಿ ತೊಡಗಿರದೆ, ಹೊತ್ತುಕಳೆಯುವದಕ್ಕೋಸ್ಕರ, ಮನಸ್ಸಿಲ್ಲದಿದ್ದರೂ ಸಿತಾರನ್ನು ಮೀಟುತ್ತಾ ಕುಳಿತಿದ್ದಳು. ಖಾನಮ್‌ಆಫಂದಿಯವರು ಮಾತ್ರ ನಿತ್ಯ ಪದ್ಧತಿಗನುಸಾರವಾಗಿ ಸಂಜೆ ತಮ್ಮ ಪೀಠವನ್ನಲಂಕರಿಸಿದ್ದರು. ಈ ಪೀಠದ ಮೇಲೆ ಬಹು ಮೂಲ್ಯವಾದ ತುಬಟವು ಹೊದ್ದಿಸಲ್ಪಟ್ಟಿದ್ದುದರಿಂದ ಸಿಂಹಾಸನದಂತೆ ಅದು ರಾಜಿಸುತ್ತಿತ್ತು. ಖಾನಮ್‌ರ ದೃಷ್ಟಿಯು ನೆಲದಮೇಲೆ ಬಿದ್ದಿತ್ತು. ಒಂದು ಕೈಯಲ್ಲಿ ಜಪಸರ, ಮತ್ತೊಂದು ಕೈಯಲ್ಲಿ ಹೊತ್ತಿಸಿದ ಸಿಗರೇಟು. ನಾನು ಅವರ ಹತ್ತಿರ, ದೀಪದ ಮುಂದೆ ಕುಳಿತುಕೊಂಡು ಅವರ ಮಗಳಿಗೆ ಕಳುಹಿಸಬೇಕೆಂದಿದ್ದ ಮಂಚದ ಹೊದ್ದಿಕೆಯ ಮೇಲೆ ಕಲಾಬತ್ತಿನ ಹೂಕೆಲಸ ಮಾಡುತ್ತಿದ್ದೆನು. ಹೀಗೆ ಕುಳಿತಿರುವಾಗ ಅವರು ಅಥವ್‌ಬೇಯ ಕಡೆ ವ್ಯಸನಕರವಾದ ದೃಷ್ಟಿಯನ್ನು ಬೀರುತ್ತಿದ್ದುದನ್ನು ಕಂಡೆನು. ನಾನು ಕೂಡ ಆಕಡೆ ನೋಡಲು, ಅಥವ್‌ಬೇಯವರ ಅನುತಾಪಯುತ ದೃಷ್ಟಿಯು ನನ್ನ ಮೇಲೆ ಬಿದ್ದಿರುವದನ್ನೂ ನೋಡಿದೆನು. ಈ ವಿಷಯವನ್ನು ಇನ್ನೂ ಯೋಚಿಸುವದರಲ್ಲೇ ತೊಟ್ಟಿಯಕಡೆಯಿಂದ ಕಹಕಹ ಎಂಬ ನಗುವ ಶಬ್ದವು ಕೇಳಿಬಂತು. ಕೊಂಚ ಹೊತ್ತಿನಮೇಲೆ ನಾಫಿಜ್‌ಬೇಯು ನಗುತ್ತಾ ಒಳಗೆ ಬಂದನು. ಪದ್ಧತಿಯಂತೆ ತಾಯಿಯ ಕೈಗೂ ಕೆನ್ನೆಗೂ ಮುದ್ದಿಟ್ಟು, ತಂದೆಯ ಸಮೀಪದಲ್ಲಿ ಹೋಗಿ ಕುಳಿತುಕೊಂಡು, ಪತ್ರಿಕೆಯನ್ನೋದಲಾರಂಭಿಸಿದನು. ನಾಲ್ಕು ನಿಮಿಷಗಳ ತರುವಾಯ ನಸಿರುಲ್ಲಾ ಪಾಷಾರವರೊಡನೆ ಆತ್ಮಸ್ಥೈರ್ಯದಿಂದ ಹೀಗೆಂದು ಹೇಳಿದನು.

"ನಮ್ಮ ಸೈನ್ಯದ ಕೆಲವು ಹುದ್ದೇದಾರರು ಯಮನ್‌ನಲ್ಲಿರುವ ಸೈನ್ಯವನ್ನು ನೋಡಿಕೊಳ್ಳಲು ಕಳುಹಿಸಲ್ಪಡುವರು. ಅವರುಗಳು ಇಲ್ಲಿಗೆಬಂದು ಇನ್ನೂ ಐದು ತಿಂಗಳು ಮಾತ್ರವಾಗಿದೆ. ನ್ಯಾಯವಾಗಿ ನೋಡಿದರೆ ಅವರನ್ನು ಇನ್ನೂ ಕೆಲವು ದಿನಗಳು ಇಲ್ಲಿಯೇ ಇರಿಸಬೇಕಾಗಿತ್ತು.

ನಸಿರುಲ್ಲಾ ಪಾಷಾ— (ನಾಫಿಜ್‌ಬೇಯ ಕಡೆ ಅಸಡ್ಡೆಯಿಂದ ನೋಡುತ್ತಾ) ನಿನಗೇಕೆ ಭಯ ? ನೀನು ಸ್ವಾಫಿನಲ್ಲಿ ಇರುವೆಯಲ್ಲವೇ ? ನಿನ್ನನ್ನು ಯಾರೂ ಕಳುಹಿಸಲಾರರು.

ನಾಫಿಜ್‌ಬೇ— (ಮೆಲ್ಲನೆ) ಸರಿ, ಆದರೆ ತಂದೆಯವರೇ, ದಯವಿಟ್ಟು, ನೀವು ಪ್ರಯತ್ನ ಮಾಡಿದರೆ ನಾನು ಹೋಗಲು ಸಾಧ್ಯ.

ನಸಿರುಲ್ಲಾ ಪಾಷಾ—(ದಿಟ್ಟಿಸಿ ನೋಡಿ) ಏನು, ನಿನ್ನ ಉದ್ದೇಶವಿದೇನೋ ?

ವಲಿಯಾಖಾನಮ್— (ಸಿತಾರನ್ನು ಬಿಟ್ಟು) ಆಗುವುದಿಲ್ಲ. ಇದೇನನ್ನು ಯೋಚಿಸಿದೆ ? ಅಮ್ಮಾವರೇ–ಭೇಲಿಫಂದೆ–ವಹೀದಾ–ನೀವುಗಳೂ ನನ್ನ ಸಹಾಯಕ್ಕೆ ಬನ್ನಿ. ಎರಡು ತಿಂಗಳಂತೂ ಮುಖದಪ್ಪನಾಗಿ ಮಾಡಿಕೊಂಡು ಕುಳಿತಿದ್ದನು. ಈಗ, ಇಲ್ಲಿಂದ ಹೊರಡುವ ಇರಾದೆ ! ಎಷ್ಟು ಚೆನ್ನಾಗಿದೆ !

ಖಾನಮ್ ಅಫಂದಿ-ಇದೆಂದಿಗೂ ಆಗಲಾರದು. ನೀನೆಂದಿಗೂ ಹೋಗಲಾರೆ. ಯಾತಕ್ಕೆ, ಮಗನೆ–ಯಮನ್‌ನ ಹವಾ ಎಲ್ಲಾ ಸೂಬೆಗಳಿಗಿಂತ ಕೆಟ್ಟದೆಂದು ನಿನಗೆ ಚೆನ್ನಾಗಿ ಗೊತ್ತಿದೆ. ಆದರಲ್ಲೂ ಅಲ್ಲಿಯ ಬೇಸಿಗೆ ಬಹಳ ಕಠಿಣವಾದದ್ದು. ಕಾಲರಾ ಉಪದ್ರವು ವಿಶೇಷ ಹರಡುತ್ತದೆ. ನಿನಗೆ ಇಲ್ಲಿಂದ ಹೋಗಲು ಏತಕ್ಕೆ ಇಷ್ಟು ಆಶೆ ?

ನಸಿರುಲ್ಲಾ ಪಾಷಾ—ಇಲ್ಲಿನ ಜೂಜಾಟಕ್ಕಿಂತ ಅಲ್ಲಿಗೆ ಹೋಗುವದು ಎಷ್ಟಾದರೂ ಮೇಲು. ಆದರೆ ಅವನ ಇಚ್ಛೆಗೆ ವಿರುದ್ಧವಾಗಿ ಅವನನ್ನು ಇಲ್ಲಿಂದ ಕಳುಹಿಸಲು ನಾನು ಇಷ್ಟಪಡುವದಿಲ್ಲ. ಯಾವದು ಉತ್ತಮವೆಂಬುವನ್ನು ಅವನೇ ತೀರ್ಮಾನಮಾಡಲಿ.

ನಾನು ನಾಫಿಜ್‌ಬೇಯ ಕಡೆ ನೋಡಿದೆನು. ಅವನ ಒಂದು ಕೈ ಮುಖದ ಮುಂದಿದ್ದುದರಿಂದ ಅವರ ಸ್ಥಿತಿ ಗೊತ್ತಾಗಲಿಲ್ಲ. ವಲಿಯಾಖಾನಮ್ಳ ಹಾಗೆ ನಾನೂ, ಅವನು ಹೋಗದಿರಲೆಂದು ಇಷ್ಟಪಡುತ್ತಿದ್ದೆನು. ಆದರೆ ನಾನಾವ ಗಣನೆ ? ನನ್ನಿಷ್ಟವನ್ನು ಕೇಳುವವರಾರಿದ್ದರು ?

ಖಾನಮ್ ಅಫಂದಿಯವರು ಎದ್ದು ಮೇಜಿನ ಬಳಿ ಹೋಗಿ, ನಸಿರುಲ್ಲಾ ಪಾಷಾರವರೊಡನೆ ಕಂಪಿತ ಧ್ವನಿಯಿಂದ ಹೀಗೆ ಹೇಳಿದರು :–

"ನಾಫಿಜ್‌ಬೇಯು ಪುನಃ ಇಲ್ಲಿಂದ ಹೊರಟು ಹೋಗುವದು ನನಗೆ ಇಷ್ಟವಿಲ್ಲ. ಅವನು ಅನಾತೂಲಿಯದಲ್ಲಿರುವವರೆಗೂ ಒಂದು ದಿನವಾದರೂ ನಾನು ಶಾಂತಿಯಿಂದ ಉಸಿರುತೆಗೆದುಕೊಳ್ಳಲಿಲ್ಲ. ಆ ಸಮಯವೆಲ್ಲಾ ಆತಂಕ, ಚಿಂತೆಯಲ್ಲಿ ಕಳೆದುಹೋಯಿತು. ಈಗ ಯಮನ್‌ಗೆ ಹೋದರೆ ನಾನು ಹೇಗೆ ಜೀವಿಸಲಿ ? ನನ್ನ ಸ್ಥಿತಿ ಏನಾಗುವದು ? ಪಾಪ, ಅವನನ್ನು

ಇಷ್ಟು ಹಿಂಸೆಪಡಿಸಬೇಡಿ. ತಪ್ಪನ್ನೇನೋ ಅವನು ಮಾಡಿರಬಹುದು. ಆದರೆ ಇಂಥಾ ಶಿಕ್ಷೆಗರ್ಹನಾಗುವಷ್ಟು ದೊಡ್ಡ ತಪ್ಪೇನೂ ಅಲ್ಲ. ಎಂದರೆ- ಅವನಿಗಾಗಿ ಮೃತ್ಯುವು ಕಾದಿರುವಂಥಾ ಸ್ಥಳಕ್ಕೆ ಕಳುಹಿಸುವಷ್ಟೇನೂ ದೊಡ್ಡ ತಪ್ಪಲ್ಲ."

ನಾಫಿಜ್‌ಬೇ— ನಾನೇ ಹೋಗಲು ಇಷ್ಟಪಡುತ್ತೇನೆ. ತಂದೆಯವರಿಗೂ ಅದಕ್ಕೂ ಏನೂ ಸಂಬಂಧವಿಲ್ಲ. ಅವರು ಪ್ರಯತ್ನಮಾಡಿ ಈ ಜಾಗವನ್ನು ನನಗೆ ಕೊಡಿಸಲೆಂಬುದು ನನ್ನ ಅಭಿಲಾಷೆಯಾಗಿತ್ತು. (ತಂದೆಯ ಕಡೆ ತಿರುಗಿ) ಅಫಂದೀವರ್, ತಾವು ಪ್ರಯತ್ನ ಮಾಡುವಿರಾ ?

ನಸಿರುಲ್ಲಾ ಪಾಷಾ— (ಮೆಲ್ಲನೆ) ಇಲ್ಲ, ನಿಮ್ಮ ಅಮ್ಮನ ಎದುರಿಗೆ ನಾನು ನಿನ್ನ ಹಿತಚಿಂತಕನಾಗಲು ಇಚ್ಛಿಸುವದಿಲ್ಲ. ಭಯಪಡತಕ್ಕ ವಿಷಯವೇನೂ ಅಲ್ಲವೆಂಬುದರಲ್ಲಿ ಸಂಶಯವಿಲ್ಲ. ಆದರೂ ಒಂದುವೇಳೆ ಯಮನ್‌ನ ಹವೆ ನಿನಗೆ ಒಗ್ಗದಿದ್ದರೆ ಆ ಕಷ್ಟನಿಷ್ಟುರಗಳಿಗೆಲ್ಲಾ ನಾನು ಜವಾಬ್ದಾರನಾಗ ಬೇಕು.

ನಾಫಿಜ್‌ಬೇ— (ಎದ್ದು ತಾಯಿಯ ಭುಜದಮೇಲೆ ಬಗ್ಗಿ ನಿಂತು-ಆಹಾ, ಆ ಸಮಯದಲ್ಲಿ ಎಷ್ಟು ಸುಂದರನಾಗಿ ಕಾಣುತ್ತಿದ್ದನು!) ಪ್ರಿಯ ಮಾತೆಯೇ, ಇಲ್ಲಿ ಭಯಕ್ಕೆ ಕಾರಣವೇನಿರುವದು ? ನನ್ನ ಸ್ನೇಹಿತರು ಮೂರು ಜನರು ಅಲ್ಲಿಂದ ವಾಪಸು ಬಂದು ಇನ್ನೂ ಕೆಲವು ದಿನಗಳು ಮಾತ್ರ ವಾದವು. ಅವರಿಗೆ ಬೇಸಿಗೆಯಲ್ಲಿ ಯಾವ ವಿಧವಾದ ತೊಂದರೆಯೂ ಆಗ ಲಿಲ್ಲ. ಅಮ್ಮಾವರೇ ನನ್ನನ್ನು ಕಳುಹಿಸಿಕೊಡಿ-ನಾಲ್ಕು ತಿಂಗಳು ಮಾತ್ರ ಹೇಳಿ ಪತ್ರಿಕೆಯಲ್ಲಿ ಅದರ ವಿಚಾರವಾಗಿ ಬಂದಿರುವದನ್ನು ಓದಿಹೇಳಲೇ ?

ಖಾನಮ್ ಅಫಂದಿ— ನಾನೊಂದನ್ನೂ ಕೇಳುವದಿಲ್ಲ. ನೀನಿಲ್ಲೇ ಇರು. ಇನ್ನು ನೀನು ಒಂದು ಸ್ಥಳದಲ್ಲಿ ಹತ್ತಿಕೊಂಡಿರಬೇಕು. ಸೈನ್ಯದಲ್ಲಿನ ಉತ್ತಮ ಸ್ಥಾನವು ಈ ರೀತಿ ಅವಿವೇಕದಿಂದ ಕಳೆದು ಹೋಗುವದು ನನಗಿಷ್ಟವಿಲ್ಲ.

ನಸಿರುಲ್ಲಾ ಪಾಷಾರವರು ಮುಗುಳ್ನಗೆ ನಗುತ್ತಾ ಹೀಗೆಂದರು :-

"ನಾಫಿಜ್, ಇನ್ನು ಬಲಾತ್ಕಾರಮಾಡುವದು ವ್ಯರ್ಥ. ನಿಮ್ಮ ಅಮ್ಮನು ಎಂದಿಗೂ ಒಪ್ಪುವದಿಲ್ಲ. ನಿನ್ನ ಖುಷಾಮದಿ, ಪ್ರೀತಿಯನ್ನು ಬಾಕಿ ಯಾವದಾದರೊಂದು ಸಮಯಕ್ಕೆ ಆವಶ್ಯಕವಾದಾಗ ಇಟ್ಟುಕೊ. ಈಗ ಯಮನ್‌ಗೆ ಹೋಗುವ ಇರಾದೆಯನ್ನು ಬಿಟ್ಟುಬಿಡು. ಇಲ್ಲಿಂದ ಹೋಗುವವರೆಗೂ ನಿನ್ನ ಈ ಬೇನೆ ಬಿಡುವದಿಲ್ಲವೆಂದು ನಾನು ತಿಳಿದಿರಲಿಲ್ಲ. ನಿನಗೆ, ಬೇರೆ ಇನ್ನಾವ ಔಷಧಿಯೂ ಇಲ್ಲದಿರುವದು ನನಗೆ ಆಶ್ಚರ್ಯವಾಗಿದೆ.

ಇಲ್ಲಿಂದ ಓಡಿ ಹೋಗುವದರಲ್ಲಿ, ನಿನ್ನ ಕ್ಷೇಮವನ್ನು ಮಾತ್ರ ನೋಡಿ ಕೊಳ್ಳುತ್ತಿದ್ದೀ".

ಖಾನವ್‌ಆಫಂದೆ—(ಕೊಂಚ ಸಿಟ್ಟಿನಿಂದ) ಬೇನೆ ಎಂಥಾದ್ದು ?

ಇದನ್ನು ಕೇಳಿ ನಾಫಿಜ್‌ಬೇಯ ಮುಖವು ಕೆಂಪಾಯಿತು. ಖಾನವ್ ಆಫಂದಿಯವರು ಅಥವ್‌ಬೇಯ ಕಡೆ ಕೊಂಚ ಆಶ್ಚರ್ಯದಿಂದನೋಡಿದರು.

ನಸಿರುಲ್ಲಾಪಾಷಾ—(ಅಸಡ್ಡೆಯಿಂದ) ಇದೇ,-ವೈರಾದಲ್ಲಿ ಮನೆಮನೆಗೂ ಅಲೆಯುವ ಬೇನೆಯೇ. ವಲಿಯುಳು ಇದಕ್ಕಾಗಿಯೆ ಅಷ್ಟು ವ್ಯಸನವಾಗಿ ದ್ದುದು. ನಾಫಿಜ್, ಹೋಗು ಷತರಂಜನ್ನು ತೆಗೆದುಕೊಂಡು ಬಾ ಒಂದಾ ಟವಾಡೋಣ.

ಷತರಂಜ್ (ಚತುರಂಗವು) ಅಥವ್‌ಬೇಯ ಕುರ್ಚಿಯ ಕೆಳಗೆ ಇಟ್ಟಿತ್ತು. ಅದನ್ನು ತೆಗೆದುಕೊಳ್ಳಲು ನಾಫಿಜ್‌ಬೇಯು ಅಣ್ಣನ ಹತ್ತಿರ ಹೋಗಿ ಅವನೊಡನೆ ಏನನ್ನೋ ಮೆಲ್ಲಗೆ ಹೇಳಿದನು. ಅವರು ಪ್ರತ್ಯುತ್ತರ ವಾಗಿ ಕೊಂಚ ಭುಜವನ್ನು ಮಾತ್ರ ಅಲ್ಲಾಡಿಸಿದರು. ನಾಫಿಜ್‌ಬೇಯು ಸ್ವಲ್ಪ ಹೊತ್ತು ಕಿಟಕಿಯ ಹತ್ತಿರ ನಿಂತಿದ್ದು, ಆಮೇಲೆ ಬೆಳಕಿಗೆ ಬರಲು ಬಹಳ ಉದಾಸೀನನಾಗಿಯೂ ಖಿನ್ನನಾಗಿಯೂ ಕಾಣುತ್ತಿದ್ದನು.

ನಾಫಿಜ್‌ಬೇ— ವಲಿಯಾ, ಬಾ ಏನಾದರೂ ಒಂದು ಸೊಗಸಾದ ಹಾಡನ್ನು ನುಡಿಸು ವಹೀದಾ, ನೀನು ವಾದ್ಯದ ಜತೆ ಹಾಡು. ನನ್ನನ್ನು ಇಲ್ಲಿರಲು ಬಲಾತ್ಕಾರ ಮಾಡಿದುದಕ್ಕಾಗಿ ಈಗ ನನ್ನ ಮನಸ್ಸಂತೋಷಪಡಿಸಲೇಬೇಕು.

ಹೀಗೆಂದು ಹೇಳುತ್ತಾ ತಾನು ಮಾಡುತ್ತಿರುವದು ತನಗೇ ತಿಳಿಯ ದಂತೆ ಎಲ್ಲೋ ಜ್ಞಾನವಿಟ್ಟು ಚತುರಂಗದ ಕಾಯನ್ನು ಈಚೆಗೆ ತೆಗೆದಿಡುತ್ತಾ ಹೋದನು. ಅಂತು ಚತುರಂಗದಾಟವು ಪ್ರಾರಂಭವಾಯಿತು. ಆಕಡೆ ಅವನ ಕ್ಕಂದಿರು ಗಾನವನ್ನೂ ಆರಂಭಿಸಿದರು. ಹದಿನೈದು ನಿಮಿಷಗಳು ಕಳೆದವು. ನಾನು ಮನಸ್ಸಿನಲ್ಲೇ "ನಾಫಿಜ್‌ಬೇಗೆ ಏನು ತಾನೆ ಕಷ್ಟವಿರಬಹುದು—ಮನೆ ಯನ್ನು ಬಿಟ್ಟು ಹೋಗಲು ಆಶೆಪಡುತ್ತಿರುವನಲ್ಲಾ," ಎಂದು ಯೋಚಿಸು ತ್ತಿದ್ದೆನು ಅದಕ್ಕೆ ಸರಿಯಾದ ಉತ್ತರವಿನ್ನೂ ನನಗೆ ತೋರಿಬರುವದರಲ್ಲೇ ನಸಿರುಲ್ಲಾಪಾಷಾರವರು ಷತರಂಜನ್ನು ಆಕಡೆತಳ್ಳಿಬಿಟ್ಟು, ತಮ್ಮ ಮಗಳೊ ಡನೆ "ಇವತ್ತು ಎಲ್ಲರಿಗೂ ಏನಾಗಿರುವದು ? ನೀವಿಬ್ಬರೂ ಮನಸ್ಸಿಲ್ಲದೆ ಹಾಡುತ್ತಿರುವಿರಿ. ನಾಫಿಜ್‌ಬೇ ಸ್ವಾರಸ್ಯವಿಲ್ಲದೇ ಆಡುತ್ತಿರುವನು. ಇದು ಪ್ರಯೋಜನವಿಲ್ಲ ನಿಮ್ಮಿಬ್ಬರಲ್ಲಿ ಒಬ್ಬರು ಹೋಗಿ ಲೌಂಡಿಯರನ್ನು ಕರೆಯಿರಿ.

ಷತ್‌ರಂಜ್ —ಚತುರಂಗ

ಬಂದು ಕುಣಿಯಲಿ. ಹಾಜಿರೇ, ಹೋಗಮ್ಮಾ ಉಡುಪನ್ನು ಬದಲಾಯಿಸಿ ಕೊಂಡು ಬಾ, ನಿನ್ನ ಹಾಗೆ ಇಲ್ಲಿ ಯಾರೂ ಕುಣಿಯಲಾರರು." ಎಂದರು.

ನಾನು ಅಪ್ಪಣೆಯನ್ನಂಗೀಕರಿಸಿ ಹೊರಡಲು, ನಾಫೆಜ್ ಬೇಯು ಷತರಂಜನ್ನು ತೆಗೆದುಕೊಂಡು ನನ್ನ ಸಮೀಪದಲ್ಲೇ ಬಂದನು. ನಮ್ಮಿರ್ವರ ಕಣ್ಣುಗಳೂ ಒಂದಾದವು. ಅವನ ದೃಷ್ಟಿಯು ಭಾವವೇಂತಿತ್ತೆಂದರೆ ಲಜ್ಜೆ ಯಿಂದ ನನ್ನ ಮುಖವು ಹಿಂದಿನ ಪ್ರಕಾರ ವಿವರ್ಣವಾಗಿ ಹೋಯಿತು. ನಾನು ಬೇಗ ಬೇಗನೆ ಕೊಠಡಿಯಿಂದ ಹೊರಗೆ ಹೊರಟು ಹೋದೆನು. ನಾಫೆಜ್‌ಬೇಯೂ ನನ್ನ ಹಿಂದೆಯೇ ಬಂದು, ನಾನು ತೊಟ್ಟಿಗೆಗೆ ಹೋದಾಗ ನನ್ನ ಹತ್ತಿರವೇ ನಿಂತಿದ್ದನು.

ನಾಫೆಜ್‌ಬೇ—ಬೂಹಾನರ್, ಲೌಂಡಿಯರೊಡನೆ ಹೇಳು-ತಂದೆಯವರು ಇವತ್ತು ನರ್ತನವನ್ನು ನೋಡಲಪೇಕ್ಷಿಸುತ್ತಾರೆಂದು.

ಆಮೇಲೆ ನನ್ನ ಕಡೆ ನೋಡಿ, ಕೊಂಚ ತಡೆತಡೆದು "ಏನು-ನಿನಗೂ ಕುಣಿಯಲು ಇಚ್ಛೆಯೋ" ಎಂದನು.

ನಾನು—ಹೌದು,ಸ್ವಾಮಿ ನೀವು ಪಾಷಾರವರ ಹುಕುಮನ್ನು ಕೇಳಲಿಲ್ಲವೇ?

ನಾಫೆಜ ಬೇ—ನೀನು ಕುಣಿದುದ್ದನ್ನು ನಾನು ಎಂದೂ ನೋಡಲಿಲ್ಲ. ಆದರೆ ಬಹಳ ಮನರಂಜಕವಾಗಿಯೂ, ನಾಗರೀಕವಾಗಿಯೂ ಕುಣಿಯುತ್ತಿ ಎಂದೂ ಹಿಸಬಲ್ಲೆ. ಅವರಲ್ಲೂ ಯಾರಿಗೋಸ್ಕರವೆಂದರೆ—

ಇಷ್ಟು ಹೇಳಿ ಥಟ್ಟನೆ ಸುಮ್ಮನಾಗಿ ಹೋಗಿ, ನನ್ನ ಕಡೆ ಅತಿ ವ್ಯಸನ ದಿಂದ ನೋಡತೊಡಗಿದನು.

ನಾಫೆಜ್‌ಬೇ—(ಸ್ವಲ್ಪಹೊತ್ತು ಬಿಟ್ಟು) ನಿನಗೆ ಮದುವೆಯಾಗಿ, ನೀನು ಇಲ್ಲಿಂದ ಹೊರಟು ಹೋಗುವವರೆಗೂ ನಾನು ಮನೆಗೆ ಬರಬಾರದೆಂದು ದೇವ ರಲ್ಲಿ ಪ್ರಾರ್ಥಿಸುತ್ತಿದ್ದೆನು-ಅಮ್ಮನು ಇನ್ನು ನಿನ್ನನ್ನು ಇಲ್ಲಿ ಹೆಚ್ಚು ದಿನಗಳು ಇಟ್ಟುಕೊಂಡಿರುವುದಿಲ್ಲ. ನೀನು ಬೇಗನೆ ವಿವಾಹ ಮಾಡಿಕೊ. ಅಯ್ಯೊ, ನಿನ್ನ ಮದುವೆಯಾಗುವವರೆಗೂ ಅನಾತೂಲಿಯದಲ್ಲೇ ಇದ್ದುಬಿಟ್ಟಿದ್ದರೆ ಈಗ ಮಾಡಿರುವ ಅಕಾರ್ಯವನ್ನು ಮಾಡುತ್ತಿರಲಿಲ್ಲ.

ಅವನ ಮಾತುಗಳು ಒಂದು ವೇಳೆ ನಾನು ತಿಳಿಯಲಿಚ್ಛಿಸದಿರುವಂಥಾ ಅರ್ಥವುಳ್ಳವಾಗಿರಬಹುದೆಂದು ನಾನು ಅವನ್ನು ಸರಿಯಾಗಿ ಗಮನಿಸಿ ಕೇಳ ಲಿಲ್ಲ. ಬೇಗನೇ ನಾನೇ ಮಾತನಾಡಲಾರಂಭಿಸಿದೆನು.

ನಾನು—ನೀವು ಹೋಗದಿರುವುದು ನನಗೆ ಬಹಳ ಸಂತೋಷ.

ಇಷ್ಟು ಹೇಳಿದ ಕೂಡಲೇ ನಾಫಿಜ್‌ಬೇಯ ಮುಖದಲ್ಲಿ ಹರ್ಷ ಚಿಹ್ನೆಗಳು ಮೂಡಿದವು. ನಾನು ಲಜ್ಜೆಯಿಂದ ದೃಷ್ಟಿಯನ್ನು ಕೆಳಗೆ ಮಾಡಿದೆನು.

ನಾಫಿಜ್‌ಬೇ—ನಿಜವನ್ನು ಹೇಳುತ್ತಿರುವಿಯಾ? ಹಾಗಾದರೆ ನಾನು ಹೊರಟುಹೋದ ಮೇಲೆ ನನ್ನ ಸ್ಮರಣೆ ನಿನಗೆ ಬರುವದೇ?

ನಾನು—(ದಿಕ್ಕುತೋಚದೆ) ನಾವೆಲ್ಲರೂ ಅಗತ್ಯವಾಗಿ ನಿಮ್ಮನ್ನು ಜ್ಞಾಪಿಸಿಕೊಳ್ಳುವೆವು. ನೀವು ಇಲ್ಲಿಯೂ ಯಾವಾಗಲೂ ಹೊರಗೇ ಇರುತ್ತಿದ್ದುದರಿಂದ, ವಲಿಯಾಖಾನಮ್‌ಳು ಬಹಳ ದುಃಖಿತಳಾಗಿರುತ್ತಿದ್ದಳು.

ನಾಫಿಜ್‌ಬೇ—(ನನ್ನ ಕಡೆ ಬಾಗಿಕೊಂಡು) ನೀನು? ನಾನು ಹೆಚ್ಚಾಗಿ ಮನೆಯಲ್ಲೇ ಇರಲೆಂದು ನೀನೂ ಇಷ್ಟ ಪಡುತ್ತಿದ್ದಿಯಾ? ನಾನು ಏತಕ್ಕಾಗಿ ಇಷ್ಟು ಹೊರಗೇ ಇರುತ್ತಿದ್ದನೆಂದು ನೀನೆಂದಾದರೂ ಮನಸ್ಸಿನಲ್ಲೇ ಪ್ರಶ್ನಿಸಿಕೊಳ್ಳುತ್ತಿದ್ದಿಯಾ?

ನಾನು ಉತ್ತರ ಕೊಡುವುದರಲ್ಲೇ ಡ್ರಾಯಿಂಗ್ ರೂಮಿನ ಬಾಗಿಲು ತೆರೆಯಲ್ಪಟ್ಟು ಅಥವಬ್‌ಬೇಯವರು ಬಂದು ನಿಂತರು. ನಾಫಿಜ್‌ಬೇಯು ಧಿಕ್ಕಾರದಿಂದ ಅವರ ಕಡೆ ನೋಡಿದನು. ಇಬ್ಬರ ಕೋಪಯುತವಾದ ನೇತ್ರಗಳು ಸೇರಿದವು. ಆದರೆ ಒಬ್ಬರೂ ಮಾತನಾಡಲಿಲ್ಲ. ಅಥವಬ್‌ಬೇಯು ಮೇಲಕ್ಕೆ ಹೊರಟು ಹೋದರು. ನಾಫಿಜ್‌ಬೇಯು ಡ್ರಾಯಿಂಗ್ ರೂಮಿಗೆ ವಾಪಸು ಹೊರಟು ಹೋದನು. ನಾನು ಅಥವಬ್‌ಬೇಯವರ ಹಿಂದೆ ಹಿಂದೆಯೇ ಹೋಗಿ ನನ್ನ ಕೊಠಡಿಯೊಳಕ್ಕೆ ಹೋದೆನು. ನರ್ತನ ಪ್ರಾರಂಭವಾಗಲು ಮೊದಲೇ ನಾನು ಹೋಗಿ ಸೇರಬೇಕಾದರೆ ಇನ್ನು ಉಡುಪು ಬದಲಾಯಿಸುವಷ್ಟು ಮಾತ್ರ ಹೊತ್ತು ಇತ್ತು. ಅದರವನ್ನು ಗಮನಿಸದೆಯೇ ನಾನು ಒಂದು ಕುರ್ಚಿಯ ಮೇಲೆ ಕುಳಿತುಕೊಂಡು ನಾಫಿಜ್‌ಬೇಯು ಆಡಿದ ಮಾತಿನ ವಿಚಾರ ಯೋಚಿಸಲಾರಂಭಿಸಿದನು. ನನ್ನ ಮನಸ್ಸಿನಲ್ಲುಂಟಾದ ಮೊದಲನೆಯ ಸಂಶಯವನ್ನು ಹೇಗೋ ಬಹಳ ಆಲೋಚನೆ, ವಿಮರ್ಶೆ ಮಾಡಿ ದೂರಗೊಳಿಸಿದೆನು. ನಾಫಿಜ್‌ಬೇಯು ನನ್ನನ್ನು ನೋಡಿ ಆನಂದಗೊಳ್ಳುತ್ತಿದ್ದನೆಂಬುವನ್ನು ಇನ್ನವೆನ್ನುವುದಕ್ಕಾಗುತ್ತಿರಲಿಲ್ಲ. ಆದರೆ ಇದು ಎರಡು ದಿನಗಳ ವಿಚಾರವೆಂದೂ ಆಮೇಲೆ ಮಾಯವಾಗುವುದೆಂದೂ ನಂಬಿಕೆಯು ಬಲವಾಗಿ ಬೇರೂರಿತ್ತು.

'ನಾವು ಯಾರು?' ಎಂಬುವನ್ನೇ ಯೋಚಿಸುತ್ತಿದ್ದೆನು. 'ನಾಫಿಜ್‌ಬೇಯು ದಾದಿಯ ಮೊಮ್ಮಗಳು.' ಆದುದರಿಂದಲೇ, ಅವನು ನನ್ನನ್ನು ಪ್ರೀತಿಸುತ್ತಾನೆಂಬ ನಂಬುಗೆಯುಂಟಾಗುತ್ತಿರಲಿಲ್ಲ. ಅದೂ ಅಲ್ಲದೆ, ಅವನ

ಮಾತುಕಥೆ ನೋಟ ನುಡಿಗಳಿಂದ ಆವನ ಮನಸ್ಸಿನಲ್ಲೇನಿತ್ತೆಂಬುದು ಸ್ಪಷ್ಟವಾಗಿ ತಿಳಿಯುತ್ತಿರಲಿಲ್ಲ.

ನಾಫಿಜ್‌ಬೇಯು ನನ್ನ ಭಾವವನ್ನು ಹೀಗೆ ಊಹಿಸಿಕೊಂಡು, ಇನ್ನು ನನ್ನ ಮನಸ್ಸನ್ನು ವಿಮರ್ಶೆ ಮಾಡತೊಡಗಿದೆನು. ಅಂದಿನ ದಿನವೆಲ್ಲಾ, ಮರಿಯಮ್‌ಳು ಹೇಳಿದಂತೆ, ನಾಫಿಜ್‌ಬೇಗೂ ನಸಿರುಲ್ಲಾ ಪಾಷಾರವರಿಗೂ ನಡೆದ ಮಾತಿನ ಫಲವೇನಾಗಿರಬಹುದೆಂಬ ಚಿಂತೆಯಲ್ಲೇ ಇದ್ದೆನು. ಅವನು ಯಮನ್‌ಗೆ ಹೋಗುವನೆಂಬ ಸುದ್ದಿಯನ್ನು ಸಂಜೆ ಕೇಳಿ, ನನ್ನ ಎದೆಯ ಮೇಲೆ ಒಂದು ಮಣ ತೂಕದ ಕಲ್ಲು ಹೇರಿದಂತಾಗಿ, ಅದರ ಭಾರದಿಂದ ಹೃದಯವು ಜಜ್ಜಿ ಹೋದಂತಾಯಿತು. ನಾಫಿಜ್‌ಬೇಯ ಬದಲು ಅಥಮ್‌ಬೇಯು ಹೋಗುವ ವಿಚಾರವನ್ನು ಕೇಳಿದ್ದರೆ ಹೀಗಾಗುತ್ತಿತ್ತೇ? ಎಂದು ಮನಸ್ಸಿನಲ್ಲಿ ಪ್ರಶ್ನಿಸಿದೆನು. ಅಥಮ್‌ಬೇಯವರು ಯಾವುದಾದರೊಂದು ಅಪಾಯಕರವಾದ, ದೂರದೇಶದ ಪ್ರಯಾಣವನ್ನು ಇಪ್ಪತ್ತು ವರ್ಷಗಳು ಮಾಡಬೇಕಾಗಿದ್ದಲ್ಲಿ ಉಂಟಾಗುತ್ತಿದ್ದ ಸ್ಥಿತಿಯು, ನಾಫಿಜ್‌ಬೇಯು ನಾಲ್ಕು ತಿಂಗಳು ಮಾತ್ರ ಹೋಗುವುದನ್ನು ಕೇಳಿ ಆಯಿತು. ಇನ್ನು ಸಂಶಯಕ್ಕೆ ಆಸ್ಪದವೇ ಇರಲಿಲ್ಲ. ನಾಫಿಜ್‌ಬೇಯು ನನ್ನನ್ನು ಹೇಗಾದರೂ ಕಾಣಲಿ–ನಾನಂತೂ ಅವನಿಗೆ ತನು ಮನ ಸೋತು ಹೋಗಿದ್ದೆನು. ಮತ್ತು ಎಂದೆಂದಿಗೂ ಹೀಗೆಯೇ ಇರುವಂತೆ ಕಾಣುತ್ತಿದ್ದೆನು. ಈ ಸಂಗತಿಯು ನಿರ್ಧಾರವಾದ ಕೂಡಲೇ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ತಡೆಯಿಲ್ಲದೆ ಅತ್ತೆನು.

ನನಗೆ ಇದು ಲಜ್ಜಾಕರವಾದ ವಿಷಯವಾಗಿತ್ತು. ಖಾನಮ್ ಆಫಂದಿಯವರೂ ದಾಸಿಯರೂ ಮೋಹಸಂಬಂಧವಾದ ಮಾತುಗಳನ್ನಾಡುತ್ತಿದ್ದಾಗ, ಪುರುಷನಲ್ಲಿ ಮೋಹಗೊಳ್ಳುವಂಥಹ ಸ್ತ್ರೀಗೆ ಕೊಂಚವೂ ಮಾನಮರ್ಯಾದೆಗಳಿರುವುದಿಲ್ಲವೆಂತಲೂ, ವಿವಾಹಿತಳಾದ ಸ್ತ್ರೀಯು ಕೂಡ ತನ್ನ ಪತಿಯೊಡನೆ ಪ್ರೇಮವನ್ನು ತೋರ್ಪಡಿಸಿದರೆ ಸರಿಯವರಲ್ಲಿ ಅಗೌರವಿತಳಾಗುವಳೆಂದೂ ಹೇಳುತ್ತಿದ್ದನ್ನು ಕೇಳಿದ್ದೆನು. ಹೀಗಿರುವಲ್ಲಿ ಅವಿವಾಹಿತಳಾದ ಒಬ್ಬ ಪ್ರಾಯದ ಹುಡುಗಿಯ ಈ ಸ್ಥಿತಿಯ ವಿಚಾರ ಏನು ಹೇಳಿಯಾರು! ನಾನು ತಪ್ಪು ತಿಳಿದುಕೊಂಡಿದ್ದೇನೆಂದೂ, ನಾಫಿಜ್‌ಬೇಯೊಡನೆ ನನಗೆ ಕೃತಜ್ಞ ಭಾವ ವಿನಾ ಮತ್ತಾವ ಭಾವನೆಯೂ ಇಲ್ಲವೆಂದೂ ಮತ್ತೊಂದು ಸಲ ಮನಸ್ಸಿಗೆ ತಿಳಿಯಹೇಳಿದೆನು–ಆದರೆ ಈ ವಿಷಯವು ಈಗ ಎಲ್ಲೆಯನ್ನು ಮೀರಿ ಪ್ರಬಲಿಸಿಕೊಂಡಿದ್ದುದರಿಂದ ನನ್ನ ಮನಸ್ಸು ಕೇಳಲಿಲ್ಲ–ನನ್ನ ಯತ್ನವೆಲ್ಲಾ

ನಿಷ್ಫಲವಾಯಿತು. ಅಯ್ಯೋ! ನಾನು ಪ್ರೇಮವನ್ನು ಯಾವ ರೀತಿಯಲ್ಲಿ ಪರಿಗ್ರಹಿಸಿದೆನು! ಈ ಕಟ್ಟ ಮೋಹಕ್ಕಾಗಿ ನನ್ನ ಹೃದಯದ ಕವಾಟವನ್ನು ತೆರೆದಿದ್ದಾಗ, ಒಂದು ಘಳಿಗೆಯು ಒಳಗೆ ಅದು ನನ್ನನ್ನು ಸಂಪೂರ್ಣವಾಗಿ ಆಕ್ರಮಣ ಮಾಡಿಕೊಂಡು ಬಿಟ್ಟಿತು. ಖಾನಸಾಹೇಬರಿಗೆ ಈ ವಿಚಾರ ಗೊತ್ತಾದರೆ ಏನ ಹೇಳುವರು! ಅವರು ನನ್ನನ್ನು ನಿಕೃಷ್ಟತೆಯಿಂದ ನೋಡುತ್ತಿರುವ ಚಿತ್ರವು ನನ್ನ ಕಣ್ಣೆದುರಿಗೆ ಬಂದು ನಿಂತಿತು.

ನಾನು ಹೀಗೆಲ್ಲಾ ಯೋಚಿಸುತ್ತಿರುವಲ್ಲಿ ವಾದ್ಯದ ಸದ್ದು ಕಿವಿಗೆ ಬಿದ್ದಿತು. ಲೌಂಡಿಯರು ನರ್ತನ ಪ್ರಾರಂಭಿಸಿ ಬಿಟ್ಟಿದ್ದರು. ಅಲ್ಲಿಗೆ ಹೋಗದೆ ನನ್ನ ಕೊಠಡಿಯಲ್ಲೇ ಇರಲು ಎಷ್ಟೇ ಮನಸ್ಸಾದರೂ, ಆ ಮನೆಯಲ್ಲಿ ನಾನಿದ್ದ ಸಂಬಂಧದ ಸಲುವಾಗಿ, ಹೋಗಿ ಭಾಗವಹಿಸಲೇ ಬೇಕಾಗಿತ್ತು. ಅವಸರದಿಂದೆದ್ದು ಬೇಗನೆ ಬಟ್ಟೆ ಬದಲಾಯಿಸಿಕೊಂಡು ಕೆಳಗಿಳಿದು ಓಡಿ ಹೋದೆನು.

ವಾದ್ಯವನ್ನು ನುಡಿಸುವವರು ತಮ್ಮ ಅಂದವಾದ ಉಡುಗೆಗಳಲ್ಲಿ ಒಂದು ಪಕ್ಕಕ್ಕೆ ಕುಳಿತಿದ್ದರು. ಬೂಹಾವರೆಯು ಒಬ್ಬಳೇ ಬಿಟ್ಟಸೀಮೆಯ ನೃತ್ಯವನ್ನು ಮಾಡುತ್ತಿದ್ದಳು. ಮಿಕ್ಕಲೌಂಡಿಯರೆಲ್ಲಾ ನಿಂತಿದ್ದರು. ಬೂಹಾವರಳು ಸೌಂದರ್ಯವತಿಯೆಂಬುದನ್ನು ನಾನೆಂದೂ ಅಲ್ಲವೆನ್ನದಿದ್ದರೂ ಈ ದಿವಸ ಅವಳ ರೂಪು ಒಂದಕ್ಕೆರಡಾಗಿ ಹೋಗಿತ್ತು. ನಾಟ್ಯದ ವೇಷವು ಅವಳಿಗೆ ಬಹು ಚೆನ್ನಾಗಿ ಒಪ್ಪುತ್ತಿತ್ತು. ಮೇಲ್ಭಾಗಕ್ಕೆ ಹೊದ್ದಿದ್ದ ನೌರಾದ ಶುಭ್ರವಸ್ತ್ರ;–ಸೊಂಟಕ್ಕೆ ನಿರಾಭರಣೆಯಿಂದ ಸುತ್ತಿದ್ದ ಅಂದವಾದ ಶಾಲು, ಲಾವಣ್ಯದ ದೂತನ ಚಾವಟಿಯೋ ಎಂಬಂತೇ;–ಮುಕಮಲ್ಲಿನ ಪಾಯಿಜಾಮು ಹೆಜ್ಜೆಯ ಬಳಿ ಸುನೇರಿದಾರದಿಂದ ಬಿಗಿಯಲ್ಪಟ್ಟಿದುದು!–ಇವೆಲ್ಲವೂ ಸೇರಿ ಅವಳ ಸುಂದರಾಕೃತಿಯನ್ನು ಇನ್ನೂ ಹೆಚ್ಚು ಮೋಹಕರಗೊಳಿಸುತ್ತಿತ್ತು. ಮನಸ್ಸೆಂಬ ಚಕೋರ ಪಕ್ಷಿಯನ್ನು ಸೆರೆಹಿಡಿಯುವ ಆ ಕೇಶಜಾಲವು ಎಷ್ಟು ನೀಳವಾಗಿತ್ತೆಂದರೆ ನರ್ತಕಿಯರ ರೂಢಿಗನುಸಾರವಾಗಿ ಬಿಚ್ಚಿರಲು ಮೊಳಕಾಲನ್ನು ಚುಂಬಿಸುತ್ತಿತ್ತು. ಅಭಿನಯದ ಕೌಶಲತೆಯು ನನ್ನ ಹೃದಯದಲ್ಲಿ ಅಸೂಯಾಗ್ನಿಯನ್ನು ಹೊತ್ತಿಸಲಾರಂಭಿಸಿತು. ಆದರವನ್ನು ತಿಳಿಯುವುದರಲ್ಲೇ ತಣ್ಣಗಾಗಿ ಹೋಯಿತು.

ನಾನು ತೊಟ್ಟಿಯ ಮತ್ತೊಂದು ಭಾಗಕ್ಕೆದುರಾಗಿ ನಿಂತೆನು. ನಸಿರುಲ್ಲಾ ಪಾಷಾರವರು ಪತ್ನಿಯೊಡನೆ ಕಾಚ್‌ನ ಮೇಲೆ ಕುಳಿತಿದ್ದರು. ಸಾಫಿಜ್ ಬೇಯು ವಲಿಯಾಖಾನಸಾಹೇಬರ ಕುರ್ಚಿಯ ಮೇಲೆ ಬಾಗಿಕೊಂಡು

ನಿಂತಿದ್ದನು. ಅವನ ಅಧರೋಷ್ಠಗಳ ಮೇಲೆ ಮುಗುಳ್ನಗೆಯಿದ್ದುದರಿಂದ ಆ ನಿಮಿಷಕ್ಕೆ ತನ್ನ ಕಷ್ಟಗಳನ್ನೆಲ್ಲಾ ಮರೆತಂತಿದ್ದನು. ಕೊಂಚ ಮುಂದೆ, ಮಹೇದಾಖಾನಮ್‌ಳು ತನ್ನ ಕಿರಿಯ ಮಗುವನ್ನು ಆಟವಾಡಿಸುತ್ತಿದ್ದಳು. ಅವಳ ಪತಿಯು ನರ್ತನ ಶುರುವಾದ ಮೇಲೆ ಬಂದು, ಕಿಟಕಿಯ ಬಳಿ ಅಫಮ್‌ಬೇಯೊಡನೆ ಮಾತನಾಡುತ್ತಾ ನಿಂತಿದ್ದರು.

ನಾಫಿಜ್‌ಬೇ—(ನನ್ನನ್ನು ಕುರಿತು ನಸುನಗುತ್ತಾ)ನೀನು ಬರಲು ಬಹಳ ತಡ ಮಾಡಿದೆ. ಎಲ್ಲರೂ, ನೀನು ಈಗ ಬರುವುದೇ ಇಲ್ಲವೆಂದು ನಿರಾಶರಾಗಿ ಹೋಗಿದ್ದರು. ಎಲ್ಲಿ-ಬೇಗ ಪ್ರಾರಂಭಮಾಡು ನೀನೂ ಬೂಹಾವರಳೂ ಸೇರಿ ಕುಣಿಯಿರಿ.

ನಾನು ಬೂಹಾವರಳೊಡನೆ ಸೇರಿಕೊಂಡೆನು. ಆದರೆ ಆಗ ನನಗೆ ಏನೋ ಒಂದು ವಿಧವಾದ ನಾಚಿಕೆಯೂ ಹಿಮ್ಮೆಟ್ಟುವಿಕೆಯೂ ಉಂಟಾಯಿತು. ಹಿಂದೆ ನಾನು ಎಷ್ಟೋ ಸಲ ಕುಣಿದಿರುವೆನು. ಆದರಿವತ್ತು ಒಂದೊಂದು ಹಾವಭಾವವೂ ವಿಚಿತ್ರವಾಗಿ ಕಾಣುತ್ತಿತ್ತು. ಒಂದೊಂದು ಅಂಗಚಲನೆಗೂ ಬೇರೆ ಅರ್ಥವೇ ಕಾಣುತ್ತಿತ್ತು. ಅದೂ ಅಲ್ಲದೆ ನಾಫಿಜ್‌ಬೇಯು ಒಂದು ಘಳಿಗೆ ಮುಂಚೆ ಆಡಿದ್ದ ಮಾತು ಇನ್ನೂ ಜ್ಞಾಪಕದಲ್ಲಿತ್ತು. ಇಂದು ನಾವು ಕುಣಿಯುತ್ತಿದ್ದ ಕ್ರಮದಲ್ಲಿದು ಅವಶ್ಯಕವಾಗಿದ್ದರೂ, ಬೂಹಾವರ್‌ಳು ನನ್ನ ಆಲಿಂಗನದಿಂದ ಬೇಕೆಂದು ತಪ್ಪಿಸಿಕೊಳ್ಳುತ್ತಾ ನನ್ನ ಸಮೀಪಕ್ಕೆ ಬರುತ್ತಿರಲಿಲ್ಲ. ಇದನ್ನು ನೋಡಿ ನನಗೂ, ಈ ಪ್ರಪಂಚದಲ್ಲಿನ ಆಷಾಢಭೂತಿತ್ವವೂ ಬಾಹ್ಯಾಡಂಬರವೂ ಗೊತ್ತಾಯಿತು. ಮೋಹ, ಪ್ರೇಮ ಇವುಗಳ ಹೆಸರು ಹೇಳುವುದೇ ಅವಮಾನಕರವಾಗಿರುವಾಗ ನೋಡಿದವರಿಗಾಗಿ ನಾಟ್ಯಪದ್ಧತಿಯನ್ನನುಸರಿಸಿ ಈ ವಿಧವಾದ ಇಲ್ಲದ ಪ್ರಿತಿಯನ್ನೇಕೆ ನಟಿಸಬೇಕೆಂದಾಲೋಚಿಸಲಾರಂಭಿಸಿದೆನು. ಮಿಕ್ಕ ಲೌಂಡಿಯರೆಲ್ಲಾ ಕುಣಿಯಲು ನಮ್ಮ ಜತೆ ಸೇರಿಕೊಂಡಾಗ, ಈ ವ್ಯಾಕುಲತೆಯಿಂದ ಬಿಡುಗಡೆಯುಂಟಾಗಿ ನನಗೆ ಬಹಳ ಖುಷಿಯಾಯಿತು. ಆದರೆ ಮುಖವು ನಾಚಿಕೆಯಿಂದ ಗುದುಗುಟ್ಟುತ್ತಾ ಬೇಗಬೇಗನೆ ರಂಗು ಬದಲಾಯಿಸಿ ಕೊಳ್ಳುತ್ತಿತ್ತು. ಬೂಹಾವರಳ ಜತೆ ತಟ್ಟೆಯನ್ನು ತೆಗೆದುಕೊಂಡು, ಗಾಯಕ ನರ್ತಕಿಯರಿಗಾಗಿ ಹಣಸೇರಿಸಲು ಹೋದಾಗ ಖಾನಮ್‌ಅಫಂದಿಯವರ ದೃಷ್ಟಿಯು ನನ್ನ ಮೇಲೆ ಬಿದ್ದು, ನನ್ನ ಅವಸ್ಥೆಯನ್ನು ನೋಡಿ ಅವರು ಹೀಗೆಂದು ಕೇಳಿದರು:—

"ಏಕೆ, ಮಗಳೇ ಸ್ವಸ್ಥಳಾಗಿದ್ದೀ ತಾನೆ. ಮುಖವೇಕೆ ಇಷ್ಟು

ಕೆಂಪಾಗಿವೆ? ಒಂದು ವೇಳೆ ಕುಣಿಕುಣಿದು ಆಯಾಸಗೊಂಡಿರಬಹುದು"

ಆಗ ನನ್ನ ಸ್ಥಿತಿ ಹೇಗಿತ್ತೆಂದರೆ ನಾನೇನುತ್ತರ ಕೊಟ್ಟನೆಂಬುದು ಸಹ ನನಗೆ ಜ್ಞಾಪಕವಿಲ್ಲ. ಉಡುಗಿದ ಧ್ವನಿಯಿಂದೇನನ್ನೋ ಹೇಳಿ ಸುಮ್ಮನಾಗಿ ಬಿಟ್ಟೆನು. ಅಥವರ್‌ಬೇಯವರ ಹತ್ತಿರ ತಟ್ಟೆಯನ್ನು ಹಿಡಿದಾಗ ಅವರು ಅತ್ತಿತ್ತ ನೋಡದೆ ಒಂದು ಅಷ್ರಫಿಯನ್ನು ಅದರಲ್ಲಿ ಹಾಕಿಬಿಟ್ಟರು. ಆದರೆ ಅಲಿಬೇಯವರು ನಗುತ್ತಾ ಹೀಗೆಂದರು.

"ಹಾಜಿರಳು ಯಾಚಿಸಲು ನಾಚುತ್ತಾಳೆ. (ನನ್ನ ಕಡೆ ನೋಡಿ) ನಿನಗೆಂದಿಗೂ ಬೇಡುವ ಅವಶ್ಯಕತೆಯುಂಟಾಗದಿರಲೆಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ. ಒಂದು ವೇಳೆ ಉಂಟಾದರೂ ಹೀಗೆಯೇ ತಮಾಷೆಗೆ ಆಗಲಿ. ಆದರೆ ಇವತ್ತಿನಷ್ಟು ನಾಚಿಕೆಪಟ್ಟು ಕೊಳ್ಳಬಾರದೆಂಬುದನ್ನು ಮಾತ್ರ ಜ್ಞಾಪಕವಿಟ್ಟುಕೊ."

ನಾನು ಅಲೀಬೇಯವರೊಡನೆ ಸರಾಗವಾಗಿ ಮಾತುಕಥೆಯಾಡುತ್ತಿದ್ದುದರಿಂದ ನಗಲಾರಂಭಿಸಿದೆನು. ನಮ್ಮಿಬ್ಬರಿಗೂ ಬಹಳ ಪರಿಚಯವಿತ್ತು. ನಾನು ಅನಾತೂಲಿಯಾದಿಂದ ಬಂದಾಗಿನಿಂದ ನಮ್ಮಿಬ್ಬರಲ್ಲಿ ಸಹೋದರ ಸಹೋದರೀ ಭಾವವಿತ್ತು.

ನಾನು—ಆದರೆ ನಿಮ್ಮ ಮುಂದೆ ಕೈನೀಡಲು ನನಗೇನೂ ನಾಚಿಕೆಯಿಲ್ಲ. ನಿಮ್ಮಿಂದ ಏನೂ ಸಿಕ್ಕುವುದಿಲ್ಲವೆಂದು ನನಗೆ ಖಂಡಿತವಾಗಿ ಗೊತ್ತು.

ಅಲೀಬೇ—ಓಹೋ, ನೀನು ಮೋಸಹೋದೆ. ನನ್ನ ಹತ್ತಿರ ಈಗ ಒಂದು ಅಷ್ರಫಿ ಇದೆ. ಅದು ನಿನಗೆ ಕಾಣಿಕೆ. ಆದರೆ ಬೂಹಾವರಳನ್ನು ನನ್ನ ಹತ್ತಿರ ಬರಗೊಳಿಸದಿದ್ದರೆ ಬಹಳ ಉಪಕಾರವಾದಿತು. ಅವಳಿಗೇನನ್ನೂ ಕೊಡುವುದಕ್ಕಾಗುವುದಿಲ್ಲ. ಇಂಥಾ ಸಮಯಗಳಲ್ಲಿ ಅವಳು ನಮ್ಮನ್ನು ಬಹು ತುಚ್ಛವಾಗಿ ನೋಡುವುದರಿಂದ ನಾಚಿಕೆಯಿಂದ ನನಗೆ ಬೆವರಿಟ್ಟು ಹೋಗುತ್ತದೆ. ಆದರೆ ಸರಿಯಾಗಿದ್ದಾಳೆ ತಾನೆ? ಇವತ್ತೇನೋ ಅತಿಶಯವಾದ ಕೋಪದಿಂದ ಕೂಡಿ ಒಂದು ವಿಧವಾಗಿ ಕಾಣಿಸುತ್ತಿದ್ದಾಳೆ.

ನಾನು ಆಶ್ಚರ್ಯದಿಂದ ಬೂಹಾವರಳ ಕಡೆ ನೋಡಿದೆನು. ಅವಳು ನನ್ನನ್ನು ಬಹು ರೋಷದಿಂದ ನೋಡುತ್ತಿದ್ದಳು. ಬಹುಶಃ ನಾನು ಅಲೀಬೇಯೊಡನೆ ಮಾತನಾಡುತ್ತಿದ್ದುದನ್ನು ನೋಡಿ ಅವಳಿಗೆ ಹೊಟ್ಟೆಕಿಚ್ಚಾಗಿರಬಹುದೆಂದು ಊಹಿಸಿದೆನು. ಹಿಂತಿರುಗಿ ನೋಡಲು ನಾಫಿಜ್‌ಬೇಯೂ ನನ್ನ ಮೇಲೆ ದೃಷ್ಟಿನೆಟ್ಟವನಾಗಿದ್ದನು. ನನಗೆ ಬಹಳ ನಾಚಿಕೆಯುಂಟಾಗಿ ಘರವೆಯ ಹಿಂದೆ ಕೊಂಚ ಮರೆಯಾದೆನು.

ನಾನು— ನನಗೆ ತಿಳಿಯದು-ಬೂಹಾವರಳು ಚೆನ್ನಾಗಿದ್ದಾಳೆಯೋ ಇಲ್ಲವೋ ಎಂಬುದು.

ಅಲೀಬೇ— ವಿಕಾರವಾಗಿಲ್ಲ ನನಗೆ ಸ್ತ್ರೀಸ್ವಭಾವ ತಿಳಿಯದಿಲ್ಲದಿದ್ದಲ್ಲಿ, ಬಹಳ ಶಿಡುಕಿಯಂತೆ ಕಾಣುತ್ತಾಳೆ. ನಾಫಿಜ್‌ಬೇಯ ಮೇಲೆ ನನಗೆ ಬಹಳ ಕನಿಕರ ಉಂಟಾಗುತ್ತದೆ. ಅವನು ಇವಳನ್ನು ಮದುವೆಯಾದದ್ದೇ ಆದರೆ ಹಾಳಾಗುವನು.

ನಾನು— (ಆಶ್ಚರ್ಯದಿಂದ) ನಿಮ್ಮ ಊಹೆಯೇನು ? ನಾಫಿಜ್‌ಬೇಯು ಅವಳನ್ನು ಮದುವೆಯಾಗುವನೇನು ?

ಅಲೀಬೇ— ನಾನು ಸರಿಯಾಗಿ ಹೇಳಲಾರೆ. ನನಗೆ ತಿಳಿದಂತೆ, ನಾಫಿಜ್ ಬೇಯು ಅವಳ ವಿಷಯವೇನನ್ನೂ ನಿರ್ಧರಿಸಿಲ್ಲ. ಅನಾತೂಲಿಯಕ್ಕೆ ಹೋಗುವುದಕ್ಕೆ ಮೊದಲು ಅವನು ಬೂಹಾವರಳನ್ನು ಕಂಡು ಬಹಳ ಸಂತೋಷಗೊಂಡಿದ್ದನು. ಹುಡುಗಿಯನ್ನು ನೋಡದೆ ಎಲ್ಲಿಯೂ ಮದುವೆಯಾಗುವದಿಲ್ಲವೆಂದು ಅವನು ಶಪಥ ಮಾಡಿರುವದು ನಿನಗೂ ಗೊತ್ತೇ ಇದೆ. ಈ ಸಂದರ್ಭದಲ್ಲಿ ಅವನಿಗೆ ಲೌಂಡಿಯ ವಿನಾ ಮತ್ಯಾರು ಸಿಕ್ಕುವರು ?

ಬೂಹಾವರ್— (ಅಲಿಬೇಯೊಡನೆ) ನಿಮಗೆ ಕೊಂಚವೂ ಲಕ್ಷವಿಲ್ಲ. ಹಾಜಿರಳನ್ನು ಈ ರೀತಿ ಮಾತಿನಲ್ಲಿ ತೊಡಗಿಸಿಕೊಳ್ಳಡಿರಿ. ನರ್ತಕಿಯರೆಲ್ಲಾ ಹೊರಟು ಹೋಗುತ್ತಿದ್ದಾರೆ. ಅವರಿಗಿನ್ನೂ ಒಂದು ಕಾಸೂ ಸಿಕ್ಕಿಲ್ಲ. (ನನ್ನ ಕಡೆ ತಿರುಗಿ) ನಿನಗೆ ಸಿಕ್ಕಿರುವಷ್ಟನ್ನು ಬೇಗನೆ ಅವರಿಗೆ ಕೊಟ್ಟುಬಿಡು. ಇಲ್ಲವಾದರೆ ಎಲ್ಲವನ್ನೂ ನೀನೇ ಇಟ್ಟುಕೊಳ್ಳಲಪೇಕ್ಷಿಸುವೆಯೆಂದು ಅವರು ತಿಳಿದುಕೊಳ್ಳುವರು.

ನಾನು ತೊಟ್ಟಿಯ ನಾಲ್ಕು ಕಡೆಯೂ ನೋಡಲು, ನಸಿರುಲ್ಲಾ ಪಾಷಾರವರು ಹೊರಡಲು ಏಳುತ್ತಿದ್ದರು. ಬೇಗನೆ ಮುಂದೆ ಹೋಗಿ ಅವರಿಗೆ ಸಲಾಂಮಾಡಿ ನನ್ನ ಕೊಠಡಿಗೆ ಬಂದುಬಿಟ್ಟೆನು.

ನಾಫಿಜ್‌ಬೇಗೆ ನನ್ನಲ್ಲಿ ನಿಜವಾದ ಪ್ರೀತಿಯಿದೆಯೋ ಇಲ್ಲವೇ ?ಅಥವಾ ಬೂಹಾವರಳೊಡನೆ ಮೊದಲು ಮೊದಲು ವರ್ತಿಸುತ್ತಿದ್ದಂತೆಯೇ ನನ್ನೊಡನೆಯೂ ವರ್ತಿಸುತ್ತಿದ್ದಾನೆಯೋ ? ಅದರ ಪರಿಣಾಮವು ಈಗೇನಾಗಿರುವದು ? ಎಂಬುದಾಗಿ ಇಪ್ಪತ್ತನೆಯ ಬಾರಿ ನನ್ನ ಮನಸ್ಸನ್ನು ಪ್ರಶ್ನಿಸಿದೆನು.

ಈ ತೊಡಕಿನಲ್ಲೇ ನನಗೆ ಝೋಂಪು ಹತ್ತಿ, ಜ್ಞಾನಮಾನವಿಲ್ಲದೆ ನಿದ್ರೆ ಮಾಡಿದೆನು ಮಾರನೆಯ ಬೆಳಗ್ಗೆ ದಾಸಿಯೊಬ್ಬಳು ಬಂದು ನನ್ನನ್ನು ಎಬ್ಬಿಸಿ

ನಸಿರುಲ್ಲಾ ಪಾಷಾರವರು ಮೂರುದಿನಗಳಲ್ಲಿ ಹಳ್ಳಿಗೆ ಹೋಗುವರೆಂದೂ, ನಾವೆಲ್ಲರೂ ಹೋಗಿ ಅಲ್ಲಿಯ ಮನೆಯನ್ನು ಪರಿಷ್ಕಾರ ಮಾಡಬೇಕೆಂದೂ ತಿಳಿಸಿದಳು. ನಾನು ಎಷ್ಟು ಬೇಗನೆ ಬಟ್ಟೆಯನ್ನು ಹಾಕಿಕೊಂಡು ಕೆಳಗೆ ಹೋದೆನು ನೋಡಲು ದಾಸಿಯರೆಲ್ಲರೂ ಸಿದ್ಧರಾಗಿದ್ದರು. ವಲಿಯಾಖಾನಮ್‌ಳು ನಮ್ಮ ಜತೆ ಬರಬೇಕೆಂದಿದ್ದುದರಿಂದ ನಾಫಿಜ್‌ಬೇಯು ಕೈಲಿ ತನ್ನ ಮುಖಫರದೆಯನ್ನು ಸರಿಪಡಿಸಿಕೊಳ್ಳುತ್ತಿದ್ದಳು. ನಾಫಿಜ್‌ಬೇಯು, ಮುಖಫರದೆಯನ್ನು ಅದರ ಜಾಗದಲ್ಲಿ ನಿಲ್ಲಿಸಲು ಸಿಕ್ಕಿಸುವ ಸೂಜಿಗಳನ್ನು ಹಿಡಿದುಕೊಂಡು ನಿಂತಿದ್ದನು. ವಲಿಯಾಖಾನಮ್‌ಳು ಅದನ್ನು ಇಟ್ಟುಕೊಳ್ಳುವ ಹೊತ್ತಿಗೆ ಸರಿಯಾಗಿ ಚೊಟ್ಟುಮಾಡಿ ಬಿಡುತ್ತಿದ್ದನು.

ನಾನು ಹೊರಗೆ ಬರಾಮದೆಗೆ ಬಂದು ನನ್ನ ಜತೆಗಾತಿಯರನ್ನು ನಿರೀಕ್ಷಿಸುತ್ತಾ ನಿಂತೆನು. ಸ್ವಲ್ಪ ಹೊತ್ತಿನಲ್ಲಿ ನಾಫಿಜ್‌ಬೇಯು ವಲಿಯಾಖಾನಮ್‌ಳನ್ನು ಬಿಟ್ಟು ನನ್ನ ಹತ್ತಿರ ಬಂದನು. ನಾನು ಲಜ್ಜಿತ ದೃಷ್ಟಿಯಿಂದ ಕಣ್ಣೆತ್ತಿ ಅವನ ಕಡೆ ನೋಡಲು ಬಹಳ ವಿಷಣ್ಣವದನನಾಗಿ ಕಂಡುಬಂದನು. ಅವನು ನಗುತ್ತಾ ಇದ್ದುದನ್ನು ನೋಡಿಬಂದು, ಇನ್ನೂ ಐದು ನಿಮಿಷಗಳು ಸಹ ಆಗಿರಲಿಲ್ಲ. ಬಂದೇನೋ ಬಂದನು, ಆದರವನು ಕಟ್ಟೆಯನ್ನೊರಗಿಕೊಂಡು ನಿಂತಿದ್ದನ್ನು ನೋಡಿದರೆ ನನ್ನನ್ನು ನೋಡದಂತಿತ್ತು. ನಾನು ಒಳಗೆ ಹೋಗಲು ಹೆಜ್ಜೆಯನ್ನೆತ್ತಲು ನನ್ನ ಕಡೆ ತಿರುಗಿ ಬಹು ಕ್ಲೇಶದಿಂದ ಹೀಗೆಂದು ಕೇಳಿದನು.

"ಎಲ್ಲಿಗೆ ಹೋಗುವೆ ? ದೇವಾ, ನನ್ನನ್ನು ಕಂಡರೆ ಹೀಗಾಡದಿರು. ಪಟಿಂಗರಿಂದಲೂ ಉಚ್ಚ ಜನರಿಂದಲೂ ತಪ್ಪಿಸಿಕೊಳ್ಳುವಂತೆ ನನ್ನಿಂದ ತಪ್ಪಿಸಿಕೊಳ್ಳುತ್ತೀಯೆ. ನ್ಯಾಯವಾಗಿಸಬೇಕು. ಇಷ್ಟಾದರೂ ಮಾಡು—ನನ್ನ ವಿಷಯವಾಗಿ ನಿನಗೇನಾದರೂ ಅನ್ಯವಾದ ಮಾತು ಸಿಕ್ಕುವವರೆಗಾದರೂ ನಿನ್ನಭಿಪ್ರಾಯವನ್ನು ಕೇಳಿಕೊಳ್ಳದಿರು. ಅಘಮ್‌ಬೇಯು ಸಹ ಕೊನೆಗೆ ಮನುಷ್ಯಳೇ ! ಅವಳು ಹೇಳಿದುದನ್ನೆಲ್ಲಾ ಆಧಾರವಿಲ್ಲದಿದ್ದರೂ ನಂಬಬೇಕಾದ್ದು ಅವಶ್ಯಕವಾಗಿಲ್ಲ."

ನಾನು ಆಶ್ಚರ್ಯದಿಂದಿಷ್ಟು ನಿಂತುಕೊಂಡು ಅವನ್ನು ಧೈರ್ಯತಾಳಿ ಹೀಗೆಂದುತ್ತರ ಕೊಟ್ಟೆನು.

ನಾನು— ನಿಮ್ಮ ವಿಷಯವಾಗಿ ನಮ್ಮ ಬಾಯಿಂದ ನೀವು ಆಡುತ್ತಿರುವ ಮಾತು ನನ್ನ ಬುದ್ಧಿಗೆ ಏನೂ ತೋರಲು ಇಲ್ಲ—ತೋರುವದೂ ಇಲ್ಲ—

ಬರಾಮದ = ವರಾಂಡ

ಮತ್ತು ಅಥವರ್‌ಬೇಯವರು ನನ್ನೊಡನೆ, ಎಂದೂ ನಿಮ್ಮ ಮೇಲೆ ಏನನ್ನೂ ಹೇಳಲಿಲ್ಲ. ಅದೂ ಅಲ್ಲದೆ ಅವರು ನಿಮ್ಮ ವಿಷಯವಾಗಿ ನನ್ನ ಮುಂದೆ ಏಕೆ ಹೇಳುತ್ತಾರೆ ?

ನಾಫಿಜ್‌ಬೇ—(ಕೊಂಚ ಚಿಂತಿಸುತ್ತಾ) ಸರಿ—ನೀನು 'ಏಕೆ' ಎಂದು ಹೇಳದಿದ್ದರೆ ಮತ್ಯಾರು ಹೇಳುವರು ? (ಮತ್ತೆ ನನ್ನ ಕಡೆ ದಿಟ್ಟಿಸಿ ನೋಡಿ) ಇದೊ ನಿಜವನ್ನು ಹೇಳು. ಸತ್ಯವಾಗಿಯೂ ಅಥವರ್‌ಬೇಯು ನಿನ್ನೊಡನೆ, ನನ್ನನ್ನು ಕಂಡರೆ ಹುಷಾರಾಗಿರು, ಎಂದು ಹೇಳಲಿಲ್ಲವೇ ?

ನಾನು- (ಉದ್ವೇಗದಿಂದ) ಎಂದಿಗೂ ಇಲ್ಲ. ನಾನು ನಿಮ್ಮನ್ನು ಕೇಳುತ್ತೇನೆ ಅವರು ಹೀಗೆ ಏಕೆತಾನೆ ಮಾಡಿಯಾರು-ಎಂದು ನೀವೇನಾದರೂ ನನಗೆ ಕೆಡಕನ್ನುಂಟು ಮಾಡಲಿಚ್ಛಿಸುತ್ತೀರಾ—ಹಾಗೆ ಹೇಳಲು ?

ಇದನ್ನು ಕೇಳಿ ನಾಫಿಜ್‌ಬೇಯ ಮುಖವು ಥಟ್ಟನೆ ಪ್ರಸನ್ನವಾಯಿತು.

ನಾಫಿಜ್‌ಬೇ ಒಳ್ಳೇದು ಹಾಗಾದರೆ, ಅವರು ನಿನ್ನೊಡನೇನನ್ನೂ ಹೇಳದಿದ್ದರೆ ನನ್ನನ್ನು ಕಂಡು ಹೀಗೆ ಓಡಿಹೋಗುತ್ತೀ ?

ಈ ಪ್ರಶ್ನೆಯನ್ನು ಕೇಳಿ ನನಗೆ ಬಹಳ ಲಜ್ಜೆಯುಂಟಾಯಿತು. ನನ್ನ ಮುಖದ ರಂಗು ಬದಲಾಯಿಸಲು ಮೊದಲಾಯಿತು. ನಾಫಿಜ್‌ಬೇಗೆ ಈ ಅವಸ್ಥೆಯನ್ನು ನೋಡಿ ತೃಪ್ತಿಯೂ ಸಮಾಧಾನವೂ ಆದಂತಾಗಿ, ಹರ್ಷದಿಂದವನ ಮುಖವು ಅರಳಿತು. ಪುನಃ ಕಟ್ಟೆಯನ್ನೊರಗಿಕೊಂಡು ತನ್ನ ಪ್ರಶ್ನೆಗೆ ನಾನು ಉತ್ತರವನ್ನು ಕೊಡದಿರಲೆಂದಪೇಕ್ಷಿಸುವಂತೆ ಹೀಗೆಂದನು.

"ನಿನ್ನೆ ರಾತ್ರಿ ನಿನ್ನ ವಿಷಯವಾಗಿ ನನಗುಂಟಾದ ಮನೋಭಾವವನ್ನು ಇನ್ನೂ ನಾನು ಹೇಳಿದೆನೋ ಇಲ್ಲವೋ ? ಇಲ್ಲ. ಹಾಗಾದರೆ ಕೇಳು ಯಾರೋ ಹೇಳಿರುವಂತೆ :- ಮನಮಂತಸಿಪಂತಿರ್ಪುದು

ತನುಲತೆಯ ನೃತ್ಯ ಸೊಬಗದು—

ನಾನು ಯೋಚಿಸಿದಂತೆಯೇ ಎಷ್ಟು ರಮಣೀಯವಾಗಿ ಕುಣಿಯುತ್ತಿದ್ದೆ ! ಒಂದೊಂದು ಅಭಿನಯದಲ್ಲೂ ಎಷ್ಟು ಅದ್ಭುತವಾದ ಮಾಯೆ ! ಇಂದ್ರಜಾಲವೋ ! ಇಂದ್ರಜಾಲವನ್ನೊ, ಮಾಯೆಯನ್ನೊ ಸಹ ಬಲ್ಲೆಯಾ ? ಮಾಟಗಾತಿಯಂತೂ ಅಲ್ಲವಲ್ಲಾ. ಆಹಾ ಮಾಟಗಾತಿಯಾದರೂ ಆಗಿದ್ದರೆ ನನಗೆ ಬಂದಿರುವ ಕಷ್ಟಗಳೆಲ್ಲಾ ಎಷ್ಟು ಸುಲಭವಾಗಿ ನಿವಾರಣೆಯಾಗುತ್ತಿದ್ದವು !"

ಈ ಕೊನೆಯ ಮಾತುಗಳನ್ನು ಬಹಳ ಮನೋತಾಪದಿಂದ ಹೇಳಿದನು. ಆದರೊಂದು ನಿಮಿಷ ತರುವಾಯ ಪುನಃ ಅವನ ಮುಖವು ಪ್ರಫುಲ್ಲಿತವಾಗಿ,

ಹೀಗೆನ್ನಲಾರಂಭಿಸಿದನು :-

"ಇವತ್ತು ನೀನು ಲೌಂಡಿಯರೆಲ್ಲರೊಡನೆ ಹೊರಟಿದ್ದೀಯ. ಅವರು ನಿನ್ನನ್ನು ಕೆಲಸಕ್ಕೆ ಬಲಾತ್ಕಾರ ಪಡಿಸದಿರಲೆಂದು ನನ್ನ ಆಶೆ. ನೀನು ಲೌಂಡಿಯಲ್ಲದಿರುವದರಿಂದ ನಿನ್ನಿಂದ ಕೆಲಸ ಮಾಡಿಸುವುದು ನ್ಯಾಯವಲ್ಲ."

ನಾನು— ಯಾತಕ್ಕೆ ? ಏಕೆ ಕೆಲಸ ಮಾಡಿಸಬಾರದು ? ಈಗ ನಾನು ನಮ್ಮೂರಿನಲ್ಲಿದ್ದಿದ್ದರೆ, ಸುಮ್ಮನೆ ನೊಣಹೊಡೆಯುತ್ತ ಕುಳಿತಿರುತ್ತಿದ್ದೆನೆಂದು ತಿಳಿದಿದ್ದೀರಾ ?

ನಾಫಿಜ್‌ಬೇ— (ದೀರ್ಘವಾಗಿ ನಕ್ಕು) ಇಲ್ಲ ಇಲ್ಲ. ಅಲ್ಲಿದ್ದಿದ್ದರೆ ಬಹುಶಃ ಇಷ್ಟುಹೊತ್ತಿಗೆ ನಿನ್ನ ಮದುವೆಯೂ ಆಗಿ ಹೋಗಿರುತ್ತಿತ್ತು. ಉದರ ಪೋಷಣೆಗಾಗಿ ಬಹಳ ಕೆಲಸವನ್ನೂ ಮಾಡಬೇಕಾಗಿತ್ತು. ಹಾಗಾಗಿದ್ದರೆ ನಮ್ಮಿಬ್ಬರಿಗೂ ಬಹಳ ಒಳ್ಳೆಯದೇ ಆಗುತ್ತಿತ್ತೆಂದು ತೋರುತ್ತದೆ.

ಅವನ ಈ ವಿಧವಾದ ಮಾತುಗಳನ್ನು ಲಕ್ಷಿಸಬಾರದೆಂದು ನಾನು ಬಹಳ ರೀತಿಯಿಂದ ಇಷ್ಟುಮಾತ್ರ ಹೇಳಿದೆನು :-

"ನಮ್ಮ ಹಳ್ಳಿ ಬಹಳ ಸುಂದರವಾದದ್ದು. ನೀವೆಂದಾದರು ಆ ಕಡೆ ಬಿಜಯಮಾಡಿದ್ದೀರಾ ?"

ನಾಫಿಜ್‌ಬೇ— ಹೇಳಲಾರೆ. ಯಾವ ಕಡೆ ಇದೆ ಆ ಹಳ್ಳಿ ?

ನಾನು— (ಉತ್ಸಾಹದಿಂದ ಕೂಡಿ) ಅದರ ಹೆಸರು ಕಿಷ್‌ಲಗಾಜ್ ಎಂದು ಖಿಹತ್‌ಗಿರಿಯ ತಪ್ಪಲಿನಲ್ಲಿದೆ.

ನಾಫಿಜ್‌ಬೇ— ಸರಿ. ಒಂದು ಸಲ ಅಲ್ಲಿಗೆ ಹೋಗುವ ಸಮಯ ನನಗೆ ದೊರಕಿತ್ತು. ನಮ್ಮ ಸೈನ್ಯವು ಆಯದೀನ್‌ನಲ್ಲಿ ಮೊಕ್ಕಾಂ ಮಾಡಿದ್ದಾಗ ನಾನು ಶಿಕಾರಿಗಾಗಿ ಒಂದುವಾರದ ರಜ ತೆಗೆದುಕೊಂಡು ಅಲ್ಲಿ ಒಂದು ರಾತ್ರಿ ತಂಗಿದ್ದೆನು.

ನಾನು— ಅದಾಗಿ ಎಷ್ಟು ದಿವಸಗಳಾದವು ?

ಒಂದು ವೇಳೆ ನಾನು ಅಲ್ಲಿಂದ ಹೊರಟುಬರುವದಕ್ಕೆ ಮೊದಲು ನಾಫಿಜ್‌ಬೇಯು ಆ ಹಳ್ಳಿಗೆ ಹೋಗಿದ್ದನೋ ಏನೋ ಎಂಬಾಲೋಚನೆಯಿಂದ ನಾನು ಈ ಪ್ರಶ್ನೆ ಹಾಕಿದೆನು. ನಾನಲ್ಲಿದ್ದಾಗ ಒಂದು ಸಲ ಕೆಲವು ಸಿಪಾಯಿಗಳು ಬಂದು, ರಾತ್ರಿ ಅಲ್ಲಿದ್ದು, ಮಾರನೆಯದಿವಸ ಬೆಳಗಿನಝಾವಕ್ಕೆ ಎದ್ದು ಹೊರಟುಹೋದಂತೆ ನನಗೆ ಜ್ಞಾಪಕವಿತ್ತು,

ನಾಫಿಜ್‌ಬೇ— ಎರಡು ವರ್ಷಗಳಾಗಿರಬಹುದು. ಅಲ್ಲಿ ಉಪಾಧ್ಯಾಯನಾಗಿರುವ ಒಬ್ಬ ಷೇಕ್‌ನ ಮನೆಯಲ್ಲಿ ಮಲಗಿದ್ದೆನು. ಆವೃದ್ಧನಂಥಾ

ಮನುಷ್ಯರಿನ್ನಾರೂ ಇಲ್ಲ. ಬಹಳ ಒಳ್ಳೆಯವನು.

ನಾನು– ಆತನು ಷೇಕ್‌ಸುಲೇಮಾನ್‌ನು. ಆತನಿಗೆ ನೀವ್ಯಾರು ಎಂಬುದು ಗೊತ್ತಾಗಿ, ನಿಮ್ಮ ಮೂಲಕ ನನ್ನ ಕ್ಷೇಮಸಮಾಚಾರ ತಿಳಿಯುವದೆಂಬುದು ಗೊತ್ತಿದ್ದರೆ ಬಹಳ ಸಂತೋಷ ಪಟ್ಟುಕೊಳ್ಳುತ್ತಿದ್ದನು. ಆತನಿಗೆ ನಾನು ಹೇಗಾದರೂ ಕಾಗದವನ್ನು ಕಳುಹಿಸುವ ಹಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು !

ನಾಫಿಜ್‌ಬೇ– (ನನ್ನನ್ನು ಕನಿಕರದಿಂದ ನೋಡುತ್ತ) ಹೌದು–ಹೌದು ಬರಿ ನನ್ನ ಜತೆಗಾರನಾದ ಯಾವನಾದರೊಬ್ಬ ಆಫೀಸರನ ಜೊತೆ ಆಯಿದೀನ್‌ಗೆ ಕಳುಹಿಸುತ್ತೇನೆ. ಅವನು ಆ ವೃದ್ಧನಿಗೆ ತಲಪಿಸುವನು.

ನಾನು— (ಕೃತಕೃತ್ಯಳಾಗಿ) ನಿಜವಾಗಿಯೂ ನನ್ನ ಕಾಗದವನ್ನು ಕಳುಹಿಸುವಿರಾ ? ನಿಮ್ಮ ಉಪಕಾರವನ್ನು ಆವಮಾತುಗಳಿಂದ ನೆನೆಯಲಿ ? ನೀವು ನನ್ನ ಮೇಲೆ ಬಹಳ ದಯಾಪರರಾಗಿರುವಿರಿ.

ನಾಫಿಜ್‌ಬೇಯು ಮುಖವನ್ನು ತಿರುಗಿಸಿಕೊಂಡುಬಿಟ್ಟನು. ಅವನ ಮುಖದ ಮೇಲಿದ್ದ ನಗುವು ಅಳಿಸಿ ಹೋಯಿತು.

ನಾಫಿಜ್— (ಮೆಲ್ಲನೆ) ನಿಜ ಹೇಳುತ್ತೀಯಾ ? ನನಗಾದರೊ ನನ್ನ ಕರುಣೆಯು ಮತ್ತ್ಯಾರಿಗಾದರೂ ಕಷ್ಟಪರಿತಾಪಕ್ಕೆ ಕಾರಣವಾಗುವದೋ ಎಂಬ ಭಯವಾಗಿದೆ. ಇದೊ ಹೋಗಿಬರುವೆನು. ನಿನ್ನ ಜತೆಗಾರ್ತಿಯರು ಬರುತ್ತಿರುವರು.

ಹೀಗೆ ಎಂದು, ನನ್ನ ತಲೆಯನ್ನು ಪ್ರೀತಿಯಿಂದ ಸವರಿ ಹೊರಟು ಹೋದನು. ನನಗೆ ಆಗ ಸಂತೋಷಾಧಿಕ್ಯದಿಂದ ಜ್ಞಾನವೇ ಇರಲಿಲ್ಲ. ನನ್ನ ಹಳೆಯ ಸ್ನೇಹಿತರಿಗೆ ಕಾಗದ ಬರೆಯುವ ದಿನವನ್ನು ದೇವರು ಒದಗಿಸಿದನು ! ಹೀಗೆ ಯೋಚಿಸಿ ಯೋಚಿಸುತ್ತಾ ಮನಸ್ಸಿನಲ್ಲೇ ಒಂದು ಚಂದವಾದ ತಸ್ವೀರನ್ನು ಚಿತ್ರಿಸಿದೆನು– ನನ್ನ ಕಾಗದವನ್ನು ನೋಡಿ ನಮ್ಮ ಹಳ್ಳಿಯಜನರು ಆಶ್ಚರ್ಯಪಡುವದು–ನೆರೆಯುವರೆಲ್ಲಾ ಅದನ್ನು ಕೇಳಲು ಬಂದು ಸೇರುವದು–ಅವರ ಒಂದೊಂದು ವಾಕ್ಯದ ಮೇಲೂ ತಮ್ಮ ಅಭಿಪ್ರಾಯವನ್ನು ಸೂಚಿಸುವುದು ಇದೆಲ್ಲವನ್ನೂ ಯೋಚಿಸಿಕೊಂಡು ನನ್ನ ಮನಸ್ಸು ಉಬ್ಬಿಹೋಯಿತು. ಇನ್ನು ಪತ್ರ ಬರೆಯಲು ಕುಳಿತುಕೊಂಡರೆ ಮತ್ತೆಷ್ಟು ಸಂತೋಷವಾಗುವದೋ ಎಂಬಾಲೋಚನೆಯಲ್ಲಿ ಅಂದಿನ ದಿನವೆಲ್ಲಾ ಮುಳುಗಿದ್ದೆನು. ಆವತ್ತು ನಾವುಗ್ರಾಮಕ್ಕೆ ಹೋಗಿ ಅಲ್ಲಿಯ ಮನೆಯನ್ನು ಚೊಕ್ಕಟ ಮಾಡಿ, ಇನ್ನು ವಾಸಕ್ಕುಹೋಗುವದಕ್ಕೆ ನೋಡಲು ಕೊಂಚ

ವಿಶ್ರಮಿಸಿ ಕೊಳ್ಳಬೇಕೆಂದು ತೋಟಕ್ಕೆ ಹೋಗಿ ಕುಳಿತು ಕೊಂಡೆವು. ಬೂಹಾ ವರಳು ಮಾತ್ರ ಕುಳಿತುಕೊಳ್ಳದೆ ಬಾಗಿಲಲ್ಲಿ ನಿಂತುಕೊಂಡಿದ್ದಳು. ಅವಳ ಮುಖವು ಕಾಂತಿಹೀನವಾಗಿಯೂ,ಕಣ್ಣುಗಳ ಸುತ್ತ ದೊಡ್ಡ ದೊಡ್ಡ ಕರಿಯ ಗೆರೆಗಳೂ ಇದ್ದವು.

ಬೂಹಾವರ್—(ನನ್ನ ಹತ್ತಿರ ಬಂದು, ಮಾಮೂಲಿಗೆ ವ್ಯತಿರಿಕ್ತವಾಗಿ ಅತಿ ವಿನೀತಭಾವದಿಂದ) ಹಾಜಿರೇ, ನಾವು ಪಟ್ಟಣದಿಂದ ಮತ್ತೆ ಬೇಗ ಬಂದು ಬಿಡಬೇಕಾಗುತ್ತದೆ. ಹೊರಡುವಪಕ್ಕೆ ಮೊದಲು ಹಮೀದಳನ್ನು ನೋಡುವದಿಲ್ಲನೆ ?

ನಾನು— (ಉತ್ಸಾಹದಿಂದ) ಹಮೀದಳನ್ನು ನೋಡಲು ಬಹಳ ಮನಸ್ಸಾಗುತ್ತದೆ. ಆದರೆ ಖಾನಮ್ ಆಫಂದಿಯುವರು ಅಪ್ಪಣೆಕೊಡುವರೋ ಇಲ್ಲವೋ ಗೊತ್ತಿಲ್ಲ.

ಬೂಹಾವರ್— ಖಂಡಿತವಾಗಿಯೂ ಸಂತೋಷದಿಂದ ಕೊಡುವರು. ನಾನು ಬೇಕಾದರೆ ಅವರೊಡನೆ ಹೇಳುತ್ತೇನೆ-ಆದರೆ ನನ್ನನ್ನೂ ಜತೆಯಲ್ಲಿ ಕರೆದು ಕೊಂಡು ಹೋಗುವ ಶರತ್ತಿನ ಮೇಲೆ. ನಾನು ಕೊಂಚ ಹೊರಗೆಹೋಗಿ ಬರಲು ಇಷ್ಟಪಡುತ್ತೇನೆ.

ನಾನು— ಬೇಶಕ್ ಜೊತೆಯಲ್ಲಿ ಕರೆದುಕೊಂಡು ಹೋಗುವೆನು-ಏಕೆಂದರೆ ಖಾನಮ್ ಆಫಂದಿಯುವರು ನನ್ನನ್ನು ಎಂದಿಗೂ ಒಬ್ಬಳನ್ನೇ ಕಳುಹಿಸುವದಿಲ್ಲ.

ಖಂಜಾ— ನಾವು ಇನ್ನೂ ನಾಲ್ಕೈದು ಜನರು ಒಟ್ಟುಸೇರಿ ಹೋಗುವದಾದರೆ ಎಷ್ಟು ಚೆನ್ನಾಗಿರುತ್ತಿತ್ತು ; ಬಹು ದಿವಸಗಳಿಂದ ನಾನು ಹೊರಗೆ ಹೋಗಿಲ್ಲ.

ಬೂಹಾವರ್— (ಖಂಜೆಯ ಕಡೆ ಕುತ್ಸಿತೆಯಿಂದ ನೋಡಿ) ಇದು ಸಾಧ್ಯವಿಲ್ಲ. ಈ ವಾರ ನೀನು ಖಜೀನಾದಾರ ಉಸ್ತಾನಿಯಾಗಿದ್ದೀ (ತುರ್ಕಿ ಶ್ರೀಮಂತರಲ್ಲಿ ಹಣಮನೆಯ ಖರ್ಚು-ವೆಚ್ಚವನ್ನು ನೋಡಿಕೊಳ್ಳುವವಳಿಗೆ ಖಜೀನಾದಾರ್ ಉಸ್ತಾನೆಂದು ಹೆಸರು) ಪೆಟ್ಟಿಗೆಗಳೆಲ್ಲಾ ಇನ್ನೂ ತೆರೆದು ಬಿದ್ದಿವೆ. ಹೀಗಿರುವಾಗ ನಿನಗೆ ಹೊರಗೆಹೋಗಲು ಅಪ್ಪಣೆ ಎಲ್ಲಿಂದ ಸಿಗುವದು ?

ಷಾಯಿಸ್ತೆ— (ನಗುತ್ತಾ) ನನಗೇನೂ ಮಾಡುವದಕ್ಕೇನೂ ಇಲ್ಲ ಹಾಜಿರೇ, ನನ್ನನ್ನು ದಯವಿಟ್ಟು ಜತೆಯಲ್ಲಿ ಕರೆದುಕೊಂಡುಹೋಗು.

ಬೂಹಾವರ್— (ಸಿಟ್ಟುಗೊಂಡು) ಸಾಕು. ಇದೇ ಕೆಟ್ಟದೆನ್ನುವದು.

ಶರತ್ = ವಾಗ್ದಾನ

ಒಬ್ಬರು ಮಾಡಿದ್ದನ್ನು ಇನ್ನೊಬ್ಬರು ಅನುಭವಿಸಲು ಸಿದ್ಧ—ಖಾನವರ್ ಆನಂದಿಯುವರಿಗೆ ಎ ರೂ ಒಟ್ಟಿಗೆ ಹೋಗುವದು ಇಷ್ಟವಿಲ್ಲ. ಅದರಿಂದ ಮನೆಗೆ ದೃಷ್ಟಿ ತಗಲುವ ಭೀತಿಯುಂಟು.

ಷಾಯಿಸ್ತ— (ನಿಕೃಷ್ಟತೆಯಿಂದ) ಇದಕ್ಕೇಕೆ ಇಷ್ಟು ಕೆಂಪಾಗುತ್ತಿ ? ನೀನೇನಾದರು ಒಳಸಂಚು ಮಾಡಿಕೊಂಡಿದ್ದರೆ ನಾನೇನೂ ಅಡ್ಡಿ ಬರಲು ಇಷ್ಟಪಡುವದಿಲ್ಲ ಸಮಾಧಾನದಿಂದ ಹೋಗು. ನನ್ನನ್ನು ಜತೆಯಲ್ಲಿ ಕರೆದುಕೊಂಡು ಹೋಗುವ ಭಾರವನ್ನೇನೂ ಹೊರಿಸುವದಿಲ್ಲ.

ಬೂಹಾವರ್— (ಮುಖವು ಕೆಂಪೇರುತ್ತಾ) ಈ ಹೊಟ್ಟೆಯುರಿಯ ಅರ್ಥವೇನು ? ನಿನಗೆ ಇಷ್ಟವಾದರೆ ಹೊರಡು, ನಾನೇಕೆ ಬೇಡವೆನ್ನಲಿ.

ಷಾಯಿಸ್ತ— ಇಲ್ಲ. ನಾನು ಹೋಗುವದಿಲ್ಲ ತಾನು ಹೊರಡುವದು ಜನರಿಗಿಷ್ಟವಿಲ್ಲವೆಂಬುದನ್ನೂ ತಿಳಿದುಕೊಳ್ಳಲಾರದಂಥಾ ಕುರುಡರು ಯಾರೂ ಇರುವದಿಲ್ಲ.

ಬೂಹಾವರಳು ಉತ್ತರಕೊಡದೆ ಹೊರಟುಹೋದಳು. ಅವಳು ಹೋದಕೂಡಲೆ ಅವಳ ಜತೆಗಾರ್ತಿಯರೆಲ್ಲಾ ಘಟ್ಟಿಯಾಗಿ ನಗಲಾರಂಭಿಸಿದರು.

ಷಾಯಿಸ್ತ— (ನನ್ನನ್ನು ಕುರಿತು) ಎಲ್ಲಿಗೆ ಹೋಗುವ ಇರಾದೆಯಿದೆ ?

ನಾನು— (ನಿರ್ಲಕ್ಷ್ಯದಿಂದ) ನನಗೆ ಸರಿಯಾಗಿ ತಿಳಿಯದು. ಬಹುಶಃ ಹವಿನಾವಳ ಬಳಿಗಿರಬಹುದು.

ಮರಿಯುಮ್— ಅಲ್ಲ, ಎಂದಿಗೂ ಅಲ್ಲ. ಎಲ್ಲಿಗೆ ಹೋಗುತ್ತಿ ಎಂಬುದು ನನಗೆ ಗೊತ್ತು.

ಬನ್‍ದಜರ್— ನಿನಗಂತು ಎಲ್ಲಾ ಗೊತ್ತು. ಒಳ್ಳೇದು, ಹೇಳು. ಎಲ್ಲಿಗೆ

ಮರಿಯುಮ್— ಯಾವನಾದರು ಷೇಕ್‌ನ ಬಳಿಗೆ-ಯಂತ್ರವನ್ನು ಕಟ್ಟಿಸಿಕೊಳ್ಳುವದಕ್ಕೆ.

ನಾನು— ಯಾರಿಗೆ ಯಂತ್ರ ? ನನಗೋ ಅಥವಾ ಬೂಹಾವರಳಿಗೋ ? ಅದನ್ನು ತೆಗೆದು ಕೊಂಡು ಏನಮಾಡುವಿರಿ ?

ಮರಿಯುಮ್ — ಕಟ್ಟಿಕೊಳ್ಳುತ್ತೀರಿ. ನೀನಲ್ಲ. ಬೂಹಾವರ್‌ಳು. ನಾಫಿಜ್ ಬೇಗನು ತನ್ನನ್ನು ಪ್ರೀತಿಸಿ ಮದುವೆಯಾಗಲೆಂದು.

ಪಿಂಜಾ— (ನಕ್ಕು) ಸರಿಯಾಗಿ ಯೋಚಿಸಿದೆ. ನಿನ್ನ ಊಹೆಯು ಸಹಜವಾಗಿ ಕಾಣುತ್ತದೆ. ಪಾಪ, ಅವಳು ಐದು ತಿಂಗಳಿಂದ ಬಹಳ ವ್ಯಸನವಾಗಿದ್ದಾಳೆ. ಕಾರ್ಯ ಕೈಗೂಡಲೆಂದು ಈ ಕೊನೆಯ ಉಪಾಯವನ್ನು ಸೂಚಿ

ಸಿರುವದು ಮುಳ್ಕ್ಯಾಲುಸಾಲು ಸರಿಯಾಗಿ ಕಾಣುತ್ತದೆ.
ಷಾಯಿಸ್ತ— ಹಾಜಿರೇ, ನಿಜವಾಗಿ ನಿನಗ್ಯಾರಾದರೂ ಷೇಕರು ಗೊತ್ತೆ ?
ನಾನು— ಹೌದು. ಒಬ್ಬರು ಗೊತ್ತು.
ಷಾಯಿಸ್ತ— ಎಂಥಹ ಮನುಷ್ಯರು ? ಅವರೆಂದಾದರೂ ನಿನ್ನ ವಿಷಯ ವಾಗೇನಾದರೂ ಮುಂದಾಗುವದನ್ನು ಹೇಳಿದ್ದಾರೆಯೇ ?

ನಾನು ನನ್ನ ಅಜ್ಜಿಯು ಖಾಯಿಲೆಯಾಗಿದ್ದಾಗ ಷೇಕ್‌ಮೂಸಾ ರವರ ಬಳಿ ಹೋಗಿದ್ದುದನ್ನೂ ಅವರಾಡಿದ ಮಾತುಗಳನ್ನು ಎಲ್ಲವನ್ನೂ ತಿಳಿಯ ಹೇಳಿದೆನು. ನಾನದನ್ನು ವಿವರಿಸುತ್ತಿದ್ದಾಗ ಬೂಹಾವರಳು ಸಹ ಬಂದು ಕೇಳಲಾರಂಭಿಸಿದಳು.
ಬೂಹಾವರ್— (ಏನೋ ಆಲೋಚಿಸುತ್ತಾ) ನಿನ್ನ ವಿಷಯವಾಗಿ ಷೇಕ್ ಮೂಸಾರವರು ಉಪಯೋಗಿಸಿದ ಶಬ್ದಗಳು ಅತ್ಯಾಶ್ಚರ್ಯಕರವಾಗಿವೆ. ಆತನ ಅರ್ಥವೇನಿರಬಹುದೊ !

ಇಷ್ಟರ ಮಧ್ಯೆ ವಲಿಯಾಖಾನಮ್‌ಳು ಸಹ ಬಂದು ನನ್ನ ಕಥೆಯನ್ನು ಕೇಳ ತೊಡಗಿದಳು.
ಬೂಹಾವರ್— ನನಗಂತೂ ಅವನ ಅರ್ಥವು ಹೀಗಿರಬೇಕೆಂದು ತೋರುತ್ತದೆ. ಯಾರೋ ಒಬ್ಬನು ನಿನ್ನನ್ನು ಮದುವೆಯಾಗಲಿಚ್ಛಿಸುವನು-ನೀನು ಒಲ್ಲೆ ಯೆನ್ನುವಿ-ಎಂದು, ಅವನು ಯಾರಿರ ಬಹುದೋ-ಅವನನ್ನು ವರಿಸಲು ನೀನು ಯಾವ ಕಾರಣದಿಂದ ಒಪ್ಪುವದಿಲ್ಲವೋ ಗೊತ್ತಾಗಲಿಲ್ಲ.
ಮರಿಯಮ್— ಭಲಾ, ಇದು ಹೇಗಾಗುವದು ಹೇಗೆ ತಾನೆ ಸಾಧ್ಯವು ? ಹಾಜಿರಳನ್ನು ಕೇಳುವವರು ತಾನೆ ಯಾರು ? ಅವಳ ಮದುವೆಯ ಸನ್ನಾ ಹವೆಲ್ಲಾ ಖಾನಮ್‌ಆಫಂದಿಯವರ ಕೈಲಿರುವದು.
ವಲಿಯಾಖಾನಮ್— (ನಗುತ್ತಾ) ನಿಜ. ವರನು ಸಹ ಗೊತ್ತಾಗಿಯೇ ಇರುವಂತೆ ಕಾಣುತ್ತದೆ. ಆದರೆ ಬಹುಶಃ ಹಾಜಿರಳೇ ಒಪ್ಪಿಲ್ಲವೋ ಏನೋ.
ಬನ್‌ದಜರ್- (ಧಿಕ್ಕಾರದಿಂದ) ಏಕೆ ಒಪ್ಪುವದಿಲ್ಲ ? ಮದುವೆಯಾದರೆ ಹಾಜಿರೆಯು ತಾನು ಪುಣ್ಯವಂತೆಯೆಂದು ಭಾವಿಸಿ ಸಂತೋಷ ಪಡಬೇಕು.
ಷಾಯಿಸ್ತ-(ನಕ್ಕು) ಮದುವೆಯ ಗೀಳು ನಿನಗೆ ಹಿಡಿದಿದೆ. ಮದುವೆಯಾದರೆ ನೀನೇ ಅಷ್ಟೊ ಅಷ್ಟು ಸಂತೋಷಪಟ್ಟುಕೊಳ್ಳುವೆ. ವಲಿಯಾಖಾನಮ್‌ರೇ ಖಾನಮ್ ಆಫಂದಿಯವರೊಡನೆ ಹೇಳಿ ಇವಳಿಗೆ ಹೇಗಾದರೂ ಮದುವೆ ಮಾಡಿಸಿಬಿಡಲಿ. ಇಲ್ಲದಿದ್ದರೆ ಒಂದಲ್ಲ ಒಂದು ದಿನ ಏನಾದರು ಅಗಡು ಮಾಡಿಕೊಂಡುಬಿಟ್ಟಾಳು !

ಬಂಪಜರಳು ನಾಚಿಕೆಗೊಂಡು ಮುಖತಿರುಗಿಸಿ ಕೊಂಡುಬಿಟ್ಟಳು. ಇವಳು ತನ್ನ ಚಾಲಿನಲ್ಲಿ ಜಯಹೊಂದಿ ಇನ್ನೂ ಕೊಂಚ ದಿವಸವೇ ಆಗಿತ್ತು. ಎಂದರೆ ಅಲೀಬೇ ಇವಳ ಕಂಠವನ್ನು ಮೋಹಿಸಿಬಿಟ್ಟಿದ್ದರು, ಅದರಷ್ಟರಲ್ಲೇ, ಕ್ಷೇಮದಿಂದ ಕೊನೆಗೊಂಡಿತು.

ವಲಿಯಾಖಾನಮ್- (ನಗುತ್ತಾ) ಹಾಗೆ ಹೇಳಬೇಡ. ಬನ್‌ಪಜರ್ ಒಬ್ಬಳೇ ಏನು. ಸಮಯ ಸಿಕ್ಕಿದ್ದೇ ಆದರೆ-ಖಾನಮ್ ಅಫಂದಿಯವರು ಇಷ್ಟು ನೋಡಿಕೊಳ್ಳದಿದ್ದರೆ-ನೀವೆಲ್ಲರೂ ವಿಚಿತ್ರವನ್ನು ಮಾಡಿಕೊಂಡು ಚೆನ್ನಾಗಿಯೆ ಮೋಸಗೊಳಿಸುವಿರಿ. ಆ-ಮಾತು ಇಲ್ಲೇನಿಂತು ಹೋಯಿತು. ನಿಜವಾಗಿಯೂ ಷೇಕ್‌ಮೂಸಾರವರ ಅಭಿಪ್ರಾಯವೇನಿರ ಬಹುದು ? ಬೂಹಾವರಳು ಮಾಡಿದ ಅರ್ಥ ವಿನಾ, ಬೇರೆ ಯಾವುದೂ ನನ್ನ ಬುದ್ಧಿಗೆ ತೋಚುವದಿಲ್ಲ.

ಖಂಜಾ- (ಕುಚೋದ್ಯದಿಂದ) ಬಹುಶಃ ಈ ಅರ್ಥವಿರಬಹುದು-ಯಾರೋ ಒಬ್ಬ ದೊಡ್ಡ ಮನುಷ್ಯ-ಮುಸಲಾ ನಾಫಿಜ್‌ಬೇ-ಹಾಜಿರೆಯನ್ನು ಮದುವೆಯಾಗಲು ಕೇಳುವನು. ಅವಳು ಆಗುವದಿಲ್ಲವೆನ್ನುವಳು.

ಇದನ್ನು ಕೇಳಿ ಬೂಹಾವರಳು ಚೇಳು, ಕೊಂಡಿಯನ್ನು ಮುಟುಕಿಸಿದರೆ ಹಾರಿಬೀಳುವಂತೆ ಹಾರಿಬಿದ್ದಳು. ನಾನು ನನ್ನ ಘಾಬರಿಯನ್ನು ಮರೆಮಾಚಲು ಮುಖವನ್ನು ತಿರುಗಿಸಿಕೊಂಡು ಬಿಟ್ಟೆನು.

ವಲಿಯಾಖಾನಮ್- (ಅಲಕ್ಷ್ಯದಿಂದ) ನನ್ನ ಗಂಡನ ಹೆಸರನ್ನೇಕೆ ಹೇಳುವದಿಲ್ಲ ? ನಾಫಿಜ್‌ಬೇಯಲ್ಲಿ ಎಷ್ಟು ಆಸೆ ಇಟ್ಟುಕೊಳ್ಳಬಹುದೋ ಆತನಲ್ಲೂ ಅಷ್ಟೇ ಆಸೆಯಿಟ್ಟು ಕೊಳ್ಳಬಹುದು.

ಖಂಜೆಯು ಸುಮ್ಮನಾಗಿ ಹೋದಳು. ವಲಿಯಾಖಾನಮ್‌ಳಿಗೆ ನಗುತ್ತಾ ಜವಾಬು ಕೊಡುವದಕ್ಕೆ ಬದಲು ನನ್ನ ಕಡೆ ನೋಡಿ ಗಂಭೀರ ಭಾವದಿಂದ ಹೀಗೆಂದಳು.

"ನಾನಾದರೋ ಸುಮ್ಮನೆ ಹುಡುಗಾಟಕ್ಕೆ ಹೇಳಿದೆನು. ನಾಫಿಜ್‌ಬೇಯು ಹೀಗೆ ಎಂದು ತಾನೆ ಅಪೇಕ್ಷಿಸಿಯಾನು. ಎದುರಿಗೆ ಬರುತ್ತಿರುವ ದೋಣಿಯಲ್ಲಿ ನಾವೆಲ್ಲರೂ ಹೋಗಬೇಕಾಗಿದ್ದರೆ ಇನ್ನು ಸಿದ್ಧತೆಗಳನ್ನು ಮಾಡುವದು ಒಳ್ಳೆಯದು."

ನಾವುಗಳು ಸುರಕ್ಷಿತವಾಗಿ ಮನೆಗೆ ವಾಪಸುಬಂದೆವು. ಒಳಗೆ ಹೋಗುವಾಗ ಖಂಜೆಯು ನನ್ನನ್ನು ನೆತ್ತಿಯಿಂದ ಅಂಗುಷ್ಠದವರೆಗೂ ದಿಟ್ಟಿಸಿ ನೋಡಿದಳು ಆದರೇನನ್ನೂ ಹೇಳಲಿಲ್ಲ. ರಾತ್ರಿಯ ಊಟವಾದ ಮೇಲೆ

ಅವಳು ನನ್ನ ಕೊಠಡಿಗೆ ಬಂದು ಮಾತನಾಡುತ್ತಾ ಕುಳಿತಳು. ನಾನು ಅವತ್ತು ಆಯಾಸಗೊಂಡಿದ್ದುದರಿಂದ ಹರಮ್‌ಸರಾಕ್ಕೆ ಹೋಗಲಿಲ್ಲ. ಖಂಜೆಯು ಬಂದಾಗ, ನಿನ್ನೆ ರಾತ್ರಿ ಕುಣಿದುದ್ದರಿಂದ ಸಿಕ್ಕಾಗಿ ಹೋಗಿದ್ದ ನನ್ನ ತಲೆಯ ಕೂದಲನ್ನು ಬಿಡಿಸುತ್ತಾ ಇದ್ದೆನು.

ಖಂಜಾ—ಹಾಜಿರೀ, ಈಚೆಗೆ ಅಘಮ್‌ಬೇಗೂ ಆತನ ತಮ್ಮನಿಗೂ ಮನಸ್ತಾಪ ಬಂದಿರುವುದು ನಿನಗೆ ಗೊತ್ತೇ ?

ನಾನು—(ಸಿಕ್ಕುಬಿಡಿಸುವುದರಿಂದ ಕೈತೆಗೆದು ಬಿಟ್ಟು) ಏತಕ್ಕೆ ಮನಸ್ತಾಪ ? ಈ ಖೇದಕ್ಕೆ ಕಾರಣ ?

ಖಂಜಾ—(ನನ್ನ ಪ್ರಶ್ನೆಗೆ ಉತ್ತರನನ್ನೀಯದೆ) ಇನ್ನು ಮೊನ್ನೆಯವರೆಗೂ ಅವರಿಬ್ಬರಿಗೂ ಎಷ್ಟು ಪರಸ್ಪರ ಭ್ರಾತೃವಾತ್ಸಲ್ಯವಿತ್ತು. ಈಚೆಗೆ ಅವರಲ್ಲಿ ಜಗಳವಾಗಿರುವುದು ವಿಷಾದಕರವಾಗಿದೆ. ಅಘಮ್‌ಬೇಯು ವಿವಾಹವಾಗುವುದಕ್ಕೆ ಮೊದಲು, ನಾನು ಅವರ ಬಳಿ ಚಾಕರಿಯಾಗಿದ್ದೆನೆಂಬುದು ನಿನಗೆ ಗೊತ್ತಿರಲಾರದು. ಆದುದರಿಂದಲೇ ಅವರು ನನ್ನೊಡನೆ ಸಲುಗೆಯಿಂದ ಮಾತುಕಥೆಯಾಡುವುದು. ನಿನ್ನೆ ರಾತ್ರೆ ಜಗಳವಾಗಿ ನಿಂತಿತೆಂದು ನನಗೆ ಗೊತ್ತಾಗಿದೆ.

ನಾನು ಮತ್ತೆ "ಯಾಕೆ" ಎಂದು ಕೇಳಿದೆ. ಅವಳು ಉತ್ತರಕೊಡಲು ಹಿಂತೆಗೆದು, "ಸಂಗತಿಯೇನೋ ಇದು" ಎಂದು ಸುಮ್ಮನಾಗಿ ಹೋಗಿ ಪುನಃ ಹೀಗೆಂದಳು,

"ಹಾಜಿರೀ, ನಿನ್ನ ಕೈಯಿಂದಲೇ ನಿನಗೆ ಕೆಡಕಾಗುವುದೆಂಬುದು ನಿನಗೆ ಗೊತ್ತೆ? ಖಾಸಮ್‌ಆಫಂದಿಯವರಿಗೆ ಈ ವಿಷಯ ತಿಳಿದರೆ ಏನೆನ್ನುವರೋ."

ನಾನು—(ಘಾಬರಿಗೊಂಡು) ಯಾವ ವಿಷಯಕ್ಕೆ ? ಏನೆನ್ನುವರು ?

ಖಂಜಾ—ನಿನಗೇನೂ ತಿಳಿಯದೆ ? ಇನ್ನೂ ಗೊತ್ತಾಗಲಿಲ್ಲವೆ ?

ನಾನು—ಏನು ಗೊತ್ತಾಗಲಿಲ್ಲ ?

ಈ ಪ್ರಶ್ನೆಯನ್ನೇನೋ ಹಾಕಿದೆನು. ಆದರೆ ಮನಸ್ಸಿನಲ್ಲಿ ಖಂಜೆಯನ್ನು, ಒಗಟಿನಲ್ಲಿ ಮಾತನಾಡುವುದನ್ನು ಬಿಟ್ಟು ಸ್ಪಷ್ಟವಾಗಿ ಮಾತನಾಡೆಂದು ಚೆನ್ನಾಗಿ ಹಿಡಿದು ಜಗ್ಗಿಸಿ ಬಿಡಬೇಕೆನ್ನಿಸಿತು.

ಖಂಜಾ—(ನನ್ನ ವಿಸ್ಮಯವನ್ನು ನೋಡಿ, ನನಗೇವಿಷಯವೇನೂ ಗೊತ್ತಿಲ್ಲವೆಂದು) ನಿನಗೆ ಗೊತ್ತಾಗಲಿಲ್ಲವೆಂದು ಕಾಣುತ್ತದೆ. ಆದರೆ ಸಖೀ ನಿನಗೋಸ್ಕರ ಒಬ್ಬ ಪುರುಷನು ಪ್ರಾಣ ಬಿಡುತ್ತಿದ್ದರೂ, ಜೀವವನ್ನೊಪಿಸುತ್ತಿದ್ದರೂ ಅದನ್ನು ತಿಳಿಯದೆ ಹೋದರೆ ನಿನ್ನನ್ನು ಬಹಳ ಮಂಕೆಂದು ಕರೆಯ ಬೇಕಾ

ಗುತ್ತದೆ. ನಾಫಿಜ್‌ಬೇಯು ನಿನ್ನನ್ನು ಮದುವೆಯಾಗಲು ಇಷ್ಟ ಪಡುತ್ತಾನೆ. ನಿನ್ನೆ ಸಂಜೆ ಮಾತು ಮಾತಿನಲ್ಲಿ ಅಣ್ಣನೊಡನೆ ಇದನ್ನು ಒಪ್ಪಿಯೂ ಕೊಂಡನು.

ಈ ಸಮಾಚಾರವನ್ನು ಕೇಳಿ ನನ್ನ ಜ್ಞಾನವೇ ತಪ್ಪಿದಂತಾಯಿತು. ಇದರಿಂದ ಸಂತೋಷಪಡಲೋ ಅಥವಾ ವ್ಯಸನ ಪಡಲೋ ಎಂಬುದೂ ಗೊತ್ತಾಗಲಿಲ್ಲ. ನನ್ನ ಬಾಯಿಂದ ತಾನಾಗಿಯೇ ಈ ಶಬ್ದವು ಹೊರಟಿತು "ನನ್ನನ್ನು ಮದುವೆಯಾಗಲು ಇಷ್ಟಪಡುವನೇ ?"

ಖಂಜಾ—ಹೌದು, ನೀನು ಮೊದಲು ಇಲ್ಲಿಗೆ ಬಂದಾಗ ನಿನ್ನ ಮೇಲೆ ಅವನ ಕಣ್ಣು ಬಿದ್ದು, ಕ್ರಮೇಣ ನಿನ್ನಲ್ಲಿ ಅನುರಕ್ತನಾಗುತ್ತಾ ಬಂದನೆಂದು ಕಾಣು ತ್ತದೆ. ಒಂದು ದಿನ ಸಂಜೆ ಉದ್ಯಾನವನದಲ್ಲಿದ್ದಾಗ ಅವನು ನಿನ್ನನ್ನು ಚುಂಬಿಸುವುದನ್ನು ಅಥಮ್‌ಬೇಯವರು ನೋಡಿಬಿಟ್ಟು ಆಕ್ಷೇಪಿಸಿ, ನಿನ್ನನ್ನು ಮದುವೆಯಾಗುವುದು ಅಸಾಧ್ಯವಾದುದರಿಂದ ನಿನ್ನೊಡನೆ ಈ ರೀತಿ ವರ್ತಿ ಸುವುದು ಯೋಗ್ಯವಲ್ಲವೆಂದು ತಿಳಿಸಿದರು. ಆ ಸಮಯದಲ್ಲಿ ನಾಫಿಜ್ ಬೇಯ ಬುದ್ಧಿಯು ಸ್ಥಿಮಿತದಲ್ಲಿದ್ದುದರಿಂದ ಅಥಮ್‌ಬೇಯು ಹೇಳುವುದು ಯುಕ್ತವೆಂದು ತಿಳಿದು, ನಿನ್ನಿಂದ ತಪ್ಪಿಸಿಕೊಂಡು ತಿರುಗಲು ಪ್ರಾರಂಭಿಸಿ ದನು. ಆದರೆ ಕಾಮಜ್ವರವು ಹೆಚ್ಚುತಲೇ ಹೋಯಿತು. ಚಿಕಿತ್ಸೆ ಮಾಡಿ ದಷ್ಟೂ ಅಭಿವೃದ್ಧಿಯಾಯಿತು. ನಿನ್ನನ್ನು ಮರೆಯಲು ಎಷ್ಟು ಪ್ರಯತ್ನ ಮಾಡಿದರೂ ಅಷ್ಟು ಅಷ್ಟು ನಿನ್ನ ನೆನಪು ಅವನನ್ನು ಪೀಡಿಸತೊಡಗಿತು. ಕೊನೆಗೆ, ನಿನ್ನ ಸ್ಮರಣೆಯನ್ನು ದೂರಮಾಡಲು ದ್ಯೂತವಾಡಲು ಮೊದಲು ಮಾಡಿದನು. ಅದೂ ವ್ಯರ್ಥವಾಯಿತು—'ನಿನ್ನನುರಾಗವಡಗಲಿಲ್ಲಡಗಲಿಲ್ಲ.'

—"ವಿಧಿಬರಹದೊಳಿರ್ಪುದುಜಯಾಪಜಯ
ವಿದಿರಿಸಿನಿಂದುದುಮೇಣ್ ನಿರ್ಬಲಮನ"—

ನಾನು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಟ್ಟೆನು. ಆಹಾ, ನಾನು ಮುಖ ತೋರಿಸಬಹುದೇ. ನಾಫಿಜ್‌ಬೇಗೆ ಜೂಜಿನಿಂದುಂಟಾದ ಅಪಖ್ಯಾತಿಗೆ ನಾನೇ ಕಾರಣಳಾದೆ, ಅವನು ಅಲೆದಾಡಿದುದಕ್ಕೆ ಪಾಪಿಷ್ಠೆ ಯಾದ ನಾನೇ ಕಾರಣಳಾದೆ. ನಾಫಿಜ್‌ಬೇಯ ಸಾವಿರಾರು ಮಾತುಗಳು ಆಗ ಜ್ಞಾಪಕ ಬಂದವು—ಅದರಲ್ಲೂ ನಿನ್ನೆ ರಾತ್ರಿಯ ಮತ್ತು ಇವತ್ತು ಬೆಳಗಿನ ವಚನಗಳು. ಅವನು ಯಥಾರ್ಥವನ್ನು ಹೇಳುತ್ತಿದ್ದನು—ನಾನು ಅವನನ್ನು ಮೋಹಗೊಳಿಸಿದ್ದೆನು. ಆದರೆ ಇದರಲ್ಲಿ ನನ್ನ ತಪ್ಪೇನು ?

ಇನ್ನು ನನ್ನಿಂದ ಹೆಚ್ಚು ತಡೆಯಲಾಗದೆ, "ಅವರಿಬ್ಬರಣ್ಣ ತಮ್ಮಂದಿರಲ್ಲ

ರಾತ್ರಿ ಏನು ಸಂಭಾಷಣೆ ನಡೆಯಿತು ?" ಎಂದು ಕೇಳಿದೆನು.

ಖಂಜಾ—ನಸಿರುಲ್ಲಾ ಪಾಷಾರವರು ಅಥವರ್ ಬೇಯೊಡನೆ, ನಾಫಿಜ್ ಬೇಯು ಸಾಲಗಾರನಾಗಿರುವ ವಿಚಾರವನ್ನು ಹೇಳಿದಾಗ, ಅಥವರ್ ಬೇಯು ತಮ್ಮನನ್ನು ರಕ್ಷಿಸಲು, ನಿನ್ನ ಸಂಗತಿಯನ್ನು ಸೂಕ್ಷ್ಮವಾಗಿ ತಿಳಿಸಿದರು. ಆದುದರಿಂದ ನಸಿರುಲ್ಲಾ ಪಾಷಾರವರಿಗೂ ನಾಫಿಜ್ ಬೇಗೂ ಈ ಸಾಲದ ವಿಚಾರ ಮಾತು ನಡೆದಾಗ ನಸಿರುಲ್ಲಾ ಪಾಷಾರವರು, ತಮಗೂ ಅಥವರ್ ಬೇಯಂತೆ ಈ ಗುಟ್ಟು ಗೊತ್ತೆಂಬರೀತಿಯಲ್ಲಿ ಒಂದೆರಡು ಮಾತನಾಡಿದರು. ಇದರ ಫಲವೇನಾಯಿತೆಂದರೆ, ನಾಫಿಜ್ ಬೇಯು ಅಣ್ಣನೊಡನೆ ಬಹಳ ಉದ್ರೇಕಗೊಂಡು, ನಿನ್ನೆ ಸಂಜೆ ತಾನು ನಿನ್ನನ್ನು ಮದುವೆಯಾಗಿಯೇ ಆಗುವೆನೆಂದು ಸ್ಪಷ್ಟವಾಗಿ ಹೇಳಿ ಬಿಟ್ಟನು. ಅದನ್ನು ಸಮರ್ಥಿಸಲು,–ದಾಸಿಯರೊಡನೆ ವಿವಾಹವು ಸರಿಯೆನಿಸುವಾಗ ನಿನ್ನೊಡನೆ ವಿವಾಹವು ಏತಕ್ಕೆ ತಪ್ಪೆನಿಸುವುದು–ಎಂದನು.

ಇದನ್ನು ಕೇಳಿ ನನ್ನ ಪ್ರಜ್ಞೆಯು ಇನ್ನೂ ಹಾರಿಹೋಯಿತು. ಇದೆಂದಿಗೂ ನಡೆಯತಕ್ಕ ವಿಚಾರವಲ್ಲವೆಂದು ನಾನು ಚೆನ್ನಾಗಿ ತಿಳಿದುದರಿಂದ ಖಂಜೆಗೆ ಹೀಗೆ ತಿಳಿಯಹೇಳಿದೆನು–"ನಾಫಿಜ್ ಬೇಗೆ ಅಣ್ಣನೊಡನೆ ಛಲವುಂಟಾಗಿರಬಹುದು. ಇಲ್ಲದಿದ್ದರೆ ನನ್ನನ್ನು ಮದುವೆಯಾಗುವುದು ಎಂದಿಗೂ ಅವನ ಇಚ್ಛೆಯಾಗಿರುವುದಿಲ್ಲ."

ಖಂಜಾ—(ತಲೆಯಲ್ಲಾಡಿಸಿ) ಹೇಳುವುದಕ್ಕಾಗುವುದಿಲ್ಲ. ಅವನು ಮಾತನಾಡಿದ ತರಹದಿಂದ ನಿನ್ನನ್ನು ಮದುವೆಯಾಗುವುದು ಅವನ ಧೃಡಸಂಕಲ್ಪವಾಗಿರುವಂತೆ ಕಾಣಿಸುತ್ತಿತ್ತು. ನಿನಗೆ ಅವನ ಸ್ವಭಾವ ತಿಳಿಯದು. ಯಾರಾದರೂ ಅವನನ್ನು ಎದುರಿಸಿದರೆ ಅವನಿಗಿನ್ನೂ ಹಠವು ಹೆಚ್ಚುವುದು. ಅಥವರ್ ಬೇಯು ಈ ಸ್ವಭಾವವನ್ನು ತಿಳಿದೂ ಅವನನ್ನು ಒಳಗೆ ಹೀಡಿಸುವುದು ಒಳ್ಳೆಯದಲ್ಲ. ಅವರಿಗಿದು ಉಚಿತವಲ್ಲ. ನಿನ್ನೆ ರಾತ್ರಿ ಅವರಾಡಿದ ನಿಷ್ಠುರೋಕ್ತಿಗಳಿಗಾಗಿ ನಾಫಿಜ್ ಬೇಯು ಅತಿ ಕ್ರೋಧಗೊಂಡವನಾಗಿ ಮೈಮೇಲೆ ಜ್ಞಾನವಿಲ್ಲದವನಂತಾದನು, ಹೊರಡುವುದಕ್ಕೆ ಮೊದಲು ಅಣ್ಣನೊಡನೆ "ಅದೇ ನನ್ನ ಇಷ್ಟ ಸಾಧನೆಯನ್ನು ಮಾಡಿಕೊಂಡರೆ ವಿಪತ್ತುಂಟಾಗುವುದೆಂದು ತಿಳಿದು, ಅದನ್ನು ತಪ್ಪಿಸಿಕೊಳ್ಳಲು ನಾನು ಆದಷ್ಟು ಪ್ರಯತ್ನಪಟ್ಟೆನೆಂಬುದನ್ನು ನೀನೆಂದಿಗೂ, ಇಲ್ಲವೆನ್ನಲಾರಿರಿ. ನಾನಾದರೋ ದೇಶವನ್ನು ಬಿಟ್ಟು ಹೋಗಲು ಸಿದ್ಧನಾಗಿದ್ದೆನು. ತಂದೆಯವರ ಮೆಚ್ಚುಗೆಯನ್ನು ಪಡೆಯಲು, ಇದಕ್ಕಿಂತಲೂ ಹೆಚ್ಚು ಕಷ್ಟವನ್ನನುಭವಿಸಲು ಶಕ್ತನಾಗಿದ್ದೆನು.

ಆದರೆ ನಾನು ಹಾಜಿರೆಯೊಡನೆ ಏನಾದರೂ ಮಾತನಾಡಿದ್ದಮಾತ್ರಕ್ಕೆ ನೀವು ನನ್ನ ಕಿವಿ ಹಿಂಡುವುದನ್ನು ಸಹಿಸಲಾರೆನು. ಅಲಿಬೇಯು ಘಂಟೆ ಘಂಟೆ ಅವಳೊಡನೆ ಪ್ರತ್ಯೇಕವಾಗಿ ಮಾತನಾಡುತ್ತಿದ್ದರೂ ಯಾರೂ ಏನೂ ಹೇಳುವುದಿಲ್ಲ. ಅವಳು ನನ್ನನ್ನು ಪ್ರೀತಿಸುತ್ತಾಳೋ, ಇಲ್ಲವೋ ಎಂಬುವಿನ್ನೂ ನನಗೆ ಸರಿಯಾಗಿ ತಿಳಿಯದು. ಅವಳಿಗೆ ನಿಜವಾಗಿಯೂ ನನ್ನಲ್ಲಿ ಪ್ರೇಮವಿದ್ದಲ್ಲಿ ಖಂಡಿತವಾಗಿಯೂ ನಾನವಳನ್ನು ಮದುವೆಯಾಗುವೆನು. ಆಯಿತು ಸಮಾಪ್ತಿ" ಎಂದನು.

ನಾನು—ಅಥವರ್‌ಬೇಯವರು ಏನುತ್ತರವನ್ನಿತ್ತರು ?

ನಾಫಿಜ್‌ಬೇಯ ವಚನವು ಅಥವರ್‌ಬೇಗೆ ಎಷ್ಟು ಕಷ್ಟಕರವಾಗಿ ಕಂಡಿತೆಂಬುದನ್ನು ನಾನು ಸುಲಭವಾಗಿ ಗ್ರಹಿಸಿದೆನಾದರೂ ಅಣ್ಣತಮ್ಮಂದಿರಿಬ್ಬರ ಸಂಭಾಷಣೆಯನ್ನು ಸಂಪೂರ್ಣವಾಗಿ ಕೇಳಲಿಚ್ಛಿಸಿದ್ದೆನು.

ಖಂಜಾ—ಆತನು ಕಂಪಿತ ಧ್ವನಿಯಿಂದ ಈ ರೀತಿ ಹೇಳಿದನು. "ನೀನು ಈ ವಿಷಯದಲ್ಲಿ ಮುಸ್ಕರ ಹಿತದ ಆ ಹುಡುಗಿಗೆ ನಿನ್ನ ದೆಸೆಯಿಂದ ಎಷ್ಟು ಹಿಂಸೆಯುಂಟಾಗುವುದೆಂಬುದನ್ನೂ ಯೋಚಿಸಿದೆಯಾ ? ತಾಯಿಯವರು ನಿನಗೆ ಏನೂ ಅನ್ನುವುದಿಲ್ಲ. ಸಿಟ್ಟನ್ನೆಲ್ಲಾ ಆ ಬಡಪಾಯಿಯ ಮೇಲೆ ತೀರಿಸಿಕೊಳ್ಳುವರು. ಆ ಅನಾಥೆಯನ್ನು ರಕ್ಷಿಸುವವರು ಯಾರೂ ಇಲ್ಲ. ಯಾರೊಡನಾದರೂ ತಾಯಿಯವರು ಒಂದು ಸಲ ಕೋಪಗೊಂಡರೆ ಅವರನ್ನು ಎಷ್ಟು ಕ್ರೂರತೆಯಿಂದ ಕಾಣುವರೆಂಬುದು ನಿನಗೆ ಗೊತ್ತೇ ? ಅವರನ್ನು ಹಿಂಸಿಸುವುದರಲ್ಲಿ ಎಳ್ಳಷ್ಟೂ ಬಿಡುವುದಿಲ್ಲ. ಹಾಜಿರೆಯನ್ನು ಅಮ್ಮನ ಕೋಪಕ್ಕೆ ಗುರಿಮಾಡುವಂಥಾ ಪುರುಷನು, ಪ್ರಾಣವು ಓಷ್ಠಾಗತವಾಗುವವರೆಗೂ ಹೊಡಿಸಿಕೊಳ್ಳಲು ಅರ್ಹನೆಂದು ನಾನು ತಿಳಿದಿರುವೆನು. ಮತ್ತು, ಈ ಕೆಲಸವು ನನಗೇ ಒಪ್ಪಿಸಲ್ಪಟ್ಟರೆ, ತಂದೆಯವರ ಸಾಕ್ಷಿಯಾಗಿ, ಮತ್ತೂ ಸಂತೋಷಗೊಳ್ಳುವೆನು." ನಾಫಿಜ್‌ಬೇಯ ಮುಖವು ಬಿಳಿಚಿಕೊಂಡು ಹೋದುದನ್ನು ನಾನು ಕಂಡೆನು. ಅವನೇನನ್ನೋ ಹೇಳಬೇಕೆಂದಿರುವಲ್ಲಿ ವಲಿಯಾಖಾನಮ್‌ಳು ಬಂದು ಬಿಟ್ಟುದರಿಂದ ಅಣ್ಣತಮ್ಮಂದಿರಿಬ್ಬರೂ ಬೇರೆಯಾಗಿ ಹೋದರು. ಪ್ಯಾರಿ ಹಾಜಿರೇ, ಅಥವರ್‌ಬೇಯು ಹೇಳಿದ್ದು ಬಹಳ ಯುಕ್ತವಾದುದ್ದೆಂದು ನೀನು ಈಗ ತಿಳಿಯ ಬೇಕಮ್ಮಾ. ಖಾನಮ್ ಆಫಂದಿಯವರು ತನ್ನ ಮಗನನ್ನು ಖಂಡಿಸಿ ಒಂದು ಮಾತನ್ನೂ ಹೇಳುವುದಿಲ್ಲ. ನಿನ್ನ ಮೇಲೆ ಮಾತ್ರ ಅಪವಾದ ಬರುವುದು. ನಾಫಿಜ್ ಬೇಯನ್ನು ಮರಳು ಮಾಡಿರುವೆಯೆಂದು ನಿನ್ನನ್ನು ದೂಷಿಸುವರು. ಕೋಪ

ದಲ್ಲಿ ಅವರು ಏನತಾನೆ ಮಾಡಲಾರರು. ಯೋಚಿಸಿಕೊಂಡರೆ ನನ್ನ ರೋಮವು ಎದ್ದು ನಿಂತುಕೊಳ್ಳುವುದು-ಹೃದಯವು ನಡುಗಲಾರಂಭಿಸುವುದು ನಾನವರನ್ನು ತಿಳಿದಿರುವಷ್ಟು ನೀನು ತಿಳಿದಿಲ್ಲ. ಅವರ ಕೋಪ ಸ್ಥಿತಿಯ ವಿಚಾರ ನನಗೆ ಗೊತ್ತಿರುವಷ್ಟು ನಿನಗೆ ಗೊತ್ತಿಲ್ಲ. ಅವರ ಕ್ರೂರತೆಯ ನೂರಾರು ಕಥೆಗಳನ್ನು ವರ್ಣಿಸಿದರೆ ನೀನು ರಾತ್ರಿಯೆಲ್ಲಾ ನಿದ್ರೆ ಮಾಡಲಾರೆ. ಆದರೆ ಇಷ್ಟು ಹೇಳಿದರೆ ಸಾಕು—ಇದರಿಂದ ತಿಳಿದುಕೊ—ಪಾಷಾ ಸಾಹೇಬರು ಅವರನ್ನು ತಡೆದಿಟ್ಟಿಲ್ಲದಿದ್ದರೆ—ಪಾಷಾ ಸಾಹೇಬರ ಭಯವು ಅವರಿಗಿಲ್ಲದಿದ್ದರೆ—ಯಾವ ಲೌಂಡಿಯೂ ಅವರ ಕೆಲಸಕ್ಕಿರುತ್ತಿರಲಿಲ್ಲ. ನಾವೆಲ್ಲರೂ ಓಡಿ ಹೋಗಿರುತ್ತಿದ್ದೆವು. ಆದರೆ ಈ ನಿನ್ನ ವಿಷಯಕ್ಕೆ ಪಾಷಾ ಸಾಹೇಬರು ಕೈ ಹಾಕುವುದಿಲ್ಲ. ನನ್ನ ಸಲಹೆಯನ್ನು ಕೇಳು. ಆದಷ್ಟು ನಾಫಿಜ್‌ಬೇಯಿಂದ ತಪ್ಪಿಸಿಕೊ.

ನಾನು—ಅಗತ್ಯವಾಗಿಯೂ ನಾನಾದರೋ ಈಗಲೇ ಹಾಗೆ ಮಾಡುತ್ತಿರುವೆನು. ಸಖೀಖಂಜೇ, ನಾನಿದರಲ್ಲಿ ನಿರಪರಾಧಿಯು. ನನಗಾದರೋ ನಾಫಿಜ್ ಬೇಯು ನನ್ನಲ್ಲಿ ಹೀಗ ಅನುರಾಗಗೊಳ್ಳುವನೆಂಬ ಸಂಶಯ ಸಹ ಆಗಲಿಲ್ಲ.

ಖಂಜಾ—ನಾನೇನೋ ನಂಬುತ್ತೇನೆ. ಆದರೆ ಮತ್ಯಾರು ಇದನ್ನು ಒಪ್ಪಲಾರರು. ಖಾನಮ್‌ರಿಂದ ಹಿಡಿದು ಮಕ್ಕಳವರೆಗೂ ಎಲ್ಲರೂ ನೀನೇ ಮೊದಲಿಂದಲೂ ಬಲೆ ಬೀಸಿರಬಹುದೆಂದು ಹೇಳುವರು. ನಾನಾದರೊ ಈ ವಿಚಾರವು ಮತ್ಯಾರಿಗೂ ತಿಳಿದು ಹರಡದಿರಲೆಂದು ಮನಸಾ ಇಚ್ಛಿಸುತ್ತೇನೆ. ಇಲ್ಲವಾದರೆ ಬಹಳ ಕಷ್ಟ ಪ್ರಾಪ್ತಿಯಾಗುವುದು.

ನಾನು—ಪಾಷಾಸಾಹೇಬರು ಈ ಸಮಾಚಾರವನ್ನು ಕೇಳಿದಾಗ ಏನೆಂದರು?

ಖಂಜಾ—ನನಗೆ ಸರಿಯಾಗಿ ತಿಳಿಯದು. ಆದರೆ ಅವರೆಂದಿಗೂ ನಾಫಿಜ್ ಬೇಯ ಈ ತೆರನಾದ ಹುಚ್ಚು ಮಾತುಗಳನ್ನು ಒಪ್ಪುವಂತೆ ಕಾಣುವುದಿಲ್ಲ. ಇದೋ, ನಾನು ಹೊರಡುವೆನು. ದೇವರು ನಿನ್ನನ್ನು ಕಾಪಾಡಲಿ. ನಾನು ಅಥಮ್‌ಬೇಯ ಕೊಠಡಿಗೆ ಈಗಲೇ ಹೋಗಬೇಕಾಗಿದೆ ಆ—ಒಂದು ಮಾತನ್ನು ಮರೆತೆನು. ಬೂಹಾವರಳಿಗೂ ಈ ವಿಷಯಗಳೆಲ್ಲಾ ಗೊತ್ತೇ, ಇಲ್ಲವೇ, ಎಂಬುದು ತಿಳಿಯದು. ನನ್ನ ವಿಚಾರದಲ್ಲಿ ಅವಳಿಗೆ ತಿಳಿಯದು. ಇಲ್ಲವಾದರೆ ನಿನ್ನೊಡನೆ ಬರುವೆನೆಂದು ಅವಳೆಂದಿಗೂ ಹೇಳುತ್ತಿರಲಿಲ್ಲ. ಎಲ್ಲರಿಗಿಂತ ಅವಳೇ ನಿನ್ನ ದೊಡ್ಡ ಶತ್ರುವಾಗಿರುವುದರಿಂದ ಅವಳ ಮುಂದೆ ಹೆದರಿ ಹೆದರಿ ಹೆಜ್ಜೆಯನ್ನಿಕ್ಕಬೇಕು.

ಇಷ್ಟು ಹೇಳಿ ನನ್ನನ್ನು ಅತಿ ಪ್ರೀತಿಯಿಂದ ಮುದ್ದಿಸಿ ಸುಗುಣೆಯಾದ

ಮಿಂಚಿನು ಹೊರಟುಹೋದಳು. ಅವಳು ಹೋದ ಒಡನೆಯೇ ನಾನೆದ್ದು,
ಮಂಚದ ಮೇಲೆ ದಿಕ್ಕುತೋಚದವಳಾಗಿ ಕುಳಿತುಕೊಂಡೆನು. ಇದಕ್ಕಿಂತ
ಹೆಚ್ಚು ಏನುತಾನೆ ಮಾಡಬಹುದು. ನನ್ನ ಕೈಲಿ ಏನುತಾನೆ ಇತ್ತು !
ನಾಫಿಜ್‌ಬೇಗೋಸ್ಕರ ಪ್ರಾಣವನ್ನೇನೊ ಬಿಡುತ್ತಿದ್ದನು. ಆದರೆ ಸ್ವಪ್ನದಲ್ಲಿ
ಸಹ ಅವನನ್ನು ಮದುವೆಯಾಗಬೇಕೆಂಬಾಲೋಚನೆ ನನಗಿರಲಿಲ್ಲ. ಈ
ವಿಷಯವು ಯಾವಾಗ್ಯೂ ಸುಲಭಸಾಧ್ಯವಲ್ಲದಾಗಿದ್ದುದರಿಂದ ಅಫಸರ್‌ಬೇ
ಯಂತೆ ನಾನು ಸಹ ಇದನ್ನು ಹಿಂದುಮುಂದಿಲ್ಲದುದೆಂದು ತಿಳಿದಿದ್ದೆನು.
ಆದರೆ ಅಣ್ಣ ತಮ್ಮಂದಿರಿಬ್ಬರ ಸಂಭಾಷಣೆಯನ್ನು ಕೇಳಿ ನಾನು ಮತ್ತಷ್ಟು
ಹೆಚ್ಚಾಗಿ ನಾಫಿಜ್‌ಬೇಗೆ ತನುಮನ ಸಮೇತ ಪರವಶಳಾಗಿ ಹೋದೆನು.
ನಾನ್ಯಾರು ? ನನ್ನ ಹುಟ್ಟೇನು ? ನನ್ನಂಥಾ ಅಣುವಿಗಾಗಿ ತಾನು
ಇಷ್ಟು ಹಾನಿಯನ್ನು ತಂದುಕೊಂಡು, ಸರ್ವಸ್ವವನ್ನೂ ತ್ಯಜಿಸಲು ಹೊರಟು
ಸಿದ್ಧನಾಗಿದ್ದನು. ಇದುವರೆಗಾದರೋ ನನಗವನು ಪ್ರಪಂಚದ ಎಲ್ಲ ಪುರು
ಷರಿಗಿಂತಲೂ ಉತ್ತಮನೂ ಗೌರವಸ್ಥನೂ ಆಗಿದ್ದನು. ಆದರೆ ಇವತ್ತಿನಿಂದ
ಅವನು ನನ್ನ ಹೃದಯದಲ್ಲಿ ಇನ್ನೂ ಹೆಚ್ಚು ಶ್ರೇಷ್ಠತೆ ಪಡೆದನು-ಅವನನ್ನು
ನಿಜವಾದ ವೀರನೆಂದು ಭಾವಿಸತೊಡಗಿದೆನು. ಅವನಾಡಿದ ಮಾತನ್ನು
ಜ್ಞಾಪಿಸಿಕೊಂಡಾಗಲ್ಲಾ ಯಾವುದೇ ಆಗಲಿ ಮಿತಿಮೀರಿದರೆ ಕೆಟ್ಟದು-ಎನ್ನು
ವಂತೆ ನನ್ನ ಮನಸ್ಸಿಗೆ ಒಂದು ವಿಧವಾದ ಗರ್ವವುಂಟಾಗಿ, ಅದರಾಧಿಕ್ಯದಿಂದ
ತೊಂದರೆಯೂ ಆಗುತ್ತಿತ್ತು. ಅಷ್ಟರಲ್ಲೇ ನನ್ನ ಅಲ್ಪತೆಯೂ ಜ್ಞಾಪಕ
ಬರುತ್ತಿತ್ತು.

ಹೀಗೆ ಯೋಚಿಸಿಯೋಚಿಸುತ್ತಾ ಎದ್ದು, ಕನ್ನಡಿಯ ಮುಂದೆ ಹೋಗಿ
ದೋಷೈಕ ದೃಷ್ಟಿಯಿಂದ ನನ್ನನ್ನು ನೋಡಿಕೊಳ್ಳ ತೊಡಗಿದೆನು. ಬೂಹಾವರೆ
ಗಿಂತ ನಾನೆಂದಿಗೂ ಹೆಚ್ಚು ಚೆಲುವೆಯಾಗಿರಲಿಲ್ಲ. ನನ್ನ ನೀಲವಾದ ಕಣ್ಣು
ಗಳು-ಸಣ್ಣ ಆಕಾರ-ತೆಳುವಾದ ಶರೀರ-ಇವೆಲ್ಲಾ ಅವಳ ತುಂಬುಜವ್ವನದ
ಮುಂದೆ ತೃಣದಂತಿದ್ದುವು. ಇಷ್ಟಾದರೂ ನಾಫಿಜ್‌ಬೇಯು ನನ್ನಲ್ಲಿ ವ್ಯಾ
ಮೋಹಗೊಂಡು, ತನ್ನ ಜನರನ್ನೆಲ್ಲಾ ಎದುರು ಹಾಕಿಕೊಳ್ಳಲು ಸಿದ್ಧನಾಗಿ
ದ್ದನು. ಇದನ್ನೆಲ್ಲ ಯೋಚಿಸಿಕೊಂಡು ಸಂತೋಷವು ಅತಿಯಾಗಿ ಮೈ
ಯುಬ್ಬಿ ಹೋಯಿತು. ಕೆಲವು ಘಳಿಗೆಗಳು ಹರ್ಷಸಾಗರದಲ್ಲಿ ಮುಳುಗಿ
ಹೋಗಿ, ಪ್ರಾಪಂಚಿಕ ವಸ್ತುಗಳ ಮೇಲೆ ಧ್ಯಾನವೇಯಿರಲಿಲ್ಲ. ಆದರೆ ನಮ್ಮಿ
ಬ್ಬರ ವಿವಾಹವು ಅಸಂಭವವಾದುದೆಂದೂ, ನಾಫಿಜ್‌ಬೇಯನ್ನು ಅವನ
ಸಂಕಲ್ಪದಿಂದ ತಪ್ಪಿಸಬೇಕೆಂದೂ ಮೊದಲೇ ಮನಸ್ಸು ಮಾಡಿಕೊಂಡಿದ್ದುದ

ರಿಂದ ಈ ಸುಖವು ಒಂದು ಕ್ಷಣಮಾತ್ರವೇ ಇತ್ತು.

ಖಾನಮ್ ಆಫಂದಿಯವರ ಚಿತ್ತಕ್ಕೆ ವಿರುದ್ಧವಾಗಿ ಎಂದಿಗೂ ಯಾವ ಕೆಲಸವನ್ನೂ ಮಾಡುವದಿಲ್ಲವೆಂದು ನನ್ನ ಅಜ್ಜಿಯೊಡನೆ ಆಣೆಯಿಟ್ಟು ಕೊಟ್ಟಿದ್ದ ಮಾತು ನನ್ನ ಹೃದಯದಲ್ಲಿ ಮುದ್ರಿಸಲ್ಪಟ್ಟಿತ್ತು. ಆದರೆ ಈಗ ಯಾವ ಕೆಲಸವನ್ನೂ ಮಾಡದೆಯೇ ಈ ಅಪರಾಧಕ್ಕೆ ಕರ್ತೃಯೆನಿಸುವಳಾದೆನು. ಖಾನಮ್ ಆಫಂಡಿಯವರು ನನ್ನನ್ನು ನಿರಪರಾಧಿಯೆಂದು ತಿಳಿಯುತ್ತಿರಲಿಲ್ಲ. ಖಂಜೆಯು ಹೇಳಿದಂತೆ ಎಲ್ಲ ತಪ್ಪೂ ನನ್ನ ತಲೆಯ ಮೇಲೆ ಹೊರಿಸಲ್ಪಡುತ್ತಿತ್ತು. ತುರ್ಕೀಗಾದೆಯೊಂದು "ಶ್ವಾನವು, ಆಶೆತೋರಿಸಿ ಕರೆದ ಹೊರ್ತು ಹತ್ತಿರ ಬರುವದಿಲ್ಲ, ಅದರಂತೆಯೇ ಗಂಡನು," ಎಂದು ಹೇಳುತ್ತಾದುದರಿಂದ, ಎಲ್ಲರೂ, ನಾನೇ ನಾಫಿಜ್‌ಬೇಗೆ ಗುರಿಯಿಟ್ಟೆನೆಂದು ಭಾವಿಸುವರು. ಈ ನನ್ನ ಅಸಂಬದ್ಧವಾದ ಪ್ರೇಮದಿಂದ ಖಂಡಿತವಾಗಿಯೂ ಉಂಟಾಗುವ ದುಷ್ಪರಿಣಾಮವನ್ನು ಕುರಿತು ಯೋಚಿಸುತ್ತಿರಲು ನನ್ನ ಗಂಟಲು ಬಿಗಿಕೊಂಡು ಬಂದು, ಮಂಚದ ಮೇಲೆ ಬಿದ್ದುಕೊಂಡು ಬಾಷ್ಪ ನದಿಯನ್ನು ಹರಿಸಿದೆನು. ಅತ್ತು ಅತ್ತು ಬಿಕ್ಕುಬಂದು, ಕೊನೆಗೆ ಸಹಿಸಲಾರದೆ "ಅಜ್ಜೀ, ಮುದ್ದು ಅಜ್ಜೀ, ನನ್ನನ್ನೇಕೆ ಒಬ್ಬಂಟಿಯಾಗಿ ಬಿಟ್ಟುಹೋದೆ ? ಅಯ್ಯೊ, ನಾನೀಗೇನ ಮಾಡಲಿ" ಎಂದು ಕೂಗಿಕೊಳ್ಳಲಾರಂಭಿಸಿದೆನು.

ಹೀಗೆ ಕೂಗುತ್ತಿರುವಾಗ ಪಕ್ಕದ ಮಸೀದಿಯಿಂದ ಮೌಜನ್‌ನನ "ಲಾ ಇಲಾಹ ಇಲ್ಲಲ್ಲಾ" (ಅಲ್ಲನಲ್ಲದೆ ಬೇರೆ ದೇವರಿಲ್ಲ) ಎಂಬ ಉಚ್ಚಸ್ವರದ ಕೂಗು ಕೇಳಿಬಂತು. ನಾನು ಏಕಧ್ಯಾನದಿಂದ ಈ ಪವಿತ್ರ ಶಬ್ದವನ್ನು ಕೇಳಿದೆನು. ಅದರಿಂದ ಕೊಂಚ ಸಮಾಧಾನವಾಯಿತು. ಅಮೇಲೆ ಅತಿ ಶುದ್ಧಮನಸ್ಸಿನಿಂದ ಭಗವಂತನ ಸನ್ನಿಧಿಯಲ್ಲಿ ಶಿರಬಾಗಿ ಅವನ ದಯಾನುಗ್ರಹವನ್ನು ಬೇಡಿದೆನು. ಇದರಿಂದ ನನ್ನ ಮನಸ್ಸು ಸಂಪೂರ್ಣವಾಗಿ ಸ್ಥಿಮಿತಕ್ಕೆ ಬಂದಿತು. ಕಿಟಕಿಯ ಬಳಿ ಹೋಗಿ ಹೊರಗೆ ಬಗ್ಗಿ ನೋಡಿದೆನು. ನಾಲ್ಕು ಕಡೆ ಬೆಳದಿಂಗಳು ಚೆಲ್ಲಿ ಸೂಸಿತ್ತು. ಹರಮ್‌ಸರಾದ ತೋಟವು ಎಷ್ಟು ರಮ್ಯವಾಗಿ ಕಣ್ಗೊಳಿಸುತ್ತಿತ್ತೆಂದರೆ ಈ ನೋಟದಿಂದ ನನ್ನ ಮನಸ್ಸು ಇನ್ನೂ ಸ್ಥಿರಗೊಂಡಿತು. ನಾನು ಮೌನವಾಗಿ ನಿಂತೆನು. ರಾತ್ರಿಯ ತಂಗಾಳಿಯು ಬಹು ಮನರಂಜಕತೆಯಿಂದಲೂ, ಆಹ್ಲಾದತೆಯಿಂದಲೂ

ಮೌಜನ್ = ಮಸೀತಿಯಿಂದ ಪ್ರಾರ್ಥನೆಗಾಗಿ ಜನರನ್ನು ಕೂಗುವವನು.

ಚಲಿಸುತ್ತಾ, ನನ್ನ ತಪ್ತಲಲಾಟವನ್ನು ನಿಂತು ನಿಂತು ಬಂದು ಚುಂಬಿಸುತ್ತಿತ್ತು.

ಇಷ್ಟರಲ್ಲಿ ಮಾತಿನಧ್ವನಿಯು ಕೇಳಬಂತು. ನಾನು ಎಚ್ಚೆತ್ತು ಕೆಳಗೆ ನೋಡಲು ಇಬ್ಬರು ಮನುಷ್ಯರು ಹೊರಗೆ ವರಾಂಡದಲ್ಲಿ ಬರುತ್ತಿರುವದನ್ನು ಕಂಡೆನು. ಇಬ್ಬರೂ ಸಿಗರೇಟ್ ಸೇದುತ್ತಿದ್ದರು. ತಕ್ಷಣವೇ ಒಬ್ಬರು ಅಲಿಬೇಯೆಂದೂ – ಇನ್ನೊಬ್ಬರು ನಾಫಿಜ್‌ಬೇಯೆಂದೂ ಗುರ್ತಿಸಿದೆನು. ತುರ್ಕೀ ನಡವಳಿಕೆಯಲ್ಲಿ ತಂದೆಯ ಎದುರಿಗೆ ಮಗನು ತಮಾಕನ್ನು ಕುಡಿಯಬಾರದಾದುದರಿಂದ ಇವರಿಬ್ಬರೂ ಸಿಗರೇಟ್ ಸೇದುವದಕ್ಕೋಸ್ಕರ ಹೊರಗೆ ಬಂದರೆಂದು ತಿಳಿಯಿತು.

ಇಬ್ಬರೂ ನನ್ನ ಕಿಟಕಿಗೆ ಸರಿಯಾಗಿ ಕೆಳಗಿದ್ದುದರಿಂದ ನಾನುಕೊಂಚ ಹಿಂದಕ್ಕೆ ಸರಿದೆನು. ಎಲ್ಲ ಕಡೆಯೂ ನಿಶ್ಶಬ್ದವಾಗಿದ್ದುದರಿಂದ ಅವರ ಮಾತು ವಿರಳವಾಗಿ ಕೇಳಬರುತ್ತಿತ್ತು.

ಅಲಿಬೇಯು ಹೀಗೆಂದು ಹೇಳುತ್ತಿದ್ದರು, "ಮಿತ್ರನೇ, ನೀನು ಹಾಜಿರೆಯನ್ನು ಮದುವೆಯಾಗಲಾರೆ. ಅಥವಾ ಬೇಯುವರ ಬುದ್ಧಿವಾದವು ಹಿತಕರವಾಗಿ ಕಾಣುತ್ತದೆ."

ಇಬ್ಬರೂ ತಿರುಗಾಡುತ್ತಾ ಕೊಂಚದೂರ ಹೊರಟುಹೋದುದರಿಂದ ನಾಫಿಜ್‌ಬೇಯ ಉತ್ತರವನ್ನು ಕೇಳಲಾರದೆ ಹೋದೆನು. ಒಂದು ಕ್ಷಣಾನಂತರ ಅವರು ಹಿಂತಿರುಗಿದಾಗ ನಾಫಿಜ್‌ಬೇಯು ವ್ಯಾಕುಲ ಹೃದಯನಾಗಿ ಹೀಗೆನ್ನುತ್ತಿದ್ದನು.

"ಅವಳು ನನಗೆ ಚೆನ್ನಾಗಿ ಕಂಡಳು. ಈ ವಿಷಯವನ್ನು ನನಗೇ ಬಿಟ್ಟುಬಿಡಬೇಕೆಂದು ಅವನು ತಿಳಿದುಕೊಂಡಿದ್ದರೆ ಇಷ್ಟು ಮಾತೇನಿರುತ್ತಿತ್ತು ಇದಕ್ಕಿಂತಲೂ ಕಷ್ಟವಾದ ವಿಚಾರವಾಗಿದ್ದರೂ ನಾನು ಜಯಿಸಿ ಆ ಯೋಚನೆಯನ್ನೇ ಮನಸ್ಸಿನಿಂದ ದೂರಮಾಡಿಬಿಡುತ್ತಿದ್ದೆನು. ಆದರೆ ಅವನು ಒಂದು ವಿಧವಾದ ಅಸಂಗತರೀತಿಯಲ್ಲಿ ಒಬ್ಬ ಯುವಕನ–ಮತ್ತು ಸುಂದರಿಯಾದೊಬ್ಬ ಯುವತಿಯ ಸ್ನೇಹದ ಕೆಡಕನ್ನು ವರ್ಣಿಸಿದನು, ಅದರ ದುಷ್ಪರಿಣಾಮದ ಭಯವನ್ನು ಹುಟ್ಟಿಸಿದನು ; ಹುಡುಗಿಗುಂಟಾಗುವ ವಿಪತ್ತಿನ ಚಿತ್ರವನ್ನು ಚಿತ್ರಿಸಿದನು. ಹೀಗೆ ಮಾಡಿದುದರಿಂದ, ನಾನು ಅವಳಿಂದ ತಪ್ಪಿಸಿಕೊಂಡೇನೋ ತಿರುಗುತ್ತಿರುವೆನಾದರೂ ಅವಳ ಧ್ಯಾನದಲ್ಲಿ ಎಷ್ಟು ಮುಳುಗಿರುವೆನೆಂದರೆ, ಅವನು ಅಡ್ಡಿ ಬರದಿದ್ದರೆ ಇವರಲ್ಲಿ ಅರ್ಧ ಚಿಂತೆಯೂ ನನಗಾಗುತ್ತಿರಲಿಲ್ಲ."

ಇನ್ನು ನನಗೆ ಹೆಚ್ಚು ಕೇಳಲಿಷ್ಟವಿಲ್ಲದಿದ್ದುದರಿಂದ ಕಿಟಕಿಯನ್ನು ಮುಚ್ಚಲು ಕೈ ಹೊರಗೆ ನೀಡಿದೆನು. ಆ ಸಮಯದಲ್ಲಿ ಯಾರೋ ಬರುವ ಸದ್ದಾಯಿತು. ನಾಫಿಜ್‌ಬೇಯೂ ಅಲಿಬೇಯೂ ನನ್ನ ಕಿಟಕಿಯ ಕೆಳಗೆ ಬೆಂಚಿನಮೇಲೆ ಕುಳಿತಿದ್ದವರು ಥಟ್ಟನೆದ್ದು ಸಿಗರೇಟನ್ನು ಎಸೆದುಬಿಟ್ಟರು.

ನಸಿರುಲ್ಲಾಪಾಷಾ— ನೀವಿಬ್ಬರೂ ಇಲ್ಲಿರುವಿರೋ ? ತೋಟದಲ್ಲಿ ಎಷ್ಟು ತಣ್ಣಗಿರುವದು! ಕೋಣೆಯಲ್ಲಿ ಶೆಖೆಯಿಂದ ಉಸಿರುಕಟ್ಟುತ್ತದೆ. ನಾಫಿಜ್, ಯೂಸಫ್‌ಪಾಷಾರವರ ಮಗನು ತೀರಿಹೋದನು. ನಾಳೆ ನಿನಗೆ ಜನಾಜದ ಜೊತೆ ಹೋಗಲಾಗುವದೋ, ಇಲ್ಲವೋ ? ನಾಳೆ ನನಗೆ ಬಹಳ ಕೆಲಸವಿರುವದು. ಅಥವ್‌ಬೇಯು ದಫ್ತರಿನಿಂದ ಬರಲು ಸಾವಕಾಶವಾಗುವದರಿಂದ ಜನಾಜದ ಜೊತೆ ಸರಿಯಾದ ಸಮಯಕ್ಕೆ ಹೋಗಲು ಆಗುವದಿಲ್ಲ.

ನಾಫಿಜ್‌ಬೇ— ಅಫಂದೀಮ್. ಜನಾಬ್‌ರಿಗೆ ಇಷ್ಟವಿದ್ದಲ್ಲಿ ಹೋಗಲು ಸಿದ್ಧನಾಗಿರುವೆನು.

ನಸಿರುಲ್ಲಾಪಾಷಾ— ಉಪಕಾರವಾಯಿತು. ನೀನು ಹೋಗಲೆಂದು ನಾನು ಮನಃಪೂರ್ವಕವಾಗಿ ಇಷ್ಟಪಡುತ್ತೇನೆ. ಯೂಸಫ್‌ಪಾಷಾರವರು ನನ್ನ ಹಳೆಯ ಸ್ನೇಹಿತರು. ಕಷ್ಟಕಾಲದಲ್ಲಿ ನಾನು ಭಾಗಿಯಾಗುವದಿಲ್ಲವೆಂದು ಅವರು ಎಣಿಸಲು ಅವಕಾಶ ಸಿಕ್ಕಬಾರದೆಂಬುದು ನನ್ನ ಇಷ್ಟ.

ಇಷ್ಟು ಮಾತಾಡಿದಮೇಲೆ ನಾನು ಕಿಟಕಿಯನ್ನು ಮುಚ್ಚಿಬಿಟ್ಟು, ಮಂಚದಮೇಲೆ ಮಲಗಿ, ನಾಫಿಜ್‌ಬೇ ಮತ್ತು ಅಲೀಬೇ ಆಡಿದ ಮಾತುಗಳನ್ನು ಮರೆಯಲು ಯತ್ನಿಸತೊಡಗಿದೆನು.

ಜನಾಬ್ = ಸ್ವಾಮಿ

ನಾಲ್ಕನೆಯ ಪರಿಚ್ಛೇದ

ಅಂದು ರಾತ್ರಿ ನನಗೆ ಚೆನ್ನಾಗಿ ನಿದ್ರೆ ಬರಲಿಲ್ಲ. ಬೆಳಗಿನ ಧ್ಯಾನವ ಇನ್ನೂ ಬತ್ತಿಯನ್ನು ಹಾಕಿಕೊಳ್ಳುತ್ತಿರುವಾಗಲೇ ನನ್ನ ಕೋಣೆಯ ಬಾಗಿಲು ತೆರೆಯಲ್ಪಟ್ಟು, ಬೂಶಾವರ್‌ಳು ಎದುರಿಗೆ ಬಂದು ನಿಂತಳು.

ಬೂಶಾವರ್— ಹಾನಮ್‌ರು ಪವಿತ್ರಾನ ಬಳಿ ಹೋಗಲು ಅನುಮತಿಯ

ನ್ನಿತ್ತಿದ್ದಾರೆ. ಬೇಗನೆ ಉಡುಪನ್ನು ಧರಿಸಿಕೊ. ಇಗೋ ಈಗಲೇ ಹೊರಡುವೆವು.

ನಾನು ಅತಿ ಸಂತೋಷದಿಂದ ಒಪ್ಪಿಕೊಂಡೆನು-ಏಕೆಂದರೆ ಇದರಿಂದಾದರೂ ನನ್ನ ಸಂಕಲ್ಪಕ್ಕನುಸಾರವಾಗಿ ಒಂದು ದಿನದ ಮಟ್ಟಿಗಾದರೂ ನಾಫಿಜ್‌ಬೇಯ ನೋಟದಿಂದ ಮರೆಯಾಗಿರುತ್ತಿದ್ದೆನು. ಬೂಹಾವರೆಯು ತಕ್ಷಣವೇ ಹೊರಟುಹೋದಳು. ನಾನಿನ್ನೂ ಅವಗುಣ್ಠನವನ್ನು ಮುಖದ ಮೇಲೆ ಹಾಕಿಕೊಳ್ಳುವಷ್ಟರಲ್ಲೇ ವಹೀದಾ ಖಾನಮ್‌ಳು ಆಗಮಿಸಿದಳು.

ವಹೀದಾ— (ಬಹು ಕರುಣೆಯಿಂದ) ನೀನು ಇವತ್ತು ಹೊರಗೆ ಹೋಗುವಿಯೆಂದು ಕೇಳಿ ನಿನಗೆ ಕೊಂಚ ಶೃಂಗರಿಸಲು ಬಂದೆನು. ನನ್ನ ಹತ್ತಿರ ಬಂದು ಕುಳಿತುಕೊಂಡರೆ ಅವಗುಣ್ಠನವನ್ನು ಸರಿಪಡಿಸುವೆನು.

ನಾನು ಅವಳಿಗೆ ಹೃತ್ಪೂರ್ವಕವಾಗಿ ವಂದಿಸಿ ಕುಳಿತುಕೊಂಡೆನು. ನನ್ನ ತಲೆಯನ್ನು ಬಾಚುತ್ತಬಾಚುತ್ತಾ, ಮುಖಪರದೆಯನ್ನು ಅಂದವಾಗಿ ಸಿಕ್ಕಿಸಿ, ವಹೀದಾ ಖಾನಮ್‌ಳು ಹೀಗೆಂದಳು :-

"ಹಾಜಿರೇ, ಇಂದು ನಾನು ನಿನ್ನೊಡನೆ ಏನನ್ನೋ ಹೇಳಲಪೇಕ್ಷಿಸುತ್ತೇನೆ. ಆದರೆ ಇದು ನಿನಗೆ ತಿಳಿದಿರುವದೆಂಬುದು ಮಾತ್ರ ಮತ್ತಾರಿಗೂ ಗೊತ್ತಾಗಬಾರದು. ಹಮಿದಾಳ ಮಗನಾದ ದಾವೂದನು ಅಮ್ಮನ ಬಳಿಗೆ ನಿನ್ನ ವಿವಾಹ ಸಂದೇಶವನ್ನು ಕಳುಹಿಸಿದ್ದಾನೆ. ಆದುದರಿಂದ ನೀನು ಹಮಿದಾಳ ಮನೆಗೆ ಹೋಗುವ ವಿಚಾರ ನಿನ್ನೆ ಬೂಹಾವರೆಯಿಂದ ತಿಳಿದಾಗ, ಅಮ್ಮನು ತಂದೆಯವರೊಡನೆ, ಈ ಸಂದರ್ಭದಲ್ಲಿ ನೀನು ಅಲ್ಲಿಗೆ ಹೋಗುವದು ಯುಕ್ತವೇ ಅಲ್ಲವೇ ಎಂದು ಕೇಳಲು, ತಂದೆಯವರು ಕೊಂಚವೂ ತಡಮಾಡದೆ ಹೀಗೆಂದರು-ಇನ್ನೂ ನಿಶ್ಚಿತಾರ್ಥವಾಗಲಿ ಮತ್ತಾವ ಶಾಸ್ತ್ರವಾಗಲೀ ನೆರವೇರಿಲ್ಲವಾದುದರಿಂದ ಇದರಲ್ಲಿ ಅಭ್ಯಂತರವೇನೂ ಇಲ್ಲ-ಎಂದು. ಇವತ್ತು ಬೂಹಾವರೆಯು ಹಮಿದಾಳಿಗೆ, ಮುಂದಿನವಾರದಲ್ಲಿ ಛಲ್ಲಾ, ಉಂಗುರ ಮೊದಲಾದವನ್ನು ತೆಗೆದುಕೊಂಡು ಬರಲು ಹೇಳುವಳು.

ನಾನು ಘಾಬರಿಯಿಂದ ಮೇಲಕ್ಕೆದ್ದು ಹಾರಿದೆನು. ನಡುಗುತ್ತಿರುವ ಧ್ವನಿಯಿಂದ ಆಶ್ಚರ್ಯಸಂಗೂಡಿ ಹೀಗೆಂದೆನು- "ಉಂಗುರವೇ, ಛಲ್ಲವೇ" ?

ವಹೀದಾ— ಹೌದು, ನಿಜ ಹಾಜಿರೇ, ಒಳ್ಳೇದು ಇರಲಿ ನಿನ್ನ ಮನಸ್ಸು ಹೇಗಿರುವದು ? ನಿನ್ನ ಅಜ್ಜಿಯ ಇಷ್ಟವಾದರೋ ಇದೇ ಆಗಿತ್ತು. ಅವಳಿಗೂ ಹಮಿದಾಳಿಗೂ ಈ ವಿಚಾರ ಮಾತು ಸಹ ನಡೆದಿತ್ತು.

ನಾನು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಸುಮ್ಮನಿದ್ದೆನು. ಈ ವಿಚಾರದಲ್ಲಿ ನನ್ನ ಮಾತೇನೂ ನಡೆಯುತ್ತಿರಲಿಲ್ಲವಾದರೂ, ನಾನು ಪ್ರೀತಿಸುತ್ತಿದ್ದುದೊಬ್ಬನನ್ನು - ಮದುವೆಯಾಗುವದು ಮತ್ತೊಬ್ಬನನ್ನು- ಎಂಬುದನ್ನು ಯೋಚಿಸಿಕೊಂಡು ಹೃದಯವು ಕಂಪಿಸಲಾರಂಭಿಸಿತು.

ವಹೀದಾ— (ನಿಷ್ಠುರತೆಯಿಂದ) ದೇವರಾಣೆ, ಯಾರೆದುರಿಗೂ ಹೀಗಾಡ ಬೇಡ. ನಿನಗೆ ದಾವೂದನನ್ನು ಮದುವೆಯಾಗಲು ಇಷ್ಟವಿಲ್ಲವೆಂದು ಜನರು ತಿಳಿದುಕೊಂಡಾರು. ಇದರಿಂದ ಎಷ್ಟು ಅಪಖ್ಯಾತಿ ಬರುವದೆಂಬುದನ್ನು ಕೊಂಚ ಯೋಚಿಸಿನೋಡು. ಇನ್ನು ಸಾಕು, ತಲೆಯೆತ್ತು. ನಿನ್ನ ಕೂದಲನ್ನು ಮತ್ತೆ ಸರಿಯಾಗಿ ಬಾಚುವೆನು. ಪ್ರಿಯಸಖಿ, ಹಾಜಿರೇ, ಇದು ಕೇವಲ ನಿನ್ನ ಬುದ್ಧಿಹೀನತೆಯೇ ಸರಿ. ಒಂದಲ್ಲ ಒಂದುದಿನ ಕಡೆಗೆ ನೀನು ಮದುವೆಯಾಗುವವಳೇ ಹೌದು. ಕೊಂಚ ನಿನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊ. ಇಂಥಾ ಮುದ್ದು ಮುಖವನ್ನೂ ಹವ್ವಾವಳು ಒಪ್ಪದಿದ್ದರೆ ಅವಳಂತಹ ಅವಿವೇಕಿಯಾದ ಅತ್ತೆಯು ಪ್ರಪಂಚದಲ್ಲಿ ಮತ್ತಾರೂ ಇಲ್ಲ

ಅವಳು ಹೇಳಿದಂತೆ ನಾನು ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳಲು ಹೋದೆನು. ವಹೀದಾಖಾನಮ್‌ಳು ನನಗೆ ಜಡೆಹೆಣೆಯುವದಕ್ಕೆ ಮೊದಲು ಮುಂಭಾಗದ ಕೂದಲನ್ನು ಒಂದು ಪಕ್ಕಕ್ಕೆ ಅಳ್ಳಕವಾಗಿಮಾಡಿ, ಸುಂದರವಾದ ಒಂದು ಬಾಚಣಿಗೆಯನ್ನು ಚೊಕ್ಕನಾಗಿ ಸಿಕ್ಕಿ, ಅದಕ್ಕೆ ಬಿಳೀ ಮುಖಪರದೆಯನ್ನು ಬಹು ಅಂದವಾದ ರೀತಿಯಲ್ಲಿ ಕಟ್ಟಿದ್ದಳು. ವಾಸ್ತವಿಕವಾಗಿಯೂ ಅಂದು ನಾನು ಬಹಳ ಚೆನ್ನಾಗಿ ಕಾಣುತ್ತಿದ್ದೆನು. ಹೀಗೆ ಯೋಚಿಸಿಕೊಂಡು ನಾಚಿಕೆಯಿಂದ ನನ್ನ ಮುಖವು ಬಿಳಿಚಿಕೊಳ್ಳಲೂ ಕೆಂಪಾಗಲೂ ಹತ್ತಿತು. ಅನಂತರ ವಹೀದಾಖಾನಮ್‌ಳು ನನ್ನ ಗುಲಾಬೀ ರಂಗಿನ ರೇಷ್ಮೆ ಉಡುಪನ್ನು ಮುಂಭಾಗದಲ್ಲಿ ಸರಿಪಡಿಸಿ, ಪಟ್ಟಿಯನ್ನು ಹಾಕಿ, ಮೇಲಂಗಿ ತೊಡಿಸಿ, ಹೊರಡಲುದ್ಯುಕ್ತಳಾಗುತ್ತಿರುವಲ್ಲಿ ಬೂಹಾವಳೆಯು ಬಂದಳು.

ಸ್ವಲ್ಪ ಹೊತ್ತಿನ ಬಳಿಕ ನಾವಿಬ್ಬರೂ ಒಟ್ಟಿಗೆ ಮನೆಯಿಂದ ಹೊರಟು ಮರದಾನ್ ಖಾನೆಯವರೆಗೆ ಸಾವಕಾಶವಾಗಿ ನಡೆದೆವು. ಹೊರಚಾವಡಿಯಲ್ಲಿ ಗುಲಾಮರಿಬ್ಬರೂ ನಿಂತಿದ್ದರು. ಅವರೊಳೊಬ್ಬನು ನಗುತ್ತಾ ಬೂಹಾವಳೆಯೊಡನೆ ತುರ್ಕೀ ಭಾಷೆಯಲ್ಲಿ ಏನನ್ನೋ ಹೇಳಿದನು. ಆದರವಳು ತನ್ನಾಲೋಚನೆಯಲ್ಲಿ ಮುಳುಗಿದ್ದುದರಿಂದ ಅದನ್ನು ಕೇಳಲಿಲ್ಲ.

ಗುಲಾಮು— (ನಗುತ್ತಾ ತುರ್ಕೀ ಭಾಷೆಯಲ್ಲಿ) ಪ್ರಿಯಭಗಿನಿ, ನಿನ್ನ ಭಾಷೆ

ಯನ್ನು ಮರೆತುಬಿಟ್ಟೆಯೇನು ? ಅಥವ ಜಂಭ ಬಂದು, ನನ್ನಂಥಹ ಬಡವನೊಡನೆ ಮಾತಾಡುವದು ಮಾನಕ್ಕೆ ಕಮ್ಮಿಯೆಂದು ಎಣಿಸುತ್ತೀಯೋ ?

ಮತ್ತೊಬ್ಬ ಗುಲಾಮು-(ಕಪ್ಪು ಕಣ್ಣುಗಳ ದೀರ್ಘಾಕೃತಿಯ ಒಬ್ಬ ಮನುಷ್ಯ ಬೂಹಾವರೆಗೆ ದೂರದ ಅಣ್ಣನಾಗಬೇಕೆಂದು ಹರಮ್‌ಸಾರದಲ್ಲಿ ಕೇಳಿದ್ದೆ) ಬೂಹಾವರೆಯ ಸ್ವಭಾವ ಮೊದಲಿನಂತಿಲ್ಲ ನಿಜವೇ ! ಏಕೆಂದರೆ ನಾಫಿಜ್‌ಬೇಯಂಥಾ ಭಾರೀ ಮನುಷ್ಯನ ಶಿಕಾರಿಯ ಚಿಂತೆಯಲ್ಲಿ ಮುಳುಗಿರುವಾಗ ನಮ್ಮಂಥಾ ಬಡಪಾಯಿಗಳ ಸಂಗಡ ಏತಕ್ಕೆ ಮಾತಾಡುತ್ತಾಳೆ. ಪ್ರಿಯ ಭಗಿನಿ, ಪಾಷಾಸಾಹೇಬರ ಸೊಸೆಯೆನ್ನಿಸಿಕೊಳ್ಳುವ ಆಶೆ ಎದುವರೆಗಿದೆ ?

ಬೂಹಾವರ್— (ನಿಷ್ಠುರವಾಗಿ) ನೀನು ಅವರ ಅಳಿಯನಾಗುವವರೆಗೆ. ನೀನು ಅಳಿಯನಾಗುವ ಆಶೆ ಎಷ್ಟಿದೆಯೋ ನಾನು ಸೊಸೆಯಾಗುವದೂ ಅಷ್ಟೇ ಇದೆ. ಷಾಕಿರ್ ಆಗಾ ನಮ್ಮ ಸಂಗಡ ಬರುವದಕ್ಕಾಗುತ್ತದೆಯೋ ? ನಿನ್ನೊಡನೆ ಏನೋ ಹೇಳಬೇಕಾದ್ದಿದೆ.

ಷಾಕಿರ್ ಆಗಾ— ಈಗಲೇ ಆಗುವದಿಲ್ಲ. ಪಾಷಾ ಸಾಹೇಬರು ಇನ್ನೂ ಮನೆಯಲ್ಲೇ ಇದ್ದಾರೆ. ಅವರು ಹೊರಗೆ ದಯಮಾಡಿಸಿದ ಮೇಲೆ ಬರುತ್ತೇನೆ. ನಿನ್ನನ್ನು ಎಲ್ಲಿ ಕಾಣಬೇಕೆಂಬುದನ್ನು ತಿಳಿಸಿಹೋಗು.

ಬೂಹಾವರ್-ನಾವು ಅಖಾಸೂಫಿಯಾಕ್ಕೆ ಹೋಗುತ್ತಿದ್ದೇವೆ. ಸೇತುವೆಯ ಬಳಿ ನಿನಗೋಸ್ಕರ ಕಾದಿರುತ್ತೇವೆ.

ಷಾಕಿರ್‌ಆಗಾ— ಒಳ್ಳೇದು, ಹಾಗಾದರಿನ್ನು ಓಡುತ್ತ ಹೋಗಿರಿ. ಪಾಷಾ ಸಾಹೇಬರಿಗೋಸ್ಕರ ಷಫ್‌ತಸತ್‌ನು ಗಾಡಿಯನ್ನು ಸಿದ್ಧಪಡಿಸುವದಕ್ಕೆ ಹೇಳುತ್ತಿದ್ದಾನೆ.

ನಾನು— (ರಸ್ತೆಗೆ ಬಂದಮೇಲೆ, ಆಕ್ಷೇಪಿಸಿ) ಬೂಹಾವರೆ, ನೀನು ಈ ಮನುಷ್ಯನನ್ನು ಸಂಗಡ ಬರಲು ಏತಕ್ಕೆ ಕರೆದೆ ?

ಬೂಹಾವರ್— (ಉದ್ರೇಕದಿಂದ) ಅಡ್ಡಿಯೇನು ? ನನ್ನ ಅಣ್ಣನು. ಅವನೊಡನೆ ಯಾವಾಗ್ಯೂ ಮಾತನಾಡುವೆನು.

ನಾನು— ನೀನು ಹೇಳುವದು ಸರಿ—ಆದರೆ ನನಗೆ ಈ ಸ್ವತಂತ್ರವಿಲ್ಲ.

ಬೂಹಾವರ್— ಅಮ್ಮ ಹೌದು ! ನೀನು ಹೇಳುವದನ್ನು ನೋಡಿದರೆ ನಿಮ್ಮೂರಿನಲ್ಲಿ ಹೆಂಗಸರು ಗಂಡಸರೊಡನೆ ಮಾತನಾಡುವದೇ ಇಲ್ಲವೆಂಬಂತೆ ಕಾಣುತ್ತದೆ !

ಬೂಹಾವರೆಯು ಹೇಳಿದ್ದು ಸಮಂಜಸವಾಗಿ ಕಂಡದರಿಂದ ನಾನೇನು

ಮರದಾನ್‌ಖಾನ = ಗಂಡಸರಿರುವ ಭಾಗ

ಉತ್ತರವನ್ನೂ ಕೊಡಲಿಲ್ಲ. ಆದರೂ ಷಾಕಿರ್‌ಆಗನನ್ನು ಬರಹೇಳುವದು ಅನುಚಿತವೆಂಬ ಚಿಂತೆಯು ನನ್ನನ್ನು ಪೀಡಿಸುತ್ತಿತ್ತು. ಒಂದು ಮನೆಯ ಲೌಂಡಿಯರೂ ಗುಲಾಮರೂ ಒಬ್ಬರಿಗೊಬ್ಬರು ಮಾತುಕಥೆಯಾಡಬಹುದಾಗಿದ್ದನ್ನು ನಾನು ನೋಡಿದ್ದುದರಿಂದ ಬೂಹಾವರ್‌ಗೆ ಅವಳ ಕಾರ್ಯದಲ್ಲಿ ನಾನು ಹೆಚ್ಚು ತೊಂದರೆ ಕೊಡಲಿಲ್ಲ. ಈ, ಮನೆ ಮಠವಿಲ್ಲದ ಹುಡುಗಿಯರು ತಮಗೆ ಆಪ್ತರಾದವರು ಮತ್ತಾರೂ ಇಲ್ಲದುದ್ದರಿಂದ, ಗುಲಾಮರೊಡನೆ ಯಾವಾಗ್ಲೂ ವಾತ್ಸಲ್ಯ ಇಟ್ಟುಕೊಂಡಿರುತ್ತಿದ್ದು-ಒಂದೇ ಸ್ಥಳದಲ್ಲಿ ಕೆಲಸ ಮಾಡುವದರಿಂದುಂಟಾಗುವ ಸ್ನೇಹಸಂಬಂಧವನ್ನು ಹರ್ಷಕರವಾಗಿ ಶಾಶ್ವತಗೊಳಿಸಲು ಪ್ರಯತ್ನ ಪಡುತ್ತಿದ್ದರು.

ಸೇತುವೆಯುವರೆಗೆ ನಾನೂ ಬೂಹಾವರೆಯೂ ಮೌನವಾಗಿ ನಡೆದು ಬಂದೆವು. ಐದು ನಿಮಿಷಗಳೊಳಗಾಗಿ ಷಾಕಿರ್‌ಆಗನು ಬಂದು ಸೇರಿದನು. ಅಲ್ಲಿಂದ ನಾವು ಒಟ್ಟಿಗೆ ಹೊರಟೆವು. ಸ್ವಲ್ಪಹೊತ್ತಿನವರೆಗೆ ಬೂಹಾವರೆಯು ಷಾಕಿರ್‌ಆಗನೊಡನೆ ಸರ್ಕೇಷೀ ಭಾಷೆಯಲ್ಲಿ ಮಾತಾಡುತ್ತಿದ್ದಳು ನಾಫಿಜ್ ಬೇಯ ಹೆಸರು ಮಧ್ಯ ಎಷ್ಟೋ ಬಾರಿ ಬಂದುದರಿಂದ ಅವಳಿಗೆ ನನ್ನ ಮೇಲಿದ್ದ ಅನುಮಾನದ ವಿಚಾರ ಅವನೊಡನೆ ಹೇಳುತ್ತಿರಬಹುದೆಂದು ನನಗೆ ಸಂಶಯ ವಾಯಿತು. ಮತ್ತೆ ಬೇಗನೇ ತುರ್ಕೀಭಾಷೆಯನ್ನೇ ಆಡಲಾರಂಭಿಸಿದರು. ಸರ್ಕೇಷೀಭಾಷೆಗಿಂತ ಇದನ್ನೇ ಸರಾಗವಾಗಿ ಆಡುತ್ತಿದ್ದರು.

ಷಾಕಿರ್‌ಆಗ— (ಮೆಲ್ಲನೆ) ಈ ಕೆಲಸದಲ್ಲಿ ನಿನಗೆ ಸಹಾಯಮಾಡುವದಕ್ಕೆ ನನಗೆ ಆಗುತ್ತೊ ಇಲ್ಲವೋ ನಾನು ಹೇಳಲಾರೆ. ಆ ತರಹದ ಹೆಂಗಸರನ್ನು ನಾನು ಯಾವತ್ತೂ ನೋಡಿಲ್ಲ. ಆದರೆ ಬಖ್ತನು ಒಂದು ಸಲ ಇಂಥಾ ಒಬ್ಬ ಹೆಂಗಸಿನ ವಿಚಾರ ಹೇಳುತ್ತಿದ್ದ. ಅವಳು ಮುಕ್ಕಾಲು ಪಾಲು ಅತ್ ಮೈದಾನದಲ್ಲಿ ವಾಸಮಾಡುತ್ತಾಳೆ. ಆದರವಳಿಗೆ ಏನಾದರೂ ಕೊಂಚ ತಿಳಿಯುತ್ತೋ ಇಲ್ಲವೋ ಎಂಬುದು ಗೊತ್ತಿಲ್ಲ.

ನಾನು—(ನಡೆಯುತ್ತಿದ್ದ ಮಾತು ಕಥೆಗಳು ನಾನು ಕೇಳಬಹುದಾದ್ದವೆಂದು ತಿಳಿದುಕೊಂಡು) ಏನು ವಿಷಯ ಮಾತನಾಡುತ್ತಿರುವಿರಿ ?

ಬೂಹಾವರ್— ನಾನು ಯಾರಾದರೊಬ್ಬ ಮಂತ್ರವಾದಿನಿಯ ಹತ್ತಿ ಹೋಗಬೇಕೆಂದಿರುವೆನು. ಷಾಕಿರ್‌ಆಗನಿಗೆ ಒಬ್ಬಳು ಗೊತ್ತೂ ಇದ್ದಾಳೆ ನಡಿ, ಎಲ್ಲರೂ ಒಟ್ಟಿಗೆ ಹೋಗೋಣ. ಷಾಕಿರ್‌ಆಗಾ, ಅತ್‌ಮೈದಾನದಲ್ಲಿದ್ದಾಳಲ್ಲವೇ? ಈ ಸ್ಥಳವೇನೂ ಬಹಳ ದೂರವಿಲ್ಲವಲ್ಲಾ ?

ಷಾಕಿರ್‌ಆಗಾ— ಬಹಳ ಹತ್ತಿರವಿದೆ. ಹಾಜಿರಾಖಾನಮ್, ನಿಮ್ಮ ಇಷ

ನೇನು ? ಬರುತ್ತೀರಿತಾನೆ ?

ನಾನು— ಬೂಹಾವರೆಯು ಇಷ್ಟಪಟ್ಟರೆ ಸರಿ.

ನನಗೆ ಅಲ್ಲಿಗೆ ಹೋಗಲು ಇಷ್ಟವಿಲ್ಲದಿದ್ದರೂ ಬೂಹಾವರೆಯು ಆಶೆಪಟ್ಟುದರಿಂದ ಎಲ್ಲರೂ ಅತ್‌ಮೈದಾನದ ಕಡೆಗೆ ಹೊರಟೆವು ಮಂತ್ರವಾದಿನಿ ಸರಸ್ಕರಿಯತ್‌ನ ಹಿಂದೆ ಒಂದು ಸಣ್ಣ ಮನೆಯಲ್ಲಿ ವಾಸಿಸುತ್ತಿದ್ದಳು. ಷಾಕಿರ್‌ಆಗನು ಅವಳಮನೆಯ ಗುರುತನ್ನು ಮೊದಲು ಚೆನ್ನಾಗಿ ಅರಿತಿಲ್ಲದವನಾಗಿದ್ದರೂ, ರಸ್ತೆಯನ್ನು ಚೆನ್ನಾಗಿ ತಿಳಿದಿದ್ದುದರಿಂದ ಮನೆಯ ಬಾಗಿಲಬಳಿ ನಿಂದು, ಛಡಿಯಿಂದ ತಟ್ಟಿದನು. ಒಬ್ಬ ಮುದುಕಿಯು ಬಾಗಿಲನ್ನು ತೆರೆದು ಮಂತ್ರವಾದಿನಿಯ ಹತ್ತಿರ ನಮ್ಮನ್ನು ಕರೆದುಕೊಂಡುಹೋದಳು. ಆಗವಳು ಒಲೆಯ ಮುಂದೆ ಕೂತಿದ್ದವಳು ನಮ್ಮನ್ನು ಕಂಡು ಎದ್ದುನಿಂತು ಕೆಂಡದಲ್ಲಿ ಕೊಂಚ ಸಾಂಬ್ರಾಣಿಯನ್ನು ಹಾಕಿದಳು.

ಬೂಹಾವರ್- (ನನ್ನ ಕಿವಿಯಲ್ಲಿ) ಮೊದಲು ನಿನ್ನ ಅದೃಷ್ಟಪರೀಕ್ಷೆ ಮಾಡಿಸಿಕೊ. ಮುಂದಾಗುವದನ್ನು ಇದರಿಂದ ತಿಳಿದುಕೊಳ್ಳೋಣ.

ನಾನು ಬೇಡವೆಂದೆನು-ಯಾಕೆಂದರೆ ಒಂದುವೇಳೆ ಅವಳು ತನ್ನ ವಿದ್ಯೆಯಲ್ಲಿ ನಿಪುಣೆಯಾಗಿಲ್ಲದಿದ್ದರೆ, ಅವಳನ್ನು ಏನಾದರು ಕೇಳುವದು ವ್ಯರ್ಥವಾಗಿರುತ್ತಿತ್ತು. ಒಂದುವೇಳೆ ಜಾಣೆಯಾಗಿದ್ದರೆ ಬೂಹಾವರೆಯ ಎದುರಿಗೆ ಅವಳಿಂದ ಮರೆಮಾಚ ಬೇಕಾಗಿರುವಂಥ ವಿಷಯವಾವುದನ್ನಾದರು ಅವಳು ಹೇಳುವದು ನನಗಿಷ್ಟವಿರಲಿಲ್ಲ.

ಬೂಹಾವರೆಯು ತಾನೇ ಮುಂದೆಹೋಗಿ ಅವಳೊಡನೆ “ನನ್ನ ವಿಷಯವೇನನ್ನೂ ನಾನು ಕೇಳಬೇಕೆಂದಿಲ್ಲ. ಆದರೆ ನನ್ನ ಇಷ್ಟಕ್ಕನುಸಾರವಾಗಿ ಒಂದು ವಿಚಾರ ಬಂದಿರುವದು. ಅದರ ಸಂಬಂಧವಾಗಿ ನಿನ್ನೊಡನೆ ಗುಟ್ಟಾಗಿ ಮಾತನಾಡಲಪೇಕ್ಷಿಸುತ್ತೇನೆ” ಎಂದಳು.

ಅದುಕಾರಣ, ಇಬ್ಬರೂ ನನ್ನಿಂದ ದೂರವಾಗಿಹೋಗಿ, ಬಹಳ ಹೊತ್ತಿನವರೆಗೂ ಮೆಲ್ಲನೆ ಮಾತಾಡುತ್ತಿದ್ದರು. ಮಾತು ಮುಗಿದನಂತರ ಮಂತ್ರವಾದಿನಿಯು ಕೊಠಡಿಯಿಂದ ಹೊರಟುಹೋದಳು. ಬೂಹಾವರೆಯು ಷಾಕಿರ್‌ಆಗನೊಡನೆ ಸರ್ಕೇಷಿ ಭಾಷೆಯಲ್ಲಿ ಏನನ್ನೋ ಹೇಳತೊಡಗಿದಳು.

ನಾನು ಅವರಿಂದ ಸುತ್ತಷ್ಟು ದೂರವಾಗಿಹೋಗಿ, ನಾನೇತಕ್ಕಾಗಿ ಇಲ್ಲಿಗೆ ಅನಾವಶ್ಯಕವಾಗಿ ಬಂದೆನೆಂದು ಮನಸ್ಸಿನಲ್ಲಿ ವಿಷಾದಪಟ್ಟುಕೊಂಡೆನು.

ಬೂಹಾವರೆಯು ನಾಫಿಜ್‌ಬೇಯು ಅನುರಾಗಕ್ಕಾಗಿ ಯಂತ್ರ ಬರೆಯಿಸುತ್ತಿದ್ದಳೆಂಬುದು ಸ್ಪಷ್ಟವಾಗಿ ತಿಳಿಯಬಂದಿತು. ಆದರೆ, ಇದರಿಂದ ನನಗೆ ಶುಭವುಂಟಾಗುವದೆಂದು ಮನಸ್ಸಿಗೆ ಸಮಾಧಾನಮಾಡಿಕೊಂಡೆನು. ಈ ಯಂತ್ರಸಾಮರ್ಥ್ಯದಿಂದ ನಾಫಿಜ್‌ಬೇಯು ಬೂಹಾವರೆ

ಯನ್ನು ಪ್ರೀತಿಸಲು ಮೊದಲುಮಾಡಿದರೆ, ಅವನ್ನು ನೋಡುವದು ನನಗೆ ಕಷ್ಟವಾದರೂ, ಅವನನ್ನು ಅಡ್ಡಿಮಾಡುವವರು ಯಾರೂ ಇರುತ್ತಿರಲಿಲ್ಲ. ಈ ವಿಚಾರವು ನನಗೆ ಪ್ರತ್ಯಕ್ಷವಾಗಿ ಕಂಡುಬಂದುದರಿಂದ ಇನ್ನು ಚಿಂತಿಸಿ ಫಲವೇನೂ ತೋರಲಿಲ್ಲ.

ಕೊಂಚ ಹೊತ್ತಾದಮೇಲೆ ಮಂತ್ರವಾದಿನಿಯು ಕೈಯಲ್ಲೇನನ್ನೋ ಹಿಡಿದು ಕೊಂಡುಬಂದು ಬೂಹಾವರಿಯೊಡನೆ,

"ಈ ಕೆಂಪು ಕಾಗದವನ್ನು ಅವನ ಬಾಗಿಲಮುಂದೆ ಹೂಳಬೇಕು. ಅದನ್ನು ಎಷ್ಟುಸಲ ದಾಟಿದರೆ ಅಷ್ಟು ಒಳ್ಳೆಯದು" ಎಂದಳು.

ಅವಳು ಇಷ್ಟು ಹೇಳಲು, ಬೂಹಾವರಿಯು ಅವಳಿಗೆ ಮೆಲ್ಲನೆ ಮಾತಾಡಲು ಸಂಜ್ಞೆ ಮಾಡಿದಳು. ಆವಳು ಒಂದು ಬಿಳೀ ಕಾಗದವನ್ನೂ ಒಂದು ಮೋಂಬತ್ತಿಯನ್ನೂ ಬೂಹಾವರಿಗೆ ಕೊಟ್ಟು ಅವನ್ನು ಉಪಯೋಗಿಸುವ ಕ್ರಮವನ್ನು ಮರೆಯಲ್ಲಿ ತಿಳುಹಿದಳು. ಬೂಹಾವರಿಯು ಅವಳಿಗೆ ಎರಡು ಅಷ್ರಫಿಯನ್ನು ಕೊಟ್ಟಮೇಲೆ ನಾವು ಬೀಳ್ಕೊಂಡೆವು.

ರಸ್ತೆಗೆ ಬಂದಕೂಡಲೆ ಬೂಹಾವರಿಯು ಬತ್ತಿಯನ್ನೂ ಆ ಎರಡು ಕಾಗದವನ್ನೂ ಷಾಕಿರ್ಆಗನಿಗೆ ಕೊಟ್ಟಳು. ಅವನು ಅವನ್ನು ತೆಗೆದುಕೊಂಡು ಬೇರೆಹೊರಟುಹೋದನು. ನಾನೂ ಬೂಹಾವರಿಯೂ ಹಮೀದಾಳ ಮನೆಯ ಕಡೆಗೆ ತಿರುಗಿದೆವು.

ಪಾಪ, ಹಮೀದಾಳು ನಮ್ಮನ್ನು ನೋಡಿ ಅತ್ಯಂತ ಸಂತೋಷಗೊಂಡಳು. ಮಹಮೂದರು ನನ್ನನ್ನು ತಮ್ಮ ಕೊಠಡಿಯೊಳಗೆ ಕರೆದು ಬಹು ಪ್ರೀತಿಯಿಂದ ಮುದ್ದಿಸಿದರು.

ಮಹಮೂದ್— (ನನ್ನನ್ನು ಹೆಮ್ಮೆಯಿಂದ ನೋಡುತ್ತಾ) ದೊಡ್ಡವಳಾದ ಮೇಲೆ ನೀನು ಎಷ್ಟು ಚೆಲುವೆಯಾದೆ! ಒಬ್ಬ ಮನುಷ್ಯನಿಗಂತೂ ನಿನ್ನನ್ನು ನೋಡಿದರೆ ಹಿಡಿಯಲಾರದಷ್ಟು ಸಂತೋಷವಾಗಬಹುದು! ಹಾಜಿರೇ, ಅಂದು ನಿಮ್ಮ ಹಳ್ಳಿಯಿಂದ ನನ್ನೊಡನೆ ಬಂದುದು ನಿನಗೆ ಜ್ಞಾಪಕವಿರುವದೆ? ನೀನು ಆಗ ಎಷ್ಟು ಚಿಕ್ಕವಳಾಗಿದ್ದೆ! ಈಗಲಾದರೋ ನಿಜವಾದ ರಾಣಿಯಂತೆ ಕಾಣಿಸುತ್ತಿರುವೆ!

ನಾನು ಮಹಮೂದರ ಹತ್ತಿರ ಕುಳಿತಿದ್ದಾಗ ಅತ್ತಕಡೆ ಬೂಹಾವರಿಯು ಹಮೀದಾಳಿಗೆ ಖಾನುಮರ ಸಂದೇಶವನ್ನು ತಿಳುಹುತ್ತಿದ್ದಳು. ಏಕೋ ಕಾಣೆ ಆಗ ನನಗೆ ಈ ಮಾತು ಮೊದಲು ಕಂಡಷ್ಟು ಕೆಟ್ಟದಾಗಿ ಕಾಣಿಸಲಿಲ್ಲ. ಮಹಮೂದರೂ, ಹಮೀದಳೂ ನನ್ನನ್ನು ಕಂಡು ಇಷ್ಟು ಸಂತೋಷಗೊಂಡುದೂ ನನ್ನನ್ನು ಅತ್ಯಂತವಾಗಿ ಉಪಚರಿಸಿ ಪ್ರೀತಿ ತೋರಿಸಿದುದೂ, ಇವೆಲ್ಲವೂ ನನಗೆ ಆ ಹಳೆಯ ಕಾಲವನ್ನೂ, ನನ್ನ ಬಾಲ್ಯದ

ದಿನಗಳನ್ನೂ ಜ್ಞಾಪಕಕ್ಕೆ ತಂದವು. ನಾಫಿಜ್‌ಬೇಯ ಸ್ಮರಣೆ ಮಾತ್ರ ತಪ್ಪಿ ಅವನನ್ನು ನಾನು ಹೇಗಾದರೂ ಮರೆಯುವುದಾದರೆ, ದಾವೂದನ ಪತ್ನಿಯೆನಿಸಿಕೊಂಡು ನಾನು ಅಸಂತುಷ್ಟಳಾಗಲಾರೆನೆನ್ನಿಸಿತು.

ದಾವೂದನ ತಾಯಿಯು ಅವನಿಗೆ ನಾವು ಬಂದಿರುವುದನ್ನು ತಿಳಿಸಿದುದರಿಂದ ಅವನು ಹೊರಗೇ ಇದ್ದನು. ಅದು ಕಾರಣ ನಾನು ಅವನನ್ನು ನೋಡಲಿಲ್ಲ. ಆದರೆ, ಸಂಜೆ ಹವಿಾದಳು ಹೊರಗೆ ಸಂಚರಿಸಿಕೊಂಡು ಬರೋಣವೆಂದು ಹೇಳಲು ನಾವು ಮನೆಯಿಂದ ಹೊರಟಾಗ, ದಾವೂದನು ಎದುರುಗಡೆಯ ಕಾಫಿಖಾನೆಯಿಂದ ಈಚೆಗೆ ಬಂದು ನಮ್ಮ ಹಿಂದೆ ಹಿಂದೆಯೇ ಕೊಂಚ ದೂರದಲ್ಲಿ ಕಾವಲಿಗಾಗಿ ಬರುತ್ತಿದ್ದನು. ಒಂದೆರೆಡುತಡವೆ ನಾನು ಅವನನ್ನು ಮರೆಯಲ್ಲಿ ನೋಡಿದೆನು. ತಂದೆಯ ತರಹವೇ ಮುಖದಲ್ಲಿ ದಯಾಪೂರಿತ್ವವೂ ಸೌಜನ್ಯವೂ ಸೂಸುತ್ತಿದ್ದವು. ಅವರಂತೆಯೇ, ಮುಖವು ಅಷ್ಟು ಕಳೆಯಾಗಿಲ್ಲದಿದ್ದರೂ ಕಣ್ಣುಗಳಲ್ಲಿ ಚಟುವಟಿಕೆಯು ಕಾಣಿಸುತ್ತಿತ್ತು. ಹುಬ್ಬುಗಳು ಬಹಳ ದಪ್ಪನಾಗಿದ್ದವು. ಸೇತುವೆಯ ಬಳಿ ಬರಲು, ಅವನು ತಾಯಿಯ ಹತ್ತಿರ ಬಂದು, ಅಯೂಬ್‌ಸುಲ್ತಾನಕ್ಕೆ ಹೋಗಬೇಕಾಗಿದ್ದರೆ ದೋಣಿಯು ಸಿಕ್ಕುವುದೆಂದು ಹೇಳಿದನು. ಬೂಹಾವರೆಯು ಖುಷಿಯಿಂದ ಒಪ್ಪಿಕೊಂಡಳು. ನಾವೆಲ್ಲರೂ ದೋಣಿಯಲ್ಲಿ ಕುಳಿತುಕೊಂಡು, ಅಯೂಬ್ ಸುಲ್ತಾನವನ್ನು ಸೇರಿದೆವು. ದಾವೂದನು ದೋಣಿಯ ಮತ್ತೊಂದು ಅಂಚಿನಲ್ಲಿ ಕುಳಿತಿದ್ದನು. ನಾನು ನನ್ನ ಛತ್ರಿಯನ್ನು ಎತ್ತರಿಸಿದಾಗೆಲ್ಲ ಅವನು ನನ್ನನ್ನು ಓರೆನೋಟದಿಂದ ನೋಡುತ್ತಿದ್ದುದನ್ನು ಕಂಡೆನು.

ಖಬರ್‌ಸ್ಥಾನವನ್ನು ತಲುಪಿದ ಮೇಲೆ ನಾವೆಲ್ಲರೂ ಬೇರೆಬೇರೆಯಾಗಿ ಹೋದೆವು. ಶೆಖೆಯು ಬಹಳವಾಗಿದ್ದುದರಿಂದ ನನ್ನ ಜತೆಯವರು ಸುತ್ತಾಡುತ್ತಿರುವಾಗ ನಾನು ಒಂದು ಕೊನೆಯಲ್ಲಿ ಹೋಗಿ ಹುಲ್ಲಿನಮೇಲೆ ಮಲಗಿಕೊಂಡೆನು. ಅವತ್ತು ಖಬರ್‌ಸ್ಥಾನದಲ್ಲಿ ಬಹಳ ಜನರು ಸೇರಿದ್ದರು. ಮಾಮೂಲೀದರ್ಜೆಯ ಜನರಿಗಿಂತ ದೊಡ್ಡವರನೇಕರನ್ನು ನೋಡಿ ನನಗೆ ಆಶ್ಚರ್ಯವಾಯಿತು. ಸ್ವಲ್ಪ ಹೊತ್ತಿನವರೆಗೆ ನಾನು ಸುತ್ತಮುತ್ತಲಿನ ಗೋರಿಗಳ ಮೇಲಿನ ಶಾಸನಗಳನ್ನು ಓದುತ್ತಿದ್ದೆನು. ಅನಂತರ ನನ್ನಾಲೋಚನೆ ನನ್ನ ಸ್ಥಿತಿಯ ಮೇಲೆ ಹೋಯಿತು. ಈ ಚಿಂತೆಯಲ್ಲಿ ನಾನು ಎಷ್ಟು ಹೊತ್ತು ಮುಳುಗಿದ್ದೆನೋ ಗೊತ್ತಿಲ್ಲ—ನನಗೆ ಪರಿಚಯವಿದ್ದ ಒಂದು ಧ್ವನಿಯು ನನ್ನನ್ನು ಎಚ್ಚರಗೊಳಿಸಿತು—ತಿರುಗಿನೋಡಲು ನಾಫಿಜ್‌ಬೇಯು

*ಖಬರ್‌ಸ್ಥಾನ = ಸ್ಮಶಾನ

ಸುಲ್ತಾನನ ಏಡಿಕಾಂಗ್‌ನೊಬ್ಬನ ಜತೆಯಲ್ಲಿ ತಿರುಗಾಡುತ್ತಿದ್ದನು. ತಕ್ಷಣವೇ ನನಗೆ ನಸಿರುಲ್ಲಾ ಪಾಷಾರವರು ಹಿಂದಿನ ರಾತ್ರಿ ಆಡಿದ ಮಾತು ಜ್ಞಾಪಕಕ್ಕೆ ಬಂದಿತು-ಅಂದರೆ, ಯೂಸಫಪಾಷಾರವರ ಮಗನು ಇಲ್ಲಿ ದರ್ಶನಮಾಡಲ್ಪಡುವವನಾಗಿದ್ದುದರಿಂದ ನಾಫಿಜ್‌ಬೇಯು ಜನಾಜದ ಜತೆ ಬಂದಿದ್ದನೆಂದು. ಆಯೂಬ್ ಸುಲ್ತಾನಕ್ಕೆ ನಾನು ಬಂದಿದ್ದೇನೂ ತಪ್ಪಿಲ್ಲವೆಂದು ನಾನು ತಿಳಿದಿದ್ದರೂ ನಾಫಿಜ್‌ಬೇಯೊಡನೆ ಸಮಾಗಮಿಸದಿದ್ದರೆ ಒಳ್ಳೆಯದೆಂದು ತೋರಿತು. ನಾಫಿಜ್‌ಬೇಯು ಏಡಿಕಾಂಗ್‌ನೂ ನನ್ನ ಸಮೀಪದಲ್ಲೇ ಹೋದುದರಿಂದ ನಾನು ಎದ್ದುನಿಂತೆನು. ನನ್ನ ಜತೆಯವರನ್ನು ಇಲ್ಲಿಅಲ್ಲಿ ಹುಡುಕಲಾರಂಭಿಸಿದೆನು. ಆದರೆ ದಾವೂದನು ಮಾತ್ರ ಸ್ವಲ್ಪ ದೂರದಲ್ಲಿ ಬಂದು ಮರವನ್ನು ಒರಗಿಕೊಂಡು ನನ್ನ ಕಾವಲಿಗಾಗಿ ಎಂಬಂತೆ ನಿಂತಿದ್ದನು. ಅವನೊಡನೆ ಮಾತಾಡುವುದು ನನಗೆ ಇಷ್ಟವಿಲ್ಲದಿದ್ದರೂ ಆ ವೇಳೆಯ ಸರಿ ಸ್ಥಿತಿಯಲ್ಲಿ ಮಾನದ್ವೇಷಗಳನ್ನೆಲ್ಲ ಒಂದು ಕಡೆ ಕಟ್ಟಿರಿಸಿ, ಅವನ ಹತ್ತಿರ ಹೋಗಿ, ಅವನ ಪಕ್ಕವನ್ನು ಮುಟ್ಟಿ, "ಎಲ್ಲರೂ ಎಲ್ಲಿ?" ಎಂದೆನು. ಒಡನೆಯೇ ನನ್ನ ಮುಖವೆಲ್ಲ ಕೆಂಪೇರಿ ಹೋಯಿತು.

ದಾವೂದ್—(ನನ್ನಂತೆಯೇ ನಾಚಿಕೆಗೊಳ್ಳುತ್ತಾ) ನನಗೆ ತಿಳಿಯದು. ನೀನು ಅವರ ಹತ್ತಿರ ಹೋಗಬೇಕೇ?

ನಾನು—ಹೌದು,(ಸ್ವಾಮಿ) ನಾಫಿಜ್‌ಬೇಯು ಇಲ್ಲೇ ಇರುವರು. ಅವರು ನನ್ನನ್ನು ನೋಡದಿದ್ದರೆ ಒಳ್ಳೆಯದು.

ದಾವೂದ್—ಹಾಗಾದರೆ ನಾನು ನನ್ನ ತಾಯಿ ಅವರುಗಳನ್ನು ಕರೆತರುವೆನು. ನಾಫಿಜ್‌ಬೇಯು ನಿನ್ನನ್ನು ಇಲ್ಲಿ ನೋಡಿದರೆ ಸಿಟ್ಟುಗೊಳ್ಳುವನೇ?

ನಾನು—ಇಲ್ಲ ಸಿಟ್ಟುಗೊಳ್ಳುವುದೇನೂ ಇಲ್ಲ. ಆದರೆ ಯಾವ ಯಜಮಾನನೂ ತನ್ನ ಸೇವಕಿಯು ಹೊರಗೆ ಹೋಗುವುದನ್ನು ಒಪ್ಪುವುದಿಲ್ಲ. ಯಾವನಾದರೊಬ್ಬ ಅಪರಿಚಯಸ್ಥನು ಆ ಸೇವಕಿಯನ್ನು ಏನಾದರೂ ಅಂದರೆ ಯಜಮಾನನಿಗೆ ವಿರೋಧವಾಗಿರುವುದು. ಆದರೂ ಆ ಹೊಸಬನನ್ನು ತನ್ನ ಮನಸ್ಸುಬಂದಂತೆ ಏನೂ ಅನ್ನಲಾರನು.

ನನ್ನ ಉತ್ತರವು ತೃಪ್ತಿಕರವಾಗಿರಲಿಲ್ಲವಾದುದರಿಂದ ಅವನವನ್ನು ಸರಿಯಾಗಿ ಗ್ರಹಿಸಲಿಲ್ಲ. ನಾನು ಅವನ ತಾಯಿಯನ್ನೂ ಬೂಹಾವನೆಯನ್ನೂ ಕರೆಯಲು ಇಚ್ಛೆಪಡುತ್ತೇನೆ. ಇಷ್ಟು ಸಾಕೆಂದು ತಿಳಿದು ಅವನು ಮತ್ತೇನೂ ಪ್ರಶ್ನೆ ಮಾಡಲಿಲ್ಲ.

ದಾವೂದ್—(ಎಲ್ಲಾ ಕಡೆಯೂ ನೋಡಿ ಯಾರನ್ನೂ ಕಾಣದೆ) ಇಬ್ಬರೂ

ಎಲ್ಲಿ ಹೋದರೋ ತಿಳಿಯದು. ನಾನು ಈಗಲೇ ಹುಡುಕಿ ಕರೆತರುವೆನು.

ಅವನು ಆಕಡೆ ಹೊರಟನು–ಇತ್ತಕಡೆ ಹಿಂದಿನಿಂದ ಯಾರೋ ನನ್ನ ಹೆಸರು ಹಿಡಿದು ಕೂಗಿದರು. ನೋಡಿದರೆ ನಾಫೀಜ್‌ಬೇಯು! ಅವನ ಮುಖದಲ್ಲಿ ಅಸಮಾಧಾನವೂ, ಕಣ್ಣುಗಳಲ್ಲಿ ಕೋಪವೂ ಕಾಣುತ್ತಿತ್ತು.

ನಾಫೀಜ್‌ಬೇ—(ಬೆದರಿಸುವವನಂತೆ) ಆ ಮನುಷ್ಯನು ಯಾರು? ನೀನು ಇಲ್ಲಿಗೆ ಹೇಗೆ ಬಂದೆ?

ನಾನು—(ಹೆದರಿ) ನಿಮ್ಮ ತಾಯಿಯು ನಮಗೆ ಹಮೀದಳ ಮನೆಗೆ ಹೋಗಲು ಅಪ್ಪಣೆ ಕೊಟ್ಟಿದ್ದರು. ಇಲ್ಲಿ ನಾವು ಸುತ್ತಾಡಲು ಬಂದಿದ್ದೇವೆ.

ನಾಫೀಜ್‌ಬೇ—ನೀನು ನನ್ನ ಮೊದಲ ಪ್ರಶ್ನೆಗೆ ಜವಾಬು ಕೊಡಲಿಲ್ಲ. ಅವನ್ಯಾರು? ಈಗ ತಾನೆ ಅವನೊಡನೆ ಬಹಳ ಸ್ನೇಹದಿಂದ ಮಾತಾಡುತ್ತಿದ್ದೆಯಲ್ಲಾ!

ನಾನು—(ಅತಿ ದೀನತೆಯಿಂದ) ಅವನು ಹಮೀದಳ ಮಗನಾದ ದಾವೂದನು. ಬೂಹಾವಲಿಯನ್ನೂ ಹಮೀದಳನ್ನೂ ಕರೆಯಲು ನಾನು ಅವನನ್ನು ಕಳುಹುತ್ತಿದ್ದೆನು.

ನಾಫೀಜ್‌ಬೇ—ಆದರೆ ನೀನು ಬೂಹಾವಲಿಯಿಂದಲೂ ಹಮೀದಳಿಂದಲೂ ಅಗಲಿದ್ದೆಯೇಕೆ? ಗಂಡಸಿನೊಡನೆ ಒಬ್ಬಳೇ ಏಕೆ ಇಲ್ಲಿಗೆ ಬಂದೆ? ಅದರಲ್ಲೂ, ನಿನ್ನನ್ನು ಮದುವೆಯಾಗಲು ಕೇಳಿರುವ ಇಂಥಾ ನಿರ್ದಾಕ್ಷಿಣ್ಯನೂ, ಮಾನಹೀನನೂ ಆದ ಪುರುಷನೊಡನೆ?

ನಾಫೀಜ್‌ಬೇಯ ಮಾತಿನ ರೀತಿಯು ನನಗೆ ಬಹಳ ಕೆಟ್ಟದಾಗಿ ಕಂಡಿತು. ಅವನ ಮನೆಯವರು ನನಗೆಷ್ಟೇ ಉಪಕಾರ ಮಾಡಿದ್ದರೂ ನನ್ನನ್ನು ಲೌಂಡಿಯರಂತೆ ಕಾಣಲು ಅವನಿಗಾವ ಹಕ್ಕೂ ಇರಲಿಲ್ಲ.

ನಾಫೀಜ್‌ಬೇ—(ಕೊಂಚ ತಡೆದು) ಹಾಗಾದರೆ ಈ ಮನುಷ್ಯನು ನಿನ್ನ ಹಳೇ ಸ್ನೇಹಿತನೆಂದು ನಾನು ತಿಳಿಯಬೋ? ವ್ಯಾಪಾರಗಾರನ ಮಗನಾದ ಈ ಮಂಕನಿಗೆ ಮೊದಲೇ ನಿನ್ನ ಒಪ್ಪಿಗೆಯು ಸಂಚಿಕೆಯಿತ್ತೋ? ಆದುದರಿಂದಲೇ ನಿನ್ನ ಮದುವೆಯ ಸಂದೇಶವನ್ನು ಕಳುಹಿಸಿದ್ದಾನೋ?

ಅವನ ಹೀನಾಯಕರವಾದ ನುಡಿಗಳಿಂದಲೂ, ವ್ಯಾಪಾರಸ್ಥನೆಂಬ ಶಬ್ದವನ್ನು ಉಪಯೋಗಿಸಿದುದರಿಂದಲೂ, ಉಂಟಾದ ಇರಿತದಿಂದ ನನ್ನ ಮನಸ್ಸಿಗೆ ಬಹಳ ನೋವಾಯಿತು. ನಾನು ಸಹ ಅವನಂತೆಯೇ ಅಹಂಕಾರದಿಂದ ಅವನ ಕಡೆ ನೋಡಿ ಹೀಗೆಂದೆನು,

ನಾನು—ಅವನು ವ್ಯಾಪಾರಗಾರನ ಮಗನಾದರೆ ನಾನು ಕಮ್ಮಾರನ ಮಗ

ಳೆಂಬುದನ್ನು ನೀವು ಮನೆತಿರಬಹುದು. ನನ್ನ ಅಂತಸ್ತೇನೆಂಬುದನ್ನು ನಾನು
ಚೆನ್ನಾಗಿ ಅರಿತಿರುವೆನು. ಅದನ್ನು ಹೆಚ್ಚಿಸುವ ದಿಟ್ಟತನವು ನನಗ್ಯಾವಾ
ಗಲೂ ಇರಲಿಲ್ಲ.

ಇದು ಕೇವಲ ಬುದ್ಧಿಯಿಲ್ಲದ ಉತ್ತರವಾಗಿತ್ತು. ಆದರೆ ಆಗ ಕೋಪ
ದಲ್ಲಿ ನನಗೇನೂ ತೋರಲಿಲ್ಲ.

ನಾಫಿಜ್‌ಬೇ—(ಬಿಗಿಮಾನದಿಂದ) ಇದೀಗ ಸರಿ. ನಿನ್ನ ಹಿತವನ್ನು ತಿಳಿದು
ಕೊಳ್ಳುವಷ್ಟು ಬುದ್ಧಿ ನಿನಗಿರುವುದನ್ನು ನೋಡಿ ಬಹಳ ಸಂತೋಷ
ವಾಯಿತು. ನಮ್ಮ ಮನೆಯಲ್ಲಿರುವವರಿಗೆ ನಮ್ಮ ಯಶಸ್ಸಿಗೆ ಸರಿಯಲ್ಲದ
ಯಾವ ಕಾರ್ಯವಾಗಲೀ ನಡೆದೀತೆಂಬುದು ಮಾತ್ರ ಜ್ಞಾಪಕವಿರಲಿ.
ನಮ್ಮ ಮನೆಯ ಒಬ್ಬ ಯುವತಿಯು ಈರೀತಿ ಅಯೂಬ್‌ಸುಲ್ತಾನಕ್ಕೆ
ಹೋಗಿ ತನ್ನ ಪ್ರೇಮಿಕನೊಡನೆ ಸಮಾಗಮಿಸುತ್ತಾಳೆಂದು ಜನರಿಗೆ ಗೊತ್ತಾ
ದರೆ ನಮಗೆಷ್ಟು ಅಪಖ್ಯಾತಿಯುಂಟಾಗುವುದು !

ನನಗೆ ಆಗ ಕೋಪವು ತುಂಬಿಹೋಗಿದ್ದ ಕಾರಣ ನನ್ನ ಶೌಶೀಲ್ಯದ
ವಿಷಯವಾಗಿ ಒಂದು ಮಾತನ್ನೂ ಹೇಳಲಾರದೆ ಹೋದೆನು. ಕೊಂಚ
ಹೊತ್ತು ನಾವಿಬ್ಬರೂ ಮೌನವಾಗಿದ್ದೆವು.

ನಾಫಿಜ್‌ಬೇ—(ಅತಿ ಕೋಪದಿಂದ) ನಿನ್ನನ್ನು ಇತರ ಸಕೇಶಿ ಹುಡುಗಿಯ
ರಿಗಿಂತ ಗೌರವಸ್ಥೆಯೆಂದೂ ಶುದ್ಧಚರಿತೆಯೆಂದೂ ಭಾವಿಸಿದ ನಾನು
ಮೂಢನೂ ಹುಚ್ಚನೂ ಆದೆ, ಅದರಿವತ್ತು ತಿಳಿದು ಬಂದುವರಲ್ಲಿ ನಿನಗೂ
ಅವರಿಗೂ ಇರುವ ವ್ಯತ್ಯಾಸವೇನೆಂದರೆ, ಯುಕ್ತಿಯಲ್ಲಿ ನೀನು ಅವರನ್ನು
ಮೀರಿಸಿದ್ದೀ. ನನ್ನ ಅನುರಾಗ ಪೂರ್ವಕವಾದ ನಡವಳಿಕೆಗಳಿಂದ ನಿನಗೆ
ಯಾವ ವಿಧವಾದ ಆಶೆಯೇನಾದರೂ ಹುಟ್ಟಿದರೆ ಅದನ್ನು ತೊಲಗಿಸಿ ಬಿಡು.
ಯಾಕೆಂದರೆ ದಾವೂದನಂಥಾ ಮನುಷ್ಯನಿಗೆ ನನ್ನನ್ನು ಗೇಲಿಮಾಡುವ
ಆಸ್ಪದ ಸಿಕ್ಕೀತು

ಈ ನುಡಿಗಳನ್ನು ಕೇಳಿ ನನಗೆ ಅತಿ ದುಃಖವಾಯಿತು. ಕೊನೆಗೆ
ತಡೆಯಲಾರದೆ ಉತ್ತರ ಹೇಳಲು ಧೈರ್ಯ ಮಾಡಿಕೊಂಡೆನು.

ನಾನು—(ಮೆಲ್ಲನೆ) ನನ್ನ ಒಡೆಯನೇ, ನನ್ನೊಡನೆ ಈ ವಿಧವಾದ ಮಾತು
ಗಳನ್ನಾಡಲು ನಿಮಗಾವ ಹಕ್ಕೂ ಇಲ್ಲ. ಯಾವ ವಿಷಯವನ್ನು ಮನಸ್ಸಿ
ನಿಂದ ದೂರಮಾಡಲು ನೀವು ಹೇಳುತ್ತಿರುವಿರೋ ಅದನ್ನು ಸಂತೋಷವಾ
ಮರೆತು ಬಿಡುವೆನು—ಯಾಕೆಂದರೆ ನನ್ನ ಮೇಲೆ ನಿಮ್ಮಾಲೋಚನೆಗಳ
ಯಾವ ವಿಧವಾಗಿರುವವೆಂಬುದನ್ನು ಈ ದಿನದಿಂದ, ಸಂತೋಷದ ಬದಲ

ನನಗೆ ದುಃಖವೂ ವ್ಯಸನವೂ ಬಹಳವಾಗಿದೆ.

ಉತ್ತರ ಹೇಳುತ್ತಿರುವಾಗ ನಾನು ನಾಫಿಜ್‌ಬೇಯ ಕಡೆ ನೋಡುತ್ತಿರಲಿಲ್ಲವಾದುದರಿಂದ ಅವನ ಮೇಲೆ ನನ್ನ ಮಾತಿನ ಪ್ರತಿಫಲವು ಯಾವ ರೀತಿ ಆಯಿತೆಂಬುದನ್ನು ನಾನು ತಿಳಿಯಲಾರದೆ ಹೋದೆನು. ಆಗಲೇ ಬೂಹಾವರೆಯೂ ಹವಿಾಡಳೂ ಬಂದು ಬಿಟ್ಟುದರಿಂದ ನಮ್ಮ ಮಾತುಕಥೆಯು ಮುಗಿದು ಹೋಯಿತು.

ನಾಫಿಜ್‌ಬೇಯನ್ನು ನೋಡಿದೊಡನೆಯೇ ಹವಿಾಡಳು ಅವನಿಗೆ ದೃಷ್ಟಿ ನೀವಳಿಸಿ ಹಾಕಿ ಅತ್ಯಂತವಾಗಿ ಆದರಿಸಿದಳು. ಆದರವನು (ಯಾವಾಗ್ಯೂ ಬಹಳ ಹರ್ಷ ಚಿತ್ತನಾಗಿರುತ್ತಿದ್ದವನು) ಅಂದು ಎಂದಿನಂತಿರದೆ, ಇದೊಂದನ್ನೂ ಗಮನಿಸದೆ, ಬೂಹಾವರೆಯೊಡನೆ ಇಂತೆಂದನು.

"ಮನೆಗೆ ಹೋಗು, ಹೊತ್ತಾಯಿತು. ಮನೇ ತಲುಪುವುದರಲ್ಲಿ ರಾತ್ರಿಯಾಗಿ ಹೋಗುವುದು."

ಇದನ್ನು ಕೇಳಿದೊಡನೆಯೇ ನಾನು ಹೊರಡಲು ಹಿಂತಿರುಗಿದೆನು. ನನ್ನ ಜತೆಯವರೆಲ್ಲ ನನ್ನ ಹಿಂದೆ ಹೊರಟರು. ನಾಫಿಜ್‌ಬೇಯು ಹೀಗೆ ಅವೇಳೆಯಲ್ಲಿ ಬಂದು ಬಿಟ್ಟದ್ದದಕ್ಕಾಗಿ ಮೆಲ್ಲನೆ ಗೊಣಗುತ್ತಾ ಬಂದರು. ನನ್ನ ಅಂತರಸ್ಥಿತಿಯು ಆಗ ಹೇಗಿತ್ತೆಂದರೆ, ಚಿಂತೆಯು ಆವರಿಸಿಕೊಂಡು, ಅವರ ಮಾತುಕಥೆಯಲ್ಲಿ ಭಾಗಿಯಾಗಲು ಮನಸ್ಸಿರಲಿಲ್ಲ. ಖಬತಾಷ್ ಎಂಬ ಸ್ಥಳವನ್ನು ತಲಪುವವರೆಗೂ ನಾನು ಮೌನವಾಗಿದ್ದೆನು. ಇಲ್ಲಿ ನಾವು ದೋಣಿಯಿಂದಿಳಿದು ನಡೆಯಲು ಸಿದ್ಧರಾದೆವು. ಬೂಹಾವರೆಯು ದಾವೂದನಿಗೆ ಅಭಿನಂದನೋಕ್ತಿಗಳನ್ನು ಹೇಳುತ್ತಿರುವಾಗ ನನ್ನ ಕಣ್ಣುಗಳೂ ಅವನ ಕಣ್ಣುಗಳೂ ಐಕ್ಯವಾದವು. ಅವನ ದೃಷ್ಟಿಯು ನನ್ನ ಮೇಲೆ ನೆಟ್ಟಿದ್ದ ರೀತಿಯಿಂದ, ಅವನು ಏನನ್ನೊ ತಿಳಿದುಕೊಳ್ಳಲು ಕುತೂಹಲನಾಗಿದ್ದಂತೆ ತೋರುತ್ತಿತ್ತು. ನಾಫಿಜ್‌ಬೇಯು ಆಡಿದ ಮಾತನ್ನು ಕೇಳಿ ನನಗೆ ಉಂಟಾಗಿದ್ದ ರೋಷವು ಇನ್ನೂ ಸ್ವಲ್ಪ ಮುಖದಲ್ಲಿ ಇದ್ದಿರಬಹುದು. ಅದನ್ನು ನೋಡಿ ದಾವೂದನು ಏನು ತಿಳಿದುಕೊಳ್ಳುವನೋ ಎಂಬ ನಾಚಿಕೆಯಿಂದ ನನ್ನ ಮುಖವು ಬಿಳಿಚಿಕೊಂಡಿತು. ಅಂತೂ ನನಗೆ ವಿಜಯವಾಯಿತು—ನನ್ನ ಇಬ್ಬರು ಪ್ರಣಯಕಾಂಕ್ಷಿಗಳಿಗೂ ನಾನು ತನ್ನನ್ನು ಬಿಟ್ಟು, ತನ್ನ ಸ್ನೇಹಿತನನ್ನು ಪ್ರೀತಿಸುವನೆಂಬ ನಂಬುಗೆಯುಂಟಾಯಿತು.

ನಾಫಿಜ್‌ಬೇಯ ದೋಣಿಯು ನಮಗಿಂತ ಮುಂದೆ ಹೊರಟು ಹೋಗಿತ್ತು. ಅದನ್ನು ನಾಲ್ಕು ಜನರು ನಡೆಸುತ್ತಿದ್ದುದರಿಂದ ನಾವು

ಮನೆಯನ್ನು ತಲುಪುವುದಕ್ಕೆ ಮೊದಲೇ ಅವನು ತೊಟ್ಟಿಯಲ್ಲಿ ಬಂದು ಕುಳಿತಿದ್ದನು. ಊಟದ ಹೊತ್ತಾಗಿದ್ದುದರಿಂದ ಲೌಂಡಿಯರೆಲ್ಲರೂ ಅವರ ಸಿದ್ಧತೆಯಲ್ಲಿ ತೊಡಗಿದ್ದರು. ಹೆಂಗಸರೆಲ್ಲಾ ಇನ್ನೂ ಮಹಡಿಯ ಮೇಲಿದ್ದುದರಿಂದ ನಾಫಿಜ್‌ಬೇಯು ಒಬ್ಬನೇ ಕುಳಿತಿದ್ದನು. ನಾನೂ, ಬೂಹಾವರೆಯೂ ಒಳಗೆ ಪ್ರವೇಶಿಸಲು, ನನ್ನ ಕಡೆ ಕಣ್ಣೆತ್ತಿ ಸಹ ನೋಡದೆ, ಬೂಹಾವರೆಯನ್ನು ನಿಲ್ಲಿಸಿಕೊಂಡು, ಸಿಟ್ಟನಿಂದ ಹೀಗೆಂದು ಕೇಳಿದನು,

"ಇವತ್ತು ಬೆಳಿಗ್ಗೆ ನಾನು ನಿನ್ನನ್ನು ಸರಸ್ಕರಿಯತ್‌ನ ಬಳಿ ಷಾಕಿರ್ ಆಗನೊಡನೆ ನೋಡಿದೆನು. ಸಾಯಂಕಾಲ ದಾವೂದನೊಡನೆ ಅಯೂಬ್ ಸುಲ್ತಾನಕ್ಕೆ ಹೋಗಿದ್ದೀ. ತಂದೆಯವರ ಚಾಕರಿಕೆಯಲ್ಲಿ ಈ ವಿಧವಾದ ನಡವಳಿಕೆಯನ್ನು ನಾನು ಒಪ್ಪುವೆನೆಂದು ತಿಳಿದಿದ್ದೀಯಾ ?"

ಬೂಹಾವರೆಯ ಮುಖವು ಘಾಬರಿಯಿಂದ ಜೀವಿತ ಸಂಶಯವಾಗಿ ಹೋಯಿತು. ಸಂತೈಸಿಕೊಳ್ಳಲು ಕುರ್ಚಿಯನ್ನು ಹಿಡಿದುಕೊಂಡು ನಿಂತಳು.

ಬೂಹಾವರ್—ಅಯ್ಯೋ ದೇವರೇ!

ಇಷ್ಟೆಂದ ಮೇಲೆ ಅವಳು, ಷಾಕಿರ್‌ಆಗನನ್ನು ತಾನೇ ಜತೆಯಲ್ಲಿ ಕರೆದುಕೊಂಡು ಹೋಗಲಿಲ್ಲವೆಂದೂ, ಅಕಸ್ಮಾತ್ ದಾರಿಯಲ್ಲಿ ಸಿಕ್ಕಿದನೆಂದೂ ಹೇಳುವಳೆಂದು, ನಾನು ಅವಳ ಮುಖದಿಂದ ತಿಳಿದುಕೊಂಡೆನು. ಆದರೆ ನಾಫಿಜ್‌ಬೇಯ ದೃಷ್ಟಿಯು, ಸುಳ್ಳು ಹೇಳುವುದರಿಂದ ಪ್ರಯೋಜನವಿಲ್ಲವೆಂಬುವನ್ನು ಬೋಧಿಸುತ್ತಿದ್ದುದರಿಂದ ಅವಳು ಸುಮ್ಮನಾಗಿ ಹೋದಳು.

ನಾಫಿಜ್‌ಬೇ—(ಅದೇ ಧ್ವನಿಯಿಂದ) ಸುಳ್ಳು ಹೇಳುವ ಶ್ರಮ ತೆಗೆದುಕೊಳ್ಳಬೇಡ. ಮಧ್ಯಾಹ್ನ ಷಾಕಿರ್‌ಆಗನಿಂದ ನೀನು ಹೋಗಿಬಂದ ಸಮಾಚಾರವನ್ನೆಲ್ಲಾ ಕೇಳಿ ತಿಳಿದು ಕೊಂಡಿದ್ದೇನೆ. ನಾನಿದನ್ನು ತಾಯಿಯವರಿಗೆ ತಿಳಿಸಿದರೆ ಅವರು ನಿನ್ನನ್ನು ಜೀವಸಹಿತ ಬೇರೆ ಬಿಡುವುದಿಲ್ಲವೆಂಬುದು ನಿನಗೆ ಗೊತ್ತೇ? ಆದರೆ ಇದರಲ್ಲಿ ನಿನ್ನ ತಪ್ಪೇನೂ ಇಲ್ಲವಾದುದರಿಂದ ನಾನು ಅವರಿಗೆ ಹೇಳುವುದಿಲ್ಲ. ಹಾಜಿರೆಯೇನಾದರೂ ಪುನಃ ಮಂತ್ರವಾದಿಗಳ ಹತ್ತಿರ ಸಿದ್ಧಿಯಂತ್ರಗಳನ್ನು ತರಲು ಹೋದರಾಗಲಿ ಅಥವಾ ಅಯೂಬ್ ಸುಲ್ತಾನಕ್ಕೆ ಹೋಗಿ ತನ್ನ ವಿಟನೊಡನೆ ಗುಪ್ತವಾಗಿ ಸೇರಲು ಇಚ್ಛಿಸಿದರಾಗಲಿ ನೀನು ಎಂದಿಗೂ ಅವಳ ಜತೆ ಹೋಗಕೂಡದು. ನಿನ್ನ ಮೇಲೆ ನನಗಿರುವ ಹಕ್ಕು, ದೇವರ ದಯೆಯಿಂದ ಹಾಜಿರೆಯ ಮೇಲಿಲ್ಲ.

ಈ ಅನ್ಯಾಯವಾದ ಅಪವಾದವನ್ನು ಕೇಳಿದೊಡನೆಯೇ ಆಶ್ಚರ್ಯದಿಂದ ಒಂದೆರಡು ಶಬ್ದಗಳು ನನ್ನ ಬಾಯಿಂದ ಹೊರಟವು. ಬೂಹಾವರೆಯ

ಗುಟ್ಟು ಹೊರಬೀಳದಂತೆ ಯಾವ ರೀತಿಯಲ್ಲಿ ಉತ್ತರ ಕೊಡಲೆಂದು ಯೋಚಿಸುತ್ತಿರುವಲ್ಲಿಯೇ ನಾಫಿಜ್‌ಬೇಯು ಎದ್ದು ಹೊರಗೆ ಹೊರಟು ಹೋದನು.

ಸ್ವಲ್ಪ ಹೊತ್ತು ಆಶ್ಚರ್ಯದಿಂದಲೂ ದುಃಖದಿಂದಲೂ ಕೂಡಿ ನನ್ನ ಬುದ್ಧಿಯೇ ಸರಿಯಾಗಿರಲಿಲ್ಲ. ನನ್ನ ಪಕ್ಕದಲ್ಲಿ ನಿಂತಿದ್ದ ಬೂಹಾವರೆಯ ಮುಖದವರ್ಣವು ಸರಿಯಾಗಿದ್ದುದರಿಂದ ಅವಳ ಮನಸ್ಸಿನಿಂದ ಒಂದು ಭಾರವು ಇಳಿದಿದ್ದಂತೆ ಕಾಣುತ್ತಿತ್ತು. ಒಡನೆಯೇ ಅವಳಲ್ಲಿ ಎಷ್ಟರವಟ್ಟಿನ ಮರ್ಯಾದೆಯನ್ನೂ, ಪ್ರತ್ಯಾಶೆಯನ್ನೂ ಇಡಬಹುದೆಂದು ನನಗೆ ತಿಳಿಯಿತು ಇವಳೊಡನೆ ಏನನ್ನಾದರೂ ಹೇಳಿಕೇಳುವದು ಪ್ರಯೋಜನವಿಲ್ಲವೆಂದು ತಿಳಿದು ನಾನು ಮೆಲ್ಲಮೆಲ್ಲನೆ ನನ್ನ ಕೊಠಡಿಯ ಕಡೆ ಹೊರಟು, ಒಳಗೆ ಹೋಗಿ ಮಂಚದಮೇಲೆ ಮಲಗಿಬಿಟ್ಟೆನು.

ನನ್ನ ಮನಸ್ಸಿಗೆ ಮೆಲ್ಲನೆ ಒಂದು ಆಲೋಚನೆಯು ಹೊಳೆಯಲಾರಂಭಿಸಿತು. ಕಣ್ಣುಗಳನ್ನು ತೆರೆದೆನು–ಏನೆಂದರೆ–ಬೂಹಾವರೆಯು ನಾಫಿಜ್‌ಬೇಗಾಗಿ ತರಿಸಲ್ಪಟ್ಟಿದ್ದಳು ಎಂಬುದು ಷಾಕಿರ್‌ಆಗನಿಗೆ ಗೊತ್ತಿತ್ತು. ಆದರೆ ಬೂಹಾವರೆಯು ತನಗೆ ನಾಫಿಜ್‌ಬೇಯಲ್ಲಿ ಉಂಟಾಗಿದ್ದ ನಿರಾಶೆಯನ್ನು ಬಹುಶಃ ಷಾಕಿರ್‌ಆಗನಿಗೆ ತಿಳಿಸಿರಲಿಲ್ಲವಾದುದರಿಂದ ಅವನು ತನ್ನ ಯುವಕ ಸ್ವಾಮಿಯಾದ ನಾಫಿಜ್‌ಬೇಯ ವಿವಾಹವು ಬೂಹಾವರೆಯೊಡನಾಗುವದೆಂದೇ ಭಾವಿಸಿದ್ದನು. ಇನ್ನು ಯತಾರ್ಥವಾದ ಸಂಗತಿಯನ್ನು ನುಡಿದರೆ ನಾಫಿಜ್‌ಬೇಯು ಬೂಹಾವರೆಯೊಡನೆ ಕೋಪಗೊಳ್ಳುವನೆಂದು ಭಯಗೊಂಡು, ಅದರ ಬದಲು ನನ್ನ ತಲೆಯ ಮೇಲೆ ಎಲ್ಲವನ್ನೂ ಹೊರಿಸಿದರೆ ನಾಫಿಜ್‌ಬೇಗೆ ಏನೂ ಗೊತ್ತಾಗುವದಿಲ್ಲವೆಂದು ತಿಳಿದನು.

ನಾಫಿಜ್‌ಬೇಯು ಅಂದು ನನ್ನ ವಿಷಯವಾಗಿ ಏನು ತಿಳಿದುಕೊಂಡಿರುವನೆಂಬುದನ್ನು ಯೋಚಿಸಿಕೊಂಡು, ನಾನು ಮುಖವನ್ನು ಕೈಗಳಿಂದ ಮುಚ್ಚಿಕೊಂಡು ಧಾರಾಕಾರವಾಗಿ ಅತ್ತೆನು. ಆದರೆ ನಾನು ತಪ್ಪಿತಸ್ಥಳಲ್ಲವೆಂಬುದನ್ನು ನಾಫಿಜ್‌ಬೇಗೆ ತಿಳಿಸದಿರುವದೇ ಉತ್ತಮವೆಂದು ಯೋಚಿಸಿದೆನು. ನಾಫಿಜ್‌ಬೇಯು ಸಮಯಸಿಕ್ಕಿದರೆ ನನ್ನ ಘಾಯಕ್ಕೆ ಉಪ್ಪುಹಾಕದಿರನೆಂದೂ, ಅದನ್ನು ಸಹಿಸುವದು ನನಗೆ ಕಷ್ಟವಾಗದಿರದೆಂದೂ ನಾನು ಚೆನ್ನಾಗಿ ಅರಿತಿದ್ದರೂ, ಅವನ ಶೃಂಗಾರ ಚೇಷ್ಟೆಗಳಿಂದುಂಟಾಗುತ್ತಿದ್ದ ವಕ್ರ ಪರಿಣಾಮದಿಂದ ತಪ್ಪಿಸಿಕೊಳ್ಳುವನೆಂಬುದು ನಿರ್ಧರವಾಯಿತು. ಕೆಲವು ಕಾಲದನಂತರ ಅವನು ನನ್ನನ್ನು ಅಪೇಕ್ಷಿಸುವದನ್ನೂ ಬಿಟ್ಟುಬಿಡುತ್ತಿದ್ದನು- ಈಗ ನನಗೆ ಕಾಣಬರುತ್ತಿದ್ದಷ್ಟು ಭಯವು ಆಗೇನೂ ಇರುತ್ತಿರಲಿಲ್ಲ.

ಇಷ್ಟು ಬುದ್ಧಿವಂತಿಕೆಯಿಂದ ಮನಸ್ಸನ್ನು ಘಟ್ಟಿಮಾಡಿಕೊಂಡರೂ, ಊಟದ ಮನೆಗೆ ಹೋದಾಗ ನನ್ನ ಹೃದಯವು ದುಃಖದಿಂದ ಕುಸಿದು ಹೋಗಿತ್ತು. ಇವತ್ತು ಹೊರಗಿನ ಅತಿಥಿಗಳ್ಯಾರೂ ಭೋಜನಕ್ಕಿರಲಿಲ್ಲ ವಾದುದರಿಂದ, ನಸಿರುಲ್ಲಾ ಪಾಷಾರವರು-ಮಕ್ಕಳೊಡನೆ ಹರಮ್‌ಸರಾದಲ್ಲೇ ಊಟಮಾಡುತ್ತಿದ್ದರು. ಸಮೀಪಕ್ಕೆ ಹೋಗಿ ಅವರ ಕೋಟಿನ ತುದಿಗೂ ಖಾನಮ್ ಆಫಂದಿಯವರ ಗೌನಿನ ತುದಿಗೂ ಮುದ್ದಿಟ್ಟೆನು. ಅಧಮ್ ಬೇಯು ತನ್ನ ಕೈಯ್ಯನ್ನು ನನ್ನ ಕಡೆ ನೀಡಲು ಅದನ್ನು ತುಟಿಗಿಟ್ಟು ಕೊಂಡೆನು. ಇದೇ ತರಹ ಎಲ್ಲರೊಡನೂ ನಡೆದುಕೊಂಡು ನಾಫಿಜ್ ಬೇಯ ಬಳಿ ಬಂದಾಗ ಅವನು ತನ್ನ ಕೈ ಎಳೆದುಕೊಂಡುಬಿಟ್ಟನು.

ನಾಫಿಜ್ ಬೇ— (ನನ್ನಿಂದ ಮುಖವನ್ನು ತಿರುಗಿಸಿಕೊಂಡು) ನಿನ್ನೊಡನೆ ಸಂದರ್ಶಿಸಿ ಇನ್ನೂ ಐದು ನಿಮಿಷಗಳು ತಾನೆ ಆದವು.

ವಹೀದಾಖಾನಮ್‌ಳು ನಗಲಾರಂಭಿಸಿದಳು. ಮಿಕ್ಕವರೆಲ್ಲರೂ ಆಶ್ಚರ್ಯದಿಂದ ಅಲ್ಲಲ್ಲಿ ನೋಡತೊಡಗಿದರು.

ವಹೀದಾಖಾನಮ್— ನಾಫಿಜ್ ಬೇಗೆ ನಮ್ಮ ಪದ್ಧತಿಗಳನ್ನು ಕಂಡರೆ ಬಹಳ ಬೇಸರ. ಖುಸ್ತಂತನಿಯಾಕ್ಕೆ ಹಿಂತಿರುಗುವಾಗ ಮೂರು ತಿಂಗಳು ಪ್ಯಾರಿಸ್ ನಲ್ಲಿದ್ದನೋ ಇಲ್ಲವೋ, ಸ್ತ್ರೀಯರನ್ನು ಸಂಭಾವಿಸುವ ವಿಚಾರದಲ್ಲಿ ವಿಚಿತ್ರ ವಿಚಿತ್ರವಾದ ಆಲೋಚನೆಗಳನೆಲ್ಲಾ ತಲೆಗೆ ತುಂಬಿಕೊಂಡು ಬಂದಿದ್ದಾನಲ್ಲದೆ ಅವುಗಳನ್ನು ಎಂದಿಗೂ ಬಿಡಲೂಬಿಡಲಾರನು. ತನ್ನ ಕೈಗೆ ಮುದ್ದಿಡಿಸಿ ಕೊಳ್ಳಲು ಇಷ್ಟಪಡದಿರುವದಕ್ಕೆ ಇದೇ ಕಾರಣ.

ವಲಿಯಾಖಾನಮ್— (ಸ್ವಲ್ಪಯೋಚಿಸುತ್ತಾ) ಆದರೆ ಆಶ್ಚರ್ಯ ! ಬೇ ಅಫಂದಿಯು ಹತ್ತು ವರ್ಷಕಾಲ ಪ್ಯಾರಿಸ್‌ನಲ್ಲಿದ್ದರೂ, ಅಲ್ಲಿಯ ವಾಸದ ಪ್ರತಿಫಲವುಂಟಾಗದೆ ಹಾಗೆಯೇ ಪಕ್ಕಾತುರುಕರಾಗಿಯೇ ಇದ್ದಾರೆ. ಆದರೆ ಮೂರು ತಿಂಗಳಲ್ಲೇ ಅವರ ತಮ್ಮನ ಆಶಯಗಳೆಲ್ಲಾ ಸಂಪೂರ್ಣವಾಗಿ ಬದಲಾಯಿಸಿಹೋಗಿವೆ.

ಅಧಮ್ ಬೇಯು ಕಿಲಕಿಲಾ ಎಂದು ನಕ್ಕರು. ಅವರ ಮುಖದಿಂದ ಆತಂಕದ ಚಿಹ್ನೆಗಳೆಲ್ಲಾ ಅಳಿಸಿಹೋಗಿದ್ದವು.

ಅಧಮ್ ಬೇ— (ಹರ್ಷದಿಂದ) ಇದರರ್ಥವೇನೆಂದರೆ-ಇಂಥಾ ಬಾಹ್ಯಕ ವಸ್ತುಗಳು ಇತರರ ಮನಸ್ಸಿಗೆ ಹತ್ತುವಷ್ಟು ಬೇಗ ನನ್ನ ಮನಸ್ಸಿಗೆ ಹತ್ತುವದಿಲ್ಲ ವೆಂದು-ಆದರೆ ನಿನಗೆ ನನ್ನನ್ನು ಹೊಗಳ ಬೇಕೆಂಬಾಶೆಯಿದ್ದರೆ ಬೇರೆ ವಿಧವಾದ ಶಬ್ದಗಳನ್ನುಪಯೋಗಿಸಬಹುದಾಗಿತ್ತಲ್ಲಾ ! ಈಗಿನ ಕಾಲದಲ್ಲಿ ಯಾರ

ನ್ನಾದರೂ ಪಕ್ಕಾತುರುಕನೆಂದು ಕರೆಯುವದು ಅವರನ್ನು ಚೆನ್ನಾಗಿ ಬೈದಂ ತಾಗುವದು. ನನ್ನ ರೀತಿಗಳು ಕೊಂಚ ಹಳೆಯ ತರಹದವೆಂಬುದರಲ್ಲಿ ಸಂದೇಹವಿಲ್ಲ. ಖಾನಸಮ್‍ಳು ಇದನ್ನು ತಿಳಿಸಿದ್ದು ಮೊದಲನೆಯ ಸಾರಿ ಯೇನೂ ಅಲ್ಲ. ಇತರರೂ ಸಹ ಹೀಗೆಯೇ ತಿಳಿದುಕೊಂಡಿರುವರು. ನಿನ್ನೆ ನಾನು ದಫ್ತರಿನಲ್ಲಿ ಒಬ್ಬ ಯುವಕನಿಗೆ ಕೆಲಸಹೇಳಿ ಹಿಂದಕ್ಕೆ ತಿರುಗಿಕೊಂಡಿ ರುವಾಗ, ಅವನು ತನ್ನ ಜೊತೆಯವನೊಡನೆ, ನನಗೆ ಕೇಳಿಸುವಷ್ಟು ಸಣ್ಣ ಧ್ವನಿಯಲ್ಲಿ ಹೀಗೆನ್ನುತ್ತಿದ್ದನು. "ಅಥಮ್‍ಬೇಯು ಪಕ್ಕಾ ಹಳೇತರಹದ ಮನುಷ್ಯನು. ಕೆಲಸದವರಂತೆ ಯಾವಾಗಲೂ ತುರ್ಕೀ ಭಾಷೆಯಲ್ಲೇ ಮಾತನಾಡುತ್ತಾರೆ. ಮನಸ್ಸುಬಂದರೆ ಫ್ರಾನ್ಸಿಸಿ ಭಾಷೆಯನ್ನು ಅತಿಶುದ್ಧ ವಾಗಿ ಆಡಬಲ್ಲರು," ಎಂದು.

ಅಲಿಬೇ— (ನಗುತ್ತಾ) ನೀವೇನಾದರೂ ಅವನಿಗೆ ಪ್ರತ್ಯುತ್ತರ ಹೇಳಿದಿರಾ?

ಅಥಮ್‍ಬೇ — ಏನೂ ಇಲ್ಲ. ತುರ್ಕೀಭಾಷೆಯಲ್ಲಿ ಬರೆಯಲ್ಪಡಬೇಕಾಗಿದ್ದ ಹುಕುಮನ್ನು ಫ್ರಾನ್ಸಿಸಿಭಾಷೆಯಲ್ಲಿ ಬರೆಯಬೇಕಾದುದೇನಿತ್ತು? ಅಥವಾ ನಾನು ಮಾಡಿದ್ದು ಸರಿಯೋ ತಪ್ಪೋ ಎಂಬುದನ್ನು ಚರ್ಚೆ ಏಕೆ ಮಾಡಬೇಕಾ ಗಿತ್ತು? ಅದರಿಂದ, ನಾನು ಬೇಗ ಮುಗಿಸಬೇಕೆಂದಿದ್ದ ಕೆಲಸವು ಹಾಗೆಯೇ ಬಿದ್ದಿದ್ದು, ಇಷ್ಟು ಚರ್ಚೆಯಾದಮೇಲು ಸಹ ನಮ್ಮಲ್ಲಿ ಯಾರೂ ಒಪ್ಪಿಗೆಗೆ ಬರುತ್ತಿರಲಿಲ್ಲ. ನಾನು ನನ್ನ ಕೆಲಸಗಳನ್ನು ಯಾವ ವಿಧದಲ್ಲಿ ನಡೆಸಿ ಕೊಂಡರೂ ಕಛೇರಿಯಲ್ಲಿ ಯಾರೂ ನನ್ನ ಅಭಿಪ್ರಾಯವನ್ನು ಗಣಿಸುವದಿಲ್ಲ. ನನ್ನನ್ನು ಕಂಡರೆ ಯಾರಿಗೂ ಸಂತೋಷವಿಲ್ಲ. ಈ ಅಸಮಾಧಾನದ ಕಾರಣ ವ್ಯಾವುದೆಂದರೆ ನಾನು ಕೊಂಚ ಖಂಡಿತವಾದಿಯಾಗಿರುವದೇ. ಅವರ ವ್ಯರ್ಥ ವಾದ ಹರಟೆಯನ್ನು ನಾನು ಕೇಳುವದಿಲ್ಲ. ಕುಡಿಯುವದು, ಜೂಜಾಡು ವದು ಮುಂತಾದ ಇತರ ಕೆಟ್ಟಕೆಲಸಗಳನ್ನು ಮಾಡಿ, ತಾವು ಐರೋಪ್ಯ ಪದ್ಧತಿಗಳನ್ನನುಸರಿಸುತ್ತಿರುವೆವೆಂದೂ, ಆದುದರಿಂದ ತಮ್ಮನ್ನು ಎಲ್ಲರೂ ಮರ್ಯಾದೆಮಾಡಬೇಕೆಂದೂ ತಿಳಿದುಕೊಂಡು ನಾಗರಿಕತೆಯೆಂದರೆ, ಆದರಿಂದ ಎಷ್ಟು ಬೇಗನೆ ಮನುಷ್ಯನು ಹಾಳಾಗುವನೋ ಅದೇ ಎಂದು ಅರ್ಥಮಾಡು ವವರನ್ನು ಕಂಡರೆ ನನಗೆ ಕೊಂಚವೂ ದಯೆಯಿಲ್ಲ. ಮೋಸಗಾರಿಕೆಯೂ ಮುಂದುವರಿಕೆಯೂ ಒಂದೇ ಎಂದು ಹೇಳುವಷ್ಟು ಬುದ್ಧಿ ನನಗಿಲ್ಲವೆಂದು ನಾನು ಮನಸ್ಸು ತೆರೆದು ಒಪ್ಪಿಕೊಳ್ಳುತ್ತೇನೆ.

ಅಲಿಬೇ— (ನಗುತ್ತಾ) ನಿಮ್ಮ ದಫ್ತರಿನ ಜನರ ಮೇಲೆ ನನಗೆ ಬಹಳ ಕನಿ ಕರವಾಗುತ್ತದೆ. ಅವರ, ಈ ಕೆಲಸಕ್ಕೆಬಾರದ ವಿದ್ಯಮಾನಗಳಿಂದ, ನಿಮ್ಮ

ತಲೆಯಲ್ಲಿ ಎಂಥಹ ಕೋಪಾಗ್ನಿ ಉತ್ಪತ್ತಿಯಾಗುತ್ತದೆಂಬುದು ಅವರಿಗೆ
ತಿಳಿದೇ ಇಲ್ಲ. ತಾವು ಮಾಡುವ ಕೆಲಸವೆಲ್ಲಾ ಇತರರು ನೋಡಿ ಕಲಿಯಲು
ಯೋಗ್ಯವಾದದ್ದೆಂದು ತಿಳಿದುಕೊಂಡಿದ್ದಾರೆ. ತಪ್ಪುಮಾಡಿದರು ಸಹ
ತಾವು ನೋಡಿರುವ ಯೂರೋಪ್‌ನ ಜನರನ್ನು ಅನುಸರಿಸಿ ನಡೆದಿರುವದ
ರಿಂದ ಕ್ಷಮಿಸಲ್ಪಡಲು ಅರ್ಹರೆಂದು ತಿಳಿದಿದ್ದಾರೆ.

ನಸಿರುಲ್ಲಾಪಾಷಾ— ಅಥರ್ನ್‌ನು ಹೇಳುವದೆಲ್ಲಾ ಸರಿ. ಈಗ ಇಪ್ಪತ್ತು
ವರ್ಷಗಳ ಹಿಂದೆ ನಾವಿದ್ದ ಮೂಢ ಸ್ಥಿತಿಗೆಮತ್ತೆ ಹೋಗಬೇಕೆಂಬುದುನನ್ನರ್ಥ
ವಲ್ಲದಿದ್ದರೂ, ತಮ್ಮ ಜಾತಿ, ಭಾಷೆಗಳನ್ನು ತುಚ್ಛವಾಗಿಕಾಣುತ್ತಾ, ಅವು
ಗಳ ಹೆಸರು ಹೇಳುವದಕ್ಕೇ ಅವಮಾನಪಟ್ಟುಕೊಳ್ಳುವದನ್ನು ನಾನೆಂದಿಗೂ
ಮುಂದುವರಿಯುವಿಕೆಯೆಂದು ಕರೆಯಲಾರೆನು.

ಅಲಿಬೇ— (ನಗುತ್ತಾ) ಆದರೆ, ಅಫಂದೀಮ್, ನಮ್ಮ ಭಾಷೆಯು ಸಹ
ಮುಂದುವರಿದಿರುವದು. ಮಸಲಾ, 'ಆನರ್' ಎಂಬ ಶಬ್ದವನ್ನು ಮೊದ
ಲೆಂದೂ, ನಮ್ಮ ಭಾಷೆಯಲ್ಲಿ ಕೇಳಿರಲಿಲ್ಲ. ಬಹುಶಃ ಇಂಥಾ ಶಬ್ದವಿರಲೇ ಇಲ್ಲ
ವೇನೋ! ಆದರರ್ಥವು ಸಾಮಾನ್ಯವಾಗಿ 'ಯೋಗ್ಯತೆ, ಸಭ್ಯತೆ, ಧರ್ಮಿಷ್ಠತೆ
ಆಸಕ್ತತೆ' ಯೆಂದಾಗುತ್ತದೆ. ಇದರಸೂಕ್ತವಾದ ಶಬ್ದವನ್ನು ತುರ್ಕೀ
ಭಾಷೆಯಲ್ಲಿ ನಾವು ಕಲ್ಪಿಸಿದಾಗಿನಿಂದ ಪ್ರತಿಯೊಬ್ಬರ ಬಾಯಲ್ಲೂ ಅದೇ
ಇರುವದು.

ನಾಫಿಜ್‌ಬೇ — (ಹಂಗಿಸುವಂತೆ) ಮೊದಲು ಈ ಗುಣಗಳು ಪ್ರತ್ಯಕ್ಷವಾಗಿ
ದ್ದವು. ಈಗಲಾದರೋ ಶಬ್ದದಲ್ಲಿ ಮಾತ್ರವಿದೆ. ಇವನ್ನು ಸಹ ಮುಂದು
ವರೆಯುವಿಕೆಯೊಡನೆ ಸೇರಿಸುತ್ತೀರೇನೋ.

ಅಥರ್ನ್‌ಬೇ— (ನಗುತ್ತಾ) ಎಷ್ಟು ಕತ್ತರಿಸಿನಂತೆ ಮಾತನಾಡಿದೆ ಮತ್ತೆ
ತನ್ನ ಪಾರ್ಟಿಗೇ (ಸಂಗಡಕ್ಕೇ) ವಿರೋಧವಾಗಿ! ಇನ್ನು ನೀನು ನಮ್ಮ
ಪಾರ್ಟಿಗೆ ಸೇರಿಬಿಡುವೆಯೆಂಬಾಶೆ ನನಗಿದೆ.

ನಾಫಿಜ್ ಬೇ— (ರೇಗಿ) ಎರಡು ಪಾರ್ಟಿಗಳಲ್ಲಿ ಒಂದಾದರೂ ಯೋಗ್ಯವಾದ
ದಲ್ಲ. ಅವುಗಳ ಮೆಂಬರುಗಳಲ್ಲಿ ಒಬ್ಬರಿಗಾದರೂ ಕೊಂಚ ಬುದ್ಧಿಯಾಗಲೀ
ತಿಳುವಳಿಕೆಯಾಗಲೀ ಇಲ್ಲ. ಇವರೆರಡರ ಉದ್ದೇಶವೇನೆಂಬುದು ಇವತ್ತಿನ
ವರೆಗೆ ನನಗೆ ಚೆನ್ನಾಗಿ ಗೊತ್ತಾಗಲಿಲ್ಲ. ತುರ್ಕೀ ಯುವಜನ ಸಂಘದ ಕಡೆಯ
ವರು, ತಮ್ಮ ಎಂದೂ ಪಕ್ಷಪಾತರ ಕೈಕೆಳಗೆ ಬಿದ್ದಿರುವದನ್ನು ನಾನು ಅನೇಕ
ವೇಳೆ ನೋಡಿದ್ದೇನೆ. ಬದಲಾವಣೆಗಳನ್ನು ಇಚ್ಛಿಸದಿರುವಂಥಾ ಪೂರ್ವೀಕರ
ನೇಕರು ತಮ್ಮ ಮಕ್ಕಳನ್ನು ಯೂರೋಪಿನ ಇತರ ದೇಶಗಳಿಗೆ ವಿಧ್ಯಾಭ್ಯಾಸ

ಕ್ಕಾಗಿ ಕಳುಹಿಸಿರುವದನ್ನೂ ನೋಡಿದ್ದೇನೆ. ಅಲ್ಲಿ ನವೀನ ಪದ್ಧತಿಗಳನ್ನು ಕಲಿಯಲು ಇವರಿಗೆ ಸರ್ವವಿಧವಾದ ಆಸ್ಪದವೂ ಸಿಕ್ಕುವದು. ಈ ಪೂರ್ವಿಕರೇ ಮತ್ತೆ ವಿದ್ಯಾವತರಾದ ಈ ಯುವಕರ ವಿಷಯವಾಗಿ, ಅವರು ಮೊದಲಿನ ಪದ್ಧತಿಗಳನ್ನು ಅನುಸರಿಸುವದಿಲ್ಲವೆಂತಲೂ, ಈಸಾಯಿಯವರನ್ನು ದ್ವೇಷಿಸುವದಿಲ್ಲವೆಂತಲೂ, ಸಾಂಕುಶ ಪ್ರಭುತ್ವವನ್ನು ಕೆಟ್ಟದೆಂದು ಹೇಳುವರೆಂತಲೂ ಆಕ್ಷೇಪಿಸುತ್ತಾರೆ.

ಅಲಿಬೇ— ನೀನು ಇವತ್ತು ರಾಜಕೀಯ ವಿಚಾರ ಮಾತನಾಡುತ್ತಿರುವದು ನನಗೆ ಬಹಳ ಸಂತೋಷವಾಯಿತು. ನೀನು ಯಾವ ಗುಂಪಿಗೆ ಸೇರಿದವನೆಂಬುದು ತಿಳಿಯದೆ ನಾನು ಗೋಜಿನಲ್ಲಿ ಬಿದ್ದಿದ್ದೆನು. ಈಗಲಾದರೂ ನೀನು ಖಂಡಿತವಾಗಿ ಈಗಿನ ರಾಜಕೀಯ ವಿಚಾರಗಳಲ್ಲಿ ನಿನ್ನಭಿಪ್ರಾಯವೇನೆಂಬುದನ್ನು ತಿಳಿಸಬೇಕು.

ನಾಫಿಜ್‌ಬೇಯು ಜವಾಬುಕೊಡದೆ ಒಂದು ಷಪ್ತಾಲನ್ನು ಕೊಯ್ದು ತಿನ್ನಲಾರಂಭಿಸಿದನು.

ವಲಿಯಾಖಾನಮ್— ಇವತ್ತೇನು ನಾಫಿಜ್‌ಬೇಯು ವಿಚಿತ್ರವಾಗಿ ಹುಬ್ಬುಗಂಟು ಹಾಕಿಕೊಂಡು ಇರುವನು. ಆದರೆ ಒಂದು ತಿಂಗಳಿಗಿಂತ ಹೆಚ್ಚಾಗಿ ಅವನ ರೀತಿ ಇದೇ ಆಗಿರುವದು ವ್ಯಸನಕರವಾಗಿದೆ. ತಂದೆಯವರೇ-ನಿಮ್ಮ ಇಷ್ಟಬಂದುದನ್ನೆಲ್ಲಾ ಮಾಡಬಹುದು. ಆದರೆ ಇವನನ್ನು ಮಾತ್ರ ಪುನಃ ಅನಾತೂಲಿಯಕ್ಕೆ ಕಳುಹಿಸದಿರಿ. ಇದು ನನಗೆ ಶಿಕ್ಷೆಯಾಗಿದೆ.

ನಸಿರುಲ್ಲಾಪಾಷಾ—(ಮಗನ ಕಡೆ ನೋಡುತ್ತಾ) ನಾಫಿಜ್‌ಬೇಯು ಬಹಳ ಆಯಾಸಗೊಂಡವನಂತೆ ಕಾಣುತ್ತಾನೆ. ಆಯುಬ್‌ಸುಲ್ತಾನದಲ್ಲಿ ಬಹಳ ಶೆಖೆಯಾಗಿತ್ತೇನು ?

ನಾಫಿಜ್‌ಬೇ- ವಿಪರೀತ ಶೆಖೆಯಾಗಿತ್ತು. ಅಲ್ಲದೆ ಗೋರಿಯ ಕಟ್ಟೆ ಮುರಿದು ಹೋಗಿದ್ದುದರಿಂದ ಮೂರು ಘಂಟೆಗಳ ಕಾಲಪೂರ್ತಿ ಅದನ್ನು ಸರಿಮಾಡಲು ಕಾದಿರಬೇಕಾಯಿತು.

ಖಾನಮ್ ಆಫಂದಿ— ಹಾಗಾದರೆ ನೀನು ಬಿಸಲಿನಲ್ಲೇ ನಿಂತಿದ್ದೆಯಾ ? ಮಗೂ ನಿನ್ನ ಮುಖವನ್ನು ನೋಡಿದರೆ ತಲೆನೋವಿರುವಂತೆ ಕಾಣುತ್ತದೆ.

ನಾಫಿಜ್‌ಬೇ-- (ಆತುರದಿಂದ) ಇಲ್ಲ ಅಮ್ಮಾ ನಾನು ಸ್ವಸ್ಥನಾಗಿದ್ದೇನೆ. ಆಯಾಸಗೊಂಡು ಮಾತ್ರ ಇದ್ದೇನೆ. ರಾತ್ರಿ ಚೆನ್ನಾಗಿ ನಿದ್ದೆ ಬಂದರೆ ಬೆಳಗ್ಗೆ ಸರಿಹೋಗುವೆನು.

ಖಾನಮ್ ಆಫಂದಿ— (ಎದ್ದುನಿಂತು, ಅವನ ಮಾತನ್ನು ನಂಬದೆ) ದೇವರು

ಸಧ್ಯ ಹಾಗೆಯೇ ಮಾಡಲಿ. ನಿನ್ನ ಮುಖವು ಇಳಿದು ಹೋಗಿರುವುದು. ನೀನು ಸರಿಯಾಗಿರುವಂತೆ ಕಾಣುವುದಿಲ್ಲ.

ನಾಫಿಜ್‌ಬೇಯೂ ಹೊರಡಲು ಎದ್ದು ನಿಂತನು. ಅವನು ತಿರುಗಿದಾಗ ಮುಖವು ಬಹಳ ಬಿಳಚಿಕೊಂಡು ಹೋಗಿದ್ದುದನ್ನು ಕಂಡೆನು. ಕಣ್ಣುಗಳ ಕೆಳಗೆ ದೊಡ್ಡ ಗೆರೆಗಳು ಬಂದಿದ್ದುವು. ಆಗ ಅವನ ತಪ್ಪನ್ನೆಲ್ಲಾ ಕ್ಷಮಿಸಿ, ಅವನನ್ನು ಕನಿಕರದಿಂದ ನೋಡತೊಡಗಿದೆನು. ಬಲಹೀನತೆಯು ಬಹಳವಾಗಿದ್ದುದರಿಂದ, ಹಿಂಸೆಪಡುತ್ತಿರುವಂತೆ ಮುಖವನ್ನು ಮಾಡಿಕೊಂಡು, ಎದ್ದು ನಿಂತು ಹಣೆಯ ಮೇಲೆ ಕೈಯಿಟ್ಟು ಕೊಂಡನು. ಅವನ ಈ ಸ್ಥಿತಿಯನ್ನು ನೋಡಿ, ಅವನಿಗೆ ನನ್ನ ವಿಷಯದಲ್ಲುಂಟಾಗಿದ್ದ ತಪ್ಪು ಅಭಿಪ್ರಾಯವನ್ನು ಸರಿಪಡಿಸಬಾರದೆಂದು ನಾನು ಮಾಡಿಕೊಂಡಿದ್ದ ಸಂಕಲ್ಪವನ್ನೆಲ್ಲಾ ಮರೆತುಬಿಟ್ಟು ನಾನಾಗಿಯೇ ಅವನನ್ನು ಮಾತಾಡಿಸಲು ಮುಂದುವರಿದೆನು. ಮೊದಲಿಂದಲೂ ಹಿಡಿ ಈ ಕೆಲಸಕ್ಕಾಗಿಯೇ ನೇಮಿಸಲ್ಪಟ್ಟಿದ್ದ ಸೇವಕಿಯಿಂದ ಕೈತೊಳೆಯುವ ತಟ್ಟೆಯನ್ನು ತೆಗೆದುಕೊಂಡು ನಾನೇ ಅವನ ಮುಂದೆ ಹಿಡಿದೆನು. ಅವನು ನನ್ನ ಕಡೆ ನೋಡಿ ಕೊಂಚ ಅಸಮಾಧಾನಯುತನಾದನು.

ನಾಫಿಜ್‌ಬೇ—(ಬೇರೆ ಕಡೆ ನೋಡುತ್ತಾ, ಬಿಗುಮಾನದಿಂದ) ಅತ್ಯಂತ ಉಪಕಾರವಾಯಿತು. ಆದರೆ ನೀನು ಬಹಳ ಆಯಾಸಗೊಂಡಿರುವೆ. ಮರಿಯುಮ್, ಈ ಪಾತ್ರೆಯನ್ನು ಅವಳಿಂದ ತೆಗೆದುಕೊ.

ಮರಿಯುಮ್‌ಳು ಹಾಗೆಯೇ ಮಾಡಿದಳು. ಅವನು ಕೈತೊಳೆದುಕೊಳ್ಳುತ್ತಿದ್ದಾಗ, ಇತ್ತ ನಾನು ನನ್ನ ಕಣ್ಣುಗಳಲ್ಲಿ ತುಂಬಿಹೋಗಿದ್ದ ಕಣ್ಣೀರನ್ನೊರಸಿಕೊಳ್ಳಲು ಕಿಟಿಕಿಯ ಕಡೆ ಹೊರಟೆನು. ಅಯ್ಯೋ, ನಾಫಿಜ್‌ಬೇಯು ನನ್ನನ್ನು ತನ್ನ ಸೇವೆಗೆ [illegible] ಅರ್ಹಳೆಂದು ಎಣಿಸಲಿಲ್ಲವಲ್ಲಾ !

ಮಾರನೆಯ ದಿನ ನಾನು ಸಾಮಾನುಗಳನ್ನು ಕಟ್ಟುವುದರಲ್ಲಿ ತೊಡಗಿದ್ದುದರಿಂದ, ಸಾಯಂಕಾಲ ಮಾತ್ರ ನನಗೆ ತೋಟಕ್ಕೆ ಹೋಗಿ, ಮನೆಯ ಹೆಂಗಸರೊಡನೆ ಸೇರಲು ಅವಕಾಶ ಸಿಕ್ಕಿತು. ಅಥನ್‌ಬೇಯೂ ನಾಫಿಜ್‌ಬೇಯೂ ಅಲ್ಲೇ ಇದ್ದರು. ನಾಫಿಜ್‌ಬೇಯು, ತನ್ನ ಅಣ್ಣನ ಕಿರಿಯ ಮಗನಾದ ಯೂಸಫ್‌ನನ್ನು ಒಂದು ಮರದ ಮೇಲೆ ಕುಳ್ಳಿರಿಸಿ, ಹಿಡಿದುಕೊಂಡು ನಿಂತಿದ್ದನು. ಯೂಸಫ್‌ನು ಬಹಳ ನಗುತ್ತಿದ್ದನು. ಆದರೆ ಅವನ ತಾಯಿಯಾದ ಮರಿಯಾಖಾನಮ್‌ಳು ಅವನು ಬಿದ್ದು ಹೋಗುವನೆಂಬ ಶಂಕೆಯಿಂದ ಅಷ್ಟು ವ್ಯಾಕುಲಳಾಗಿದ್ದಳು.

ನನ್ನನ್ನು ಕಂಡು ನಾಫಿಜ್‌ಬೇಯು ತಿರುಗಿನೋಡಲು ನವಿಶ್ಯಾರ್ವರ ಕಣ್ಣುಗಳೂ ಸೇರಿದವು. ಆದರೆ ಅವನು ಅಲಕ್ಷ್ಯದಿಂದ ತನ್ನ ದೃಷ್ಟಿಯನ್ನು ಮರೆಮಾಡಿಕೊಂಡು ಬಿಟ್ಟನು. ಅವನು ಅಸ್ಪಷ್ಟನಾಗಿ ಕಾಣುತ್ತಿದ್ದುದನ್ನು ನೋಡಿ ನನಗೆ ಬಹಳ ದುಃಖವಾಯಿತು. ಕಣ್ಣುಗಳ ಕೆಳಗೆ ದೊಡ್ಡ ಕಪ್ಪು ಗೆರೆಗಳು ಬಿದ್ದು ಕೆನ್ನೆಗಳು ಕೆಂಪೇರಿ, ಹಣೆಯ ಮೇಲೆ ಸುಕ್ಕುಗಳು ಬಂದಿದ್ದವು.

ನಾಫಿಜ್‌ಬೇ—ವಲಿಯಾಖಾನಮ್, ಈಗ ನೋಡು. ನಿನ್ನ ಮಗನ ಕೈ ಬಿಟ್ಟುಬಿಡುತ್ತೇನೆ. ಅವನು ನಿಂತುಕೊಳ್ಳುವುದನ್ನು ಕಲಿಯಬೇಕು.

ವಲಿಯಾಖಾನಮ್—(ನಾಫಿಜ್‌ಬೇಯು ಕೀಟಲೆ ಮಾಡುತ್ತಿದ್ದುದರಿಂದ ಕಣ್ಣಿನಲ್ಲಿ ನೀರುತುಂಬಿ ಹೋಗುತ್ತಿದ್ದರೂ, ನಗುತ್ತಾ) ಮರದ ಮೇಲೆಯೋ! ಅವನು ಬಿದ್ದು ಹೋಗುವನೆಂದು ನಾನು ಖಂಡಿತವಾಗಿ ಹೇಳುತ್ತೇನೆ. ದಯ ಮಾಡಿ ಇಳಿಸಿಬಿಡು. ಹಾಜಿರೇ, ನಿನ್ನ ಮಾತನ್ನು ಕೇಳುವನು. ಅವನ ಹತ್ತಿರದಿಂದ ಯೂಸಫ್‌ನನ್ನು ಕರೆದುಕೊ.

ನಾನು ನಾಫಿಜ್‌ಬೇಯ ಕಡೆ ಹೊರಟು ಏನನ್ನೋ ಯೋಚಿಸಿಕೊಂಡು ಮತ್ತೆ ನಿಂತುಬಿಟ್ಟೆನು. ಕೊನೆಗೆ ಅವನು ನನ್ನ ತೊಂದರೆಯನ್ನು ಬಿಡುಗಡೆ ಮಾಡಿದನು, ಅಂದರೆ ಯೂಸಫ್‌ನನ್ನು ಇಳಿಸಿ ನೆಲದ ಮೇಲೆ ಕುಳ್ಳಿರಿಸಿ ತಾನೂ ಅವನ ಪಕ್ಕದಲ್ಲಿ ಮಲಗಿಕೊಂಡು ಬಿಟ್ಟನು.

ನಾಫಿಜ್‌ಬೇ—(ಕೊಂಚ ಅಸಮಾಧಾನದಿಂದ)ಇಗೋ, ಇನ್ನು ಸಂತೋಷವಾಗಿರಬಹುದು. ಈ ಕಪಿಗೆ ನಾನೇನೂ ಹಿಂಸೆ ಕೊಡುವುದಿಲ್ಲನೆಂದು, ನಿನಗೇಕೆ ತಾನೆ ನಂಬಿಕೆ ಹುಟ್ಟುವುದಿಲ್ಲವೊ ದೇವರೇ ಬಲ್ಲ. ಅದನ್ನು ಕಂಡರೆ ನನಗೆ ಒಂದು ತರಹದ ವೈರವೆಂದೂ, ಅದನ್ನು ಹಿಂಸಿಸುವ ಯೋಚನೆಯಲ್ಲೇ ನಾನು ಸದಾ ಮುಳುಗಿರುವೆನೆಂದೂ ನೀನು ತಿಳಿದಿರಬಹುದು. ಇಲ್ಲವಾದರೆ, ಅದು ನನ್ನ ಹತ್ತಿರ ಬಂದು ಐದು ನಿಮಿಷಗಳಾಗುವುದರೊಳಗೆ ನೀನು ಹೆದರಿಕೆಯಿಂದ, ಜ್ಞಾನತಪ್ಪಿದವಳಂತೇಕಾಗುತ್ತಿಯೋ ನನಗೆ ಗೊತ್ತಾಗುವುದಿಲ್ಲ.

ವಲಿಯಾ—ನಾನು ಮತ್ತೇನ ಮಾಡಲಿ ? ಅದರ ಕೈಕಾಲುಗಳೇನೂ ಕಬ್ಬಿಣದಿಂದ ಮಾಡಲ್ಪಟ್ಟಿಲ್ಲವೆಂಬುದನ್ನೂ, ಮುರಿದು ಹೋಗುತ್ತವೆಂಬುದನ್ನೂ ನೀನು ಯಾವಾಗಲೂ ಮರೆತು ಬಿಡುತ್ತೀ. ನಿನಗೆ ಮಕ್ಕಳಾದಾಗ ಏನು ಮಾಡುತ್ತೀಯೊ ಗೊತ್ತಿಲ್ಲ. ಈಗಿನಿಂದ ನನಗೆ ಅವುಗಳ ಮೇಲೆ ಕನಿಕರವಾಗುತ್ತದೆ. ಈಗಲಾದರೂ, ನಾಫಿಜ್‌ಬೇ,—ನಿನಗೆ ಬೇಗ ಮದುವೆಯಾಗಲೆಂಬುದೇ ನನ್ನ ಆಶೆ. ಮದುವೆಯಾದ ಮೇಲೆ ನೀನು ಹೇಗಿರುವೆಯೋ

ನೋಡಬೇಕು.

ನಾಫಿಜ್‌ಬೇ—ನಿನ್ನ ದಯೆ. ನೀನು ನನಗೆ ಬಹಳ ಉಪಕಾರ ಮಾಡುವವಳಂತೆ ಕಾಣುತ್ತಿ-ನಿನ್ನನ್ನು ಸಂತೋಷಪಡಿಸುವುದು ನನಗೆ ಸ್ವಾಭಾವಿಕ ಕರ್ತವ್ಯವಾಗಿದೆ. ಬಾ. ಈಗಲೇ ಆಲೋಚಿಸೋಣ. ನೀನು ನನಗೋಸ್ಕರ ಒಂದು ಹೆಣ್ಣನ್ನು ಹುಡುಕು. ನಿನ್ನನ್ನು ಸಂತೋಷಪಡಿಸಲು ನಾನವಳನ್ನು ಮದುವೆಯಾಗುವೆನು.

ವಲಿಯಾಖಾನಮ್—ನಿನ್ನ ಹಾಸ್ಯಹಾಗಿರಲಿ. ನಿಜವಾಗಿಯೂ ನೀನೇಕೆ ನಿನ್ನ ತಾಯಿಯೊಡನೆ ನಿನಗೆ ಮದುವೆ ಮಾಡಲು ಹೇಳುವುದಿಲ್ಲ? ಇದೇ ಒಳ್ಳೆಯ ಸಮಯ—ಮತ್ತೆ ಬೇರೆ ಸಮಯವೆಲ್ಲಿ ಸಿಕ್ಕುವುದು? ಈಗಿನಿಂದ ಹುಡುಗಿಯನ್ನು ಹುಡುಕಲಾರಂಭಿಸಲಿ.

ನಾಫಿಜ್‌ಬೇ—ಎಲ್ಲಾ ಅವರ ಕೈಲಿರುವುದು, ಮನಸ್ಸು ಬಂದರೆ ಹಾಗೆಯೇ ಮಾಡಲಿ. ಆದರೆ ನನಗೆ ಹೆಣ್ಣು ಗೊತ್ತುಮಾಡುವುದೇನೂ ಸುಲಭವಾದ ಕೆಲಸವಲ್ಲವೆಂಬುದು ಅವರಿಗೂ ಗೊತ್ತು. ಖಾನಮ್ ನನಗೆ ಸರಿಯಾದ ಹುಡುಗಿ ಸಿಕ್ಕುವುದು ಕಷ್ಟ. ಕೊಂಚ ವಹೀದಳನ್ನು ವಿಚಾರಿಸು. ಅವಳ ಕೈಲಿ ನಾನು ಒಂದು ಸಲ ನನ್ನ ಹೆಂಡತಿಯಲ್ಲಿರಬೇಕಾದ ಗುಣಗಳ ಪಟ್ಟಿಯನ್ನು ಕೊಟ್ಟಿದ್ದ ಜ್ಞಾಪಕ.

ವಹೀದಾಖಾನಮ್—(ನಕ್ಕು) ಅಯ್ಯಾ, ನನಗೆ ಕೊಡಲಿಲ್ಲ. ನೀನೆಂದೂ ಈ ವಿಚಾರದಲ್ಲಿ ನನ್ನನ್ನು ಆಪ್ತಳನ್ನಾಗೆಣಿಸಿ ಗೌರವಿಸಲಿಲ್ಲ. ಬಹುಶಃ ಹಾಜಿರೆಗೆ ಈ ಗುಟ್ಟನ್ನು ಸಂಪೂರ್ಣವಾಗಿ ವಿವರಿಸಿರಬಹುದು. ಏಕೆಂದರೆ ಈಚೆಗೆ ಕೆಲವು ದಿನಗಳಿಂದ ನೀವಿಬ್ಬರೂ ಬಹು ಒಂದಾಗಿರುವಿರಿ. ಇದು ನಿಜ ಸಂಗತಿಯ ಕಡೆ ಸೂಚನೆಯಾಗಿರಬಹುದೆಂದು, ಭಯದಿಂದ ನಾನು ಬೇಗನೆ ವಹೀದಾಖಾನಮ್‌ಳ ಕಡೆ ನೋಡಿದೆನು. ಆದರೆ ಅವಳಿಗೆ ಆ ಆಲೋಚನೆಯಿದ್ದರೂ ಸಹ, ಅವಳು ಬಹಳ ಜಾಗರೂಕತೆಯಿಂದ ಮಾತು ಬದಲಾಯಿಸುತ್ತಿದ್ದುದರಿಂದ ಅವಳ ಮುಖದಲ್ಲಿ ಈ ಸಂಶಯವನ್ನು ಸ್ಥಿರಗೊಳಿಸುವ ಸೂಚನೆ ಸಹ ಇರಲಿಲ್ಲ—ಅವಳ ವಿಷಯದಲ್ಲಿ ಸಮಾಧಾನ ಹೊಂದಿ, ಆಮೇಲೆ ನಾಫಿಜ್‌ಬೇಯ ಕಡೆ ನೋಡಿದೆನು. ಎರಡು ಕೈಗಳನ್ನೂ ತಲೆಯ ಕೆಳಗಿಟ್ಟು ಮಲಗಿಕೊಂಡಿದ್ದನು. ಯೂಸುಫ್‌ನು ಅವನ ಪಕ್ಕದಲ್ಲಿ ಕುಳಿತುಕೊಂಡು, ಅವನ ಗಡಿಯಾರದ ಸರಪಣಿಯೊಡನೆ ಆಡುತ್ತಿದ್ದನು. ವಹೀದಾಖಾನಮ್‌ಳ ಮಾತಿನಿಂದ ಅವನ ಮನಸ್ಸಿನಲ್ಲೂ ನನ್ನ ಹಾಗೆ ಸಂಶಯವುಂಟಾಗಿರಬಹುದು. ಅವನೂ ತನ್ನ ಅಕ್ಕನ ಕಡೆ ದುರದುರನೆ ನೋಡುತ್ತಿದ್ದನು.

ನಾಫಿಜ್‌ಬೇ- ಒಳ್ಳೇದು ಇದರಿಂದ, ಈ ವಿಷಯವನ್ನು ಮೊದಲೇ ನಾನು ಯಾರೊಡನಾದರು ಹೇಳಿರಬೇಕೆಂದೇನೂ ಅರ್ಥವಲ್ಲ. ಈಗಲಾದರೂ ನಿಮಗೆ ಸಂತೋಷವಾದರೆ ಆ ಗುಣಗಳನ್ನು ಮತ್ತೆ ನಿಮ್ಮೊಡನೆ ವರ್ಣಿಸುವೆನು.

ವಹೀದಾಖಾನಮ್- ಹೂ, ಹೂಂ ಅಗತ್ಯವಾಗಿ ಇನ್ನು ತಡಮಾಡಬೇಡ. ನಾವು ಸಂಪೂರ್ಣ ಮನಸ್ಸಿನಿಂದ ಕೇಳುವೆವು.

ನಾಫಿಜ್‌ಬೇ- ಮೊದಲನೆಯದಾಗಿ ಅವಳು ಬಹಳ ಸುಂದರಿಯಾಗಿರಬೇಕು- ಹೇಗೆಂದರೆ, (ಸಾವ್ಯಶ್ಯಕ್ಕಾಗಿ ಸುತ್ತಲೂ ನೋಡಿದನು. ನನ್ನ ಕಡೆ ಮಾತ್ರ ಬೇಕೆಂದು ನೋಡಲಿಲ್ಲ.) ಸರಿ ವಲಿಯಳ ಹಾಗೆ ಅಬಿಯವರ ಭಾಗಕ್ಕೇ ಲೋಕದ ಒಳ್ಳೆ ಒಳ್ಳೇ ಪದಾರ್ಥಗಳೆಲ್ಲಾ ಸೇರಬೇಕಾದುದೇನೂ ಕಾರಣವಿಲ್ಲ.

ವಹೀದಾಖಾನಮ್ — (ನಗುತ್ತಾ) ವಲಿಯಾ ನಿನ್ನ ಮೈದುನನನ್ನು ಅಭಿನಂದಿಸು ನಾನಂತೂ ಒಡಪಾಯಿ, ಯಾವ ಗಣನೆ! ನಾಫಿಜ್‌ಬೇಯ ಆಲೋಚನೆಯಲ್ಲಿ ನಾನು ಏನೂ ಇಲ್ಲಾ ಪಾಪ, ಬೇಆಫಂದೆಗೂ ಸಹ ಬೇರೆ ಯಾರಾದರೂ ಇಷ್ಟವಾಗಿದ್ದಿರಬಹುದು. ನನ್ನಲ್ಲಿ ಏನನ್ನು ತಾನೆ ನೋಡಿ ಮದುವೆಯಾದರೋ ಕಾಣೆ!

ನಾಫಿಜ್‌ಬೇ— ನಿಜವನ್ನು ಹೇಳುತ್ತಿ. ಆತನಿಗೆ ಈ ವಿಷಯದಲ್ಲಿ ಲೇಶವೂ ತಾರತಮ್ಯವಿಲ್ಲ. ಒಳ್ಳೇ ಮನುಷ್ಯನೇನೋ ಹೌದು. ನಾನೇ ಅವನ ಜಾಗದಲ್ಲಿದ್ದರೆ, ಮೊದಲು ಚೆನ್ನಾಗಿ ಪರೀಕ್ಷಿಸಿ ನೋಡಿ ಆಮೇಲೆ ಮದುವೆಯಾಗುತ್ತಿದ್ದೆ. ಅದಲ್ಲದೆ, ನಸಿರುಲ್ಲಾ ಪಾಷಾರವರ ಮನೆಯಲ್ಲಿ ಎರಡು ಇಂಥಾ ನಮೂನೆಯವನ್ನು, ಅಂದರೆ-ನನ್ನನ್ನೂ ಅಜಿಯವರನ್ನೂ ನೋಡಿಯೂ ಸಹ ಇದ್ದರು.

ವಹೀದಾಖಾನಮ್ — ನೀನು ಹೇಳಿದುದು ನನಗೆ ತಿಳಿಯಲಿಲ್ಲ. ನಿನ್ನ ಅರ್ಥವೇನೆಂಬುದನ್ನು ಸ್ಪಷ್ಟವಾಗಿ ಹೇಳು.

ನಾಫಿಜ್‌ಬೇ — ಪ್ರಿಯ ಸೋದರಿ, ಒಂದೇ ಮನೆಯಲ್ಲಿ ಇಬ್ಬರು, ನನ್ನ ಹಾಗೆ ನನ್ನ ಅಣ್ಣನ ಹಾಗೆ ಹಠವಾದಿಗಳಾಗಿದ್ದರೆ, ಇದು ವಂಶಪಾರಂಪರೀಯವೆಂದೂ, ಆದುದರಿಂದ ಹೆಣ್ಣು ಹುಡುಗಿಯೂ ಹೀಗೆಯೇ ಶಿಡುಕಳೆಂದೂ ಕೋಪಿಷ್ಠಳೆಂದೂ ತಿಳಿಯಬೇಕು. ನೀನೇನೂ ಇಂಥಹವಳೆಂದು ನಾನು ಹೇಳುವುದಿಲ್ಲ—ಬದಲು (ದೇವರೇ ಬಿಟ್ಟಷ್ಟು) ನಿನ್ನ ಛಲವನ್ನೇ ನಡೆಸಿಕೊಳ್ಳುತ್ತಿ. ನನ್ನ ಹೆಂಡತಿಯಲ್ಲಿ ಛಲವು ಕೊಂಚವೂ ಇರಬಾರದು. ಅವಳು ಹೇಗಿರಬೇಕೆಂದರೆ-ಕಥೆಗಳಲ್ಲಿ ಬರೆದಿರುವಂತೆ, ನಾನು ಹೊರಗೆ ಹೋದರೆ ಬರುವವರೆಗೂ ತಲೆಬಾಗಿಲಲಿ ಟೊಪ್ಪಿಯನ್ನೂ ಕೈಯಲ್ಲಿ ನೀರನ್ನೂ ಹಿಡಿದುಕೊಂಡು ನಿಂತಿರಬೇಕು.

ವಲಿಯಾಖಾನಮ್— [ನಗುತ್ತಾ] ಮತ್ತೊಂದು ಕೈಲಿ ದೊಣ್ಣೆಯನ್ನೂ ಹಿಡಿದುಕೊಂಡು ನಿಂತಿರಬೇಕು! ಇಷ್ಟಬಂದರೆ ತಿಂದಾದರು ತಿನ್ನು, ಕುಡಿದಾದರು ಕುಡಿ, ಇಲ್ಲ ಬಿಟ್ಟಾದರು ಬಿಡು ಎಂದು. ಪ್ರಿಯ ಮಿತ್ರಾ, ನಿನಗೆ ಹೆಣ್ಣು ಹುಡುಕುವದರಲ್ಲಿ ಇಷ್ಟೊಂದು ತೊಂದರೆಗಳಿರುವಾಗ, ತಾಯಿಯವರು ಈ ಕೆಲಸದಿಂದ ತಪ್ಪಿಸಿಕೊಳ್ಳುತ್ತಿರುವದು ಒಳ್ಳೇದೇ. ಈ ಕಾರ್ಯವು ನನಗೇನಾದರೂ ಒಪ್ಪಿಸಲ್ಪಟ್ಟಿದ್ದರೆ ನಾನು ಖಂಡಿತವಾಗಿಯೂ ಬೇಡವೆನ್ನುತ್ತಿದ್ದೆನು.

ನಾಫಿಜ್‌ಬೇ— ಇನ್ನು ನೀನು ಪುನಃ ನನ್ನನ್ನು ಪೀಡಿಸುವದಿಲ್ಲವೆಂದು ನನಗೆ ಸಂತೋಷ [ಯೂಸಫ್‌ನ ಕಡೆ ನೋಡಿ] ಶೈತಾನ್, ನಿನಗೆ ಈಗ ತೃಪ್ತಿಯಾಯಿತೋ? ಬಹಳ ದೊಡ್ಡ ಕೆಲಸ ಮಾಡಿದೇ.

ಇದನ್ನೇಕೆ ಹೇಳಿದನೆಂದರೆ, ಯೂಸಫ್‌ನು ಸರಪಣಿಯನ್ನು ಹಿಡಿದುಕೊಂಡು ಗಡಿಯಾರವನ್ನು ತಿರುಗಿಸುತ್ತಿರಲು, ಅದು ಕಿತ್ತುಕೊಂಡು ಜೋರಿನಿಂದ ಹೋಗಿಹತ್ತಿರದ ಒಂದು ಮರಕ್ಕೆ ತಗಲಿ ಕೊಂಡಿತು.

ವಹೀದಾಖಾನಮ್— ನನಗೆ ಬಹಳ ವ್ಯಸನವಾಗಿದೆ. ಒಡೆದು ಹೋಯಿತೇ? ಎಷ್ಟು ತುಂಟ ಹುಡುಗ. ಆದರೆ ನೀನು ಅವನಿಗೆ ಕೊಟ್ಟೆಯೇತಕ್ಕೆ?

ನಾಫಿಜ್‌ಬೇ— ಪ್ಯಾರಿಖಾನಮ್, ಆ ಹುಡುಗನೊಡನೆ ನಾನು ಹೇಗೆ ತಾನೆ ನಿಭಾಯಿಸಲಿ ಎಷ್ಟಾದರೂ ನಿನ್ನ ಮಗನೆ. ಅವನಿಂದ ಸಾಮಾನುಗಳನ್ನು ಕಾಪಾಡಿಕೊಳ್ಳುವದು ವ್ಯರ್ಥ. ಗಡಿಯಾರವೇನೋ ಒಡೆದುಹೋಯಿತು. ಆದರೆ ಅದು ಸರಿಯಾಗಿ ಬರುವವರೆಗೂ ನನಗೊಂದು ಹೊಸ ಗಡಿಯಾರವನ್ನು ಕೊಡಬೇಕೆಂದು ನಿಮ್ಮ ಯಜಮಾನರಿಗೆ ತಿಳಿಯ ಹೇಳುವೆಯೆಂದು ನಂಬಿದ್ದೇನೆ.

ಯೂಸಫ್‌ನಿಂದ ಗಡಿಯಾರವು ಕಿತ್ತುಕೊಳ್ಳಲ್ಪಡಲು ಅವನು ಅಳುಮುಖವನ್ನು ಮಾಡಿಕೊಂಡು, ಬಾಯಿಯಲ್ಲಿ ಬೆಟ್ಟನಿಟ್ಟುಕೊಂಡು ಕಿರಚಲು ಸಿದ್ಧನಾದನು.

ನಾಫಿಜ್‌ಬೇ — (ಬೇಗನೆ) ಇಲ್ಲ ಇಲ್ಲ, ಅಳಬೇಡ ಮನಸ್ಸು ಬಂದಷ್ಟು ಗಡಿಯಾರಗಳನ್ನು ಒಡೆದು ಹಾಕು-ನಾನು ಕ್ಷಮಿಸುತ್ತೇನೆ-ಆದರೆ ಕಿರಚಬೇಡ ಇಗೋ ಇಲ್ಲಿ ಬಾ ಇಷ್ಟವಾದರೆ ಮತ್ತೆ ಗಡಿಯಾರವನ್ನು ತೆಗೆದುಕೊ ನಿನ್ನನ್ನು ಎಲ್ಲಾ ವಿಧದಿಂದಲೂ ಸಂತೋಷಪಡಿಸಲು ನಾನು ಸಿದ್ಧನಾಗಿದ್ದೇನೆ-ನೀನು ಸುಮ್ಮನಿದ್ದರೆ. ನನ್ನ ತಲೆಯು ನೋವಿನಿಂದ ಒಡೆದುಹೋಗುತ್ತಿದೆ.

ವಹೀದಾಖಾನಮ್— ಹಾಜಿರೆ ಹುಡುಗನನ್ನು ನೀನು ಎತ್ತಿಕೋ. ಅವನ ಮೇಲೆ ಗಿಚಾಚಿ ಹತ್ತಿದಾಗೆಲ್ಲಾ ನಿನ್ನಿಂದ ಸುಲಭವಾಗಿ ಇಳಿದುಹೋಗುತ್ತದೆ.

ನಾನು ಆಜ್ಞಾನುಸಾರವಾಗಿ ಮುಂದಕ್ಕೆ ಹೋದೆನು. ಆದರೆ ನಾನು ಬರುವವರಲ್ಲೇ ನಾಫಿಜ್ ಬೇಯು ಅವನನ್ನು ಸೊಂಟದಮೇಲೆ ಎತ್ತಿಕೊಂಡು ನಿಂತುಬಿಟ್ಟನು.

ನಾಫಿಜ್ ಬೇ— (ಅಥಮ್ ಬೇಯ ಬಳಿಹೋಗಿ) ನಿಮ್ಮ ಹತ್ತಿರ ಎಲ್ಲರೂ ಸರಿಯಾಗಿರುವರು. ಈ ಹುಡುಗನನ್ನೂ ಸುಮ್ಮನಾಗಿಮಾಡುವಿರೆಂದು ನಂಬಿದ್ದೇನೆ.

ಅಥಮ್ ಬೇಯು ಅದುವರೆವಿಗೂ ನಾಫಿಜ್ ಬೇಯನ್ನು ಬಹಳ ದಿಟ್ಟಿಸಿ ನೋಡುತ್ತಿದ್ದರು. ಯೂಸಫ್ ನನ್ನು ಎತ್ತಿಕೊಂಡು ಅವರ ಅಮ್ಮನ ತೊಡೆ ಯಮೇಲೆ ಕುಳ್ಳಿರಿಸಿ, ನಗುತ್ತಾ ಹೀಗೆಂದರು ;

ಇವರ ಕೈಕಾಲೇನಾದರು ನೆಟ್ಟಗಿರಬೇಕೆಂಬಾಶೆಯಿದ್ದರೆ ಮತ್ತೆ ನಾಫಿಜ್ ಬೇಯ ಹತ್ತಿರ ಕೊಡದಿರು. ಸಧ್ಯ, ನಾಫಿಜ್ ಬೇಯು ತನಗೆ ಹೊತ್ತು ಹೋಗಿಸುವ ಪದಾರ್ಥಗಳಲ್ಲಿ ಬೇಗ ಬೇಸರಗೊಳ್ಳುವದು ಕ್ಷೇಮವಾಗಿದೆ.

ನಾಫಿಜ್ ಬೇ— (ತಡೆತಡೆದು ನಗುತ್ತಾ) ಆವರೆ, ಅಜಿಯವರೇ, ಜೊತೆಗೆ ಇದನ್ನೂ ಹೇಳಿರಿ ; ಅವುಗಳ ಕಾಲನ್ನಾಗಲಿ ಹೃದಯವನ್ನಾಗಲಿ ಮುರಿಯುವದರೊಳಗೇ ನಾನು ಬೇಸರಗೊಂಡು ಬಿಡುವೆನೆಂದು.

ಅಥಮ್ ಬೇಯು ತಕ್ಷಣ ನನ್ನ ಕಡೆ ನೋಡಿದರು. ಜವಾಬೇನನ್ನೂ ಕೊಡದೆ ತಮ್ಮ ತಾಯಿಯ ಬಳಿಗೆ ಹೊರಟು ಹೋದರು.

ಅಥಮ್ ಬೇ— ಯಾಕೆ, ಅಮ್ಮಾವರೆ, ನಾವು ಉದ್ದೇಶಿಸಿಕೊಂಡಿದ್ದಂತೆ ನಾಳೆ ಎಲ್ಲರೂ ಹೊರಡಬಹುದಲ್ಲವೇ ?

ಖಾಸಿಮ್ ಆಫಂದಿ— ಹೌದು, ಖಂಡಿತವಾಗಿಯೂ, ನನಗೆ ಬಹಳ ಸಂತೋಷವಾಗಿದೆ. ಏಕೆಂದರೆ ನಾಫಿಜ್ ಬೇಯು ತಾನು ಸ್ವಸ್ಥನಾಗಿದ್ದೇನೆಂದು ಹೇಳುತ್ತಾನಾದರೂ ಬಹಳ ದುರ್ಬಲನಾಗಿರುವಂತೆ ಕಾಣಿಸುತ್ತಾನೆ. ಹವಾ ಬದಲಾಯಿಸುವದರಿಂದ ಅವನಿಗೆ ಒಳ್ಳೆಯದಾಗಬಹುದು.

ನಾಫಿಜ್ ಬೇ— (ತನ್ನ ಮೊದಲಿನ ಸ್ಥಳಕ್ಕೆ ಬಂದು ಅದೇ ತರಹ ಮಲಗಿಕೊಂಡುದರಿಂದ ಅವನಿಗೆ ಆಗ ನಿಂತಿರುವದು ಕಷ್ಟವಾಗಿತ್ತೆಂದು ಕಾಣುತ್ತಿತ್ತು) ಅಮ್ಮಾ ನನಗೆ ಯಾವ ವಿಧವಾದ ತೊಂದರೆಯೂ ಇಲ್ಲ. ಹೌದು, ಈಗ ನನಗೆ ತಲೇ ಬಹಳ ನೋಯುತ್ತಿರುವದೆಂಬುದನ್ನು ಇಲ್ಲವೆನ್ನುವದಿಲ್ಲ. ಆದರೆ ತಂದೆಯವರೂ, ನೀವೂ ಇದನ್ನೇ ಅಧಿಕವಾಗೆಣಿಸಿ ಘಾಬರಿಗೊಂಡರೆ ಏನು ಮಾಡುವದು ?

ಖಾಸಿಮ್ ಆಫಂದಿ— ಹೌದು ನಿನ್ನೆ ನೀನು ಬಂದುಬಿಟ್ಟಮೇಲೆ ನಿಮ್ಮ ತಂದೆ

ಯು ಸಹ ನಿನ್ನ ಸ್ಥಿತಿಯು ಇನ್ನೆಲ್ಲಿ ಹೆಚ್ಚುಕೇಡಾಗಿಬಿಡುವದೋ ಎಂದು ಅಂದುಕೊಂಡರು.

ನಾಫಿಜ್‌ಬೇ- (ಆಕಳಿಕೆಯನ್ನು ತಡೆಯುತ್ತಾ) ಹಾಗಾದರೆ ಈಚೆಗೆ ಅವರಿಗೆ ನನ್ನ ಸ್ಥಿತಿಯನ್ನು ನೋಡಿ ಬಹಳ ಕರುಣೆಯುಂಟಾಗಿದೆ. ಹೀಗೆಯೇ ಅವರಿಗೆ ನನ್ನ ಅಸ್ವಸ್ಥತೆಯ ಭಯ ಮನಸ್ಸಿನಲ್ಲಿದ್ದು, ಯಾವಾಗ್ಲೂ ಇದೇ ರೀತಿಯಾದ ದಯವಿರಲೆಂದು ಆಶಿಸುತ್ತೇನೆ. ಏಕೆಂದರೆ ನಾನು ಸ್ವಸ್ಥನಾಗಿರುವಾಗ ನನ್ನಲ್ಲಿ ಕೋಪಗೊಳ್ಳುವಂತೆ, ನಾನು ಈ ಸ್ಥಿತಿಯಲ್ಲಿರುವಾಗ ಕೋಪಗೊಳ್ಳುವದಿಲ್ಲ.

ವಲಿಯಾಖಾನರ್- ಇದಂತೂ ಎಲ್ಲಾ ಆಯಿತಲ್ಲಾ ; ಆದರೆ ನಾಫಿಜ್‌ಬೇ ನೀನು ಅವತ್ತಿನ ಜಗಳದ ವಿಷಯ ಹೇಳಲಿಲ್ಲ. ತಂದೆಯವರೊಡನೆ ನೀನು ಏನನ್ನು ಹೇಳಿದೆ ?

ನಾಫಿಜ್‌ಬೇ- ಏನಾದರೂ ಹೇಳಿದ್ದರೆ, ನಿನ್ನೊಡನೆಯೂ ಹೇಳಿಬಿಡುತ್ತಿದ್ದೆ. ನಾನು ಅತಿ ಮರ್ಯಾದೆಯಿಂದ ಮೌನವಾಗಿ ನಿಂತಿದ್ದೆನು. ಅವರು ಹೇಳಿದುದನ್ನೆಲ್ಲಾ ಯಾವರೀತಿ ಕೇಳಬೇಕೋ ಆ ರೀತಿ ಮನಸ್ಸುಗೊಟ್ಟು ಕೇಳಿದೆನು. ಇಂಥಾ ಸಮಯಗಳಲ್ಲಿ ಪ್ರತ್ಯುತ್ತರ ಕೊಡಬಾರದೆಂಬಷ್ಟು ಬುದ್ಧಿಯನ್ನು ದೇವರು ನನಗೆ ದಯಪಾಲಿಸಿದ್ದಾನೆ.

ವಲಿಯಾಖಾನ್- ಒಳ್ಳೇದು. ಹಾಗಾದರೆ ತಂದೆಯವರು ನಿನ್ನೊಡನೆ ಏನನ್ನು ಹೇಳಿದರು ? ಅವರು ಕೋಪಗೊಂಡಿರುವದನ್ನು ನಾನೆಂದೂ ನೋಡಿಲ್ಲವಾದುದರಿಂದ ಅವರು ಕೋಪಸ್ಥಿತಿಯಲ್ಲಿ ಹೇಗಿರುತ್ತಾರೆಂಬುದನ್ನು ತಿಳಿಯಲಪೇಕ್ಷಿಸುತ್ತೇನೆ.

ನಾಫಿಜ್‌ಬೇ- ನಿನಗೂ ಸಹ ಎಂದಾದರೂ ಅವರ ಮುಂದೆ ಈ ಸ್ಥಿತಿಯಲ್ಲಿ ಹೋಗುವ ಸಮಯಬಿದ್ದೀತು. ಆದುದರಿಂದ ನಿನಗೆ ತಿಳಿಸಲು ಹೇಳುವೆನು. -ಅವರು ಕೂಗಲಿಲ್ಲ - ಹೆದರಿಸಲಿಲ್ಲ – ನನ್ನ ಮೇಲೆ ತಟ್ಟಿಗಳನ್ನು ತೆಗೆದುಕೊಂಡು ಎಸೆಯಲಿಲ್ಲ-ಆಮೇಲೆ ಕುಳಿತುಕೊಂಡು, ಗುರಿ ಸರಿಯಾಗಲಿಲ್ಲವೆಂದೂ, ತಟ್ಟಿಗಳು ತನ್ನ ತಲೆಗೆ ತಗುಲಿದ್ದರೆ ಎಷ್ಟು ಪೆಟ್ಟಾಗುತ್ತಿತ್ತೆಂದೂ ಅಳಲಿಲ್ಲ.

ವಲಿಯಾಖಾನರ್- (ನಸ್ಕು ನಾಚಿಕೆಗೊಂಡು) ಸಾಕು, ಇನ್ನು ಹುಚ್ಚು ಮಾತುಗಳನ್ನಾಡಬೇಡ. ಈಗ ನಾನು ಹೀಗೆ ಎಂದು ಮಾಡುತ್ತೇನೆ ?

ನಾಫಿಜ್‌ಬೇ- ಈ ವಿಷಯದಲ್ಲಿ ಈಗ ನೀನು ಬಹಳ ತಿದ್ದಿಕೊಂಡಿರುವದು ಸಂತೋಷ. ಈಗ ನಿಷಾನವು ಬಹಳ ನೇರವಾಗಿರುವದರಿಂದ ತಟ್ಟಿಗಳ

ಹೀದಾ ಹೋಗಿ ದಾಸಿಯರ ತಲೆಗೇ ತಗಲುವಂತೆ ಕಾಣುತ್ತದೆ-ಸಿಸಗೆ ಅಳುವ ಆವಶ್ಯಕತೆಯೇ ಇಲ್ಲ. ವಹೀದಾ, ವಲಿಯಾಖಾನಮ್‌ಳು ಎಷ್ಟು ಜನರ ತಲೆ ಒಡೆದುಹಾಕಿದ್ದಾಳೆ ?

ವಹೀದಾಖಾನಮ್— (ನಕ್ಕು) ನಾಫಿಜ್, ಇನ್ನು ಹೆಚ್ಚಾಗಿ ಪೀಡಿಸಬೇಡ. ಆಗ ಅವಳ ವಯಸ್ಸು ಬಹಳ ಚಿಕ್ಕದಾಗಿತ್ತು. ಏನು, ತಂದೆಯವರು ನಿಜವಾಗಿಯೂ ನಿನ್ನೊಡನೆ ಬಹಳ ಕೋಪಗೊಂಡರೆ ?

ನಾಫಿಜ್‌ಬೇ— ನೀನು ತಿಳಿದುಕೊಳ್ಳುವವರೆಗೂ ಬಿಡುವವಿಲ್ಲ. ಇಗೋ, ಕೇಳು ಅವರು ನನ್ನನ್ನು ಬಹಳ ಹುಚ್ಚನೆಂದು ಹೇಳಿದರು. ಮೊದಲು ಮೊದಲು ನಾನಿದನ್ನು ಒಪ್ಪದಿದ್ದರೂ ಈಗ, ಅವರು ಹೇಳಿದುದು ಬಹಳ ಸರಿಯೆಂಬುದು ಅನುಭವಸಿದ್ಧವಾಗಿದೆ. ಅಬಿಯವರೇ, ನಡೆಯಿರಿ ವಿಹಾರಾಂಗಣಕ್ಕೆ ಹೋಗೋಣ ಸ್ವಲ್ಪ ಹೊತ್ತಿನಲ್ಲಿ ಊಟದ ವೇಳೆಯಾಗುವದು.

ಅವರಿಬ್ಬರೂ ಹೊರಟುಹೋದ ಮೇಲೆ ವಹೀದಾಖಾನಮ್‌ಳು ನನ್ನೊಡನೆ ಹೀಗೆಂದಳು,

ಹಾಜಿರೇ, ಸ್ವಸ್ಥಳಾಗಿದ್ದೀ ತಾನೆ ? ಇವತ್ತೇನು ಇಷ್ಟು ಮೌನವಿಗಿದ್ದೀ ?

ನಾನು ಮೆಲ್ಲನೆ ಧ್ವನಿಯಿಂದ,ಆಯಾಸಗೊಂಡಿರುವೆನೆಂದು ಹೇಳಿದೆನು. ನಾನಿತ್ತ ಉತ್ತರವೇನೋ ಪ್ರತಿಮಾತಿಲ್ಲದೆ ಒಪ್ಪಲ್ಪಟ್ಟಿತಾದರೂ, ತಕ್ಷಣವೇ ನಾಫಿಜ್‌ಬೇಗೂ ನನಗೂ ಉಂಟಾಗಿರುವ ಮನಸ್ತಾಪವು ಗುಟ್ಟಾಗಿರುವದು ಸಾಧ್ಯವಿಲ್ಲವೆಂದು ನನಗೆ ತೋರಿತು. ಯಾಕೆಂದರೆ, ಅವನು ಹರಮ್‌ಸರಾಯಲ್ಲಿರುವಾಗ ನಾನು ಮೌನವಾಗಿಯೇ ಇರುತ್ತಿದ್ದೆನು-ಅಥವ ಬಲಾತ್ಕಾರದಿಂದೊಂದೆರಡು ಮಾತುಗಳನ್ನು ಮಾತ್ರ ಆಡುತ್ತಿದ್ದೆನು. ಅವನೇ ಯಾವಾಗ್ಲೂ ಹೆಚ್ಚು ಮಾತಾಡುತ್ತಿದ್ದು, ಮಿಕ್ಕವರೆಲ್ಲಾ ಸುಮ್ಮನಿರುತ್ತಿದ್ದುದರಿಂದ ನಾನು ಮಾತಾಡದಿರುವದೇನೂ ಅತಿಶಯವಾಗಿಲ್ಲದಿದ್ದರೂ, ಅವನು ನನ್ನನ್ನು ಅಪೇಕ್ಷಿಸಬಾರದೆಂದು ಮನಸ್ಸಿನಲ್ಲಿ ನಿರ್ಧರ ಮಾಡಿಕೊಂಡಿದ್ದುದರಿಂದ, ಅವನೊಡನೆ ಮಾತಾಡಲು ಕಷ್ಟವಾಗುತ್ತಿತ್ತು.

ಐದನೆಯ ಪರಿಚ್ಛೇದ

ನಾಫಿಜ್‌ಬೇಯು ತಾನು ಸ್ವಸ್ಥನಾಗಿರುವೆನೆಂದೂ, ಯಾವ ತರಹದ ಹಿಂಸೆಯು ಇಲ್ಲವೆಂದೂ ಹೇಳಿಕೊಳ್ಳುತ್ತಿದ್ದರೂ, ಹಳ್ಳಿಗೆ ಹೋದ ಮಾರಣೆಯ

ನಿಶಾನ = ಗುರಿ

ದಿನವೇ ಅವನು ಅಸ್ವಸ್ಥನಾದನು. ಸಂಜೆಗೆ ಜ್ವರತಾಪವು ಅತಿಯಾಗಿ ಏರಿ
ಹೋದುದರಿಂದ ಡಾಕ್ಟರನ್ನು ಕರೆಯಲೇ ಬೇಕಾಯಿತು. ರೋಗಿಯನ್ನು
ನೋಡಿ ಡಾಕ್ಟರಮುಖದ ಮೇಲೆ ಕಳವಳದ ಚಿಹ್ನೆಯು ತೋರಿತು. ನಾಫಿಜ್
ಬೇಗೆ ಒಂದು ವಿಧವಾದ ಮಿದುಳಿನ ಕಾಪೆಂದೂ ಬಹುಶಃ ಅಯೂಬ್‌ಸುಲ್ತಾ
ನದಲ್ಲಿ ಬಹಳ ಹೊತ್ತು ಬಿಸಿಲಿನಲ್ಲಿ ನಿಂತಿದ್ದುದರ ಕಾರಣವಿರಬಹುದೆಂದೂ
ಯೋಚಿಸಲ್ಪಟ್ಟಿತು. ನಮ್ಮೆಲ್ಲರಿಗೂ ಒಂದೊಂದು ಚಾಕರಿಯು ನೇಮಿಸಲ್ಪ
ಟ್ಟಿತು. ನಾಲ್ಕೈದು ದಿನ ಒಬ್ಬರಿಗಾದರೂ ಕೊಂಚವೂ ಬಿಡುವಿರಲಿಲ್ಲ.
ಮನೆಯಲ್ಲಿ ಒಂದು ವಿಧವಾದ ಉದಾಸೀನತೆಯು ಆವರಿಸಿಕೊಂಡಿತು. ಪ್ರತಿ
ದಿನವೂ ಸಂಜೆಯ ಹೊತ್ತು ಎಲ್ಲರೂ ಕುಳಿತುಕೊಂಡು ಹರ್ಷಕರವಾಗಿ
ಮಾತುಕಥೆಗಳನ್ನಾಡುತ್ತಿದ್ದುದೂ, ಕುಣಿಯುತ್ತಿದ್ದುದೂ, ಸಾರೋಡನ್ನು
ನುಡಿಸುತ್ತಿದ್ದುದೂ, ಇವೆಲ್ಲವೂ ನಿಂತುಹೋದವು. ವಲಿಯಾಖಾನಮ್‌ಳ
ವಿನೋದವೆಲ್ಲಾ ಕುಂದಿಹೋಯಿತು. ಅವಳೂ ವಹೀದಾಖಾನಮ್‌ಳೂ
ಖಾನಮ್‌ಅಫಂದಿಯವರೂ ಹಗಲೂ ರಾತ್ರಿ ರೋಗಿಯ ಒಳಿಯೇ ಕುಳಿತಿರು
ತ್ತಿದ್ದರು. ಖಾನಮ್‌ಅಫಂದಿಯವರ ಸ್ಥೈರ್ಯವನ್ನೂ ಧೃಢಮನಸ್ಸನ್ನೂ
ಅಶ್ರುರಹಿತವಾದ ಕಣ್ಣುಗಳನ್ನೂ ನೋಡಿದರೆ ನಾಫಿಜ್‌ಬೇಯು ಗುಣಮುಖ
ನಾಗದಿರುವವರೆಗೂ ತಾನು ದುಃಖವನ್ನು ತೋರ್ಪಡಿಸುವದಿಲ್ಲವೆಂದು
ಪ್ರತಿಜ್ಞೆಮಾಡಿದ್ದಂತೆ ಕಾಣುತ್ತಿತ್ತು. ಆಕೆಯ ಮೌನವನ್ನೂ ಧೈರ್ಯ
ವನ್ನೂ ನೋಡಿ ನನಗೆ ಆಕೆಯಲ್ಲಿ ಗೌರವವು ಹೆಚ್ಚಿತು. ದಾಸಿಯರು ಸಹ
ಘಾಬರಿಗೊಳ್ಳದೆ, ತಮ್ಮ ಕೆಲಸವನ್ನು ಮನಸಿಟ್ಟು ಮಾಡುತ್ತಿದ್ದರು. ಭಯ
ದಿಂದರೂ ಚಿಂತೆಯಿಂದಲೂ ನನ್ನ ಹೃದಯವು ಜರ್ಝರಿತವಾಗುತ್ತಿದ್ದರೂ
ನನ್ನ ಸ್ಥಿತಿಯನ್ನು ಕುರಿತು ಯೋಚಿಸಲು ಸಮಯ ಸಿಕ್ಕದುದು ಒಳ್ಳೆಯದೇ
ಆಯಿತು. ನನ್ನ ಅಜ್ಜಿಯ ಖಾಯಿಲೆಯಲ್ಲಿ ರೋಗಿಯನ್ನು ಉಪಚರಿಸು
ವದು ಚೆನ್ನಾಗಿ ಬಂದಿದ್ದುದರಿಂದ ನಾಫಿಜ್‌ಬೇಯ ಸೇವೆಯು ನನ್ನ ಮೇಲೆ
ಹೆಚ್ಚಾಗಿಬಿತ್ತು. ನಾಫಿಜ್‌ಬೇಗೆ ಜ್ಞಾನವೇ ಇರುತ್ತಿರಲಿಲ್ಲವಾದರೂ ನನ್ನಿಂದ
ಅವನಿಗೆ ಕೊಂಚ ಆರಾಮವುಂಟಾಗುತ್ತಿದ್ದುದರಿಂದ ಖಾನಮ್‌ಅಫಂದಿ
ಯವರು ನನ್ನನ್ನು ಒಂದು ನಿಮಿಷವೂ ಚಿಕ್ಕಮನೆಯಿಂದ ಹೊರಗೆಹೋಗಲು
ಬಿಡುತ್ತಿರಲಿಲ್ಲ. ಇದೂ ನನಗೆ ಒಳ್ಳೆಯದೇ ಆಯಿತು–ಯಾಕೆಂದರೆ ನಾನು
ಒಬ್ಬಂಟಿಯಾಗಿದ್ದಿದ್ದರೆ ಖಂಡಿತವಾಗಿಯೂ ನನಗೆ ಹುಚ್ಚುಹಿಡಿಯುತ್ತಿತ್ತು.

ಯಾರು ತಮ್ಮ ಪ್ರಿಯಜನರೊಬ್ಬರ ಖಾಯಿಲೆಯನ್ನು ನೋಡಿರುವರೋ

ರೋಗಿಗೆ ಹೊಸ ಹೊಸ ವ್ಯಾಧಿಗಳು ತಲೆದೋರುತ್ತಿರುವುದನ್ನು ಕಂಡು ಆಶಾನಿರಾಶಾ ತರಂಗಗಳಲ್ಲಿ ಮುಳುಗಿ ಎದ್ದಿರುವರೋ ಘಡಿಯಾರವು ಘಂಟೇ ಮೇಲೆ ಘಂಟೆ ಹೊಡೆಯುತ್ತಾ ತನ್ನ ಕರ್ತವ್ಯವನ್ನು ಮಾಡಿಕೊಂಡು ಹೋಗುತ್ತಿರುವುದನ್ನು ಭಗ್ನ ಮನಸ್ಸಿನಿಂದ ನೋಡುತ್ತಾ ಅದರ ಒಂದೊಂದು ಸದ್ದೂ ಇನ್ನು ರೋಗಿಗೆ ಯಾರ ಸೇವೆಯ ಅವಶ್ಯಕತೆಯೂ ಇಲ್ಲವಾಗು ವಂತಹ ಅಘೋರ ವೇಳೆಯ ಬರುವಿಕೆಯನ್ನು ಸೂಚಿಸುತ್ತಿರವದೆಂದು ಯೋಚಿಸಿನುವರೋ,-ಅಂದರೆ ಯಾರು ತಮ್ಮ ಸುಖ ಸಂತೋಷದ ಪೀಠಿನ ಮೇಲೆ ಮೃತ್ಯುವೆಂಬ ಹದ್ದು ಮಂಡಲಾಕಾರವಾಗಿ ಹಾರಾಡುತ್ತಿರುವುದನ್ನು ನೋಡಿಯೂ ಅದನ್ನು ತಪ್ಪಿಸಲು ತಮಗಿರುವ ಅಶಕ್ತತೆಯನ್ನು ತಿಳಿದಿರು ವರೋ ಅಂಥವರು, ಡಾಕ್ಟರು ನಾಫಿಜ್‌ಬೇಯ ಸ್ಥಿತಿಯು ತೃಪ್ತಿಕರವಾಗಿದೆ ಯೆಂದೂ, ಅಪಾಯದಿಂದ ಬಿಡುಗಡೆಯಾಗಿದೆಯೆಂದೂ ಹೇಳುವವರೆಗೂ ರಾತ್ರಿ ಹಗಲು ಕಳೆಯುವುದು ನನಗೆ ಎಷ್ಟು ಕಷ್ಟತರವಾಗಿತ್ತೆಂಬುದನ್ನೂ, ನನ್ನ ಸ್ಥಿತಿಯು ಏನಾಗಿತ್ತೆಂಬುದನ್ನೂ ತಿಳಿದುಕೊಳ್ಳಬಲ್ಲರು.

ನಾಫಿಜ್‌ಬೇಯು ಅಜ್ಞಾನದಲ್ಲಿ ಒಂದೂ ಸಲವೂ ನನ್ನ ಹೆಸರನ್ನು ಕೇಳಲಿಲ್ಲ-ಮತ್ತು ತನ್ನ ಮನಸ್ಸಿನಲ್ಲಿ ಯಾವಾಗ್ಯೂ ಮೇಲಾಗಿರುತ್ತಿದ್ದ ಆಶೆಗಳ ವಿಚಾರವನ್ನೇ ಎತ್ತಲಿಲ್ಲ. ಈ ವಿಷಯ ಆಗ ನನಗೆ ಗೊತ್ತಾಗಲೇ ಇಲ್ಲ. ಒಂದು ದಿನ ಸಂಜೆ ನಾಫಿಜ್‌ಬೇಯ ಸ್ಥಿತಿಯು ಸ್ವಲ್ಪ ಸಮಾಧಾನಕ್ಕೆ ಬರುತ್ತಿದ್ದಾಗ, ನಾವೆಲ್ಲರೂ ಖಾನಮ್‌ಆಫಂದಿಯವರನ್ನು ಕೊಂಚ ವಿಶ್ರಮಿ ಸಿಕೊಳ್ಳಲು ಬಲಾತ್ಕಾರ ಮಾಡಿದೆವು. ಮನಸ್ಸಿಲ್ಲದೆ ಅವರು ಕೊನೆಗೆ ಒಪ್ಪಿಕೊಂಡರು. ದಾಸಿಯರಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಅವರು ಗದ್ದಲ ಗಲಾಟೆ ಮಾಡಿ ನಾಫಿಜ್‌ಬೇಯ ವಿಶ್ರಾಂತಿಯನ್ನು ಕೆಡಿಸುವರೆಂದು ಅವನನ್ನು ನೋಡಿಕೊಳ್ಳಲು ನನ್ನನ್ನು ಬಿಟ್ಟರು.

ನಾಫಿಜ್‌ಬೇಯು ಗುಣಮುಖನಾಗುವ ಆಶೆ ಇದೆಯೋ ಇಲ್ಲವೋ ಎಂದು ನಾನು ಕುಳಿತು ಆಲೋಚಿಸುತ್ತಿರುವಾಗ ಐದು ನಿಮಿಷಗಳೊಳಗಾಗಿ ಬಾಗಿಲಿನ ಪರದೆಯು ಓರೆಯಾಯಿತು. ಅಥಮ್‌ಬೇಯು ಮೆಲ್ಲನೆ ಹೆಜ್ಜೆ ಯಿಟ್ಟುಕೊಂಡು ಕೊಠಡಿಯೊಳಗೆ ಬಂದರು. ನನ್ನನ್ನು ಕುಳಿತುಕೊಳ್ಳಲು ಹೇಳಿ, ಮಂಚದ ಬಳಿ ಹೋಗಿ ಆ ಕೃಶಿಸಿಹೋಗಿದ್ದ ದೇಹವನ್ನೂ, ಎಲುಬು ಚರ್ಮಗಳನ್ನೂ ವ್ಯಥೆಯಿಂದ ನೋಡತೊಡಗಿದರು. ನನ್ನಂತೆಯೇ ಅವರಿಗೂ ಸಹ ಮೃತ್ಯುವನ್ನು ಜೀವವು ಜಯಿಸುವ ಸಂದೇಹವುಂಟಾಗಿತ್ತು. ಇಷ್ಟರಲ್ಲಿ ನಾಫಿಜ್‌ಬೇಯು ಹೊರಳಿ, ಕಣ್ಣು ತೆರೆದನು. ಖಾಯಿಲೆಯಾದಾಗಿನಿಂದ

ಇವತ್ತೇ ಮೊದಲು ಅವನಿಗೆ ತನ್ನ ಸ್ಥಿತಿ ಹೀಗಿರುವುದೆಂದು ತಿಳಿಯಿತು. ಅಥವರ್‌ಬೇಯನ್ನು ನೋಡದೆ, ನನ್ನ ಕುರ್ಚಿಯ ಕಡೆ ದೃಷ್ಟಿ ಇರಿ ದುರ ದುರನೆ ನೋಡತೊಡಗಿದನು,

ನಾಫಿಜ್‌ಬೇ-ಪ್ರಿಯ ಹಾಜಿರೇ, ನೀನೇ! ನಾನು ನಿಜವಾಗಿಯೂ ಖಾಯಿಲೆಯಾಗಿದ್ದೆನು. ಆದುದರಿಂದಲೇ ಇಷ್ಟು ನಿಶ್ಶಕ್ತಿಯೂ ಆಯಾಸವೂ ಆಗಿರುವುದು. ಪ್ರಾಣನಾಥೆ ಇಲ್ಲಿ ಬಂದು ನನಗೊಂದು ಮುತ್ತು ಕೊಡು.

ನಾನು ಎದ್ದೇನೋ ನಿಂತೆನು. ಆದರೆ ಏನು ಮಾಡಬೇಕೆಂಬುದು ತೋಚಲಿಲ್ಲ. ಅಥವರ್‌ಬೇಯು ನನ್ನ ಕಡೆ ನೋಡಿ,

"ಹಾಜಿರೇ, ನಾಫಿಜ್ ಏನು ಹೇಳುತ್ತಾನೋ ಮಾಡು. ಈ ಸಮಯ ದಲ್ಲಿ ಅವನ ಮನಸ್ಸಿಗೆ ವಿರುದ್ಧವಾಗಿ ಏನನ್ನೂ ಮಾಡಲಾಗುವುದಿಲ್ಲ" ಎಂದರು.

ನಾನು ನಾಚುತ್ತಾ ಮುಂದೆ ಹೋಗಿ ನಾಫಿಜ್‌ಬೇಯ ಹಣೆಗೆ ಬಗ್ಗಿ ಮುತ್ತಿಟ್ಟೆನು. ಆದರೆ ಮನಸ್ಸಿನಲ್ಲಾದರೋ ನನ್ನಲ್ಲಿದ್ದ ಮಾನಮರ್ಯಾದೆ ಯನ್ನೆಲ್ಲಾ ಎಂದೆಂದಿಗೂ ಕಳೆದು ಕೊಂಡಂತಾಯಿತು. ಅಥವರ್‌ಬೇಯೂ ನಾಫಿಜ್‌ಬೇಯು ಹೀಗೆ ತಿಳಿದಿದ್ದಂತಿರಲಿಲ್ಲ. ನಾನು ತಲೆಯೆತ್ತಿದಾಗ ಅಥವರ್‌ಬೇಯು ನನ್ನ ಕಡೆ ನೋಡಿ ಹೀಗೆಂದರು,

"ಹಾಜಿರೇ, ನೀನು ಬಹಳ ಒಳ್ಳೆಯ ಹುಡುಗಿ. ನಿನಗೆ ನಾನು ಅತ್ಯಂತ ಕೃತಾರ್ಥನಾಗಿರುವೆನು. ಇಂಥಾ ಸಮಯದಲ್ಲಿ ರೋಗಿಯ ಮಾತನ್ನು ಕೇಳದಿರುವುದು ಅವನ ಜೀವಕ್ಕೆ ಅಪಾಯಕರವಾಗುವುದು."

ಮುದ್ದಿಡಿಸಿಕೊಳ್ಳುವಾಗ ನಾಫಿಜ್‌ಬೇಯು ಕೊಂಚ ನಸುನಗೆ ನಕ್ಕನು. ಆಮೇಲೆ ಮತ್ತೆ ನನ್ನನ್ನು ದೃಷ್ಟಿಸಿ ನೋಡತೊಡಗಿದನು.

ನಾಫಿಜ್‌ಬೇ—(ಮೆಲ್ಲನೆ) ನಾನು ನಿನ್ನೊಡನೆ ಕೋಪಗೊಂಡಿದ್ದೆನು. ಆದರೆ ಏತಕ್ಕಾಗಿ ಎಂಬುದನ್ನು ಮರೆತುಬಿಟ್ಟಿರುವೆನು. ಅಬಿಯುವರೇ, ನಾನು ಎಷ್ಟು ದಿನದಿಂದ ಖಾಯಿಲೆಯಾಗಿರುವೆನು ?

ಅಥವರ್‌ಬೇ—ಪ್ರಿಯಸಖ, ನೀನು ಬಹಳ ದಿನಗಳಿಂದ ಖಾಯಿಲೆಯಾದುದ ರಿಂದ ಈಗ ನೀನು ಸುಮ್ಮನೆ ಮಲಗಿದ್ದು, ಆಯಾಸ ಮಾಡಿಕೊಳ್ಳದಿರುವದು ಅವಶ್ಯಕವಾಗಿದೆ. ಇಷ್ಟು ಸಾಕು, ಹೆಚ್ಚು ಮಾತನಾಡದೆ ಮಲಗಿಕೋ.

ಅಥವರ್‌ಬೇಯು ಹೀಗೆ ಹೇಳುತ್ತ ನಾಫಿಜ್‌ಬೇಯ ದಿಂಬುಗಳನ್ನು ಸರಿಪಡಿಸಿ, ಅವನನ್ನು ಎಬ್ಬಿಸಿ ಪುನಃ ಬಹು ಮೆಲ್ಲನೆ, ನಾನು ಮಲಗಿಸು ತ್ತಿದ್ದಂತೆ ಮಲಗಿಸಿದರು.

ನಾಫೀಜ್‌ಬೇಯು ಬಹಳ ಸಂತೋಷಗೊಂಡು ಅಣ್ಣನನ್ನು ನೋಡುತ್ತಾ ಹೀಗೆ ಕೇಳಿದನು:-

"ಅಣಿಯನೇ, ಇದುವರೆಗೆ ನನಗೆ ತಿಳಿಯದಿದ್ದಂಥಾ, ಮತ್ತೇನೇನು ಗುಣಗಳು ನಿಮ್ಮಲ್ಲಿರುವವು ? ನೀವು ರೋಗಿಗಳನ್ನು ಉಪಚರಿಸುವುದನ್ನು ಸಹ, ಒಂದು ದಿನ ನಾನು ಮೆಚ್ಚಬೇಕಾಗಿ ಬರುವದೆಂದು ನಾನು ತಿಳಿದಿರಲಿಲ್ಲ. ಇಗೋ ನಿಮ್ಮಾಜ್ಞೆಯನ್ನಂಗೀಕರಿಸುವೆನು. ಇನ್ನು ಹೆಚ್ಚು ಮಾತನ್ನಾಡುವುದಿಲ್ಲ."

ಹೀಗೆಂದು ಅವನು ಸುಗ್ಗಲಾಗಿ ಮಲಗಿ, ಕಣ್ಣುಗಳನ್ನು ಮುಚ್ಚಿಕೊಂಡನು. ಅಥರ್‌ಬೇಯು, ಮುಖದಲ್ಲಿ ಹರ್ಷ ಚಿಹ್ನೆ ಕೂಡಿದವರಾಗಿ ನಾನು ಕುಳಿತಿದ್ದ ಸ್ಥಳಕ್ಕೆ ಬಂದರು.

ಅಥರ್‌ಬೇ—(ಸಣ್ಣ ಧ್ವನಿಯಿಂದ) ನಾಫೀಜ್‌ಬೇಗೆ ಇನ್ನೂ ಆಯುಷ್ಯ ಇದೆ. ಉಳಿದುಕೊಂಡನು. ಪ್ಯಾರಿ ಹಾಜೀರೇ, ನೀನು ಈಗ ಬಹಳ ಆಯಾಸಗೊಂಡಿರುವೆ ಮಿಕ್ಕವರೆಲ್ಲಾ ಎಲ್ಲಿ ?

ಅಥರ್‌ಬೇಯು ಎಂದೂ ನನ್ನೊಡನೆ ಇಂಥಾ ಪ್ರೀತಿಕರವಾದ ವಚನಗಳನ್ನಾಡಿರಲಿಲ್ಲವಾದುದರಿಂದ ನಾನು ಆಶ್ಚರ್ಯದಿಂದ ಅವರ ಕಡೆ ನೋಡಿದೆನು. ಆದರೆ ನಾಫೀಜ್‌ಬೇಯು ಗುಣಮುಖನಾಗುತ್ತಿರುವುದನ್ನು ಕಂಡು ಅವರಿಗುಂಟಾದ ಸಂತೋಷದ ಪ್ರತಿಫಲವಿದಾಗಿರಬಹುದೆಂದು ತಿಳಿದೆನು.

ನಾನು—(ಮೆಲ್ಲನೆ) ಖಾನಮ್ ಆಫಂದಿಯವರು ಮಲಗಿರುವರು.

ಅಥರ್‌ಬೇ—ಹಾಗಾದರೆ ನಾನು ಈಗಲೇ ಹೋಗಿ ವಹೀದಳನ್ನು ಕಳುಹಿಸುವೆನು. ನೀನು ಕೊಂಚ ವಿಶ್ರಮಿಸಿಕೊಳ್ಳಬೇಕು.

ಹೀಗೆ ಹೇಳಿ ಅಥರ್‌ಬೇಯು ಹೊರಟು ಹೋದರು. ಸ್ವಲ್ಪ ಹೊತ್ತಾದ ಮೇಲೆ ವಹೀದಾ ಖಾನಮ್‌ಳು ಬಂದಳು. ಅವಳ ನಿರ್ಬಂಧದಿಂದ ನಾನೂ ಮಲಗಲು ಹೋದೆನು. ನಾಫೀಜ್‌ಬೇಯ ಸ್ಥಿತಿಯು ಉತ್ತಮಗೊಳ್ಳುತ್ತಿರುವುದನ್ನು ಕಂಡು ನನಗೆ ವಿಪರೀತ ಸಂತೋಷವಾಗಿ ಅವನ ಸೇವೆಯನ್ನು ಚೆನ್ನಾಗಿ ಮಾಡಲು ನಾನು ಕೊಂಚ ವಿಶ್ರಮಿಸಿ ಕೊಳ್ಳಬೇಕಾದುದು ಅವಶ್ಯಕವೆಂದು ತಿಳಿದುಕೊಂಡೆನು.

ಮಾರನೆಯ ದಿನ ಬೇಗ್ಗೆ ಕಣ್ಣು ತೆರೆಯುವ ಹೊತ್ತಿಗೆ ನನಗೆ ಕಠಿಣವಾದ ತಲೆನೋವು ಹತ್ತಿದ್ದುದರಿಂದ ಮಂಚದಿಂದ ಏಳಲು ಆಗಲಿಲ್ಲ. ನಾಫೀಜ್‌ಬೇಯು ಇನ್ನು ಬಹಳ ಬೇಗನೆ ಗುಣಹೊಂದುವನೆಂದು ಡಾಕ್ಟರು ಹೇಳಿದರೆಂದು ಖಂಡೆಯಿಂದ ತಿಳಿದು ಬಂದುದರಿಂದ, ಒಂದು ದಿನ ಪೂರ್ತಿ

ನಾನು ವಿರಾಮ ಪಡೆದುಕೊಂಡರೂ ಏನು ತೊಂದರೆಯಾಗಲಾರದೆಂದು ಯೋಚಿಸಿ ಬೆಳಿಗ್ಗೆಯಿಂದಲೂ ನನ್ನ ಕೊಠಡಿಯಲ್ಲೇ ಇದ್ದುಬಿಟ್ಟೆನು. ಸಂಜೆಗೆ ತಲೆನೋವು ಕೊಂಚ ಕಡಿಮೆಯಾಗಲು ನಾಫಿಜ್‌ಬೇಯನ್ನು ನೋಡಲು ಹೋದೆನು. ಆಗ ಅವನು ನಿದ್ರಿಸುತ್ತಿದ್ದನು. ಖಾನಮ್‌ಆಫಂದಿಯವರು ಅವನ ಹತ್ತಿರ ಕುಳಿತಿದ್ದರು. ನಾನು ಸದ್ದು ಮಾಡದೆ ಅವರ ಬಳಿ ಹೋಗಿ ಕುಳಿತುಕೊಳ್ಳಲು ಅವರು ಬಾಗಿ ನನ್ನನ್ನು ಮುದ್ದಿಸಿದರು. ನನಗೆ ಆಶ್ಚರ್ಯ ವಾಯಿತು. ಆದರೆ ನಾಫಿಜ್‌ಬೇಯ ಖಾಯಿಲೆಯ ಸಮಯದಲ್ಲಿ ಮನೆ ಯವರೆಲ್ಲಾ ನನ್ನನ್ನು ಬಹಳ ಪ್ರೀತಿಸತೊಡಗಿದ್ದರು.

ಹದಿನೈದು ನಿಮಿಷಗಳ ತರುವಾಯ ನಾಫಿಜ್‌ಬೇಯು ಕಣ್ಣು ತೆರೆದು ನಮ್ಮ ಕಡೆ ನೋಡಿ ನನ್ನನ್ನು ಕಂಡು ಮುಖ ತಿರುಗಿಸಿಕೊಂಡು ಬಿಟ್ಟನು. ಇದರಿಂದ ನಿನ್ನೆ ಅವನ ಜ್ಞಾನವು ಅಷ್ಟು ಸರಿಯಾಗಿರಲಿಲ್ಲವೆಂದೂ, ಇವತ್ತು ಸರಿಯಾಗಿತ್ತೆಂದೂ ಗೊತ್ತಾಯಿತು.

ವಲಿಯಾಖಾನಮ್‌ಳು ನಾನು ಬಂದ ಮೇಲೆ ಬಂದು ನಾಫಿಜ್‌ಬೇಯ ಹತ್ತಿರ ಹೋಗಿ ಬಹು ಆದರದಿಂದ

"ಪ್ಯಾರೆ, ನಾಫಿಜ್, ಏನಪ್ಪಾ, ಈಗ ಮೈ ಮೊದಲಿಗಿಂತ ಕೊಂಚ ವಾಸಿಯಲ್ಲವೇ ?" ಎಂದು ಕೇಳಿದಳು.

ನಾಫಿಜ್—(ಆಯಾಸಗೊಂಡ ಧ್ವನಿಯಿಂದ) ಹೌದು, ಹಾಗೆ ಕಾಣುತ್ತದೆ ಆದರೆ ನಿಶ್ಶಕ್ತಿ ಎಷ್ಟರಮಟ್ಟಿಗಿದೆ ಎಂದರೆ ಈಗ ನಾನು ಒಂದು ಇಲಿಯನ್ನು ಸಹ ಜಯಿಸಲಾರೆನು. ಅಬಿಯವರು ಎಲ್ಲಿ ?

ವಲಿಯಾಖಾನಮ್—ಇನ್ನೂ ಬಂದಿಲ್ಲ. ಹೋಗಿ ಕರೆಯಲೇ ?

ನಾಫಿಜ್‌ಬೇ—ಬೇಡ, ತೊಂದರೆ ತೆಗೆದುಕೊಳ್ಳಬೇಡ. ಇಗೋ ಅವರೇ ಬಂದರು. ಅಬೀ, ಇಲ್ಲಿ ಬನ್ನಿ ಒಂದು ಘಂಟೆಯಿಂದ ನಿಮ್ಮನ್ನೆ ಎದುರು ನೋಡುತ್ತಿದ್ದೆನು.

ಅಥಮ್‌ಬೇಯವರು ತಮ್ಮನ ಬಳಿಗೆ ನಡೆದು ಹೋಗುತ್ತಾ, ಅವ ನೊಡನೆ ಮಾತನಾಡುವುದಕ್ಕೆ ಮೊದಲು ನನ್ನ ಕಡೆ ತಿರುಗಿ, ಬಹು ಕರುಣೆ ಯಿಂದ, "ಇವತ್ತು ಬೆಳಿಗ್ಗೆ ನಿನಗೆ ಮೈ ಸರಿಯಾಗಿರಲಿಲ್ಲ. ಹಾಜಿರೇ, ನೀನು ಇಲ್ಲಿ ನಿನ್ನ ಶಕ್ತಿಯನ್ನು ಮೀರಿ ಕೆಲಸಮಾಡಿರುವೆಯೆಂದು ನನಗೆ ತೋರುತ್ತದೆ," ಎಂದರು.

ನಾನು ಅವರನ್ನು ಅಭಿನಂದಿಸುತ್ತಾ "ಇಲ್ಲ, ಇಲ್ಲ" ಎನ್ನುತ್ತಿರುವಾಗ ನಾಫಿಜ್‌ಬೇಯು ನನ್ನ ಕಡೆ ಕೊಂಚ ತಿರುಗಿ, ನನ್ನನ್ನು ದೃಷ್ಟಿಸಿ ನೋಡುತ್ತಾ

"ಯಾಕೆ, ನಿನಗೆ ಏನಾಯಿತು ? ಎಂಥಹ ಸ್ಥಿತಿಗೆ ಬಂದಿರುವೆ ? ಎಂದು ವ್ಯಸನದಿಂದ ಹೇಳಿದನು.

ವಲಿಯಾಖಾನರ್— ನಿನ್ನ ಖಾಯಿಲೆಯಲ್ಲಿ ಇವಳು ಬಹಳ ಸೇವೆ ಮಾಡಿದ್ದಾಳೆ. ಅವಳು ಇಲ್ಲದಿದ್ದರೆ ತಾಯಿಯವರು ಏನ ಮಾಡುತ್ತಿದ್ದರೋ ನಾಸು ಕಾಣೆ. ಘಾಬರಿಯಿಂದ ನನ್ನೆಲ್ಲರ ಬುದ್ಧಿಯೂ ಕೆಟ್ಟುಹೋಗಿದ್ದುದರಿಂದ ನಮ್ಮಿಂದ ಏನೂ ಆಗುತ್ತಿರಲಿಲ್ಲ.

ನಾಫೆಜ್‌ಬೇ— ನಿನಗೆ ಬುದ್ಧಿ ಏನಾದರೂ ಇದ್ದರೆ ತಾನೆ ಕೆಟ್ಟು ಹೋಗುವಪಕ್ಕೆ, ಎಂದು ನನಗೆ ಸಂಶಯುವಾಗುತ್ತದೆ. ನನಗೂ ಅಮ್ಮನಿಗೂ ನಿನ್ನ ವಿಚಾರ ಚೆನ್ನಾಗಿ ಗೊತ್ತಿರುವವದರಿಂದ ನನಗೇನೂ ಆಶ್ಚರ್ಯವಾಗುವದಿಲ್ಲ. ಆದರೆ ಅಮ್ಮನ ಬುದ್ಧಿಯೇನೋ ಸರಿಯಾಗಿಯೇ ಇತ್ತೆಂದು ತೋರುತ್ತದೆ.

ವಲಿಯಖಾನರ್— ಆ ವಿಚಾರದಲ್ಲೇನೂ ಸಂದೇಹವಿಲ್ಲ. ಪಾಪ, ಅವರು ಬಹಳ ಕಷ್ಟಪಟ್ಟರು. ಡಾಕ್ಟರು ನಿನಗೆ ಕೊಂಚವೂ ತೊಂದರೆಯಾಗಕೂಡದೆಂದು ಹೇಳಿದ್ದುದರಿಂದಲೇ ದಾಸಿಯರು ಗದ್ದಲಗಲಾಟೆಯಿಲ್ಲದೆ ಯಾವ ಕೆಲಸವನ್ನೂ ಮಾಡುವದಿಲ್ಲವೆಂದು ತಿಳಿದು ನನ್ನೆಲ್ಲರನ್ನು ಈ ಕೊಠಡಿಯೊಳಗೆ ಬರಗೊಳಿಸದೆ ಹಾಜಿರೆಯನ್ನು ಮಾತ್ರ ಇಲ್ಲಿರಿಸುತ್ತಿದ್ದರು. ಅವಳು ಅತ್ಯಂತ ನಿಶ್ಯಬ್ದತೆಯಿಂದ ನಿನ್ನ ಸೇವೆಯನ್ನು ಮಾಡುತ್ತಿದ್ದಳು.

ಖಾನಮ್‌ಅಫಂದಿ- ಹಾಜಿರೆಯು ಬಹಳ ಚೆನ್ನಾಗಿ ರೋಗಿಗಳನ್ನು ಶುಶ್ರೂಷೆ ಮಾಡುತ್ತಾಳೆ. ನಿನ್ನ ಖಾಯಿಲೆಯ ವಿಚಾರ ನಮಗೆಷ್ಟು ಚಿಂತೆಯಿತ್ತೋ ಅಷ್ಟೇ ಅವಳಿಗೂ ಇದ್ದರೂ ಅವಳು ಕೊಂಚವೂ ಘಾಬರಿಗೊಳ್ಳದೆ ಸ್ಥೈರ್ಯದಿಂದ ಕೆಲಸಮಾಡುತ್ತಿದ್ದಳು.

ನಾಫೆಜ್‌ಬೇ— (ಅಣ್ಣನಕಡೆ ತಿರುಗಿ) ನೀವು ಏನನ್ನಾದರೂ ನನಗೆ ಓದಿ ಹೇಳಬೆಂಪು ಅಪೇಕ್ಷೆಯಾಗುತ್ತದೆ. ಮಾತನಾಡಲು ನನಗೆ ಇನ್ನೂ ಶಕ್ತಿ ಸಾಲದುದರಿಂದ ಏನನ್ನಾದರು ಓದಿಸಿ ಕೇಳಲು ಇಷ್ಟಪಡುತ್ತೇನೆ.

ಅಥಮ್‌ಬೇಯು ಮೇಜಿನ ಬಳಿ ಹೋಗಿ ಒಂದು ಪತ್ರಿಕೆಯನ್ನು ತೆಗೆದುಕೊಂಡು ಘಟ್ಟಿಯಾಗಿ ಓದಲಾರಂಭಿಸಿದರು. ನಾಫೆಜ್‌ಬೇಯು ಕೊಂಚಹೊತ್ತು ಕಣ್ಣು ಮುಚ್ಚಿಕೊಂಡಿದ್ದು ಆಮೇಲೆ ನನ್ನ ಕಡೆ ನೋಡ ತೊಡಗಿದನು. ಅವನ ಧ್ಯಾನವು ಪತ್ರಿಕೆಯ ಮೇಲಿದ್ದಂತೆ ಕಾಣಲಿಲ್ಲ. ಇಷ್ಟರಲ್ಲೇ ನಸಿರುಲ್ಲಾ ಪಾಷಾರವರೂ ಆಲಿಬೇಯೂ ಬಂದು ನಾಫೆಜ್‌ಬೇ ಮಂಚದ ಮೇಲೆ ಕುಳಿತುಕೊಂಡರು. ಅರ್ಧಘಂಟೆಯ ತರುವಾಯ ನಾಫೆಜ್‌ಬೇಯು ಅಣ್ಣನಿಗೆ ಓದುವದನ್ನು ನಿಲ್ಲಿಸಲು ಹೇಳಿದನು.

ನಾಫಿಜ್‌ಬೇ— ಅಬೀಯುವರೇ, ನೀವು ಆಯಾಸಗೊಂಡಂತೆ ಕಾಣುತ್ತದೆ. ಅದೂ ಅಲ್ಲದೆ ನನಗೆ ನಿದ್ರೆಹತ್ತುವಂತಿದೆ. ಅಮ್ಮಾವರೇ ನಾನು ಈಗ ಸುಖವಾಗಿದ್ದೇನಾದುದರಿಂದ ನೀವು ಕೂಡ ಕೊಂಚ ವಿಶ್ರಮಿಸಿಕೊಳ್ಳಿ. ಇನ್ನು ಗದ್ದಲಗಲಾಟೆ ಹತ್ತಬೇಕಾದಂಥ ಕೆಲಸವ್ಯಾವುದೂ ಇಲ್ಲವಾದುದರಿಂದ ನನ್ನ ಬಗೆ ಒಬ್ಬ ಸೇವಕಿಯನ್ನು ಮಾತ್ರ ಇರಿಸಿದರೆ ಸಾಕು.

ಖಾನಮ್‌ಅಫಂದಿ— ಇಲ್ಲ. ಹಾಜಿರೆ ಇರುವಳು. ಇವತ್ತೆಲ್ಲಾ ಅವಳು ವಿಶ್ರಮಿಸಿಕೊಂಡಿರುವದರಿಂದ ಯಾವದಾದರೊಂದು ಕೌಚಿನಮೇಲೆ ಮಲಗಿಕೊಂಡಿರುವಳು.

ನಾಫಿಜ್‌ಬೇ— (ತ್ವರಿತದಿಂದ) ಹಾಜಿರೆಯನ್ನು ನಾನೆಂದಿಗೂ ಇರಗೊಡುವದಿಲ್ಲ. ಅವಳೇ ರೋಗಪೀಡಿತಳಾಗಿ ಕಾಣಿಸುವದರಿಂದ ಅವಳ ಸೇವೆಯನ್ನೇ ನಾವು ಮಾಡಬೇಕಾಗಬಹುದು.

ನಸಿರುಲ್ಲಾಪಾಷಾರವರು ನನ್ನ ಕಡೆ ದಯಾಭರಿತರಾಗಿ ನೋಡಿದರು.

ನಸಿರುಲ್ಲಾಪಾಷಾ— ನಾಫಿಜ್‌ನು ನಿಜ ಹೇಳುತ್ತಾನೆ. ಹಾಜಿರೆಯು ಇಲ್ಲಿ ಕುಳಿತಿರಲು ಲಾಯಕ್ಕಾಗಿ ಕಾಣಿಸುವದಿಲ್ಲ. ಬೂಹಾವರೆಯನ್ನು ಇಲ್ಲಿರಲು ಹೇಳು. ತನ್ನ ಯಜಮಾನನ ಸೇವೆಯನ್ನು ಅವಳು ಯಾತಕ್ಕೆ ಮಾಡದಿರಬೇಕು ? ಇವತ್ತು ಸಂಜೆಯೇನೂ ನಾಫಿಜ್‌ಬೇಗೆ ಅಷ್ಟು ಹೆಚ್ಚು ಉಪಚರಿಸಬೇಕಾದ್ದಿಲ್ಲ.

ನಾಫಿಜ್‌ಬೇ— ಮೊದಲಿಂದಲೂ ಬೂಹಾವರೆಯೇತಕ್ಕೆ ಇಲ್ಲಿಗೆ ಬರಲಿಲ್ಲವೆಂಬುದು ನನಗೆ ಅರ್ಥವಾಗಲಿಲ್ಲ. ಹಾಜಿರೆಯು ಇಲ್ಲದಿದ್ದರೆ ಬೂಹಾವರೆಯೇ ನನ್ನ ಹತ್ತಿರ ಕುಳಿತಿರಬೇಕಾಗಿರುತ್ತಿತ್ತೋ ಇಲ್ಲವೋ ? ಅದೂ ಅಲ್ಲದೆ ಬೂಹಾವರೆಯಾಗಲೀ ಮತ್ತಾವ ಚಾಕರೆಯಾಗಲೀ ಗದ್ದಲಗಲಾಟೆ ಮಾಡದೆ ನನಗೊಂದು ಬಟ್ಟಲು ನೀರನ್ನು ಸಹ ಕೊಡುತ್ತಿರಲಿಲ್ಲವೆಂದೂ, ನನ್ನ ಹಾಸಿಗೆಯನ್ನೂ ಸರಿಮಾಡುತ್ತಿರಲಿಲ್ಲವೆಂದೂ ಹೇಳುವದರಲ್ಲಿ ಏನರ್ಥ ? ಹಾಜಿರೆಗೆ ನನ್ನ ದೆಸೆಯಿಂದ ಇಷ್ಟು ಕಷ್ಟವನ್ನುಂಟು ಮಾಡುವದು ಎಂದಿಗೂ ಸರಿಯಲ್ಲ. ಹನೀಮಾಳು ಕೇಳಿದರೆ ಏನೆಂದಾಳು !

ನಾಫಿಜ್‌ಬೇಯವರ ಮಾತನ್ನು ಕೇಳಿ ನನ್ನ ಮುಖವು ಕೆಂಪಾಗಿ ಹೋದದ್ದರಿಂದ ಇನ್ನು ನಾನು ಸೇವಿಸನಾಗಿ ಬಿಟ್ಟುಕೊಂಡು ಹೋಗಿರುವೆನೆಂದು ಹೇಳಬೇಕಾದ ಅವಶ್ಯಕತೆಯಿರಲಿಲ್ಲ. ಆಫನು ಬೇಯು ತಕ್ಷಣ ನನ್ನ ಕಡೆ ದೃಷ್ಟಿ ಬೀರಿದರು. ಅಲ್ಲಿದ್ದವರೆಲ್ಲಾ ನನ್ನೀ ಸ್ಥಿತಿಯನ್ನು ನೋಡತೊಡಗಿದರು. ಖಾನಮ್‌ಅಫಂದಿಯು ಮಗನಕಡೆ ವ್ಯಾಕುಲತೆಯಿಂದ ನೋಡುತ್ತಿದ್ದರು.

ನಾಫಿಜ್‌ಬೇ— ಒಳ್ಳೇದು. ಇನ್ನು ನಾನು ಹೆಚ್ಚು ಮಾತನಾಡುವದಿಲ್ಲ. ಆದರೆ ಹಾಜಿರೆಗೆ ನೀವು ಈ ಕೆಲಸವನ್ನು ಕೊಡಕೂಡದು. ನನ್ನಿಂದ ಅವಳ ಪ್ರಾಣಹೋಗಬೇಕೆಂದು ನಾನು ಆಶಿಸುವದಿಲ್ಲ. ಹಾಜಿರೆ, ಇನ್ನು ಹೋಗು ಮಲಗಿಕೋ. ನಿನ್ನ ಮುಖದವರ್ಣವು ಪುನಃ ಸರಿಹೋಗಲಿ. ಇಲ್ಲವಾದರೆ ನೀನು ಖಾಯಿಲೆಬಿದ್ದರೆ, ನಿನಗೆ ಪ್ರತ್ಯುಪಕಾರವಾಗಿ ನಾನು ನಿನ್ನ ಸೇವೆ ಮಾಡಬೇಕಾಗುವದು. ಆದರೆ ನಿನ್ನಂತೆ ಈ ಕೆಲಸವನ್ನು ಚೆನ್ನಾಗಿಮಾಡಲು ನನಗೆ ಶಕ್ತಿಯಿಲ್ಲ.

ಖಾನಮ್‌ಅಫಂದಿಯವರು ನನ್ನನ್ನು ಹೋಗಲು ಸನ್ನೆಮಾಡಲು, ನಾನು ನನ್ನ ಕೋಣೆಗೆ ಹೋಗಿ ಮಂಚದಮೇಲೆ ಮಲಗಿ ಅಳತೊಡಗಿದೆನು. ನನ್ನ ಪಾಡು ವಿಚಿತ್ರಾವಸ್ಥೆಯಾಗಿತ್ತು-ನಾಫಿಜ್‌ಬೇಯು ಅಂದು ನನ್ನನ್ನು ಅತಿ ಕರುಣೆಯಿಂದ ಮಾತನಾಡಿಸಿದನು-ಅಯೂಬ್‌ಸುಲ್ತಾನದಲ್ಲಿಅಂದು ಅಸಂಗತಿ ನಡೆದನಂತರ ನಾನು ದೇವರಲ್ಲಿ "ನಾಫಿಜ್‌ಬೇಯು ನನ್ನನ್ನು ದ್ವೇಷಿಸಲಿ", ಎಂದು ಪ್ರಾರ್ಥಿಸಿಕೊಂಡಿದ್ದೆನಾದರೂ ಇಂದು ಅವನಿಗೆ ನನ್ನ ಮೇಲಿದ್ದ ಕೋಪವು ಇಳಿದುಹೋಗಿದುದ್ದನ್ನೂ ನಾನು ಬೇರೊಬ್ಬರ ಪತ್ನಿಯಾಗುವೆನೆಂದು ಅವನು ತಿಳಿದುಕೊಂಡಿದ್ದುದನ್ನೂ ಕಂಡು ನಾನು ಈ ರೀತಿ ಅಳುವದು ಬಹಳ ಅಸಮಂಜಸವಾಗಿತ್ತು. ಆದರೆ ನಾನು ಮನಸ್ಸಿಗೆ ಸಮಾಧಾನ ಹೇಳದೆ ಧಾರಾಕಾರವಾಗಿ ಅತ್ತೆನು.

ಅನೇಕ ದಿನಗಳು ಕಳೆದುಹೋದವು. ವಿಶೇಷ ಸಂಗತಿಗಳಾವವೂ ನಡೆಯಲಿಲ್ಲ. ನಾಫಿಜ್‌ಬೇಯು ಕ್ರಮೇಣ ಸ್ವಸ್ಥನಾಗುತ್ತಾ ಬಂದನಾದುದರಿಂದ ಮನೆಯವರೆಲ್ಲಾ ಅವನ ಬಳಿಯೇ ಕುಳಿತಿರುತ್ತಿದ್ದರು. ಆದುದರಿಂದ ಅವನೊಡನೆ ಒಂಟಿಯಾಗಿರಬೇಕಾದ ಸಮಯ ನನಗೆ ಸಿಕ್ಕಿರಲಿಲ್ಲ. ನನ್ನೊಡನೆ ಈಗ ಅವನು ಸಮಾಧಾನಗೊಂಡು ಮೊದಲಿನಂತೆಯೇ ಸರಿಯಾದ ರೀತಿಯಲ್ಲಿ ಮಾತನಾಡುತ್ತಿದ್ದನು. ಆದರೆ ಅತಿಕಡಿಮೆ ಮಾತನಾಡುತ್ತಿದ್ದುದರಿಂದ ವಲಿಯಾಖಾನಮ್‌ಳು ಸಹ ಇದನ್ನು ಕಂಡುಹಿಡಿದಳು.

ವಲಿಯಾಖಾನಮ್— ವತ್ಸ, ನಾಫಿಜ್, ನಿನಗೆ ಉಪಕಾರಮಾಡಿದವರಿಗೆ ವಿಚಿತ್ರರೀತಿಯಲ್ಲಿ ಕೃತಜ್ಞತೆ ತೋರಿಸುತ್ತೀ. ನೀನು ಸ್ವಸ್ಥನಾದಾರಭ್ಯ ಹಾಜಿರೆಯೊಡನೆ, ಎಣಿಸಿ ಹತ್ತುಮಾತನ್ನಾಡಿದ್ದೀಯೋ ಇಲ್ಲವೋ ಕಾಣೆ ಅವಳು ನಿನ್ನ ಸೇವೆಯನ್ನು ಯಾವರೀತಿ ಮಾಡಿದ್ದಾಳೋ ತಿಳಿಯದು, ಅದು ಸಲುವಾಗಿ ನೀನು ಅವಳೊಡನೆ ಕೋಪಗೊಂಡಂತೆ ಕಾಣುತ್ತದೆ.

ಅದೃಷ್ಟವಶಾತ್ ಆಗ ನಾನೂ ವಲಿಯಾಖಾನಮ್‌ಳೂ ಇಬ್ಬರೇ

ನಾಫಿಜ್‌ಬೇಯು ಹತ್ತಿರ ಇದ್ದೆವು. ಖಾನವನ್ ಅಘಂದಿಯೂ ವಹೀದಾ ಖಾನವನ್‌ಳೂ ಯಾರೋ ಬರುವರೆಂದು ಕೆಳಗೆ ಹೋಗಿದ್ದರು. ನಾಫಿಜ್ ಬೇಯು ಪುಸ್ತಕವನ್ನೋದಲು ಯತ್ನಿಸುತ್ತಿದ್ದವನು ವಲಿಯಾಖಾನವನ್‌ಳ ಮಾತನ್ನು ಕೇಳಿ ಅದನ್ನು ಈಕಡೆ ಇಟ್ಟುಬಿಟ್ಟನು.

ನಾಫಿಜ್‌ಬೇ— ಸಹೋದರೀ, ನೀನು ತಪ್ಪುತಿಳಿದುಕೊಂಡಿರುವೆ. ಹಾಜಿರೆಯ ಮೇಲೆ ನನಗೆ ಯಾವ ವಿಧವಾದ ಕೋಪವೂ ಇಲ್ಲ. ಅವಳು ಮಾಡಿರುವ ಉಪಕಾರಕ್ಕಾಗಿ ಕೃತಜ್ಞನಾಗಿರುವೆನು.

ವಲಿಯಾಖಾನವನ್— ಹಾಗಾದರೆ ಮೊದಲಿನಂತೇಕೆ ಮಾತುಕಥೆಯಾಡುವ ದಿಲ್ಲ ? ಅಪರಿಚಯಸ್ಥರಂತೆ ನಿಮ್ಮಿಬ್ಬರಿಗೂ ಒಬ್ಬರೊಡನೊಬ್ಬರಿಗೆ ಮಾತ ನಾಡಲು ಇಷ್ಟವಿಲ್ಲ,

ನಾಫಿಜ್‌ಬೇ— ಅಪರಿಚಯಸ್ಥರಿಗೆ ಇಷ್ಟವಿಲ್ಲದೆ ಏನು ? ಮಾತನಾಡುವದು ನಡತೆಗೆ ವಿರುದ್ಧವೆಂದು ತಿಳಿದುಕೊಂಡಿದ್ದಾರೆ, ಅಷ್ಟೆ. ಅಹಮುದ್‌ಪಾಷಾ ರವರ ಮಗಳು ಈಗ ಕೆಳಗೆ ಡ್ರಾಯಿಂಗ್‌ರೂಮಿನಲ್ಲಿ ಕುಳಿತಿರುವಬದಲು ನನ್ನ ಬಳಿ ಬಂದು ಕುಳಿತುಕೊಂಡರೆ ನನಗೆ ಸಂತೋಷವೇ ಆಗುತ್ತದೆ.

ವಲಿಯಾಖಾನವನ್— ನಿಜವಾಗಿಯೂ ಬಹಳ ಒಳ್ಳೇಹುಡುಗಿ ! ಇಷ್ಟ ಪಟ್ಟರೆ ನೀನು ಮದುವೆಯಾಗಲೂಬಹುದು.

ನಾಫಿಜ್‌ಬೇ— ಬಹಳ ಉಪಕಾರವಾಯಿತು—ಸಾಕು, ಕ್ಷಮಿಸಿರಿ. ಅವಳೊ ಡನೆ ಅರ್ಧಘಂಟೆ ಮಾತನಾಡಿದುದರ ಫಲವು, ನನ್ನ ಸ್ವತಂತ್ರವನ್ನು ಕಳೆದು ಕೊಳ್ಳುವದಾದರೆ, ಇಂಥಹ ಸಮಾಗಮವೇ ಬೇಡ.

ವಲಿಯಾಖಾನವನ್ — ಈಗ ನೀನು ಡ್ರಾಯಿಂಗ್ ರೂಮಿಗೆ ಹೋದದ್ದೇ ಆದರೆ, ಅಹಮುದ್‌ಪಾಷಾರವರ ಮಗಳು ಏನಮಾಡುವಳು ? ನೀನು ಹೋದರೆ ಸ್ವಲ್ಪತಮಾಷೆಯನ್ನು ನೋಡಬಹುದೆಂದು ನನಗೆ ಆಶೆಯಾಗುತ್ತದೆ ಇತರ ದೇಶಗಳಲ್ಲಿ ಗಂಡಸರು ಹೆಂಗಸರು ಕಲೆತುಬೆರೆಯುವಂತೆ ನಮ್ಮ ದೇಶ ದಲ್ಲೂ ಆದರೆ ಚೆನ್ನಾಗಿರುವದು.

ನಾಫಿಜ್‌ಬೇ— ಎಷ್ಟು ಕೆಟ್ಟಮಾತನ್ನಾಡುವೆ ! ನಿನಗೆ ಲಜ್ಜೆಯಾದರೂ ಆಗುವದಿಲ್ಲವೇ ? ವಿವಾಹಿತಳಾಗಿ, ಮತ್ತೆ ಪುರುಷರಸಂಗಡಪೇಕ್ಷೆಯೋ ? ನನ್ನೊಡನೂ ಅಲೀಬೆಯೊಡನೂ ಮಾತನಾಡಲು ಸ್ವತಂತ್ರ ಕೊಟ್ಟಿರುವಂಥ ಒಳ್ಳೆಯ ಗಂಡನು ಸಿಕ್ಕಿರುವದಕ್ಕೆ ನೀನು ಅತ್ಯಂತ ಕೃತಜ್ಞಳಾಗಿರಬೇಕು. ನೀನಾದರೋ, ಇನ್ನೂ ಹೆಚ್ಚುಜನರೊಡನೆ ಮಾತನಾಡಲು ಅಪೇಕ್ಷಿಸುತ್ತೀಯ

ವಲಿಯಾಖಾನವನ್— ಹೌದು, ಒಂದು ವಿಧದಲ್ಲಿ ನೋಡಿದರೆ ನನ್ನನ್ನು

ಅಲೀಬೇಯು ಮುಂದೆ ಬರಲು ಬಿಟ್ಟಿರುವದೇ ಅತ್ಯಂತ ಕರುಣೆಯಾಗಿರುವದು, ಮತ್ತಾವ ಮನುಷ್ಯನಾಗಿದ್ದರೂ ಈ ಪದ್ಧತಿಯನ್ನು ನಡೆಸುತ್ತಿರಲಿಲ್ಲವೆಂದು ತೋರುತ್ತದೆ. ಆದರೆ ನಿನ್ನ ವಿಷಯದಲ್ಲಿ ಹೀಗೆ ಹೇಳಬೇಕಾದುದಿಲ್ಲ. ನಿನ್ನ ಅಣ್ಣನ ಪತ್ನಿಯೇ ಆಗಿರುವೆನಾದುದರಿಂದ ನಿನ್ನಮುಂದೆ ಘರದೆಯನ್ನು ಹಾಕಿ ಸಿದ್ದರೆ ವ್ಯರ್ಥವಾಗಿ ಹಾಸ್ಯಕ್ಕೆ ಗುರಿಯಾಗುತ್ತಿದ್ದರು.

ನಾಫಿಜ್‌ಬೇ— ಅಣ್ಣನವರಿಗೆ ತಮ್ಮ ರೂಪ ಗುಣಾತಿಶಯಗಳಲ್ಲಿ ಅತ್ಯಂತ ನಂಬಿಕೆಯಿರುವದರಿಂದ ಮನಸ್ಸಿನಲ್ಲಿ ಸಂಶಯಕ್ಕೆ ಆಸ್ಪದಸಹ ಕೊಡುವದಿಲ್ಲ. ನಿನಗೆ ಅವರ ಮೇಲೆ ಬಹಳ ಪ್ರೀತಿಯಿರುವದೆಂಬುದನ್ನು ಅವರು ಚೆನ್ನಾಗಿ ಅರಿತು ಇರುವದರಿಂದ ನೀನವರನ್ನು ಅಲೀಬೆಯೊಡನೆ ಹೋಲಿಸುವದು ಸಹ ಇಲ್ಲವೆಂದು ತಿಳಿದಿದ್ದಾರೆ.

ವಲಿಯಾಖಾನಮ್—(ನಗುತ್ತಾ ನಾಚಿಕೆಯಿಂದ) ನೀನು ಹೀಗೆನ್ನುವದಾದರೆ ನಾನು ಹೇಳುವದನ್ನು ನೀನು ಸಮರ್ಥಿಸುತ್ತೀಯೆಂದು ಕಾಣುತ್ತದೆ; ಏನೆಂದರೆ–ಅವರು ನಿಮ್ಮೆಲ್ಲರಿಗಿಂತ ಸುಂದರರೆಂಬುದನ್ನು.

ನಾಫಿಜ್‌ಬೇ—ಅಥಮ್‌ಬೇಯಂಥಹ ಹರ್ಷಚಿತ್ತರನ್ನೂ, ಸಹೃದಯರನ್ನೂ, ದೋಷಾರೋಪಣೆ ಮಾಡುವದು ನಮಗ್ಯಾರಿಗೂ ಸಾಧ್ಯವಿಲ್ಲ. (ಹಾಸ್ಯದಿಂದ ಕೂಡಿ) ಆದರೆ, ವಲಿಯಾ, ಒಂದೊಂದು ವೇಳೆ ಅವರು ನಿನ್ನಲ್ಲಿ ತೋರಿಸಿರುವ ಅನಾದರಣೆಯನ್ನು ಸರಿಪಡಿಸಲು, ನಾನು ಮಾಡಿರುವ ಉಪಕಾರಕ್ಕೆ ಬದಲಾಗಿ, ನೀನು ಈರೀತಿ, ನನಗಿಂತ ಅವರಲ್ಲಿ ಹೆಚ್ಚು ಗುಣಗಳಿರುವವೆಂದು ಹೇಳುವದು ಸರಿಯಲ್ಲ.

ವಲಿಯಾಖಾನಮ್— (ನಗುತ್ತಾ) ಅವರಲ್ಲಿ ಹೆಚ್ಚು ಗುಣಗಳಿವೆಯೆಂದು ನಾನೇನೂ ಹೇಳಲಿಲ್ಲ. ಅವರು ಹೆಚ್ಚು ಸುಂದರರೆಂದು ಮಾತ್ರ ಹೇಳಿದೆ. ನಿನ್ನ ರೂಪಿನ ವಿಚಾರದಲ್ಲಿ ದೋಷವನ್ನೆಣಿಸಿದೆನೇ ಹೊರ್ತು ನಿನ್ನ ಮಾತುಕಥೆ ಗುಣಗಳ ವಿಚಾರದಲ್ಲಲ್ಲ. ಆ ವಿಚಾರದಲ್ಲಿ ನೀನು ಅದ್ವಿತೀಯನಾಗಿದ್ದೀ :—

"ಅನ್ಯರ ಮುಖದೊಳಗಿಹ ಸೌಂದರ್ಯ
ನಿನ್ನುಡಿಯೊಳಗಿರ್ಪುದು ನಾಫಿಜ್‌ಬೇ"

ಆದುದರಿಂದಲೇ ನೀನು ಹಾಜಿರೆಯೊಡನೆ ಇಷ್ಟು ಕಡಮೆ ಮಾತನಾಡುತ್ತಿರುವುದು ನನಗೆ ಆಶ್ಚರ್ಯವನ್ನುಂಟು ಮಾಡುತ್ತಿದೆ. ನಿಜವನ್ನು ಹೇಳು. ನೀವಿಬ್ಬರೂ ವ್ಯಾಜ್ಯವಾಡಿಲ್ಲ ತಾನೆ ?

ಎರಡು ದಿನಗಳಿಂದ ನಾಫಿಜ್‌ಬೇಯು ಮಂಚವನ್ನು ಬಿಟ್ಟು ಕಿಟಕಿಯ

ಹತ್ತಿರ ಕೌಚಿನಮೇಲೆ ಮಲಗಿಕೊಳ್ಳುತ್ತಿದ್ದನು. ಅವತ್ತು ಸಹ ಕೌಚಿನ ಮೇಲೆ ದಿಂಬನ್ನು ಒರಗಿಕೊಂಡು ಮಲಗಿಕೊಂಡು, ಅರ್ಧೋನ್ಮೀಲಿತನೇತ್ರದಿಂದ ಪತ್ರಿಗೆಯ ಕಡೆ ನೋಡುತ್ತಿದ್ದವನು, ಅವಳ ಮಾತನ್ನು ಕೇಳಿ ನೆಟ್ಟಗಿದ್ದು ಕುಳಿತು ಕೊಂಡು, ವ್ಯಸನದಿಂದ, "ಅರ್ಥವಿಲ್ಲದ ಮಾತನಾಡಬೇಡ ಹಾಜಿರೆಯು ನನ್ನ ದಾಸಿಯೇನೂ ಅಲ್ಲ. ಅವಳ ಮೇಲೆ ನನಗೇನೂ ಅಧಿಕಾರವಿಲ್ಲ. ನಮ್ಮ ಮನೆಯಲ್ಲಿದ್ದರೂ ಹೊರಗಿನವಳೇ ಆದುದರಿಂದ ಅವಳೊಡನೆ ಜಗಳವಾಡಲು ನಾನೇಕೆ ತೊಂದರೆ ತೆಗೆದುಕೊಳ್ಳಬೇಕು ?" ಎಂದನು.

ವಲಿಯಾಖಾನಮ್‌ಳು ಆಶ್ಚರ್ಯಗೊಂಡು ನಾಫಿಜ್‌ಬೇಯ ಕಡೆ ನೋಡುತ್ತ "ಸಹೋದರಾ, ಏತಕ್ಕೆ ಖಿನ್ನನಾಗುವೆ ? ನಿನಗೆ ದುಃಖವನ್ನುಂಟು ಮಾಡಲೋಸ್ಕರ ನಾನೇನೂ ಹೇಳಲಿಲ್ಲ. (ಭ್ರೂಭಂಗದಿಂದ) ನೀನಾಡಿದಮಾತು ಬಹಳ ಕೆಟ್ಟದಾಗಿರುವದು. ಇದಕ್ಕಿಂತ ಕೆಟ್ಟಶಬ್ದವನ್ನು ಉಪಯೋಗಿಸುವದು ಕಷ್ಟ. ಈ ತೆರನಾದ ಮಾತುಗಳನ್ನಾಡಲು ನಿನಗೆ ನಾಚಿಕೆಯಾಗುವದಿಲ್ಲವೇ." ಎಂದಳು.

ನಾಫಿಜ್‌ಬೇ— ಇದರಲ್ಲಿ ನಾಚಿಕೆಗೊಳ್ಳುವಂಥಾದ್ದೇನಿದೆ ? ನಾನು ಹೇಳಿದುದರ ಅರ್ಥವೇನೆಂದರೆ–ಹಾಜಿರೆಯ ವಿಷಯದಲ್ಲಿ ನನಗೇನೂ ಶ್ರದ್ಧೆಯಿಲ್ಲದಿರುವದರಿಂದ ಅವಳೊಡನೆ ನಾನೇಕೆ ಅಸಮಾಧಾನಗೊಳ್ಳಲೆಂದು. ಇದರಲ್ಲಿ ಕೆಟ್ಟಮಾತಾವುದಿರುವದು ?

ವಲಿಯಾಖಾನಮ್— (ಸಿಟ್ಟಿನಿಂದ) ನಾಫಿಜ್‌ಬೇ, ಬಿಡತುಬಿಡತು ಎನ್ನ. ಬಹಳ ಅವಮಾನಕರವು. ಇಷ್ಟು ಸೇವೆಮಾಡಿದ್ದಕ್ಕೆ ಪ್ರತೀಕಾರವಿದೇನೇ ! ಅಯ್ಯೋ ಪಾಪ, ಹಾಜಿರೇ, ಇವನ ಮಾತಿಗೆ ಗಮನಕೊಡಬೇಡಮ್ಮ. ಇವನಿಗೆ ಬುದ್ಧಿಕೆಟ್ಟಿರುವಂತೆ ಕಾಣುತ್ತದೆ.

ಇನ್ನು ಹೆಚ್ಚು ಮಾತು ಕೇಳಲು ನನಗೆ ಶಕ್ತಿಯಿಲ್ಲದುದರಿಂದ ಅಲ್ಲಿಂದ ಹೊರಟುಹೋಗಲು ಎದ್ದುನಿಂತೆನು. ಅಷ್ಟರಲ್ಲೇ ನಾಫಿಜ್‌ಬೇಯು ಜವಾಬು ಹೇಳಲಾರಂಭಿಸಿದನು.

ನಾಫಿಜ್‌ಬೇ — ಹಾಜಿರೆಗೆ ಬಲಾತ್ಕಾರದಿಂದ ನನ್ನ ಸೇವೆಮಾಡಬೇಕಾಗಿ ಬಂದುದರಿಂದ ನೀನು ಹೇಳುವದನ್ನು ಒಪ್ಪಲಾಗುವದಿಲ್ಲ. ನನ್ನ ಬಂಧುಗಳು ತಾವುಗಳು ಕೈಕಟ್ಟಿ ಕುಳಿತುಕೊಂಡು, ಹಾಜಿರೆಯನ್ನು ನನ್ನ ಶುಶ್ರೂಷೆಗೆ ನೇಮಿಸಿದಾಗ ಅವಳಿಗೆ ನನ್ನ ವಿಷಯ ಯೋಚನೆಯೇ ಇರಲಿಲ್ಲವೆಂದು ತೋರುತ್ತದೆ. ಅವನು ಹೀಗೆ ಮಾಡುವನೆಂದು ನಾನು ನಿರೀಕ್ಷಿಸಿರಲಿಲ್ಲ ಸಂಬಳವನ್ನು ಕೊಟ್ಟು ಬೇರೆಯಾವ ಹೆಂಗಸನ್ನಾದರೂ ಇಟ್ಟಿದ್ದರೂ ಹೀಗೆಯೆ

ಇರುತ್ತಿತ್ತು.

ನಾನು ತಕ್ಷಣವೇ ಬಾಗಿಲನ್ನು ಹಾಕಿಕೊಂಡು ಮೆಟ್ಟಲಿಳಿದು ತೋಟದ ಕಡೆಗೆ ಹೊರಟೆನು. ಚಿಕ್ಕವಯಸ್ಸಾಗಿದ್ದುದರಿಂದ ತಿಳುವಳಿಕೆ ಹೆಚ್ಚಾಗಿಲ್ಲದಿದ್ದರೂ ಮಾನಮರ್ಯಾದೆ ಲಜ್ಜೆಯುಳ್ಳವಳಾಗಿದ್ದೆನಾದುದರಿಂದ ನಾಫೆಜ್ ಬೇಯ ಮಾತನ್ನು ಕೇಳಿ ನನಗೆ ಬಹಳ ದುಃಖವುಂಟಾಯಿತು. ನಾನು ಆ ಮನೆಯವರ ಕೈಕೆಳಗಿದ್ದನೆಂಬುದರಲ್ಲೇನೂ ಸಂಶಯವಿರಲಿಲ್ಲ. ಆದರೆ ನಾಫೆಜ್ ಬೇಯನ್ನು ನಾನಷ್ಟು ಪ್ರೀತಿಸುತ್ತಿದ್ದರೂ ಅವನೇ ಎಲ್ಲರಿಗಿಂತ ಮೊದಲು, ಆ ಮನೆಯಲ್ಲಿ ನನಗಿದ್ದ ಸಂಬಂಧವನ್ನು ತಿಳಿಸಿದುದನ್ನು ಯೋಚಿಸಿಕೊಂಡು ಮನಸ್ಸಿಗೆ ಬಹಳ ನೋವಾಯಿತು. ನನ್ನೆದುರಿಗೇ, ನಾನು ಕಿವುಡಿಯೋ ಅಥವಾ ಮೂಗಿಯೋ ಆಗಿದ್ದಂತೆ ನಿಕೃಷ್ಟತೆಯಿಂದ ಮಾತನಾಡಿದನು. ತೋಟದಲ್ಲಿ ಹೋಗಿ ಧಾರಾಕಾರವಾಗಿ ಅತ್ತೆನು. ಯಾರೋ ಬರುವ ಸದ್ದಾಗಲು ತಲೆಯೆತ್ತಿ ನೋಡಿದೆನು. ಅಥವರ್ ಬೇ ಮತ್ತು ಅಲಿಬೇ ಇಬ್ಬರೂ ನನ್ನ ಕಡೆ ಬರುತ್ತಿದ್ದರು.

ಅಥವರ್ ಬೇ—(ವಿಸ್ಮಯದಿಂದ) ಹಾಜಿರೇ, ಸ್ವಸ್ಥವಾಗಿರುವೆ ತಾನೆ? ಏನಾಯಿತು?

ನಾನು—ಬೇಲಘಂದೆ, ಏನೂ ಇಲ್ಲ.

ಹೀಗೆ ಹೇಳುತ್ತಾ, ನಾನು ಅಳುತ್ತಿದ್ದುದು ಅವರಿಗೆ ಗೊತ್ತಾಗಬಾರದು ಎಂದು, ಎದ್ದು ನಿಂತು ಕಣ್ಣೊರೆಸಿಕೊಂಡೆನು.

ಅಥವರ್ ಬೇ—ತಾಯಿಯವರು ನಿನ್ನ ಮೇಲೆ ಸಿಟ್ಟುಗೊಂಡರೆ?

ನಾನು—ಖಂಡಿತವಾಗಿಯೂ ಇಲ್ಲ.

ಅಥವರ್ ಬೇ—ತಾಯಿಯವರು ಸಿಟ್ಟುಮಾಡಿಲ್ಲದಿದ್ದರೆ ಮಹೇದಳು ಸಿಟ್ಟು ಮಾಡಿರಬೇಕು. ಅಲ್ಲವೇ? (ನಾನು ತಲೆಯಲ್ಲಾಡಿಸಲು) ಹಾಗಾದರೆ ಖಾಸಮ್ ಳಿರಬೇಕು—ಅಥವಾ (ಸ್ವಲ್ಪ ಹೊತ್ತು ಸುಮ್ಮನಿದ್ದು) ನಾಫೆಜ್ ಬೇ ಇರಬೇಕು.

ಅವರು ಮಾತನಾಡಿದ ರೀತಿಯಿಂದ ಮತ್ತೆ ನನ್ನ ಕಣ್ಣುಗಳಿಂದ ನದೀ ಪ್ರವಾಹವು ಹರಿದು ಹೋಯಿತು. ಅವರು ಏನನ್ನು ಉದ್ದೇಶಿಸಿ ಹೀಗೆ ಹೇಳಿರಬೇಕೆಂದು ನನಗೆ ಯೋಚನೆಯಾಯಿತು. ನಾಫೆಜ್ ಬೇಯೇನಾದರು ಒಂದು ವೇಳೆ ಅವರೊಡನೆ ತನ್ನ ಮನಸ್ಸಿನಲ್ಲಿದ್ದ ಸಂಶಯವನ್ನು ಹೇಳಿದ್ದಾನೆಯೋ? ಅಥವಾ ತಾನೇ ಏನಾದರೂ ಕಂಡುಹಿಡಿದನೋ? ಅಲಿಬೇಗೆ ಈ ಮಾತುಗಳಲ್ಲಿ ರುಚಿ ಹತ್ತುತ್ತಿದ್ದುದನ್ನು ಕಂಡು ನಾನು ಮುಖವನ್ನು

ವ್ಯರೆಮಾಡಿಕೊಂಡು ಜವಾಬಿತ್ತೆನು.

ನಾನು ಸ್ವಸ್ಥಳಾಗಿರುವೆನು. ನನಗೆ ಯಾವ ವಿಧವಾದ ಹಿಂಸೆಯೂ ಇಲ್ಲ.

ಅಥವರ್ ಬೇ—(ನನ್ನ ಭುಜದಮೇಲೆ ಕೈಯಿಟ್ಟು, ನಯದಿಂದ) ದೀನ ದುಃಖಿನಿಯಾದ ಹಾಜಿರೇ,-ನಾಫಿಜ್ ಬೇಯು ಖಂಡಿತವಾಗಿಯೂ ನಿನ್ನನ್ನು ಪೀಡಿಸಿರುವನೆಂದು ತೋರುತ್ತದೆ. ನಾನು ನೋಡಿರುವೆನು-ನೀನು ಹಮಿದಾಳ ಮನೆಗೆ ಹೋದಂದಿನಿಂದ ಅವನಿಗೆ ನಿನ್ನನ್ನು ಕಂಡರೆ ಆಗುತ್ತಿಲ್ಲ. ಆದರೆ ಅವನು ನನ್ನೊಡನೆ ಎಲ್ಲ ವಿಷಯವನ್ನೂ ಹೇಳದಿರುವದರಿಂದ ಇದರ ಕಾರಣ ವೇನೆಂಬುದು ನನಗೆ ಗೊತ್ತಾಗುವುದಿಲ್ಲ. ನೀನು ತಿಳಿಸಬಲ್ಲೆಯಾ ?

ನಾನು—(ಪ್ರಾಮಾಣಿಕತೆಯಿಂದ) ನನ್ನನ್ನು ಕ್ಷಮಿಸಬೇಕು. (ಮತ್ತೆ ಅವರು ನನ್ನ ಕಡೆ ಕನಿಕರದಿಂದ ನೋಡುತ್ತಿದ್ದುದನ್ನು ಕಂಡು ಮನಸ್ಸಿಗೆ ಧೈರ್ಯವುಂಟಾಗಿ) ನಾನು ಕೆಲವು ದಿನಗಳು ಹಮಿದಾಳ ಹತ್ತಿರ ಹೋಗಲು ಇಚ್ಛಿಸುವೆನು. ತಾವು ನನಗೆ ಅನುಜ್ಞೆ ಕೊಡಿಸಲಾರಿರಾ. ತಾವು ಹೇಳಿದರೆ ಖಾನಮ್ ಆಫಂದಿಯವರು ಎಂದಿಗೂ ಇಲ್ಲವೆನ್ನುವುದಿಲ್ಲ.

ಅಥವರ್ ಬೇಯು ನನ್ನ ಕಡೆ ವಿಸ್ಮಯದಿಂದ ನೋಡುತ್ತಾ ಹೀಗೆಂದರು:- "ಯೋಚಿಸಿದರಲ್ಲಿ, ಇದು ಸಾಧ್ಯವಾಗಿ ಕಾಣುವುದಿಲ್ಲ. ಅನೇಕ ವಿಚಾರಗಳು ಇದಕ್ಕೆ ವಿರುದ್ಧವಾಗಿವೆ. ಆದರೆ, ಹಾಜಿರೆ ನಮ್ಮನ್ನೇಕೆ ಬಿಟ್ಟು ಹೋಗಲು ಇಷ್ಟಪಡುವೆ ? ಇಲ್ಲಿ ನೀನು ಸುಖವಾಗಿಲ್ಲವೇ ?

ನಾನು—(ಬಹಳ ನಾಚಿಕೆಯಿಂದ) ತಾವು ಹಾಗೆಂದಿಗೂ ತಿಳಿಯಕೂಡದು

ಅಥವರ್ ಬೇ—ಹಾಗಾದರೆ ನಾಫಿಜ್ ಬೇಯಿಂದ ತಪ್ಪಿಸಿಕೊಳ್ಳಲು ಅಪೇಕ್ಷೆ ಪಡುವೆಯಾ ? ಯಥಾರ್ಥವನ್ನು ಹೇಳು. ನೀನು ಹಮಿದಾಳ ಮನೆಗೆ ಹೋದಬಳಿಕ ನಾಫಿಜ್ ಬೇಯನ್ನು ಎಲ್ಲಾದರೂ ಸಂದರ್ಶಿಸಿದ್ದೆಯಾ ?

ನಾನು—ಹೌದು, ಸ್ವಾಮಿ

ಮನಸ್ಸಿನಲ್ಲಾದರೋ, ಅಥವರ್ ಬೇಯು ಇನ್ನು ಹೆಚ್ಚು ಪ್ರಶ್ನಿಸದಂತೆ ಏನಾದರೂ ಅಡ್ಡಿ ಬರಬಾರದೇ, ಭೂಕಂಪವಾದರೂ ಸರಿ, ಬಿರುಗಾಳಿಯಾದರೂ ಸರಿ ಏಳಬಾರದೇ, ಅಥವಾ ಯಾರಾದರೂ ಅವರನ್ನು ಕರೆಯಬಾರದೇ ಎಂದು ಯೋಚಿಸುತ್ತಿದ್ದೆನು. ಅದೇನು ? ಆಕಾಶವು ನಿರ್ಮಲವಾಗಿತ್ತು. ಭೂಕಂಪವೂ ಆಗಲಿಲ್ಲ-ಅವರನ್ನಾರೂ ಕೂಗಲೂ ಇಲ್ಲ.

ಅಥವರ್ ಬೇ—ಅವನು ನಿನಗೆ ಏನ ಹೇಳಿದನು ? ಏನಾದರೂ ಕೇಳಿದನೆ ? ವಿಚಾರಿಸಿದನೇ ?

ನಾನು—(ಕೊಂಚ ಆಶ್ಚರ್ಯದಿಂದ) ಇಲ್ಲ, ಬೇಲಫಂದೆಯವರೇ.

ನಾಫಿಜ್‌ಬೇಯು ನನ್ನನ್ನು ಏನುತಾನೆ ಕೇಳಿಯಾನು? ವಿಚಾರಿಸಿಯಾನು? ಅಥವರ್‌ಬೇಯವರು ಏನನ್ನು ಯೋಚಿಸಿಕೊಂಡು ಹೀಗೆ ಪ್ರಶ್ನಿಸಿರಬಹುದು?

ಅಥವರ್‌ಬೇ—ಹಾಗಾದರೆ ಅವನಿಗೇಕೆ ನಿನ್ನ ಮೇಲೆ ಕೋಪ?

ನಾನು ಸುಮ್ಮನಿದ್ದೆನು. ಅಥವರ್‌ಬೇಯೂ ಸ್ವಲ್ಪ ಹೊತ್ತು ನನ್ನ ಕಡೆ ಮೌನದಿಂದ ನೋಡುತ್ತಿದ್ದರು

ಅಥವರ್‌ಬೇ—(ನನ್ನ ಭುಜದ ಮೇಲೆ ಕೈಯಿಟ್ಟು, ನಯದಿಂದ) ಹಾಜಿರೆ, ನಾನು ನಿನ್ನ ತಂದೆಗೆ ಸಮಾನನು. ನನ್ನಿಂದ ಯಾವ ವಿಷಯವನ್ನೂ ಮರೆಮಾಚಬೇಡ. ಒಂದಲ್ಲ ಒಂದು ದಿನ ನಾನು ನಿನಗೆ ಸಹಾಯಕನಾಗಬಹುದು. ನಾಫಿಜ್‌ಬೇಯು ಯಮನ್‌ಗೆ ಹೋಗಬೇಕೆಂದು ತಂದೆಯವರೊಡನೆ ಹೇಳಿದಾಗ ಅವರು ನನ್ನನ್ನು "ನಿನ್ನ ಖಾಯಿಲೆಗೆ ಬೇರೆ ಚಿಕಿತ್ಸೆಯೇ ಇಲ್ಲನೇ-ಇಲ್ಲಿಂದ ಓಡಿಹೋಗುವುದರಲ್ಲಿ ನಿನಗೆ ಕ್ಷೇಮವುಂಟೆಂದು ಎಣಿಸುತ್ತೀ," ಎಂದು ಹೇಳಿದರು ನಿನಗೆ ಜ್ಞಾಪಕವಿದೆಯೇ? ನಾಫಿಜ್‌ಬೇಯು ಎಂದಾದರೂ ಇದರರ್ಥವೇನೆಂಬುದನ್ನು ನಿನಗೆ ತಿಳಿಯಹೇಳಿದ್ದನೆ?

ನನ್ನ ಮುಖವು ವಿವರ್ಣವಾಗಿ ಹೋಯಿತು. ಕೊನೆಗೂ ಈ ವಿಷಯವು ಪ್ರಕಾಶಕ್ಕೆ ಬರಲಾಯಿತು.

ನಾನು—ಇಲ್ಲ, ಬೇಲಫಂದೆಯವರೇ, ಅವನೆಂದೂ ಈ ವಿಚಾರವನ್ನು ನನ್ನೊಡನೆ ಎತ್ತಲಿಲ್ಲವೆಂದು ನಾನು ನಿಮಗೆ ನಂಬುಗೆ ಕೊಡುತ್ತೇನೆ.

ಅಥವರ್‌ಬೇ—ಆದರೂ, ನೀನು ತಿಳಿದುಕೊಂಡಿರಬಹುದು. ನಾಫಿಜ್‌ಬೇಯು ಆ ವಿಚಾರವಾಗಿಯೇ ನಿನ್ನೊಡನೆ ಖೇದಗೊಂಡಿರುವನೇ?

ನಾನು—ಇಲ್ಲ-ಹೌದು-ಸರಿಯಾಗಿ ಗೊತ್ತಿಲ್ಲ. ನಾನು ಅಯೂಬ್ ಸುಲ್ತಾನಕ್ಕೆ ಏತಕ್ಕಾಗಿ ಹೋಗಬೇಕಾಗಿತ್ತೆಂದು ಅವನಿಗೆ ಸಿಟ್ಟು.

ಅಥವರ್‌ಬೇ—(ಆಶ್ಚರ್ಯದಿಂದ) ಏನು?

ನಾನೇನುತ್ತರವನ್ನೂ ಕೊಡಲಿಲ್ಲ. ಆಹಾ, ನಾಫಿಜ್‌ಬೇಯ ಕೋಪಕ್ಕೆ ಕಾರಣವು, ಅವನು ನನ್ನನ್ನು, ದಾವೂದನನ್ನು ಪ್ರೀತಿಸುತ್ತಾಳೆಂದು ತಿಳಿದುಕೊಂಡಿದ್ದುದೇ ಎಂದು ಹೇಗೆ ತಾನೆ ಹೇಳಲಿ?

ಅಥವರ್‌ಬೇ—(ಕೊಂಚ ಹೊತ್ತಾದ ಮೇಲೆ) ನೀನು ಅಲ್ಲಿಗೆ ಯಾರೊಡನೆ ಹೋದೆ ಮತ್ತು ಏತಕ್ಕೆ ಹೋದೆ?

ನಾನು—ಬೂಹಾವರೆಯೂ, ಹಮೀದಳೂ, ನಾನು ಸುತ್ತಾಡಲು ಹೋದೆವು.

ಮತ್ತು-ಹಮೀದಳ ಮಗನಾದ ದಾವೂದನು ನಮ್ಮ ಹಿಂದೆಯೇ ನಮ್ಮ ಕಾವಲಿಗಾಗಿ ಬರುತ್ತಿದ್ದನು.
ಅಥಮ್‌ಬೇ—ತಪ್ಪೇನೂ ಇಲ್ಲ. ತಾಯಿಯವರು ನಿನಗೆ ಹಮೀದಳ ಮನೆಗೆ ಒಂದು ದಿನ ಹೋಗಿರಲು ಅನುಮತಿಕೊಟ್ಟಾಗ, ನೀನು ದಿನವೆಲ್ಲಾ ಮನೆಯಲ್ಲೇ ಕುಳಿತಿರುವುದಿಲ್ಲ ವೆಂದೂ, ಸುತ್ತಾಡಲು ಹೋಗುವೆಯೆಂದೂ ತಿಳಿದೇ ಇದ್ದರು. ದಾವೂದನು ನಿನ್ನೊಡನೆ ಬಂದುದೂ ಬಹಳ ಒಳ್ಳೆಯದೇ ಆಯಿತು. ಸಾಕು, ಇಷ್ಟುಮಾತ್ರಕ್ಕೇ ನಾಫಿಜ್‌ಬೇಯು ನಿನ್ನೊಡನೆ ಸಿಟ್ಟುಗೊಂಡನೇ ?
ನಾನು—ಹೌದು ಸ್ವಾಮಿ, ನಾನು ದಾವೂದನೊಡನೆ ಮಾತನಾಡಿದೆನೆಂದು.

ಇಷ್ಟು ಹೇಳಿಪತರುವಾಯ ನನ್ನ ಕಾಲಿಗೆ ನಾನೇ ಕೊಡಲಿ ಹಾಕಿ ಕೊಂಡೆನೆಂದು ತಿಳಿದುಕೊಂಡೆನು. ನಾಫಿಜ್‌ಬೇಯು ಯಾವ ರೀತಿ ನನ್ನಲ್ಲಿ ಸಂಶಯಗೊಂಡಿದ್ದನೋ, ಅದೇ ರೀತಿ, ಅಥಮ್‌ಬೇಯೂ ಅನುಮಾನಪಟ್ಟು ನನ್ನನ್ನು ತಿರಸ್ಕರಿಸುವರೆಂಬಾಲೋಚನೆಯೊಂದೇ, ಆಯಾಸಗೊಂಡಿದ್ದ ನನ್ನ ಬುದ್ಧಿಗೆ ಆಗ ತೋರಿದುದು. ಹೀಗೆ ನಿರ್ಧರಿಸಿಕೊಂಡು ಅಥಮ್‌ಬೇಯ ಜವಾಬನ್ನು ನಿರೀಕ್ಷಿಸಿಕೊಂಡಿದ್ದೆನು. ಅವರು ನಾಲ್ಕು ನಿಮಿಷಗಳವರೆಗೆ ಸುಮ್ಮನೆ ನನ್ನನ್ನು ನೋಡುತ್ತಾ ನಿಂತಿದ್ದರು.
ಅಥಮ್‌ಬೇ— ನನಗೆ ಗೊತ್ತಾಯಿತು.

ಹೀಗೆಂದು ಮನೆಯಕಡೆ ತಿರುಗಿ, ನಾಲ್ಕು ಹೆಜ್ಜೆ ಹೋಗಿ ಮತ್ತೆ ಹಿಂದಿರುಗಿ ನಾನಿದ್ದೆಡೆಗೆ ಬಂದು ಬೊಗ್ಗಿ ನನ್ನ ಕೆನ್ನೆಗೆ ಮುದ್ದಿಟ್ಟರು.
ಅಥಮ್‌ಬೇ— ನೀನು ಬಹಳ ಒಳ್ಳೇ ಕೆಲಸಮಾಡಿದೆ-ಬುದ್ಧಿವಂತಿಕೆಯನ್ನು ಪ್ರಯೋಗಿಸಿದೆ. ನನಗೆ ಬಹಳ ಸಂತೋಷವಾಯಿತು. ದಾವೂದನೊಡನೆ ಮಾತನಾಡಿದುದರಲ್ಲಿ ಏನೂ ತಪ್ಪಿಲ್ಲ. ನೀನು ಎಂದೂ, ತಪ್ಪು ಕೆಲಸಮಾಡಿದವಳಾಗಲೀ, ವ್ಯರ್ಥವಾಗಿ ಮಾತನಾಡಿದವಳಾಗಲೀ ಅಲ್ಲ. ನಾನೀಗಲೇ ಹೋಗಿ ನಾಫಿಜ್‌ಬೇಗೆ ತಿಳಿಯ ಹೇಳುವೆನು. ತನಗೆ ಉಂಟಾಗಿರುವ ನಿರಾಶೆಯ ಮತ್ತು ವ್ಯಾಕುಲತೆಯ ಕ್ರೋಧವನ್ನು ನಿನ್ನ ಮೇಲೆ ತೀರಿಸಿಕೊಳ್ಳಲು ಅವನಿಗೇನೂ ಅಧಿಕಾರವಿಲ್ಲ.

ನಾನು ಅವರನ್ನು ತಡೆಯಲು ಯತ್ನಿಸಿದೆನು. ಅವರ ಮಾತನ್ನು ಕೇಳಿ, ನನಗಾದ ಭಯದಿಂದ ಇನ್ನೂ ಚೇತರಿಸಿಕೊಳ್ಳುವದರಲ್ಲೇ ಅವರು ಹೊರಟುಹೋಗಿದ್ದರು. ಏನು, ಪುನಃ ನನ್ನ ದೆಸೆಯಿಂದ ಅಣ್ಣತಮ್ಮಂದಿರಿಬ್ಬರಿಗೂ ಮನಸ್ತಾಪವುಂಟಾಗುವದೋ! ಹೀಗೆ ಚಿಂತಿಸಿ, ಅವರ ಹಿಂದೆ

ಓಡಿಹೋಗಲೀ ಎಂದು ಯೋಚಿಸುತ್ತಿರುವಾಗ, ಒಂದು ಕಡೆಯಿಂದ ನನ್ನ ಹತ್ತಿರ ಕಿಲಕಿಲ ಎಂದು ನಗುತ್ತಿರುವ ಸದ್ದು ಕೇಳಿಸಿತು.

ಅಲೀಬೇ — (ನಗುತ್ತಾ) ಹಾಜೀರೇ, ಇಲ್ಲಿಬಾ, ಇಷ್ಟೊಂದು ಹೆದರಬೇಡ. ಈಸಲ ಇಬ್ಬರೂ ಜಗಳವಾಡುವದಿಲ್ಲ. ನಾಫಿಜ್‌ಬೇಯು ಸ್ಥಿತಿ ಏನಾಗಿರುವದೆಂಬುವದನ್ನು ಯೋಚಿಸು. ಇದೆಲ್ಲಾದರು ವ್ಯಾಜ್ಯವಾಡಲು ಸಮಯವೇ ?

ನಾನು ಘಾಬರಿಯಿಂದ ಅಲೀಬೇಯು ಕಡೆ ತಿರುಗಿದೆನು-ಅವರು ಅಲ್ಲಿದ್ದುದು ನನಗೆ ಜ್ಞಾಪಕವೇ ಇರಲಿಲ್ಲ. ನಗುತ್ತಾ ಅವರು ಹೀಗೆಂದರು. "ಯಾರೊಬ್ಬರ ಅಂತರ್ಯವನ್ನಾಗಲೀ ತಿಳಿಯಬೇಕಾದರೆ, ಅಥವಾ ಬೇಯೊಡನೆ ಹೇಳಬೇಕು. ಒಳ್ಳೇ ಆಲೋಚನಾಶಕ್ತಿಯು ಅವರಿಗಿರುವದು. ಆದರೆ ವಿಚಾರವನ್ನು ಸಂಗ್ರಹಿಸಿದ ಮೇಲೆ ತಪ್ಪಭಿಪ್ರಾಯವನ್ನು ಹೂಡುವರು."

ಅಲೀಬೇಯು ಹಾಸ್ಯೋಕ್ತಿಗಳಿಗೆ ಉತ್ತರಕೊಡಲು ಅಶಕ್ತಳಾಗಿದ್ದುದರಿಂದ ಏನೂ ಹೇಳದೆ ನಾನು ಮನೆಯಕಡೆ ಓಡಿಹೋದೆನು. ಬಾಗಿಲಬಳಿ ನಿಂದು ಮತ್ತೆ ಈ ವಿಚಾರವನ್ನು ಪರಾಮರ್ಶಿಸಲಾರಂಭಿಸಿದೆನು. ನನ್ನೀ ಕಷ್ಟಕ್ಕೆ ನಿವಾರಣೋಪಾಯ ವ್ಯಾವುದೂ, ವ್ಯಾಕುಲಭರಿತವಾದೀ ಮನಸ್ಸಿಗೆ ತೋರಲಿಲ್ಲ. ದಾವೂದನನ್ನು ಮದುವೆಯಾಗುವದೊಂದೇ ಉಪಾಯ ತೋರಿತು. ಆದರೆ ಆ ಕೆಲಸವು ನನ್ನ ಮನಸ್ಸಿಗೆ ಅತಿವಿರುದ್ಧವಾಗಿತ್ತು. ನಾನಿನ್ನೂ ಅಲ್ಲಿ ನಿಂತಿರುವಾಗಲೇ ಕೆಲವರು ಸ್ತ್ರೀಯರು, ಖಾನಮ್ ಆಫಂದಿಯವರನ್ನು ನೋಡಲು ಬಂದರು. ಅವರನ್ನು ಕೊಠಡಿಯಲ್ಲಿ ಕುಳ್ಳಿರಿಸಿ ಖಾನಮ್ ಆಫಂದಿಯವರಿಗೆ ತಿಳಿಸಲು, ನಾನು ನಾಫಿಜ್‌ಬೇಯು ಕೊಠಡಿಗೆ ಹೋದೆನು. ನಾಫಿಜ್‌ಬೇ ನಿದ್ರಿಸುತ್ತಿದ್ದನು ಖಾನಮ್ ಆಫಂದಿಯವರು ಒಬ್ಬರೇ ಅವನ ಹತ್ತಿರ ಕುಳಿತಿದ್ದರು. ನಾನು ಬಂದ ಸಮಾಚಾರವನ್ನು ಹೇಳಲು, ಅವರೆದ್ದು ನನ್ನನ್ನು ಅಲ್ಲೇ ಇರಲು ಸನ್ನೆಮಾಡಿದರು.

ಖಾನಮ್ ಆಫಂದಿ -(ಮೆಲ್ಲನೆ) ನೀನು ಇಲ್ಲಿಯೇ ಇರು. ನಾಫಿಜ್ ಕಣ್ಣು ತೆರೆದರೆ ಅವನಿಗೇನಾದರೂ ಬೇಕಾಗಬಹುದು.

ನಾನು ಕುಳಿತುಕೊಂಡೆನು. ನಾಫಿಜ್‌ಬೇಯು ಜೊಳಿಗೆ ಆಡಿದ್ದ ಮಾತುಗಳನ್ನು ಕೇಳಿ ನನ್ನ ಮನಸ್ಸಿಗೆ ಬಹಳ ದುಃಖವುಂಟಾದುದರಿಂದ, ಅವನಿಗೆ ಎಚ್ಚರವಾಗುವದಕ್ಕೆ ಮೊದಲೇ ಮತ್ಯಾರಾದರೂ ಬಂದರೆ ನಾನು ಅಲ್ಲಿಂದ ಹೊರಟು ಹೋಗಬಹುದೆಂದು ಇಷ್ಟಪಡುತ್ತಿದ್ದೆನು. ಒಬ್ಬಳೇ ಕುಳಿತಿರುವಾಗ, ಒಂದು ಸಲ ಅವನ ಕಡೆ ನೋಡಿದೆನು. ಮುಖವು ಕಾಂತಿ

ರಹಿತವಾಗಿ ಹೋಗಿತ್ತು-ಅತಿ ದುರ್ಬಲನಾಗಿ ಕಾಣುತ್ತಿದ್ದನು. ಕಿಟಕಿಯಿಂದ ಬರುವ ಬೆಳಕನ್ನು ತಡೆಯಲು ಹಾಕಿದ್ದ, ನೀಲವರ್ಣದ ಮಖಮಲ್ ಫರದೆಯ ಮುಂದೆ, ಅವನ ನೀಳಾಕಾರವು ನೋಡಲು ವಿಚಿತ್ರವಾಗಿ ಕಾಣುತ್ತಿತ್ತು. ಹಣೆಯ ಚರ್ಮವು ಸುಕ್ಕುಹಿಡಿದು, ಮಗ್ಗುಲುಗಳಲ್ಲಿ ದೊಡ್ಡ ದೊಡ್ಡ ರೇಖೆ ಬಿದ್ದಿದ್ದವು. ಕೆನ್ನೆಗಳು ಒಳಕ್ಕೆಹೋಗಿ, ದವಡೆಯ ಮೂಳೆಗಳು ಹೆಚ್ಚಾಗಿ ಈಚೆಗೆ ಕಾಣುತ್ತಿದ್ದವು. ಸವೆದುಹೋಗಿದ್ದ ಕೈಗಳಲ್ಲಿ ಒಂದು, ತಲೆಯ ಮೇಲಿತ್ತು ; ಒಂದು ಮಂಚದ ಮಗ್ಗುಲಲ್ಲಿ ನೇತಾಡುತ್ತಿತ್ತು. ಅತಿಮೆತ್ತಗೆ ಉಸಿರಾಡುತ್ತಿದ್ದುದರಿಂದ ಕತ್ತಲೆಯಲ್ಲಿ ಎದೆಯು ಮೇಲಕ್ಕೆ ಉಬ್ಬುತ್ತಿದ್ದುದು ಸಹ ಗೊತ್ತಾಗುತ್ತಿರಲಿಲ್ಲ. ಆಗ ಅವನನ್ನು ನೋಡಿದವರ್‍ಯಾರೂ, ಅವನು ಜೀವಿತನಾಗಿರುವನೆಂದು ಹೇಳುವವಕ್ಕಾಗುತ್ತಿರಲಿಲ್ಲ. ನನ್ನ ಕಣ್ಣುಗಳಲ್ಲಿ ನೀರು ತುಂಬಿಹೋಯಿತು. ಮಂಚದ ಹತ್ತಿರ ಹೋಗಿ, ಇಳಿಬಿದ್ದಿರುವ ಅಕೈಯ್ಯನ್ನು ನನ್ನ ಕಣ್ಣೀರಿನಿಂದ ತೋಯಿಸಲೇ ಎಂದು ಮನಸ್ಸಾಯಿತು. ಹಾ ದೇವರೆ, - ನಾಫಿಜ್‌ಬೇಯನ್ನು ನಾನು ಎಷ್ಟು ಪ್ರೀತಿಸುತ್ತಿದ್ದೆನು ! ಅವನಲ್ಲಿ ನಾನು ಎಷ್ಟು ತಲ್ಲೀನಳಾಗಿ ಹೋಗಿದ್ದೆನು ! ಅವನಿಗೆ ಪ್ರಾಪ್ತವಾಗಿದ್ದ ಇಷ್ಟು ಕಷ್ಟಗಳಿಗೂ ನಾನೇ ಕಾರಣಳೆಂದು ಯೋಚಿಸಿಕೊಂಡು, ಮನಸ್ಸು ಛಿದ್ರಛಿದ್ರವಾಗಿಹೋಗುತ್ತಿತ್ತು. ಹೀಗೆ, ಉನ್ಮಾದಾಲೋಚನೆಗಳು ನನ್ನ ಮನಸ್ಸಿನಲ್ಲಿ ತುಂಬುತ್ತಿರುವಾಗ, ನಾಫಿಜ್ ಬೇಯು ಹೊರಳಿ, ಕಣ್ಣು ತೆರೆದನು. ನನ್ನ ಕಡೆ ವಿಸ್ಮಯದಿಂದ ನೋಡತೊಡಗಲು, ನಾನು ಘಾಬರಿಯಿಂದೆದ್ದು ನಿಂತೆನು.

ನಾನು— ನಿಮ್ಮ ತಾಯಿಯು ನನ್ನನ್ನು ಇಲ್ಲಿರಲು ಹೇಳಿದರು. ನಿಮಗಿಷ್ಟವಾದರೆ ಬೇರೆಯಾರನ್ನಾದರೂ ಬರಹೇಳುವೆನು.

ಅವನು ಅದೇ ರೀತಿಯಲ್ಲಿ ನನ್ನನ್ನು ದುರದುರನೆ ನೋಡಹತ್ತಿದನು. ತೋಟದಲ್ಲಿ ನಾನು ಅತ್ತುಬಂದಿದ್ದುದರ ಗುರುತೇನಾದರೂ ಇನ್ನೂ ಮುಖದ ಮೇಲೆ ಇತ್ತೋ ಎಂದು ನನಗೆ ಶಂಕೆಯುಂಟಾಯಿತು. ಕೊಂಚಹೊತ್ತಾದ ಮೇಲೆ ನಾಫಿಜ್‌ಬೇಯು ನಗುತ್ತಾ ಮೆಲ್ಲನೆ ಹೀಗೆಂದನು.

"ನಿನಗೆ ಇಲ್ಲಿರಲು ಯಾವ ತೊಂದರೆಯೂ ಇಲ್ಲದಿದ್ದರೆ, ಮತ್ತಾರನ್ನೂ ಬರಹೇಳುವ ಆವಶ್ಯಕತೆಯಿಲ್ಲ. ದಯೆಮಾಡಿ ಆ ಫರದೆಯನ್ನು ಎಳೆದುಬಿಡು— ನನಗೆ ಕತ್ತಲೆಯಮೇಲೆ ದ್ವೇಷ."

ಅಪ್ಪಣೆಯ ಪ್ರಕಾರ ನಾನು ಕಿಟಕಿಯ ಫರದೆಯನ್ನು ಓರೆಮಾಡಿದೆನು. ಮಂಚದ ಅತ್ತಕಡೆಯ ಕಿಟಕಿಯ ಫರದೆಯನ್ನು ತಳ್ಳಲು, ನಾಫಿಜ್

ಬೇಯು ಮೇಲೆ ಬಾಗಿ ಕೈ ನೀಡಬೇಕಾದ್ದುದರಿಂದ, ನಾನು ಹಾಗೆ ಬಾಗಿದ್ದಾಗ ನಾಫಿಜ್‌ಬೇಯು ನನ್ನನ್ನು ದೃಷ್ಟಿಸಿನೋಡಲಾರಂಭಿಸಿದನು.

ನಾಫಿಜ್‌ಬೇ — (ತಡೆದು ತಡೆದು) ನೀನು ಅತ್ತಿರುವಂತೆ ಕಾಣುತ್ತದೆ. ಅಥನಮ್‌ಬೇಗೆ ನೀನು ತೋಟದಲ್ಲಿ ಸಿಕ್ಕಿದ್ದೆಯೆಂದೂ, ಬೆಳಗ್ಗೆ ನಾನಾಡಿದ ಮಾತುಗಳಿಂದ ನಿನಗೆ ಬಹಳ ದುಃಖವುಂಟಾಯಿತೆಂದು ನೀನು ಅವರೊಡನೆ ಹೇಳಿದೆಯೆಂದೂ, ಅವರು ನನಗೆ ಹೇಳಿದರು. ನಾನು ನಿನ್ನ ಕ್ಷಮಾಪಣೆ ಬೇಡುತ್ತೇನೆ. ನಾನು ಆಗ ನೀತಿ ಬಾಹಿರನಾಗಿದ್ದೆನು.

ನಾಫಿಜ್‌ಬೇಯು, ಒಂದು ವಿಧವಾದ ಬಿಗಿಮಾನದಿಂದ,ತನ್ನ ಕರ್ತವ್ಯವನ್ನು ಮಾಡಿಬಿಡಬೇಕೆನ್ನುವಂತೆ ಈ ಮಾತುಗಳನ್ನು ಹೇಳಿದನು. ನಾನು ಘರದೆಯನ್ನು ಓರೆಮಾಡಿ ಅವನ ಹತ್ತಿರವೇ ನಿಂತಿದ್ದೆನು. ನನ್ನ ಮುಖವು ಲಜ್ಜೆಯಿಂದ ವಿವರ್ಣವಾಗುತ್ತಾ ಬಂತು.

ನಾನು— ನಿಮ್ಮನ್ನು ಕ್ಷಮಿಸಲು ನೀವು ನನಗೇನು ಕೆಟ್ಟದನ್ನು ಮಾಡಿರುವಿರಿ ?

ಇಷ್ಟು ಹೇಳುವವರಲ್ಲಿ ಅವನು ನನ್ನನ್ನು ತಡೆದು “ನೀನು ಸಮಾಧಾನದಿಂದಿರು. ಇನ್ನು ಮೇಲೆ ನನ್ನಿಂದ ನಿನಗಾವ ವಿಧವಾದ ತೊಂದರೆಯೂ ಉಂಟಾಗುವದಿಲ್ಲ. ಈಗ ಯೋಚಿಸಿ ನೋಡಿದ್ದರಲ್ಲಿ, ನಿನ್ನ ಮೇಲೆ ಸಿಟ್ಟುಗೊಳ್ಳಲು ನನಗಾವ ಅಧಿಕಾರವಿಲ್ಲದಿದ್ದರೂ ನಾನು ಕೋಪಗೊಂಡುದು ತಪ್ಪೆಂದು ಕಾಣುತ್ತದೆ. ಸಾಧ್ಯವಾದರೆ ಅದನ್ನೆಲ್ಲಾ ಮರೆತುಬಿಡು-ನನಗೆ ಉಪಕಾರ ಮಾಡಿದಂತಾಗುವದು, ಇನ್ನು ಮೇಲೆ ನಾವಿಬ್ಬರೂ ಒಬ್ಬರೊಬ್ಬರ ಹಿತಚಿಂತಕರಾಗಿರೋಣ,” ಎಂದನು.

ಹೀಗೆಂದು ನನ್ನ ಕಡೆ ತನ್ನ ಕೈನೀಡಿದನು. ನಾನದನ್ನು ಮುದ್ದಿಡಲು ಬೊಗ್ಗಲು, ಸಿಟ್ಟಿನಿಂದ ಹಿಂದಕ್ಕೆಳೆದುಕೊಂಡು ಬಿಟ್ಟನು.

ನಾಫಿಜ್‌ಬೇ — ಅದುಬೇಡ. ನನಗದು ಚೆನ್ನಾಗಿ ಕಾಣಿಸುವದಿಲ್ಲ. ಸ್ತ್ರೀಯರು ಪರಪುರುಷರ ಕೈಗೇಕೆ ಮುತ್ತುಕೊಡಬೇಕೆಂಬುದು ಇದುವರೆವಿಗೆ ನನಗೆ ತಿಳಿಯಲಿಲ್ಲ. ಇದೋ, ಕುಳಿತುಕೊ. ಇಷ್ಟಬಂದರೆ ಕೊಂಚ ಬೀಸಣಿಗೆಯನ್ನು ಬೀಸು. ಬಹಳ ಸೆಖೆಯಾಗಿದೆ.

ಬೀಸಣಿಗೆಯನ್ನು ತೆಗೆದುಕೊಂಡು ನಾನು ಸುಮ್ಮನೆ ಕುಳಿತುಕೊಂಡೆನು. ನಾಫಿಜ್‌ಬೇಯು ಇಷ್ಟು ಬದಲಾಯಿಸಿಬಿಟ್ಟದ್ದುದರಿಂದ, ಅಥನಮ್‌ಬೇಯು ಏನು ತಾನೆ ಹೇಳಿದ್ದಾರೆಂದು ಮನಸ್ಸಿನಲ್ಲೇ ಯೋಚಿಸುತ್ತಿದ್ದೆನು. ನಾಫಿಜ್‌ಬೇಯ ಈ ವಿಧವಾದ ಮಾತಿನಿಂದ ನನಗೆ ಸಂತೋಷವು

ಟಾಯಿತೋ ಅಥವ ವ್ಯಸನವೋ ಎಂಬುದನ್ನು ಖಂಡಿತವಾಗಿ ಹೇಳಲಾರದವ ಳಾಗಿದ್ದೆನು. ನನ್ನನ್ನು ಬೇರೊಬ್ಬನ ಒಡವೆಯೆಂದು ಭಾವಿಸಿದ್ದವನಂತೆ, ಅವನ ಮಾತಿನಲ್ಲಿ ದಾಕ್ಷಿಣ್ಯವೂ, ಅನಾಪ್ತತೆಯೂ ಹೊರಸೂಸುತ್ತಿತ್ತು. ನಾನು ಆಸಮಯದಲ್ಲಿ ಕಟಕಿಗೆ ನೇರವಾಗಿದ್ದ, ಸಮುದ್ರದ ಆಚೆಯದಡದ ಮನೆಗಳನ್ನು ನೋಡುತ್ತಾ ಇದ್ದೆನು. ನಾಫಿಜ್‌ಬೇಯ ದೃಷ್ಟಿಯು ನನ್ನ ಮೇಲೆ ನೆಟ್ಟಿತು.

ನಾಫಿಜ ಬೇ— (ಬೇಸರದಿಂದ) ಈಗ ಬಂದಿರುವ ಹೆಂಗಸರೇನು ಇವತ್ತು ಇಲ್ಲೇ ಊಟಕ್ಕೇಳುವರೋ ?

ನಾನು ಅಲ್ಲಿರುವದು ಅವನಿಗೆ ಅಷ್ಟೇನೂ ಹಿತಕರವಾಗಿಲ್ಲದಂತೆಯೂ ಬೇರೆಯಾರಾದರೋ ಒರಲೆಂದು ಅಪೇಕ್ಷಿಸುವಂತೆಯೂ ಕಂಡಿತು.

ನಾನು— (ಲಜ್ಜೆಗೊಂಡು ನೋಟವನ್ನು ತಗ್ಗಿಸಿ) ವಲಿಯಾಖಾನಮ್ ಳನ್ನು ಕರೆಯಲೇ ? ಅವರು ಬರುವರೆಂದು ತೋರುತ್ತದೆ.

ನಾಫಿಜ್‌ಬೇ— ಬೇಡ, ಆವಳಿಗೆ ತೊಂದರೆಕೊಡಕೂಡದು. ಬೆಳಗ್ಗೆಯೆಲ್ಲಾ ಅವಳು ಇಲ್ಲೇ ಇದ್ದಳು. ಸದಾ ಇಲ್ಲಿಯೇ ಇದ್ದುಬಿಟ್ಟರೆ ಬೇಜಾರಾಗುವದು. ಅವಳು ಅಲ್ಲಿಯೇ ಇರಲಿ. ಆದರೆ ಅಲಿಬೇಯವರು ಎಲ್ಲಿರುವರೋ ತಿಳಿಯದು.

ನಾನು— ಸ್ವಲ್ಪಹೊತ್ತಿನ ಕೆಳಗೆ ಅವರು ದೋಣಿಯಲ್ಲಿ ಹೋಗುತ್ತಿದ್ದುದನ್ನು ನಾನು ನೋಡಿದೆನು. ಆದರೆ ಅಥಮ್‌ಬೇಯವರು ಮುಹಡಿಯ ಮೇಲಿರ ಬಹುದೆಂದು ತೋರುತ್ತದೆ.

ನಾಫಿಜ್‌ಬೇ— ಅವರಿಗೂ ತೊಂದರೆ ಕೊಡಬಾರದು. ದೇವರದಯದಿಂದ ಅವರು ಅಲ್ಲೇ ಇರಲಿ. ಅವರು ಇವತ್ತು ಮಾಡಿರುವ ಉಪಕಾರವು ಒಂದು ತಿಂಗಳವರೆಗೂ ಸಾಕು. ನನ್ನ ಮೇಲೆ ಇನ್ನೂ ಏನಾದರೂ ಚಾಡಿ ಹೇಳಿ ದ್ದರೋ ? ಅದರ ಬಾಕಿ ಏನಾದರೂ ಇದೆಯೋ ?

ನಾನು ಬಹಳ ಸಿಟ್ಟಿನಿಂದ ನಾಫಿಜ ಬೇಯ ಕಡೆಗೆ ನೋಡಿದೆನು. ನಾನು ಬೇಕೆಂದು ಅಥಮ್‌ಬೇಯೊಡನೆ, ಅವರು ಹೋಗಿ ಅವನನ್ನು ಕೇಳ ಲೆಂದು, ಚಾಡಿ ಹೇಳಿರುವೆನೆಂದು ಅವನು ತಿಳಿದಿದ್ದನು. ನಾಫಿಜ್‌ಬೇಯು ಒಂದು ಸಲ ನನ್ನ ಮೇಲೆ ನೋಡಿ ಕಿಲಕಿಲಾಯೆಂದು ನಕ್ಕನು.

ನಾಫಿಜ್‌ಬೇ— ಸಾಕು ಹಾಜಿರೆ, ನನಗೇನು ಬಂತೋ ಗೊತ್ತಿಲ್ಲ. ಮತ್ತೆ ನಿನ್ನ ಕ್ಷಮಾಪಣೆ ಬೇಡಿಕೊಳ್ಳುತ್ತೇನೆ. ಐದು ನಿಮಿಷಗಳೂ ನಾವಿಬ್ಬರು ಒಟ್ಟಿಗಿರುವುದಕ್ಕಾಗುವದಿಲ್ಲ-ನಾನೇನಾದರೊಂದು ದುಷ್ಕೃತ್ಯವನ್ನು ಮಾಡಿ

ಕುಳಿತುಕೊಳ್ಳುತ್ತೇನೆ. ಒಳ್ಳೇದು ಅಲ್ಲಿಟ್ಟಿರುವ ಪುಸ್ತಕವನ್ನೆತ್ತಿಕೊಡು. ಅದನ್ನೋದುತ್ತಾ ಸುಮ್ಮನೆ ಕುಳಿತುಕೊಳ್ಳುವೆನು. ನಿನ್ನನ್ನು ಹಿಂಸಿಸುವುದಿಲ್ಲ.

ನಾನು ಮರುಮಾತನಾಡದೆ ಪುಸ್ತಕವನ್ನು ಅವನಿಗೆತ್ತಿಕೊಟ್ಟೆನು. ಮಹೀದಾಖಾನಮ್ ಳು ಮಾಡುತ್ತಿದ್ದ ಕಸೂತಿಯನ್ನು ಕೈಗೆ ತೆಗೆದುಕೊಂಡು, ಹದಿನೈದು ನಿಮಿಷಗಳು ಕುಳಿತಿರುವಲ್ಲಿ, ನಾಫಿಜ್ ಬೇಯು ಪುಸ್ತಕವನ್ನು ಇದ್ದಕ್ಕಿದ್ದ ಹಾಗೆ ದೂರ ಎಸೆದುಬಿಟ್ಟನು.

ನಾಫಿಜ್ ಬೇ—(ಘಾಬರಿಗೊಳ್ಳುತ್ತಾ) ನನ್ನಿಂದ ಓದಲಾಗುವುದಿಲ್ಲ. ತಲೆ ನೋಯಲಾರಂಭವಾಗುತ್ತದೆ. ಕೆಳಗೆ ಯಾರ್ಯಾರಿದ್ದಾರೆ ?

ನಾನು—(ಕೆಲಸದಿಂದ ಕಣ್ಣೆತ್ತದೆ) ಯೂಸಫ್ ಪಾಷಾರವರ ಪತ್ನಿಯೂ ಪುತ್ರಿಯೂ ಇದ್ದಾರೆ.

ನಾಫಿಜ್ ಬೇ—ಅವರು ಬಂದಂತು ಬಹಳ ಕಾಲವಾಯಿತು ಅವರ ತಲೆ ಯಲ್ಲಿರುವ ಮಾತೆಲ್ಲಾ ಇಷ್ಟು ಹೊತ್ತಿಗೆ ಖರ್ಚಾಗಿರಬಹುದೆಂದು ಕಾಣುತ್ತದೆ.

ನಾನು—ಮತ್ತಿನ್ನಾರೋ ಬಂದಿರುವರು. ಈಗ ತಾನೆ ಒಂದು ಡೋಲಿಯು ಬರುತ್ತಿದ್ದುದನ್ನು ಕಂಡೆನು.

ನಾಫಿಜ್ ಬೇ—ಇವತ್ತು ಎಂದೂ ಇಲ್ಲದಂತೆ ಜನರು ಬರುತ್ತಿರುವರು. ಒಳ್ಳೇದು ಇದರ ಕಾರಣವೇನು ?

ನಾನು—ತಮ್ಮನ್ನು ವಿಚಾರಿಸಲು ಬರುತ್ತಿರಬಹುದು.

ನಾಫಿಜ್ ಬೇ—(ಆಕಳಿಕೆಯನ್ನು ತಡೆಯುತ್ತಾ) ಅವರದು ದೊಡ್ಡ ಉಪ ಕಾರ! ಅವರಲ್ಲೂ, ಅವರಲ್ಲಿ ಒಬ್ಬರಾದರೂ ಇದುವರೆವಿಗೆ ನನ್ನನ್ನು ನೋಡಿ ಸಹ ಇಲ್ಲದಿರುವಾಗ !

ನಾನು—ಹಾಗೆ ಹೇಳುವ ಬದಲು, ನೀವು ಅವರನ್ನು ನೋಡಿಲ್ಲವೆಂದು ಹೇಳಿರಿ. ಅವರೆಲ್ಲರೂ ನಿಮ್ಮನ್ನು ಕಿಟಕಿಯ ಮೂಲಕ ನೋಡಿ ಪರಿಚಯ ಮಾಡಿಕೊಂಡಿರುವರು.

ನಾಫಿಜ್ ಬೇ—ಸರಿ, ಆದರೆ ಪರಿಚಯವಿರಬೇಕಾದ ರೀತಿಯಲ್ಲಿಲ್ಲ. ಇಷ್ಟು ಬಿಸಿಲಿನಲ್ಲೂ, ತಾಪದಲ್ಲೂ ತಮ್ಮ ಮನೆಯಿಂದ ಹೊರಟು ಬರುವುದಕ್ಕೆ, ಇಷ್ಟು ಪರಿಚಯ ಸಾಲದು.

ನಾನು—ಇರಬಹುದು.

ಆಮೇಲೆ ನಾವಿಬ್ಬರೂ ಮತ್ತೆ ಸುಮ್ಮನಾಗಿ ಹೋದೆವು. ಬಲಾತ್ಕಾ ರದ ಸಂಭಾಷಣೆಯ ಫಲವು ಇದೇ ಆಗಿರುವುದು, ಮಾತನಾಡುವವರಿಬ್ಬ

ರಿಗೂ ತಮ್ಮ ಮಾತಿನಲ್ಲಿ ಸ್ವಾರಸ್ಯವಿರುವುದಿಲ್ಲ. ನಾಫಿಜ್‌ಬೇಗೂ ಇದು ತಿಳಿದಿದ್ದಿರಬಹುದು. ಅವನು ಕೊಂಚ ಹೊತ್ತಾದ ಮೇಲೆ ಎದ್ದು ಕೂತು, ಕೈ ಮುಂದಕ್ಕೆ ನೀಡಿ ಗಡಿಯಾರವನ್ನು ತೆಗೆದುಕೊಂಡನು.

ನಾಫಿಜ್‌ಬೇ—ಇನ್ನೂ ನಾಲ್ಕು ಘಂಟೆ. ಕಡೇಪಕ್ಷ ಐದುವರೆಯಾದರೂ ಆಗಿರಬಹುದೆಂದು ತಿಳಿದಿದ್ದೆನು. ಯಾರಿಗಾದರೂ ಯಾವ ಪದಾರ್ಥದಲ್ಲಾದರೂ ಬೇಸರ ಹುಟ್ಟದಿದ್ದರೆ, ಮಿದುಳಿನ ಜ್ವರ ಬರಿಸಿಕೊಂಡು ಪರೀಕ್ಷಿಸಿ ನೋಡಲಿ. ಮನಸ್ಸನ್ನು ಬೇಚಾರು ಹಿಡಿಸುವುದರಲ್ಲಿ ಇದನ್ನು ಬಿಟ್ಟರಿಲ್ಲ. ಇನ್ನೆಷ್ಟು ದಿನಗಳು ನಾನು ಹೀಗೆ ಮರದ ತುಂಡಿನಂತೆ ಬಿದ್ದಿರಬೇಕೋ ಕಾಣೆನು. ಪಾಷಾಸಾಹೇಬರು ಎಲ್ಲಾದರೂ ಹೋಗಿರುವರೇ?

ನಾನು—(ಎದ್ದು ನಿಂತು) ತಿಳಿಯದು ಹೋಗಿ ನೋಡಿಬರಲೇ?

ನಾಫಿಜ್‌ಬೇ—(ಹಿಂದೆ ಮುಂದೆ ಯೋಚಿಸಿ) ಹೋಗಬೇಡ. ನನ್ನ ಕಾಲ ಯಾಪನೆಗೂ, ಮನರಂಜನೆಗೂ ತಂದೆಯವರನ್ನು ಕರೆಯುವುದು, ಪುತ್ರ ಧರ್ಮಕ್ಕೆ ವಿರುದ್ಧವೆಂದು ಭಾವಿಸಿದ್ದೇನೆ. ಅಲ್ಲವೆ? ಏನು?

ನಾನು—ತಾವು ಹೇಳುವುದು ಸರಿ. ಆದರೆ, ಅವರೇ ಬರುವಂಥಹುದೇನಾದರೊಂದು ವಿಷಯವನ್ನು ಕೇಳಿಹೇಳಿ ಕಳುಹಿಸಿರಿ. ಕಾರಣವೊಂದಿದ್ದರೆ ಸಾಕು. ಬಂದ ಮೇಲೆ ಅವರೇ ಕುಳಿತುಕೊಳ್ಳುವರು.

ನಾಫಿಜ್‌ಬೇ—ಆದರೆ ಅವರನ್ನು ಕೇಳಿ ತಾನೆ ಏನಾಗುವದೆಂಬುದೊಂದೇ ಸಂಶಯ.

ಹೀಗೆಂದು ಅವನು ನನ್ನ ಕಡೆ ನೋಡಿದನು. ಆಮೇಲೆ ಕೊಂಚ ಹೊತ್ತು ಇಬ್ಬರೂ ಸುಮ್ಮನಾದೆವು. ಎಷ್ಟು ಅರ್ಥವಿಲ್ಲದ ಮಾತುಗಳನ್ನಾಡುತ್ತಿರುವೆವೆಂಬುದು ಅವನಿಗೆ ಗೊತ್ತಾದಾಗ ನಗಲಾರಂಭಿಸಿದನು.

ನಾಫಿಜ್‌ಬೇ—(ಇನ್ನೂ ನಗುತ್ತಲೇ) ನಾವಿಬ್ಬರೂ ಒಬ್ಬರಿಂದೊಬ್ಬರು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವುದೂ, ಒಂದು ನಿಮಿಷವೂ ಒಟ್ಟಗಿರಬಾರದೆಂದಪೇಕ್ಷಿಸುತ್ತಿರುವದೂ, ನೋಡಲು ಆಶ್ಚರ್ಯಕರವಾಗಿದೆ. ಈ ಅಪ್ರಯೋಜಕವಾದ ಕಾರ್ಯವನ್ನು ಬಿಟ್ಟು, ನಾವಿಬ್ಬರೂ ಸ್ನೇಹಿತರಾಗದಿರುವುದಕ್ಕೆ ಕಾರಣವೇನು. ಇದು ಸಾಕು. ಇನ್ನು ಕುಳಿತುಕೋ. ಕೊಂಚ ಮಾತನಾಡೋಣ.

ನಾನು—(ನಾಚಿಕೆಗೊಂಡು) ಏನು ಮಾತು?

ನಾಫಿಜ್‌ಬೇ—ನನಗೇ ಗೊತ್ತಿಲ್ಲ. ಹಾಜಿರೇ, ಏತಕ್ಕೆ ನನ್ನನ್ನು ನೋಡಿ ನಗುತ್ತಿರುವೆ! ನಿಜವಾಗಿಯೂ ನಾನೇನೋ ಅದಕ್ಕೇ ಅರ್ಹನು. ಅದರೆ

ಯಾರಿಗಾದರೂ ಮನಸ್ಸಿನಲ್ಲಿ ಹೊರಗೆ ಆಡಲು ಇಷ್ಟವಿಲ್ಲದಂಥಹ ವಿಷಯ ವಿದ್ದರೆ, ಅವರಿಗೆ ಬೇರೆ ವಿಚಾರ ಆಡಲು ಕಷ್ಟವಾಗುವುದು.

ನಾನು—(ನಕ್ಕು) ನನ್ನಲ್ಲಾದರೋ ಕಷ್ಟವಾಗುವಂಥಾ ವಿಷಯವ್ಯಾವುದೂ ಇಲ್ಲ. ತಾವು ಅವುದೋ ಒಂದು ವಿಚಾರವನ್ನು ಮಾತ್ರ ಹೊರಗೆ ಅಡ ಬಾರದೆಂದು ನಿಷ್ಕರ್ಷೆ ಮಾಡಿ ಕೊಂಡಿರುವಿರಾದುದರಿಂದ ಮತ್ತಾವುದಾದರೂ ಬೇರೆ ವಿಚಾರವನ್ನು ಸುಲಭವಾಗಿ ಆಡಬಹುದಲ್ಲ.

ನಾಫೀಜ್‌ಬೇ—ಒಳ್ಳೇದು. ಆದರೆ ನನ್ನರ್ಥವಿದಲ್ಲ. ನನ್ನ ಮನೋಗತವನ್ನು ಅಪಶಬ್ದಗಳಲ್ಲಿ ಸೂಚಿಸಿದೆನು. ನನ್ನರ್ಥವಾದರೋ ಇದಾಗಿತ್ತು. ಏನೆಂದರೆ:- ನಿನ್ನನ್ನು ಒಂದು ವಿಚಾರ ಪ್ರಶ್ನಿಸಲು ಮನಸ್ಸುಂಟಾಗುತ್ತದೆ. ಆದರೆ ಕೆಲವು ಕಾರಣಗಳಿಂದ ಆ ಪ್ರಶ್ನೆಯನ್ನು ಕೇಳಲಾರೆನು. ಅದುವರಿಂದ ಬೇರೆ ಸಂಭಾಷಣೆಯು ಸರಿಹೋಗುವದಿಲ್ಲವೆಂದು.

ನನಗೆ, ಏನುತ್ತರ ಕೊಡಲೂ ಭಯವಾಗಿ, ಸುಮ್ಮನಾಗಿ ಹೋದೆನು. ನಮ್ಮಿಬ್ಬರ ಮಾತುಕಥೆ ಇನ್ನು ಮುಂದುವರಿಯುವದರೊಳಗಾಗಿ ಖಾನನ್ ಅಫಂದಿಯವರು ಬಂದು ಬಿಟ್ಟರೆ ಸಾಕೆಂದು ಇಚ್ಛಿಸಲಾರಂಭಿಸಿದೆನು.

ನಾಫೀಜ್‌ಬೇ—(ಅಸಮಾಧಾನದಿಂದ)ಆಯಿತು. ಇನ್ನು ನಾಚಲು ಪ್ರಾರಂಭ ಮಾಡಿದೆಯೋ? ಒಳ್ಳೇದು-ನಾನೇನನ್ನೂ ಕೇಳುವುದಿಲ್ಲ. ನಾನಂತು ಅಥರ್‌ಬೇಯು ಆಗಲಾರೆನು. ಅವರೊಡನಾದರೆ ನಿನ್ನ ಅಂತರ್ಯವೆಲ್ಲಾ ತಿಳುಹುವೆ. ವಾಸ್ತವಿಕವಾಗಿ ಅವರಂತೆ ರಹಸ್ಯ ಸಂರಕ್ಷಣೆಯು ಮತ್ತಾರಿಂ ದಲೂ ಸಾಧ್ಯವಿಲ್ಲ. ಆದರೆ ಮತ್ತೆಲ್ಲಾದರೂ ನನ್ನ ಮೇಲೆ ಕೋಪಗೊಂಡು, ಅವರೊಡನೆ ಚಾಡಿ ಹೇಳಬಾರದೆಂಬುದು ಜ್ಞಾಪಕವಿರಲಿ. ಅವರು ಪುನಃ ನನ್ನನ್ನು ಶಿಕ್ಷಿಸಿದರೆ ದುರ್ಬಲನಾದ ನನಗೆ ಸಹಿಸಿಕೊಳ್ಳಲು ಶಕ್ತಿಯಿಲ್ಲ.

ನಾನು—(ಉದ್ರೇಕದಿಂದ) ತಾವು ಏಕೆ ಮತ್ತೆಮತ್ತೆ ನನ್ನನ್ನು ಈ ವಿಷಯ ಹಂಗಿಸುತ್ತೀರಿ. ತಾವು ಈ ರೀತಿ ಅನ್ಯಾಯಕ್ಕೆ ಆಸ್ಪದಕೊಡುವಿರೆಂದು ನಾನು ಯಾವಾಗಲೂ ತಿಳಿದಿರಲಿಲ್ಲ. ಅಥರ್‌ಬೇಯವರು ನನ್ನನ್ನು ಕೇಳಿ, ತಮ್ಮ ಬಳಿ ಬಂದರೆಂದು ಯೋಚಿಸಿರುವಿರಾ.

ನಾಫೀಜ್‌ಬೇ—(ಅತಿ ನಿಕೃಷ್ಟತೆಯಿಂದ ನೋಡುತ್ತಾ) ಅಲ್ಲದಿದ್ದರೆ ಅವರ ಬಳಿಗೆ ಏಕೆ ಹೋಗಿದ್ದೆ? ಅವರೊಡನೆ, ನನ್ನ ಹಿಂಸೆಗಾಗಿ, ನಮ್ಮ ಮನೆಯ ಲ್ಲಿರಲು ಇಷ್ಟವಿಲ್ಲವೆಂದೇಕೆ ಹೇಳಿದೆ? ಅಯೂಬ್‌ಸುಲ್ತಾನದಲ್ಲಿ ನೀನು ದಾವೂದನೊಡನೆ ಮಾತನಾಡುತ್ತಿದ್ದುದನ್ನು ನೋಡಿದಂದಿನಿಂದ ನಾನು ನಿನ್ನನ್ನು ಸರಿಯಾಗಿ ಕಾಣುತ್ತಿಲ್ಲವೆಂತಲೂ ಹೇಳಿದೆಯಲ್ಲವೇ?

ನಾನಾಡಿದ ಮಾತುಗಳಿಗೆ ಈ ರೀತಿ ಅರ್ಥ ಮಾಡಲ್ಪಟ್ಟದ್ದನ್ನು ಕೇಳಿ ನನಗೆ ಅತ್ಯಂತ ಆಶ್ಚರ್ಯವುಂಟಾಗಿ, ನಾಲಗೆಯಿಂದ ಮಾತು ಹೊರಡದೆ, ಧ್ವನಿಯು ನಡುಗಲಾರಂಭಿಸಿತು. ದಿಗ್ಭ್ರಮೆಯಿಂದ ಈ ರೀತಿ ಕೇಳಿದೆನು;

"ಅಥರ್ ಬೇಯುವರು, ನಾನು ಈ ಶಬ್ದಗಳನ್ನು ಪಯೋಗಿಸಿದೆನೆಂದು ಹೇಳಿದರೇ ?"

ನಾಫಿಜ್ ಬೇ—(ಮೊದಲಿನಂತೆಯೇ) ಹಾಗಾದರೆ ಅವರು ಹೇಳಿದುವನ್ನು ಇಲ್ಲವೆನ್ನುವಿಯಾ? ನೀನು ದಾವೂದನನ್ನು ಪ್ರೀತಿಸುತ್ತಿ ಎಂದು ಅವನೊಡನೆ ಹೇಳಲಿಲ್ಲವೆನ್ನುವಿಯಾ? ಈ ವಿಚಾರವಾಗಿ ಅನೇಕ ಮಾತುಗಳು ನಮ್ಮಿಬ್ಬರಿಗೂ ನಡೆದು ಹೋದವು. ಇನ್ನು ಆಥರ್ ಬೇಯೊಡನೆ ಹೋಗಿ ದೂರ ಬೇಕಾದಂಥಾ ಮತ್ತಾವ ವಿಷಯವೂ ನನ್ನಿಂದ ನಡೆಯದಂತೆ ನೋಡಿಕೊಳ್ಳುತ್ತೇನೆ. ಒಂದು ವೇಳೆ ನನ್ನ ದಾವುದಾದರೊಂದು ಚೇಷ್ಟೆಯಿಂದ ನಿನಗೆ ಅಸಮಾಧಾನವುಂಟಾದರೆ, ದಯವಿಟ್ಟು, ಯಾರಿಗೆ ನನ್ನ ಮೇಲೆ ಸರ್ವಾಧಿಕಾರವಿರುವುದೋ, ಯಾರ ಆಜ್ಞಾಧಾರಕನಾಗಿ ನಾನಿರುವೆನೋ, ಅಂಥಾ ಮನುಷ್ಯರೊಬ್ಬರೊಡನೆಯೇ ನನ್ನನ್ನು ದೂರಬೇಕೆಂದು ನಿನ್ನನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಎಲ್ಲ ವಿಚಾರಕ್ಕೂ ಒಂದು ಕಟ್ಟು ಇರುವದು. ಅಣ್ಣನ ಸದುಪದೇಶವು, ಸರಿಯಾದ ರೀತಿಯಲ್ಲಿ, ಸರಿಯಾದ ಸ್ಥಾನದಲ್ಲಿದ್ದರೆ ಸರಿಯೆನಿಸಿಕೊಳ್ಳುವದು. ಆದರದು ರೀತಿಯನ್ನತಿಕ್ರಮಿಸಿದರೆ ಕಠಿಣವಾಗಲೂ ಬಹುದು. ಆದುದರಿಂದ ಯಾರು ನನ್ನ ಅಚಾತುರ್ಯಗಳನ್ನು ನ್ಯಾಯ ದೃಷ್ಟಿಯಿಂದ ವಿಚಾರಿಸಿ, ದಾಕ್ಷಿಣ್ಯಕ್ಕೆಡೆಗೊಡದಿರುವರೋ ಯಾರಿಗೆ ನನ್ನೀ ವಿಚಾರದಲ್ಲಿ ಬೇರೆ ಸಂಬಂಧವಿಲ್ಲವೋ, ಅಂಥವರು ನನ್ನನ್ನು ಶಿಕ್ಷಿಸಿದರೆ ಉತ್ತಮವು. ಅಥರ್ ಬೇಯುವರು ಇಂದು ನನ್ನನ್ನು ಆಡಿದ ರೀತಿಯಲ್ಲೇ ತಂದೆಯವರು ಮಾತ್ರ ನನ್ನನ್ನು ನೀಚನೆಂದು ಖಂಡಿಸಿದ್ದರೆ, ನಾನು ನ್ಯಾಯವೆಂದು ಒಪ್ಪಿಕೊಳ್ಳುತ್ತಿದ್ದೆನು. ಅವರು ಹೇಳುವದು ಸ್ವಾರ್ಥಕ್ಕಲ್ಲವೆಂದೂ ತಿಳಿದು ಕೊಳ್ಳುತ್ತಿದ್ದೆನು.

ಕೋಪದಿಂದ ಹೊಳೆಯುವ ಕಣ್ಣುಗಳಿಂದಕೂಡಿ ನಾನು ಹೀಗೆ ಜವಾಬು ಕೊಟ್ಟೆನು:-

"ಯಾವ ಸಂಗತಿಯನ್ನು ಮನೆಯ ಜನರೆಲ್ಲರೂ, ಯಾರೂ ಹೇಳಿ ಕೇಳದಿದ್ದರೂ ತಿಳಿದುಕೊಂಡಿರುವರೋ ಅಂಥಹುದನ್ನು ಅಥರ್ ಬೇಯುವರು, ಹೇಳದಿದ್ದ ಮಾತ್ರಕ್ಕೆ ತಿಳಿದು ಕೊಳ್ಳಲಾರದವರಾಗುತ್ತಿದ್ದರೆ? ಅಯೂಬ್ ಸುಲ್ತಾನನ ಘಟನೆಯ ತರುವಾಯ ನಿನ್ನ ನನ್ನಲ್ಲಿದ್ದ ವರ್ತನೆಯನ್ನು

ಅರಿತುಕೊಳ್ಳಲು ಹೆಚ್ಚು ಆಲೋಚನಾಶಕ್ತಿಯೂ ಹೆಚ್ಚು ಬುದ್ಧಿಪ್ರಯವೂ ಏನೂ ಬೇಕಿರಲಿಲ್ಲ.

ನಾಫಿಜ್‌ಬೇ— (ಕೋಪದಿಂದ) ಅಲ್ಲದೆ, ನನಗೇನು ಗೊತ್ತು ಇದು! ಈಗ ಒಂದು ತಿಂಗಳಿಗೆ ಮೊದಲು, ನನ್ನನ್ನು ಕಂಡರೆ ನಿನಗಾಗುವದಿಲ್ಲನೆಂಬ ಸಂದೇಹ ಸಹ ನನಗಿರಲಿಲ್ಲ. ನನ್ನಂತೆಯೇ ಇತರರೂ ತಿಳಿದಿರುವರೆಂದು ಭಾವಿಸಿದ್ದೆನು.

ನಾನು ಮುಖವನ್ನು ಕೈಗಳಿಂದ ಮುಚ್ಚಿಕೊಂಡೇ ಅಳಲಾರಂಭಿಸಿದೆನು. ಕೊನೆಗೆ ಬಿಕ್ಕುಬಂದು ತಡೆಯಲಾರದಂತಾಯಿತು. ನಾಫಿಜ್‌ಬೇಯ ಒಂದೊಂದು ಮಾತೂ ಬಾಣದಂತೆ ಚುಚ್ಚುತ್ತಿತ್ತು. ಕುಳಿತುಕೊಂಡು ಕೊಂಚ ಸಂತೈಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗದೆ ಅಳುತ್ತಲೇ ಇದ್ದೆನು. ನಾನು ಅಳುತ್ತಿರುವದನ್ನು ನೋಡಿ ನಾಫಿಜ್‌ಬೇಯು ಸಂತೋಷ ಪಡುತ್ತಿರುವದನ್ನು ಕಂಡು, ನನಗೆ ಕೋಪವೂ ಜತೆಗೆ ಉಂಟಾಯಿತು.

ಯಾರೋ ತಮ್ಮ ಕೈಯನ್ನು ನನ್ನ ಕೈಗಳ ಮೇಲೆ ಹಾಕಿ ಬಲಾತ್ಕಾರದಿಂದ ಮುಖದಿಂದ ಕಿತ್ತುಹಾಕಿದರು. ನಾನು ಕಣ್ಣುಬಿಟ್ಟು ನೋಡಲು ನಾಫಿಜ್‌ಬೇಯು ನನ್ನ ಹತ್ತಿರ ನಿಂತಿದ್ದಾನೆ-ಮುಖವು ಬಿಳಿಚಿಕೊಂಡು ಹೋಗಿದೆ- ನನ್ನ ಕೈಯನ್ನು ಹಿಡಿದುಕೊಂಡಿದ್ದ ಕೈಯ್ಯಿ ಕೆಂಡದಂತೆ ಸುಡುತ್ತಿದೆ! ನನ್ನ ಎದೆಯಲ್ಲಿ ಚಳಿಯಾದಂತಾಯಿತು - ಅನಾಹುತವಾಗಿ ಹೋಯಿತು! ಅಘನಾಬೇಯೂ, ನಾನೂ, ಮತ್ತೆ ಅವನಿಗೆ ಜ್ವರಬರಲು ಕಾರಣರಾದೆವು.

ನಾನು— (ಬಿಕ್ಕನ್ನು ತಡೆಯುತ್ತಾ) ಹೋಗಿ ಮಲಗಿಕೊಳ್ಳಿ. ಮತ್ತೆ ನಿಮ್ಮ ಸ್ಥಿತಿಯು ಕೆಟ್ಟಾದರೆ, ನನ್ನನ್ನು ಕಾರಣಳೆಂದು ಹೇಳುವಿರಿ.

ನಾಫಿಜ್‌ಬೇ— (ನಗುತ್ತಾ) ಇಲ್ಲ. ಹಾಗೆಂದಿಗೂ ಹೇಳುವದಿಲ್ಲ. ನನ್ನದೇ ತಪ್ಪೆಂದೂ, ನಾನು ಮಾಡಿದುದಕ್ಕೆ ನನಗೆ ತಕ್ಕ ಶಿಕ್ಷೆಯಾಯಿತೆಂದೂ ಹೇಳುವೆನು. ಮುದ್ದು ಹಾಜಿರೇ, ಇಲ್ಲಿಬಾ, ಅಳಬೇಡ. ನಾನು ಕೇವಲ ಬುದ್ಧಿಹೀನತೆಯಿಂದ ನಿನ್ನೊಡನೆ ವರ್ತಿಸಿದೆನು.

ನಾನು— ನಾನು ಮತ್ತೆ ಅವನಿಗೆ ಮಲಗಲು ಹೇಳಲು, ಹೀಗೆಂದನು :-

"ಒಳ್ಳೇದು, ನೀನು ಹೇಳಿದ ಹಾಗೆಯೇ ಕೇಳುವೆನು ; ಆದರೆ ನೀನು ಹೋಗಬೇಡ."

ನಾನಲ್ಲಿದ್ದರೆ ಅವನು ಮಾತನಾಡದಿರನೆಂದು ತಿಳಿದು, ನಾನು ಹೊರ

ಹಲುದ್ವ್ಯಕ್ತಳಾದುದನ್ನು ಕಂಡು ಅವನು ಹೀಗೆ ಹೇಳಿದನು. ಇನ್ನೂ ನನ್ನ ಕೈಯ್ಯನ್ನು ಬಿಡದೆ ಕೌಚಿನ ಕಡೆ ಎಳೆದುಕೊಂಡುಹೋಗಿ, ಕುಳಿತುಕೊಳ್ಳಲು ಅತಿನಯದಿಂದ ಬಲಾತ್ಕರಿಸಿ ಮತ್ತೊಂದು ಕೈಯ್ಯಿಂದ ನನ್ನ ತಲೆಯನ್ನು ಸವರಲಾರಂಭಿಸಿದನು. ಅವನ ಕೈಯ್ಯಿ ಕಂಪಿಸುತ್ತಿತ್ತು, ಮುಖವು ಬಹಳ ಬಿಳಿಚಿಕೊಂಡು ಹೋಗಿತ್ತು.

ನಾನು(ವ್ಯಸನದಿಂದಲೂ,ಭಯದಿಂದಲೂ ಕೂಡಿ)ನಿಮ್ಮ ಪ್ರಜ್ಞೆಯೇನಾದರೂ ತಪ್ಪುತ್ತಿಲ್ಲವಲ್ಲಾ ? ದೇವರಾಣೆ, ಕೊಂಚ ವಿಶ್ರಮಿಸಿಕೊಳ್ಳಿ. ನಿಮ್ಮ ಆರೋಗ್ಯವು ಮತ್ತೆ ಹಾಳಾಗುತ್ತಿರುವಂತಿದೆ. ಸರಾಸರಿ ನನ್ನದೇ ತಪ್ಪಾಗಿರುವದು.

ನಾಫಿಜ್‌ಬೇ— ಎಂದಿಗೂ ಇಲ್ಲ- ನೀನೇನ ಮಾಡಿದೆ ? ದೇವರದಯದಿಂದ ಈಗ ನಾನು ಅಸ್ವಸ್ಥನಾಗಿಲ್ಲ. ದುರ್ಬಲತೆ ಮಾತ್ರ ಹೆಚ್ಚಾಗಿರುವದು. ಅಷ್ಟು ಹೊತ್ತು ನಿಂತಿದ್ದುದರ ಕಾರಣ ಶಕ್ತಿಯು ಕುಂದಿಹೋಯಿತು. ಹಾಜಿರೆ, ಸತ್ಯವನ್ನು ಹೇಳು. ನೀನು ನಿಜವಾಗಿಯೂ ಅಥಮ್‌ಬೇಯೊಡನೆ ದಾವೂದನನ್ನು ಪ್ರೀತಿಸುತ್ತೇನೆಂದು ಹೇಳಿದೆಯಾ ?

ಆ ಸಮಯದಲ್ಲಿ ನನಗೆ ಮುಂದಿನ ಹಿತಾಹಿತವ್ಯಾವುದರ ಯೋಚನೆಯೂ ಇಲ್ಲದೆ, ನಾಫಿಜ್‌ಬೇಯು ಮತ್ತಿನ್ನೆಲ್ಲಿ ಖಾಯಿಲೆ ಬೀಳುವನೋ ಎಂಬ ಒಂದೇ ಚಿಂತೆಯು ತುಂಬಿತ್ತು.

ನಾನು— (ಜೋರಿನಿಂದ) ಇಲ್ಲ, ನಾನೆಂದಿಗೂ ಹೇಳಲಿಲ್ಲ. ಅಥಮ್‌ಬೇಯುವರು ಹಾಗೆಂದು ಹೇಳಿದರೆ ?

ನಾಫಿಜ್‌ಬೇ— ಹಾಗೇನೂ ಹೇಳಲಿಲ್ಲ. ಆದರೆ ಅವರ ಮಾತಿನಿಂದ ಹಾಗೆ ಕಂಡು ಬಂದಿತು. (ಸ್ವಲ್ಪಹೊತ್ತಾದ ಮೇಲೆ, ತನ್ನ ಕೈಯ್ಯಿಂದ ನನ್ನ ಕೈಯನ್ನು ಪ್ರೀತಿಯಿಂದ ತಟ್ಟುತ್ತಾ) ಹಾಗಾದರದು ನಿಜವಲ್ಲವಲ್ಲಾ ?

ನಾನು ಸುಮ್ಮನಿದ್ದೆನು. ಅವನು ಮತ್ತೆ ಇದೇ ಪ್ರಶ್ನೆಹಾಕಲು ಇಷ್ಟಪಡುತ್ತಿದ್ದವನು, ಏನೋ ಆಲೋಚಿಸಿಕೊಂಡು ತಕ್ಷಣವೇ ನನ್ನ ಕೈ ಬಿಟ್ಟುಬಿಟ್ಟು, ಬೇರೆಕಡೆ ಮುಖತಿರುಗಿಸಿ ಕೊಂಡುಬಿಟ್ಟನು.

ನಾಫಿಜ್‌ಬೇ— ಹೋಗು ಆಕುರ್ಚಿಯಮೇಲೆ ಕುಳಿತುಕೋ.

ನಾನಿನ್ನೂ ಕುರ್ಚಿಯಬಳಿ ಹೋಗುವದರಲ್ಲೇ ಬಾಗಿಲು ತೆರೆಯಲ್ಪಟ್ಟು ಖಾನಮ್‌ಆಫಂದಿಯೂ, ಹಿಂದೆ ಆವರಪತಿಯೂ ಒಳಗೆ ಪ್ರವೇಶಿಸಿದರು. ನಸಿರುಲ್ಲಾಪಾಷಾರವರು ಘಾಬರಿಯಿಂದ ನಾಫಿಜ್‌ಬೇಯಕಡೆ ನೋಡಹತ್ತಿದರು.

ನಸಿರುಲ್ಲಾಪಾಷಾ—ಏನಮಾಡಿಕೊಂಡುಬಿಟ್ಟೆ (ನಾಫಿಜ್‌ಬೇಯು ಎದ್ದು

ಬಿದ್ದು ತಂದೆಯ ಕೈಗೆ ಮುದ್ದಿಟ್ಟನು) ಸಾಕು. ಇನ್ನು ಮಲಗಿಕೊ. ನಿನಗೆ ಜ್ವರಹತ್ತಿರುವದು.

ನಾನು, ಕ್ಷಿಪ್ತತಸ್ಥಳಂತೆ ತಲೆಯೆತ್ತಿನೋಡಿದೆನು. ನಾಫಿಜ್‌ಬೇಯ ಕಣ್ಣುಗಳು ನನ್ನ ಕಣ್ಣುಗಳೊಡನೆ ಐಕ್ಯವಾದವು. ಅವನು ನನಗೆ ಧೈರ್ಯ ಹೇಳುವವನಂತೆ ನಗುತ್ತಾ ಹೀಗೆಂದನು.

"ಆಫಂದೀಮ್, ಇದೆಲ್ಲಾ ತಾಯಿಯವರ ತಪ್ಪು. ಎರಡು ಘಂಟೆಗಳ ಕಾಲ ಪೂರಾ ನನ್ನನ್ನು ಒಬ್ಬನನ್ನೇ ಹಾಜಿರೆಯೊಡನೆ ಬಿಟ್ಟುಹೋದುದರ ಫಲವಿದಾಗಿರುವದು. ನನ್ನ ಶಕ್ತಿಯನ್ನು ಪರೀಕ್ಷಿಸಲು ಎಷ್ಟು ಸಲ ಎದ್ದು ಕೂತು ಮಾಡಿರುವೆನೋ ನನಗೇ ಗೊತ್ತಿಲ್ಲ. ಪಾಪ, ಅವಳು ನನ್ನನ್ನು ಎಷ್ಟೇ ಹೆದರಿಸಿ ಬೆದರಿಸಿದರೂ ಸುಮ್ಮನೆ ಮಲಗಿಸಲಾರದೆ ಹೋದಳು.

ಖಾನಮ್‌ಆಫಂದಿ— (ಆಗ್ರಹದಿಂದ) ಹಾಜಿರೆ, ನೀನು ಹೇಗೆ ಅಪ್ಪಣೆ ಕೊಟ್ಟೆ ? ನಾಫಿಜ್‌ಬೇಯನ್ನು ಏಕೆ ತಡೆಯಲಿಲ್ಲ ?

ನಾನು ಭಯದಿಂದ ತಲೆಯನ್ನು ಬೊಗ್ಗಿಸಿಕೊಂಡುಬಿಟ್ಟೆನು. ಏನು ತಾನೆ ಜವಾಬು ಕೊಡಲಿ ?

ನಸೀರುಲ್ಲಾಪಾಷಾ— ನಾಫಿಜ್‌ಬೇಯೇನೂ ಎಳೇಮಗುವಲ್ಲ. ತನ್ನ ಒಳ್ಳೇದು ಕೆಟ್ಟದ್ದನ್ನು ಅರಿತುಕೊಳ್ಳಲು ಶಕ್ತನು. ಮೂರ್ಖತನಮಾಡಲು ಹೊರಟರೆ ಈ ಹುಡುಗಿಯ ತಪ್ಪೇನಿರುವದು ? ಅವಳು ಹೇಗೆ ತಾನೆ ಇವನನ್ನು ತಡೆಯಬಲ್ಲಳು ? ಹಾಜಿರೆ, ನೀನು ಕೊಠಡಿಗೆ ಹೋಗಿ ವಿಶ್ರಮಿಸಿ ಕೊಳ್ಳಮ್ಮಾ. ಬಹಳ ಆಯಾಸ (ಈ ಶಬ್ದವನ್ನು ಒತ್ತಿಹೇಳುತ್ತಾ) ಗೊಂಡಿ ರುವಂತೆ ಕಾಣುತ್ತಿ. ನಾಫಿಜ್, ನೀನು (ವ್ಯಾಕುಲತೆಯಿಂದ) ಸುಮ್ಮನೆ ಮಲಗಿರಪ್ಪಾ. ಈಗಲೇ ಡಾಕ್ಟರನ್ನು ಬರಹೇಳುವೆನು.

ಹೀಗೆಂದು ಅವರು ಹೊರಟುಹೋಗಲು ನಾನು ಸಹ ಅವರ ಹಿಂದೆಯೇ ನಾಚಿಕೆಯಿಂದಲೂ ದುಃಖದಿಂದಲೂ ಕೂಡಿದವಳಾಗಿ ಹೊರಗೆಹೋದೆನು. ಅವರು ಬರಾಂಡೆಯಲ್ಲಿ ಬಂದು, ಏನನ್ನೋ ಹೇಳಲಪೇಕ್ಷಿಸುವವರಂತೆ ನಿಂತು ದನ್ನು ಕಂಡು ನನ್ನ ಜೀವವೇ ಹಾರಿಹೋದಂತಾಯಿತು. ನಾಫಿಜ್‌ಬೇಯು ನನ್ನ ಮೇಲೆ ಮನಸ್ಸುಳ್ಳವನಾಗಿದ್ದಾನೆಂಬುದು, ಅವರಿಗೆ ಮೊದಲಿಂದಲೂ ತಿಳಿದಿತ್ತೆಂದು, ನಾನು ಕೇಳಿದ್ದೆನಾದುದರಿಂದ ಇನ್ನು ಅವರು ನನ್ನನ್ನು, ಮಗನಿಗೆ ಪುನಃ ಜ್ವರ ಬರಲು ಕಾರಣವೇನೆಂದು ಪ್ರಶ್ನಿಸಬಹುದೆಂದು ಹೆದರಿದೆನು. ಅದೃಷ್ಟವಶದಿಂದ, ಅವರ ಮನಸ್ಸಿಗೆ ಏನು ತೋರಿತೋ ಕಾಣೆ. ಏನನ್ನೂ ಕೇಳದೆ ಹೊರಟುಹೋದರು. ನಾನು ಸಹ ನನ್ನ ಕೊಠಡಿಗೆ

ಬಂದು, ನೂರು ಬಾರಿ ಮನಸ್ಸಿನಲ್ಲಿ, ಈ ವಿಪತ್ತಿನಿಂದ ಹೇಗೆ ನನಗೆ ಬಿಡುಗಡೆಯಾದೀತೆಂದು ಪ್ರಶ್ನಿಸುತ್ತಾ, ಇದೇ ಚಿಂತೆಯಲ್ಲಿ ಮುಳುಗಿ ಬಿಡುತ್ತಿದ್ದನು.

ಆರನೇಯ ಪರಿಚ್ಛೇದ

ರಂಜಾನ್‌ಮಾಸವು ಪ್ರಾರಂಭವಾಗಿ ಹೋಗಿರುವದು-ಉಪವಾಸ ಮಾಡಿ, ಧ್ಯಾನವಮಾಡಿ ಆನಂದಿಸುವ,-ದಿನವೆಲ್ಲಾ ಹಸಿದು ಜೀವವನ್ನು ದಂಡಿಸಿ, ರಾತ್ರಿಗೆ ಉಂಡುತಿಂದು ಸಂತೋಷಿಸುವ ಆ ರಂಜಾನ್‌ಮಾಸವು. ಹರಸು ಸರಾವಲ್ಲಿ ಹಗಲೆಲ್ಲಾ ನಿದ್ರೆಯೂ ನಿಶ್ಶಬ್ದತೆಯೂ ಆವರಿಸಿಕೊಂಡಿರುವುದು. ಸಂಜೆಯು ಗುಂಡು ಹಾರಿದಕೂಡಲೇ, ವರ್ಷದಲ್ಲಿ ಮತ್ತಾವ ಸಮಯದಲ್ಲೂ ಇಲ್ಲದಂಥ ಆ ಸಂಭ್ರಮ-ನೂರಾರು ಜನರು ನೋಡಲು ಬಂದು ಹೋಗುತ್ತಿರುವದು-ನೃತ್ಯಗೀತಗಳಿಂದ ಮನೋಲ್ಲಾಸ ಮಾಡುವದು-ರಮ್ಯವಾದ ದೀಪಗಳಿಂದ ತುಂಬಿ ಹೋಗಿರುವುದು-ನವಯುವಕರ ಗುಂಪು ಮನೆಮನೆಗಳ ಕಿಟಿಕಿಗಳ ಮುಂದೆ ಬಂದು ಹಾಡಿ, ತಮ್ಮನ್ನೇ ಇದುರು ನೋಡುತ್ತಾ ಕಾದಿರುವ ಯುವತಿಯರ ಮನಸ್ಸನ್ನು ಆನಂದಪಡಿಸುವದು-ಹೀಗೆಲ್ಲಾ ನಡೆಯುತ್ತಿರುವದನ್ನು ನೋಡಿದರೆ, ಪುರುಷರೂ ಸ್ತ್ರೀಯರೂ ಒಬ್ಬರನ್ನೊಬ್ಬರು ನೋಡಬಾರದೆಂಬ ಕಟ್ಟಳೆಯೊಂದೂ ಇಲ್ಲದಿ[illegible] ಕಾಣಿಸುವದು. ವಾಸ್ತವಿಕವಾಗಿಯೂ ಈ ತಿಂಗಳಲ್ಲಿ ಈ ವಿಧವಾದ ಕಟ್ಟುನಿಟ್ಟುಗಳೂ ಇರುವದಿಲ್ಲ. ಬೇರೆ ಒಂದು ತುದಿ ಸಹ ಕಾಣಿಸದಂತೆ [illegible] ಕಾಲಿನವರೆಗೂ ಮುಸುಕಿಟ್ಟುಕೊಂಡು, ಗಂಡಸರನ್ನು ಹತ್ತಿರ ಸೇರಗೊಡದಂಥಾ ಸ್ತ್ರೀಯರು ಸಹ ಈ ತಿಂಗಳಲ್ಲಿ ತಮ್ಮ ಮನೆಗಳ [illegible] ದೆ [illegible], ಭಯಲಜ್ಜಾದಿಗಳನ್ನು ತೊರೆದು, ಹೂಗಳನ್ನೂ ಸಿಗರೇಟುಗಳನ್ನೂ ಎಸೆಯುತ್ತಾ ಇರುವದನ್ನು ನೋಡಿದರೆ ಈಗಿನ ಕಾಲದ ಸ್ವಾತಂತ್ರ್ಯರೂ ಅತಿ ಸ್ವತಂತ್ರರಾದಂಥಾ ಯುವಜನರು ಸಹ ಇಷ್ಟು ಧೈರ್ಯ[illegible]ವನ್ನವಲಂಬಿಸುವಂತೆ ಕಾಣಿಸುವದಿಲ್ಲ.

[illegible] ಉತ್ಸವವಾಗಿ [illegible] [illegible] (ಯೂರೋಪಿಯನ್ನ [illegible]) ಪ್ರಾರಂಭವಾಗುವುದು. ಈ [illegible] ಒಂದು [illegible] ಪ್ರವೇ[illegible] [illegible]. [illegible]ಗೆ [illegible]

ವೈರೂ, ಸ್ವಲ್ಪ ದಿನಗಳ ಕೆಳಗೆ ಇದು ಇನ್ನೂ ಹಾಳೂರಾಗಿಯೇ ಇತ್ತು.

ದಿನವೆಲ್ಲಾ ಹಸಿದುಕೊಂಡು ಮೌನವಾಗಿದ್ದ ನಂತರ ಯಾರು ತಾನೆ ಈ ಸಮೂಹ ನೃತ್ಯಗಳಲ್ಲಿ ಭಾಗವಹಿಸಲು ಆಶಿಸದಿರುವುದಿಲ್ಲ? ತುರ್ಕಿ ನವ ಯುವಕರು, ಪುರಾತನ ಸಂಪ್ರದಾಯಕ್ಕನುಸಾರವಾಗಿ ದೋಣಿಗಳಲ್ಲಿ ಕುಳಿತು ಬಾಸ್ಪರಸ್ ಸಮುದ್ರದ ಮೇಲೆ ವಿಹರಿಸುವುದು, ವಾತಾಯನಗಳ ಹಿಂದೆ ಮರೆಯಾಗಿ ಕುಳಿತಿರುವ ಸುಂದರಿಯರಿಗೆ ಪ್ರೇಮಯುಕ್ತವಾದ ಗೀತೆಗಳನ್ನು ಹಾಡುವುದು, ಮುಂತಾದ ಹಳೇ ಪದ್ಧತಿಗಳನ್ನು, ಮೆಲ್ಲಮೆಲ್ಲನೆ ಬಿಡುತ್ತಾ ಬಂದು ಈ ಕುಣಿತದಲ್ಲಿ ಸೇರಲು ಪ್ರಾರಂಭ ಮಾಡಿರುವರು. ತುರ್ಕಿ ಸ್ತ್ರೀಯರಿಗೆ ಈ [illegible] ಇಷ್ಟವಿಲ್ಲ. ಅವರ ಕಣ್ಣಿಗೆ ಈ ಬಾಲ್ ಕೊಂಚವೂ ಸರಿ ಬೀಳುವುದಿಲ್ಲ.

ನಾವಿರುವೀ [illegible]ದಲ್ಲಿ, ನಸಿರುಲ್ಲಾ ಪಾಷಾರವರೊಬ್ಬರ ಮನೆಯಲ್ಲಿ ಮಾತ್ರ ಈ ಹರ್ಷ ಸಂತೋಷಕರವಾದ ಯಾವ ಕೆಲಸವೂ ಮಾಡಲ್ಪಡಲಿಲ್ಲ. [illegible]ಯವರು, ಕಿಟಕಿಯ ಬಳಿ ಬಂದು ಹಾಡಲು ಯಾರಿಗೂ ಅನುಮತಿ ಕೊಡಲಿಲ್ಲ. ಹರ್ಷಾಸ್ಪದವಾದ ಯಾವ ಸಾಮಾನನ್ನೂ ಮನೆಗೆ ತರಗೊಡಲಿಲ್ಲ. ನಾಜಿರ್ ಬೇಯ ಆರೋಗ್ಯವು ಇನ್ನೂ ಹೀನ ಸ್ಥಿತಿಯಲ್ಲಿದ್ದುದರಿಂದ ಈ ವಿನೋದ ಕಾರ್ಯಗಳು ಅವರಿಗೆ ಹಾನಿಕರವಾಗಿ ತೋರಿದವು.

ಇವತ್ತು ಮೂರನೆಯ ದಿನ; ಚಂದ್ರನಿಗೆ ಇನ್ನೂ ಕಳೆಗೂಡಿಲ್ಲ. ಹಗಲಿನಲ್ಲಿ ಅತಿ [illegible]ದುದರಿಂದ, ಸಂಜೆ ಊಟವಾದ ಬಳಿಕ ನಾವೆ[illegible] ತೋಟಕ್ಕೆ ಹೋಗಿ ಕುಳಿತುಕೊಂಡು ಮನರಂಜನೆ ಮಾಡಿಕೊಳ್ಳುತ್ತಿದ್ದೆವು. [illegible] ಮೇಲೆ ಉರಿಯುತ್ತಿದ್ದ ಎರಡು [illegible] ತೋಟದಲ್ಲಿ ನಾವು ಒಬ್ಬರನ್ನೊಬ್ಬರು [illegible]ಬಿದ್ದಿತ್ತು. ಅಧಮ್ ಬೇಯವರು [illegible] ಮತ್ತು [illegible] ಬೇಯವರು ಯಾರನ್ನೋ ನೋಡಲೂ, [illegible] ಗಂಡಸರಲ್ಲಿ ನಾಜಿರ್ ಬೇಯೊಬ್ಬನೇ ನಮ್ಮ ಜತೆ ಇದ್ದನು. ನಾಜಿರ್ ಬೇಯು ಈಗ ಕೊಂಚ ಮಟ್ಟಿಗೆ ಆರೋಗ್ಯ ಹೊಂದಿ [illegible] ಹೋಗಿ ಬರುತ್ತಿದ್ದ[illegible], ರಾತ್ರಿಯ ಹೊತ್ತು [illegible] ಹೊರಗೆ ಹೋಗುವಷ್ಟು ಶಕ್ತಿ [illegible], [illegible]ದಲ್ಲಿ ಹೊತ್ತು ಕಳೆಯಬೇಕಾಗಿದ್ದುದು ಅವನಿಗೆ ಒಂದು [illegible]ಯಾಗಿತ್ತು. [illegible] ಅವನು [illegible] ಕಾಣುತ್ತಾ ನನ್ನೊಡನೆ ಸರಳತೆಯಿಂದ ಮಾತ

ನಾಡುತ್ತಾ ಇದ್ದನು. ಆದರೂ ಕೊಂಚ ಬಿಗುವಿದ್ದುದರಿಂದ ಈ ವರ್ತನೆಗೂ ಮೊಟ್ಟಮೊದಲು ಅವನಲ್ಲಿದ್ದ ವರ್ತನೆಗೂ, ಅಯೂಬ್‌ಸುಲ್ತಾನದ ಘಟನೆಯಾದ ನಂತರ ಇದ್ದ ನಡವಳಿಕೆಗೂ ಇತ್ತೀಚೆಗಿದ್ದ ಅವನ ನಡವಳಿಕೆಗೂ ಇದ್ದಷ್ಟು ವ್ಯತ್ಯಾಸವಿತ್ತು. ಅದರಲ್ಲೂ ಇಂದು ಸಂಜೆ ಅವನಿಗೆ ಏನು ಮೂರ್ಖತನ ತೋರಿತೋ ಕಾಣೆನು, ನನ್ನ ಕಡೆ ಬಹಳ ಮನಸ್ಸು ತಿರುಗಿದವನಾಗಿದ್ದುದರಿಂದ ವಹೀದಾಖಾನವಳು ಕಿವಿಗಳನ್ನು ನೆಟ್ಟಗೆ ಮಾಡಿಕೊಂಡು ಜಾಗ್ರತಳಾದಳು. ಕಡೆಗೆ, ನಾಫಿಜ್‌ಬೇಯು ನನ್ನ ಭುಜದ ಮೇಲೆ ಒಂದು ಹಿಂದುಸ್ತಾನೀಶಾಲನ್ನು ಹೊದಿಸುತ್ತಿದ್ದಾಗ, ತಡೆಯಲಾರದೆ ಹೀಗೆಂದು ಬಿಟ್ಟಳು–

"ಪಾಪ ಈ ಹುಡುಗಿಯನ್ನು ಏತಕ್ಕಾಗಿ ಇಷ್ಟು ಪೀಡಿಸುವೆಯೋ ಕಾಣೆ. ಇದರ ಬದಲು ಬೀಆದಿಲಳು ಹೇಳುತ್ತಿರುವ ಕಥೆಯನ್ನಾದರೂ ಕೇಳು. ಎಷ್ಟು ಸ್ವಾರಸ್ಯವಾಗಿ ತೋರುವದು. ಹಾಜಿರೆಗೆ, ಇತರರಗಿಂತ ಬೇಗನೇ ಶೀತನೆಗಡಿಯಾಗುವ ಭಯವುಂಟೇನು ? ಬೀಆದಿಲಳು ಮಾತನಾಡುತ್ತಿರುವಾಗ ಹೀಗೆ ನೀನು ಮಧ್ಯೆ ತೊಂದರೆಕೊಡುವದು ಮರ್ಯಾದೆಯೇ."

ನಾಫಿಜ್‌ಬೇಯು ತಕ್ಷಣವೇ ಆದಿಲಳ ಕಡೆ ತಿರುಗಿದನು. ಈ ವೃದ್ಧೆಯು ಮನೆಮನೆಯ ಹರಮುಸರಾಕ್ಕೂ ಹೋಗಿ ವಿಧವಿಧವಾದ ಸಾಮಾನುಗಳನ್ನು ಮಾರುವವಳಾಗಿದ್ದಳು. ಸಧ್ಯದಲ್ಲೇ ಮುಗಿಯದಿರುವಂಥ, ಶೃಂಗಾರ ವೀರರಸಭರಿತವಾದೊಂದು ದೊಡ್ಡ ಕಥೆಯನ್ನು ಒಂದು ಘಂಟೆಯಿಂದ ಹೇಳುತ್ತಿದ್ದಳು.

ಬೀ—ಹೂಂ, ಸರಿ, ಅಜ್ಜಮ್ಮ ಹೇಳು. ನಾವೆಲ್ಲರೂ ಮನಸಿಟ್ಟು ಕೇಳುತ್ತಿದ್ದೇವೆ. ನೀನು ಆಗ ಹೇಳಿ ನಿಲ್ಲಿಸಿದಾಗ ನಿನ್ನ ಕಥಾನಾಯಕನಿಗೆ ಕಷ್ಟ ಬಂದಿತ್ತು. ಒಬ್ಬನೇ ಅವನು, ಐನೂರು ಮಂದಿಗೆದುರಾಗಿ ಯುದ್ಧ ಮಾಡುತ್ತಿದ್ದನು. ಅವರೆಲ್ಲರನ್ನೂ ಅವನು ಜಯಿಸಿದನೆಂದು ನಂಬುತ್ತೇನೆ.

ಷಾಯಿಸ್ತಾ—(ಬಹಳ ಸ್ವಾರಸ್ಯದಿಂದ ಕಥೆ ಕೇಳುತ್ತಿದ್ದವಳು) ಖಂಡಿತವಾಗಿ ಜಯಿಸಿಯೇ ಜಯಿಸುವನು. ಆ ಐನೂರು ಮಂದಿ ಒಬ್ಬ ಮುಸಲ್ಮಾನನ ಮುಂದೆ ಏನು ಮಾಡಲು ಶಕ್ತರು.

ನಾಫಿಜ್‌ಬೇ—(ಆಕಳಿಸುತ್ತಾ) ಏನೂ ಇಲ್ಲ ಈಕಾಲದಲ್ಲಿ ನಮ್ಮ ಫೌಜಿನಲ್ಲಿ ಪಕ್ಕಾ ಮುಸಲ್ಮಾನರು ಇಲ್ಲದಿರುವ ಕಾರಣದಿಂದಲೇನೋ, ಈಗ ಐನೂರು ಮಂದಿಗೆದುರಾಗಿ ಒಬ್ಬ ಮನುಷ್ಯನು ಯುದ್ಧಮಾಡಲಾರನು. ಆಕಾಲದ ಜನರಿಗೂ ಈಕಾಲದ ಜನರಿಗೂ ಏನು ಕಾರಣ ಇಷ್ಟು ವ್ಯತ್ಯಾಸವಿರುವದೋ

ತಿಳಿಸುವನು. ನಿನ್ನ ಕಥಾನಾಯಕನ ಬುದ್ಧಿಹೀನತೆಯ ವಿಚಾರ ನಾನು ಹೇಳುವದಿಲ್ಲ—ಆದರೆ, ಆಗಿನ ಒಬ್ಬ ಮನುಷ್ಯನು ಈಗಿನ ಹತ್ತುಜನರಿಗೆ ಸಮನೆಂಬುದರಲ್ಲಿ ಸಂಶಯವಿಲ್ಲ.

ಷಾಯಿಸ್ತಳಿಗೆ ನಾಫಿಜ್‌ಬೇಯ ಮಾತಿನ ಅಂದವು ಸರಿಬೀಳದ ಕಾರಣ, ಸುಮ್ಮನಾಗಿ ಮುಖವನ್ನು ಬೇರೆ ಕಡೆ ತಿರುಗಿಸಿ ಕೊಂಡುಬಿಟ್ಟಳು. ಆದರೆ, ನಜೀರಾಖಾನನ ಮಗಳಾದ ಬಹಿಯ್ಯಳು, ನಾಫಿಜ್‌ಬೇಯ ತೊಡೆಯ ಮೇಲೆ ಕುಳಿತಿದ್ದವಳು, ಅವನ ಕೊರಳ ಮೇಲೆ ಕೈ ಹಾಕಿಕೊಂಡು, ತೊದಲು ನುಡಿಯಿಂದ "ನಾನು ಇಂಥಹ ಕಥೆಗಳನ್ನು ಕೇಳಲು ಇಷ್ಟಪಡುವದಿಲ್ಲ. ಮಿಸ್‌ಏಮಿಯು ಇವು ಕೆಟ್ಟವೆಂದು ಹೇಳಿದರು," ಎಂದಳು.

ಮಿಸ್ ಏಮಿಯು ಒಬ್ಬ ಉಪಾಧ್ಯಾಯಿನಿಯು. ವಾರಕ್ಕೆ ಮೂರು ದಿನ ಬಂದು ಮಕ್ಕಳಿಗೆ ಇಂಗ್ಲಿಷ್ ಮತ್ತು ಫ್ರೆಂಚನ್ನು ಕಲಿಸಿಕೊಡುತ್ತಿದ್ದಳು.

ನಾಫಿಜ್‌ಬೇ— (ಬಹಿಯ್ಯಳ ಸುಂದರವಾದ ಅಳಕಗಳನ್ನು ಕೈಯಿಂದ ಸವರುತ್ತಾ) ಅವಳಿಗೆ ಹೀಗೆ ಹೇಳಲು ಅವಕಾಶವೆಲ್ಲಿ ಸಿಕ್ಕಿತು. ನೀನು ಎಂದಾದರೂ ಅವಳಿಗೆ ಕಥೆಯನ್ನು ಹೇಳಿದ್ದೆಯಾ ?

ಬಹಿಯ್ಯಾ— ನಾನು ಹೇಳಲಿಲ್ಲಪ್ಪ. ಔದತ್ತನು ಒಂದು ಸಲ ಹೇಳಿದ ಕಥೆಯನ್ನು ಕೇಳಿ, ಮಕ್ಕಳು ಇಂಥಾ ಕಥೆಯನ್ನು ಕೇಳಬಾರದೆಂದು ಹೇಳಿದರು. ಆಮೇಲೆ ಹಾಜಿರಳ ಕಥೆಗಳನ್ನು ಕೇಳಿ, ಅವು ಬಹಳ ಚೆನ್ನಾಗಿವೆ ಎಂದರು.

ನಾಫಿಜ್‌ಬೇ— ಹಾಜಿರೇ, ಕೇಳಿದೆಯಾ. ನಿನ್ನ ವಿನಾ ಇಲ್ಲಿ ಮತ್ತಾರೂ ಸರಿಯಾದ ಕಥೆಯನ್ನು ಹೇಳಲಾರರೆಂದು ಮಿಸ್‌ಏಮಿಯು ತಿಳಿದಿದ್ದಾಳೆ. ಇದೋ ನಮಗೂ ಹೇಳು. ಅವು ಒಳ್ಳೆಯವೋ ಕೆಟ್ಟವೋ ಎಂಬುದನ್ನು ನಾವು ಸಹ ನೋಡೋಣ.

ನಾನು— (ಎಲ್ಲರ ಕಣ್ಣೂ ನನ್ನ ಕಡೆ ತಿರುಗಿದ್ದುದರಿಂದ ನಾಚುತ್ತಾ) ಇಲ್ಲ, ಸ್ವಾಮೀ, ನನ್ನನ್ನು ಕ್ಷಮಿಸಬೇಕು. ನನ್ನ ಕಥೆಗಳು ಮಕ್ಕಳು ಕೇಳುವಂಥವು.

ನಾಫಿಜ್‌ಬೇ— ಮತ್ತು ಬಹು ಪವಿತ್ರವಾದವು ಆಗಿಯೂ ದುರ್ವಿಚಾರಗಳ ಗಂಧವಿಲ್ಲ-ಸ್ವಚ್ಛವಾಗಿಯೂ ಇರುವದರಿಂದ ದೊಡ್ಡವರಿಗೆ ರುಚಿಸುವದಿಲ್ಲವು-ಅಲ್ಲವೇ ? ಒಳ್ಳೇದು, ಬಹಿಯ್ಯಾ ಹಾಜಿರೆಯು ನಿನಗೆ ಮತ್ತೊಂದು ಸಲ ಕಥೆ ಹೇಳುವದಾದರೆ ನನ್ನನ್ನೂ ಮಕ್ಕಳೊಡನೆ ಗಣಿಸುವಳೆಂದು ಆಶಿಸುತ್ತೇನೆ. ಯಾಕೆಂದರೆ, ನಿನ್ನಂತೆ ನನಗೂ ಜೀಲುಮಿಲಳ ಕಥೆ ಸರಿಬೀಳುವದಿಲ್ಲ. ಅಜ್ಜಮ್ಮಾ ನಿನ್ನ ಕಥಾನಾಯಕನನ್ನು ಒಬ್ಬನೇ ಯುದ್ಧಮಾಡಿಕೊಂಡಿರಲು ಬಿಟ್ಟು ಆ

ಕಥೆಯನ್ನು ಅಲ್ಲೇ ನಿಲ್ಲಿಸು. ನಿನ್ನ ಬಳಿ ಕವಣೆಯಿದ್ದರೆ ಕೊಡೆನಗೆ.
ಅದರಿಂದ ಎಲ್ಲರಿಗೂ ಹೊತ್ತುಹೋಗುವದು.
ದಾಸಿಯರು— (ಎಲ್ಲರೂ ಒಟ್ಟಾಗಿ ಒಂದೇ ಸ್ವರದಿಂದ) ಓಹೋ, ಎಷ್ಟು
ಒಳ್ಳೇ ವಿಚಾರ ತಲೆದೋರಿತು! ಇನ್ನು ಖಾಸಿಮ್ ಅಫಂದಿಯವರಿಂದ
ಪ್ರಾರಂಭವಾಗಲಿ.
ಖಾಸಿಮ್ ಅಫಂದಿ— (ನಕ್ಕು) ಇಲ್ಲ, ನನಗೆ ಬೇಕಿಲ್ಲ. ವಯಸ್ಸೆಲ್ಲಾ
ಕಳೆದುಹೋಗಿರುವ ನನಗೆ ಮುಂದಾಗಬೇಕಾದುದು ಏನು ಬಾಕಿಯಿರುವ
ದೆಂಬುದನ್ನು ನಾನೇ ಹೇಳಬಲ್ಲೆನು, ನನ್ನ ವಿಚಾರವೇನನ್ನೂ ಕೇಳಬೇಕಾದ
ದಿಲ್ಲ. ಎಲ್ಲಿ, ಒಂದು ಕವಣೆಯನ್ನು ಕೊಟ್ಟರೆ ನಿನ್ನನ್ನು ಏನೋ ಕೇಳುವೆನು.
ನಾಫಿಜ್ ಜೇ— (ನಸುನಕ್ಕು) ಯಾರಿಗೋಸ್ಕರ ಕವಣೆಯನ್ನು ಕೇಳುತ್ತೀ
ರೆಂಬುದು ನನಗೆ ಗೊತ್ತಾಯಿತು. ಆದರೆ ನನ್ನ ಹಣೇಬರಹವೇನಾದರೂ
ಆಗಲಿ—ನನಗೇನೂ ಅದರ ಚಿಂತೆಯಿಲ್ಲ. ಹುಡುಗರಿರಾ, ಇಲ್ಲಿ ಬನ್ನಿ.
ನಾನು ನಿಮ್ಮನ್ನು ಕಥೆಕೇಳುವದನ್ನು ತಪ್ಪಿಸಿಬಿಟ್ಟೆನು. ಅದಕ್ಕೆ ಬದಲು
ನಿನುಗೆ ಏನಾದರೂ ಮಾಡಬೇಕು—ನಿಮ್ಮಲ್ಲಿ ಯಾರು ನನ್ನೊಡನೆ ಬರಲು
ಸಿದ್ಧರಾಗಿರುವಿರಿ? ನಿನ್ನೆ ರಾತ್ರಿ ಅಮ್ಮಾವರು ಆ ಗೂಬೆಯ ಧ್ವನಿಯನ್ನು
ಕೇಳಿ ಹೆದರಿದುದರಿಂದ ಆ ಗೂಬೆಯನ್ನು ಕೊಲ್ಲಬೇಕೆಂದಿದ್ದೇನೆ. ಇವತ್ತು
ಅದನ್ನು ಬಿಟ್ಟುಬಿಟ್ಟರೆ, ಅದು ಮನೆಯ ಮೇಲೆ ಗೂಡು ಮಾಡಿಕೊಂಡೀತು.
ಆದರೆ, ಅಮ್ಮಾವರು ದಿಗಿಲಿನಿಂದ ಖಾಯಿಲೆ ಬೀಳುವರು. ಅವರು ಆ
ಹಕ್ಕಿಯನ್ನು ಬಹಳ ಅಶುಭಕರವೆಂದು ತಿಳಿದಿದ್ದಾರೆ. ಎದುರುಗಡೆಯ
ಗುಡ್ಡದ ಮೇಲಿನ ಶೃಂಗದಲ್ಲಿ ಅದಕ್ಕೆ ವಾಸಿಸುವ ಉದ್ದೇಶವಿದೆ. ಕೆಳಗಿನ
ಕೊಠಡಿಯಲ್ಲಿ ಬೆಳಕನ್ನು ಹೊತ್ತಿಸಿದರೆ ಆಗ ಅದು ನನಗೆ ಸರಿಯಾಗಿ
ಕಾಣಿಸುವದು.
ಎಲ್ಲ ಮಕ್ಕಳು—(ಸಂತೋಷದಿಂದ ಎದ್ದುನಿಂತು) ನಾವೆಲ್ಲರೂ ಬರುತ್ತೇವೆ.
ವಲಿಯಾ ಖಾನಮ್— ಆದರೆ ಕತ್ತಲಲ್ಲಿ ಬೇಡ. ಇಷ್ಟು ಹೊತ್ತಾದಮೇಲೆ
ಇವರುಗಳನ್ನು ಅಲ್ಲಿ ಕರೆದುಕೊಂಡು ಹೋಗಬೇಡ. ಎಲ್ಲಿಯಾದರೂ ಬಿದ್ದಾರು
-ಹಾನೇ ಇಬಹುದು ಅಥವಾ—
ನಾಫಿಜ್ ಜೇ— ಗೂಬೆಗೆ ಬದಲು ತಮ್ಮ ಗುಂಡನ್ನು ಹಾರಿಸುವೆನು.
ವಲಿಯಾ ನಿನ್ನಂತಹ ತಾಯಿಯರನ್ನು ನಾನು ನೋಡಿಯೇ ಇಲ್ಲ. ನನ್ನನ್ನು
ನಂಬಬಹುದೋ ಇಲ್ಲವೋ ನಮ್ಮ ತಾಯಿಯವರನ್ನು ಕೇಳು. ಮಹೀದನನ್ನು
ನೋಡಬಾರದೇ - ಅವಳು ಒಂದು ಮಾತನ್ನಾದರೂ ಆಡದಿರುವವರಂ

ಅವಳಲ್ಲಿ ನನಗೆ ಹೆಚ್ಚು ಮಮತೆಯು ಉಂಟಾಗುವದು. ಅವಳ ತ್ರುಟಿಮಣ್ಣನ್ನು ನಾನು ಎಲ್ಲರದೂ ಮಾಡುವಾಗ ಬಿಡುತ್ತೇನೆ. ಭಯವು ಅವಳಿಗೆ ಲೇಶವೂ ಇಲ್ಲ.

ಮಹಿದಾಖಾನಮ್— ಗಂಡು ವೇಷವು ಹೋಗುವದರಲ್ಲೇನೂ ಅಡ್ಡಿಯಿಲ್ಲ. ಆದರೆ, ಬಹಿಯ್ಯಳನ್ನು ಕರಕೊಂಡು ಹೋಗದಿರುವದು ಒಳ್ಳೆಯದು. ಅವಳು ಋಜುಪ್ರಕೃತ ಸ್ವಭಾವವಾದುದರಿಂದ ಹೆದರಿಯಾಳು.

ಬಹಿಯ್ಯಾ— (ನನ್ನ ಕೈ ಹಿಡಿದುಕೊಂಡು) ಹಾಜಿರೆಯು ಬಂದರೆ ನಾನು ಹೆದರುವದಿಲ್ಲ. ಏನು ಅವ್ವಾ ನನಗೆ, ಹಾಜಿರೆಯು ಬರಲಾರಳೆ ?

ಮಹಿದಾಖಾನಮ್— ಇಲ್ಲ, ಮುದ್ದುಮರಿ. ಮಂದಾರ್‌ಖಾನೆಯನ್ನು ನಾವು ನೋಡಬೇಕೆಂಬುದನ್ನು ಮರೆತೆಯಾ. ಹಾಜಿರೆಯು ಗಂಡಸರ ಮುಂದೆ ಹೋಗ ಕೂಡದು.

ಔರತ್— ಅವಳು ಮುಖವನ್ನು ಮುಚ್ಚಿಕೊಳ್ಳುವಳು. ಈಗ ಒಬ್ಬ ಗುಲಾಮನೂ ಹೊರಗಡೆ ಇರಲಾರನು.

ಮೊಹಸಿನ್ — (ಅರಬೀಯ ದೊಡ್ಡ ಮಗ) ಹಾಗಾದರೆ ನೀವೆಲ್ಲರೂ ಏತಕ್ಕೆ ಬರಬಾರದು ? ಇಲ್ಲಿ ಕುಳಿತು ಕವಡೆಯನ್ನೆಸೆದಾಡುತ್ತಾ ಕತೆ ಕೇಳುವದಕ್ಕಿಂತ ಉತ್ತಮವಾಗಿಯೇ ಇರುವದು. ಆಗಲಾರದೇನು ಮಾಮಾಯವರೇ ?

ವಲಿಯಾಖಾನಮ್ — (ಕುತೂಹಲದಿಂದ) ಇದೀಗ ಬಹಳ ಒಳ್ಳೆಯದು. (ಖಾನಮ್ ಅಫಂದಿಯವರು ತಲೆಯಲ್ಲಾಡಿಸಿ ಇದಕ್ಕೆ ವಿರುದ್ಧವಾಗಿ ಕಂಡು ಬಂದುದರಿಂದ, ಮುಖವನ್ನು ಒಂದು ತರಹ ಮಾಡಿಕೊಂಡು) ಆದರೆ, ಆಗುತ್ತದೋ ಇಲ್ಲವೋ.

ನಾಫಿಜ್ ಬೇ— (ಅವಸರದಿಂದ) ಎಲ್ಲರೂ ಹೋಗುವದರಲ್ಲಿ ಅಡ್ಡಿಯೇನು ? ಖಂಡಿತವಾಗಿ ಹೊರಡಬೇಕು. ಔರತ್, ಓಡು ಗುಲಾಮರನ್ನು ಬೇಗನೆ ಹೋಗಲು ಹೇಳು.

ಖಾನಮ್ ಅಫಂದಿ— ನಿಮ್ಮ ತಂದೆಗೆ ಇಷ್ಟವಿಲ್ಲದಿರಬಹುದು.

ನಾಫಿಜ ಬೇ— (ಮಾತನ್ನು ತಡೆದು, ಇದಕ್ಕೆ ನಾನು ಜವಾಬ್ದಾರನಾಗಿರುವೆನು. ಆದರೆ ಅವರು ಇಷ್ಟಪಡದಿರಲು ಇದರಲ್ಲಿ ತಪ್ಪೇನಿರುವದು. ಇದು ರಂಜಾನ್ ಮಾಸವು, ಪ್ರತಿಯೊಬ್ಬರೂ ರಾತ್ರಿಯ ಹೊತ್ತು ಹೊರಗೆಹೋಗಬಹುದು. ಇಷ್ಟಾಗಿ, ನಾವು ನಮ್ಮ ಪ್ರಾಕಾರದಲ್ಲಿಯೇ ಇರುತ್ತೇವೆ. ಅವ್ವಾನೇ, ನೀವೂ ಹೊರಡಿರಿ. ಇನ್ನು ನೆವಗಳನ್ನು ಹೇಳಬೇಡಿ. ಹೇಳಿದರೆ, ಪಾಪ ಈ ಹುಡುಗಿಯರ ಸಂತೋಷವು ಹಾಳಾಗುವದು. (ಖಾನಮ್ ಅಫಂದಿ

ಯವರು ಎದ್ದು ನಿಲ್ಲಲು) ಅದು ಸರಿ ಬನ್ನಿ. ನಿಮಗೆ ಗಾಳಿತಗಲದಂತೆ ಈ ಶಾಲನ್ನು ಹೊದ್ದಿಸುತ್ತೇನೆ. ಗಂಡಸರ ದೃಷ್ಟಿ ಬೀಳುವದೆಂಬ ದಿಗಿಲಿದ್ದರೆ ಇವರಿಂದ ಮುಖವನ್ನೂ ಮುಚ್ಚಿಕೊಳ್ಳಿ.

ಖಾನಮ್ ಆಫಂದಿ— (ನಗುತ್ತಾ) ಹಾಗಾದರೇನು ನಾನು ಬರಬೇಕೋ ? ನಾನಿಲ್ಲದಿದ್ದರೆ ನಿಮ್ಮ ಸಂತೋಷವು ಸಂಪೂರ್ಣವಾಗುವದಿಲ್ಲವೋ ?

ಸಾಫಿಜ್ ಬೇ— ಎಂದಿಗೂ ಇಲ್ಲ. ಅಮ್ಮಾಜಾನ್, ನೀವು ಏನ ಹೇಳುತ್ತೀರಿ. ನಿಮ್ಮನ್ನು ಇಲ್ಲಿ ಒಂಟಿಯಾಗಿ ಬಿಟ್ಟು ನಾವು ಹೋಗುತ್ತೇವೆಯೋ. ಇಗೋ, ತಂದೆಯವರೂ ಸಮಯಕ್ಕೆ ಸರಿಯಾಗಿ ಬಂದುಬಿಟ್ಟರು. ಅಫಂದೀಮ್, ನಾನು ಮಹಿದಾ ಮುಂತಾದವರನ್ನು ಆ ಗುಡ್ಡದ ಮೇಲೆ ಕರೆದುಕೊಂಡು ಹೋಗಲು ಇಷ್ಟಪಡುತ್ತೇನೆ. ಆದರೆ ಇದು ನಿಮ್ಮ ಇಷ್ಟವಿಲ್ಲದಿರಬಹುದೆಂದು ತಾಯಿಯವರು ಯೋಚಿಸುತ್ತಾರೆ.

ನಸಿರುಲ್ಲಾ ಪಾಷಾ— (ನಕ್ಕು) ಇದರಲ್ಲಿ ಅಭ್ಯಂತರವೇನು ? ಬೆಳದಿಂಗಳ ಕಾಲವಾಗಿದ್ದರೇನೋ ಚೆನ್ನಾಗಿರುತ್ತಿತ್ತೆಂಬುದು ನಿಶ್ಚಯ. ಈ ಕಾಲದಲ್ಲಿ ಮರಗಳ ಕೆಳಗೆ ಬಹಳ ಕತ್ತಲೆ ಕವಿದಿರುವದು.

ಸಲಿಯಾ ಖಾನಮ್— (ನಕ್ಕು) ಇದು ಇನ್ನೂ ಹೆಚ್ಚು ಸೊಗಸಾಗಿರುವದು. ಸ್ವಲ್ಪಸ್ವಲ್ಪ ದಿಗಿಲು ಬೀಳುತ್ತಾ ಸುತ್ತುವದರಲ್ಲಿ ಹೆಚ್ಚು ಆನಂದವಿರುವದು.

ನಸಿರುಲ್ಲಾ ಪಾಷಾ— ಸರಿ, ಹಾಗಾದರೆ ಹೊರಡಿ. ಮನೆಗೆ ಬರುವವರ ಹೊತ್ತುಮೀರಿದ ಕೂಡಲೆ ನಾನು ಸಹ ಬಂದು ಸೇರಿಕೊಳ್ಳುವೆನು. ಗುಡ್ಡದ ಮೇಲಿನ ಮನೆಗೆ ದೀಪಹೊತ್ತಿಸಿದರೆ ಒಳ್ಳೆಯದು. ಹುಡುಗಿಯರು ತಮ್ಮ ತಮ್ಮ ವಾದ್ಯಗಳನ್ನು ತೆಗೆದುಕೊಂಡರೆ ಚೆನ್ನಾಗಿರುತ್ತದೆ. ಊಟವನ್ನು ಅಲ್ಲಿಗೇ ಕಳುಹಿಸಬೇಕೆಂದು ನೌಕರರಿಗೆ ಹೇಳುತ್ತೇನೆ. ಬೆಳಗಿನ ರಝಾಮದ ತೋಪು ಹಾರುವವರೆಗೂ ನಾವು ಅಲ್ಲಿ ಇರೋಣ. ಮುಖಕ್ಕೆ ಪರದೆಯನ್ನು ಹಾಕಿಕೊಳ್ಳುವ ಅವಶ್ಯಕತೆಯೇನೂ ಇಲ್ಲ. ಗಂಡಸರನ್ನು ಓರೆಯಾಗಲೇನು ಹೇಳಲು, ಮುಂದೆಯೇ ಯಾರನ್ನಾದರೂ ಕಳುಹಿಸು. ಒಂದು ಹೆಜ್ಜೆಯಲ್ಲಿ ರಸ್ತೆಯನ್ನು ದಾಟಬಿಡಬಹುದು. ಈ ಹೊತ್ತಿನಲ್ಲಿ ಬೀದಿಯಲ್ಲಿ ಯಾರೂ ತಿರುಗುವದೂ ಇಲ್ಲ.

ಬಾಸ್ಪರಸ್‌ನ ದಡದಲ್ಲಿರುವ ಪ್ರತಿಯೊಂದು ಮನೆಯ ಹಿಂದೂ ಒಂದೊಂದು ಗುಡ್ಡವಿದ್ದೇಯಿರುವದು. ಅದರ ಮೇಲೆ ಉದ್ಯಾನವು ರಚಿಸಲ್ಪಟ್ಟಿರುವದು. ಗುಡ್ಡದ ಮೇಲ್ಪ್ರದೇಶವು ತಟ್ಟೆಯಾಗಿರುವದರಿಂದ, ಅದರ ಮಧ್ಯ, ಮನೆಯು ಕಟ್ಟಲ್ಪಟ್ಟಿರುವದು. ನಸಿರುಲ್ಲಾ ಪಾಷಾರವರ ಮನೆಯು

ಈ ನಮೂನೆಯ ಮನೆಗಳಿಗಿಂತ ಕೊಂಚ ಚಿಕ್ಕದಾಗಿತ್ತು. ಅದರಲ್ಲಿದ್ದ ಮೂರು ಕೊಠಡಿಗಳಲ್ಲಿ ದೊಡ್ಡದಾದುದೊಂದು, ಬಂದವರನ್ನು ಕುಳ್ಳಿರಿಸುವ ಜಕ್ಕೆ ಮಾತ್ರ ಸೇವಿಸಲ್ಪಟ್ಟಿತ್ತು. ಉಳಿದ ಇನ್ನೆರಡರಲ್ಲಿ, ಒಂದು ಊಟದ ಮನೆಯಾಗಿಯೂ ಮತ್ತೊಂದು ಮಲಗುವ ಮನೆಯಾಗಿಯೂ ಇತ್ತು. ನಾವು ಊರಿನಿಂದ ಇಲ್ಲಿಗೆ ಬಂದಾರಭ್ಯ ಅಥಮ್‌ಬೇಯೂ ಅವರ ಪತ್ನಿಯೂ ಈ ಮನೆಯನ್ನು ಸುಂದರವಾಗಿ ಅಲಂಕರಿಸಿಕೊಂಡು ಇಲ್ಲಿಯೇ ವಾಸಿಸುತ್ತಿದ್ದರು. ಫ್ರೆಂಚರು ಶೃಂಗರಿಸಿ ಕೊಳ್ಳುವಂತೆ ಮಧ್ಯೆ ಒಂದು ಚಿತ್ರಕೆಲಸದ ದೊಡ್ಡ ಮೇಜನ್ನೂ ಗೋಡೆಗೆ ಒರಗಿಸಿ ಹನ್ನೆರಡು ಕುರ್ಚಿಗಳನ್ನೂ ಎರಡು ಕೌಚ್‌ಗಳನ್ನೂ ಹಾಕದೆ, ಪುರಾತನ ತುರ್ಕೀ ನಮೂನೆಯನ್ನೇ ಅನುಸರಿಸಿ, ತುರ್ಕೀ ಕೌಚ್, ಮುಸ್ನದ್‌ನ್ನೂ, ಲಘುವರ್ಣದ ಪರದೆಗಳನ್ನೂ ಹಾಕಿಕೊಂಡಿದ್ದರು. ಇವಿಷ್ಟರಲ್ಲೂ, ಬಹುಕಾಲ ತಾವು ಫ್ರಾನ್ಸಿನಲ್ಲಿದ್ದುದರ ಪ್ರತಿಫಲವಾಗಿ, ತಮಗೆ ಅವಶ್ಯಕವಾಗಿ ಕಂಡುಬಂದ ಒಂದೆರಡು ಬದಲಾವಣೆಗಳನ್ನು ಯೂರೋಪಿಯನ್ ರೀತಿಯಲ್ಲಿ ಮಾಡಿಕೊಂಡಿದ್ದರು. ಅವರ ಅಭಿರುಚಿಯಿಂದಲೇ, ಮನೆಯ ಸುತ್ತಲೂ ಇದ್ದ ಸಮಪ್ರದೇಶದಲ್ಲಿ, ಬಿಸಿಲು ಕಾಲದಲ್ಲಿ ಸಹ, ವಿಧವಿಧವಾದ ಪುಷ್ಪಗಳು ಅರಳುತ್ತಿದ್ದ ಉದ್ಯಾನವನವು ಯಾವಾಗ್ಯೂ ಹಸುರಿನಿಂದ ಕಂಗೊಳಿಸುತ್ತಿತ್ತು. ಇದೂ ಅಲ್ಲದೆ ನಾಲ್ಕೂ ಕಡೆಯಲ್ಲೂ ದೊಡ್ಡ ವೃಕ್ಷಗಳು ಬೆಟ್ಟಸೀಮೆಯ ಒಂದು ಸುಂದರವಾದ ಅರಣ್ಯದಂತೆ ಶೋಭಿಸುತ್ತಿತ್ತು.

ಕತ್ತಲಲ್ಲಿ ಈ ವೃಕ್ಷಗಳನ್ನೇ ಹಾದು ನಾವು ಹೋಗಬೇಕಾಗಿತ್ತು. ಬೇಗನೆ ನಾವು ತೋಟದ ಹಿಂಭಾಗವನ್ನು ಸೇರಿದೆವು. ಇಬ್ಬರು ಹಬ್ಸಿಗಳು ಲಾಂದ್ರಗಳನ್ನು ಹಿಡಿದುಕೊಂಡು ಮುಂದೆ ಮುಂದೆ ಹೋಗುತ್ತಿದ್ದರು. ಮನೆಯ ಕಂಬಗಳಿಗೆ ದೀಪಗಳನ್ನು ತಗಲುಹಾಕಿದ್ದುದರಿಂದ ನಾಲ್ಕೂಕಡೆ ಬೆಳಕು ಚೆನ್ನಾಗಿ ವ್ಯಾಪಿಸಿತ್ತು. ಖಾಸಮ್ ಅಫಂದಿಯವರು, ಜಾಜೀಬಳ್ಳಿ ಹಬ್ಬಿಸಲ್ಪಟ್ಟಿದ್ದ, ತೋಟದ ಒಂದು ಕೊನೆಗೆ ಹೊರಟುಹೋದರು. ದಾಸಿಯರಲ್ಲಿ ಬಹುಮಂದಿ ಅವರೊಡನೇ ಇದ್ದರು. ನಾವು ಇತ್ತಕಡೆ ನಾಫಿಜ್‌ಬೇಯ ಕೈಚಳಕವನ್ನು ನೋಡಲು ನಿರೀಕ್ಷಿಸಿಕೊಂಡಿದ್ದೆವು. ಅವನು ಔದತ್ತನನ್ನು, ಬುರುಜಿನ ಮೇಲೆ ಬೆಳಕನ್ನು ಹೊತ್ತಿಸಿ ಗೂಬೆಯನ್ನು ಹೆದರಿಸಿ ಈಚೆಗೆ ಹಾರಿಬರುವಂತೆ ಮಾಡಲು ಕಳುಹಿಸಿದನು. ಒಂದು ನಿಮಿಷದೊಳಗಾಗಿ

ಮುಸ್ನದ್ = ಒರಗು ದಿಂಬು.

ಹಬ್ಸಿ = ಅಬ್ಸೀನಿಯಾದವರು. ತುರ್ಕಿಯಲ್ಲಿ ಅನೇಕರು ಗುಲಾಮರಾಗಿದ್ದರು.

ಬುರುಜಿನ ಮೇಲಿಂದಾಗ ಗುಂಡನ್ನು ಹಾರಿಸಿದ ಶಬ್ದ ನಮ್ಮ ಕಿವಿಗೆ ಬಿತ್ತು. ನಾಫಿಜ್‌ಬೇಯು ಗುಂಡನ್ನು ಹಾರಿಸಿದನು. ಆದರೆ ತಾಗಲಿಲ್ಲ. ಗೂಬೆಯೂ ಹಾರಿಹೋಗಿತ್ತು. [illegible] ಎರಡನೆಯ ಬಾರಿ ಮದ್ದನ್ನು ಹಾರಿಸಲಿಲ್ಲ.
ನಾಫಿಜ್ ಬೇ— ಇನ್ನು ಹೋಗಬಹುದು. [illegible] ಹೆದರುವದರಿಂದ ಇನ್ನು ಇಷ್ಟರವರೆಗೆ [illegible]. ಅದ್ಯಾಗ್ಯೂ ನಮ್ಮ [illegible] ಬಹುದು. ಆದರೆ, ಹುಡುಗರೇ, ನಮ್ಮ ಶಿಕಾರಿಯಲ್ಲಿ ಏನೂ ಸ್ವಾರಸ್ಯವುಂಟಾಗಲಿಲ್ಲ. ನಿಮಗೆಲ್ಲಾ ನಿರಾಶೆಯಾಯಿತು. ಹೇಳಿ, ಈಗೇನಾಗಬೇಕು.
ಜೊಹರಿನ್— (ಹತ್ತಿರ ಬಂದು ನಾಫಿಜ್‌ಬೇಯನ್ನು ಹಿಡಿಕೊಳ್ಳುತ್ತಾ) ಮಾವಮ್ಮನವರೇ, ಹಣ್ಣಿನ ಮರಗಳಿರುವ, ತೋಟದ ಆ ಭಾಗಕ್ಕೆ ಹೋಗುವದರಲ್ಲಿ ಅಡ್ಡಿಯೇನೂ ಇಲ್ಲತಾನೇ. ಅಲ್ಲಿ ಹೋಗಿ, ಕತ್ತಲಲ್ಲಿ ಓಡುವದರಲ್ಲಿ ಬಹಳ ಆನಂದವಿರುವದು.
ನಾಫಿಜ್ ಬೇ— ನನಗೇನೂ ಅಭ್ಯಂತರವಿಲ್ಲ. ಆದರೆ ನಿನ್ನೊಡನೆ ಹೋಗಲು ಮತ್ಯಾರಿಗೂ ಧೈರ್ಯವಿರಲಾರದು.
ವಲಿಯಾಖಾನನ್— ನಾನು ಹೋಗುತ್ತೇನೆ. ಹಾಜಿರೆಯೂ ಸಹ- (ನನ್ನ ಕಡೆ ತಿರುಗಿ) ಏನಮ್ಮಾ,
ನಾಫಿಜ್ ಬೇ- (ನನ್ನ ಕಡೆ ನೋಡಿ ನಸು ನಗುತ್ತಾ) ಏನು, ಹಾಜಿರೆ, ಭೂತ ಪ್ರೇತ ಸರ್ಪಗಳನ್ನು ಕಂಡು ಹೆದರದಿರುವಷ್ಟು ಧೈರ್ಯವಿರುವದೋ. ಇದ್ದರೆ ನಡಿ, ಹೋಗೋಣ.

ನಾನು ತಕ್ಷಣವೇ ಒಪ್ಪಿಕೊಂಡೆನು. ಈಗ ಹೋಗಬೇಕೆಂದಿದ್ದ ತೋಟವು ಗುಂಪಿನ ಒಂದು ಮಗ್ಗುಲಲ್ಲಿತ್ತು. ಅದನ್ನು ಫಲವೃಕ್ಷಗಳ ಅರಣ್ಯ [illegible] ನಡುದಾಗಿತ್ತು. ಈ ಮನೆಯ ಮೊದಲ ಯಜಮಾನನ ಕಾಲದಲ್ಲಿ [illegible] ಹಿಂಭಾಗದ ತೋಟದಂತೆ ಪುಷ್ಪೋದ್ಯಾನವಾಗಿದ್ದಿ[illegible] [illegible]. [illegible] ಮಧ್ಯದಲ್ಲಿದ್ದ ಒಂದು ಬಂಡೆಯು ಗುಹೆಯ ಆಕಾ[illegible] [illegible] ಬಂದು ಬೇರೊಂದು ಕ[illegible] [illegible] ರಮ್ಯವಾಗಿ ರಚಿಸಲ್ಪಟ್ಟಿತ್ತು.

ಎಲ್ಲರಿಗೂ ಆಗ [illegible] ಮನಸ್ಸಾಗಿದ್ದುದರಿಂದ ಎಲ್ಲರೂ ಧೈರ್ಯತಾಳಿ ಆ ತೋಟದ ದ್ವಾರದತ್ತ ಬಂದು ನಿಂತೆವು. ನಾಫಿಜ್ ಬೇಯ[illegible] ಬಾಗಿಲನ್ನು ತೆಗೆದನು. ನಾವೆಲ್ಲರೂ ಸಂತೋಷಾಧಿಕ್ಯದ ದೆಸೆಯಿಂದ ಕಂ[illegible] ಸುತ್ತಾ ಒಳಗೆ ಪ್ರವೇಶಿಸಿದೆವು. ಗಾಢಾಂಧಕಾರವಾಗಿತ್ತು. ಫಲವೃಕ್ಷಗ[illegible]

ಬುರುಜು= ಭುವನೇಶ್ವರಿ=Tower

ಚಿಕ್ಕದಾಗಿದ್ದವು. ನಾಲ್ಕು ಕಡೆ ಉದ್ದವಾಗಿ ಹುಲ್ಲು ಬೆಳೆದು ನಡೆಯಲು ಕಷ್ಟವಾಗುತ್ತಿತ್ತು. ಅಲ್ಲಿ ಹಾವುಗಳು ಇದ್ದರೆ ವಿಶೇಷ ಖಂಡಿತವಾಗಿಯೂ ನಾವೆಲ್ಲರೂ ಅವುಗಳಿಗೆ ತುತ್ತಾಗುತ್ತಿದ್ದೆವು. ಎಡೆಯರಾದವರನ್ನು ಅವಳ ಮಕ್ಕಳು ಹಿಮ್ಮೆಟ್ಟಿಸಿದವು ಮುಂದೆ ಹಿಂದೆ ಎಳೆದುಕೊಂಡು ಹೋಗುತ್ತಿದ್ದರು. ಅವಳು ಥಳಿಗೆಯಿಂದಲ ದಾರಿಗೆ ಹುಲ್ಲು ಸುತ್ತಿ ಕೊಳ್ಳುತ್ತಿದ್ದುದರಿಂದಲೂ, ಮರದ ಕೊಂಬೆಗಳು ತಗಲುತ್ತಿದ್ದುದರಿಂದಲೂ ನರಳುತ್ತಿದ್ದಳು. ನಾನು ನಾಫಿಜ ಬೇಯಲ್ಲಿ ಪೂರ್ಣನಂಬಿಕೆಯು ಇಲ್ಲದೆ ಅವನೊಡನೆಯೇ ಮೌನವಾಗಿ ನಡೆದು ಹೋಗುತ್ತಿದ್ದೆನು. ಏಕೆಂದರೆ ಎಲ್ಲಿಯಾದರೂ ಮರದ ಕೊಂಬೆ ಅಡ್ಡ ಬಾಗಿದ್ದರೆ ಎತ್ತುತ್ತಿದ್ದನು. ಕಾಲುಜಾರಿದರೆ ಸಹಾಯಕ್ಕೆ ಬರುತ್ತಿದ್ದನು. ಅಂತೂ ದೈವಯೋಗತ ಎನ್ನುತ್ತಾ ನಾವು ಕತ್ತಲಲ್ಲಿ ಭಯಾನಕವಾಗಿ ಕಾಣುತ್ತಿದ್ದ ಆ ಬಂಡೆಯ ಬಳಿ ಬಂದೆವು. ಟಾಂ, ಮೊಸೆಸ್ ಇಬ್ಬರೂ ಬಂಡೆಯ ಮೇಲೆ ಹತ್ತಲು ಹೊರಡಲಾಗಿರಲು ನಾಫಿಜ ಬೇಯು ಅವರನ್ನು ತಡೆದನು.

ನಾಫಿಜ ಬೇ— ಹುಡುಗರಾ, ಹುಷಾರಾಗಿ, ಕತ್ತಲಲ್ಲಿ ಅದರಮೇಲೆ ಹತ್ತಬೇಡಿ. ಈ ಬಂಡೆಯು ಬಹಳ ಕಡಿದಾಗಿರುವದು. ಅದೂ ಅಲ್ಲದೆ ಅತ್ತ ಕಡೆಯಲ್ಲಿ ಕೆಳಕ್ಕೆ ಬಿದ್ದರೆ, ಸುಳಿಗೆ ಹೋಗಬೇಕಾಗುವದು— ಅಥವಾ ತಲೆಯೊಡೆದು ಕೊಳ್ಳಬೇಕಾಗುವದು. ಅದರ ಬದಲು ಒಳಗೆ ಹೋಗಿ ಗುಹೆಯನ್ನು ಪರೀಕ್ಷಿಸುವುದು ಒಳ್ಳೆಯದು. ನನಗೆ ಜ್ಞಾಪಕವಿದ್ದ ಹಾಗೆ ಅಲ್ಲೊಂದು ಮೂಲೆಯಲ್ಲಿ ಒಂದು ದೀಪವಿಡುತ್ತಿತ್ತು. ಅದರಿಂದ ನಾನು ಯಾವಾಗಲೂ ಮಣಿಗಳನ್ನು ತೆಗೆದು ಕೊಳ್ಳುತ್ತಿದ್ದೆನು. ಈಗ ಅದು ಅಲ್ಲಿರುವದೋ ಇಲ್ಲವೋ ಗೊತ್ತಿಲ್ಲ.

ಮೊಸೆಸ್— ಈಗಲೂ ಅದು ಅಲ್ಲೇ ಇರುವದು. ಬನ್ನಿ, ಹೋಗೋಣ.

ಹೀಗೆಂದು ಅವನು ಲಾಂದ್ರವನ್ನು ತೆಗೆದುಕೊಂಡು ತನ್ನ ತಾಯಿಯನ್ನು ಎಳೆದುಕೊಂಡು ಒಳಗೆ ಹೋದನು. ಮಕ್ಕಳು ಹುಡುಗರೂ ಹಿಂದೆಯೇ ಹೋದರು. ನಾಫಿಜ ಬೇಯು ಅಲ್ಲಿಯೇ ನಿಂತು ನನ್ನ ಕಡೆ ನೋಡಿದನು.

ನಾಫಿಜ ಬೇ— ಇಂದು ಸಂಜೆ ನೀವೂ ಮಕ್ಕಳಂತಾಗಲು ಆಶಿಸುತ್ತೀರೋ ಅಥವಾ ನಾವಿಬ್ಬರೂ ಬೇರೆಕಡೆ ಹೋಗಿ, ಅವರು ಹೊರಗೆ ಬರುವುದನ್ನು ಕಾದಿರೋಣವೇ.

ನಾನು — ನಡೆಯಿರಿ, ಸರೋವರದ ಕಡೆ ಹೋಗೋಣ.

ಗುಹೆಯೊಳಗೆ ಹೋಗಲು ನನಗೆ ಭಯವಾದುದರಿಂದ ನಾವಿಬ್ಬರೂ

ಬಂಡೆಯ ಮತ್ತೊಂದು ಭಾಗಕ್ಕೆ ಹೋದೆವು. ನಾನು ಸರೋವರದ ದಡದಲ್ಲಿ ಕುಳಿತುಕೊಂಡು ಅಲ್ಲಿ ಇಲ್ಲಿ ನೋಡುತ್ತಿದ್ದೆನು. ಈ ಸ್ಥಳದಲ್ಲಿ ಹಣ್ಣಿನ ಮರಗಳೊಂದಾದರೂ ಇರಲಿಲ್ಲ. ಉದ್ದುದ್ದವಾದ ಹುಲ್ಲು ಬೆಳೆದು ಕಾಡು ಹೂಗಳಿಂದ ತುಂಬಿಹೋಗಿತ್ತು. ಒಂದೇ ಒಂದು ದೊಡ್ಡ ಮರವು ಮಾತ್ರ ನಮ್ಮ ಹತ್ತಿರ ಇತ್ತು. ಗಾಳಿಗೆ ಅದರ ಕೊಂಬೆಗಳು ನಮ್ಮ ಮೇಲೆ ತೂಗಾಡುತ್ತಿದ್ದವು. ಸುತ್ತಲೂ ಅತಿ ನಿಶ್ಶಬ್ದತೆ ಆವರಿಸಿಕೊಂಡಿದ್ದುದರಿಂದ ವಲಿಯಾಖಾನಮ್‌ಳ, ಮತ್ತು ಅವಳ ಮಕ್ಕಳ ಕೂಗು ಮಧ್ಯೆಮಧ್ಯೆ ಚಿತ್ತವಿಕ್ಷೇಪಮಾಡುತ್ತಲಿತ್ತು

ಸಾಫಿಜ್‌ಬೇ— (ನಕ್ಕು) ವಲಿಯುಳು ಎಷ್ಟು ಸಂತೋಷದಿಂದಿರುವಳು! ಇಷ್ಟು ಸಣ್ಣ ಹುಡುಗಿಯನ್ನು ಅವಳಿಗಿಂತ ವಯಸ್ಸಿನಲ್ಲಿ ಎಷ್ಟೋ ದೊಡ್ಡವನಾದ ಗಂಡಸಿಗೆ ಕೊಟ್ಟು ಮದುವೆಮಾಡಲು ಅವಳ ತಂದೆಗೆ ಸಂಕೋಚವಾಗಲಿಲ್ಲವೇ.

ನಾನು — ಅವರು ಏತಕ್ಕೆ ಹಾಗೆ ಮಾಡಿದರು ಮತ್ತು ಅಥಮ್‌ಬೇಯವರು ಹದಿನಾಲ್ಕು ವರ್ಷದ ಹುಡುಗಿಯನ್ನು ಮದುವೆಯಾಗಲು ಹೇಗೆ ಒಪ್ಪಿದರು.

ನಾಫಿಜ್‌ಬೇ— ವಿಷಯವೇನೆಂದರೆ-ವಲಿಯಾಳ ತಂದೆಯು ಅನಾತೋಲಿಯದ ದೂರದೊಂದು ಸೂಬೆಗೆ ಗೌರ್ನರಾಗಿ ನೇಮಿಸಲ್ಪಟ್ಟು, ಇಪ್ಪತ್ತು ವರ್ಷಗಳು ಅಲ್ಲೇ ಇರಬೇಕಾಗಿದ್ದುದರಿಂದ, ಅಲ್ಲಿ ಒಳ್ಳೇ ವರನು ಸಿಕ್ಕುತ್ತಿರಲಿಲ್ಲವಾದ ಕಾರಣ,ತಾವುಹೋಗುವದಕ್ಕೆ ಮೊದಲೇ ವಲಿಯಳಿಗೆ ಮದುವೆ ಮಾಡುವದು ಒಳ್ಳೆಯದೆಂದು ಪ್ರಾಯಶಃ ಯೋಚಿಸಿರಬಹುದು. ಅವಮ್ಮಾವನು ಹುಡುಗಿಯನ್ನು ಒಪ್ಪಿದ್ದುದರಿಂದ ಅಥಮ್‌ಬೇಯು ತುರ್ಕೀ ಪದ್ಧತಿಗನುಸಾರವಾಗಿ ಎದುರು ಹೇಳದೆ ಮದುವೆಮಾಡಿ ಕೊಂಡಿರಬಹುದು.

ನಾನು — (ನಕ್ಕು) ತನರ ಗಂಡಸಿಂಡರಲ್ಲಿ ಅತ್ಯಂತ ಅನುರಾಗವಿರುವದರಿಂದ ಈ ವಿವಾಹದಿಂದ ಅವರಿಗೇನೂ ಪಶ್ಚಾತ್ತಾಪವಿಲ್ಲ.

ಸಾಫಿಜ್‌ಬೇ — (ಯೋಚಿಸಿ) ಹೌದು ಒಂದು ರೀತಿಯಾದ ಪ್ರೇಮವಿರುವದು ಅಥಮ್‌ಬೇಯು ವಲಿಯಳನ್ನು ಹೆಂಡತಿಯಂತೆ ಕಾಣುವದಕ್ಕಿಂತ ಹೆಚ್ಚಾಗಿ, ಮುದ್ದಿನಲ್ಲಿ ಬೆಳೆದು ಕೊಂಚ ಕೆಟ್ಟುಹೋಗಿರುವ ಒಂದು ಮಗುವನ್ನು ಕಂಡಂತೆ ಕಾಣುತ್ತಾರೆ. ಅತ್ತಕಡೆ, ವಲಿಯಳು ಅವರನ್ನು ತಂದೆರೆ ಹೆದರುತ್ತಾ, ತಿಳಿಯಲಿ ತಿಳಿಯದಿರಲಿ ಅವರನ್ನು ಭಕ್ತಿಭಾವದಿಂದ ಕಾಣಬೇಕೆಂಬಷ್ಟುಮಾತ್ರ ಅರಿತಿರುವಳು. ಇದು, ನಾನು ಚಿಕ್ಕ ವಯಸ್ಸಿನಲ್ಲಿ ನನ್ನ ಅರಬ್ಬೀಪುಸ್ತಕಗಳನ್ನು ಪೂಜಿಸುತ್ತಿದ್ದಂತಾಯಿತು.

ನಾನು—(ಪರೇಕದಿಂದ) ಆದರೆ ವಯಸ್ಸಾದ ಹಾಗೆಲ್ಲಾ ಅದನ್ನು ಅರ್ಥ ಮಾಡಿ ಕೊಳ್ಳುತ್ತಾ ಬಂದಿರಿ.

ನಾಫಿಜ್ ಬೇ—ಹಾಗಾದರೆ, ಪಲಿಯಳು ಸಹ ಹಾಗೆಯೇ ಒಂದಾನೊಂದು ಕಾಲಕ್ಕೆ ಅಥವರ್ ಬೇಯ ಸ್ವಭಾವದೊಡನೆ ಹೊಂದಿ ಹೋಗುವಳೆಂದಲ್ಲವೇ ? ಹನ್ನೊಂದು ವರ್ಷಗಳು ಜತೆಯಲ್ಲಿದ್ದಾಗ್ಯೂ ಸ್ವಭಾವವನ್ನು ತಿಳಿದುಕೊಳ್ಳದಿರುವಂಥಾ ಸ್ತ್ರೀಯನ್ನು ನಾನೆಂದಿಗೂ ಮದುವೆಯಾಗಲಾರೆನು.

ನಾನು—ಆದರೆ ನೀವು ಅಥವರ್ ಬೇಯ ಹಾಗಲ್ಲ.

ಬೇಗನೆ ಇಷ್ಟು ಹೇಳಿ ಸುಮ್ಮನಾಗಿ ಹೋದೆನು.

ನಾಫಿಜ್ ಬೇ—ನಿಜವನ್ನಾಡುತ್ತಿ. ಅಂದರೆ, ನನ್ನ ಹೆಂಡತಿಯು ನನ್ನನ್ನು ಕಂಡರೆ ಹೆದರುವುದಿಲ್ಲವೆಂದು ನಿನ್ನರ್ಥವಲ್ಲವೇ. ನನ್ನ ವಿಷಯ ಹೀಗೆ ನೀನು ಯೋಚಿಸುವುದಾದರೆ, ನೀನೇಕೆ ಕೆಲವು ದಿನಗಳಿಂದ ನನ್ನನ್ನು ಕಂಡರೆ ತಪ್ಪಿಸಿಕೊಂಡು ತಿರುಗುತ್ತಿರುವೆ! ಹಾಜಿರೆ, ನನ್ನ ಪ್ರಿಯ ಹಾಜಿರೆ, ಸತ್ಯವಾಗಿ ಹೇಳು. ನೀನು ದಾವೂದನನ್ನು ಪ್ರೀತಿಸುತ್ತೀಯಾ.

ನಾನು ಸುಮ್ಮನಿದ್ದುದರಿಂದ ಅವನು ಎದ್ದು ನನ್ನ ಹತ್ತಿರ ಬಂದನು.

ನಾಫಿಜ್ ಬೇ—ಹಾಜಿರೇ, ನಾನು ನಿನ್ನನ್ನು ಮದುವೆಯಾಗಲು ಇಚ್ಛಿಸುತ್ತೇನೆ. ನೀನಿದನ್ನು ತಿಳಿದೂ ಇರುವೆ. ಬೇರೊಬ್ಬನ ಮೇಲೆ ನಿನ್ನ ಮನಸ್ಸು ಹೋಗಿರುವದೇನೂ, ನನಗಿಂತ ಅವನನ್ನು ಹೆಚ್ಚು ಪ್ರೀತಿಸುತ್ತೀಯೆಂದೂ ನೀನು ಧೃಢವಾಗಿ ಹೇಳಿಬಿಟ್ಟರೆ, ಇನ್ನು ನಾನು ಎಂದಿಗೂ ಈ ವಿಷಯವಾಗಿ ನಿನ್ನನ್ನು ಪೀಡಿಸುವದಿಲ್ಲ. ನಿನ್ನ ಬಾಯಿಂದ ಉತ್ತರವನ್ನು ತಿಳಿಯಲಪೇಕ್ಷಿಸುತ್ತೇನೆ.

ತಕ್ಷಣವೇ ನನಗೆ, ಇನ್ನು ತಪ್ಪಿಸಿಕೊಳ್ಳುವದಕ್ಕಾಗುವದಿಲ್ಲವೆಂದೂ, ಎಲ್ಲವನ್ನೂ ಹೇಳಿಕೇಳಿ ಸರಿಪಡಿಸಿಕೊಳ್ಳುವ ಸಮಯವು ಇವತ್ತು ಬಂದೊದಗಿರುವದೆಂದೂ ಮನಸ್ಸಿಗೆ ತೋರಿತು.

ನಾನು—ಇದು ಎಂದಿಗೂ ಸಾಧ್ಯವಿಲ್ಲವೆಂಬುದು ನಿಮಗೆ ಚೆನ್ನಾಗಿ ತಿಳಿದಿರುವದು-ಎಂದರೆ, ನಾನು ನಿಮ್ಮ ಭಾರ್ಯೆಯಾಗಲಾರೆನೆಂಬುದು.

ನಾಫಿಜ್ ಬೇ—(ಮಾತನ್ನು ತಡೆದು ಉದ್ರೇಕದಿಂದ) ಏತಕ್ಕೆ ? ಬೇರೊಬ್ಬನನ್ನು ಪ್ರೀತಿಸುತ್ತೀಯೆಂದೋ ? ಇವತ್ತು ಸೋಮವಾರವು. ಹವಿದಾದಳು ಗುರುವಾರ ಬರುವಳು. ನೀನು ಸ್ವತಃ ಒಪ್ಪಿ ಹೋಗುವೆಯೆಂದು ನನಗೆ ನಿರ್ಧಾರವಾಗುವವರೆಗೂ ನಾನೆಂದಿಗೂ ನಿನ್ನನ್ನು ಕಳುಹಿಸುವದಿಲ್ಲ. ಹಾಜಿರೆ, ಬರಿಯ ಊಹೆಗಳಿಂದ ಎಲ್ಲವನ್ನೂ ನಂಬುವಂಥಾ ಮೂಢನೇನೂ ನಾನಲ್ಲ.

ಅವರೂ ಅಲ್ಲದೆ ನನ್ನ ಸಂಪತ್ತಿಗೋಸ್ಕರ ನನ್ನನ್ನು ಪ್ರೀತಿಸುವಂಥಾ ನೀಚ ಹುಡುಗಿಯು ನೀನಲ್ಲವೆಂಬುದನ್ನು ನಾನು ಚೆನ್ನಾಗಿ ಅರಿತಿರುವೆನು. ನಿನ್ನ ಹೃದಯದಲ್ಲಿ ನನಗೂ ಕೊಂಚ ಸ್ಥಾನಕೊಟ್ಟಿರುವೆಯೆಂದು ಈಚೆಗೆ ನನಗೆ ತೋರಿರುವುದಲ್ಲದೆ, ಬರಬರುತ್ತಾ ನನ್ನನ್ನು ಸಂಪೂರ್ಣವಾಗಿ ಪ್ರೀತಿಸುವೆಯೆಂಬಾಶೆಯೂ ಇದೆ. ನಿನ್ನನ್ನು ದಾವೂದನೊಡನೆ ಅಂದು ನೋಡಿದಾಗ, ನೀನು ನನಗೆ ಮೋಸ ಮಾಡುತ್ತಿರುವೆಯೆಂಬ ಸಂಶಯ ಉಂಟಾಗಿ ಕೋಪದಿಂದ ನನ್ನ ಬುದ್ಧಿಯೇ ಸರಿಯಾಗಿರಲಿಲ್ಲ. ಆದರೆ ಯಾವ ಕಾರಣದಿಂದಲೋ, ತಿಳಿಯದು, ಈಚೆಗೆ ಆ ಸಂಶಯವು ಮನಸ್ಸಿನಿಂದ ದೂರವಾಗುತ್ತ ಬಂದು. ನೀನಾಗಿ ನೀನು ಎಂದಿಗೂ ನನ್ನನ್ನು ವಂಚಿಸಲಾರೆಯೆಂಬ ನಂಬಿಕೆಯುಂಟಾಗಿದೆ. ಒಂದು ವೇಳೆ ನನ್ನ ಅತ್ಯಾಶೆಯು ನನ್ನನ್ನು ಮೋಸಗೊಳಿಸುತ್ತಿರಬಹುದು, ಅಥವ ಕಾಮಜ್ವರದಿಂದ ತಿ[illegible]ರುವ ಈ ನನ್ನ [illegible]ಲಿಗೆ ಬೇರೆ ಕಾರಣವೇ ಇರಬಹುದು. ಆದರೆ, ನೀನು ನಿಜವಾಗಿಯೂ ಆ ಮನುಷ್ಯನನ್ನು ಪ್ರೀತಿಸುವದಾದರೆ ನಾನು ಈಗಲೇ ನನ್ನ ಆಶೆಯನ್ನೆಲ್ಲಾ ತ್ಯಾಗ ಮಾಡಿಬಿಡುವೆನು. ಇಲ್ಲವಾದರೆ (ನಾನು ಆಶಿಸಿ[illegible] [illegible]), ದಾವೂದನು ಅಲ್ಲಿ ಖಂಡಿತವಾಗಿಯೂ ನಿನ್ನನ್ನು ವಿವಾಹಯಾಗುವೆನು.

ನಾನು ಸುಮ್ಮನಿದ್ದೆನು. ನನ್ನ ಜತೆಗಾತಿಯರ ಮಾತಿನ ಧ್ವನಿಯು ಸ್ಪಷ್ಟವಾಗಿ ಕಿವಿಗೆ ಬೀಳುತ್ತಿತ್ತು. ಇನ್ನು ಒಂದು ನಿಮಿಷದೊಳಗಾ[illegible] ಅವರು ನಮ್ಮ ಹತ್ತಿರ ಬಂದು ಬಿಡುವರಾಗಿದ್ದರು. ನಾಥೂರಾ[illegible] [illegible] [illegible] ನೋಡಿದನು.

ಹಾಜಿರೆ—([illegible]) ಉತ್ತರವನ್ನು ಹೇಳು. ಹಾಜಿರೆ, ನೀನು ದಾವೂದನನ್ನು ಪ್ರೀತಿಸುತ್ತೀಯಾ?

ನಾನು—([illegible]) [illegible] ಇಲ್ಲ. ಆದರೂ ನಾನು ನಿಮ್ಮ ಪತ್ನಿಯಾದರೆ, ನಮ್ಮ ಬಂಧುಗಳೆಲ್ಲಾ ವಿರೋಧಿಸುವಂಥಾ ವಿವಾಹಕ್ಕೆ ನಾನು [illegible].

[illegible]

ನಾನು—([illegible]) [illegible]

ಹಾಜಿರೆ—[illegible]

ಬಿಟ್ಟುಬಿಟ್ಟು) ನಾನು ಹಾಗೆ ತಿಳಿದಿದ್ದೆ—ಇವತ್ತು ರಾತ್ರಿಯೇ ಅಮ್ಮನಿಂದಲೆ ಈ ವಿಷಯ ಪ್ರಸ್ತಾಪಿಸಬೇಕೆಂದಿದ್ದೇನೆ.

ಹಬೀಬುಲ್ಲಾಖಾನನ್—ಹೀನಬ್ಬರು ಎಷ್ಟು ಬೇಗನಾಗಳು! ನಮ್ಮೊಡನೇಕೆ ಬರಲಿಲ್ಲ? ಗುಹೆಯೊಳಗೆ ಬಹಳ ತಮಾಷೆಯಾಗಿತ್ತು.

ನಾಜಿರಾಬೀ—ಬಹಳ ಸಂತೋಷ. ಆದರೆ ನನಗೀಗ ಹಸುರಾಗಿ ಹೋಗಿ ಕುಳಿತುಕೊಂಡು ಕಲ್ಲಿನ ಗಂಟುಗಳಿಂದ ಬೊಟ್ಟುಗಳನ್ನೂ ಮರಿಗಳನ್ನೂ ತೆಗೆದುಕೊಳ್ಳುವುದರಲ್ಲಿ ಆನಂದವಿಲ್ಲ. ಇನ್ನು ಹಿಂತಿರುಗಿ ಹೊರಡಬೇಕು. ಅಮ್ಮಾವರು ಕಾತರಿಸುತ್ತಿರುತ್ತಾರೆ. ಇಬ್ಬರೂ ನಮ್ಮೊಡನೆ ಬನ್ನಿ.

ನಾವು ನಾಲ್ವರೂ ಹಿಂತಿರುಗಿದೆವು. ಉದ್ಯಾನವನದಲ್ಲಿನ ಮರದ ಕೆಳಗೆ ದಾಸಿಯರೆಲ್ಲರೂ ಕಣ್ಣುಮುಚ್ಚಾಲೆಯನ್ನಾಡುತ್ತಿದ್ದರು. ಖಾನನ್ ಅಫಜಲರವರು, ನಾವು ಅವರನ್ನು ಎಲ್ಲಿ ಬಿಟ್ಟು ಹೋಗಿದ್ದೆವೋ ಅಲ್ಲೇ ಇದ್ದರು. ಅಂಜಿಕೆಯಿಲ್ಲದೆ ಅದೇ ಸ್ಥಳದಲ್ಲಿ, ಯಾವುದೋ ಒಂದು ಹಳೆಯ ಪುಸ್ತಕವನ್ನು ಓದುತ್ತಿದ್ದರು. ಖಾನನ್ ಅಫಜಲರವರು ಬಹು ಆಸಕ್ತಿಯಿಂದ ಕೇಳುತ್ತಿದ್ದರು. ನಾವೂ ಅವರ ಹತ್ತಿರ ಹೋಗಿ ಕುಳಿತುಕೊಂಡೆವು. ಹುಡುಗರು ದಾಸಿಯರೊಡನೆ ಆಟದಲ್ಲಿ ಸೇರಿಕೊಂಡರು. ನಾಜಿರಾಬೀಯು ಹಾಗೆಯೇ ಕುಳಿತುಕೊಂಡು ನೋಡುತ್ತಿದ್ದಳು. ಆಗ ತಾನೇ ನಮ್ಮ ಬಳಿ ಬಂದು ಕುಳಿತುಕೊಂಡಿದ್ದ ಹಬೀಬಾಖಾನನ್‌ರು ಬಾಯಿ ತೆರೆದು ನಾಜಿರಾಬೀಯ ಹತ್ತಿರ ಕುಳಿತುಕೊಂಡರು

ಹಬೀಬಾಖಾನನ್—ಅಮ್ಮಾ, ನೀವು ಏನನ್ನು ಓದುತ್ತಿರುವಿರಿ?

ನಾನು—ಅಮ್ಮಾ, ಏನೂ ಇಲ್ಲ. ಇದು ಮಹಮ್ಮದ್ ಪಾಷಾರವರ ಮನೆಯ ಸೈನ್ಯದಲ್ಲಿನ ಒಬ್ಬ ಸರದಾರನ ಯುವತಿಯನ್ನು ಕುರಿತದ್ದು. ಮಹಮ್ಮದ್ ಪಾಷಾರವರು ತಮ್ಮ ಬಂಧುವೊಬ್ಬನಿಗೆ ಅವಳನ್ನು ಮದುವೆ ಮಾಡಿಕೊಡಲು ಇಷ್ಟಪಡುತ್ತಿದ್ದರಂತೆ. ಆದರೆ ಅವಳು ಬೇರೆ ಒಬ್ಬ ನಾಗರಿಕನನ್ನು ಪ್ರೀತಿಸುತ್ತಿದ್ದಳು. ಈ ಹುಡುಗಿಗೂ ಹುಡುಗನಿಗೂ ನಡೆದ ಪತ್ರಗಳೂ ಈ ಪುಸ್ತಕದಲ್ಲಿರುವುವೆಂದೂ ತಿಳಿದು ಬಂದಿದೆ. (ಖಾನನ್ ಅಫಜಲರು ಕಣ್ಣೀರು ಸುರಿಸಿದರು.) ಹುಡುಗಿಯ ಹತ್ತಿರ ಕಾಗದಗಳು ಸಿಕ್ಕಿದವು. ನಾನು ನೋಡಿದೆ. ಆ ಮಹಮ್ಮದ್ ಪಾಷಾರವರು ಅವರ ಬಂಧುವಿನೊಡನೆ ಹೊರಟುಹೋದ ನಂತರ ಅವಳು ಆತ್ಮಹತ್ಯೆ ಮಾಡಿಕೊಂಡಳು. ಮುಂದಿನ ಸಾವಿರದವರೆಗೆ ಅಲ್ಲಿದ್ದ ಒಂದು ಚಿತ್ರಪಟವು ಆ ವಿಚಾರವನ್ನು ಸ್ಪಷ್ಟವಾಗಿ ತಿಳಿಸುವಂತಾಗಿತ್ತು. ಈ ಹುಡುಗನಿಂದರಾದರೋ ಯಾವ ಸಂಬಂಧವೂ ಇಲ್ಲ. ಆದರೆ, ಈ

ಹುಡುಗಿಯಿಲ್ಲಿ! ಆಹಾ ಮದುವೆ ಹೇಗೆ ತಾನೆ ಆಗಬಲ್ಲದು!

ನಾಫಿಜ್‌ಬೇಯು ನಗಲಾರಂಭಿಸಿದನು.

ವಹೀದಾಖಾನಮ್—(ಕೊಂಚ ಸಿಟ್ಟಿನಿಂದ) ಏಕಾಗಬಾರದು? ಮಹಮೂದ್‌ಪಾಷಾರವರ ವಂಶಕ್ಕಿಂತ ಉತ್ತಮ ವಂಶದ ಹುಡುಗಿಯರು ಇಂಥ ವರನ್ನು ಮದುವೆಯಾಗಿದ್ದಾರೆ. ಎಲ್ಲಿ ಮದುವೆಯಾದರೇನು, ನಮ್ಮ ಅಂತಸ್ತೇನೂ ಕಡಿಮೆಯಾಗುವುದಿಲ್ಲ. ನಮ್ಮ ಪತಿಗಳ ಅಂತಸ್ತು ನಮ್ಮ ದೆಸೆಯಿಂದ ಇನ್ನೂ ಹೆಚ್ಚಲ್ಪಡುವುದು.

ಆದಿಲ—(ಘಾಬರಿಯಿಂದ) ಖಾನಮ್‌ಳೇ, ಸರಿಯಾಗಿ ಹೇಳುತ್ತಿ-ಆದರೆ-ಮಹಮೂದ್‌ಪಾಷಾರವರ ಮಗಳು ತನ್ನ ಚಿಕ್ಕಪ್ಪನ ಮಗನಿಗೆ ಮೊದಲಿಂದಲೂ ಗೊತ್ತು ಮಾಡಲ್ಪಟ್ಟಿದ್ದಳು.

ಖಾನಮ್‌ಆಫಂದಿ—(ಬೇಗನೆ) ನಿಜ. ಈ ಸಂಗತಿಯಿಂದ ಆ ವಿಚಾರವು ಬೇರೆ ರೀತಿಯಾಗುವುದು.

ವಹೀದಾಖಾನಮ್‌ಳಿಗೆ ಮಾತುಬಾರದೆ! ತಕ್ಷಣವೇ ಜವಾಬು ಕೊಟ್ಟಳು. ಆದರೆ ಹುಡುಗಿಯು ಅಲ್ಲಿ ಮದುವೆಯಾಗಲು ಇಷ್ಟಪಡದಿದ್ದರೆ, ಅವಳು ಯಾರನ್ನು ಇಷ್ಟಪಡುವಳೋ ಅವನಿಗೇ ಕೊಟ್ಟು ತಂದೆತಾಯಿಗಳು ಮದುವೆ ಮಾಡಬೇಕು. ನನ್ನ ಕಣ್ಣಿಗಾದರೋ ಸರ್ಕೇಶಿಯಾ ಸೈನಿಕರು ಪಾಷಾರ ಮಕ್ಕಳುಗಳಿಗಿಂತ ಹತ್ತರಷ್ಟು ಚೆನ್ನಾಗಿ ಕಾಣಿಸುವರು. ಮಹಮೂದ್‌ಪಾಷಾರ ಮಗಳ ಕೋರಿಕೆಯು ಶ್ಲಾಘನೀಯವಾಗಿರುವದು.

ನಾಫಿಜ್‌ಬೇ—(ನಕ್ಕು) ವಹೀದಾ, ಶಾಬಾಷ್ ಚೆನ್ನಾಗಿ ಹೇಳಿದೆ. ನೀನು ಇಂಥಹವನನ್ನೇ ಮದುವೆಯಾಗಿರುವದರಿಂದ ನ್ಯಾಯವಾಗಿ ಹೇಳಬಲ್ಲೆ. ಆಹಾ, ಅಲೀಬೇಯು ಈಗಿಲ್ಲಿದ್ದರೆ ನಿನ್ನ ಮಾತನ್ನು ಕೇಳಿ ಎಷ್ಟು ಸಂತೋಷ ಪಡುತಿದ್ದರೋ!

ಆದಿಲ್—(ವಹೀದಳನ್ನು ಸಂತೋಷಪಡಿಸುವ ಉದ್ದೇಶದಿಂದ)ಅಲೀಬೇಯು ಬಹಳ ದೊಡ್ಡ ಮನುಷ್ಯರು. ನಾನು ಅನೇಕ ಕಡೆ ತಿರುಗುತ್ತೇನಾದರೂ ಅವರಿಗಿಂತ ಚೆನ್ನಾಗಿರುವವರನ್ನು ಮತ್ತೆಲ್ಲಿಯೂ ನೋಡಿಲ್ಲ. ದೇವರು ಅವರನ್ನು ಎಲ್ಲಿಯಾದರೂ ಚೆನ್ನಾಗಿಟ್ಟಿರಲಿ. ನಿಮ್ಮಿಬ್ಬರಲ್ಲಿ ಪ್ರೇಮವು ಶಾಶ್ವತವಾಗಿರಲಿ.

ನಾಫಿಜ್‌ಬೇ—(ನಕ್ಕು) ಸಾಕು, ತಾಯಿ ಸಾಕು. ವಹೀದಳು ನನ್ನನ್ನು ಕ್ಷಮಿಸಿರುವಳು. ಅವಳ ಯಜಮಾನರ ಜಾತಿಯು ನಿನಗೆ ಜ್ಞಾಪಕವಿಲ್ಲದೆ ಹೋಗಿರಬಹುದು. ಪ್ರತಿಯೊಬ್ಬರ ಜ್ಞಾಪಕಶಕ್ತಿಯಲ್ಲೂ ಕುಂದುಂಟಾ

ಗುವದು. ಅವರಲ್ಲೂ ಅಲೀಬೇಯಲ್ಲಿ ತಮ್ಮ ಜಾತಿಯ ಅವಗುಣಗಳೊಂದಾವರೂ ಇಲ್ಲದಿರುವುದರಿಂದ ನನಗೇ ಅವರು ಯಾವ ಜಾತಿಯವರೆಂಬುದು ಮರೆತು ಹೋಗುವುದು. ಅನೇಕ ಸುಗುಣಗಳು ತುಂಬಿರುವವು-ಅವರು ವಿಶ್ವಾಸಕ್ಕೆ ಯೋಗ್ಯರು

ವಲಿಯಾಖಾನಮ್—(ನನ್ನನ್ನು ಕುರಿತು ಮೆಲ್ಲನೆ) ಸರಿ, ಇವತ್ತೇನೋ ವಿಚಿತ್ರ ರೀತಿಯಲ್ಲಿ ಸ್ತೋತ್ರವಾಗುತ್ತಿದೆ. ನಾಫಿಜ್‌ಬೇಗೆ ವಹೀದಾಖಾನಮ್‌ಳಿಂದ ಏನೋ ಕಾರ್ಯವಾಗಬೇಕಾಗಿರಬಹುದು. ಅದಕ್ಕಾಗಿಯೇ ಇಷ್ಟು-ಮುಖಸ್ತುತಿ ಮಾಡುತ್ತಿರುವನು. ಖಂಡಿತವಾಗಿಯೂ ಯಾವುದೋ ಮಹತ್ಕಾರ್ಯದಲ್ಲಿ ಅವಳ ಸಹಾಯವು ಅವಶ್ಯಕವಾಗಿರಬಹುದು. ಅದರಿಂದಲೇ ಅವಳ ಕೋಪವನ್ನು ಕಡಿಮೆ ಮಾಡಲಿ. ಇಷ್ಟು ಯತ್ನ ನಡೆಯುತ್ತಿರುವದು.

ನನಗೆ ನಗುವು ಬಂದಿತು. ಆದರೆ ನಾಫಿಜ್‌ಬೇಯು ಇವತ್ತು ಇಷ್ಟು ಹರ್ಷಚಿತ್ತನಾಗಿರುವದನ್ನು ಕಂಡು ತಕ್ಷಣವೇ ಮನಸ್ಸಿನಲ್ಲಿ ಒಂದು ವಿಧವಾದ ಕಳವಳವುಂಟಾಯಿತು. ಅವನು ನಗುತ್ತಾ ನನ್ನ ಮುಖವನ್ನು ನೋಡಲು, ನಾನು ಎದ್ದು ಹೊರಗೆ ಹೊರಟು ಹೋದೆನು. ಇವತ್ತು ಅವನು ತನ್ನ ತಾಯಿಯೊಡನೆ ಮಾಡಬೇಕೆಂದಿದ್ದ, ಮದುವೆಯ ಪ್ರಸ್ತಾಪವನ್ನು ತಡೆಯಲು ಮತ್ತೊಂದು ಬಾರಿ ಯತ್ನಿಸಲುದ್ದೇಶಿಸಿ ಅವನ ಹತ್ತಿರ ಹಾದು ಹೋಗುವಾಗ ಅವನಿಗೆ ಹೊರಗೆ ಬರಲು ಸನ್ನೆಮಾಡಿ, ಅವನಿಗಾಗಿ ಹೊರಗೆ ಹೋಗಿ ಕಾದಿದ್ದೆನು. ತಕ್ಷಣವೇ ಅವನು ಈಚೆಗೆ ಬಂದು ನನ್ನ ಕೈಯನ್ನು ಹಿಡಿದುಕೊಂಡನು.

ನಾಫಿಜ್‌ಬೇ— (ಮನೆಯೊಳಗೆ ಎಳೆದುಕೊಂಡು ಹೋಗುತ್ತಾ) ಒಳಗೆ ಬಾ. (ಮನೆಯೊಳಗೆ ಹೋಗಿ ಕಿಟಕಿಯ ಸಮೀಪದಲ್ಲಿ ನಿಂತುಕೊಂಡು) ಇದೋ ಪ್ಯಾರಿ, ನೀನು ಏನು ಹೇಳಬೇಕೆಂದಿರುವೆಯೋ ಹೇಳು, ಆದರೆ ನನ್ನನ್ನು ಮಾತ್ರ ನನ್ನ ಸಂಕಲ್ಪದಿಂದ ತಪ್ಪಿಸಲು ಬಲಾತ್ಕರಿಸಕೂಡದೆಂಬುದನ್ನು ಮೊದಲೇ ಹೇಳಿ ಬಿಡುವೆನು. ಯಾಕೆಂದರೆ ನಾನೆಂದಿಗೂ ಕೇಳುವವನಲ್ಲ. ಏನೇ ಆಗಲಿ, ನಿನ್ನನ್ನು ನನ್ನ ಪತಿಯನ್ನಾಗಿ ಮಾಡಿಯೇ ಕೊಳ್ಳುವೆನು. ಈಗ ಹೇಳು ನೀನು ನನ್ನನ್ನೇಕೆ ಕರೆದೆ.

ಯಾವ ಉದ್ದೇಶದಿಂದ ನಾನು ಅವನನ್ನು ಬರಮಾಡಿಕೊಂಡೆನೋ ಆ ವಿಷಯನಾಗಿ ನನ್ನನ್ನು ಬಾಯಿತೆರೆಯಲು ಸಹ ಅವನು ಅಡ್ಡಿ ಮಾಡುತ್ತಿರುವದನ್ನು ಕಂಡು, ಮತ್ತೇನು ಮಾತನಾಡಬೇಕೆಂಬುದು ನನಗೆ ತೋರಲಿಲ್ಲ. ಆದರೂ ಕೂಡ ಅವನ ಈ ಸಂಕಲ್ಪವನ್ನು ನಾನು ಯಾವ ದೃಷ್ಟಿಯಲ್ಲಿ

ನೋಡುತ್ತಿದ್ದೆನೋ ಅದೇ ದೃಷ್ಟಿಯಲ್ಲಿ ಅವನನ್ನು ನೋಡುವಂತೆ ಮಾಡ ಬೇಕೆಂಬ ಪ್ರಯತ್ನದಲ್ಲಿ ಉದ್ಯುಕ್ತಳಾದೆನು.

ನಾನು—ನಾಫಿಜ್‌ಬೇ, ಪಾಷಾಸಾಹೇಬರಾಗಲೀ ಖಾನಮ್ ಅಫೆಂದಿಯವ ರಾಗಲೀ, ಅಫಮ್‌ಬೇಯವರಾಗಲೀ, ಮತ್ತಾರಾಗಲೀ ನೀವು ನನ್ನನ್ನು ಮದುವೆಯಾಗುವದನ್ನು ಒಪ್ಪುವದಿಲ್ಲ. (ಅವನು ನನ್ನ ಮಾತನ್ನು ಮನ ಸಿಟ್ಟು ಕೇಳುವಂತೆ ಕಾಣಿಸಿದುದರಿಂದ, ನನ್ನ ಮಾತುಗಳು ಪ್ರಯೋಜನಕರ ವಾಗುತ್ತಿವೆಯೆಂದು ಯೋಚಿಸಿದೆನು.) ನಾನು ನಿಮಗೆ ತಕ್ಕವಳಲ್ಲ-ನಿಮ್ಮ ಕೈಕೆಳಗಿನವಳು. ನೀವು ಈ ವಿಷಯ ಹಠಹಿಡಿದರೆ ಪ್ರತಿಯೊಬ್ಬರು ನಿಮ್ಮನ್ನು ಏನೇನೋ ಅನ್ನುವರಲ್ಲದೆ ನಿಮ್ಮ ಬುದ್ಧಿಯು ಸರಿಯಾಗಿಲ್ಲವೆಂದು ಹೇಳುವರು.

ನಾಫಿಜ್‌ಬೇ—(ನಕ್ಕು) ಕಾಮವು ಹುಚ್ಚುತನವೆಂದು ಕರೆಯಲ್ಪಟ್ಟರೆ, ನಾನೇನೂ ನಿಜವಾಗಿಯೂ ಬುದ್ಧಿ ಕಳೆದುಕೊಂಡವನಾಗಿದ್ದೇನೆ. ನೀನೇ ಈ ವಿಚಾರವಾಗಿ ಒಂದುಪದವನ್ನು ಮೆಟ್ಟಲಿನ ಮೇಲೆ ಕುಳಿತು ಹಾಡುತ್ತಿರ ಲಿಲ್ಲವೇ? (ನಾನು ಏನೋ ಹೇಳಲಿಚ್ಛಿಸುತ್ತಿರುವದನ್ನು ಕಂಡು, ವೇಗದಿಂದ) ನನ್ನ ಪ್ರಾಣಪ್ರಿಯೇ, ಇನ್ನು ಏನು ಹೇಳುವದೂ ನಿಷ್ಪ್ರಯೋಜನವು. ನಾನು ನಿನಗೋಸ್ಕರ ಪ್ರಾಣಬಿಡುತ್ತಿರುವೆನು. ನೀನು ಖಂಡಿತವಾಗಿಯೂ ನನ್ನ ಭಾರ್ಯೆಯಾಗುವೆ. ನಿನ್ನ ವಿಚಾರವಾಗಿ, ನೀನೇನೂ ಭಯಪಡಬೇಕಾದು ದಿಲ್ಲ. ನಾನಿಲ್ಲಿರುವವರೆಗ ಯಾರು ನಿನ್ನನ್ನು ಏನೂ ಮಾಡಲಾರರು.

ಹೀಗೆಂದು, ಅವನು ನನ್ನನ್ನು ತನ್ನ ಎದೆಗಪ್ಪಿಕೊಂಡು. ನನ್ನ ಶಿರ ಸ್ಸನ್ನು, ತನ್ನ ಭುಜದ ಮೇಲೆ ಅತಿಪ್ರೀತಿಯಿಂದ ಒರಗಿಸಿಕೊಂಡನು. ನಾನೂ ಒಂದು ನಿಮಿಷ ಶಿರವನ್ನು ಅಲ್ಲಿಯೇ ಇರಗೊಟ್ಟೆನು. ನಾಫಿಜ್ ಬೇಗೆ ಬುದ್ಧಿ ಹೇಳಬೇಕೆಂದು ಮಾಡಿಕೊಂಡಿದ್ದ ಸಂಕಲ್ಪವೆಲ್ಲವೂ ವಾಯ ವಾಗಿ ಹೋಗುವುದರಲ್ಲಿತ್ತಾದರೂ; ಮತ್ತೆ ಈ ವಿಚಾರದ ಪ್ರಾಮುಖ್ಯತೆ ಕುರಿತು ಹೇಳಲು ಧೈರ್ಯಮಾಡಿದೆನು.

ನಾನು—(ಅವನ ಭುಜದ ಮೇಲಿಂದ ತಲೆಯೆತ್ತಿ ಅವನ ಕಡೆ ದೈನ್ಯದಿಂದ ನೋಡುತ್ತ) ಇಲ್ಲ, ಎಂದೆಂದಿಗೂ ಆಗಲಾರದು. ನಾಫಿಜ್‌ಬೇ, ಹುಡುಗಾಟ ವನ್ನು ಬಿಟ್ಟು ಸ್ವಲ್ಪ ಸಾವಧಾನ ಮಾಡಬೇಕು. ನಿಮ್ಮ ತಾಯಿಯವರು ಎಷ್ಟು ಕೋಪಗೊಳ್ಳುವರೆಂಬುದನ್ನು ಯೋಚಿಸಿ ನೋಡಿರುವಿರಾ? (ಅವನ ಮುಖವು ವಿವರ್ಣವಾಗುತ್ತಿರುವುದನ್ನು ಕಂಡು ಮಾತು ತಿರುಗಿಸಿದೆನು.) ನಿಮ್ಮ ತಂದೆಯವರ ವಿಷಯ ಯೋಚಿಸಿದಿರಾ? ಅವರ ಮೇಲಂತೂ ನಿಮಗೆ ಪ್ರೀತಿಯಿದ್ದೇ ಇರುವುದು. ಅವರಿಗೆ ಅವಮಾನವಾಗುವದನ್ನು ನೀವು

ಹೇಗೆ ಸಹಿಸುವಿರಿ.

ಹಾಫಿಜ್‌ಬೇಗನು ನನ್ನ ಕಡೆ ತೀಕ್ಷ್ಣದೃಷ್ಟಿಯಿಂದ ನೋಡಿದನು.

ಹಾಫಿಜ್‌ಬೇ—ಹಾಜಿರಾ, ನೀನು ಈ ಸಭ್ಯವಾದ ಮಾತುಗಳನ್ನು ಬಾಯಲ್ಲಾಡುತೀಯ. ನಿನ್ನನ್ನು ನೀನೇ ದೂಷಿಸಿಕೊಳ್ಳುತ್ತಿರುವೆ. ನಿನ್ನಿಂದ, ತಂದೆಯವರಿಗೆ ಇದರಲ್ಲಿ ಅವಮಾನವೇನುಂಟಾಗುವದು? ನೀನು ವಿಶ್ವಾಸಶೀಲಳು, ಶುದ್ಧಮನಸ್ಕಳೂ, ನಂಬಿಕೆಗೆ ಅರ್ಹಳೂ ಅಲ್ಲವೇ.

ನಾನು—ಅಪ್ಪಾ, ನಾನು ಕಮ್ಮಾರನ ಮಗಳು. ಅಂತಸ್ತಿನಲ್ಲಿ ನಿಮಗಿಂತ ಬಹಳ ಕಡಿಮೆ.

ಹಾಫಿಜ್‌ಬೇ—ಎಂದಿಗೂ ಇಲ್ಲ. ನನಗದು ಗೊತ್ತೂ ಇಲ್ಲ. ನಮ್ಮ ತಾತ ಮುತ್ತಾತಂದಿರೂ ಏನಾಗಿದ್ದರು, ಎಂಥಹವರೆಂಬುದು ನನ್ನ ತಂದೆಗೂ ಗೊತ್ತಿಲ್ಲ—ಕಸಗುಡಿಸುವವರೇ ಆಗಿದ್ದಿರಬಹುದು. ಅದರ ಯೋಚನೆ ಈಗೇಕೆ. ನಿನ್ನನ್ನು ಮದುವೆಯಾಗುವದರಲ್ಲಿ ನನಗೆ ಅವಮಾನವಾದರೆ, ಬೂಫಾವರಿಯನ್ನು ಮದುವೆಯಾಗುವುದರಲ್ಲಿ, ಮತ್ತಷ್ಟು ಹೆಚ್ಚೇ ಇರಬೇಕು. ಅವಳ ತಂದೆಯು ಮೂಸಿಕಾರನೇ ಆಗಿರಬಹುದು. ಇಲ್ಲದಿದ್ದರೆ ಚೋರನಂತೂ ಖಂಡಿತವಾಗಿಯೂ ಆಗಿದ್ದೇ ಇರಬೇಕು.

ನಾನು—ಆದರೂ ಅವಳು ಸರ್ಕೇಶಿಯಾದವಳು ...

ಇಷ್ಟು ಹೇಳುವದರಲ್ಲಿ ಹಾಫಿಜ್‌ಬೇಯು ನನ್ನನ್ನು ತಡೆದನು.

ಹಾಫಿಜ್‌ಬೇ—ಹೌದು, ಸರ್ಕೇಶಿಯಾದವಳು. ಆ ಜನರಂತೆಯೇ ಅಷ್ಟು ಅಷ್ಟು ಮೋಸಗಾರಳು, ಅನ್ಯಾಯಕಾರಳೂ. ಇಂಥವಳೊಡನೆ ನಿನ್ನನ್ನು ಹೋಲಿಸಿ ಕೊಳ್ಳುತ್ತೀಯಾ. ಮಾನಮರ್ಯಾದೆ ನಾಚಿಕೆಗೀಚಿಕೆ, ಕಟ್ಟುನಿಬಂಧನೆಗಳ್ಯಾವೂ ಇಲ್ಲದ ಎಂಥಾ ಹೆಂಗಸವಳು! ನನ್ನನ್ನು ಮದುವೆಯಾದರೆ ತನಗೆ ಸ್ವತಂತ್ರ ಬರುವದೆಂದೂ, ತಾನು ಲೌಂಡಿಯೆಂದು ಕರೆಯಲ್ಪಡುವದಿಲ್ಲವೆಂದೂ ಇಷ್ಟು ಮಾತ್ರ ತಿಳಿದಿರುವಳು. ಇವತ್ತು ಅವಳು ಮತ್ತೊಬ್ಬನಿಗೆ ಮಾರಲ್ಪಟ್ಟರೆ ಮರುದಿನವೇ ಆ ಮನುಷ್ಯನನ್ನು ಸಿಕ್ಕಿಹಾಕಿ ಕೊಳ್ಳಲು ಬಲೆಬೀಸುವಳು. ಹಾಜೀ ನಾನು ನಿನ್ನೊಡನೆ ನಿಜವನ್ನು ಹೇಳುತ್ತೇನೆ, ನಂಬು. ಹುಡುಗನಾಗಿದ್ದಾಗ ನಾನು ಎಲ್ಲರಂತೆಯೇ, ಹೆಂಡತಿಯನ್ನು ಮನಕುರಿಯಂತೆ ಕಾಣಬೇಕೆಂತಲೂ, ಪರಿಚಯವಿಲ್ಲದ ಹುಡುಗಿಗಿಂತ ಪರಿಚಯಸ್ಥಳಾದ ಹುಡುಗಿಯನ್ನು ಅವಳೆಂಥವಳೇ ಆಗಲಿ ಮದುವೆ ಮಾಡಿಕೊಳ್ಳಬೇಕೆಂತಲೂ ತಿಳಿದಿದ್ದೆನು. ಆದರೆ ಅನಾತೂಲಿಯದಲ್ಲಿದ್ದಾಗ ಈ ವಿಷಯವನ್ನು ಕುರಿತು ಕೂಲಂಕುಷವಾಗಿ ಪರಿಶೀಲಿಸಿ, ಅನಂತರ ನನಗೆ

ವಾಪಸು ಹೋದಮೇಲೆ, ನೀನು ಸಿಕ್ಕದಿದ್ದಿದ್ದರು ಸಹ ಸರ್ಕೇಶಿಯಾ ಹುಡು ಗಿಯನ್ನು ಮಾತ್ರ ಎಂದಿಗೂ ಮದುವೆಯಾಗುವದಿಲ್ಲವೆಂತಲೂ,ಅದರಬದಲು ಪ್ರಾಣಬಿಡುವನು ಜೇಸೆಂತಲೂ, ಈ ವಿಫವಾದ ವಿವಾಹದಿಂದ ಸಂತೋಷದಲ್ಲಿ ಜೀವಿಸುವ ಆಶೆಯೆಲ್ಲಾ ನಿಮಿಷದಲ್ಲಿ ಹಾಳಾಗಿಹೋಗುವದೆಂತಲೂ ನಿಷ್ಕರ್ಷೆ ಮಾಡಿಕೊಂಡೆನು.

ನಾನು ಆಗಿನಿಂದಲೂ ಅವನೆಡೆಗೆ ಆಲಂಗಿಸಲ್ಪಟ್ಟುಕೊಂಡೇ ನಿಂತಿದ್ದೆನು. ಅವನು ಒಂದು ನಿಮಿಷ ಮಾತನ್ನು ನಿಲ್ಲಿಸಲು, ಅವನ ಮುಖದಕಡೆ ಕಣ್ಣೆತ್ತಿ ನನ್ನನ್ನು ಬಿಟ್ಟುಬಿಡಲು ಪ್ರಾರ್ಥಿಸಿಕೊಂಡೆನು. ಅವನು ಅಮಿತವಾದ ಆನಂದಲ್ಲಿ ನನ್ನನ್ನು ಆಲಂಗಿಸಿಕೊಂಡಿದ್ದುದರಿಂದ ನನ್ನ ಕಾಲುಗಳು ಒಂದು ವಿಧವಾಗಿ ಭೂಮಿಯನ್ನು ಬಿಟ್ಟು ಮೇಲಕ್ಕೆದ್ದಂತಿದ್ದವು. ಕೊನೆಗೆ ನಾನು ನನ್ನ ಪೂರ್ವಸಂಕಲ್ಪವನ್ನು ಈಡೇರಿಸಿಕೊಳ್ಳಬೇಕಾಗಿದ್ದರೆ, ನಾನೀಗಿದ್ದ ಸೂಕ್ಷ್ಮಸ್ಥಿತಿಯಿಂದ ಬಿಡುಗಡೆ ಹೊಂದಬೇಕೆಂದಾಲೋಚಿಸಿ ಪುನಃ ಅವನನ್ನು ನನ್ನನ್ನು ಬಿಟ್ಟುಬಿಡಲು ಪ್ರಾರ್ಥಿಸಿದೆನು ಹೀಗೆಂದು ಹೇಳುತ್ತಿರುವಾಗ ನನ್ನ ದೃಷ್ಟಿಯು ಅವನ ಭುಜದ ಮೇಲಿಂದ ಬಾಗಿಲಕಡೆ ಹೋಯಿತು. ಹಾ, ದೇವರೆ, ಏನಾಗಿ ಹೋಯಿತು ! ಮೈಯ್ಯಿನರಕ್ತನೆಲ್ಲಾ ಒಣಗಿಹೋಯಿತು. ಇದೇನ ನೋಡುತ್ತಿರುವೆನು ! ಬೂಹಾವಡೆಯು ಬಾಗಿಲನ್ನೊರಗಿಕೊಂಡು ನಿಂತಿದ್ದಾಳೆ ! ಕಣ್ಣುಗಳು ಕೋಪದಿಂದಲೂ ಅಸೂಯೆಯಿಂದಲೂ ಕೆಂಪಾ ಗುತ್ತಿವೆ ! ನನ್ನ ದೃಷ್ಟಿಯು ಅವಳ ಮೇಲೆ ಬೀಳುತ್ತಲೇ ಹಿಮ್ಮೆಟ್ಟಿ ಪಲಾ ಯನವಾಗಿ ಹೋದಳು. ನಾನು ಹೆದರಿ ನಡುಗಲಾರಂಭಿಸಿದೆನು. ಬೂಹಾ ವಡೆಯ ಸ್ವಭಾವವನ್ನು ಮೊದಲಿಗಿಂತ ಇನ್ನೂ ಚೆನ್ನಾಗಿ ತಿಳಿದುಕೊಂಡೆನು. ಅವಳು ನನಗೆ ಆಜನ್ಮಶತ್ರುವೆಂದೂ, ನನ್ನ ರಹಸ್ಯವು ಹೊರಬಿದ್ದುದರಿಂದ ಅವಳಿಗೆ ನನ್ನ ಮೇಲೆ ಇನ್ನೂ ಅಧಿಕಾರ ಹೆಚ್ಚಾಯಿತೆಂದು, ಕೃಪೆತೋರುವ ಮಾರ್ಗವೇ ಇಲ್ಲವೆಂದೂ ತಿಳಿದುಕೊಂಡೆನು.

ನನ್ನ ಮುಖವು ಬಹಳ ಬಿಳಿಚಿಕೊಂಡು ಹೋಗಿರಬೇಕು, ಯಾಕೆಂದರೆ ನಾಫಿಜ್‌ಬೇಗನು ನನ್ನ ಮುಖವನ್ನು ನೋಡಿ ತಕ್ಷಣವೇ ನನ್ನ ಕಾತುರವಾದ ದೃಷ್ಟಿಬಿದ್ದಿದ್ದ ಬಾಗಿಲಕಡೆ ನೋಡಿದನು.

ನಾಫಿಜ್‌ಬೇ—(ತ್ವರಿತದಿಂದ) ಸ್ವಸ್ಥಳಾಗಿರುವೆ ತಾನೆ. ಯಾಕೆ, ಯಾರನ್ನು ನೋಡಿದೆ ?

ನಾನು—(ವೇಗದಿಂದ) ನಾಫಿಜ್‌ಬೇ, ನನ್ನನ್ನು ಹೋಗಗೊಡಿ ಸಾಕು. ದಯಮಾಡಿ ನನ್ನನ್ನು ಬಿಟ್ಟುಬಿಡಿ. ಸರ್ವನಾಶವಾಯಿತು !

ನಾಫಿಜ್‌ಬೇ— (ಆಶ್ಚರ್ಯದಿಂದ) ಸರ್ವನಾಶವು ಹೇಗಾಯಿತು ?
ನಾನು— ಇನ್ನು ಪ್ರತಿಯೊಬ್ಬರಿಗೂ ಈ ವಿಚಾರಗೊತ್ತಾಗಿ ಬಿಡುವದು. (ಪುನಃ ದಿಗಿಲು ಬೀಳುತ್ತಾ) ನಾಫಿಜ್‌ಬೇ, ನೀವು ನನ್ನೊಡನೆ ಹುಡುಗಾಟ ಮಾಡುತ್ತಿದ್ದಿರೆಂದು ಹೇಳಬೇಕು. ತಮಾಷೆ ಮಾಡುತ್ತಿದ್ದಿರೆಂದು.
ನಾಫಿಜ್‌ಬೇ- (ಮಾತನ್ನು ತಡೆದು) ಏತಕ್ಕೆ ? ಹಾಗೇಕೆ ಹೇಳಬೇಕು ? ನಿನ್ನ ಹೆಸರಿಗೆ ಕಳಂಕ ತರುವಂಥಾ ಯಾವ ಕಾರ್ಯವನ್ನಾಗಲೀ ನಾನೇಕೆ ಮಾಡುವೆನು—ಯಾರಾದರೂ ನಮ್ಮನ್ನು ನೋಡಿದ್ದೇ ಆದರೆ, ನನ್ನ ಉದ್ದೇಶ ನಿನಿವೆಯೋ ಅದನ್ನು ನೆರವೇರಿಸಿಕೊಳ್ಳುವೆನು—ಇವತ್ತು ಸಂಜೆಯೇ ಅವರ್ಮಾ ಮನೊಡನೆ ಈ ವಿಷಯ ಪ್ರಸ್ತಾಪಿಸುವೆನು. ಹಾಜಿರೇ, ನೀನು ನನ್ನನ್ನು ಭಯಸ್ಥನೆಂದೂ, ಹೀನಮನಸ್ಕನೆಂದೂ, ಅಲ್ಪ ಪ್ರತಿಕೂಲತೆಗೆಲ್ಲಾ ಹೆದರಿ, ನಿನ್ನೊಬ್ಬಳನ್ನೇ ಅನ್ಯರ ದೂಷಣೆಗೆ ಗುರಿಮಾಡುವೆನೆಂದೂ ತಿಳಿದಿರುವೆಯಾ ?
ಹೀಗೆಂದು, ಅವನು ಬಾಗಿ ನನ್ನನ್ನು ಬಹುಪ್ರೀತಿಯಿಂದ ಮುದ್ದಿಸಿದನು. ಅವನ ಇಷ್ಟಕ್ಕೆ ವಿರುದ್ಧವಾಗಿ ನಡೆಯಲು ನಾನೀಗ ಅಶಕ್ತಳಾಗಿ ಹೋಗಿದ್ದುದ್ದರಿಂದ, ಅವನನ್ನು ತಡೆಯಲು ಯತ್ನಿಸದೆ, ಮೌನದಿಂದ ಅವನ ವಿವಶಳಾಗಿ ಹೋದೆನು. ಕೊಂಚಹೊತ್ತು ಈರ್ವರೂ ಸುಮ್ಮನಿದ್ದ ತರುವಾಯ, ನನ್ನ ಮನಸ್ಸಿನಲ್ಲಿ ಕೊನೆಯದಾಗಿ ಮತ್ತೊಂದು ಸಲ, ನಾಫಿಜ್‌ಬೇಗೆ ಅವನ ತಂದೆಯ ಮೇಲೆ ಅವನಿಗಿದ್ದ ಪ್ರೀತಿಯನ್ನೂ ಭಕ್ತಿಯನ್ನೂ ಜ್ಞಾಪಿಸಿ, ಅವನನ್ನು ಅವನ ಸಂಕಲ್ಪದಿಂದ ತಪ್ಪಿಸಬೇಕೆಂಬಾಲೋಚನೆಯಾಯಿತು.
ನಾನು — ನಸಿರುಲ್ಲಾ ಪಾಷಾರವರು ಎಷ್ಟು ಕೋಪಗೊಳ್ಳುವರೆಂಬುದನ್ನು ಸ್ವಲ್ಪ ಯೋಚಿಸಿನೋಡಿ. ಈ ವರ್ಷವೆಲ್ಲಾ ಅವರು ನಿಮಗಾಗಿ ಎಷ್ಟು ಸ್ಪರ್ಧಿಸಿಟ್ಟಿರುವರೆಂಬುದೂ, ಆದರು ಸಹ ನಿಮ್ಮನ್ನು ಒಂದು ಮಾತೂ ಅನ್ನಲಿಲ್ಲವೆಂಬುದೂ ನಿಮಗೆ ತಿಳಿದೇಯಿರುವದು. ಅವರಿಗಿನ್ನು ಮತ್ತೊಂದು ಸಲ ವ್ಯಥೆಯುಂಟು ಮಾಡಲು ನಿಮಗೆ ಧೈರ್ಯ ತಾನೆ ಹೇಗೆ ಬರುವದು ? (ಅವನ ಮುಖದ ಮೇಲೆ ವ್ಯಸನದ ಚಿಹ್ನೆಯು ಕಂಡುಬಂದುದನ್ನು ನೋಡಿ ನನ್ನ ಉದ್ದೇಶವು ಸಫಲವಾಗುವನೆಂಬಾಶೆಯಿಂದ ಮತ್ತೆ ಹೇಳ ತೊಡಗಿದೆನು) ...ವನೆಂದಿಗೂ ನಿಮಗೆ ನನ್ನನ್ನು ಮದುವೆಯಾಗಲು ಅನುಮತಿ ಕೊಡುವ ...ಲ್ಲವೆಂಬುದೂ, ಅವರ ಇಷ್ಟಕ್ಕೆ ವಿರುದ್ಧವಾಗಿ ನೀವೇ ನನ್ನು ಮಾಡಲಾರಿ ...ರೆಂಬುದೂ ನಿಮಗೆ ಚೆನ್ನಾಗಿ ತಿಳಿದೇಯಿರುವುದು. ಅವರಿಗೆ ನಿಮ್ಮ ಮೇಲೆ ...ಸರ್ವಾಧಿಕಾರವಿರುವದೆಂಬುದನ್ನೂ ನೀವು ಅರಿತಿರುವಿರಿ—ಅವರಂಥವ ದಯಾ

ಹಿರಿಯರನ್ನೂ ಸುಗುಣಶರರನ್ನೂ ಹೇಗೆ ತಾನೆ ಎದುರಿಸುವಿರಿ? ಅವರು ನಿಮಗೆ, ಈ ಅಲ್ಪಜ್ಞ ಶಿಶುವನ್ನು ಮನಸ್ಸಿನಿಂದ ದೂರಮಾಡಲು ಅಪ್ಪಣೆ ಮಾಡಿದರೆ ನೀವು ಅದನ್ನು ಖಂಡಿತವಾಗಿ ಪಾಲಿಸಬೇಕಾಗುವದು.

ಸಾಫಿಜ್ ಬೇ—(ನನ್ನ ಮಾತನ್ನು ತಡೆದು, ವ್ಯಸನದಿಂದ) ಈ ವಿಷಯದಲ್ಲಿ ಆಜ್ಞಾಪಾಲನೆ ಮಾಡುವದಿಲ್ಲ. ಅವರಿಗೆ ವಿಧೇಯನಾಗಿರಬೇಕಾದುದು ನನ್ನ ಕರ್ತವ್ಯವೆಂಬುದರಲ್ಲಿ ಸಂದೇಹವಿಲ್ಲ. ಅವರ ಮೇಲೆ ನನಗಿರುವ ಅಧಿಕ ಪ್ರೀತಿಯ ಸಲುವಾಗಿ, ಇದುವರೆವಿಗೆ ನಾನು ಈ ಕರ್ತವ್ಯದಲ್ಲಿ ತೃಣಮಾತ್ರವರೂ ಹಿಂಜರಿದಿಲ್ಲವೆಂದು ಎಲ್ಲರೂ ಹೇಳಬಲ್ಲರು. ಆದರೆ ವಿವಾಹಕ್ಕೆ ಮಾತ್ರ, ಅವರು ಅನುಮತಿ ಕೊಡದಿದ್ದರು ಕೂಡ, ನಾನು ನಿನ್ನನ್ನು ಮದುವೆಯಾಗಿಯೇ ಆಗುವೆನು. ಅವರಿಗೆ ನನ್ನಮೇಲೆ ಎಷ್ಟೇ ಅಧಿಕಾರವಿದ್ದಾಗ್ಯೂ ಹಾಜಿರಾಳನ್ನು ನಿರಾಕರಿಸಲು ತಪ್ಪಿಸುವಷ್ಟು ಅತ್ಯಧಿಕಾರವಿಲ್ಲ.

ನಾನು ಅವನ ಇಚ್ಛೆಯನ್ನು ಯಾವ ದೃಷ್ಟಿಯಲ್ಲಿ ನೋಡುತ್ತಿದ್ದೆನೋ ಅದೇ ದೃಷ್ಟಿಯಲ್ಲಿ ಅವನೂ ನೋಡಲೆಂಬ ಯತ್ನವನ್ನು ಮಾತ್ರ ಮಾಡುತ್ತಾ ಹೀಗೆಂದೆನು :-

"ನನ್ನ ತಂದೆಗೆ ಕೋಪ ತರಲು ನಿಮಗೆ ವ್ಯಸನವಿಲ್ಲವೇ?"

ಸಾಫಿಜ್ ಬೇ—(ವ್ಯಸನದಿಂದ ಒಪ್ಪಿಕೊಳ್ಳುತ್ತಾ) ಅದೇನೋ ನಿಜ. ವ್ಯಸನವಾಗುವದು. ಅವರನ್ನು ದುಃಖಗೊಳಿಸಲು ನನಗೆ ವ್ಯಥೆಯಾಗುವದು ಯಾವದೊಂದು ವಿಷಯವಾಗಲೀ. ಅಥವಾ ಸನಾಗಿದ್ದರೆ ಅದೇ ದೊಡ್ಡದಾಗಿ ತೋರುವದು—ಇಷ್ಟರಿಂದಾಗಲಿ ಅವರ ಅಜ್ಞೆಯನ್ನು ಎದುರು ಮಾತಿಲ್ಲದೆ ನಡೆಸಿ ಈಗ ಅವಿಧೇಯತೆಯನ್ನು ತೋರಿಸುವದು ಸುಲಭಸಾಧ್ಯವಲ್ಲ. ಇಂದಿಗೆ ಈಗ ನಾನು ಈ ಕೆಲಸಕ್ಕೆ ಕೈ ಹಾಕಿ ನಿಂತಿದ್ದೇನೆ ಇದನ್ನು ಬಿಡಲಾರೆನು. ತಾಯಿ, ತಂದೆ, ಅಣ್ಣ, ಯಾರೂ ನನ್ನನ್ನು ನಿನ್ನಿಂದ ಬೇರೆಮಾಡಲಾರರು.

ನಾನು—(ನಿರಾಶೆಯಾಗಿ) ನಾನೇ ಒಂದು ವೇಳೆ ಮದುವೆಯಾಗಲು ಹಿಂತೆಗೆದರೆ? ಆಗಲೂ ನನ್ನನ್ನು ಬಲಾತ್ಕಾರವಾಗಿ ಖಾಜಿಯ ಮುಂದೆ ಎಳೆದುಕೊಂಡು ಹೋಗುವಿರಾ?

ಕೋಪಕೊಳ್ಳದೆ ಅವನು ಧೈರ್ಯದಿಂದ ಕೂಡಿದ ಮುಖವುಳ್ಳವನಾಗಿ, ನನ್ನನ್ನು ದೃಷ್ಟಿಸಿ ನೋಡುತ್ತಾ ನಕ್ಕು ಪಶ್ಚಾತ್ತಾಪದವನಾಗಿ ಮೆಲ್ಲನೆ ನಕ್ಕನು.

ಸಾಫಿಜ್ ಬೇ— ಇದಕ್ಕಿಂತ ಯುಕ್ತವಾದ ಕಾರಣವನ್ನು ನೀನು ತೋರಿಸ

ಖಾಜಿ = ಪುರೋಹಿತ. ನಿಕ್ಕಾ = ಮದುವೆಯ ಮಂತ್ರ

...ರೆ ಹಾಗೆಯೇ ಮಾಡುವೆನು-ಏನೆಂದರೆ ಬೇರೊಬ್ಬನಿಗಾಗಿ ಪ್ರಾಣಬಿಡುತ್ತಿರುವೆನೆಂದು ನೀನು ಹೇಳಿಬಿಟ್ಟರೆ-ಈಗಲೇ ಈ ವಿಚಾರವು ಕೊನೆಗಾಣುವದು ಅಲ್ಲವೆ, ಇಲ್ಲ-ನೀನು ಹಾಗೆ ಹೇಳುವದಿಲ್ಲ-ಅಲ್ಲವೇ ? ಸಾಕು, ಈ ಚರ್ಚೆಯು ಮುಗಿಯಿತು. ಇನ್ನು ಮೇಲೆ ನೀನು ನಮಗೆ ಬೇಡವೆಂದರೆ, ಬಲಾತ್ಕಾರದಿಂದ ಖಾಜಿಯ ಮುಂದೆ ಕರೆದುಕೊಂಡು ಹೋಗುವೆನು.

ಅವನ ಮಾತನ್ನು ಇನ್ನೂ ಸರಿಯಾಗಿ ಅರ್ಥಮಾಡಿಕೊಳ್ಳುವದದೊಳಗೇ ವರಾಂಡದಲ್ಲಿ ಯಾರೋಬರುವ ಸದ್ದಾಯಿತು. ನಾನು ಹೆದರಿ ಸ್ತಬ್ಧಳಾಗಿನಿಂತೆನು. ನಾಫಿಜ್‌ಬೇಯ ಆಲಿಂಗನದಿಂದ ಇನ್ನೂ ಬಿಡುಗಡೆ ಹೊಂದುವದರೊಳಗೇ ಖಾನಮ್‌ಅಫಂದಿಯವರು ಬಾಗಿಲಲ್ಲಿ ಬಂದು ನಿಂತುಬಿಟ್ಟಿದ್ದರು

ಒಂದು ನಿಮಿಷ ಸುಮ್ಮನೆ ನಿಂತಿದ್ದರು. ಉದ್ದವಾದ ಶರೀರವನ್ನು ಮತ್ತಷ್ಟು ಎತ್ತರವಮಾಡಿಕೊಂಡು, ಕಣ್ಣುಗಳಲ್ಲಿ ಕಿಡಿಯನ್ನು ಸೂಸುತ್ತಾ, ದವಡೆಗಳನ್ನು ಬಿಗಿಬಿಟ್ಟು ಮುಖವನ್ನು ಬಿಳಿಚಿಸಿಕೊಂಡಿದ್ದುದನ್ನು ಕಂಡು ನನ್ನ ಹೃದಯವು ಜರ್ಝರಿತವಾಗಿ ಹೋಯಿತು. ನಾಫಿಜ್‌ಬೇಯಿಂದ ಬೇರೆಯಾಗುತ್ತಲೇ, ನಾನು ಹೆದರುತ್ತಿದ್ದಂಥಾ ವೇಳೆಯು ಈಗ ಸಮೀಪಿಸಿತೆಂಬುದು ಗೊತ್ತಾಯಿತು. ಯಾರ ಮನಸ್ಸಿಗೆ ವಿರುದ್ಧವಾಗಿ ನಾನೆಂದಿಗೂ ನಡೆಯುವದಿಲ್ಲವೆಂದು ಪ್ರತಿಜ್ಞೆ ಮಾಡಿಕೊಂಡಿದ್ದೆನೋ ಅವರನ್ನು ಇಂದು ಎದುರಿಸಬೇಕಾಗಿ ಬಂದಿರುವದೆಂದು ತಿಳಿದುಕೊಂಡೆನು

ನಾಫಿಜ್‌ಬೇಯು ನನ್ನನ್ನು ಬಿಟ್ಟುಬಿಟ್ಟು ಹಿಂತಿರುಗಿ ನಿಂತನು. ಖಾನಮ್‌ಅಫಂದಿಯವರ ಕಣ್ಣುಗಳಲ್ಲಿ ಜ್ವಲಿಸುತ್ತಿದ್ದ ಕೋಪಾಗ್ನಿಯಿಂದ ನನ್ನನ್ನು ಕಾಪಾಡುವಂತೆ ನಿಂತನು.

ನಾಫಿಜ್‌ಬೇ— ಅಮ್ಮಾವರೇ, ನೀವು ದಯಮಾಡಿಸಿದ್ದು ನನಗೆ ಬಹಳ ಸಂತೋಷ. ನಿಮ್ಮೊಡನೆ ನಾನು ಕೊಂಚ ಏಕಾಂತದಲ್ಲಿ ಮಾತನಾಡಬಯಸುತ್ತಿದ್ದೆನು.

ಅದರೇಕಾಂತದಲ್ಲಿ ಬಂತು ? ಅವನು ಒಂದು ಹೆಜ್ಜೆ ಮುಂದಿಟ್ಟೊಡನೆಯೇ ಮಹೀದಾಖಾನಮ್‌ಳು ಹಿಂದೆಯೇ ಬಂದಳು. ಮಾತನಾಡುವದರಲ್ಲಿಯೇ ದಾಸಿಯರೆಲ್ಲಾ ಬಂದು ನೆರೆದರು. ನಾನು ಕಿಟಕಿಯ ಹತ್ತಿರ ನಿಂತು ಎಲ್ಲರ ಮುಖವನ್ನೂ ನೋಡುತ್ತಿದ್ದೆನು. ಮಹೀದಳ ಮುಖದಲ್ಲಿ ಗರ್ವಮಿಳಿತವಾದ ಆಶ್ಚರ್ಯವು ಕಾಣುತ್ತಿತ್ತು. ವಲಿಯಾಖಾನಮ್‌ಳ ಮುಖವು ಕರುಣೆಯಿಂದಲೂ ಭಯದಿಂದಲೂ ಕೂಡಿದದ್ದಾಗಿತ್ತು. ದಾಸಿ

ಯರ ಮುಖಗಳು ತಾವು ನಿರೀಕ್ಷಿಸಿ ಕೊಂಡಿದ್ದ ವಿಚಾರವು ಈಗ ನಡೆಯುವ ದರಲ್ಲಿದೆ ಎನ್ನುವಂತೆ ಕಾಣುತ್ತಿದ್ದವು. ನನ್ನ ಹೃದಯವಾದರೋ ಭಯ ದಿಂದಲೂ ಗಾಬರಿಯಿಂದಲೂ ಅತಿವೇಗವಾಗಿ ಬಡಿದುಕೊಳ್ಳುತ್ತಾ, ಮೈ ನಡುಗುತ್ತಿತ್ತು. ಆಸಮಯದಲ್ಲಿ ನನಗೆ ಏನು ನೋಡುತ್ತಿರುವೆನೆಂದಾಗಲಿ ಏನು ಕೇಳುತ್ತಿರುವೆನೆಂದಾಗಲಿ ಸರಿಯಾಗಿ ಜ್ಞಾನವಿರಲಿಲ್ಲ. ಇದನ್ನು ಓದಿ ವಾಚಕ ಮಹಾಶಯರ್ಯಾರೂ ನನ್ನನ್ನು ದೂಷಿಸಲಾರರೆಂದು ನಂಬಿದ್ದೇನೆ- ಯಾಕೆಂದರೆ ಹರಮ್‌ಸರಾದಲ್ಲಿ ಇದ್ದವರಿಗೆ ಮಾತ್ರ-ಮನೆಯ ಯಜಮಾನಿಗೆ ಎಷ್ಟು ಸ್ವತಂತ್ರ ವಿರುವದೆಂಬುದೂ, ಅವಳೇನೇನ ಮಾಡಲು ಶಕ್ತಳೆಂಬುದೂ ಅವಳು ಕೋಪದಲ್ಲಿರುವ ಸ್ಥಿತಿಯನ್ನು ಕಂಡು ಮನೆಯ ಜನರೆಲ್ಲರಿಗೂ ನಡುಗುವದು ಹೇಗೆ ಅಭ್ಯಾಸವಾಗಿ ಹೋಗಿರುತ್ತದೆಂಬುದೂ ಗೊತ್ತಿರುವದು- ಮತ್ತು, ಪ್ರತಿಯೊಬ್ಬರ ಜೀವದ ಮೇಲೂ ಸ್ವತ್ತಿನ ಮೇಲೂ ಅವಳಿಗೆ ಪೂರಾ ಹಕ್ಕಿರುವದೆಂಬುದನ್ನೂ ತಿಳಿದುಕೊಂಡಿರುವರು. ನನಗೂ ಸಹ ಇದೇರೀತಿ, ಖಾನಮ್ ಅಫಂದಿಯವರನ್ನು ಆ ಮನೆಗೆ ಸರ್ವಾಧಿಕಾರಿಣಿಯೆಂದು ತಿಳಿಯ ಬೇಕೆಂದೂ, ಅವರ ಆಜ್ಞಾಪಾಲನೆಯು ನನ್ನ ಮುಖ್ಯ ಕರ್ತವ್ಯವಾಗಿರುವ ದೆಂದೂ ಮೊದಲೇ ಬೋಧೆ ಮಾಡಲ್ಪಟ್ಟಿತ್ತು. ಆದುದರಿಂದಲೇ, ಅವರು ನನ್ನಕಡೆ ವೇಗದಿಂದ ಬರುತ್ತಿರುವದನ್ನು ಕಂಡು ನನ್ನ ಹೃದಯವು ನಡುಗ ಲಾರಂಭಿಸಿತು. ತನ್ನ ಮಗನ ಹಿಂದುಗಡೆಯಿಂದ ನನ್ನನ್ನು ಈಚೆಗೆ ಎಳೆದು ಹಾಕಲು ಬರುತ್ತಿರುವಂತೆ ಕಂಡಿತು. ನಾಫಿಜ್‌ಬೇಯು ಸಹ ಇದನ್ನು ತಿಳಿದುಕೊಂಡು, ಒಂದು ಹೆಜ್ಜೆ ಮುಂದಕ್ಕೆ ಹೋಗಿ, ತಾಯಿಯ ಎದುರಿಗೆ ನಿಂತು ಕೊಂಡುಬಿಟ್ಟನು.

ನಾಫಿಜ್‌ಬೇ—(ಮೃದುವಾದ ಧ್ವನಿಯಿಂದ-ಆದರೂ ಅದನ್ನು ಕೇಳಿ ಖಾನಮ್ ಅಫಂದಿಯವರು ಮುಂದಕ್ಕೆ ಬರದೆ ನಿಂತು ಬಿಟ್ಟರು.) ಅಮ್ಮಾವರೆ, ನಿಲ್ಲಿರಿ. ಏನಹೇಳ ಬೇಕೆಂದಿರುವಿರೋ ಮೊದಲು ನನ್ನೊಡನೆ ಹೇಳಿರಿ. ಈಗತಾನೆ ನಾನು ನಿಮ್ಮೊಡನೆ ಕೊಂಚ ಮಾತನಾಡುವದಿರುವದೆಂದು ಹೇಳಲಿಲ್ಲವೆ.

ಖಾನಮ್ ಅಫಂದಿ— (ಕಿರಿಚಿ) ನಾನೊಂದನ್ನೂ ಕೇಳುವವಳಲ್ಲ. ಈ ಹುಡು ಗಿಗೆ ಅವಳ ತಪ್ಪಿಗಾಗಿ ಶಿಕ್ಷೆಮಾಡುವವರೆಗೂ ನಾನ್ಯಾವುದನ್ನೂ ಕೇಳುವದಿಲ್ಲ. (ನನ್ನಕಡೆ ರೋಷದಿಂದ ತಿರುಗಿ) ನೀನ್ಯಾವಳು ? ನನ್ನ ಮಗನನ್ನು ಈ ರೀತಿ ಮರುಳುಮಾಡಿ ವಶಮಾಡಿಕೊಳ್ಳುವಷ್ಟು ನಿನಗೆ ಧೈರ್ಯವೆಲ್ಲಿಂದ ಬಂತು ? ಬೂಡಾವರಿಯು ಎಲ್ಲ ವಿಚಾರವನ್ನೂ ನನಗೆ ತಿಳಿಸಿದ್ದಾಳೆ.

ಹೀಗೆಂದು ಅವರು ಒಂದು ಹೆಜ್ಜೆ ಮುಂದಕ್ಕೆ ನನ್ನಕಡೆ ಬರಲು ಪುನಃ

ನಾಫಿಜ್‌ಬೇಯು ಅವರಿಗೂ ನನಗೂ ಮಧ್ಯೆ ಬಂದು ನಿಂತುಕೊಂಡು ಬಿಟ್ಟನು.

ನಾಫಿಜ್‌ಬೇ—(ಕಠಿಣವಾಗಿ) ಅಮ್ಮಾವರೆ, ಇಷ್ಟು ಕೋಪವು ಒಳ್ಳೆಯದಲ್ಲ. ಈ ಹುಡುಗಿಗೆ ಒಂದು ಬೆರಳು ಸೋಕಿದರು ಸಹ ತಂದೆಯವರ ಆಣೆ, ನಾನು ನಿಮಗೆ ಮುಖವನ್ನು ತೋರಿಸುವದಿಲ್ಲ.

ಖಾನಮ್ ಅಫಂದಿ— ಚೆನ್ನಾಯಿತು. ಇಷ್ಟರಮಟ್ಟಿಗೆ ಆಯಿತೋ! ಹಾಗಾದರೆ ಇನ್ನು ಮೇಲೆ ನೀನೇ ನನಗೆ ಏನುಮಾಡುವದಕ್ಕೂ ಬಿಡುವದಕ್ಕೂ ಆಜ್ಞೆಮಾಡುವಿಯೋ? ಮಗನೇ, ನಿನಗೆ ಗೊತ್ತಿಲ್ಲ–ಇವಳು ಒಬ್ಬ ಮಂತ್ರವಾದಿನಿಯ ಹತ್ತಿರ ಹೋಗಿ, ಯಂತ್ರವನ್ನು ತಂದು ನಿನ್ನ ಬಾಗಿಲಬಳಿ ಹೂತಿಟ್ಟಿದ್ದಳು (ನಾಫಿಜ್‌ಬೇಯು ಭುಜವನ್ನಳ್ಳಾಡಿಸಲು) ಏನು, ನಿನಗೆ ನಂಬಿಕೆಯಿಲ್ಲವೋ! ಕೇಳು– ಈ ವಿಚಾರವು ನನಗೆ ತಿಳಿದಕೂಡಲೆ ಒಬ್ಬ ನೌಕರನನ್ನು ಆ ಯಂತ್ರವನ್ನು ತೆಗೆಯಲು ಕಳುಹಿಸಿದೆನು. ಇಗೋ ನೋಡು, ಇಲ್ಲಿರುವದು ಕೊಂಚ ದೃಷ್ಟಿಹಾಕಿ ನೋಡು–ಇದನ್ನು. ಹೂತಿಟ್ಟ ಮಾರನೆಯದಿವಸವೇ ನೀನು ಖಾಯಿಲೆಯಾದೆ. ಇನ್ನು ನನ್ನನ್ನು ತಡೆಯಬೇಡ –ಇವಳಿಗೆ ತಕ್ಕ ಪ್ರತೀಕಾರ ಮಾಡಿದ ಹೊರತು ನಾನು ಸುಮ್ಮನಿರಲಾರೆ– ಮಾಡಿಯೇ ಮಾಡುವೆನು.

ನಾಫಿಜ್‌ಬೇ—(ವಿನಯದಿಂದ) ಅದೆಂದಿಗೂ ಆಗಕೂಡದು. ಹಾಜಿರೆಯನ್ನು ನಾನು ಮದುವೆಯಾಗುವವನಾಗಿದ್ದೇನೆ. ದಾಸಿಯೆಂದವಳಿಗೆ ನಾನವಳಿಗೆ ಅವಮಾನವಾಗಗೊಡುವದಿಲ್ಲ.

ಖಾನಮ್ ಅಫಂದಿ— (ನಿಕೃಷ್ಟದಿಂದ ಅದೇ ಮಾತನ್ನು ತಿರುವಿ ಹಾಕಿ) ಮದುವೆಯಾಗುವವನಾಗಿದ್ದೀಯೆ? ನಾಫಿಜ್, ನಿನಗೆ ಬುದ್ಧಿಭ್ರಮೆಯಾಗುತ್ತಿದೆ. (ಕೋಪದಿಂದ ನನ್ನ ಕಡೆ ನೋಡುತ್ತಾ) ನೀನೂ ಹಾಗೆಯೇ ತಿಳಿದುಕೊಂಡಿರುವೆಯೆಂದು ಕಾಣುತ್ತದೆ. ಈ ಆಶೆಯನ್ನೇ ಇಟ್ಟುಕೊಂಡಿರುವೆಯಲ್ಲವೇ? ಯಾಕೆ ಮೊದಲು ನಿನ್ನ ಜೀವದಮೇಲಿನ ಆಶೆಯನ್ನು ನೋಡಿಕೋ ನನ್ನ ಕೈಯಿಂದಲೇ ನಿನ್ನ ಪ್ರಾಣತೆಗೆದು ಬಿಡುವೆನು. ಇಂಥಾ ಅವಿವೇಕ ಕೃತ್ಯಕ್ಕೆ ಕೈಹಾಕಿದೆಯೇಕೆ? ನನ್ನ ಮಗನ ಹೆಸರು, ಕಮ್ಮಾರನಮಗಳ ಹೆಸರಿನೊಡನೆ ಸೇರಿಸಲ್ಪಡಲು ನಾನು ಒಪ್ಪುವೆನೆಂದು ಯೋಚಿಸುವಷ್ಟು ನಿನಗೆ ಧೈರ್ಯ ಬಂದಿತೋ?

ನಾಫಿಜ್‌ಬೇ — (ಉಲ್ಲಾಸರಹಿತನಾಗಿ) ನಿಮ್ಮ ಮಗನ ಹೆಸರು ಇದಕ್ಕಿಂತಲೂ ಕೇಡಾದ ಹೆಸರಿನೊಡನೆ ಸೇರಬಹುದಾಗಿತ್ತು. ಅಮ್ಮಾವರೇ, ಇನ್ನು

ಹೆಚ್ಚು ಹೇಳಬೇಕಾದುದಾಗಲೀ ಕೇಳಬೇಕಾದಾಗಲೀ ಅವಶ್ಯಕವಿಲ್ಲ. ನಾನು ಖಂಡಿತವಾಗಿಯೂ ಈ ಹುಡುಗಿಯನ್ನು ಮದುವೆಯಾಗುವೆನು. ಸಾಕು, ಇನ್ನು ಮುಗಿಯಿತು.

ಖಾನಮ್ ಆಫಂದಿಯವರು ಒಂದುಕ್ಷಣ ಕುರ್ಚಿಯನ್ನು ಹಿಡಿದು ಕೊಂಡು ನಿಂತುಕೊಂಡರು. ಅವರ ಕೈಗಳು ನಡುಗುತ್ತಾ ಮುಖವು ಕೆಂಪೇರುತ್ತಿತ್ತು.

ನಾನು— (ಉಡುಗಿದ ಸ್ವರದಿಂದ) ನಾಫಿಜ್ ಬೇ—

ಇನ್ನು ಮುಂದಕ್ಕೆ ಹೇಳುವವರಲ್ಲೇ ಖಾನಮ್ ಆಫಂದಿಯವರು ಕ್ರೋಧದಿಂದ ನನ್ನ ಕಡೆ ತಿರುಗಿ ಹೀಗೆಂದರು

ಖಾನಮ್ ಆಫಂದಿ— (ಕೋಪದಿಂದ ಕಂಪಿಸುವ ಧ್ವನಿಯಿಂದ) ನನ್ನೆದುರಿನಲ್ಲೇ ಅವನೊಡನೆ ಮಾತನಾಡುವಷ್ಟು ಧೈರ್ಯ! ನನ್ನ ಕೈಯ್ಯಿಂದ ತಪ್ಪಿಸಿ ಕೊಂಡು ಹೋಗುವೆನೆಂದು ತಿಳಿಯಬೇಡ. ನಿನ್ನನ್ನು ಕಾಪಾಡಲು ನಾಫಿಜ್ ಬೇಯು ಯಾವಾಗ್ಯೂ ಇಲ್ಲಿಯೇ ಇರುವದಿಲ್ಲ. ನನ್ನ ಕೈಗೆ ಸಿಕ್ಕಿಬೀಳುವ ಮೊದಲೇ, ಸತ್ತು ಹೋಗಿದ್ದರೆ ಚೆನ್ನಾಗಿತೆಂದು ಆಶಿಪಡುವಂಥಾ ಸಮಯ ಬಂದು ಬಿಡುವದರಲ್ಲಿದೆ.

ನಾಫಿಜ್ ಬೇ— (ಕೋಪದಿಂದ) ದೇವರದಯದಿಂದ ಹಾಗೆಂದಿಗೂ ಆಗದಿರಲಿ. ನಿಮ್ಮ ದಾಸಿಯರೊಡನೆ ಮನಸ್ಸುಬಂದಷ್ಟು ಕಠಿಣತೆಯಿಂದ ವರ್ತಿಸಬಹುದು ಆದರು ನಿಮ್ಮವರು—ಇವರನ್ನು ಹೇಗಾದರೂ ಕಾಣಿರಿ. ನನಗೂ ಆ ವಿಷಯಕ್ಕೂ ಸಂಬಂಧವಿಲ್ಲ. ಆದರೆ ಹಾಜಿರೆಯ ಒಂದು ತಲೆಗೂದಲನ್ನೂ ನಾನು ಮುಟ್ಟಗೊಡಿಸುವದಿಲ್ಲ.

ಈ ಮಾತನ್ನು ಕೇಳಿ ನಾನು ಒಂದುಹೆಜ್ಜೆ ಮುಂದೆಹೋದೆನು—ತಾಯಿ ಮಗನಿಗೆ ಮಾತು ವಿಚಿತ್ರ [illegible]ಹೋಗುತ್ತಿರುವದನ್ನು ನನಗೆ ನೋಡಲಾಗಲಿಲ್ಲ. ನನ್ನ ಸ್ಥಿತಿಯು ಆಗ "ದೇವರೇ ಗತಿಯಪ್ಪಾ" ಎನ್ನುವಂತಾಗಿತ್ತು. ನಡುಕವು ನಿಂತು ಈಗ ಸ್ಥೈರ್ಯ ಬಂದಿತು. ಬೇಗನೆ ಮುಂದೆ ಹೋಗಿ ಖಾನಮ್ ಆಫಂದಿಯವರ ಪಾದಗಳ ಮೇಲೆ ಬಿದ್ದೆನು.

ನಾನು— (ನಡುಗುವ ಸ್ವರದಿಂದ) ಖಾನಮ್ ರವರೇ, ತಾವು ನಾಫಿಜ್ ಬೇಯ ಮಾತನ್ನು ಗಮನಿಸಬಾರದು. ಅವನಿಗೆ ಬುದ್ಧಿಭ್ರಮಣೆಯಾಗಿರುವದು. ತಾನು ಏನು ಹೇಳುತ್ತಿರುವೆನೆಂದು ತಾನೇ ತಿಳಿಯನು. ನಾಳೆಬೆಳಿಗ್ಗೆ ಬಂದು, ತಾನು ಮಾತನಾಡಿರುವ ಕಾರ್ಯವು ದುಸ್ಸಾಧ್ಯವಾದುದೆಂದು ತಾನೇ ಒಪ್ಪಿಕೊಳ್ಳುವನು.

ಖಾನಸರ್ ಅಫಂದಿಯವರು ಒಂದು ನಿಮಿಷ ಸುಮ್ಮನಿದ್ದು, ಥಟ್ಟನೆ ಬಗ್ಗಿ ನನ್ನ ತಲೇಕೂದಲನ್ನು ಘಟ್ಟಿಯಾಗಿ ಹಿಡಿದು, ನಿರ್ದಯೆಯಿಂದ ಎಳೆಯುತ್ತಾ, ತನ್ನ ಕೈಗೆ ಸುತ್ತಿಕೊಂಡರು. ಅವರ ಉದ್ದೇಶವೇನಿತ್ತೋ ತಿಳಿಯದು. ಒಡನೆಯೇ ನಾಫಿಜ್ ಬೇಯು ಮುಂದೆ ಬಂದು ತಾಯಿಯ ಕೈಯನ್ನು ಹಿಡಿದುಕೊಂಡು, ನನ್ನ ಕೂದಲನ್ನು ಬಿಡಿಸಿ, ನನ್ನನ್ನು ತನ್ನ ಕಡೆ ಎಳೆದು ಕೊಂಡುಬಿಟ್ಟನು.

ನಾಫಿಜ್ ಬೇ— (ಮೆಲ್ಲನೆ, ನನ್ನೊಡನೆ) ಎಲ್ಲಿರುವೆಯೋ ಅಲ್ಲೇ ನಿಂತಿರು. ಈಗ ಅಪ್ಪಾವರ ಸ್ಥಿತಿಯು ಹೇಗಿರುವದೆಂದರೆ, ಸಮಯ ಸಿಕ್ಕಿದರೆ ನಿನ್ನನ್ನು ಕೊಂದುಹಾಕಿ ಬಿಡುವರು—ನಾನು ಕಾಪಾಡಲು ಸಹ ಅಸಾಧ್ಯವಾಗುವದು.

ಈ ಸಮಯಕ್ಕೆ ಮಹೀದಾಖಾನಮಳೂ ಮುಂದೆ ಬಂದು ಜೋರಿನಿಂದ "ನಾಫಿಜ್, ಎಷ್ಟು ಅವಮಾನಕರ. ಏನು ಹುಚ್ಚು ಹಿಡಿಯಿತೇ—ಅಪ್ಪಾವರೊಡನೆ ಈ ರೀತಿ ಮಾತನಾಡುತ್ತಿರುವೆ. ನಿಜವಾಗಿಯೂ, ತಾಯಿಯವರು ನಿನಗೆ ಈ ಹುಡುಗಿಯನ್ನು ಮದುವೆಯಾಗಲು ಅನುಮತಿಕೊಟ್ಟು ವಂಶಕ್ಕೆ ಕಳಂಕ ತರುವರೆಂದು ನೀನು ನಂಬಿದ್ದೀಯಾ" ಎಂದಳು.

"ಸಾಕು, ಈ ವಿಚಾರದಲ್ಲಿ ನಾನೂ ನೀನೂ ಹೊಂದುವದಿಲ್ಲ. ನನಗಾದರೋ, ಮದುವೆಯಾಗದಿದ್ದ ಸಂದರ್ಭದಲ್ಲಿ ಮಾತ್ರ ಹೆಚ್ಚು ಕಳಂಕವುಂಟಾಗುವದೆಂದು ತೋರುವದು."

ಮಹೀದಾಖಾನಮಳು ಮಾತನಾಡುತ್ತಿರುವಾಗ ನನ್ನ ದೃಷ್ಟಿಯು ಬಾಗಿಲಕಡೆ ಹೋಯಿತು. ನಸಿರುಲ್ಲಾ ಪಾಷಾರವರೂ ಅಫನ್ ಬೇಯೂ ಬಂದು ನಿಂತಿರುವರು—ಭಯದಿಂದ ನನ್ನ ಹೃದಯವು ಇನ್ನೂ ಹೆಚ್ಚು ನಡುಗಲಾರಂಭಿಸಿತು. ನಾಫಿಜ್ ಬೇಯು ಮಾತನಾಡುವದನ್ನು ನಿಲ್ಲಿಸಿದ ಕೂಡಲೇ ನಸಿರುಲ್ಲಾ ಪಾಷಾರವರು ಮುಂದೆ ಬಂದರು. ಮೌನವಾಗಿಯೂ ವ್ಯಾಕುಲಚಿತ್ತರಾಗಿಯೂ ಇದ್ದರು. ಅವರು ಬರುವ ಸದ್ದನ್ನು ಕೇಳಿ ಖಾನಸರ್ ಅಫಂದಿಯು, ಹಿಂತಿರುಗಿ ನೋಡಿದರು.

ಖಾನಸರ್ ಅಫಂದಿ — (ರೋಷ ಪರವಶರಾಗಿ ತನಗಿಂತ ನಸಿರುಲ್ಲಾ ಪಾಷಾರವರಿಗೆ ತಮ್ಮ ದೊಡ್ಡ ಪುತ್ರನ ಮೇಲೆ ಹೆಚ್ಚು ಅಧಿಕಾರವಿರುವದೆಂದು, ಇವತ್ತೇ ಮೊದಲನೇ ಸಾರಿ ತಿಳಿದಂತೆ) ಹಾಜಿರಾಯು ನಿಮ್ಮ ಮಗನಿಗೆ ಮಂತ್ರಹಾಕಿದ್ದಾಳೆ. ಅದರ ಕಾರಣವಾಗಿ ಅವನು ಅವಳಮೇಲೆ ಮೋಹಗೊಂಡು ಅವಳನ್ನು ಮದುವೆಯಾಗಲು ಹಠಹಿಡಿದಿದ್ದಾನೆ. ನಾನು ಅವನ ಇರಾದೆಯನ್ನು ತಪ್ಪಿಸಲು ಪ್ರಯತ್ನಪಡಲು, ನನ್ನೊಡನೆ ಮರ್ಯಾದೆ ವಿಹಾ

ನಡೆದುಕೊಂಡನಲ್ಲದೆ, ನಾನು ಹಾಜಿರೆಯನ್ನು ಅವಳ ತಪ್ಪಿಗಾಗಿ ಶಿಕ್ಷಿಸ ಬೇಕೆಂದಿದ್ದಾಗ, ನಾಫಿಜ್‌ಬೇಯು ನನ್ನ ಕೈಯನ್ನು ಭದ್ರವಾಗಿಹಿಡಿದು ಕೊಂಡು ಬಿಟ್ಟದರಿಂದ ಕೈ ಮುರಿದು ಹೋಗುವದರಲ್ಲಿತ್ತು. ಈ ವಿಧವಾದ ನಡವಳಿಕೆಯನ್ನು ಹೇಗೆ ಸಹಿಸುವಿರಿ ?

ನಾನು ನಾಫಿಜ್‌ಬೇಯಕಡೆ ನೋಡಿದೆನು. ಅವನ ಮುಖವು ಅತಿ ಬಿಳಿಚಿಕೊಂಡು ಹೋಗಿತ್ತು. ತನ್ನ ಕೋರಿಕೆಯನ್ನು ನೆರವೇರಿಸಿಕೊಳ್ಳಲು ಅದೇರೀತಿಯಾಗಿ ಅಭಿನಿವಿಷ್ಟನಾಗಿದ್ದಂತೆ ಕಾಣುತ್ತಿದ್ದನಲ್ಲದೆ, ತನ್ನ ತಂದೆ ಯನ್ನು ನೋಡಿದ ಮೇಲೆ ಆಸಂಕಲ್ಪವು ಇನ್ನೂ ಚೆನ್ನಾಗಿ ಬಲಿತಂತೆ ಕಾಣುತ್ತಿತ್ತು. ನಿಜವಾದ ವ್ಯಾಜ್ಯವು ಈಗ ಪ್ರಾರಂಭವಾಗುವದರಲ್ಲಿದೆ ಎಂದು ಯೋಚಿಸುತ್ತಿರುವಂತೆ ಕಾಣುತ್ತಿದ್ದನು.

ನಸೀರುಲ್ಲಾ ಪಾಷಾ—(ಮೆಲ್ಲನೆ) ಈ ಮಾತುಗಳನ್ನಾಡಲು ಇದು ಸಮಯ ವಲ್ಲ. (ತನ್ನ ಮಗನ ಕಡೆ ತಿರುಗಿ) ನಾನು ಯೋಚಿಸಿರುವಷ್ಟು ಹುಚ್ಚ ನಾಗಿಲ್ಲದಿದ್ದರೆ ಈಗಲೇ ನಿಮ್ಮ ತಾಯಿಯನ್ನು ನಿನ್ನ ತಪ್ಪನ್ನು ಕ್ಷಮಿಸಲು ಕೇಳಿಕೊಂಡು ನನ್ನೊಡನೆ ಮನೆಗೆ ನಡಿ. ಈಗ ನೀನು ಹೇಳುತ್ತಿದ್ದ ವಿಚಾರವು ವಿಶದವಾಗಿ ವಿವರಿಸಲ್ಪಡ ಬೇಕಾದದ್ದು. ನಿನ್ನ ಉತ್ತರವನ್ನು ಸಾಯಂಕಾಲ ಕೇಳುವೆನು.

ನಾಫಿಜ್‌ಬೇಯು ಮೌನದಿಂದ ಮುಂದೆಹೋಗಿ ತನ್ನ ತಾಯಿಯ ಕೈ ಹಿಡಿದುಕೊಂಡು ಮೆಲ್ಲನೆ ಮುದ್ದಿಟ್ಟನು.

ನಾಫಿಜ್‌ಬೇ— ತಾಯಿಯವರೇ, ನಾನೇನಾದರೂ ಮರ್ಯಾದೆಮೀರಿ ನಡೆ ದಿದ್ದರೆ ಕ್ಷಮಾಪಣೆ ಬೇಡುತ್ತೇನೆ. ಆದರೆ ನನ್ನ ಸಂಕಲ್ಪವನ್ನು ಮೊದಲಿ ನಂತೆಯೇ ಧೃಢವಾಗಿ ಹಿಡಿದು ಹಾಜಿರೆಯನ್ನು ಖಂಡಿತವಾಗಿಯೂ ಮದುವೆ ಯಾಗುವೆನು.

ಹೀಗೆಂದು ಹೇಳಿ, ಬಾಗಿಲಕಡೆ ಹೊರಟು ಕೊಠಡಿಯನ್ನು ದಾಟುವ ದಕ್ಕೆ ಮೊದಲು ಅಥರ್‌ಬೇಯಕಡೆ ನೋಡಿ ನನ್ನನ್ನು ಅವರಿಗೆ ಒಪ್ಪಿಸಿರು ವಂತೆ ಸಂಜ್ಞೆ ಮಾಡಿದನು. ಅಥರ್‌ಬೇಯು ಈ ಕಾರ್ಯವನ್ನು ಕೈ ಕೊಂಡು ನನ್ನ ಬಳಿ ಬಂದು ನಿಂತುಕೊಂಡನು.

ಅಥರ್‌ಬೇ — [ಈ ವಿಚಾರದಿಂದಲೂ ಮನಸ್ಸಿಗೆ ಸತ್ತುಹೋದಂತೆ] ಹಾಜಿರೇ, ನಡಿಯಮ್ಮಾ, ನಿನ್ನನ್ನು ಮನೆಗೆ ಕರೆದುಕೊಂಡುಹೋಗಿ ನಿನ್ನ ಕೊಠಡಿಗೆ ತಲುಪಿಸುವೆನು.

ಖಾಸಿಮ್ ಅಫೆಂದಿಯವರು ನನ್ನ ಕಡೆ ನೋಡಿದನು. ಆದರೇನೂ ಹೇಳಲಿಲ್ಲ.

ನಾಫಿಜ್‌ಬೇಯರು ಸೋತುಹೋಗಿ ಅಥಮ್‌ಬೇಯರಬಳಿ, ಗೆಲ್ಲುವ ಆಶೆ ಇನ್ನೂ ಕಡಮೆಯೆಂದು ತಿಳಿದುಕೊಂಡರು

ಅಥಮ್‌ಬೇಯು ತನ್ನ ಕೈಯನ್ನು ಕೊಡಲು ನಾನು ಹಿಡಿದುಕೊಂಡು ಅವರ ಜತೆಹೊರಟೆನು. ನಸಿರುಲ್ಲಾ ಪಾಷಾರವರೂ ನಾಫಿಜ್‌ಬೇಯೂ ಮುಂದೆ ಮುಂದೆ ಹೊರಟರು. ನಾವಿಬ್ಬರೂ ಅವರ ಹಿಂದೆ ಮೆಲ್ಲಮೆಲ್ಲನೆ ನಡೆದೆವು. ನಾನು ಬಹಳ ನಿತ್ರಾಣಳಾಗಿದ್ದುದರಿಂದ ಇಳಿಜಾರಾದ ಬೆಟ್ಟವನ್ನಿಳಿಯಲು ಕಷ್ಟವಾಗಿತ್ತು. ಅಥಮ್‌ಬೇಯು ನನ್ನ ದುರ್ಬಲತೆಯನ್ನು ನೋಡಿ ನನ್ನನ್ನು ತಮ್ಮ ಮಗ್ಗುಲಿಗೆ ಕರೆದುಕೊಂಡು, ಹಿಡಿದಿಳಿಸಿಕೊಂಡು ಹೋಗುತ್ತಿದ್ದರು ಆಗ ನನಗೆ ಅವರೂ ಸಹ ಇತರರಂತೆ ನನ್ನ ಮೇಲೆ ಕೋಪಗೊಂಡಿರುವರೇ ಇಲ್ಲವೇ ಎಂದು ಆಲೋಚನೆಯಾಯಿತು. ಆದರೂ, ಇಷ್ಟೊಂದು ಜನರು ಕೋಪಗೊಂಡಿರುವಾಗ ಒಬ್ಬರು ದಯಾಶೀಲರಾಗಿದ್ದರೆ ಏನೂ ಗಣನೆಯಿರುವದಿಲ್ಲ. ಗಣನೆಯುಂಟೆಂದು ಒಂದುವೇಳೆ ಕೊಂಚಹೊತ್ತು ಯೋಚಿಸಿಕೊಂಡರು ಸಹ, ಬೂಹಾವರೆಯು ನನ್ನ ಮೇಲೆ ಹೇಳಿರುವ ಮಾತುಗಳನ್ನು ಕೇಳಿದಮೇಲೆ ಅವರು ನನ್ನ ವಿಷಯ ಒಳ್ಳೆಯದನ್ನು ಯೋಚಿಸುವ ಸಂಭಾವನೆಯು ಇರಲಿಲ್ಲ. ಅವರು ತಮ್ಮ ತಾಯಿಯ ಎದುರಾಗಿ ನನಗೆ ಆಗ ತಮ್ಮ ನೆರಳಿನಾಶ್ರಯ ಕೊಟ್ಟುದರ ಕಾರಣವು, ಸ್ತ್ರೀಹಿಂಸೆಯು ಪುರುಷತನಕ್ಕೆ ಅಸಂಗತವಾದುದೆಂದು ತಿಳಿದುಕೊಂಡಿದ್ದುದರಿಂದಾಗಿತ್ತು. ಈ ಸಮಯದಲ್ಲಿ ನನಗೆ, ಖಾನಮ್ ಆಫಂದಿಯವರು ಬಗ್ಗಿ ನನ್ನ ಕೂದಲನ್ನು ಹಿಡಿದುಕೊಂಡಿದ್ದುದೂ, ಮುಖವು ರೋಷದಿಂದ ವಿಕಾರಹೊಂದುತ್ತಿದ್ದುದೂ ಜ್ಞಾಪಕಬಂದು ನಡುಗಲಾರಂಭಿಸಿದೆನು. ಅಥಮ್‌ಬೇಗೂ ಸಹ ಇದು ತಿಳಿಯಿತು ಅಷ್ಟುಹೊತ್ತಿಗೆ ನಾವು ಮನೆಯ ಹೊರಭಾಗವನ್ನು ತಲುಪಿ, ಹರಮ್ ಸರಾಕ್ಕೆ ಹೋಗುವ ಮೆಟ್ಟಿಲಿನ ಬಳಿ ಬಂದಿದ್ದೆವು.

ಅಥಮ್‌ಬೇ— (ಒಂದು ಕೈಯ್ಯಿಂದ ನನ್ನ ನಡುವನ್ನು ಹಿಡಿದುಕೊಂಡು) ನಿನ್ನಿಂದ ಕೊಂಚವೂ ನಡೆಯಲಾಗುವದಿಲ್ಲ. ಹಾಜಿರೇ, ಪಾಪ, ನೀನಿವತ್ತು ಘೋರವಾದ ಕಷ್ಟವನ್ನನುಭವಿಸಿರುವೆ.

ನಾನು ವಿಸ್ಮಯದಿಂದ ಅವರಕಡೆ ನೋಡಿದೆನು. ಅವರ ಮಾತಿನಿಂದ ಅವರಿಗೆ ನನ್ನ ಸ್ಥಿತಿಯನ್ನು ಕಂಡು ಕನಿಕರವೂ ಪಶ್ಚಾತ್ತಾಪವೂ ಉಂಟಾಗಿತ್ತೆಂದು ತೋರಿತು. ಬೆಳಕಿಗೆಬಂದು ಅವರ ಮುಖವನ್ನು ನೋಡಲು ಬಹಳ ದುಃಖಪಡುತ್ತಿರುವಂತೆ ಇದ್ದವು. ಈ ಸಂಗತಿಯು ನನ್ನ ಮನಸ್ಸಿನಲ್ಲಿ ವಿಚಿತ್ರ ಪರಿಸ್ಥಿತಿಯನ್ನುಂಟುಮಾಡಿತು. ಬಹಳ ಹೊತ್ತಿನಿಂದ ನನ್ನ ಕಣ್ಣು

ಗಳಲ್ಲಿ ತುಂಬಿನಿಂತಿದ್ದ ಅಶ್ರುವು ಈ ಸ್ಥಿತಿಯನ್ನು ಕಂಡು ತಡೆಯಿಲ್ಲದೆ ಹೊರಗೆ ಹರಿದು ಬಂದಿತು. ನಾನು ಧಾರಾಕಾರವಾಗಿ ಅಳತೊಡಗಿದೆನು. ಅವರು ನನ್ನೊಡನೆ ಒಂದು ಮಾತನ್ನೂ ಆಡದೆ, ಪರಮುಖರಾದ ಬಾಗಿಲನ್ನು ತೆಗೆದು, ನನ್ನನ್ನು ನನ್ನ ಕೊಠಡಿಯ ಬಳಿ ತಂದುಬಿಟ್ಟರು

ಅಥರ್ ಬೇ—(ಹಿಂತಿರುಗುವಾಗ) ಇನ್ನು ವಿಶ್ರಮಿಸಿಕೊ. ನಿನಗೆ ವಿಶ್ರಾಂತಿಯು ಅವಶ್ಯಕವಾಗಿರುವದು. ಇವತ್ತು ರಾತ್ರಿ ಯಾರಾದರೂ ನಿನ್ನನ್ನು ಹಿಂಸಿಸುವರೆಂದು ಕೊಂಚವೂ ಭೀತಿಪಡಬೇಡ. ನಾನಿನ್ನು ಹೊರಡುವೆನು. ಆದರೆ ನಿನಗೆ ನನ್ನ ಅವಶ್ಯಕತೆಯುಂಟಾದರೆ ನನ್ನನ್ನು ಕೂಗಲು ಮರೆಯಬೇಡ. ನಾನು ತಕ್ಷಣವೇ ಬಂದು ಬಿಡುವೆನು.

ನಾನು ಅವರನ್ನು ವಂದಿಸಲು ಪ್ರಯತ್ನಿಸಿ ಇನ್ನೂ ಮೊದಲನೆಯ ಮಾತನ್ನು ಹೇಳುವದರೊಳಗೇ ಅವರು ಬಾಗಿಲನ್ನು ಹಾಕಿಕೊಂಡು ಹೊರಟು ಹೋದರು.-ಅವರು ಹೋದ ತಕ್ಷಣವೇ ನಾನು ಮಾಡಿದ ಮೊದಲನೆಯ ಕೆಲಸವ್ಯಾವುದೆಂದರೆ ಬಾಗಿಲಿಗೆ ಎರಡು ಬೀಗಗಳನ್ನು ಹಾಕಿಕೊಂಡು ಮಂಚದ ಮೇಲೆ ಕುಳಿತು ಅಂದಿನ ದಿನ ನಡೆದ ಅನಾಹುತವನ್ನು ಕುರಿತು ಸಾವಧಾನದಿಂದಾಲೋಚಿಸತೊಡಗಿದೆನು.

ಏಳನೆಯ ಪರಿಚ್ಛೇದ

ರಾತ್ರಿಯನ್ನೆಲ್ಲಾ ಮಂಚದ ಮೇಲೆ ಕುಳಿತುಕೊಂಡೇ ಕಳೆದೆನು. ಬೆಳಗಾಗುತ್ತಲೇ ಎದ್ದು ಕಿಟಕಿಯ ಬಳಿ ಹೋದರೆ, ತಲೆಯ ನೋವಿನಿಂದ ಒಡೆದು ಹೋಗುತ್ತಿತ್ತು. ನಿಂತುಕೊಳ್ಳಲು ಸಹ ಕಷ್ಟವಾಯಿತು. ರಾತ್ರಿಯನ್ನು ಕಳೆಯುವದೇ ಕಷ್ಟವಾಗಿತ್ತು. ನಿನ್ನೆಯ ದಿನದ ಘಟನೆಯಿಂದ, ಬುದ್ಧಿಗೆ ಯೋಚನೆ ಮಾಡಲು ಸಹ ಶಕ್ತಿಯಿರಲಿಲ್ಲ. ರಾತ್ರಿಯೆಲ್ಲಾ ಮೂರು ಸಲ ಎದ್ದು ಕುಳಿತೂ ಮಾಡುತ್ತಿದ್ದೆನು ಕುಳಿತಿರುವ ಹಾಗೆಯೇ ಯಾರದಾದರೊಂದು ಮಾತಾಗಲೀ ನೋಟವಾಗಲೀ ಜ್ಞಾಪಕ ಬಂದರೆ, ಅತಿ ದುಃಖವುಂಟಾಗಿ, ಅದನ್ನು ದೂರಮಾಡಲು ಮಗ್ಗಲಿಗೆ ಹೊರಳುತ್ತಲೂ ಎದ್ದು ನಿಲ್ಲುತ್ತಲೂ ಇರಬೇಕಾಗಿತ್ತು. ಮನಸ್ಸು ಕೆಟ್ಟು ಹಾಳಾಗಿ ಹೋಗಿದ್ದುದರಿಂದ, ವಿವೇಕಪೂರ್ವದೊಂದಾಲೋಚನೆಯೂ ತೋರದೆ ಆದಿನ ನಡೆದ ಸಂಗತಿ ಮಾತ್ರ ಕಣ್ಣಮುಂದೆ ಚಿತ್ರಿಸಲ್ಪಡುತಿತ್ತು. ಸುಮ್ಮನೆ ಅದನ್ನೇ ನೋಡುತ್ತಿದ್ದೆನು. ಇಲ್ಲಿಯವರೆಗೆ ಎಲ್ಲಾ ಸರಿಯಾಗಿತ್ತು—ಈಗ ಪಶ್ಚಾತ್ತಾ

ನನ್ನ ಚಿಂತೆಯು ಅನರಿಸಿಕೊಂಡುದರಿಂದ ಮನಸ್ಸು ಕುಸಿದು ಹೋಗುತ್ತಲಿತ್ತು. ನಾಫೀಜ್‌ಬೇಯೊಡನೆ ನಾನೇಕೆ ಇನ್ನೂ ಹೆಚ್ಚು ಖಂಡಿತವಾಗಿ ಮಾತನಾಡಲಿಲ್ಲ? ಆ ಒಂದು ಗಳಿಗೆ ಮಾತ್ರವಾದರೂ ಅವನ ಪ್ರೇಮವು ನನ್ನನ್ನು ತಾಗಲು ಅವಕಾಶ ಕೊಟ್ಟೆನೇಕೆ? ಅವನ ಮಾತನ್ನೇಕೆ ಕೇಳುತ್ತಾ ನಿಂತೆ? ಅದಕ್ಕೋ ದಾವೂದನನ್ನು ಪ್ರೀತಿಸುತ್ತೇನೆಂದು ಸುಳ್ಳನ್ನಾದರೂ ಹೇಳಿದ್ದಿದ್ದರೆ! ಈಗ, ಅವನನ್ನೇ ಮದುವೆಯನ್ನಾದರೂ ಮಾಡಿಕೊಂಡು ಬಿಟ್ಟಿದ್ದರೆ ಎಷ್ಟೋ ಸುಖವಾಗಿರುತ್ತಿತ್ತೆಂದು ಕಾಣಿಸುತ್ತಿತ್ತು. ಆಗ ನನ್ನ ದುರ್ಭಾಗ್ಯಕ್ಕೆ ನಾನು ಅಳಬೇಕಾಗಿತ್ತೇ ಹೊರತು, ನನ್ನ ದೆಸೆಯಿಂದ ನಸಿರುಲ್ಲಾ ಪಾಷಾದವರ ಸುಖ ಸಂತೋಷದ ಬೀಡಿನಲ್ಲಿ ಮನಸ್ತಾಪವುಂಟಾಯಿತೆಂದಾಗಲೀ, ಖಾನಮ್ ಆಫಂದಿಯವರಿಗೆ ತಮ್ಮ ಪ್ರೇಮ ಪುತ್ರನಾದ ನಾಫೀಜ್ ಬೇಯ ಆಜ್ಞೋಲ್ಲಂಘನೆಯ ಪೆಟ್ಟು ತಾಕಿತೆಂದಾಗಲೀ, ನಸಿರುಲ್ಲಾ ಪಾಷಾರವರಂಥ ದಯಾಶೀಲರಿಗೂ, ಪ್ರಸನ್ನಚಿತ್ತರಿಗೂ ಚಿಂತೆಯು ಮುಸುಗಿಕೊಂಡಿತೆಂದಾಗಲೀ ವ್ಯಥೆಪಡಬೇಕಾಗಿರಲಿಲ್ಲ. ಎರಡನೇಯದಾಗಿ–ಈಗ ಅವನ್ನು ಯೋಚಿಸಿಕೊಳ್ಳುವದು ಕಷ್ಟವಾಗಿದ್ದರೂ, ಮನಸ್ಸು ಎಷ್ಟೇ ಹೇಳಿದರೂ ಒಪ್ಪದಿದ್ದರೂ–ದಾವೂದನನ್ನು ಮದುವೆಯಾಗಿದ್ದರೆ ಕ್ರಮೇಣ ನಾನೇ ಅವನನ್ನು ಪ್ರೀತಿಸಲಾರಂಭಿಸುತ್ತಿದ್ದೆನು. ಮಧ್ಯಾಹ್ನದವರೆಗೂ ನನ್ನ ಬಳಿ ಯಾರೂ ಬರಲಿಲ್ಲವಾದುದರಿಂದ ಈ ವಿಷಯವನ್ನೆಲ್ಲ ಚೆನ್ನಾಗಿ ಪರಿಶೀಲಿಸಲು ಸಮಯ ದೊರೆಯಿತು. ನಾನು ಸಹರಿ (ಪ್ರದೋಷದ ಊಟವನ್ನು) ಸಹ ಮಾಡಲಿಲ್ಲವಾದುದರಿಂದ ದುರ್ಬಲತೆಯು ಅತಿಯಾಗಿದ್ದರೂ ಉಪವಾಸವನ್ನು ಮಾತ್ರ ಬಿಡುವದಿಲ್ಲವೆಂದು ಮನಸ್ಸು ಮಾಡಿಕೊಂಡೆನು. ಕರುಣಾಳುವಾದ ದೇವನ ಸೇವೆಗೆಯ್ಯದೆ ಅವನ ಸಹಾಯ ಮಾತ್ರ ಬೇಡುವದು ಹೇಗೆ?

ನಾನು ತಳಮಳಿಸುತ್ತ ಕುಳಿತಿರುವಾಗ ಯಾರೋ ಬಾಗಿಲನ್ನು ತಟ್ಟಿದರು. ಖಾನಮ್ ಆಫಂದಿಯವರು ಏನೋ ಹೇಳಿ ಕಳುಹಿಸಿರಬಹುದೆಂದು ತವಕಿಸುತ್ತ, ಎದ್ದು ತಕ್ಷಣವೇ ಬಾಗಿಲನ್ನು ತೆರೆದೆನು. ನಾನು ಊಹಿಸಿದುದು ಸರಿಯಾಗಿತ್ತು. ಖಂಜೆಯು ವ್ಯಾಕುಲವದನೆಯಾಗಿ ಒಳಗೆ ಪ್ರವೇಶಿಸಿದಳು.

ಖಂಜಾ—ನೀನು ಉಪವಾಸವಿರುತ್ತೀಯಾ?

ನಾನು ಹೌದೆಂದೆನು. ಖಂಜೆಯು ಇನ್ನು ನನ್ನನ್ನು ಪ್ರೀತಿಸುವಳೋ ಇಲ್ಲವೋ ಎಂಬುವನ್ನು ತಿಳಿದುಕೊಳ್ಳಲಪೇಕ್ಷಿಸಿ ಅವಳ ಕೈಯನ್ನು ಹಿಡಿದುಕೊಂಡು ದೈನ್ಯದಿಂದ "ಬೂಹಾವರೆಯ ಮಾತನ್ನು ನೀನು ನಂಬಲಿಲ್ಲ ತಾನೆ.

ಸುಳ್ಳು ಹೇಳುತ್ತಿರುವಳೆಂಬುದನ್ನು ತಿಳಿದುಕೊಂಡಿರುವೆ ತಾನೆ," ಎಂದು ಕೇಳಿದೆನು.

ಖಂಜಾ—(ವ್ಯಾಕುಲ ಚಿತ್ತಳಾಗಿ) ಹೇಳಲಾರೆ. ಯಂತ್ರವೇನೋ ಬೂದಾವರೆಯು ತೋರಿಸಿದ ಜಾಗದಲ್ಲಿ ಸಿಕ್ಕಿತು. ನಿಜವಲ್ಲದಿದ್ದರೆ ಅಲ್ಲೇಕೆ ಸಿಕ್ಕುತ್ತಿತ್ತು.

ನಾನು—ಅವಳೇ ಆ ಯಂತ್ರವನ್ನು ಅಲ್ಲಿ ಹೂತಿಟ್ಟಳು.

ತರುವಾಯ ನಾನು ಎಲ್ಲ ವಿಷಯವನ್ನೂ, ಮಂತ್ರವಾದಿನಿಯ ಬಳಿ ಹೋದುದನ್ನೂ ಯಂತ್ರವನ್ನು ತಂದುದನ್ನೂ ತಿಳಿಸಿದೆನು. ಖಂಜೆಯು ಆಲೈಸಿ ಕೇಳುತ್ತಿದ್ದು, ನಾನು ಮುಗಿಸಿದಕೂಡಲೆ ನನ್ನನ್ನು ತಬ್ಬಿಕೊಂಡು ಹೇಗೆಂದಳು. "ಪ್ಯಾರಿ ಹಾಜಿರೇ, ನಿನಗೆ ಬಹಳ ಅನ್ಯಾಯ ಮಾಡಲ್ಪಟ್ಟಿರುವದಲ್ಲದೆ ಇದು ಇನ್ನೂ ಪ್ರಾರಂಭವೆಂದು ನನಗೆ ಶಂಕೆಯಾಗುತ್ತದೆ. ಇವತ್ತು ಖಾಸಮ್ ಆಫಂದಿಯವರು, ನಿನ್ನನ್ನು ಖಾಲಿಫಳ (ಲೌಂಡಿಯರ ದಾರೋಗ) ಕೊಠಡಿಗೆ ಕರೆದೊಯ್ಯಲು ಅಪ್ಪಣೆ ಮಾಡಿದ್ದಾರೆ. ಸಧ್ಯಕ್ಕೆ ನೀನು ಅಲ್ಲೇ ಇರಬೇಕಾಗಬಹುದೆಂದು ಕಾಣುತ್ತದೆ. ಅಧಮ್ ಬೇಯವರು ಖಾಸಮ್ ಆಫಂದಿಯವರ ಜತೆಯಲ್ಲೇ ಇರುವದರಿಂದಲೂ, ಹೊರಗೆ ಹೋಗುವಂತೆ ಕಾಣಿಸದಿರುವದರಿಂದಲೂ, ಇವತ್ತು ಅವರು ನಿನ್ನ ಮೇಲೆ ಮತ್ತೇನೂ ಹೆಚ್ಚು ಅಧಿಕಾರವನ್ನು ಮಾಡಲಾರರು.

ನಾನು—ಅವರು ಏನು ಹೇಳುತ್ತಾರೆ ?

ಖಂಜಾ—ಏನೂ ಇಲ್ಲ. ಅವರು ಈ ವಿಷಯವನ್ನು ಪ್ರಸ್ತಾಪಿಸಲು ಇಚ್ಛಿಸುವದಿಲ್ಲ. ಆದರೆ ಇದುವರೆಗೆ ದಫ್ತರಿಗೆ ಹೋಗಲಿಲ್ಲ. ಬೆಳಗಿನಿಂದಲೂ ತಾಯಿಯ ಕೊಠಡಿಯಲ್ಲೇ ಬರೆಯುತ್ತಾ ಕುಳಿತಿರುವರು. ತಾವು ಇರುವದರಿಂದ, ಖಾಸಮ್ ಆಫಂದಿಯವರು ನಿನ್ನನ್ನು ಹಿಂಸಿಸಲು ಹಿಂತೆಗೆಯುವರೆಂದು ಅವರು ಭಾವಿಸಿರುವುದೇ ಇದಕ್ಕೆ ಕಾರಣವೆಂದು ನನಗೆ ಸ್ಪಷ್ಟವಾಗಿ ತೋರುತ್ತದೆ.

ನಾನು—ನಸಿರುಲ್ಲಾ ಪಾಷಾರವರು ? ರಾತ್ರೆ, ಅವರಿಗೂ ನಾಫಿಜ್ ಬೇಗೂ ಏನೇನು ಮಾತುಕಥೆ ನಡೆಯಿತೆಂಬುದು, ನಿನಗೇನಾದರೂ ತಿಳಿಯಿತೇ ?

ಖಂಜೆ—ಇಲ್ಲ. ಇದುವರೆವಿಗೇನೂ ತಿಳಿಯಲಿಲ್ಲ. ಬಹಳ ಹೊತ್ತಿನವರೆಗೂ ತಂದೆಯೂ ಮಗನೂ ಒಟ್ಟಿಗಿದ್ದರು. ಆಮೇಲೆ ನಾಫಿಜ್ ಬೇಯು, ನೆಟ್ಟಗೆ ತನ್ನ ಕೊಠಡಿಗೆ ಹೊರಟುಹೋದನು. ಇವತ್ತು ಬೆಳಗ್ಗೆ ತಂದೆಯೂ ಮಗನೂ ಜತೆಯಲ್ಲಿ ಹೊರಗೆ ಹೋಗಿರುವರು. ಅಧಮ್ ಬೇಯು ನಿನ್ನ

ಸಂರಕ್ಷಣೆಯನ್ನು ಮಾಡುವರೆಂದು ನಾಫಿಜ್‌ಬೇಯು ಚೆನ್ನಾಗಿ ಅರಿತಿರುವ ಕಾರಣದಿಂದ, ತನ್ನ ತಾಯಿಯೊಡನೆ ನಿನ್ನ ವಿಚಾರವೇನನ್ನೂ ಹೇಳಲಿಲ್ಲ. ಆದರೆ, ಅವನು ಹೊರಗೆಹೋಗಕೂಡದಂತೆ, ಖಾನಮ್‌ಅಫಂದಿಯವರು, ಅವನ ಸಾಮಾನುಗಳನ್ನೆಲ್ಲ ಮದದಾಸ್‌ಖಾನೆಗೆ ಕಳುಹಿಸಿಬಿಟ್ಟರು. ಇವತ್ತಿನಿಂದ ಅವನು ಅಲ್ಲೇ ಮಲಗಬಹುದು. ಪಾಷಾಸಾಹೇಬರ ಅಪ್ಪಣೆಪಡೆದು, ಅವರು ಹೀಗೆ ಮಾಡುತ್ತಿರುವರೆಂದು ಹೇಳಲಾರೆನು. ಆದರೂ ಹಬ್ಬಗಳಿಗೆಲ್ಲ, ನಾಫಿಜ್ ಬೇಯನ್ನು ಹರಮ್‌ಸರಾಯಿಗೆ ಬಿಡಕೂಡದೆಂದು ಕಟ್ಟುಮಾಡಲ್ಪಟ್ಟಿದೆ.

ನಾಫಿಜ್‌ಬೇಗೆ ಇಷ್ಟು ಅವಮಾನ ಮಾಡಲ್ಪಟ್ಟಿರುವದನ್ನು ಕೇಳಿ, ತಕ್ಷಣವೇ ನನ್ನ ಸಂಕಟವನ್ನೆಲ್ಲಾ ಸಂಪೂರ್ಣವಾಗಿ ಮರೆತುಬಿಟ್ಟು, ಹೀಗೆಂದೆನು ; "ಇದು ಬಹಳ ಅನ್ಯಾಯವು. ಹೀಗೆಂದಿಗೂ ಆಗಕೂಡದು"

ಖಂಜಾ— (ಅಲಕ್ಷ್ಯದಿಂದ) ನಿಜ. ನಾಫಿಜ್‌ಬೇಗೆ ಕೋಪ ಉಂಟಾಗಬಹುದು. ನಡೆಯುವವು, ಇನ್ನಿದ್ದರೆ ಖಾನಮ್‌ಅಫಂದಿಯವರು ಸಿಟ್ಟುಗೊಳ್ಳುವರು. ಒಂದುವೇಳೆ ನಾನು ನಿನ್ನನ್ನು ನೋಡಲು ಬರದಿದ್ದರೆ, ನನ್ನನ್ನು ಕಠಿಣ ಹೃದಯಳೆಂದು ನೀನು ಭಾವಿಸಕೂಡದು. ಸ್ಥಿತಿಯೇನಾಗಿದೆಯೆಂದರೆ, ನಾನು ಬರುವದು ನಿನಗೇನು ಆದಾಯಕರವಾಗದಿದ್ದರೂ, ನನಗದು ನಷ್ಟಕರವಾಗುವ ಸಂಭವವಿದೆ.

ಅವಳು ನನ್ನನ್ನು ಮುದ್ದಿಸಿದಳು. ನಾನವಳನ್ನು ವಂದಿಸಿ, ಅವಳೊಂದಿಗೆ ಹೊರಟೆನು. ಖಾಲಿಫಳು ಅಲ್ಲಿದ್ದವಳು, ನಮ್ಮನ್ನು ಕಂಡು ಎದ್ದು ನಿಂತಳು.

ಖಾಲಿಫಾ— (ಸಿಡುಕಿನಿಂದ) ಖಾನಮ್‌ಅಫಂದಿಯವರು ನಿನ್ನನ್ನು ನೆಲಮಾಳಿಗೆಯಲ್ಲಿ ಕೂಡಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು. ಸಧ್ಯಕ್ಕೆ ನೀನು ಈ ಕೊಠಡಿಯಲ್ಲೇ ಬಿದ್ದಿರಬೇಕು. ನಾನೀಗ ಹೊರಟು ಹೋಗುವೆನು. ಒಬ್ಬಂಟಿಯಾಗಿ ಕುಳಿತು ನಿನ್ನ ಅವಿವೇಕತನವನ್ನೆಲ್ಲ ಕುರಿತು ಚೆನ್ನಾಗಿ ಆಲೋಚಿಸಿಕೊ.

ಹೀಗೆಂದು ಹೇಳಿ ಬಾಗಿಲನ್ನು ಮುಚ್ಚಿ, ಬೀಗವನ್ನು ಹಾಕಿಕೊಂಡು ಅವಳು ಹೊರಟು ಹೋದಳು. ನಾನೊಬ್ಬಳೇ ಸೆರೆಯಲ್ಲುಳಿದೆನು. ಆದಿನವೆಲ್ಲಾ ಬಹು ಕಷ್ಟದಿಂದ ಕಳೆಯಿತು. ಯಾರೂ ನನ್ನ ಬಳಿ ಬರಲಿಲ್ಲ. ಅಫಮ್‌ಬೇಯವರು ದಿನವೆಲ್ಲಾ ತಾಯಿಯ ಕೊಠಡಿಯಲ್ಲೇ ಇದ್ದಿರಬಹುದು. ಇಲ್ಲವಾದರೆ, ಖಾನಮ್‌ಅಫಂದಿಯವರು ನನ್ನನ್ನು ಹೀಗೆ ಸುಮ್ಮನಿರಲು ಬಿಡುತ್ತಿರಲಿಲ್ಲ. ಇಷ್ಟುಹೊತ್ತು ಅಳ್ಳಾಡದೆ ಕುಳಿತಿದ್ದುದರಿಂದಲೂ, ನನ್ನ

ಅಸಹಾಯತೆಯನ್ನು ಯೋಚಿಸಿಕೊಂಡೂ, ಹಣೇಬರಹವನ್ನೆಳ್ಳಷ್ಟಾದರೂ ಬದಲಾಯಿಸಲು ಶಕ್ತಿಯಿಲ್ಲದುದನ್ನು ಕಂಡೂ, ನಾನು ಹುಚ್ಚಿಯಂತಾಗಿ ಹೋದೆನು. ಸಂಜೆಯು ಘಂಟೆಹೊಡೆಯಿತಾದರೂ, ಯಾರೂ ಬರಲಿಲ್ಲ. ಎಲ್ಲರೂ ನನ್ನನ್ನು ಮರೆತಿದ್ದಂತೆ ತೋರಿತು. ಸುಮಾರು ಒಂದುಘಂಟೆಯ ಮೇಲೆ ಖಂಜೆಯು ಬಂದು, ತನ್ನೊಡನೆ ತಂದಿದ್ದ ತಟ್ಟೆಯನ್ನು ನನ್ನ ಮುಂದಿರಿಸಿದಳು.

ಖಂಜಾ— ಇದೋ ತೆಗೆದುಕೋ. ಈಗತಾನೆ ಊಟದ ಮನೆಯಲ್ಲಿರುವಾಗ, ಅಧಮ್‌ಬೇಯವರು, ನೀನು ಊಟಮಾಡಿದೆಯೋ ಇಲ್ಲವೋ ಎಂದು ಕೇಳಿದರು. ಅವರ ಪತ್ನಿಯು, ಇಲ್ಲವೆಂದು ಹೇಳಲು, ನನಗೆ ಊಟವನ್ನು ತೆಗೆದುಕೊಂಡು ಹೋಗಲು ಅಪ್ಪಣೆ ಮಾಡಿದರು. ಪಾಷಾಸಾಹೇಬರು ಇದ್ದುದರಿಂದ ಖಾಸಮ್ ಆಫಂದಿಯವರಿಗೆ ಅಡ್ಡಿಬರಲು ಧೈರ್ಯವಿರಲಿಲ್ಲ. ಇಲ್ಲದಿದ್ದರೆ ನಾನು ಇಲ್ಲಿಬರಲು ಹೇಗೆ ಸಾಧ್ಯವಾಗುತ್ತಿತ್ತು ? ನಿಜವಾಗಿಯೂ ಅಧಮ್ ಪಾಷಾರವರು ಬಹು ಕರುಣೆಯನ್ನು ತೋರಿಸಿರುವರು. ಏನು ?

ನಾನು— ಅತ್ಯಂತ.

ಅಧಮ್‌ಬೇಯವರು ಇಷ್ಟು ನನ್ನ ಹಿತಚಿಂತನೆ ಮಾಡುತ್ತಿರುವವನ್ನು ಯೋಚಿಸಿಕೊಂಡು, ನನಗೆ ಬಹಳ ಅಳು ಬರುವಂತಾಯಿತು. ಊಟ ಮಾಡುವ ಪ್ರಯತ್ನವು ನಿಷ್ಫಲವಾಯಿತು ನನ್ನಿಂದ ಊಟಮಾಡಲಾಗಲಿಲ್ಲ. ಕೊಂಚ ಷರಬತ್ತನ್ನು ಕುಡಿದು ಊಟದತಟ್ಟೆಯನ್ನು ಒಂದು ಕಡೆ ತಳ್ಳಿಬಿಟ್ಟೆನು.

ನಾನು— ನಾಫಿಜ್‌ಬೇಯು ಇನ್ನೂ ಬಂದನೋ ಇಲ್ಲವೋ ?

ಖಂಜಾ— ಹೂಂ. ಹರಮ್‌ನರಾವ ಬಾಗಿಲವರೆಗೆ ಹಬ್ಬಿಗಳು ಒಳಗೆ ಹೋಗಲು ತಡೆದರು.

ನಾನು— (ವ್ಯಾಕುಲತೆಯಿಂದ) ಆಮೇಲೆ ? ಅವನೇನು ಮಾಡಿದನು ?

ಖಂಜಾ— ಏನೂ ಇಲ್ಲ. ನಾಫಿಜ್‌ಬೇಯು ತನ್ನ ಅಂತಸ್ತನ್ನು ಚೆನ್ನಾಗಿ ಅರಿತವನಾದುದರಿಂದ, ತನಗಾದ ವ್ಯಥೆಯನ್ನು ಆಳುಗಳ ಮುಂದೆ ಎಂದಿಗೂ ತೋರ್ಪಡಿಸುವವನಲ್ಲ.

ನಾನು—ಖಾಸಮ್ ಆಫಂದಿಯವರು ಮಾಡಿರುವದೆಲ್ಲಾ ನಸಿರುಲ್ಲಾ ಪಾಷಾರವರ ಒಪ್ಪಿಗೆಯಿಂದಲೇ ?

ಖಂಜಾ— ಹೌದು. ನಾಫಿಜ್‌ಬೇಯು ಕೆಲವು ದಿನ ಹೊರಗೇ ಇದ್ದರೆ ಒಳ್ಳೆಯದೆಂದು ಅವರು ಹೇಳುತ್ತಾರೆ. ಅವರು ಇವನ್ನು ಒಂದು ಸಣ್ಣ

ಕಾರವೆಂದು ತಿಳಿದಿರುವರು. ನಿನ್ನ ಮದುವೆಯು ಇನ್ನುಎಂಟು ಹತ್ತುದಿನ ಗಳಗಾಗಿ ದಾವೂದನೊಡನೆ ಆಗಿಹೋದರೆ, ಈ ವಿಚಾರವು ಕೊನೆಗಾಣು ವೆಂದು ಅವರು ಯೋಚಿಸುತ್ತಾರೆ.

ದಾವೂದನನ್ನು ಮಾತ್ರ ಹೇಗೂ ನಾನು ಮದುವೆಯಾಗಲು ಇಚ್ಛಿಸು ರಲಿಲ್ಲವಾದುದರಿಂದ, ನಾನು ಸುಮ್ಮನಿದ್ದೆನು. ನಾಫಿಜ್‌ಬೇಯೂ ಅವನ ಸ್ವಾರ್ಥಗಳೂ ಗಣನಾರ್ಹವಲ್ಲವೆಂದೂ, ಚರ್ಚೆಗೆ ಸಹ ಅರ್ಹವಲ್ಲವೆಂದೂ ಾವಿಸಲ್ಪಟ್ಟದ್ದುದಕ್ಕಾಗಿ ನನಗೆ ವ್ಯಸನಉಂಟಾಯಿತು. ಆದರೆ ಅವನು ಾಡುವ ಒಂದಾನೊಂದು ಕಾರ್ಯದಿಂದ, ಅವನ ಬಂಧು ಮಿತ್ರರುಗಳಿಗೆಲ್ಲ, ವನನ್ನು ತಾತ್ಸಾರ ಮಾಡಬಾರದಾಗಿತ್ತೆಂಬುದು ಗೊತ್ತಾಗುವದೆಂದು, ನಗೆ ತೋರಿತು.

ಐದು, ನಿಮಿಷಗಳು ನಾವಿಬ್ಬರೂ ಮೌನವಾಗಿದ್ದೆವು. ಖಂಜೆಯು ಹ್ವಲಚಿತ್ತಳಾಗಿದ್ದಳು. ತನ್ನ ವಿಹ್ವಲತೆಯನ್ನು ಮರೆಮಾಚಲು, ಊಟದ ತಟ್ಟೆಗಳನ್ನು ಒಂದರ ಮೇಲೊಂದಿಡ ಹತ್ತಿದಳು.

ಂಜಾ— (ತಟ್ಟೆಗಳನ್ನು ಸರಿಯಾಗಿ ಜೋಡಿಸುತಾ) ಹಾಜಿರೇ, ನೀನು ಹಳ ಬುದ್ಧಿಶಾಲಿಯಾದ ಹುಡುಗಿ. ಆದುದರಿಂದಲೇ ನಿನ್ನ ಯುವಕನಾದ ಜಮಾನನನ್ನು ಮದುವೆಯಾಗುವ ಆಶೆಯಿಟ್ಟುಕೊಳ್ಳುವದು, ವಿಫಲ ಂದು ತಿಳಿದುಕೊಂಡಿರುವೆ—ಏನು, ನಾನು ನಿಜ ಹೇಳುತ್ತಿರುವೆನೋ, ಳ್ಳಾಡುತ್ತಿರುವೆನೋ ?

ಾನು — (ಬಿಸುಸುಯ್ದು) ಇಲ್ಲ, ಬಹಳ ನಿಜವು.

ಂಜಾ — ಹಾಗಾದರೆ, ವಲಿಯನಾಖಾನಮ್‌ಳ ಚಾಕರಿಯಾದ ನಾನು, ಈ ಷಯದಲ್ಲಿ ಅವಳು ತಪ್ಪಭಿಪ್ರಾಯವುಳ್ಳವಳೆಂದು ತಿಳಿದಿದ್ದರು ಸಹ, ಅವಳ ಜ್ಞಾಪಾಲನೆ ಮಾಡುವದರಲ್ಲಿ ಅಭ್ಯಂತರವೇನೂ ಇಲ್ಲ ತಾನೆ. ಅವಳು ಾಫಿಜ್‌ಬೇಗೆ ಪತ್ರಬರೆದು, ತನ್ನ ಸಂತಾಪವನ್ನು ಸೂಚಿಸಿ, ನಿನ್ನ ಸ್ಥಿತಿ ನ್ನೂ ತಿಳಿಸಿದಳು. ಅದಕ್ಕೆ ಪ್ರತ್ಯುತ್ತರವಾಗಿ ನಾಫಿಜ್‌ಬೇಯು ಅವಳಿಗೆ ಕೃತಜ್ಞತೆಯನ್ನು ತಿಳಿಸಿ, ನಿನಗೋಸ್ಕರ ಈ ಕಾಗದವನ್ನು ಕಳುಹಿಸಿರು ದು. (ಕಾಗದವನ್ನು ನನಗೆ ಕೊಟ್ಟು) ವಲಿಯನಾಖಾನಮ್‌ಳು, ತಾನೇ ಲು ಆಗದಿದ್ದುದರಿಂದ, ನನ್ನನ್ನು ಇದನ್ನು ತೆಗೆದುಕೊಂಡುಹೋಗಲು ಳಿದಳು. ನಾನು ಮೊದಲು ಒಲ್ಲೆನೆಂದೆನು. ಅವಳು ಕೊಂಚ ಗರ್ಜಿ ು, ಪುನಃ ಇಲ್ಲವೆಂದು ಹೇಳಲು ಧೈರ್ಯಸಾಲದೆ ಹೋಯಿತು.

ಫಿಜ್‌ಬೇಯ ಪತ್ರವನ್ನೂ ಅದರ ಮೇಲಿದ್ದ ಅವನ ಸ್ಪಷ್ಟವಾದ ರಾಜು

ಮೊಹರನ್ನೂ ನೋಡುವದರಲ್ಲಿ ನಾನು ಮಗ್ನಳಾಗಿಹೋಮದರಿಂದ, ಖಂಜೆಯ ಕೊನೆಯ ನುಡಿಗಳನ್ನು ಸರಿಯಾಗಿ ಲಾಲಿಸಲಿಲ್ಲ. ನಾಫಿಜ್ ಬೇಯ ಹಸ್ತಾಕ್ಷರವನ್ನು ಇದೇ ಮೊದಲು ನಾನು ನೋಡಿದ್ದು. ಮಾಮೂಲೀ ತುರ್ಕಿ ಬರವಣಿಗೆಗೆ ಹೋಲಿಸಿದರೆ ಅದು ಅತಿ ದಪ್ಪನಾಗಿದ್ದುದರಿಂದ ಅಷ್ಟೇನೂ ಸುಂದರವಾಗಿರಲಿಲ್ಲವೆಂದು ಒಪ್ಪಿಕೊಳ್ಳಬೇಕಾಯಿತು. ಇದೇ ಪತ್ರವು-

"ನನ್ನ ದೀನ ದುಃಖಿನಿಯೇ, ವಲಿಯಳ ಕಾಗದದಿಂದ, ಇದುವರೆಗೆ ನಿನ್ನನ್ನು ಯಾರೂ ಹಿಂಸಿಸಲಿಲ್ಲವೆಂದು ತಿಳಿಯಿತು. ನಾನೂ ಹಾಗೆಯೇ ನಂಬಿದ್ದೆನು-ಯಾಕೆಂದರೆ ಅಥವರ್‌ಬೇಯು ಅಲ್ಲಿರುವವರೆಗೆ ಯಾರೂ ನಿನ್ನನ್ನು ಮಾತನಾಡಿಸಲಾರರು. ಇವತ್ತು ಸಾಯಂಕಾಲ ನಾನು ಪುನಃ ತಂದೆಯವರೊಡನೆ ಮಾತನಾಡಿ,ನಿನ್ನನ್ನು ವಿವಾಹವಾಗಲು ಅವರ ಅನುಜ್ಞೆಯನ್ನು ಬೇಡುವೆನು. ಅವರು ಒಪ್ಪಿದರೆ, ತಾಯಿಯವರೂ ಒಪ್ಪಿಕೊಳ್ಳಬೇಕಾಗುವದು. ಅವರು ಅನುಮತಿ ಕೊಡದಿದ್ದರೆ, ನಾಳೆ ಬೆಳಗ್ಗೆ, ನಿನಗೆ ತಿಳಿಸುವೆನು. ನಾಳೆ ಶುಕ್ರವಾರವಾದುದರಿಂದ ನೌಕರರೆಲ್ಲಾ ನಮಾಜಿಗಾಗಿ ಮಸೀದಿಗೆ ಹೋಗುವರು. ಹರವ್‌ಸರಾದ ಬೀಗದ ಕೈಯ್ಯನ್ನು ನಿನ್ನಬಳಿ ಕಳುಹಿಸಿ, ದೋಣಿಯನ್ನು ತೆಗೆದುಕೊಂಡು, ತೋಟದಕಡೆ ಸೋಪಾನದಬಳಿ ನಿನಗಾಗಿ ಕಾದಿರುವೆನು. ನೀನು ಸುಲಭವಾಗಿ ಅಲ್ಲಿಗೆ ಬರಬಹುದು-ಯಾರೂ ನಿನ್ನನ್ನು ನೋಡಲಾರರು. ಅಲ್ಲಿಂದ ನಾವಿಬ್ಬರೂ ಒಬ್ಬ ಸ್ನೇಹಿತನ ಮನೆಗೆ ಹೋಗೋಣ. ಖಾಜಿಯು ಬಂದು ನಿಕ್ಹವನ್ನು ಹೇಳುವನು. ಅದಾಗಿ ಬಿಟ್ಟನಂತರ ನನ್ನ ಬಂಧುವರ್ಗದವರೆಲ್ಲಾ ಸಮ್ಮತಿಸಲೇ ಬೇಕಾಗುವದು.

ನಾಫಿಜ್ "

ಇದೇ ಪತ್ರದ ಪ್ರಬಂಧವು. ಇಷ್ಟು ಸಂಕ್ಷಿಪ್ತವಾಗಿಯೂ ಕಾರ್ಯಾರ್ಥವಾಗಿಯೂ ಬರೆಯಲ್ಪಟ್ಟ ಪತ್ರವನ್ನು, ಪ್ರಣಯಪತ್ರವೆಂದು ಹೇಳುವದು ಕಷ್ಟವಾಗುತ್ತಿತ್ತಾದರೂ, ನನಗದು, ಪ್ರೇಮೋದ್ರೇಕ ಭಾಸ್ವರ ನುಡಿಗಳ ಪ್ರದರ್ಶನಕ್ಕಿಂತಲೂ ಅಧಿಕವಾಗಿತ್ತು. ನಾಫಿಜ್‌ಬೇಯ ಅನುರಾಗಕ್ಕೆ ಇದಕ್ಕಿಂತ ಹೆಚ್ಚಾದ ಗುರುತು, ನನಗೆ ಬೇಕಾಗಿರಲಿಲ್ಲ.

ಖಂಜಾ— ಊಟದತಟ್ಟೆಯನ್ನು ತೆಗೆದುಕೊಂಡು, ಆತಿಮನೊಂದು)

ಹಾಜಿರೇ, ಅವನು ಏನೇ ವಾಗ್ದಾನಮಾಡಲಿ ನೀನು ಕೇಳಬೇಡ. ಪಾಷಾ ಸಾಹೇಬರು ಒಪ್ಪುವವರೆಗೆ ಅವನ ಕೈಲೇನೂ ಆಗುವದಿಲ್ಲ. ಅವನ ಮಾತನ್ನು

ನಮಾಜ್ = ಪ್ರಾರ್ಥನೆ ಮಾಡುವದು.

ಳಿದ್ದೇ ಆದರೆ, ಇದಕ್ಕಿಂತ ಹೆಚ್ಚಾದ ಕಷ್ಟಗಳಿಗೆ ಗುರಿಯಾಗುವೆ.

ನಾನು ಏನುತ್ತರವನ್ನೂ ಕೊಡಲಿಲ್ಲ. ಖಂಜಿಯು ಹೀಗೆಂದು ಹೇಳಿ ಹೊರಟುಹೋದಳು. ಆ ಪತ್ರವು ನನ್ನ ತೊಡೆಯುಮೇಲೆ ಎಷ್ಟೋ ಹೊತ್ತು ಬಿದ್ದಿತ್ತು. ನಾನದನ್ನು ಸುಮ್ಮನೆ ನೋಡುತ್ತ, ನನ್ನ ಪ್ರಿಯತಮನ ಮಾತನ್ನು ಕೇಳಲೇ, ಅಥವ, ಅವನ ತಾಯಿಗೆ ಋಣಬದ್ಧವಾಗಿದ್ದ ಕರ್ತವ್ಯ ವನ್ನು ಸಲ್ಲಿಸಲೇ—ಎಂಬ ಸಂದೇಹದಲ್ಲಿ ಮುಳುಗಿದ್ದೆನು. ನಾಫಿಜ್‌ಬೇಗು ವಿನ ಅವನ ಪ್ರೀತಿಗಾಗಿ ಋಣಿಯಾಗಿರ ಬೇಕಾದುದು ನನ್ನ ಕರ್ತವ್ಯವೇ ಅಲ್ಲವೇ, ಎಂದು ಮನಸ್ಸಿನಲ್ಲಿ ಪ್ರಶ್ನಿಸಿಕೊಂಡೆನು. ಅವನು ನನ್ನನ್ನು, ತನ್ನ ಪತ್ನಿಯಾಗಲರ್ಹಳೆಂದು ತಿಳಿದು, ನನಗಾಗಿ ತನ್ನ ಬಂಧುಗಳ ವ್ಯಂಗ್ಯೋಕ್ತಿಗಳನ್ನು ಕೇಳಲು ಸಿದ್ಧನಾಗಿರುವಾಗ, ನಾನವನಲ್ಲಿ ಅಪನಂಬಿಕೆ ಪಟ್ಟು ಅವನನ್ನು ವಂಚಿಸಿ, ಅವನ ತಾಯಿಯು ಪ್ರತಿಕೂಲತೆಯು ಅಲ್ಪ ಕಾರಣಕ್ಕಾಗಿ, ಅವನ ಜೀವಿತದ ಪ್ರೇಮವನ್ನೆಲ್ಲ, ಕೆಡಿಸುವದು ಸರಿಯಾಗಿ ರುತ್ತಿತ್ತೇ ? ಅಂತು, ನನ್ನ ಮನಸ್ಸು ವಿಚಿತ್ರವಾದ ತೊಡಕಿನಲ್ಲಿ ಸಿಕ್ಕಿ ಕೊಂಡು, ಏನು ಮಾಡುವದಕ್ಕೂ ತೋಚದಂತಾಯಿತು. ಒಬ್ಬ ಅರಬ್ಬೀ ಗ್ರಂಥಕಾರನು ಈ ರೀತಿ ಹೇಳುತ್ತಾನೆ- "ಎರಡು ಪಕ್ಷಗಳನ್ನೂ ಪರಿಶೀಲಿಸ ಬೇಕಾದಂಥ ಸಮಸ್ಯೆ ಬಂದೊದಗಿದರೆ, ಯಾವ ಪಕ್ಷಕ್ಕೆ ನೀನು ಅತಿವಿರುದ್ಧ ವಾಗಿರುವೆಯೋ ಆಪಕ್ಷವನ್ನೇ ಅನುಸರಿಸಿ ನಡೆಯಬೇಕು. ಯಾಕೆಂದರೆ, ಹತ್ತರಲ್ಲಿ ಒಂಭತ್ತುಸಲ ಇದೇ ಸರಿಯಾಗುವದೆಂಬುದು ಅನುಭವಸಿದ್ಧ ವಾಗಿದೆ." ಆದರೆ, ಈ ಸಂದರ್ಭದಲ್ಲಿ ಈ ಕಟ್ಟಳೆಯನ್ನನುಸರಿಸುವದು ಸರಿಯೆಂಬುದರಲ್ಲಿ ನನಗೆ ಪೂರ್ಣವಾಗಿ ನಂಬಿಕೆಯಿರಲಿಲ್ಲ. ನಾನು ಮದುವೆ ಯನ್ನು ವಿರೋಧಿಸುತ್ತಿದ್ದುದು, ನಾನು ಬಡವಳೆಂಬೊಂದು ಕಾರಣದಿಂದ. ಅವನ ತಾಯಿಯು ನಿಷ್ಪ್ರಯೋಜಕವಾದ ಊಹಾಪೋಹಗಳಿಗೆ ಮನಸ್ಸು ಗೊಟ್ಟು, ಅವನೊಡನೆ ನಾನು ಕುಟಿಲತೆಯಿಂದ ವರ್ತಿಸಬೇಕೇನು ? ಇಷ್ಟು ಕೇವಲ ಎಳೆಯ ವಯಸ್ಸಿನಲ್ಲಿ ಇಂಥ ವಿಪತ್ತಿಗೆ ಸಿಕ್ಕಿಕೊಂಡುದರಿಂದ, ನ್ಯಾಯ ಶೀಲರಾದವರಾರಿಂದಾದರು ಉಪದೇಶ ಕೇಳಲಪೇಕ್ಷಿಸುತ್ತಿದ್ದೆನು ಮನೆಯ ವಲ್ಲಿರು ಖಾನಮ್ ಆಘಾದಿಯವರ ಪಕ್ಷಪಾತಿಗಳೆಂಬುದು ಗೊತ್ತೇ ಇತ್ತು. ನನ್ನ ಶೋಕಭರಿತ ಕಥೆಯನ್ನು ಹೇಳಿಕೊಳ್ಳಲು, ಯಾರೂ ನನಗೆ ಪರಿಚಯ ವಿರಲಿಲ್ಲ. ಈ ವ್ಯಾಕುಲತೆಯ ಫಲಿತಾಂಶವೇನಾಯಿತೆಂದರೆ, ಯುದ್ಧರಂಗ ದಲ್ಲಿ ಪ್ರೇಮಕ್ಕೇ ಜಯವಾಯಿತು. ಯೋಚಿಸಿ ಯೋಚಿಸುತ್ತಾ ಎದ್ದು ನಿಂತು, ನಾಫಿಜ್‌ಬೇಯ ಇಷ್ಟವನ್ನೇ ಸಲ್ಲಿಸುವೆನೆಂದು ನಿರ್ಧರಿಸಿಬಿಟ್ಟೆನು.

ಇಷ್ಟರೊಳಗೆ, ಒಂದು ವೇಳೆ ನಸಿರುಲ್ಲಾ ಪಾಷಾರವರು ಸಮಾಧಾನರಾಗು ವರೋ ಏನೋ ಎಂಬಾಲೋಚನೆಯೂ ಆಯಿತು–ಆದರೆ, ಇಂಥ ಬರಿಯಾ ಗಳಿಗೆಲ್ಲಾ ಆಧಾರವೇನಿತ್ತು ? ನಾಫಿಜ್‌ಬೇಯು ಹೇಳಿಕೊಟ್ಟ ಉಪಾಯಕ್ಕೆ ಸಿದ್ಧಳಾಗಬೇಕಾದುದಷ್ಟೇ! ಅದಕ್ಕೆ, ನನ್ನ ಮುಖಫರದೆಯು ಅವಶ್ಯಕ ವಾಗಿತ್ತು. ಬಾಗಿಲಕಡೆ ತಿರುಗಿನೋಡಲು ಅದು ತೆರೆದಿತ್ತು. ಖಂಜೆಯು ಬೀಗದ ಕೈಯನ್ನು ತೆಗೆದುಕೊಂಡು, ಬಾಗಿಲನ್ನು ತೆರೆದು ಹೋಗಿದ್ದಳು. ನನಗಾದರೋ, ಅವಳು ಬೇಕೆಂದು ಹೀಗೆ ಮಾಡಿದ್ದಳೆಂದು ತೋರಿತು. ಮೇಲುಗಡೆ, ನನಗೆ ಸಮಾಧಾನ ಹೇಳುತ್ತಿದ್ದರೂ, ಅವಶ್ಯಕತೆ ಬಿದ್ದಾಗ ನನಗೆ ಸಹಾಯಕಳಾಗಲು ಹಿಂತೆಗೆಯುತ್ತಿರಲಿಲ್ಲವೆಂದು ತೋರಿತು.

ಕಿಟಿಕಿಯ ಕೆಳಗಿನಿಂದ ಮಾತಿನ ಸದ್ದು ಬರುವದನ್ನು ಕೇಳಿ, ಮನೆಯ ವರೆಲ್ಲರೂ ತೋಟದಲ್ಲಿರುವರೆಂದು ತಿಳಿದುಕೊಂಡೆನು. ಇನ್ನು, ನನ್ನ ಕೊಠಡಿಯಿಂದ ಮುಖಾವರಣವನ್ನು ಸುಲಭವಾಗಿ ತರಬಹುದಾಗಿತ್ತು. ಜಾಗರೂಕತೆಯಿಂದ ಬಾಗಿಲನ್ನು ತೆಗೆದೆನು. ತೊಟ್ಟಿಯಲ್ಲಿ ಯಾರೂ ಇರ ಲಿಲ್ಲ. ಅಧಮ್‌ಬೇಯು ಬರಾಮದೆಯಲ್ಲಿದ್ದರು. ಅಲ್ಲಿಂದ ಅವರ ಧ್ವನಿಯು ಸ್ಪಷ್ಟವಾಗಿ ಕೇಳಿಬರುತ್ತಿತ್ತು. ಸುಮ್ಮನೆ ತೊಟ್ಟಿಯನ್ನು ಹಾದು ಮೆಟ್ಟಲಿನ ಮೇಲೆ ಹತ್ತಿ ಹೋದೆನು. ಯಾರೂ ನನ್ನನ್ನು ನೋಡಲಿಲ್ಲ. ಅಧಮ್‌ಬೇಯು ಇನ್ನೂ ಮಾತನಾಡುತ್ತಾ ಹೀಗೆನ್ನುತ್ತಿದ್ದರು.

"ಇಜ್ಜತ್‌ಪಾಷಾರವರು ಬಹಳ ಒಳ್ಳೇ ಮನುಷ್ಯರು. ನಮ್ಮ ಪಾಷಾಸಾಹೇಬರಿಗೆ ಅವರನ್ನು ಕಂಡರೆ ಬಹಳ ಇಷ್ಟ. ಅತಿಯಬೇಗಂ ವಿವಾಹವು ನಾಫಿಜ್‌ಬೇಯೊಡನಾದರೆ. ಅವರೀರ್ವರ ಪರಸ್ಪರ ಸ್ನೇಹಾಂತಃಕರ ಣವು ಇನ್ನೂ ಹೆಚ್ಚಾಗುವದೆಂದು ಅವರಿಗೆ ಬಹಳ ಸಂತೋಷ."

ನಾನು ಬೇಗನೆ ನನ್ನ ಕೊಠಡಿಯೊಳಗೆ ಹೋಗಿ, ಮುಖಫರದೆಯನ್ನೂ ಮೇಲು ಹೊದ್ದಿಕೆಯನ್ನೂ ಅಲ್ಮಾರಿನಿಂದ ತೆಗೆದುಕೊಂಡು, ಹಿಂತಿರುಗಿದೆನು ಎದುರಿನಲ್ಲಿ ಸರಿಯಾಗಿ, ನಾಫಿಜ್‌ಬೇಯ ಕೊಠಡಿಯು ತೆರೆಯಲ್ಪಟ್ಟು ಖಾಲಿ ಯಾಗಿತ್ತು. ಅದರ ಸ್ಥಿತಿಯನ್ನು ಕಂಡು ನಾನು ಅತಿ ದುಃಖಿತಳಾಗಿ ಹತ್ತಿರಹೋಗಿ ಒಳಗೆ ನೋಡಿದೆನು. ಹಿಂತಿರುಗಿ ಹೊರಟಾಗ, ಮೆಟ್ಟಲಿನ ಮೇಲೆ ಯಾರದೋ ಕಾಲಿನ ಸದ್ದು ಕೇಳಿಸಿತು. ಯಾರೆಂಬುದು ನನ ಗೊತ್ತಾಗಿಹೋಯಿತು-ಖಾಸಿಮ್‌ಅಫಂದಿಯವರು ಮೇಲಕ್ಕೆಬರುತ್ತಿರುವರು ಇನ್ನು ಒಂದು ಘಳಿಗೆಯೊಳಗಾಗಿ ನಮ್ಮೀರ್ವರ ಸಂಘಟನೆಯಾಗುವದು ನಾನು ಘಾಬರಿಯಿಂದ ಅತ್ತಿತ್ತ, ಅವರಿಂದ ತಪ್ಪಿಸಿಕೊಂಡು ಓಡಿಹೋಗಲ

ದಾರಿಯಾವುದಾದರೂ ಇರುವದೇ, ಎಂದು ನೋಡಹತ್ತಿದನು-ಯಾವ ಮಾರ್ಗವೂ ಕಾಣಿಸಲಿಲ್ಲ. ನಾಫಿಜ್‌ಬೇಯ ಕೊಠಡಿಯಿಂದ ಬಹಳ ದೂರ ಬಂದುಬಿಟ್ಟದ್ದೆನಾದುದರಿಂದ, ಪುನಃ ಅಲ್ಲಿಗೆ ಹಿಂತಿರುಗಿ ಹೋಗುವದು ಸಾಧ್ಯವಾಗಿರಲಿಲ್ಲ. ಆಹಾ ಇನ್ನು ಉಳಿಯಲು ಒಂದೇ ಮಾರ್ಗವಿತ್ತು-ಯಾವುದೆಂದರೆ, ಹೊರಗಡೆ ಮರದಾನ್‌ಖಾನೆಗೆ ಹೋಗುವ ಬಾಗಿಲು ಸನ್ನಿಧಿಯಲ್ಲಿತ್ತು. ಆಲೋಚಿಸಲಾಗಲೀ ಅನುಮಾನಿಸಲಾಗಲೀ ಸಮಯ ಇರಲಿಲ್ಲ. ಖಾನಮ್‌ಅಫಂದಿಯವರು ಬಂದುಬಿಡುವದರಲ್ಲಿದ್ದುದರಿಂದ, ನಾನು ಅವಸರದಿಂದ ಬಾಗಿಲನ್ನು ತೆಗೆದು, ಒಳಗೆ ಹೋಗಿಬಿಟ್ಟೆನು. ನಾನಿನ್ನೂ ಸಂಪೂರ್ಣವಾಗಿ ಒಳಗೆ ಹೋಗುವದರಲ್ಲೇ, ಖಾನಮ್‌ಅಫಂದಿಯವರು ಬೂಹಾನರೊಡನೆ ಮೇಲಕ್ಕೆ ಬಂದೇಬಿಟ್ಟರು. ಈ, ಈರ್ವ ಅಜನ್ಮ ಶತ್ರುಗಳೂ ಆಗ ನನ್ನನ್ನು ನೋಡಿದ್ದೇ ಆದರೆ, ನನ್ನ ಗತಿ ಏನಾಗುತ್ತಿತ್ತೆಂಬುವದನ್ನು ಯೋಚಿಸಿಕೊಂಡು, ಭಯದಿಂದ ನಡುಗಲಾರಂಭಿಸಿದೆನು. ಈ ವಿಷಯವನ್ನು ಹೆಚ್ಚು ಯೋಚಿಸಲು ಹೊತ್ತಿರಲಿಲ್ಲ-ತಕ್ಷಣವೇ-ನಾಫಿಜ್‌ಬೇಯ ಧ್ವನಿಯು ನನ್ನ ಕಿವಿಗೆ ಬಿತ್ತು. ಅದು ಬಹು ಸಮೀಪದಿಂದಾಗಿ ಕೇಳಿಬರುತ್ತಿದ್ದುದರಿಂದ, ನನ್ನ ಪಕ್ಕದಲ್ಲಿ ಅವನು ನಿಂತಿರುವದನ್ನು ನೋಡುವೆನೇನೊ ಎಂಬಾಶೆಯಿಂದ ತಕ್ಷಣವೇ ಅತ್ತಕಡೆ ತಿರುಗಿದೆನು. ನನ್ನಿ ಆಶೆಯು (ಆ ವೇಳೆಯಲ್ಲಿ ನನ್ನ ಮನಸ್ಸಿನಲ್ಲಾವಿರ್ಭವಿಸಿದ್ದ ಸಂತೋಷ, ಭಯ, ಅನರ್ಥಗಳ ಭಾವನೆಗಳನ್ನು ಈ ಹೆಸರಿನಿಂದ ಕರೆಯಬಹುದಾಗಿದ್ದರೆ) ನೆರವೇರಲಿಲ್ಲ. ನಾನು ನಿಂತಿದ್ದ ಸ್ಥಳವು ಮರದಾನ್‌ಖಾನ್‌ಗೆ ಹೋಗುವ ಒಂದು ಕಿರಿದಾದ ದಾರಿಯಾಗಿತ್ತು. ಅಲ್ಲಿ, ಬಾಗಿಲು ತೆರೆಯಲ್ಪಟ್ಟದೊಂದು ಕೊಠಡಿಯಿಂದ, ನಾಫಿಜ್‌ಬೇಯ ಧ್ವನಿಯು ಬರುತ್ತಿತ್ತು. ನಾನು ಬೊಗ್ಗಿ, ಕೊಠಡಿಯೊಳಗೆ ನೋಡಲು, ಎದುರಿಗೆ ನಸಿರುಲ್ಲಾಪಾಷಾರವರು, ಕಾಗದಗಳಿಟ್ಟದ್ದೊಂದು ಮೇಜಿನ ಮುಂದೆ ಕುಳಿತಿದ್ದರು. ಅವರ ಮುಖದ ಮೇಲೆ ಬೆಳಕು ಬಿದ್ದಿದ್ದುದರಿಂದ, ಅದು ವಿಹ್ವಲವಾಗಿದ್ದುದನ್ನು ಕಂಡೆನು. ನಾಫಿಜ್‌ಬೇಯು ನನಗೆ ಕಾಣಿಸಲಿಲ್ಲವಾದರೂ, ಅವನ ಮಾತಿನ ಧ್ವನಿಯು ಕೇಳಿಬರುತ್ತಿತ್ತು. ನಾನು ಕಿವಿಗೊಟ್ಟು ಕೇಳಹತ್ತಿದೆನು. ಅವನು ಹೀಗೆಂದು ಹೇಳುತ್ತಿದ್ದನು:-

"ತಂದೆಯವರೇ, ತಮ್ಮ ಮುಂದೆ, ಪ್ರೇಮ ಮತ್ತು ವಿವಾಹದ ವಿಚಾರ ಪ್ರಸ್ತಾಪಿಸುವದು, ಮರ್ಯಾದೆಗೆ ವಿರುದ್ಧವೆಂಬುವದನ್ನು ನಾನು ಬಲ್ಲೆನು. ಆದರೆ ತಾಯಿಯವರು ಈ ವಿಚಾರದಲ್ಲಿ ಕೈಹಾಕಲು ಇಷ್ಟ

ಪಡದಿರುವದರಿಂದಲೂ-ತಾವೇ ಈ ಪ್ರಸ್ತಾಪವನ್ನೆತ್ತಿದುದರಿಂದಲೂ, ನನ್ನಿಂದಾದ ಅಪರಾಧವನ್ನು ಗಣನೆಗೆ ತರುವದಿಲ್ಲವೆಂದು ನಂಬಿದ್ದೇನೆ. ತಮ್ಮ ಅಪೇಕ್ಷೆಯ ಪ್ರಕಾರ, ಅಮೀನರು ನನ್ನೊಡನೆ, ಪನಿಯಳ ಕಾಗದ ಬಂತೆಂದೂ, ಅದರಲ್ಲಿ ಅವಳು, ತನ್ನ ಸಾವಿನಿಯಾದ ಅತಿಯಳ ವಿವಾಹವು ನನ್ನೊಡನಾದರೆ ಒಳ್ಳೆಯದೆಂದು ಬರೆದಿರುವಳೆಂದೂ ಹೇಳಿದರು. ಅದಕ್ಕೆ ಪ್ರತ್ಯುತ್ತರವಾಗಿ, ನಾನು ಅಟಿಯುವರೊಡನೆ ಇಜ್ಜತ್ ಪಾಷಾರವರ ತಂಗಿಯನ್ನು ಮದುವೆಯಾಗುವದಿಲ್ಲವೆಂತಲೂ, ಈ ವಿಷಯದಲ್ಲಿ ನನ್ನಭಿಪ್ರಾಯವು ಬೇರೆಯಾಗಿರುವದೆಂತಲೂ ತಿಳಿಸಿರುವೆನು”

ನಸಿರುಲ್ಲಾ ಪಾಷಾ—(ತಡೆದು ತಡೆದು) ಅತಿಯಳನ್ನು ಮದುವೆಯಾಗುವುದು ನಿನ್ನ ಸ್ವತಂತ್ರದಲ್ಲಿರುವದು-ಈ ವಿಚಾರದ ಸಿದ್ಧಾಂತವು ನಿನ್ನ ಇಷ್ಟಾನುಸಾರ ನಡೆಯಬೇಕಾದುದರಿಂದ, ಅಲ್ಲಿ ಮದುವೆಯಾಗಲು ನಾನು ನಿನ್ನನ್ನು ಬಲಾತ್ಕಾರಪಡಿಸಲಾರೆನು-ಬಲಾತ್ಕಾರಪಡಿಸಲು, ನನಗಿಷ್ಟವೂ ಇಲ್ಲ. ನಾನಿಷ್ಟಪಡುವದೇನೆಂದರೆ, ಹಾಜಿರೆಯ ವಿಚಾರದಲ್ಲಿ ನೀನು ನಡೆಸಬೇಕೆಂದಿರುವ ಅವಿವೇಕ ಕೃತ್ಯವನ್ನು ಹೇಗಾದರೂ ಬಿಟ್ಟುಬಿಡಲೆಂದು. ನಿನಗೆ ನಿನ್ನ ಸ್ವಂತಸುಖದ ಯೋಚನೆಯೊಂದೇ ಇರುವದು ನಿನ್ನೀ ಸ್ವಾರ್ಥಪರತೆಯ ದೆಸೆಯಿಂದ, ಪಾಪ ಆ ಹುಡುಗಿಗೆ ಎಂಥಹ ವಿಪತ್ತು ಒರುವದೆಂಬುದನ್ನೂ, ನಿನ್ನ ತಾಯಿಯೂ ಅವಳಿಗೆ ಶತ್ರುವಾಗುವಳೆಂಬುದನ್ನೂ ನೀನು ತಿಳಿಯಲಿಲ್ಲ. ಇವತ್ತು ಸಹ, ಅಥಮ್ ಬೇಯು ಹರಮ್ ಸರಾದಲ್ಲಿರದಿದ್ದಲ್ಲಿ, ಆ ಹುಡುಗಿಯೂ, ನಿನ್ನನ್ನು ಮೊದಲನೇ ಸಾರಿ ನೋಡಿದ ದುರ್ದಿನವನ್ನು ಜ್ಞಾಪಿಸಿಕೊಂಡು ಅಳಬೇಕಾಗಿ ಬರುತ್ತಿತ್ತು. ಅದೂ ಅಲ್ಲದೆ, ಅಥಮ್ ಬೇಯು, ಸದಾ ಅವಳ ರಕ್ಷಣೆಗಾಗಿ ಕುಳಿತಿರಲಾರರೆಂಬುದನ್ನೂ, ಒಂದು ವೇಳೆ ನಾನು, ಅವಳ ಮೇಲೆ ಯಾರೂ ಕೈಮಾಡಕೂಡದೆಂದೂ, ಅವಳಿಗೆ ಯಾವ ವಿಧವಾದ ಹಿಂಸೆಯನ್ನೂ ಕೊಡಕೂಡದೆಂದೂ ಆಜ್ಞೆ ಮಾಡಿದರು ಸಹ, ಅದು ನಡೆಯಲ್ಪಡುವದೆಂಬ ಭರವಸೆ ನನಗಿಲ್ಲವೆಂಬುದನ್ನೂ ನೀನರಿತಿರುವೆಯಾ ?

ನಾಫಿಜ್ ಬೇ—(ವ್ಯಸ್ತಚಿತ್ತನಾಗಿ) ಅವಳನ್ನು ಯಾರು ಯಾಕೆತಾನೆ ಹಿಂಸಿಸಬೇಕು ? ಅವಳನ್ನು ಮದುವೆಯಾಗಲು ಪ್ರತಿಬಂಧಕವೇನು ? ನಿಷೇಧಕರವಾದ ವಿಚಾರವಿರುವದು ? ತಂದೆಯವರು ತಾವೇ, ಮಹೀದಳನ್ನು ಸಕೇಲಿಯಾವರ್ (ಏಡಿಕಾಂಗ್) ಅಲಿ ಅಲೀಬೇಗೆ ಕೊಟ್ಟು ಮದುವೆ ಮಾಡಿರುವಾಗ, ಹಾಜಿರೆಯನ್ನು ನಾನು ಮದುವೆಯಾಗಲು ಅಭ್ಯಂತರವೇನಿರುವದು.

ಇಂಥಾ ವಿವಾಹವು ರೂಢಿಗೂ ವಂಶಸಂಪ್ರದಾಯಕ್ಕೂ ವಿರುದ್ಧವೆಂದೇಕೆ ಎಣಿಸಲ್ಪಡಬೇಕು ? (ನಸಿರುಲ್ಲಾ ಪಾಷಾರವರು ಉತ್ತರ ಕೊಡುವದರಲ್ಲಿರುವಾಗ, ನಾಫಿಜ್‌ಬೇಯು ಶೀಘ್ರದಿಂದ) ತಂದೆಯವರೆ, ಇಲ್ಲ, ಕ್ಷಮಿಸಬೇಕು. ತಾವು ಏನು ಹೇಳಬೇಕೆಂದಿರುವಿರೆಂಬುದನ್ನು ಗ್ರಹಿಸಿರುವೆನು. ಆದರೆ ನಮ್ಮ ದೇಶದಲ್ಲಿ, ಕುಲಸಂಪ್ರದಾಯಕ್ಕೆ ವಿರೋಧವಾಗಿ ಮದುವೆಯಾಗುವದೇನೂ ಅತಿಶಯವಲ್ಲ. ಸರ್ಕೇಶಿ ಜನರಲ್ಲಿ ಈ ಕಟ್ಟಲೆಯಿಲ್ಲವೆಂಬುದೇನೋ ನಿಜ. ಆದರೆ, ತುರ್ಕೀ ಜನರು, ಈರೀತಿ ಪಾಷಾರವರ ಖಾನಮ್‌ರುಗಳಿಂದ ಪೋಷಿಸಲ್ಪಟ್ಟ, ಅನಾಥ ಬಾಲಿಕೆಯರನ್ನು ಮದುವೆಯಾಗಿಲ್ಲವೇ ? ಹಾಜಿರೆಯು ನಮ್ಮ ಮನೆಯಲ್ಲಿ ಒಬ್ಬ ಬಂಧುವಿನಂತೆ ಇರುವಳು. ಆದುದರಿಂದ ಅವಳನ್ನು ಅವಮ್ಮಾನರ ಸಾಕುಮಗಳೆಂದು ಕರೆದರೇನೂ ತಪ್ಪಿಲ್ಲ. ಅವಳ ತಂದೆ ತಾಯಿಗಳಿಂದ ನಿಮಗೆ ಅವಮಾನವುಂಟಾಗುವದೆಂದು ಹೇಳುವದಾದರೆ, ಅವರು ಜೀವಿತರಾಗಿ ಸಹ ಇಲ್ಲ. ನನ್ನ ಜೀವನಕ್ಕೆ ಅತ್ಯಾನಂದಕಾರಣ ಭೂತವಾದ ವಸ್ತುವನ್ನು, ಅಕಾರಣವಾಗಿ ಈರೀತಿ ಏಕೆ ವಿರೋಧಿಸಬೇಕೆಂಬುದು ನನ್ನ ಗ್ರಾಹ್ಯಕ್ಕೆ ಬರುವದಿಲ್ಲ.

ಕೊಂಚ ಹೊತ್ತು ನಸಿರುಲ್ಲಾ ಪಾಷಾರವರು ಏನನ್ನೋ ಆಲೋಚಿಸುತ್ತಿದ್ದರು. ನನ್ನಾಶೆಗಳೆಲ್ಲಾ ಅವರ ಜವಾಬಿನ ಆಧಾರದ ಮೇಲೆ ನಿಂತಿತ್ತಾದುದರಿಂದ, ನಾನು ಎಷ್ಟು ಕಾತರತೆಯಿಂದ, ಅದನ್ನು ನಿರೀಕ್ಷಿಸಿ ಕೊಂಡಿದ್ದೆನೆಂಬುದನ್ನು ಊಹಿಸಬಹುದು. ಕೊಂಚ ಬಗ್ಗಿ ನೋಡಲು, ನನ್ನ ಪ್ರಾಣಾಧಿಕನ ದಿವ್ಯ ತೇಜಸ್ಸನ್ನು ಕಂಡೆನು. ಅವನು ಸ್ವಲ್ಪ ಮುಂದಕ್ಕೆ ಬಗ್ಗಿದವನಾಗಿ, ಒಂದು ಕೈಯನ್ನು ಕುರ್ಚಿಯ ಮೇಲೆ ಇಟ್ಟುಕೊಂಡಿದ್ದನು. ಮುಖವನ್ನು ನೋಡಿದರೆ, ತನ್ನ ಫಲವನ್ನು ಬಲವಾಗಿ ಹಿಡಿದು ತಂದೆಯ ಉತ್ತರವನ್ನೇ ಕುತೂಹಲದಿಂದ ಎದುರು ನೋಡುತ್ತಿರುವಂತಿದ್ದನು.

ನಸಿರುಲ್ಲಾ ಪಾಷಾ—(ಮಗನ ಕಡೆ ಈ ಸಾರಿ ಕರುಣೆಯಿಂದ ನೋಡುತ್ತಾ) ವತ್ಸಾ, ಲೋಕವೇನೆಂದೀತೆಂಬ ಭಯವು ನನಗೆ ಲೇಶವೂ ಇಲ್ಲ. ನಿನ್ನ ಸಂತೋಷವೆಲ್ಲಾ ಹಾಜಿರೆಯನ್ನು ಮದುವೆಯಾಗುವದರ ಆಧಾರದ ಮೇಲೆ ಮಾತ್ರವಿರುವದೆಂದು ನಾನು ತಿಳಿಯುವದಾಗಿದ್ದರೆ, ನಾನೆಂದಿಗೂ ಈ ವಿಷಯದಲ್ಲಿ ಹಿಂದು ಮುಂದಾಲೋಚಿಸುತ್ತಿರಲಿಲ್ಲ. ಲೋಕಾಭಿಮತವನ್ನು ನನ್ನ ಕೈಕೆಳಗಿಟ್ಟುಕೊಳ್ಳುವಷ್ಟು ನನಗೆ ಶಕ್ತಿಯಿರುವದು. ನಾನದರ ಕೈಕೆಳಗೆ ಬಿದ್ದಿಲ್ಲ. ನನಗೆ ಬೇಕಾದ ಕಡೆ, ಅದರ ಮೂಗನ್ನು ಹಿಡಿದು ತಿರುಗಿಸಬಲ್ಲೆನು. ಈ ಕಾಲದಲ್ಲಿ, ಮನುಷ್ಯನ ಹತ್ತಿರ ದುಡ್ಡು, ಹೇರಳ

ಬಲವಾಗಿದ್ದರೆ, ಇವೆರಡರ ಮೂಲಕ ಆಶ್ಚರ್ಯಕರವಾದ ಕೆಲಸಗಳನ್ನು ಮಾಡಬಹುದು. ನಿನಗೆ, ಈಸಾಯಿ ಸ್ತ್ರೀಯನ್ನು ಮದುವೆಯಾಗಲು ಕೂಡ ಅನುಮತಿಕೊಟ್ಟು, ಲೋಕಾಪವಾದಕ್ಕೆ ಅಂಜದಿರಬಲ್ಲೆನು.

ನಾಫಿಜ್‌ಬೇ—ಹಾಗಾದರೆ ತಂದೆಯುವರು ಒಪ್ಪುವರೇ ? (ಒಂದು ಹೆಜ್ಜೆ ಮುಂದಕ್ಕೆ ಹೋಗಿ) ಏನು ನಾನು ಇನ್ನೂ, ಈ ವಿಷಯದಲ್ಲಿ ಧೃಡಮನಸ್ಸು ಮಾಡಿಲ್ಲವೆಂದು ತಂದೆಯುವರಿಗೆ ಏನಾದರೂ ಸಂಶಯವೇ ?

ಬಂದ ಉತ್ತರವು ಸೊಂಟವನ್ನೇ ಮುರಿಯಿತು. ಆಶೆಯನ್ನೇ ಮಣ್ಣುಪಾಲು ಮಾಡಿತು.

ನಸಿರುಲ್ಲಾಪಾಷಾ—(ಖಂಡಿತವಾಗಿ) ಹೌದು, ನನಗೆ ಸಂಶಯವುಂಟು. ಯಾವ ಮನುಷ್ಯನ ಸುಖಕ್ಕಾಗಲೀ, ಒಂದು ಸ್ತ್ರೀಜೀವನೇ ಆಧಾರವೆಂಬುದರಲ್ಲಿ, ನನಗೆ ನಂಬಿಕೆಯಾಗುವದಿಲ್ಲ. ತುರ್ಕೀ ವಿವಾಹದಲ್ಲಿ ಪ್ರೇಮಕ್ಕೆ ಸ್ಥಾನವಿಲ್ಲ. ಆಶಬ್ದವು ಇಂಥ ಸಮಯಗಳಲ್ಲಿ ಉಪಯೋಗಿಸಲ್ಪಡುವದೂ ಇಲ್ಲ. ನಿನ್ನ ಬಾಯಿಂದ ಈ ಶಬ್ದವು ಹೊರಟದುದಕ್ಕಾಗಿ, ನೀನು ಅಮರ್ಯಾದೆ ತೋರಿಸಿದೆಯೆಂದು ನನಗೇನೂ ಚಿಂತೆಯಿಲ್ಲ-ಆದರೆ ತಂದೆ ಮಗನ ಸಂಭಾಷಣೆಯಲ್ಲಿ, ಪ್ರೇಮದ ಹೆಸರು ಬರಬಾರದೆಂಬುದನ್ನು, ನೀನೇ ಒಪ್ಪಿಕೊಳ್ಳಬೇಕು. ಇಂಥ ವಿಚಾರಗಳಲ್ಲಿ ಈ ಶಬ್ದಕ್ಕೆ ಗೌರವವಿಲ್ಲವೆಂಬುದೇ ಇದಕ್ಕೆ ಸಾಕಾದಷ್ಟು ಪ್ರಮಾಣವಾಗಿರುವದು. ಹಾಜಿರೆಯ ಮೇಲೆ ನಿನಗಿರುವ ಪ್ರೀತಿಯು, ಒಂದು ಘಳಿಗೆಯ ತೆರೆಯು. ನಿನ್ನೀ ಆಲೋಚನೆಯು, ಶಾಶ್ವತವಾಗಿದ್ದರೂ ಇರಬಹುದು, ಇಲ್ಲದೆಯೂ ಇರಬಹುದು. ಇಂಥ ಪರಿಸ್ಥಿತಿಯಲ್ಲಿ, ನಿನ್ನಾಶೆಯನ್ನು ಪೂರ್ತಿಗೋಸಲೋಸ್ಕರ, ನಿನ್ನ ತಾಯಿಯನ್ನು ದುಃಖಪಡಿಸಬೇಕೆಂದು, ನ್ಯಾಯವು ತೀರ್ಮಾನಿಸುವದಿಲ್ಲ.

ನಾಫಿಜ್‌ಬೇಯು ಸುಮ್ಮನಾಗಿ ಹೋದನು. ಅವನು ಸನ್ನೆದುರಿಗೆ ಸರಿಯಾಗಿದ್ದುದರಿಂದ ಬಹಳ ವಿಷಣ್ಣವದನನಾಗಿದ್ದುದನ್ನೂ, ನೇತ್ರಗಳು ಕಾತರಯುಕ್ತವಾಗಿದ್ದುದನ್ನೂ ಕಂಡೆನು.

ನಾಫಿಜ್‌ಬೇ—(ಹಂಗಿಸುವಂತಿರುವ ಧ್ವನಿಯಿಂದ) ತಂದೆಯವರ ಕೃಪಾ ಶಕ್ತಿಯು ಸೇವಕನ ಮೇಲೆ ಇನ್ನು ಇದಕ್ಕಿಂತ ಅಧಿಕವಾಗಿರಲಾರದು. ಅದಕ್ಕಾಗಿ ಸೇವಕನು ಜನ್ಮಾವಧಿ ಕೃತಜ್ಞನಾಗಿರುವನು. ತಾಯಿಯವರ ಆಗ್ರಹದ ಮುಂದೆ, ಅವನ ಗಣನೆಯೇನೂ ಇಲ್ಲವೋ ?

ನಾಫಿಜ್‌ಬೇಯ ಇಂಗಿತವನ್ನು ತಿಳಿದುಕೊಳ್ಳಲು, ಎಂದಿಗೂ ಸಾಧ್ಯವಾಗುತ್ತಿರಲಿಲ್ಲವಾದರೂ, ನಸಿರುಲ್ಲಾಪಾಷಾರವರು ಅವನ್ನು ತಿಳಿ

ಕೊಂಡುದರಿಂದ, ಅವರ ಮುಖದಲ್ಲಿ ತಕ್ಷಣವೇ ಅಸಮಾಧಾನದ ಚಿಹ್ನೆಗಳು ಪ್ರಕಟವಾದವು.

ನಸಿರುಲ್ಲಾ ಪಾಷಾ—(ಬಿಗಿಮೊನದಿಂದ) ನಿನ್ನ ಕೃತಜ್ಞತೆಯು ಸವಿನಯ ಮರ್ಯಾದೆಗಳಿಂದ ಕೂಡಿಲ್ಲವಾದರೆ, ನನಗದರಿಂದ ಏನೂ ಪ್ರಯೋಜನವಿಲ್ಲ, ಈ ಎರಡು ವಿಷಯಗಳನ್ನೂ ನೀನು ಇಂದು ಮರೆತುಬಿಟ್ಟಿರುವದು ಆಶ್ಚರ್ಯಕರವಾಗಿದೆ. ಈ ರೀತಿ ನೀನು ನನ್ನೊಡನೆ ಮರ್ಯಾದೆಮೀರಿ ನಡೆಯುತ್ತಿರುವದು, ಹಾಜಿರೆಯ ಮೇಲಿನ ಪ್ರೀತಿಯ ಪ್ರತಿಫಲವಾಗಿದ್ದರೆ, ಇನ್ನು, ನೀನವಳನ್ನು ಮದುವೆಯಾಗುವದರಿಂದ ನನ್ನ ಕ್ಷೇಮದಾಶೆಯೇನು ತಾನೆ ಇರುವದು.

ನಾಫಿಜ್ ಬೇ—(ಇನ್ನು ಹೆಚ್ಚು ತಾಳಲಾರದೆ) ನನ್ನ ತಪ್ಪೇನಿದ್ದರೂ ಕ್ಷಮಿಸಬೇಕು. ತಂದೆಯವರೊಡನೆ ನಾನೇಕೆ ಮರ್ಯಾದೆಮೀರಿ ನಡೆಯುವೆನು. (ಕೊಂಚ ನಿಲ್ಲಿಸಿ ನಂಬಿಕೆ ಹುಟ್ಟಿಸುವತೆರದಿಂದ) ಈ ಸಮಯದಲ್ಲಿ, ನನ್ನ ಹಿತಚಿಂತಕರು ತಾವೊಬ್ಬರೇ ಉಳಿದಿರುವಾಗ, ತಮ್ಮ ಮನಸ್ಸನ್ನೇಕೆ ನಾನು ನೋಯಿಸುವೆನು. ನನ್ನ ಜೀವಮಾನದ ಸುಖ ಸಂತೋಷವೆಲ್ಲಾ, ಇಂದು ಸಂಜೆ ತಾವು ಮಾಡುವ ವ್ಯವಸ್ಥೆಯ ಆಧಾರದಮೇಲೆ ನಿಂತಿರುವದೆಂಬುದನ್ನು ತಾವು ತಿಳಿಯುವದಾದರೆ, ನನ್ನಿಂದ ಏನಾದರೂ ಬುದ್ಧಿಹೀನತೆಯಿಂದ ವ್ಯಗ್ರತೆಯು ತೋರಿಸಲ್ಪಟ್ಟಿದ್ದರೆ, ಅದನ್ನು ತಾವು ಗಮನಿಸದಿರುವಿರೆಂದು ನಂಬಿರುವೆನು.

ನಸಿರುಲ್ಲಾ ಪಾಷಾ—(ನಸುನಕ್ಕು) ನಿನ್ನ ಛಲವನ್ನು ನೀನು ಈಗ ಬಲವಾಗಿ ಹಿಡಿದಿರುವೆಯೆಂಬುದು ಸಿದ್ಧಾಂತವಾಯಿತು. ಆದರೆ, ಎದುವರೆವಿಗೆ, ನೀನು ಇದೇ ರೀತಿ ದೃಢಮನಸ್ಕನಾಗಿರುವೆಯೋ ತಿಳಿಯದು.

ನಾಫಿಜ್ ಬೇ—ಬದುಕಿರುವವರೆಗೂ ನಂಬಿರಿ-ನಾನೆಂದಿಗೂ ಬದಲಾಯಿಸುವವನಲ್ಲ. ನಾನು ಹೇಳಿದಂತಾದರೆ...

ನಸಿರುಲ್ಲಾ ಪಾಷಾ—(ಮಾತನ್ನು ಅಡ್ಡಿಮಾಡಿ) ಆ-"ಹೇಳಿದಂತಾದರೆ!" ಈಗ ಅದು, ಬಿಲ್ಲಿನಿಂದ ಹೊರಟಬಾಣದ ಸಮಾಚಾರವಾಗುವದು. ನಿಮ್ಮ ತಾಯಿಯು, ಎದೆಒಡೆದು ಕುಳಿತುಕೊಳ್ಳುವರು-ನಿನ್ನಿಂದ, ಮನೆಯು ವ್ಯಾಧಿಪೀಡಿತವಾಗುವದು-ಬಡಪಾಯಿಯಾದ ಆ ಹುಡುಗಿಯು ಯಾವಜ್ಜೀವವೂ ಹಾಳಾಗಿ ಹೋಗುವಳು. ಇದರಿಂದಾಗುವ ಪ್ರಯೋಜನವೇನು ? ಏನೂ ಇಲ್ಲ. ಕೇಳು-ನನಗಿಷ್ಟ ಬಂದರೆ, ಈ ವಿಚಾರವನ್ನು ನಿನ್ನೊಡನೆ ಚರ್ಚಿಸದೆಯೇ, ನಿನ್ನನ್ನು ಆ ಹುಡುಗಿಯ ಯೋಚನೆಯನ್ನು ಬಿಟ್ಟು

ಬಿಡೆಂದು ಆಜ್ಞೆ ಮಾಡಿಬಿಡುತ್ತಿದ್ದೆನು. ಆದರೆ, ಹಾಗಲ್ಲ-ನಿನಗೆ ಬುದ್ಧಿ ಹೇಳಿ, ನಿನ್ನ ಮನಸ್ಸನ್ನು ತಿರುಗಿಸುವದು ಒಳ್ಳೆಯದೆಂದು ನಾನು ತಿಳಿದಿರುವೆನು. ಅದೂ ಅಲ್ಲದೆ, ನಿನ್ನೆ ಈ ವಿಚಾರವು ಕೊಂಚ ಎಲ್ಲೆಯನ್ನು ಅತಿಕ್ರಮಿಸಿ ಹೋಗುತ್ತಿರುವದೆಂಬ ಭಯ ನನಗಿದ್ದರೂ, ಇದುವರೆಗೆ, ನಾಚಿಕೆ ಪಡಬೇಕಾದಂಥ ಕಾರ್ಯವಾವುದನ್ನೂ ನೀನು ಮಾಡಿಲ್ಲವೆಂದು ನಾನು ಹೇಳಬಲ್ಲೆನು ಹಾಗೇನಾದರೂ ನೀನು ಮಾಡಿದ್ದಿದ್ದರೆ, ನಾನು ಈಗ ನಿನ್ನೊಡನೆ ಇಷ್ಟು ನಯವಾಗಿ ಮಾತನಾಡುತ್ತಿರಲಿಲ್ಲ. ನಿನ್ನ ಈ ಮನೋಭಿಲಾಷೆಗಳ ಬಗ್ಗೆ, ನೀನು ಸಾವಧಾನದಿಂದ ಚರ್ಚಿಸಲು ಶಕ್ತನಾಗಿರುವದರಿಂದ, ನಾನು ಸಹ ಮಾತನಾಡಲು ಸಿದ್ಧನಾಗಿರುವೆನು. ಕುಳಿತುಕೊ-ನಿನ್ನಾಶೆಗೆ ಪ್ರತಿಕೂಲವಾಗಿರುವ ಸಂಗತಿಗಳನ್ನು ತಿಳಿಸುವೆನು.

ನಾಫಿಜ್‌ಬೇ—ಆದರೆ ತಂದೆಯವರೇ, ಅವು ನನಗೆ ಸಮ್ಮತವಾಗಿಲ್ಲದಿದ್ದರೆ!

ನಸಿರುಲ್ಲಾ ಪಾಷಾ—(ಕಠಿಣವಾಗಿ) ಆಗಲೇಬೇಕು. ನೀನು ಸ್ವತಂತ್ರನಲ್ಲವೆಂಬುದನ್ನು ಜ್ಞಾಪಕದಲ್ಲಿಟ್ಟುಕೊ. ನಿನ್ನ ಮೇಲೆ ನನಗೆ ಸರ್ವಾಧಿಕಾರವಿರುವದು.

ನಾಫಿಜ್‌ಬೇಯು ನಿರುತ್ತರನಾಗಿ ಕುಳಿತುಕೊಂಡನು. ಅವನ ಮುಖದಲ್ಲಿರಬೇಕಾಗಿದ್ದ ಸಹನೆಯೂ, ವಿಧೇಯತೆಯೂ ಈಗ ಕಾಣಿಸುತ್ತಿರಲಿಲ್ಲ. ನಸಿರುಲ್ಲಾ ಪಾಷಾರವರು ಒಂದು ಘಳಿಗೆ ನಾಫಿಜ್‌ಬೇಯ ಮುಖವನ್ನು ತೀವ್ರ ದೃಷ್ಟಿಯಿಂದ ನೋಡಿದರು. ಆದರವರು, ಅವನಲ್ಲಿ ಕಾಣಬಹುದಾಗಿದ್ದ ಅವಿಧೇಯತೆಯ ಚಿಹ್ನೆಗಳನ್ನು ಅವನಿಗೆ ತಿಳಿಸುವಷ್ಟು ಬುದ್ಧಿಹೀನರಾಗಿರಲಿಲ್ಲ.

ಆಗ ನನಗೆ, ಮರೆಯಲ್ಲಿ ನಿಂತು ಮಾತು ಕೇಳುವದು ತಪ್ಪೆಂದು ತೋರಿದುದರಿಂದ, ನನ್ನ ತಪ್ಪಿಗಾಗಿ ನಾಚಿಕೆಗೊಂಡು, ಹರಮ್‌ಸರಾದ ಬಾಗಿಲ ಕಡೆ ಹೊರಟೆನು. ಮಾತಿನ ಧ್ವನಿಯೂ ಪಾತ್ರೆಗಳ ಸದ್ದೂ ಕಿವಿಗೆ ಬಿದ್ದುದರಿಂದ, ದಾಸಿಯರು ಮೇಜಿನ ಮೇಲೆ ಊಟವನ್ನು ಸಿದ್ಧಪಡಿಸುತ್ತಿರುವರೆಂಬುದನ್ನು ತಿಳಿದು ತಕ್ಷಣವೇ ಹೆದರಿ ನಿಂತುಬಿಟ್ಟೆನು. ಆ ಹೊತ್ತಿನ ಊಟವೂ ಯಾವಾಗಲೂ ಸಜಾರದಲ್ಲೇ ಆಗುತ್ತಿತ್ತು. ನಾನಿನ್ನೂ ಖೈದಿಯಾಗಿಯೇ ಇದ್ದೆನು. ಇನ್ನೂ ಎಷ್ಟು ದಿನಗಳು ಹೀಗೆಯೇ ಇರಬೇಕಾಗಿತ್ತೆಂಬುದು ಗೊತ್ತಿರಲಿಲ್ಲ. ನಸಿರುಲ್ಲಾ ಪಾಷಾರವರು ಬೇಗನೇ ಊಟಕ್ಕೆ ಹೊರಟು ಹೋದರೆ ಸಾಕೆಂದೂ, ನನಗಲ್ಲಿಂದ ಯಾರೂ ನೋಡದಂತೆ ಓಡಿ ಹೋಗಲು ಅವಕಾಶವಾಗಲೆಂದೂ ದೇವರನ್ನು ಕೇಳಿಕೊಂಡೆನು. ಪುನಃ

ನಾನು ಬೊಗ್ಗಿ ನೋಡಲು ಪಾಷಾಸಾಹೇಬರು ಇನ್ನೂ ಮಾತನಾಡುತ್ತಲೇ ಇದ್ದರು. ಇನ್ನು ಮನೆಯಲ್ಲಿ ನಿಂತು ಹೆಚ್ಚು ಮಾತುಕೇಳಲು ನನಗಿಷ್ಟ ವಿಲ್ಲದಿದ್ದುದರಿಂದ, ಬಾಗಿಲಿನಿಂದ ಕೈಲಾವಷ್ಟು ದೂರಹೋದೆನು. ಆದರೂ ತಂದೆಮಗನ ಸಂಭಾಷಣೆಯು ಕೇಳುತ್ತಲೇ ಇತ್ತು.

ನಸಿರುಲ್ಲಾ ಪಾಷಾರವರು ಹೀಗೆನ್ನುತ್ತಿದ್ದರು–

"ನೀನು ಈಗತಾನೆ, ನಿಮ್ಮ ತಾಯಿಯ, ಪ್ರೀಣನೆಯೇ ನನಗೆ ಮುಖ್ಯ ವಾಗಿರುವದೆಂದೂ, ನಿನ್ನ ಸಂತೋಷಕ್ಕಿಂತ ಅವರ ಸಂತೃಪ್ತಿಯನ್ನೇ ನಾನು ಹೆಚ್ಚಾಗಿ ಎಣಿಸುವೆನೆಂದೂ ಹೇಳಿದೆ. ನಿನ್ನೀ ಅಭಿಪ್ರಾಯವು ತಪ್ಪಾಗಿರು ವದು. ಇಲ್ಲಿ ಅವರ ವಿಚಾರ ತಂದಿರುವದು ಹಾಜಿರೆಗಾಗಿ, ನನಗಾಗಿಯೂ ಅಲ್ಲ, ನಿನಗಾಗಿಯೂ ಅಲ್ಲ. ಅವರ ಇಷ್ಟಕ್ಕೆ ವಿರುದ್ಧವಾಗಿ, ನೀನವಳನ್ನು ಮದುವೆಯಾದರೆ, ಅವರು, ಅವಳ ದೊಡ್ಡ ಶತ್ರುವಾಗುವರು. ಅವರು ಏನು ತಾನೆ ಮಾಡದಿರುವರೆಂಬುದನ್ನು ನೀನೇ ಯೋಚಿಸಿಕೊ. ನಿನ್ನೀ ಕ್ಷಣಿಕ ವಾದ ಆಶಾತರಂಗವನ್ನು ಪೂರ್ತಿಗೊಳಿಸಲು, ಆ ಹುಡುಗಿಯ ಜೀವಿತದ ಸುಖವನ್ನೆಲ್ಲ ಭಯರಣರಂಗದಲ್ಲಿ ಹಾಕುವದು ನ್ಯಾಯವಲ್ಲವೆಂದು ಆಮೇಲೆ ನೀನೇ ಹೇಳುವೆ.

ನಾಫಿಜ್‌ಬೇ— ಅವಳು ನನ್ನ ಪತ್ನಿಯಾದಾಗ ಅವಳನ್ನು ರಕ್ಷಿಸಲು ನನಗೆ ಅಧಿಕಾರವಿರುವದು. ಅದೂ ಅಲ್ಲದೆ ಅಮ್ಮಾವರು ತನ್ನ ಸೊಸೆಯಾದವಳನ್ನು ಎಂದಿಗೂ ಹಿಂಸಿಸಲಾರರು. ತಂದೆಯವರು ಸಹ ಇಂಥ ಕೆಲಸವನ್ನು ಎಂದಿಗೂ ಒಪ್ಪಲಾರರು.

ನಸಿರುಲ್ಲಾ ಪಾಷಾರವರು ಒಂದು ಘಳಿಗೆ ಬಹಳ ಖತಿಗೊಂಡವರಂತಾಗಿ, ಸುಮ್ಮನಿದ್ದರು. ಮರುಕ್ಷಣವೇ ನಾಫಿಜ್‌ಬೇಯಕಡೆ ನೋಡಹತ್ತಿದರು.

ನಸಿರುಲ್ಲಾ ಪಾಷಾ— (ವೇಗದಿಂದ) ಇದಕ್ಕಿಂತಲೂ ಹೆಚ್ಚು ಸ್ಪಷ್ಟವಾದ ಭಾಷೆಯನ್ನು ಉಪಯೋಗಿಸಬೇಕೆಂದಾಶಿಸುವೆಯಾ ? ಇಷ್ಟು ದಿನಗಳನ್ನು ಹರಮ್‌ಸರಾದಲ್ಲಿ ಕಳೆದು, ಇನ್ನೂ ನಾನು ಯಾತಕ್ಕಾಗಿ ಭಯಪಡುವೆನೆಂದು ತಿಳಿಯಲಾರದೆ ಹೋದೆಯಾ. ಅಥಮ್‌ನು, ತನ್ನ ಸ್ವಂತದಾಸಿಯ ಕೈಯ್ಯಲ್ಲಿ ಹಾಜಿರೆಗೆ ಊಟವನ್ನು ಕಳುಹಿಸದಿದ್ದರೆ, ಅವತ್ತು ಏನಾಗಿಹೋಗುತ್ತಿತ್ತೆಂ ಬುದು ಗೊತ್ತಿಲ್ಲವೇ ?

ನಾನು ಭಯಚಕಿತಳಾಗಿ ಕಂಪಿಸುತ್ತ, ಹಿಂದಕ್ಕೆ ಜರುಗಿದೆನು. ಅಥಮ್‌ಬೇಯು, ಖಂಜೆಯೊಡನೆ ಊಟವನ್ನು ಕಳುಹಿಸದಿದ್ದಲ್ಲಿ, ನನ್ನ ಸ್ಥಿತಿಯೇ ನಾಗುತ್ತಿತ್ತೆಂದು ಯೋಚಿಸಿಕೊಂಡೆನು. ನಾಫಿಜ್‌ಬೇಯು, ಆಮೇಲೆ ಏನು

ತಾನೆ ಮಾಡುತ್ತಿದ್ದನು! ಹರಮ್‌ಸರಾದಲ್ಲಿ, ಬೇಡದವರ್‍ಯಾರಾದರೂ ಇದ್ದರೆ, ಅವರ ನಿವಾರಣಾರ್ಥವಾಗಿ ವಿಷಪ್ರಯೋಗವು ರೂಢಿಯಲ್ಲಿತ್ತು. ಇದಕ್ಕೆ, ತಕ್ಕಷ್ಟು ಸಾಕ್ಷಿ ಸಿಕ್ಕದಿದ್ದರೂ, ಖಾನಮ್‌ಆಫಂದಿಯವರ ಮೇಲೆ ಈ ಅಪವಾದವು ಹೊರಿಸಲ್ಪಟ್ಟಿತ್ತು. ಆದುದರಿಂದ, ನಸಿರುಲ್ಲಾ ಪಾಷಾರ ವರಿಗೆ, ನನ್ನನ್ನು ಹಿಂಸೆಪಡಿಸುವರೆಂಬ ವಿಚಾರ ಭಯವಿಲ್ಲದಿದ್ದರೂ, ನನ್ನ ಪ್ರಾಣಕ್ಕೇ ಅಪಾಯವೆಂಬ ಭಯವಿತ್ತೆಂಬುದು ಸ್ಪಷ್ಟವಾಗಿ ತಿಳಿಯುತ್ತಿತ್ತು.

ಎರಡು ಮೂರು ಘಳಿಗೆ, ನಾಫಿಜ್‌ಬೇಯು ಸುಮ್ಮನಿದ್ದನು. ಆಮೇಲೆ ಮೆಲ್ಲನೆ ಕುಗ್ಗಿದ ಧ್ವನಿಯಿಂದ ಹೀಗೆ ಹೇಳಿದನು.

ನಾಫಿಜ್‌ಬೇ— ನಾನು ಮತ್ತೊಂದು ಸಾರಿ ವಿಜ್ಞಾಪಿಸಿಕೊಳ್ಳುವೆನೇನೆಂದರೆ —ಎಷ್ಟೇವಿಪತ್ತಿದ್ದರೂ, ಪತಿಯೆನಿಕೊಂಡಕಾರಣ, ಹಾಜಿರೆಯನ್ನು ಕಾಪಾಡಿ ಕೊಳ್ಳಲು ನಾನು ಶಕ್ತನಾಗಿರುವೆನಲ್ಲದೆ, ಅದರಲ್ಲಿ ಜಯಪ್ರದನೂ ಆಗುವೆ ನೆಂದು.

ನಸಿರುಲ್ಲಾ ಪಾಷಾ— ಆದರೆ, ಅವಳ ಪತಿಯಾಗಲು, ನಾನೇನೂ ನಿನಗೆ ಅನುಮತಿ ಕೊಡುವವನಲ್ಲ. ಎಷ್ಟೇ ಮೂರ್ಖತನ ಮಾಡಿದರೂ, ಇಷ್ಟು ಅತ್ಯಧಿಕವಾದ ಅವಿಧೇಯತೆಯನ್ನು ನೀನು ಮಾಡಕೂಡದು.

ನಾಫಿಜ್‌ಬೇಯು ತಕ್ಷಣವೇ ಜವಾಬು ಕೊಡದಿದ್ದುದರಿಂದ, ಕೊಂಚ ಹೊತ್ತು ಮೌನವು ನೆಲಸಿತ್ತು. ಹಜಾರದಲ್ಲಿ, ದಾಸಿಯರು ಸಂತೋಷದಿಂದ ಮಾತನಾಡುತ್ತಿದ್ದರು. ನಾನಾದರೋ, ಇಲ್ಲಿ ಖೈದಿಯಾಗಿದ್ದೆನು. ಏಕಾ ಏಕಿ ನನ್ನ ಪ್ರಿಯನ ಧ್ವನಿಯು ಕಿವಿಗೆ ಬಿತ್ತು. ಅನು ಕೊಂಚ ಕಂಪಿತವಾಗಿ ದ್ದರೂ, ಅದರಲ್ಲಿದ್ದ ಮನಃಪೂರ್ವಕವಾದ ನಂಬಿಕೆಯು, ಅವನ ದೃಢಮನ ಸ್ಸನ್ನು ವ್ಯಕ್ತಗೊಳಿಸುತ್ತಿತ್ತು.

ನಾಫಿಜ್‌ಬೇ— ನಾನು ಹಾಜಿರೆಯನ್ನು ಎಷ್ಟು ಪ್ರೀತಿಸುವೆನೆಂದರೆ, ತಂದೆ ಯವರ ಕೋಪವನ್ನೂ ಲಕ್ಷಿಸದೆ, ಅವರಾಜ್ಞೆಗೆ ವಿರುದ್ಧವಾಗಿ, ಅವಳನ್ನು ಮದುವೆಯಾಗಲು ಸಿದ್ಧನಾಗಿರುವೆನು. ದೇವರಸಾಕ್ಷಿಯಾಗಿ, ತಂದೆಯವರ ಅನುಜ್ಞೆಪಡೆದು, ಅವಳನ್ನು ಮದುವೆಯಾಗುವದೊಳ್ಳೆಯದೆಂದು ತಿಳಿದಿರು ವೆನು. ಆದರೆ, ತಂದೆಯವರು ಅನುಜ್ಞೆಯನ್ನು ದಯಪಾಲಿಸುವದಿಲ್ಲ ವಾದುದರಿಂದ, ಅದಿಲ್ಲದೆಯೇ ವಿವಾಹವಾಗ ಬೇಕಾಗಿರುವದು.

ನಸಿರುಲ್ಲಾ ಪಾಷಾ— (ನಿಕೃಷ್ಟತೆಯಿಂದಲೂ, ಔದ್ಧತ್ಯದಿಂದಲೂ) ನಿನ್ನಿಷ್ಟ ಬಂದರೆ ಹಾಗೆಯೇ ಮಾಡಿ, ನಿನ್ನ ಸ್ವತಂತ್ರತೆಯನ್ನು ಪ್ರದರ್ಶಿಸಿಕೊ. ನಿನ್ನನ್ನು ತಡೆಯಲು ನನಗೆಳ್ಳಷ್ಟೂ ಇಷ್ಟವಿಲ್ಲ. ಆದರೆ ಇದರಿಂದ ನಿನಗೆಂ

ನೆ ಮಹಮ್ಮದನ ಸ್ವತ್ತಾಗುವದೆಂಬುದನ್ನು ಸ್ಮರಿಸಿಕೊ. ನೀನು ಎಂದು ಸುಮನೆಯಾಗುವೆಯೋ, ಅಂದೇ ನೀನು ಈ ಮನೆಯಲ್ಲಿರುವದಕ್ಕೆ ಕೊನೆಯು ನವಾಗುವದು. ನಿನ್ನ ತಂದೆಯು ಗೋರಿಯು ಸಾಕ್ಷಿಯಾಗಿ, ಖಸ್‌ತಂತ ನನ್ನು ಸಹ ಆ ಮೇಲೆ ನೀನಿರಲಾಗುವದಿಲ್ಲ. ನೀನು ಹಾಜಿರೆಯನ್ನು ಸುಮನೆಯಾಗುವದನ್ನು ತಪ್ಪಿಸುವದು, ನನ್ನಿಂದ ಸಾಧ್ಯವಿಲ್ಲವೆಂಬುವದರಲ್ಲಿ ಸಂಶಯವಿಲ್ಲ. ಆದರೆ, ಅವತ್ತಿನ ದಿನವೇ ನೀನು ಯಮನ್‌ಗೆ ಹೊರಟು ಹೋಗಿ,ಮತ್ತೆ ಬದುಕಿರುವವರೆಗೂ ಖಸ್‌ತಂತನಿಯಾಕ್ಕೆ ಕಾಲಿಡಕೂಡದು. ನಾನು ಹೀಗೆ ನಡೆಸದಿದ್ದರೆ, ಆ ಕ್ಷಣವೇ ದೇವರು ನನ್ನನ್ನು ನಿಗ್ರಹಮಾಡಿ ಬಿಡಲಿ. ನಾನೇನೋ ನಿನಗೆ ತಿಳಿಸಿರುವೆನು-ಮುಂದೆ ನಿನಗೆ ತೋರಿದಂತೆ ನೀನು ಮಾಡಬಹುದು. ನೀನಿದಕ್ಕೆಲ್ಲ ಏನು ಸನ್ನಾಹ ಮಾಡಿಕೊಂಡಿರುವೆ ನೆಂಬುದನ್ನು ನಾನು ವಿಚಾರಿಸಲೂ ಇಷ್ಟವಿಲ್ಲ- ನನಗದು ಬೇಕೂಇಲ್ಲ. ನೀನು, ಮೊದಲೇ ತಕ್ಕಷ್ಟು ಬಂದೋಬಸ್ತು ಮಾಡಿಕೊಂಡಿರುವೆಯೆಂದು, ನನಗೆ ನಂಬಿಕೆ ಇರುವದು. ನಿನ್ನಲ್ಲಿ ಕೊಂಚವಾದರೂ ದಮನಶಕ್ತಿ ಇಲ್ಲ ದಿದ್ದರೆ, ನಿನ್ನ ಮನಸ್ಸಿನಾಶೆಯನ್ನು ತೀರಿಸಿಕೊಳ್ಳುವದೇ ಮೇಲು.

ಈ ಮಾತನ್ನು ಕೇಳಿ ನಾನು ಜ್ಞಾನಶೂನ್ಯೆಯಂತಾದೆನು. ಅಯ್ಯೋ ನನ್ನ ಆಶೆಗಳೆಲ್ಲಾ ಮಣ್ಣುಪಾಲಾದವು ! ನಸಿರುಲ್ಲಾ ಪಾಷಾರವರು ಸುಮ್ಮನಾದ ಕೂಡಲೆ, ನಾನು ನಿಂತಿದ್ದ ದಾರಿಯಲ್ಲಿ ಯಾರದೋ ಹೆಜ್ಜೆಯು ನವು ಕೇಳಿಸಿತು. ನಾನು ಬೇಗನೆ ಬಾಗಿಲಹಿಂದೆ ಮರೆಯಾಗಿನಿಂತು ನೋಡಲು, ಹಬ್ಸಿಯೊಬ್ಬನು ಬಂದು ಊಟವು ಸಿದ್ಧವಾಗಿರುವದೆಂದು ತಿಳಿಸಿ ದನು. ನಸಿರುಲ್ಲಾ ಪಾಷಾರವರು ತಕ್ಷಣವೇ ಎದ್ದುನಿಂತು, ಹರಮ್‌ಸ ರಾದಿಂದ ಮರದಾನ್‌ಖಾನೆಗೆ ಹೋಗುವ ಬಾಗಿಲನ್ನು ಬಂದುಮಾಡಿ, ಬೀಗ ವನ್ನು ಹಾಕಿ, ನಿಪಾತವನ್ನು ಕಲ್ಪಿಸಿಬಿಟ್ಟರು !-ನಾನಲ್ಲೇ ಬಂದಿಯಾಗಿ ಹೋದೆನು!- ರಾತ್ರಿ, ಹರಮುಸರಾಕ್ಕೆ ಹೋಗುವದು ಸಹ ದುಸ್ಸಾಧ್ಯ ವಾಯಿತು ! ತೊಟ್ಟಿಯಕಡೆ ನೋಡಲು, ಮಗ್ಗುಲದೊಂದು ಕೊಠಡಿಯು ತೆರೆಯಲ್ಪಟ್ಟು-ಕತ್ತಲಾಗಿತ್ತು. ಮತ್ತೇನು ಮಾಡಲೂ ತೋಚದೆ, ಅದರೊ ಗೆ ಹೋಗಲು ಮನಸ್ಸಾಯಿತು. ಓಡಿ ಒಳಕ್ಕೆ ಹೋದೆನು. ಇತ್ತಕಡೆ ನಾನಲ್ಲಿ ಒಂದು ಕುರ್ಚಿಯಮೇಲೆ ಕುಳಿತುಕೊಳ್ಳಲು, ಅತ್ತಕಡೆ ನಾಫಿಜ್ ನೇಯು ತನ್ನ ತಂದೆಯ ಓದುವಕೊಠಡಿಯಿಂದ ಹೊರಟು, ಮೆಟ್ಟಲಿಳಿದು, ಳಗೆ ಹೊರಟು ಹೋದನು.

ಇನ್ನು ಇತರ ವಿಚಾರಗಳಕಡೆ ಗಮನಕೊಡಲು ಸಮಯವಿರಲಿಲ್ಲ. ನ್ನ ಸ್ವಂತವಿಚಾರವಾಗಿಯೇ ದೀರ್ಘಾಲೋಚನೆ ಮಾಡಬೇಕಾದಂಥ

ಸಮಯ ಒದಗಿತಾದುದರಿಂದ, ಎಲ್ಲ ಸಂಗತಿಗಳನ್ನೂ ಕುರಿತು, ಸ್ಪಷ್ಟವಾಗಿ ಪರಿಶೀಲಿಸಿ, ಕೊನೆಗೆ, ನಾಫಿಜ್‌ಬೇಯನ್ನು ಅವನ ತಂದೆಯ ಒಪ್ಪಿಗೆಯಿಲ್ಲದೆ ಮದುವೆಯಾಗುವದಿಲ್ಲವೆಂದು ದೃಢಮನಸ್ಸನ್ನು ಮಾಡಿಕೊಂಡೆನು. ನಸಿರುಲ್ಲಾ ಪಾಷಾರವರು, ನನ್ನನ್ನು ಏನೇನು ಮಾಡುವೆನೆಂದು ಹೆದರಿಸಿದ್ದರೋ, ಹಾಗೆಯೇ ನಡೆದೂ ನಡೆಕೊಳ್ಳುವರೆಂದು ನಾನು ಚೆನ್ನಾಗಿ ಅರಿತಿದ್ದೆನು. ಅವರು ಎಷ್ಟೇ ವಿಶಾಲ ಹೃದಯರೂ ಮೇಧಾವಿಗಳೂ ಆಗಿದ್ದರೂ, ಕೊನೆಗೆ ತುರುಕರೇ ಆಗಿದ್ದುದರಿಂದ, ಮಗನ ಸ್ವಾತಂತ್ರತೆಯೂ ಸ್ವೇಚ್ಛಾವರ್ತನೆಯೂ ಅವರಿಗೆ ಲೇಶವೂ ಸರಿಬೀಳುತ್ತಿರಲಿಲ್ಲ. ಅವನನ್ನು, ಅವನ ತಪ್ಪಿಗಾಗಿ ಕಠಿಣವಾಗಿ ಶಿಕ್ಷಿಸಲಪೇಕ್ಷೆಯುಳ್ಳವರಾಗಿದ್ದರು. ಯಮನ್‌ನಲ್ಲಿ ಆಫೀಸರುಗಳು ಹೇಗೆ ಜೀವಿಸುತ್ತಿದ್ದರೆಂಬುದು ನನಗೆ ಚೆನ್ನಾಗಿ ಗೊತ್ತಿತ್ತು – ಎಂದರೆ–ಹಣಗತಿಯಿರುತ್ತಿರಲಿಲ್ಲ–ಸಂಬಳಕ್ಕಿಂತ ಖರ್ಚೇ ಹೆಚ್ಚಾಗಿರುತ್ತಿತ್ತು ಅಭಿವೃದ್ಧಿಯ ಆಶೆಯೇ ಇರಲಿಲ್ಲವಾದರೂ, ಕಷ್ಟಗಳೂ ಅಪಮಾನಗಳೂ ಎದುರಿಗೇ ಇರುತ್ತಿದ್ದವು. ಈ ವಿಧವಾದ ತೊಂದರೆಗಳನ್ನು ಸಹಿಸಲು, ನಾಫಿಜ್‌ಬೇಯಂಥ ಸರ್ವವಿಧದಲ್ಲೂ ಸುಖದಲ್ಲಿ ಬೆಳೆದ ಮನುಷ್ಯನಿಗೆ ಸಾಧ್ಯವಾಗುತ್ತಿರಲಿಲ್ಲವಾದುದರಿಂದ, ಏನೇ ಆಗಲಿ, ನಾನೆಂದಿಗೂ ಅವನ ಕಷ್ಟಕ್ಕೂ ವಿನಾಶಕ್ಕೂ ಕಾರಣಳಾಗುವದಿಲ್ಲವೆಂದು ನಿರ್ಧರಿಸಿಬಿಟ್ಟೆನು.

ಹೀಗೆ ವ್ಯವಸ್ಥೆ ಮಾಡಿದನಂತರ, ಮನಸ್ಸಿಗೆ ಕೊಂಚ ಬಲಬಂದಂತಾಗಿ ಇನ್ನು ಮುಂದಿನ ಪರಿಣಾಮಗಳನ್ನು ಕುರಿತು ಆಲೋಚಿಸುವದನ್ನು ಬಿಟ್ಟು ಬಿಟ್ಟು ನಾನು ಆಗಿದ್ದ ಸ್ಥಿತಿಯನ್ನು ಕುರಿತು ಚಿಂತಿಸತೊಡಗಿದೆನು. ನನ್ನ ಸ್ಥಿತಿಯನ್ನು ಕುರಿತು ಚಿಂತಿಸತೊಡಗಿದೆನು. ನನ್ನ ಸ್ಥಿತಿಯು ಅತಿಘೋರವಾಗಿತ್ತಾದುದರಿಂದ, ಈ ಚಿಂತೆಯಲ್ಲೇ ನಾನು ಮುಳುಗಿಹೋಗಿದ್ದರು ಸಹ, ಏನೂ ಅತಿಶಯವಾಗುತ್ತಿರಲಿಲ್ಲ. ನಾನಿದ್ದ ಕೊಠಡಿಯಲ್ಲೇ, ಒಂದುವೇಳೆ ರಾತ್ರಿಯೆಲ್ಲಾ ಅವಿತುಕೊಂಡಿದ್ದು, ಬೆಳಿಗ್ಗೆ ನಸಿರುಲ್ಲಾ ಪಾಷಾರವರು ಬಾಗಿಲು ತೆರೆದನಂತರ, ಮೆಲ್ಲನೆ ನುಸುಳಿಹೋಗಿ, ಅದೃಷ್ಟವಶದಿಂದ ನನ್ನ ಕೊಠಡಿಯನ್ನು ಸೇರಿಕೊಂಡಿದ್ದರೂ, ನನಗೋಸ್ಕರ ಯಾರಾದರೂ ಊಟವನ್ನು ತೆಗೆದುಕೊಂಡು ಖಾಲಿಫಳ ಕೊಠಡಿಗೆ ಹೋಗಿ, ಅಲ್ಲಿ ನನ್ನನ್ನು ಕಾಣದೆ, ಅದು ಖಾಲಿಯಾಗಿರುವದನ್ನು ನೋಡಿದ್ದರೆ, ಆಗೇನ ಮಾಡಬೇಕಾಗಿತ್ತು ? ಯಾರೂ ನನ್ನನ್ನು ನೋಡದಿರುವರೆಂಬಾಶೆ ಎಲ್ಲಿಯವರೆಗಿಟ್ಟುಕೊಳ್ಳಬಹುದೆಂದು ಅರ್ಧಘಂಟೆ ಆಲೋಚಿಸಿದ ನಂತರ, ನಾನು ಉಳಿದುಕೊಳ್ಳುವ ಆಶೆಯು ಬಹಳ ಕಡಮೆಯೇ ಇತ್ತೆಂದು ಒಪ್ಪಿಕೊಳ್ಳಬೇಕಾಯಿತು. ಖಾನಮ್

ಘಂದಿಯವರು ಊಟವನ್ನು ಕಳುಹಿಸದಿದ್ದರೂ, ಅಥವರ್‌ಬೇಯವರಾಗಲೀ ವರ ತಂದೆಯವರಾಗಲೀ ಖಂಡಿತವಾಗಿ ಕಳುಹಿಸುತ್ತಿದ್ದರು.

ಕಪಗೆಯಾರೋ ಮೆಟ್ಟಲನ್ನು ಹತ್ತಿಬರುತ್ತಿರುವ ಸದ್ದನ್ನು ಕೇಳಿ, ನಾನು ಭೀತಿಗೊಂಡೆನು. ಯಾರೋ, ನಾನು ಅವಿತುಕೊಂಡಿರುವ ಸ್ಥಳದ ಕಡೆಗೇ ಬರುತ್ತಿರುವರೆಂದು ತಿಳಿದೆನು. ಬಾಗಿಲ ಹತ್ತಿರ ಬಂದು, ಸಪ್ಪಳವು ನಿಂತುಹೋಯಿತು. ನನ್ನ ಹೃದಯವು ಘಾಬರಿಯಿಂದ ತಲ್ಲಣಿಸಲಾರಂಭಿಸಿತು. ಯಾರೇ ಆಗಲಿ, ಅಲ್ಲಿಂದ ಹೊರಟುಹೋದರೆ ಸಾಕೆಂದು ಪ್ರಾರ್ಥಿಸತೊಡಗಿದೆನು. ಅವರ ಹೆಜ್ಜೆಯ ಸಪ್ಪಳ ಮತ್ತೆ ಕಿವಿಗೆ ಬೀಳಲಿಲ್ಲ. ಹಾಫಿಜ್‌ಬೇಯ ಧ್ವನಿಯು ದೂರದಿಂದ ಕೇಳಿಬರುತ್ತಿದ್ದುದರಿಂದ, ಬಾಗಿಲಬಳಿ ಬಂದಿದ್ದವರು ಮತ್ತಾರೋ ಇರಬಹುದೆಂದು ತಿಳಿದೆನು.

ಹಾಫಿಜ್‌ಬೇ- (ವಿಸ್ಮಯದಿಂದ) ಹರಮಸರಾಕ್ಕೆ ಈಗಲೇ ಹೋಗುವದಿಲ್ಲವೇ?

ಮುಸ್ತೊಬ್ಬರು— ಇಲ್ಲ. (ಅಥವರ್‌ಬೇಯು ಇರಬಹುದೆಂದು ನನಗೆ ಸಂಶಯವಾಯಿತು) ಕೆಲವು ಪತ್ರಗಳನ್ನು ನೋಡಬೇಕಾಗಿರುವದರಿಂದ, ಬೆಳಗಿನ ಫಜಾರದ ತೋಪು ಆಗುವವರೆಗೂ ಅವನ್ನು ನೋಡಿಕೊಂಡು, ಕೊನೆಯ ಸಿಗರೇಟನ್ನು ಮುಗಿಸಿ ಮಲಗಿ, ನಂತರ ಹೋಗಿಬರುವೆನು.

ನನ್ನ ಪ್ರಿಯತಮನು ಕೊಟ್ಟ ಜವಾಬನ್ನು ಕೇಳಿದೆನು. ಅನಂತರ ತೊಟ್ಟಿಯ ಮತ್ತೊಂದು ಪಾರ್ಶ್ವದ ಬಾಗಿಲು ತೆರೆಯಲ್ಪಟ್ಟು, ಮತ್ತೆ ಮುಚ್ಚಲ್ಪಟ್ಟಿತು. ಅಥವರ್‌ಬೇಯು ಸಿಗರೇಟನ್ನು ಹೊತ್ತಿಸಿಕೊಂಡು, ನಾನು ನನ್ನ ಅದೃಷ್ಟವನ್ನು ಪರೀಕ್ಷಿಸುತ್ತ ನಿಂತಿದ್ದ ಕೊಠಡಿಯೊಳಗೆ ಪ್ರವೇಶಿಸಿದರು.

ಅಥವರ್‌ಬೇಯವರು ತಡಕುತ್ತ ಮೇಜಿನಬಳಿ ಬಂದು, ಕಡ್ಡಿಯನ್ನು ಗೀಚಿ, ಅದರ ಮೇಲಿದ್ದ ಲ್ಯಾಂಪನ್ನು ಹೊತ್ತಿಸಿದರು. ಅತಿಕತ್ತಲಾಗಿದ್ದು ಏಕಾಏಕಿ ಬೆಳಕಾದುದರಿಂದ, ನನ್ನ ಕಣ್ಣುಗಳು ಕೋರೈಸಿಹೋದವು. ಕಣ್ಣು ಸರಿಯಾದನಂತರ, ಅಥವರ್‌ಬೇಯು ನನ್ನ ಕಡೆ ಬೆನ್ನುತಿರುಗಿಸಿಕೊಂಡು ನಿಂತಿರುವದನ್ನು ಕಂಡೆನು. ಒಂದು ಕೈ ಮೇಜಿನಮೇಲೂ, ಮತ್ತೊಂದುಕೈ ಹಣೆಯ ಮೇಲೂ ಇದ್ದುದರಿಂದ, ಏನೋ ದೀರ್ಘಾಲೋಚನೆ ಮಾಡುತ್ತಿದ್ದಂತೆ ಕಂಡಿತು.

ನಾನು, ಅಥವರ್‌ಬೇಯವರ ಕೊಠಡಿಯಿಂದ ಮೆಲ್ಲನೆ ಹೊರಟುಹೋಗಿ ತೊಟ್ಟಿಯಲ್ಲಿ ರಾತ್ರಿಯೆಲ್ಲ ಸುತ್ತಾಡುತ್ತಿರುವದು ಉತ್ತಮವೇ, ಅಥವಾ ಧೈರ್ಯವನ್ನವಲಂಬಿಸಿ ಮುಂದೆಹೋಗಿ ಈ ಕಷ್ಟದಿಂದ ಪಾರಾಗಲು

ಅವರ ಸಹಾಯವನ್ನು ಬೇಡುವುದು ಉತ್ತಮವಲ್ಲವೇ, ಎಂದಾಲೋಚಿಸುತ್ತಿರುವಾಗ, ಅಥರ್ ಬೇಯವರು ಬೀಳಿಸಿದ್ದ ಕುರ್ಚಿಯನ್ನು ಹಾಕಲು ಹಿಂತಿರುಗಿದರು. ನಮ್ಮಿಬ್ಬರ ಕಣ್ಣುಗಳೂ ಸೇರಿದುವು. ಒಂದು ಕ್ಷಣ, ಅವರು ನನ್ನನ್ನು, ವಿಸ್ಮಿತರಾಗಿ ಮಾತಿಲ್ಲದೆ ನೋಡಹತ್ತಿದರು. ಅನಂತರ ಮುಂದೆ ಬಂದು, ನಾನು ಜೀವಿತಳಾಗಿರುವೆನೋ ಇಲ್ಲವೋ ಎಂಬುದನ್ನು ಪರೀಕ್ಷಿಸುವಂತೆ, ತಮ್ಮ ಕೈಯ್ಯನ್ನು ನನ್ನ ಭುಜದಮೇಲೆ ಇಟ್ಟರು.

ಅಥರ್ ಬೇ- (ಕೊಂಚ ಕಂಪಿಸುತ್ತಿರುವ ಧ್ವನಿಯಿಂದ) ಹಾಜಿರೇ, ಮಗಳೇ, ನೀನು ಇಲ್ಲಿ ಏನು ಮಾಡುತ್ತಿರುವೆ?

ನಾನು ಉತ್ತರಕೊಡಲಿಲ್ಲ. ನನ್ನ ದೌರ್ಭಾಗ್ಯವನ್ನು ಕುರಿತು, ಚಿಂತಿಸಿ ಚಿಂತಿಸಿ ಬಿಗಿದುಹೋಗಿದ್ದ ಮಿದುಳಿನ ನರಗಳೆಲ್ಲಾ ಈಗ ಸಡಿಲವಾಗಿ ಹೋಗಿ, ನಾನೊಂದು ಕುರ್ಚಿಯಮೇಲೆ ಕುಳಿತುಕೊಂಡು ಸ್ವೇಚ್ಛೆಯಾಗಿ ಅಳಲಾರಂಭಿಸಿದೆನು. ಅಥರ್ ಬೇಯು ನನ್ನ ಹತ್ತಿರ ಬಂದು ನಿಂತರು. ಕಣ್ಣೀರನ್ನು ಕಂಡರೆ ಅವರಿಗೆ ಪುರುಷಸ್ವಾಭಾವಿಕವಾದ ದ್ವೇಷವಿದ್ದುದರಿಂದ ಬಹಳ ವ್ಯಸ್ತಚಿತ್ತರಾದರು. ಅದೂ ಅಲ್ಲದೆ, ಇಂಥ ಅವೇಳೆಯಲ್ಲಿ ನನ್ನನ್ನು ಈ ಪರಿಸ್ಥಿತಿಯಲ್ಲಿ ತಮ್ಮ ಕೊಠಡಿಯಲ್ಲಿ ಕಂಡು, ಕೊಂಚ ಭೀತರೂ ಆದರು. ಸ್ವಲ್ಪ ಹೊತ್ತಾದ ಬಳಿಕ, ನನ್ನ ಸ್ಥಿತಿಯು ಸಮಾಧಾನಕ್ಕೆ ಬರಲು, ಅವರು ಮತ್ತೆ ಅದೇ ಪ್ರಶ್ನೆ ಹಾಕಿದರು.

ಅಥರ್ ಬೇ— (ನಯದಿಂದ) ದೀನ ದುಃಖಿನಿಯಾದ ಹಾಜಿರೇ, ನನ್ನೊಡನೆ ಏನಾದರೂ ಹೇಳಬೇಕಾಗಿದ್ದರೆ, ನನ್ನನ್ನು ಬರಹೇಳಲಿಲ್ಲವೇಕೆ? ನಾನು ದಿನವೆಲ್ಲ ಇದಕ್ಕಾಗಿಯೇ ಕಾದಿದ್ದೆನು. ನೀನು ಬರಹೇಳುವೆಯೆಂದು ನನಗೆ ನಂಬಿಕೆಯಿದ್ದುದರಿಂದ, ನಾನಾಗಿ ಬಂದು ನಿನ್ನ ಏಕಾಂತದಲ್ಲಿ ಅಡ್ಡಿಬರಲು ಇಚ್ಛಿಸಲಿಲ್ಲ. ಕೊನೆಗೆ, ನಿನ್ನಲ್ಲಿ ಸಂಪೂರ್ಣನಿರಾಶನಾಗಿ, ನಾನೇ ಇಲ್ಲಿಗೆ ಬಂದಿರುವೆನು. ನೀನು ಬರುವ ಬದಲು, ನನ್ನನ್ನೇ ಬರ ಹೇಳಿದ್ದರೆ ಉತ್ತಮವಾಗುತ್ತಿತ್ತೋ, ಇಲ್ಲವೋ?

ನಾನು— ನಾನು ನಿಮ್ಮನ್ನು ನೋಡಲು ಇಲ್ಲಿ ಬರಲಿಲ್ಲ. (ಅವರ ಮುಖವು ಉದಾಸೀನವಾದುದನ್ನು ಕಂಡು ಶೀಘ್ರದಿಂದ) ಆದರೆ ನಿಮ್ಮೊಡನೇನನ್ನೋ ಹೇಳಲು ಬಹಳ ಕುತೂಹಲಿಯಾಗಿರುವೆನು.

ಒಂದು ಘಳಿಗೆ ನಾನು ಅವರ ಮುಖವನ್ನು ನೋಡುತ್ತಾ ಸುಮ್ಮನಿದ್ದೆನು. ಅಥರ್ ಬೇಯವರು ಸುಗುಣಶೀಲರೂ, ಧೈರ್ಯಸ್ಥರೂ ಆಗಿದ್ದುದರಿಂದ, ಅವರನ್ನು ಯಾವಾಗ್ಲೂ ಧಾರಾಳವಾಗಿ ನಂಬಬಹುದೆಂದು ನಾನು

[illegible] ಶಾಸ್ತ್ರೀಯವಾಗಿಯೂ ಈ ತೆರದ ಮನುಷ್ಯರು
[illegible] ಹೇಳಿಕೊಂಡು,
[illegible]
[illegible] ಆಗಿದ್ದ, ಇಂದು
[illegible] ಕಾಣಿಸುತ್ತಿದ್ದರು.
[illegible], [illegible] ಪರಪುರುಷನೊಡನೆ ನನ್ನ
[illegible] ಕೊಂಚ ಹಿಂತೆಗೆದೆನು.
[illegible] ತಪ್ಪಭಿಪ್ರಾಯ [illegible] ಪಡುವಂಥ
[illegible]. ಇನ್ನು ನನ್ನ ಮನಸ್ಸಿನಲ್ಲಿ
[illegible] ದೆನು. ನಾಚಿಕೆಯಿಂದ ನನ್ನ
[illegible] ಅವರು ಕಾಣಬಾರದೆಂದು, ಅವರ ಕಡೆ
[illegible] ಮಾಡಿದೆನು.
[illegible], ಆ ಹೊತ್ತಿನವರೆಗೆ ನಡೆದ
[illegible], ನಾನು ಆ [illegible] ಬಂದ ಕಾರಣ [illegible],
[illegible] ಕಾರಣ
[illegible] ನಾನು ಮನಸ್ಸಿನಲ್ಲಿ [illegible] ವಿಚಾರವನ್ನು
ಸಹ ವ್ಯಕ್ತಪಡಿಸಿದೆನು

[illegible] ಒಂದು ಸಲವಾದರೂ ಅತ್ತ.
[illegible]. ಅವರ ಒಂದು
[illegible]
[illegible], ಕೆಲವು [illegible] ಸುತ್ತ
[illegible] ನಾನು ಅವರ [illegible] ಆಲೋಚನೆ
[illegible] ಒಂದು ಘಳಿಗೆಯಾದರೂ [illegible], ಅವರಿಗೆ ಅಸಮಾಧಾನವಾ
[illegible], ಎಂದು ಮನಸ್ಸಿನಲ್ಲಿ [illegible], ನಾಚಿಕೆಯಿಂದ,
[illegible] ಕೇಳಿಕೊಳ್ಳಬೇಕೆಂದಾತಿ
ದೆನು. ಸ್ವಲ್ಪ ಹೊತ್ತಿನ ಬಳಿಕ ಅಥವಾ [illegible] ನನ್ನ ಹತ್ತಿರ ಬಂದು
[illegible].

[illegible]— (ಗಂಭೀರ ಸ್ವರದಿಂದ [illegible] ಕೂಡಿ) ನಾನು ಕನಸು
[illegible] ಹೀಗೆ ಭಾವಿಸಿರಲಿಲ್ಲ. ನಾನು ಸಹ, ನೀನು [illegible]
[illegible] ತಿಳಿದಿದ್ದೆನು ಹಾಜಿರೇ. ಇಷ್ಟು ನಾಚಿಕೆಪಡಬೇಡ.

ನೀನು ಅವಮಾನಕರವಾದ ಯಾವ ಕೆಲಸವನ್ನೂ ಮಾಡಿಲ್ಲ. ಚಾ, ಈ ವಿಚಾರವನ್ನು ಸಾವಧಾನದಿಂದ ಪರಿಶೀಲಿಸೋಣ, ನಾಫಿಜ್‌ಬೇಯು ನಿನ್ನನು ಮದುವೆಯಾದರೆ, ತಂದೆಯವರು ಅವನನ್ನು ಖಂಡಿತವಾಗಿ ಮನೆಯಿಂದ ಹೊರಗೆಹಾಕುವೆನೆಂದು ಹೆದರಿಸಿರುವರೆಂದು, ನೀನು ಹೇಳುತ್ತೀಯಲ್ಲವೇ ?

ಇನ್ನೂ ಹೆಚ್ಚು ವಿವರಿಸಿ ಹೇಳಲು ನನಗೆ ಶಕ್ತಿಯಿಲ್ಲದಿದ್ದುದರಿಂದ, ನಾನು ತಲೆಯನ್ನಾಡಿಸಿದೆನು. ಅಫಜ್‌ಬೇಯವರು ಸುಮ್ಮನಿದ್ದರು. ನಾನು ಮುಖವನ್ನು ಕೈಗಳಿಂದ ಮುಚ್ಚಿಕೊಂಡಿದ್ದುದರಿಂದ, ಬೆರಳುಗಳ ಸಂದಿನಲ್ಲಿ ಅವರಕಡೆ ನೋಡಲು, ಅವರು ಯಾವದೋ ಆಲೋಚನೆಯಲ್ಲಿ ಪ್ರವೃತ್ತರಾಗಿ, ಅತ್ತಕಡೆ ಮುಖವನ್ನು ತಿರುಗಿಸಿಕೊಂಡಿದ್ದುದು ಕಂಡಿತು. ಕೊನೆಗೆ ಹೀಗೆಂದರು :-

ನಾನು ನಿನಗೆ ಯಾವರೀತಿಯಲ್ಲಾದರೂ ಸಹಾಯ ಮಾಡುವ ಹಾಗಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಏನುಮಾಡಬೇಕೆಂಬುದು ನನಗೆ ತೋರುವದಿಲ್ಲವಲ್ಲ. ತಂದೆಯವರ ಒಪ್ಪಿಗೆಯಿಂದ, ನೀನು ಅವನನ್ನು ಮದುವೆಯಾಗುವದು ಯಾವ ವಿಧದಲ್ಲೂ ಸಾಧ್ಯವಿಲ್ಲ. ನಾಫಿಜ್‌ಬೇಯ ತಲೆಗೆ ಈ ಆಲೋಚನೆಯು, ಒಂದು ಘಳಿಗೆಗಾದರೂ ಏಕೆ ಹತ್ತಿತೆಂದು, ನನಗಾಶ್ಚರ್ಯವಾಗುತ್ತದೆ. ತಂದೆಯವರನ್ನು ಅವನು ಹೆದರಿಸಿದುದು, ಇನ್ನೂ ಕೆಟ್ಟ ಕೆಲಸಮಾಡಿದಂತಾಯಿತು. ಅವರಿಗೆ ಎಲ್ಲ ಅಂಶಗಳನ್ನೂ ತಿಳಿಯಹೇಳಿ, ಮತ್ತೊಂದು ಸಲ ಈ ವಿಷಯವನ್ನು ಸಮಾಲೋಚಿಸುವಂತೆ ಮಾಡಲಿದ್ದ ಅಲ್ಪಸ್ವಲ್ಪ ಆಶೆಯೂ ಈಗ ಲೋಪವಾಯಿತು. ಸಾಧಾರಣವಾಗಿಯೇ ಅವರು ತಮ್ಮ ಮನಸ್ಸನ್ನು ಸುಲಭವಾಗಿ ಬದಲಾಯಿಸುತ್ತಿರಲಿಲ್ಲವಾದುದರಿಂದ ಅವರ ಚಿತ್ತವಿಕ್ಷೇಪಮಾಡುವದು ಕಷ್ಟವಾಗುತ್ತಿತ್ತು-ಈಗಲಾದರೋ ಪೂರ್ಣವಾಗಿ ಅಸಾಧ್ಯವಾಯಿತು-ಯಾಕೆಂದರೆ, ಈಗವರು ಮನಸ್ಸನ್ನು ಬದಲಾಯಿಸಿದರೆ, ಹೆದರಿಕೊಂಡು ತಮ್ಮ ಪೂರ್ವ ಪ್ರತಿಜ್ಞೆಯನ್ನು ಬಿಟ್ಟಂತಾಗುವದು.

ನಾನು— ಹಾಗಾದರೆ, ನಾನು ಇಲ್ಲಿಂದ ಮತ್ತೆಲ್ಲಿಯಾದರೂ ಹೊರಟು ಹೋದರೆ ಒಳ್ಳೆಯದಲ್ಲವೇ ? (ನನ್ನ ಕಾಂಕ್ಷೆಗಳೆಲ್ಲಾ ನಾಶವಾಗಿ ಹೋಗಿದ್ದವು. ಇನ್ನು ನನಗೆ ಸಂತೋಷಕೊಡುವ ಯಾವ ಆಶೆಯೂ ಉಳಿದಿರಲಿಲ್ಲ) ಈ ಮನೆಯಿಂದ ನಾನು ಹೇಗಾದರೂ ಹೊರಟುಹೋದರೆ ಯಾವ ಸ್ಥಳದಲ್ಲಾದರೂ ಇರಲು ಸಿದ್ಧಳಾಗಿರುವೆನು.

ಅಫಜ್‌ಬೇಯವರ ಮುಖದಲ್ಲಿ ವ್ಯಸನ ಚಿಹ್ನೆಗಳು ಮೂಡಿದವು.

ಅವರು ಮೇಜಿನಕಡೆ ಹೋದರು. ಒಂದು ವೇಳೆ, ಅವರು ಕೋಪಗೊಂಡರೋ ಏನೋ, ಎಂದು, ನಾನು ಶಂಕಿಸುತ್ತಿರುವಲ್ಲೇ ಅವರು ಒಂದು ಕಾಗದವನ್ನು ತೆಗೆದುಕೊಂಡು ನನ್ನ ಬಳಿ ವಾಪಸು ಬಂದರು.

ಅಫಸ್‌ಬೇ—ನೀನು ಇಲ್ಲಿಂದ ಹೊರಟುಹೋಗಲು, ಏಕೆ ಇಷ್ಟ ಪಡುತಿಯೆಂಬುದು ನನಗೆ ಚೆನ್ನಾಗಿ ತಿಳಿಯುವದು. ನಿನ್ನ ಅಭೀಷ್ಟವನ್ನು ನೆರವೇರಿಸಿಕೊಳ್ಳಲು ಅಡಚಣೆಯಾದುದರಿಂದ ನಿನ್ನ ಮನಸ್ಸಿಗೆ ಇಲ್ಲಿ ಉಂಟಾಗುವ ಬಾಧೆಗಳು-ಅವಮಾನದ ಹಿಂಸೆ-ನೀನು ನಿರ್ದೋಷಿಯಾಗಿದ್ದರೂ ಈ ವಿಚಾರದಿಂದ ನಿನಗುಂಟಾಗುವ ದುರ್ನಾಮದ-ಕಳಂಕ,-ಇದರಿಂದ ಅವಮಾನ-ಇವು. ನೀನು ಇಲ್ಲಿಂದ ಹೊರಟು ಹೋಗಲಪೇಕ್ಷೆಯುಳ್ಳವಳಾಗುವುದಕ್ಕೆ ಇಷ್ಟು ವಿಷಯಗಳೇ ಸಾಕು. ಅದೃಷ್ಟವಶದಿಂದ, ನಿನಗೆ ಆಶ್ರಯ ಸಿಕ್ಕತಕ್ಕ ಒಂದು ಸ್ಥಳವು ನನಗೆ ಗೊತ್ತಿರುವುದು. ನನ್ನ ತಂಗಿ, ಸನಿಯುಳು, ತನ್ನ ಮಕ್ಕಳಿಗಾಗಿ ಒಬ್ಬ ದಾಯಿಯನ್ನು ಹುಡುಕಲು ನನಗೆ ಬರೆದಿದ್ದಾಳೆ. ನೀನು ಅಲ್ಲಿ ಹೋದರೆ ನಿನ್ನನ್ಯಾರು ಹಿಂಸಿಸುವದಿಲ್ಲ. ಅದೂ ಅಲ್ಲದೆ, ಸನಿಯುಳು ನಿನ್ನ ಅಜ್ಜಿಯ ಕೈಯಲ್ಲೇ ಬೆಳೆದವಳಾದುದರಿಂದ, ಅವಳು ನಿನ್ನನ್ನು ಸಂತೋಷದಿಂದ ಬರಮಾಡಿಕೊಂಡು ತನ್ನ ಹತ್ತಿರ ಇಟ್ಟುಕೊಳ್ಳುವಳೆಂದು, ನಾನು ಸಂದೇಹವಿಲ್ಲದೆ ಹೇಳುವೆನು.

ನಾನು—ನಿಜವಾಗಿಯೂ ಇದಕ್ಕಿಂತ ಹೆಚ್ಚಾದುದು ಮತ್ತಿಲ್ಲ.

ಇಷ್ಟು ಹೇಳಿ, ನಾನು ಸುಮ್ಮನಾಗಿ ಹೋದೆನು. ನಾಫಿಜ್‌ಬೇಯು, ಅಲ್ಲಿಂತು ನನ್ನನ್ನು ಹಿಂಬಾಲಿಸದೆ ಇರಲೇನು ನನಗೆ ಸಂಶಯ ಉಂಟಾಯಿತು. ಅಫಸ್‌ಬೇಯು ಇದನ್ನು ತಿಳಿದುಕೊಂಡು ಹೀಗೆಂದರು.

"ನೀನು ಒಪ್ಪಿದರೆ ನೀನು ಇಲ್ಲಿಂದ ಹೊರಟುಹೋಗುವ ಸಮಾಚಾರವನ್ನು ಯಾರಿಗೂ ತಿಳಿಸಬಾರದೆಂಬುದು ನನ್ನ ಅಭಿಪ್ರಾಯವು ನೀನು ಎಲ್ಲಿಗೆ ಹೋಗುತಿ ಎಂಬುದು ಸಹ, ಯಾರಿಗೂ ತಿಳಿಯಬಾರದು. ತಂದೆಯವರಿಗೆ ಮಾತ್ರ ಇದನ್ನು ತಿಳಿಯಪಡಿಸುವದು ಅವಶ್ಯಕವು. ತಾಳು-(ಗಡಿಯಾರವನ್ನು ನೋಡಿ) ಮಲಗುವರೆ ಹೊರಟಿದ್ದಾಗಿರುವನು. ಇನ್ನು ಕಡೆಯ ಹೊತ್ತು ಪಾರಿಣ್ಣವಾದುದರಿಂದ, ಅವರನ್ನು ಎಬ್ಬರಿಸುವರು. ಈಗಲೇ ಹೋಗಿ, ಅವರ ಹತ್ತಿರ ಇದನ್ನು ಪ್ರಸಕ್ತ ಮಾಡಿಕೊಂಡು ಬರಲೇ ಹೇಳು"

ನಾನು—(ಆಸಕ್ತಿಯಿಂದ ಕೂಡಿ) ಅವಶ್ಯಕವಾಗಿ ಹೋಗಿರಿ. ನಾನು ಸಹ ನಿಮ್ಮೊಡನೆ ನನ್ನ ಕೊಠಡಿಯವರೆಗೆ ಬರುವೆನು.

ಅಫಸ್‌ಬೇ—(ಕೊಂಚ ಹಿಂತೆಗೆಯುತ್ತಾ) ನಾನು ಹೇಳಬಾರದೆ-ಅಮ್ಮಾವ

ರನ್ನು ಎದ್ದಿರುವರು. ಅಂಗಳವನ್ನು ದಾಟಿ ಹೋಗಬೇಕಾಗಿರುವುದರಿಂದ, ಹಬ್ಶಿಗಳು ದಾರಿಯಲ್ಲಿ ಸಿಕ್ಕುವರು. [illegible] ಇಲ್ಲಿ ಇರುವುದೇ ಒಳ್ಳೆಯದೆಂದು ಕಾಣುತ್ತದೆ. ನಾನು [illegible] ಕೆಲಸವನ್ನು [illegible]. ನನೆಯ ನೋಡಿ [illegible] [illegible].

ನಾನು—ಆದರೆ ನಾನು ಈ [illegible]. [illegible] ಹೇಳುವಿರಿ ? ನಾನು ಇಲ್ಲಿ ಬಂದುದನ್ನು [illegible] ತಿಳಿಯರೆ ?

ಅಫನ್ ಖಾನ್—(ನನ್ನ ಕಡೆಗೆ ತಿರುಗಿ) ಅವನು ನನ್ನ [illegible]. ನಾನು [illegible]. [illegible] ಇದ್ದರೋ ?

ನಾನು—(ತಲೆಯನ್ನು ತೂಗುತ್ತಾ) [illegible]. ಇನ್ನು ವಿಶ್ರಾಂತಿಯನ್ನು [illegible].

ನಾನು ಮತ್ತೆ ಮಾತನಾಡುವಷ್ಟರಲ್ಲೇ ಅವರು ಹೊರಟೇ ಬಿಟ್ಟರು. [illegible] ಒಂದು ಕಡೆಯಂತೆ, ಬಾಗಿಲಿಗೆ ಬೀಗ ಹಾಕಿಕೊಂಡು ಹೊರಟು ಹೋದರು.

ಎಂಟನೇಯ ಪರಿಚ್ಛೇದ

"ಹಾಜಿರೇ"

ನನ್ನ ಹೆಸರನ್ನು ಕೇಳುತ್ತಲೇ, [illegible] ತಿರುಗಿದೆನು. ಅಫನ್ [illegible] ಒಂದು [illegible]. ಅವನು [illegible], ನನ್ನ [illegible] ಕಾರ್ಯದಿಂದ [illegible] ಎಂದು [illegible] [illegible] [illegible]. [illegible] [illegible], ನಾನು [illegible] ಎಂದು [illegible] ಆವರ ಹಿಂದೆ [illegible] [illegible] ನೋಡುತ್ತಿದ್ದೆನು. [illegible], [illegible] ? [illegible] [illegible].

[illegible]— [illegible], ಅದೇನು [illegible] [illegible] ನೆಯಂತೆ ?

ನಾನು— ಪ್ರಭು, ಹೌದು.

ನಾನು ಬಹು ಮೆಲ್ಲನೆ ಈ ಮಾತನ್ನು ಹೇಳಿದುದರಿಂದ ಅದನ್ನು ಕೇಳಲು ನಸಿರುಲ್ಲಾ ಪಾಷಾರವರು ನನ್ನ ಕಡೆ ಬೊಗ್ಗ ಬೇಕಾಯಿತು.

ನಸಿರುಲ್ಲಾ ಪಾಷಾ—ನಿನ್ನೆ ನಡೆದ ವಿಷಾದಘಟನೆಯ ನಂತರ ಇನ್ನು ಇಲ್ಲಿ ಹೆಚ್ಚಾಗಿ ನಿಲ್ಲುವದು, ಇಂಥಾ ವಿಷಯಗಳು ಮನಸ್ಸಿಗೆ ನಾಟುವ ಜನರು ಮಾಡುವ ಕೆಲಸವಲ್ಲ. ಆದುದರಿಂದ ನೀನು ಇಲ್ಲಿಗಿಂತ ನನ್ನ ಮಗಳ ಬಳಿ ಹೆಚ್ಚು ಸೌಖ್ಯದಿಂದಿರುವೆಯೆಂದು ಅಧಮನು ಹೇಳುವ ಮಾತು, ನನಗೆ ಉಚಿತವಾಗಿ ಕಾಣುತ್ತದೆ. ನೀನು ನಮ್ಮ ಸಂಬಂಧವನ್ನೆ ತೊರೆದುಬಿಡ ಬೇಕಾಗಿದ್ದರೆ, ನಾನೆಂದಿಗೂ ಈ ಮಾತಿಗೆ ಒಪ್ಪುತ್ತಿರಲಿಲ್ಲ. ಆದರೆ ಸನಿಯಳ ಬಳಿ ಇರುವದರಿಂದ, ನೀನು ನಮ್ಮವನಾಗಿಯೇ ಇರುವೆ.

ನಾನು ನಡುಗುವ ಧ್ವನಿಯಿಂದ ಮೆಲ್ಲಮೆಲ್ಲನೆ ಅವರಿಗೆ ನನ್ನ ಕೃತಜ್ಞತಾಪೂರ್ವಕವಾದ ವಂದನೆಯನ್ನು ಹೇಳತೊಡಗಲು ಅವರು ನನ್ನನ್ನು ತಡೆದು ನಸುನಗುತ್ತಾ ಹೀಗೆಂದರು:-

"ಪ್ಯಾರಿ ಹಾಜಿರೇ, ನಾಫಿಜ್‌ನು ಮತ್ತೊಂದು ಸಲ ತನ್ನ ಅದೃಷ್ಟವನ್ನು ಪರೀಕ್ಷಿಸದೆ, ನಿನ್ನನ್ನು ಇಲ್ಲಿಂದ ಹೋಗಗೊಡುವದಿಲ್ಲವೆಂಬುದನ್ನು ನೀನು ಅರಿತಿರುವೆಯಾ ? ನನಗಾದರೋ, ಅವನ ಮಿದುಳು ಕೊಂಚ ಕೆಟ್ಟು ಹೋಗಿರುವಂತೆ ಕಾಣುತ್ತದೆ. ಒಂದು ವೇಳೆ ಅವನು ನಿನ್ನನ್ನು ಗುಟ್ಟಾಗಿ ವರಿಸಲು ಕೇಳಿದರೆ, ನೀನೆಂದಿಗೂ ಒಪ್ಪುವದಿಲ್ಲೆಂದು ನಂಬಿರುವೆನು. ಆದರೆ ಅವನು ಪುನಃ ನಿನ್ನನ್ನು ಪೀಡಿಸದಿದ್ದರೆ ಎಲ್ಲಕ್ಕಿಂತಲೂ ಒಳ್ಳೆಯದು. ನನ್ನ ಬೀವಿಯೂ* ಸಹ, ಮಾಟ ಮಂತ್ರ ಮುಂತಾದ ವ್ಯರ್ಥವಾದ ವಿಷಯಗಳಿಗಾಗಿ ವೃಥಾ ಬಹಳ ಚಿಟ್ಟುಗೊಂಡಿರುವಳು. ಈಗ ನೀನು, ಹರಮುಸರಾದಿಂದ ಹೊರಗೇ ಇರುವದರಿಂದ, ಈಗಲೇ ನೀನು ಹೊರಟು ಹೋದರೆ ಕೇಡೇನು ?

ಈ ಪ್ರಶ್ನೆಯನ್ನು ಕೇಳಿ ನನ್ನ ಚೇತನವು ಹಾರಿಹೋದಂತಾಯಿತು. ನಸಿರುಲ್ಲಾ ಪಾಷಾರವರು ನನ್ನ ಅಭಿಪ್ರಾಯವನ್ನೆ ಕೇಳದಿದ್ದುದಕ್ಕಾಗಿ ನಾನು ದಿಗ್ಭ್ರಮೆಗೊಂಡಂತವಳಾದೆನು.

ನಾನು—ಆದರೆ ಅದು ಹೇಗೆ ಸಾಧ್ಯ ?

ನಸಿರುಲ್ಲಾ ಪಾಷಾ—ಎಲ್ಲವೂ ಸುಲಭವಾಗಿ ಆಗುವದು. ನೀನು ಸನಿಯಳ ಬಳಿಗೆ ನೆಟ್ಟಗೆ ಹೊರಟುಹೋಗಬೇಕೆಂಬುದು, ನನ್ನ ಉದ್ದೇಶವಲ್ಲ. ಅಲ್ಲಿಗೆ ಹೋಗಬೇಕಾದರೆ, ಜಹಜು ಹೊರಡುವದನ್ನು ಕಾಯಬೇಕಾಗುವದು

*ಬೀವಿ = ಸ್ತ್ರೀ

ಅಲ್ಲಿಗೆ ಹೋಗುವ ಪರ್ಯಂತರ, ಖಬಾತಾಷ್‌ನಲ್ಲಿರುವ ನನ್ನ ಸ್ನೇಹಿತನಾದೊಬ್ಬ ಡಾಕ್ಟರನ ಮನೆಯಲ್ಲಿ ಹೋಗಿರಲೆಂಬುದು, ನನ್ನಭಿಪ್ರಾಯ. ಅತನು ಈಗ ಬಹಳ ಬಡವನಾಗಿರುವದರಿಂದ, ನೀನು ಹೋಗಿ ಇದ್ದರೆ ಬಹಳ ಸಂತೋಷಗೊಳ್ಳುವನು. ನೀನು ಅಲ್ಲಿರುವ ಖರ್ಚನ್ನು ನಾನು ಕೊಡುವೆನು. ನಿನ್ನ ಸಾಮಾನುಗಳನ್ನೆಲ್ಲ ಅಲ್ಲಿಗೆ ಕಳುಹಿಸಿಕೊಡುವೆನು-ಮಾತ್ರ ನಿನ್ನ ಅಜ್ಜಿಯು ನಿನಗಾಗಿ ಬಿಟ್ಟಿರುವ ಹಣವನ್ನು ಅದರೆ, ನೀನು ಒಪ್ಪಿದರೆ ಆ ಹಣವನ್ನು ನನ್ನ ಬಳಿಯಲ್ಲೇ ಜಾಗರೂಕತೆಯಿಂದಿಟ್ಟುಕೊಂಡಿರುವೆನು.

ನಾನು— ಸ್ವಾಮಿ. ಅದೇ ಉತ್ತಮವು.

ನಸಿರುಲ್ಲಾ ಪಾಷಾ— (ಅಥವರ್ ಬೇಯನ್ನು ಸಂಬೋಧಿಸಿ) ಸಲೀಮನನ್ನು ಎಚ್ಚರಗೊಳಿಸಿ, ಗೋಣಿಯನ್ನು ಸಿದ್ಧಪಡಿಸಲು ಹೇಳು.

ಅಥವರ್ ಬೇಯು ಹೊರಟುಹೋಗಲು, ನಾನು ನಸಿರುಲ್ಲಾ ಪಾಷಾನೊಡನೆ ಒಂಟಿಯಾಗುಳಿದೆನು.

ನಾನು— (ಹೇಳುತ್ತಾ) ಇಷ್ಟು ರಾತ್ರಿಯಾಗಿರುವಾಗ ನಾನು ಡಾಕ್ಟರ ಬಳಿಗೆ ಹೋದರೆ, ಅವರು ಆಶ್ಚರ್ಯಗೊಳ್ಳುವರು.

ನಸಿರುಲ್ಲಾ ಪಾಷಾ— (ನಸುನಕ್ಕು ಗಡಿಯಾರದ ಕಡೆ ನೋಡುತ್ತಾ) ಬೇಗ್ಗೆ ಅಷ್ಟು ಹೊತ್ತಿಗೆ ಮುಂಚೆ ಬಂದುದಕ್ಕಾಗಿ ಡಾಕ್ಟರು ಏನನ್ನುವರೆಂದಲ್ಲವೇ ನಿನ್ನರ್ಥ? ಅದರ ಯೋಚನೆ ಕೊಂಚವೂ ಮಾಡಬೇಡ. ನೀನು ಅಲ್ಲಿಗೆ ತಲುಪುವರಲ್ಲಿ ಚೆನ್ನಾಗಿ ಬೆಳಕು ಹರಿದಿರುವದು. ಅದೂಅಲ್ಲದೆ, ನಿನ್ನೊಡನೆ ಒಂದು ಕಾಗದವನ್ನೂ ಕಳುಹಿಸುವೆನು. ಅದರಿಂದ ಅವನಿಗೆ ಮುಖ್ಯ ವಿಷಯಗಳೆಲ್ಲ ಗೊತ್ತಾಗುವವು.

ಅವರು ಥಟ್ಟನೆದ್ದು ನಿಂತು, ನನ್ನ ಹತ್ತಿರ ಬಂದು, ತಮ್ಮ ಕೈಯನ್ನು ನನ್ನ ಭುಜದ ಮೇಲಿಟ್ಟು, ಹೀಗೆನ್ನಲಾದರು—

"ದೀನಳಾದ ಹಾಜೀಬೇ, ನಂಬು, ಇದು ನಿನ್ನ ಒಳ್ಳೆಯದಕ್ಕಲ್ಲದಿದ್ದರೆ ನಾನೆಂದಿಗೂ ಈ ಹೊತ್ತಿನಲ್ಲಿ ನಿನ್ನನ್ನು ಮನೆಯಿಂದಾಚೆಗೆ ಕಳುಹಿಸುತ್ತಿರಲಿಲ್ಲ. ನನ್ನಿಂದ ಹೊರಗಡೆ ತೋರಿಸಲ್ಪಡುತ್ತಿರುವ ಈ ಕಠಿಣತೆಯು, ನಿನ್ನ ಪ್ರೀತಿಯ ಸಲುವಾಗಿಯೇ ಎಂಬುದಕ್ಕೆ ದೇವರೇ ಸಾಕ್ಷಿಯಾಗಿರುವನು. ನಿನ್ನ ಮೇಲೆ ನನಗಿರುವ ಅಂತಃಕರಣವು, ನಿನ್ನ ಕುಶಲವನ್ನೇ ಮನಸ್ಸಿನಲ್ಲಿ ಯಾವಾಗಲೂ ಮುಂದಾಗಿಟ್ಟುಕೊಂಡಿರುವದನ್ನಪೇಕ್ಷಿಸುವದು."

ನಾನು— (ಶೀಘ್ರದಿಂದ) ಯುಕ್ತ. ನಾನು ಬಲ್ಲೆ.

ಹೀಗೆಂದು ಹೇಳಿದನಂತರ ನಾನು ಅವರ ಮುಖವ ನೋಡಿದ್ದ ಹು

ನಗೆಯ ಕಾರಣವನ್ನರಿಯದವಳಾಗಿ ಸುಮ್ಮನಾಗಿಬಿಟ್ಟೆನು.

ನಸಿರುಲ್ಲಾ ಪಾಷಾ— (ಅಲಕ್ಷ್ಯವಾಗಿ) ಹೌದು. ನೀನು ಬಲ್ಲೆಯೆಂದು ನನಗೆ ಗೊತ್ತು.

ಇದನ್ನು ಕೇಳಿ ನನಗೆ ಬಹಳ ನಾಚಿಕೆಯುಂಟಾಗಿ, ನನ್ನ ಮುಖವು ಬೆಳ್ಳಗೂ ಕೆಂಪಗೂ ಆಗಹತ್ತಿತು. ಅಥಮ್‌ಬೇಯು, ನಾನು ಆ ಕೋರಡಿಗೆ ಬಂದ ವಿಚಾರವನ್ನೆಲ್ಲ ಅವರಿಗೆ ತಿಳಿಸಿರಬಹುದೆಂದು ನನಗೆ ಗೊತ್ತಾಯಿತು.

ಸ್ವಲ್ಪಹೊತ್ತು ಮೌನವಾವರಿಸಿಕೊಂಡಿತ್ತು. ಆಮೇಲೆ ಮತ್ತೆ ನಸಿರುಲ್ಲಾ ಪಾಷಾರವರು ಇದ್ದಕ್ಕಿದ್ದ ಹಾಗೆ ನನ್ನಕಡೆ ನೋಡಹತ್ತಿದರು.

ನಸಿರುಲ್ಲಾ ಪಾಷಾ-ಒಳ್ಳೇದು. ಆದರೆ ಈ ಸ್ಥಿತಿಯಲ್ಲಿ ನೀನು ಹೋಗಲಾರೆ. ಮುಖಾವರಣವೆಲ್ಲಿರುವದು ?

ನಾನು— ಅದೋ ಅಲ್ಲಿ.

ನಸಿರುಲ್ಲಾ ಪಾಷಾ— ಸರಿ, ಅದನ್ನು ಧರಿಸಿಕೊ

ಮುಖಧರಡಿಯು ಅಲ್ಲಿದ್ದುದನ್ನು ನೋಡಿ ಅವರಿಗೇನೂ ಆಶ್ಚರ್ಯವಾದಂತೆ ಕಾಣಿಸಲಿಲ್ಲ. ಅದನ್ನು ನಾನ್ಯಾವಾಗಲೂ ಬಗಲಿನಲ್ಲಿ ಇಟ್ಟುಕೊಂಡೇ ತಿರುಗುವೆನೆಂದು, ಅವರು ಭಾವಿಸಿದ್ದಂತಿತ್ತು. ಅವರು ಸಂದೇಹಪಡದಿದ್ದುದರಿಂದ, ಅಥಮ್‌ಬೇಯು ಅವರಿಂದ ಒಂದು ಮಾತನ್ನೂ ಮರೆಮಾಚಿಲ್ಲವೆಂಬುದು ನಿರ್ಧರವಾಗಿ ನಾನು ಮತ್ತಷ್ಟು ಹೆದರಿದೆನು. ಬಹು ವ್ಯಸ್ತಚಿತ್ತಳಾಗಿ, ಮೌನದಿಂದ ನಾನದನ್ನು ಧರಿಸಿಕೊಳ್ಳುತ್ತಿರಲಾಗ, ಅಥಮ್‌ಬೇಯವರು ಬಂದರು.

ಅಥಮ್‌ಬೇ— (ನಯದಿಂದ) ಹಾಜಿರೇ, ಹೊರಡಮ್ಮಾ. ದೋಣಿಯು ಸಿದ್ಧವಾಗಿರುವದು.

ನಾನು ಹೊರಡಲುದ್ಯುಕ್ತಳಾಗಿ, ನಸಿರುಲ್ಲಾ ಪಾಷಾರವರ ಕೋಟಿನ ತುದಿಗೆ ಮುದ್ದಿಡಲು, ಅವರು ನನ್ನ ಮುಖವನ್ನು ಮೇಲಕ್ಕೆತ್ತಿ ಅತಿಪ್ರೀತಿಯಿಂದ ಮುದ್ದಿಸಿ ಹೀಗೆಂದರು—

"ಪ್ರಿಯ ಹಾಜಿರೇ, ದೇವರು ನಿನ್ನನ್ನು ಕಾಪಾಡಲಿ. ನಾಫಿಜಾಬೇಯು ಕೆಲಸಕ್ಕೆಬಾರದ ಆಟಗಳಿಂದಲೂ ನಿನಗುಂಟಾದ ತೊಂದರೆಗಾಗಿ ನಾನು ನಿನ್ನನ್ನು ಕ್ಷಮಾಪಣೆ ಕೇಳಿಕೊಳ್ಳುತ್ತೇನೆ. ಸಾಧ್ಯವಾದರೆ ಅದನ್ನು ಮನಸ್ಸಿನಿಂದ ಬಿಟ್ಟುಬಿಡು. ಅಥಮನು ನಿನ್ನೊಡನೆ ಬರುವನು. ಡಾಕ್ಟರಿಗೆ ಅವನು ಕಾಗದವನ್ನು ಕೊಡುವನು.

ಮತ್ತೊಂದಾವರ್ತಿ ನಾನವರಿಗೆ ವಂದಿಸಿ, ಅಥಮ್‌ಬೇಯ ಹಿಂದೆ

ಹಿಂದೆಯೇ ಮೆಟ್ಟಲನ್ನಿಳಿದು ಹೋದೆನು. ದಾರಿಯಲ್ಲಿ ಯಾರೂ ಎದುರಿಗೆ ಬರಲಿಲ್ಲ. ನಾವು ಮೌನದಿಂದ ತೋಟವನ್ನು ಬಂದು ಸೇರಿದೆವು. ದೋಣಿಯು ಘಟ್ಟಕ್ಕೆ ತಗುಲಿಸಲ್ಪಟ್ಟಿತ್ತು. ಅದರೊಳಗೆ ಕುಳಿತುಕೊಳ್ಳುವಾಗ, ಯಾವ ಮನೆಯಲ್ಲಿ ಇಷ್ಟು ದಿನವೂ ಸುಖದಿಂದ ಜೀವಿಸಿ ಈಗ ಅದರಿಂದ ಚೋರರಂತೆ ಹೊರಟು ಹೋಗುತ್ತಿದ್ದೆನೋ ಆ ಮನೆಯ ಕಡೆ ಕಣ್ಣೆತ್ತಿ ನೋಡಿದೆನು. ಖಂಜೆ-ವಲಿಯಾಖಾನಮ್-ಮಹೇದೀಖಾನಮ್-ಯಾರಿಗೂ ನಾನು ಹೋಗುವ ಸಮಾಚಾರ ಸಹ ತಿಳಿದಿರಲಿಲ್ಲ. ಅವರಿಗೆ ಹೇಳಿಬರಲು ಕೂಡ ಆಗಲಿಲ್ಲ. ಬಹಳ ಹೊತ್ತಿನವರೆಗೂ ಆ ಕತ್ತಲಾದ ಕಿಡಕಿಗಳನ್ನೂ, ಶಾಂತವಾದಾ ಮನೆಯನ್ನೂ, ಪುಷ್ಪಗಳಿಂದ ಕಂಗೊಳಿಸುತ್ತಿದ್ದ ಆ ಪುರಾತನವಾದ ಉದ್ಯಾನವನವನ್ನೂ ನೋಡುತ್ತಿದ್ದು, ಅನಂತರ ಅವುಗಳಿಂದ ಕಣ್ತೆಗೆದು, ಮುಖವನ್ನು ಕೈಗಳಿಂದ ಮುಚ್ಚಿಕೊಂಡು ಯಥೇಷ್ಟವಾಗಿ ಅಳಲಾರಂಭಿಸಿದೆನು. ಅಥರ್‌ಬೇಯವರು ನನ್ನನ್ನು ಸಮಾಧಾನಪಡಿಸಲಾಗಲೀ, ಸುಮ್ಮನಿರಿಸಲಾಗಲೀ, ಪ್ರಯತ್ನಿಸದೆ, ನನ್ನ ಬಳಿ ಮೌನದಿಂದ ಕುಳಿತಿದ್ದರು. ಮನೆಯು ಕಣ್ಮರೆಯಾದ ನಂತರ, ಅವರು ಬಗ್ಗಿ, ನನ್ನೆರಡು ಕೈಗಳನ್ನೂ ತಮ್ಮ ಕೈಯಲ್ಲಿ ಹಿಡಿದುಕೊಂಡು-ಮೆಲ್ಲನೆ ಹೀಗೆಂದರು:—

"ಹಾಜಿಕೇ ಹೇಳು—ಹೀಗೆ ಇದ್ದಕ್ಕಿದ್ದ ಹಾಗೆ ಇಲ್ಲಿಂದ ಹೊರಟು ಹೋಗುವದರಿಂದ, ನಿನ್ನ ಮನಸ್ಸಿಗೆ ದುಃಖವಿಲ್ಲವೆಂದು. ಇದರಿಂದಲೇ ನಿನಗೆ ಒಳ್ಳೆಯದಾಗುವದೆಂಬುದನ್ನು, ದೇವರು ತಿಳಿದಿರುವನು"

ನಾನು—(ಬಿಕ್ಕುತ್ತ) ಅದೇನೋ ನನಗೆ ಗೊತ್ತು-ಆದರೂ ಇಲ್ಲಿಂದ ಹೋಗುವದು ಬಹು ಕಷ್ಟಕರವಾಗಿರುವದು. ಬೇಅಫಂದೆ (ನನ್ನ ಮನಸ್ಸಿನಲ್ಲಿ ಒಂದು ಹೊಸ ಆಲೋಚನೆ ಹುಟ್ಟಿತ್ತು) ಅಯ್ಯೋ ಹೇಳಿರಿ-ಇದು ನಡವಳಿಕೆಯೇ ? ಅವನೊಡನೆ ಈ ವಿಚಾರವಾಗಿ ಒಂದು ಮಾತನ್ನಾದರೂ ಹೇಳದೆ, ಹೀಗೆ ಸುಮ್ಮನೆ ಹೊರಟುಹೋಗುವದು, ಅವನ ನಿರ್ಮಲವಾದ ಪ್ರೇಮಕ್ಕೆ ತಕ್ಕ ಪುರಸ್ಕಾರವೇ

ಅಥರಬೇ—ಅವನಿಗೂ ಸಹ ಇದಕ್ಕಿಂತ ಬೇರೊಂದು ಒಳ್ಳೆಯದಲ್ಲ. ಅವನ ಧನ, ಸುಖವೆಲ್ಲ, [illegible] ಹೋಗುವ ಧೈರ್ಯದ ಆಧಾರದ ಮೇಲಿರುವದೆಂಬುದನ್ನು ಸ್ಮರಿಸಿಕೋ.

ನಾನು ಸುಮ್ಮನಾಗಿ ಹೋದೆನು. ಅದರಿ [illegible] ನಾಫಿಜ್‌ಬೇಯೊಡನೆ ನನ್ನ ರೀತಿಯಾದ ವರ್ತನೆಯು, ಪ್ರಶಂಸನೀಯವಾದುದೇ ಅಲ್ಲವೇ, ಎಂಬ

[illegible]

ಹೀಗೆಂದು ಕೇಳಿದಳು.

"ಅಲಿಅಗಾ, ಯಾರವರು"

ನೌಕರ— ನಸಿರುಲ್ಲಾ ಪಾಷಾರವರ ಮಕ್ಕಳಾದ ಅಘಮ್‌ಬೇಯವರು ಆಫಂದಿ ಸಾಹೇಬರೊಡನೆ, ಅವರನ್ನು ಕೆಳಗೆ ಹೋಗಿ ಕಾಣಲು ಹೇಳಿರಿ. ಈ ಖಾನಮ್‌ರವರು ಒಳಗೆ ಬರಲು, ಬಾಗಿಲನ್ನು ತೆಗೆಯಿರಿ.

ಬಾಗಿಲು ತೆರೆಯಲ್ಪಟ್ಟಿತು. ಒಳಗೆ ಹೋಗಿ ನೋಡಲು, ಹರ್ಷ ಚಿತ್ತಳು. ಸರಳಮನಸ್ಕಳೂ ಆದೊಬ್ಬ ಸುಮಾರು ಇಪ್ಪತ್ತೆಂಟು ವರ್ಷ ವಯಸ್ಸಿನ ಸ್ತ್ರೀಯು ತನ್ನ ಸಂಧ್ಯಾಕಾಲದ ಉಡುಪನ್ನು ಧರಿಸಿ ಕುಳಿತಿದ್ದಳು. ಪ್ರಥಮತಃ ನನ್ನನ್ನು ಕೊಂಚ ವಿಸ್ಮಯದಿಂದ ನೋಡಹತ್ತಿದಳು. ಮತ್ತೆ ತಕ್ಷಣವೇ ತುರ್ಕೀಸ್ತ್ರೀಯರು ಹೊಸಬರಿಗೆ ತೋರಿಸುವ ಆ ಲೋಕಪ್ರಖ್ಯಾತವಾದ ಸುವಿನಯಮರ್ಯಾದೆಗಳಿಂದ ಕೂಡಿ, ನನ್ನನ್ನು ಈ ರೀತಿ ಸಂಬೋಧಿಸಿದಳು :—

"ಬನ್ನಿರಿ, ಬನ್ನಿರಿ. ಈ ಕಡೆಯಿಂದ ಆ ಬೇರೊಂದು ಕೊಠಡಿಯೊಳಗೆ ಹೋಗಿರಿ. ನನ್ನ ಪತಿಗೆ ತಿಳಿಸಿ ನಾನೀಗಲೇ ಬರುವೆನು."

ಹೀಗೆಂದು ಹೇಳಿ, ಅವಳು ನನ್ನನ್ನು ಮೆಲ್ಲನೆ ಆ ಕೊಠಡಿಯೊಳಗೆ ಕರೆದುಕೊಂಡುಹೋಗಿ ಬಿಟ್ಟಳು. ಅದರೊಳಗೆ ಅಗ್ನಿಸ್ಥಳ (Fire-Place) ದ ಮೇಲೆ ಪುಷ್ಪಪಾತ್ರೆಗಳನ್ನಿಡಲು ಮಾಡಿದ್ದ ಜಾಗವನ್ನೂ, ಮೇಣವತಿಗಳನ್ನೂ, ನಿಲುವುಗನ್ನಡಿ ಮುಂತಾದ ಅವಶ್ಯಕವಾದ ಸಾಮಾನುಗಳನ್ನೂ ನೋಡಿ ಇದೇ ಡ್ರಾಯಿಂಗ್‌ರೂಮ್ ಎಂದು ತಿಳಿದುಕೊಂಡೆನು. ಅವಳು ನನ್ನನ್ನು ಇಲ್ಲಿ ಬಿಟ್ಟು [illegible]ರಟುಹೋದಳು. ಕಿಟಕಿಯು ತೆರೆಯಲ್ಪಟ್ಟದ್ದರಿಂದ, [illegible] ಚೌಕಟ್ಟನ್ನು ಒರಗಿಕೊಂಡು ನಿಂತುಕೊಂಡೆನು. [illegible], ಎಂದೂ ಮನಸ್ಸಿಗೆ ಇಷ್ಟವ್ಯಸನವೂ ಅಶಕ್ತ್ಯವೂ ಉಂಟಾಗಿರಲಿ[illegible] [illegible]ನ್ನನ್ನು ಮುಸುಕಿಕೊಂಡಿದ್ದ ಅಪಮಾನ-ನಾಚಿಕೆ ಇವುಗಳ ಮುಂದೆ, ನನ್ನ ನಿಜವಾದ ಕಷ್ಟಗಳು ಅಲ್ಪವಾಗಿ ಕಾಣಹತ್ತಿದವು. [illegible] [illegible] [illegible], ನನಗೆ [illegible]. [illegible] [illegible], [illegible] [illegible] [illegible] [illegible], [illegible] [illegible] [illegible] ಮಾಡಲು [illegible].

ಸ್ತ್ರೀ — ಕುಳಿತುಕೊಳ್ಳಿ, ಕುಳಿತುಕೊಳ್ಳಿ. [illegible], [illegible] [illegible] ಸೇವಿಸುವಿರೋ ?

ನಾನು— (ನಾಚಿಕೆಗೊಂಡು) ಇಲ್ಲ–ನಾನು ಉಪವಾಸವಿರುತ್ತೇನೆ.

ಸ್ತ್ರೀ— ಅವಕುಂಠನವನ್ನು ತೆಗೆಯಿರಿ.

ಹೀಗೆಂದು ಮಾತನಾಡುತ್ತಾ ಇರುತ್ತ, ಅವಳು ನನ್ನ ಮುಖಪರದೆಯನ್ನು ಎತ್ತಿ, ನಿಲಂಗಿಯನ್ನು ತೆಗೆದು, ನನ್ನ ಉಡುಪನ್ನು ದೃಷ್ಟಿಸಿ ನೋಡುತ್ತಿದ್ದಳು. ನಾನು ಇದನ್ನು, ಅಂದು ನಸಿರುಲ್ಲಾ ಪಾಷಾರವರ ತೋಟದಲ್ಲಿದ್ದಾಗ ನನ್ನ ಸ್ನೇಹಿತರಿತ್ತ ಬಟ್ಟೆಗಳನ್ನೇ ಹಾಕಿಕೊಂಡಿದ್ದೆನು. ಅವನ್ನು ನೋಡಿ, ನನ್ನ ಅಂತಸ್ತಿನ ವಿಚಾರ, ಒಳ್ಳೇ ಅಭಿಪ್ರಾಯಪಡುವಂತಿರಲಿಲ್ಲ. ನನ್ನ ವಿಷಯವಾಗಿ ಅವಳು ಕೆಟ್ಟ ಅಭಿಪ್ರಾಯಪಟ್ಟಿದ್ದರೂ, ಅವಳ ಸೌಶೀಲ್ಯವು, ಅದನ್ನು ತೋರಗೊಡಲಿಲ್ಲ. ಅವಳು ನನ್ನ ಮುಂದೆ ಕುಳಿತು ಕೊಂಡು ರಂಜಾನ್, ಹಜ್, ಖಿಲಾಫತ್‌ನ ಮಸೀದಿ ಇವೇ ಮುಂತಾದ ಅಸಂಬದ್ಧವಾದ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದುದನ್ನು ನೋಡಿದರೆ, ನಾನವರ ಮನೆಗೆ ಬೆಳಗಿನ ಜಾವ ಐದು ಘಂಟೆಗೆ ಬಂದುದೂ, ತಾನು ಸಂಜೆಯ ಉಡುಪಿನಲ್ಲಿ ನನ್ನನ್ನು ಎದುರುಗೊಂಡುದೂ, ತನ್ನ ಗೌನಿನ ಕೆಳಗೆ ಬರೀಕಾಲುಗಳು ಕಾಣಿಸುತ್ತಿದ್ದುದೂ ಇವೆಲ್ಲವನ್ನು ಸಾಮಾನ್ಯ ವಿಷಯಗಳೆಂದು ಅವಳು ಭಾವಿಸಿದ್ದಂತಿತ್ತು. ಅವಳು ತನ್ನ ಉಡುಪಿನ ವಿಚಾರ ಹೆಚ್ಚುಗಮನ ಕೊಡದೆ, ನಾನು ಸಹ ಹಾಗೆಯೇ ಇರಲೆಂದು ಆಶಿಸುವಂತಿದ್ದಳು. ಆದುದರಿಂದ, ನಾನೂ ಸಾಧ್ಯವಾದಷ್ಟು ಅವಳಂತೆಯೇ ಇದ್ದೆನು. ಆದರೆ, ನನ್ನೆದೆಯ ಮೇಲೆ, ಭಾರವಾದೊಂದು ಕಲ್ಲು ಹೇರಿದ್ದಂತಿತ್ತು–ಮೆದುಳಿನ ನರಗಳೆಲ್ಲ, ಚಿಂತೆಯಿಂದ ತಕಗುಟ್ಟುತ್ತಿದ್ದವು. ಸುಮಾರು ಹದಿನೈದು ನಿಮಿಷಗಳಾದನಂತರ, ಅವಳಿಗೆ ನಾನ್ಯಾರೆಂದು ಕೇಳಲಪೇಕ್ಷೆಯಾಯಿತು. ಈ ಪ್ರಶ್ನೆಯು ಇನ್ನೂ ಅವಳ ನಾಲಿಗೆಯ ತುದಿಯಲ್ಲಿರುವಾಗ್ಗೆ ಯಾರೋ ದಪ್ಪ ಧ್ವನಿಯಿಂದ 'ಸುಫಿಯಾ' ಎಂದು ಕೂಗಲು, ಅವಳು ಬೇಗನೆದ್ದು ನಿಂತಳು.

ಸುಫಿಯಾ— ನನ್ನ ಪತಿಯು—ಒಂದು ಕ್ಷಣ ನನ್ನನ್ನು ಮನ್ನಿಸಬೇಕು.

ಹೀಗೆಂದು ಹೇಳಿ,ಅವಳು ಹೊರಟು ಹೋದಳು. ಖಂಡಿತವಾಗಿಯೂ, ಈ ರಹಸ್ಯವು ತನ್ನ ಪತಿಯಿಂದ ಗೊತ್ತಾಗುವದೆಂದು, ಯೋಚಿಸುತ್ತಾ ಅವಳು ಹೋಗಿರಬೇಕು. ನಾನು ಏಕಾಕಿನಿಯಾಗಿ, ಕುರ್ಚಿಯ ಮೇಲೆ ದಿಂಬನ್ನು ಹಾಕಿಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತುಕೊಂಡೆನು. ನನಗೀಗ, ನಸಿರುಲ್ಲಾ ಪಾಷಾರವರು, ನಾನಿಲ್ಲಿ ಬಂದುದಕ್ಕೆ ಕಾರಣವೇನನ್ನು ತಿಳಿಸಿರಬಹುದೆಂದು ಯೋಚಿಸುವಷ್ಟು ಸಹ, ಶಕ್ತಿ ಇರಲಿಲ್ಲ. ಆದರೆ, ಹಿಂದೆ ನಡೆದ ಘಟನೆಗಳು ನನ್ನ ಕಣ್ಣಿನಿಂದ ಮರೆಯಾಗಲಿಲ್ಲ. ಹದಿನೈದು

ನಿಮಿಷಗಳೊಳಗಾಗಿ ಸುಶೀಲೆಯು ನಾನಿದ್ದಲ್ಲಿಗೆ ಬಂದಳು. ಬಹು ದಿವಸದಿಂದ ಕೂಡಿದವಳಾಗಿ, ಬಂದೊಡನೆ ನನ್ನನ್ನು ಆಲಿಂಗನ ಮಾಡಿಕೊಂಡು ಮುದ್ದಿಸಿದಳು.

ಸುಶೀಲೆ— [illegible] ತಾನೆ? [illegible] ನಿನ್ನ ಬಟ್ಟೆಗಳು ಒದ್ದೆಯಾಗಿವೆ. ನನ್ನ ಬಟ್ಟೆಗಳನ್ನು ಹಾಕಿಕೊಂಡಿದ್ದರೆ, ನನ್ನನ್ನು ಬಹಳ ಸಂತೋಷಪಡಿಸಿದಂತಾಗುವುದು.

ನಾನವಳನ್ನು [illegible]. ಅವಳು ನನ್ನನ್ನು ಕರೆದು, ಸ್ನಾನದ ಮನೆಗೆ ಕರೆದುಕೊಂಡು ಹೋಗಿ, ಅಲ್ಲಿ ನನ್ನ ಬಟ್ಟೆಗಳನ್ನು ತೆಗೆಸಿ, ಬೇಗನೆ ಬೇರೆ ಬಟ್ಟೆಗಳನ್ನು ತಂದು ಕೊಟ್ಟಳು.

ಸುಶೀಲೆ— ಅಣ್ಣಾ! [illegible] ಸ್ನಾನಮಾಡಿ ಊಟವನ್ನು ಮಾಡಿಕೋ. ನಾನು ಹೋಗಿ ನಿನ್ನ ಕೋಣೆಯನ್ನು ಸಿದ್ಧಪಡಿಸುವೆನು.

ಹೀಗೆಂದು ಹೇಳಿ ಅವಳು ಹೊರಟುಹೋದಳು. ಸ್ನಾನಾನಂತರ ನಾನು ಆಹಾರವನ್ನು [illegible]. ಮನಸ್ಸು ಬಹಳ ಕ್ಷುಬ್ಧವಾಗಿದ್ದುದರಿಂದ, ಅವಳು ಹೇಳಿದ ಮಾತುಗಳು [illegible] ಸ್ಪಷ್ಟವಾಗಿ ಕೇಳಿಸುತ್ತಿತ್ತು. ಆದುದರಿಂದ ಊಟವನ್ನು ಮಾಡಲು ನನಗೇನೂ ಕಷ್ಟವಾಗಲಿಲ್ಲ. ಸ್ನಾನಮಾಡಿದುದರಿಂದ ಮನಸ್ಸಿಗೆ ಉಲ್ಲಾಸವುಂಟಾಗಿ, ಕೋಣೆಯನ್ನು [illegible] ಮಧ್ಯಾಹ್ನದೊಳಗೆ [illegible]. [illegible] ಸುಶೀಲೆಯು [illegible] ದಿಂದ ಅತ್ತಿತ್ತ ನೋಡುತ್ತ ಬಂದಳು—

"[illegible]? ನಿನಗೆ ಇನ್ನೇನೂ [illegible]. [illegible] ಬೇಗನೆ [illegible] (ಮತ್ತೆ ನಾನವಳನ್ನು [illegible]) [illegible]? ನನಗೆ [illegible]. [illegible], ನೀನು ಇನ್ನು [illegible]."

ಅವಳು ಹೀಗೆ ಹೇಳಿ ಹೊರಟು ಹೋದಳು. ನಾನು ಕಾಟಿನ ಮೇಲೆ ಮಲಗಿಕೊಂಡು ಕಣ್ಣುಗಳನ್ನು ಮುಚ್ಚಿಕೊಂಡೆನು. ಚಿಂತೆಯಿಂದ ನನ್ನ

ವೇಷವು ಧಗ್ಗೆವಾಗುತ್ತಿದ್ದರೂ, ಉಪವಾಸವು ಬಹಳವಾಗಿದ್ದುದರಿಂದ, ಮಲಗುತ್ತಲೇ ನಿದ್ರೆ ಹತ್ತಿತು. ಸಂಜೆಯವರೆಗೂ ಜ್ಞಾನವಿಲ್ಲದೆ ನಿದ್ರಿಸಿದೆನು. ಕೊನೆಗೆ ನನ್ನ ನೂತನ ಪ್ರೇಮಕಾರಿಣಿಯು, ಮೆಲ್ಲನೆ ನನ್ನ ಮಗ್ಗಲನ್ನು ಸವರಿ, ಎಚ್ಚರಗೊಳಿಸಿದಳು.

ಸುಫಿಯಾ— (ಮೆಲ್ಲನೆ) ನಮಾಜ್ ಮಾಡುವದಿಲ್ಲವೇನು ? ಕಡೆಯ ನಮಾಜಿನ ಹೊತ್ತು ಕಳೆದು ಹೋಗುತ್ತಿರುವದು.

ನಾನು ಕಣ್ಣುತಿಕ್ಕುತ್ತಾ, ನಾನೆಲ್ಲಿರುವೆನೆಂಬುದು ಮೂರುನಾಲ್ಕು ನಿಮಿಷಗಳವರೆಗೆ ಗೊತ್ತಾಗದೆ, ಘಾಬರಿಯಿಂದ ಅತ್ತಿತ್ತ ನೋಡಲಾರಂಭಿಸಿದೆನು.

ಸುಫಿಯಾ—ನಿನ್ನ ಚಿಕ್ಕಪ್ಪನು ಇನ್ನೂ ಬಂದಿಲ್ಲ. ಅವರೆ ಒಂದು ಘಂಟೆಯ ಕೆಳಗೆ ಅಫ್ಸರ್ ಬೇಟಿಯವರು ಬಂದು, ನಿನ್ನ ಕ್ಷೇಮವನ್ನು ಕುರಿತು ವಿಚಾರಿಸಿಕೊಂಡು, ಸಂಜೆಯ ಒಳಗೆ ನಿನ್ನ ಸಾಮಾನುಗಳೆಲ್ಲಾ ಬಂದುಬಿಡುವವೆಂದು ಹೇಳಿಹೋದರು.

ನಾನು ಬೇಗನೆದ್ದು, ಕೈಕಾಲುಗಳನ್ನು ತೊಳೆದುಕೊಂಡು ನಮಾಜ್ ಮಾಡಿದೆನು. ಆವಳು ಅಲ್ಲಿಯೇ ಕುಳಿತುಕೊಂಡಿದ್ದು, ನಾನು ನಮಾಜನ್ನು ಮುಗಿಸಿದ ನಂತರ, ಕಿಟಕಿಯನ್ನು ತೆರೆದು ನನ್ನನ್ನು ಹತ್ತಿರ ಕರೆದಳು.

ಸುಫಿಯಾ— ಬಾ, ಇಲ್ಲಿ ಕುಳಿತುಕೊ. ನೋಡು-ಮಸೀದಿಯು ಎಷ್ಟು ಸ್ಪಷ್ಟವಾಗಿ ಗೋಚರಿಸುತ್ತಿರುವದು. ಪ್ರಾರ್ಥನೆಯಾದ ಕೂಡಲೆ ಕೆಳಗೆ ಓಡಿಹೋಗಿ, ಇಫ್ತಾರ್ (ಸಂಜೆಯ ಊಟವನ್ನು) ಮಾಡಿ, ಉಪವಾಸವುಗಿಸೋಣ. ನನಗೆ ಈ ಕಿಟಿಕಿಯನ್ನು ಕಂಡರೆ ಬಹಳ ಇಷ್ಟ. ಹರಮುಶರೀಫದಲ್ಲಿ ಇದೊಂದೇ ಕಡೆಯಿಂದ ಮಸೀದಿಯು ಚೆನ್ನಾಗಿ ಕಾಣಿಸುವದು. ಲೈಲತುಲ್ ಖದರ್ (ರಂಜಾನ್ ಮಾಸದೊಂದು ಪುಣ್ಯಕರವಾದ ದಿನ. ಇಪ್ಪತ್ತೇಳನೆಯ ರಾತ್ರಿ) ನ ಉತ್ಸವವನ್ನು ಇಲ್ಲಿಂದ ಚೆನ್ನಾಗಿ ನೋಡಬಹುದು. ನೀನು ಅದುವರೆವಿಗೆ ಇಲ್ಲಿರುತ್ತಾನೆ ? ಇನ್ನು ಒಂಭತ್ತೇ ದಿನಗಳು ಬಾಕಿಯಿರುವವು. ನನ್ನ ಸ್ನೇಹಿತರೆಲ್ಲ ಅಂದು ಇಲ್ಲಿ ತಮಾಷೆ ನೋಡಲು ಬರುವರು. ನಾನವರೆಲ್ಲರಿಗೂ ಔತಣ ಮಾಡಿಸುತ್ತೇನೆ. ನೀನು ಇಲ್ಲಿಂದ ಯಾವತ್ತು ಹೊರಡಬೇಕು ?

ನಾನು— ನನಗೆ ತಿಳಿಯದು. ನಸಿರುಲ್ಲಾ ಸಾಹೇಬರವರು ಅಪ್ಪಣೆಕೊಡಿಸಿದ ವೇಳೆ.

ಸುಫಿಯಾ—ನಿಜ-ನಿನಗೆ ಇಷ್ಟು ದಯಾವಂತರಾಗಿರುವದರಿಂದ ಬಹಳ ಒಳ್ಳೇ

ಮನುಷ್ಯರು. ನಿನ್ನ ಅಜ್ಜಿಯು ಬಹುಶಃ ಅವರ ಬಳಿ ಕೆಲಸದಲ್ಲಿದ್ದಳೆಂದು ತೋರುತ್ತದೆ.

ನಾನು— ಹೌದು.

ಹೀಗೆಂದು, ಅನಂತರ ಸುಫಿಯಾಳಿಗೆ ನನ್ನ ವಿಚಾರ ಎಷ್ಟು ಗೊತ್ತಿರಬಹುದೆಂದು ಮನಸ್ಸಿನಲ್ಲಿ ಯೋಚಿಸಹತ್ತಿದೆನು.

ಸುಫಿಯಾ— ಅವರಿಂದಲೇ ನಿನ್ನ ಅಜ್ಜಿಯ ಮರಣಾನಂತರ, ನಿನ್ನನ್ನು ನಿನ್ನ ಮನೆಗೆ ಕಳುಹಿಸಿ ಕೊಡುತ್ತಿರಬಹುದು. ಅವರದು ದೊಡ್ಡ ಉಪಕಾರವು.

ನಾನು — ಅತ್ಯಂತ.

ಅವಳಿಗೇನೂ ಗೊತ್ತಿದ್ದಂತೆ ಕಾಣಿಸಲಿಲ್ಲ.

ಸುಫಿಯಾ— ಈಗ ನೀನು ಹೋಗಿರಲು, ನಿನ್ನ ಬಂಧುಗಳ್ಯಾರಿರುವರು ? ಪಾಷಾಸಾಹೇಬರು, ನಿನ್ನನ್ನು ತಮ್ಮ ಹತ್ತಿರ ಇಟ್ಟುಕೊಳ್ಳದಿರುವದು, ಆಶ್ಚರ್ಯವನ್ನುಂಟುಮಾಡುತ್ತದೆ. ಅವರು ಅತ್ಯಂತ ಶ್ರೀಮಂತರೆಂದು ಜನರು ಹೇಳುತ್ತಾರೆ. ನೀನಿದ್ದರೆ, ಅವರಿಗೇನೂ ಹೆಚ್ಚು ಖರ್ಚಾಗುತ್ತಿರಲಿಲ್ಲ.

ನಾನು— (ಮೊದಲನೇ ಪ್ರಶ್ನೆಯ ಜವಾಬಿನಿಂದ ತಪ್ಪಿಸಿಕೊಂಡುದಕ್ಕಾಗಿ ಸಂತೋಷಗೊಂಡು) ಆದರೆ ನಾನೇ ಅಲ್ಲಿರಲು ಇಷ್ಟಪಡಲಿಲ್ಲ. ಅಲ್ಲಿಂದ ಹೊರಟುಹೋಗಲು ಇಷ್ಟವುಳ್ಳವಳಾಗಿದ್ದೇನೆ.

ಸುಫಿಯಾ— (ತನ್ನ ನೀಲವಾದ ಕಣ್ಣುಗಳನ್ನು ಆಶ್ಚರ್ಯದಿಂದ ಅರಳಿಸಿಕೊಂಡು) ಯಾಕೆ ? ನಿನಗೆ ಕುಸ್ತಂತನಿಯಾವು ಇಷ್ಟವಿಲ್ಲವೇ ? ನಾನಾದರೋ ಇಲ್ಲಿಯೇ ಹುಟ್ಟಿದೆನು. ನನ್ನ ತಂದೆಯು ತರಾಬ್ಜದ ವ್ಯಾಪಾರಸ್ಥನಾಗಿದ್ದು, ಇಲ್ಲಿ ಬಂದು ನೆಲಸಿದನು. (ಕೊರಡಿಯನ್ನುತ್ತಲೂ ವ್ಯಥೆಯಿಂದ ನೋಡುತ್ತಾ) ನಾವು ಬಹಳ ಐಶ್ವರ್ಯವಂತರಲ್ಲ. ನನ್ನನ್ನು ಆಫಂದಿಯವರಿಗೆ ಕೊಟ್ಟು ಮದುವೆ ಮಾಡುವದು, ಮೊದಲು ತಂದೆಯವರ ಉದ್ದೇಶವಾಗಿರಲಿಲ್ಲ. ಆದರೆ, ಇವರ ಸ್ಥೈರ್ಯವನ್ನೂ ಕಾರ್ಯತತ್ಪರತೆಯನ್ನೂ ನೋಡಿದನಂತರ, ಸಾಮಾನ್ಯನನ್ನು ಮದುವೆಯಾಗಿ ಆಜೀವಪರ್ಯಂತ ಆಫಂದಿಯ ಬೀಬಿಯೆಂದು ಕರೆಯಿಸಿಕೊಳ್ಳುವದಕ್ಕಿಂತ, ಜೀವನಾರಂಭದಲ್ಲಿ ಸ್ವಲ್ಪ ಕಷ್ಟ ಸಹಿಸಿ, ಆಮೇಲೆ ಉನ್ನತ ದರ್ಜೆಗೇರಲೆಂದು ಅವರು ಮನಸ್ಸು ಮಾಡಿದರು. ಅದು ಕಾರಣ, ನನ್ನನ್ನು ಡಾಕ್ಟರಿಗೆ ಕೊಟ್ಟು ಮದುವೆಮಾಡಿದರು. ನನ್ನ ಪತಿಯು ಬಹು ಯೋಗ್ಯರೂ ಬುದ್ಧಿಶಾಲಿಗಳೂ ಆಗಿದ್ದಾರೆ. ಹೀಗೆಯೇ ನಡೆದು ಬರುತ್ತಾ,

ಕೊನೆಗವರು ಪಾಷಾ ಆಗಿಬಿಡುವರೆಂಬ ನಂಬಿಕೆ ನನಗೆ ಸಂಪೂರ್ಣವಾಗಿದೆ— ಅದವಲ್ಲೂ, ನಸಿರುಲ್ಲಾ ಪಾಷಾರವರು ಅವರ ಮೇಲೆ ಕರುಣಾಕಟಾಕ್ಷವನ್ನು ಬೀರಿರುವಾಗ, ಅವರ ಮೂಲಕ ಯಾವುದಾದರೊಂದು ಉನ್ನತಸ್ಥಾನವು ಅವರಿಗೆ ಸಿಕ್ಕಬಹುದು—ಅದಕ್ಕೆ ನೀನೇ ಕಾರಣಳಾಗುವೆ.

ಅನಂತರ ನನ್ನ ಕೊರಳಿನ ಮೇಲೆ ತೋಳುಗಳನ್ನು ಹಾಕಿಕೊಂಡು ನನ್ನನ್ನು ಮುದ್ದಿಸಿದಳು.

ಸುಫಿಯಾ— (ಥಟ್ಟನೆ) ಅಗೋ! ಕೋವು ಹಾರಿತು. ಮೌಜನನ ಧ್ವನಿಯು ಕಿವಿಗೆ ಕೇಳಿಸಲಿಲ್ಲ. ಆಫಂದೆಯವರು ಊಟಕ್ಕಾಗಿ ಕಾದಿರಬಹುದು— ನನ್ನೊಡನೆ ಸಿಟ್ಟುಗೊಳ್ಳುವದಿಲ್ಲವೆಂದು ನಿರೀಕ್ಷಿಸುತ್ತೇನೆ.

ಹೀಗೆಂದು ಹೇಳಿ, ಅವಳು ಓಡಿ ಹೊರಟು ಹೋದಳು. ಅವಳಿಗೆ ನನ್ನ ವಿಚಾರವೇನೂ ತಿಳಿದಿಲ್ಲವೆಂದು ಯೋಚಿಸಿಕೊಂಡು, ನನಗೆ ಅತ್ಯಂತ ಸಮಾಧಾನವಾಯಿತು.

ಒಂಭತ್ತನೆಯ ಪರಿಚ್ಛೇದ

"ಹಾಜಿರೇ, ಪ್ರಿಯ ಸಹೋದರಿ, ಇನ್ನೇನು ಸಮಾಚಾರ? ನಿನ್ನನ್ನು ನೋಡಲು ಯಾರೋ ಬಂದಿರುವರು."

ಕಣ್ಣೆತ್ತಿನೋಡಲು ಸುಫಿಯಳು ಬಾಗಿಲಬಳಿ ನಿಂತಿದ್ದಳು. ಅವಳ ಪ್ರಕಾಶಮಾನವಾದ ನೇತ್ರಗಳಿಂದ, ಉಲ್ಲಾಸವೂ ವಿಸ್ಮಯವೂ ಹೊರಸೂಸುತ್ತಿದ್ದವು. ನಾನಾಗ ಸುಫಿಯಳಿಗಾಗಿ ಕೆಲವು ಬಟ್ಟೆಗಳನ್ನು ಹೊಲಿದು ಸರಿಪಡಿಸುತ್ತಿದ್ದೆನು. ಅವಳ ಮಾತನ್ನು ಕೇಳಿದೊಡನೆಯೇ, ನನ್ನೆದೆಯು ಬಡಿದುಕೊಳ್ಳಲಾರಂಭಿಸಿತು. ನಾನಿಲ್ಲಿಗೆ ಬಂದು ಇವತ್ತಿಗೆ ಮೂರು ದಿವಸಗಳಾಗಿ ಹೋಗಿದ್ದವು. ಇಷ್ಟು ಕಾಲದಲ್ಲಿ, ನಮ್ಮಿಬ್ಬರಿಗೂ ಬಹಳ, ಸ್ನೇಹಾಂತಃಕರಣವು ಬೆಳೆದುಹೋಗಿತ್ತು. ಆದರೆ, ನನ್ನ ವಿಚಾರವಾಗಿ, ಆಫಂದೆಯವರು ಹೇಳಿದಷ್ಟೇಹೊರತು, ಮತ್ತೇನೂ ಹೆಚ್ಚಾಗಿ ಅವಳಿಗೆ ತಿಳಿದಿರಲಿಲ್ಲ.

ನಾನು— (ನನ್ನ ಧ್ವನಿಯಿಂದ ಘಾಬರಿಯಾಗಲೀ ಕಳವಳವಾಗಲೀ ಹೊರಬರದಂತೆ ಯತ್ನಿಸಿ) ಯಾರವರು?

ಸುಫಿಯಾ—(ಬೆಳಕಿನ ಹತ್ತಿರಬಂದು ನನ್ನನ್ನು ವಿಹ್ವಲತೆಯಿಂದ ನೋಡುತ್ತಾ, ಒಬ್ಬ ದೊಡ್ಡ ಮನುಷ್ಯನು. ಸ್ವಲ್ಪಯೋಚಿಸಿನೋಡು, ನಸಿರುಲ್ಲಾ ಪಾಷಾ

ರವರು, ತಮ್ಮ ಎರಡನೆಯ ಮಗನಾದ ನಾಫಿಜ್‌ಬೇಯನ್ನು ನಿನ್ನೊಡನೆ ಏನನ್ನೊ ಹೇಳಲು ಕಳುಹಿಸಿರುವರು. ಆಶ್ಚರ್ಯವಲ್ಲವೇ-ತಮ್ಮ ದಾರೋಗ ನನ್ನೇಕೆ ಕಳುಹಿಸಲಿಲ್ಲವೋ !

ನಾನೇತ್ತುರವನ್ನೂ ಕೊಡಲಿಲ್ಲ. ನಾನು ಯಾವದಕ್ಕಾಗಿ ಹೆದರುತ್ತಿದ್ದೆನೋ, ಅದು ಸಂಭವಿಸಿಯೇ ಬಿಟ್ಟಿತು-ಎಂದರೆ-ನಾನು ಬಚ್ಚಿಟ್ಟುಕೊಂಡಿದ್ದ ಸ್ಥಳವು, ನಾಫಿಜ್‌ಬೇಗೆ ಗೊತ್ತಾಗಿ ಹೋಯಿತು ! ಆದರೆ ನಾನವನನ್ನು ನೋಡುವದು ಯುಕ್ತವೇ ಅಥವಾ ಅಲ್ಲವೇ ? ನೋಡದಿದ್ದರೆ ದಯಾಶೀಲರಾದ ಆ ದಂಪತಿಗಳ ಮನಸ್ಸಿನಲ್ಲಿ ಸಂದೇಹ ಉಂಟಾಗುವದು. ಅವರು ಇದುವರೆಗೂ, ನಸಿರುಲ್ಲಾ ಪಾಷಾರವರು ವಿಶೇಷ ಕಾರಣವಾವುದಿಲ್ಲದೆ, ನನ್ನ ಮೇಲೆ ಸುಮ್ಮನೆ ಹೀಗೆ ಅನುಗ್ರಹವುಳ್ಳವರಾಗಿದ್ದಾರೆಂದು ತಿಳಿದುಕೊಂಡಿದ್ದರು. ಆದರೆ, ಈಗ ನಾನವರ ಮಗನನ್ನು, ತತ್ರಾಪಿ ಅವನು ಅವರಿಂದ ಸಂದೇಶ ತಂದಿರುವಂತಿರುವಾಗ ನೋಡುವದಿಲ್ಲವೆಂದರೆ, ನಾಫಿಜ್‌ಬೇಗೂ ನನಗೂ ಸಾಮಾನ್ಯವಾಗಿ ಬರಬೇಕಾದುದಕ್ಕಿಂತ ಹೆಚ್ಚು ಸಲುಗೆಯಿಂದಿರುವದೆಂದು ಭಾವನೆಯಾಗುವದು. ಅದೂ ಅಲ್ಲದೆ, ನಾನು ಹೀಗೆ ಬಂದುಬಿಟ್ಟ ವಿಚಾರವನ್ನೆಲ್ಲ, ನಾಫಿಜ್‌ಬೇಯೊಡನೆ ವಿಶದವಾಗಿ ವಿವರಿಸಬೇಕಾದುದು ನನ್ನ ಕರ್ತವ್ಯವಾಗಿರಲಿಲ್ಲವೇ ? ಅವನೇನಾದರೂ ನನ್ನೊಡನೆ ಹೀಗೆ ವರ್ತಿಸಿದ್ದನೇನು-ನಾನದರ ಮುಯ್ಯಿ ತೀರಿಸಿಕೊಳ್ಳಲು. ಈ ನನ್ನ ಕರ್ತವ್ಯದಲ್ಲಿ ಹಿಂತೆಗೆಯುವದಕ್ಕೆ ? ಅವನ ಮುಖವನ್ನು ನೋಡಿಕೊಂಡು ಅವನ ಪತ್ನಿಯಾಗಲಾರನೆಂದು ಅವನೊಡನೆ ಹೇಳುವದು, ಅತಿ ದುಸ್ಸಹವಾದ ಕಾರ್ಯವೆಂಬುದನ್ನು ನಾನು ಚೆನ್ನಾಗಿ ತಿಳಿದಿದ್ದೆನು. ಅವರೂ ಈಗ ಹೇಳದೇಇರನೆಂದು ಸ್ಥಿರಮಾಡಿಬಿಟ್ಟೆನು.

ಇನ್ನು ಎದ್ದು ನಿಂತು, ಬಾಗಿಲಕಡೆ ಹೊರಟೆನು. ಸುಫಿಯಳು ಆಶ್ಚರ್ಯ ಚಕಿತಳಾಗಿ ನೋಡುತ್ತಾ, ಹೀಗೆಂದಳು:-

"ಇದೇನು-ಹೀಗೆಯೇ ಕೆಳಗೆ ಹೋಗುತ್ತೀಯಾ ? ಶಿರವನ್ನು ಮುಚ್ಚಿಕೊ."

ನಾನು ಘಾಬರಿಗೊಂಡು ನಿಂತುಬಿಟ್ಟೆನು. ಸುಫಿಯಳು ಕೌಚಿನ ಮೇಲಿನಿಂದ ಮುಖಾವರಣವನ್ನು ತೆಗೆದುಕೊಂಡು, ನನ್ನ ತಲೆಯ ಮೇಲೆ, ಮುಖ ಮಾತ್ರ ಹೊರಗೆ ಕಾಣಿಸುವಂತೆ ಹೊದ್ದಿಸಿದಳು. ನಾನು ಮಾಡಿದ ಕೆಲಸಕ್ಕಾಗಿ ನಾನೇ ಆಗ ನಾಚಿಕೆಪಟ್ಟು, ಸುಮ್ಮನಾಗಿಬಿಟ್ಟೆನು.

ಸುಫಿಯಾ—ಇಗೋ, ಇನ್ನು ಹೋಗು. ಅವನು, ಕೆಳಗೆ ವಿಶ್ರಾಮದ

ಕೊಠಡಿಯಲ್ಲಿರುವನು.

ನಾನು ಎರಡನೇ ಸಾರಿ ಅಪ್ಪಣೆಗಾಗಿ ಕಾಯದೆ, ಒಂದು ಸಣ್ಣ ಬಾಗಿಲನ್ನು ತೆರೆದುಕೊಂಡು, ಕೆಳಗೆ ಓಡಿಹೋದೆನು. ಜಲೀಲನು ಎದುರಿಗೆ ನಿಂತಿದ್ದನು. ಅವನನ್ನು ಕೇಳಿ ಡಾಕ್ಟರು ಸಾಹೇಬರು ಕೆಳಗಿರಲಿಲ್ಲವೆಂತಲೂ, ಹರಮ್ ಸರಾದಲ್ಲಿದ್ದರೆಂತಲೂ ತಿಳಿದನಂತರ, ನಾಫಿಜ್‌ಬೇಯು ಇದ್ದ ಕೊಠಡಿಯ ಬಾಗಿಲನ್ನು ಬೇಗನೆ ತೆರೆದು, ಒಳಗೆ ಹೋಗಿಬಿಟ್ಟೆನು. ಅವನನ್ನು ಏಕಾಂತದಲ್ಲಿ ನೋಡುವದು ನನಗೆ ಸಂತೋಷಕರವಾಗಿತ್ತೇ ಇಲ್ಲವೇ ಎಂಬುದನ್ನು ಸಹ ಯೋಚಿಸಲಿಲ್ಲ. ನಾಫಿಜ್‌ಬೇಯು ಮೇಜಿನ ಹತ್ತಿರ ನಿಂತಿದ್ದವನು, ನನ್ನನ್ನು ಕಂಡು ಮುಂದೆ ಬಂದು ನನ್ನೆರಡು ಕೈಗಳನ್ನೂ ತನ್ನ ಕೈಯಲ್ಲಿ ಹಿಡಿದುಕೊಂಡು, ನನ್ನನ್ನು ಬೆಳಕಿನ ಹತ್ತಿರ ಕರೆದುಕೊಂಡು ಹೋಗಿ, ಎವೆಯಿಕ್ಕದೆ ನೋಡಲಾರಂಭಿಸಿದನು.

ನಾಫಿಜ್‌ಬೇ—(ಉಲ್ಲಾಸಾಧಿಕ್ಯದಿಂದ ನನ್ನನ್ನು ಎದೆಗಾಲಿಂಗಿಸಿಕೊಂಡು) ಅಸಹಾಯಕಳಾದ ಹಾಜಿರೇ, ನಿನ್ನವಸ್ಥೆಯೇನಾಗಿರುವದು! ಶರೀರದೊಳಗಾಗಿ ರಕ್ತವಿಲ್ಲ-ಬಟ್ಟೆಯಂತೆ ಬೆಳ್ಳಗಾಗಿ ಹೋಗಿರುವೆಯಲ್ಲಾ!

ಒಂದು ಘಳಿಗೆಯವರೆಗೆ ನಾನವನ ಆಲಿಂಗನದಲ್ಲೇ ಇದ್ದು, ಅನಂತರ ಬಲಾತ್ಕಾರದಿಂದ ಬೇರೆಯಾದೆನು.

ನಾನು—(ಘಾಬರಿಯಿಂದ) ನಾಫಿಜ್‌ಬೇ, ನೀವೇಕೆ ಬಂದಿರಿ? ನೀವು ಬರದಿದ್ದರೆ ನಮ್ಮಿಬ್ಬರಿಗೂ ಎಷ್ಟು ಒಳ್ಳೆಯದಾಗಿತ್ತು!

ನಾಫಿಜ್‌ಬೇ—(ಸಿಟ್ಟುಗೊಳ್ಳುವವನಂತೆ ಹುಬ್ಬುಗಂಟಿಕ್ಕಿ) ಅದೇಕೆ? ನಾನು ನಿನ್ನಿಂದ ಎಲ್ಲಾ ಸಮಾಚಾರವನ್ನು ತಿಳಿದುಕೊಳ್ಳದೆ, ನಿನ್ನನ್ನು ಹೋಗಲು ಬಿಡುತ್ತಿದ್ದೆನೆಂದು ನಿಜವಾಗಿಯೂ ತಿಳಿದಿದ್ದೆಯಾ?

ನಾನು—(ನಿರಾಶಳಾಗಿ) ಆದರೆ ಇದರಿಂದ ಪ್ರಯೋಜನ? ನಿಮ್ಮ ತಂದೆಯವರು ಅನುಮತಿಕೊಡಲು ಒಪ್ಪಲಿಲ್ಲ, ಈಗಿನ್ನೇನು ತಾನೆ ಹೇಳುವದಿದೆ?

ನಾಫಿಜ್‌ಬೇ—(ಗರ್ವಿಭಾವದಿಂದ ನೋಡುತ್ತಾ) ಎಷ್ಟೋ. ನನ್ನ ಕಾಗದವನ್ನೇಕೆ ಅಥಮ್‌ನಿಗೆ ತೋರಿಸಿದೆ? ನಾನು ನಿನ್ನನ್ನು, ಇಲ್ಲಿಂದ ಮತ್ತೆಲ್ಲಿಗಾದರೂ ಕರೆದುಕೊಂಡು ಹೋಗುವೆನೆಂದು ಬರೆದುದಕ್ಕಾಗಿ, ನನ್ನ ಸಾಮರ್ಥ್ಯದಲ್ಲಿ ನೀನು ಸಾಕಾದಷ್ಟು ಭರವಸೆಯನ್ನಿಡಲಿಲ್ಲವೇಕೆ?

ನಾನು—ಯಾಕೆಂದರೆ, ಅದು ಸಾಧ್ಯವಾಗಿರಲಿಲ್ಲ. ಅದೂ ಅಲ್ಲದೆ, ಯಾವ ಮನೆಯವರು ನನ್ನನ್ನು ತಮ್ಮ ಜತೆ ಸೇರಿಸಿಕೊಳ್ಳಲಿಷ್ಟಪಡುವದಿಲ್ಲವೋ ಆ ಜನರೊಡನೆ ನಾನು ಬಲಾತ್ಕಾರವಾಗಿ ಸೇರಿಸಿಕೊಳ್ಳಲಿಷ್ಟ ಪಡುವದಿಲ್ಲ.

ನಾಫಿಜ್‌ಬೇ—(ನಕ್ಕು) ಸಾಕು. ಇಷ್ಟು ತಾನೆ. ಈ ಕಾರಣ ಮಾತ್ರ ತಾನೆ. ಪ್ರಾಣಾಧಿಕೆ ನನ್ನ ಪತ್ನಿಯೆನಿಸಿದುದಕ್ಕಾಗಿ, ನನ್ನ ಮನೆಯವರು ನಿನ್ನನ್ನು ಖಂಡಿತವಾಗಿಯೂ ಸ್ವೀಕರಿಸುವರು. ಇಗೋ, ಪ್ಯಾರಿ, ಇಲ್ಲಿಬಾ. ನನಗೂ ನಿನಗೂ ಮಧ್ಯೆ, ಈ ವಿಧವಾದ ವ್ಯರ್ಥವಾದ ಆಲೋಚನೆಗಳಿಗಾಗಿ ಆಸ್ಪದ ಕೊಡದಿರು. ಮದುವೆಯಾದ ನಂತರ, ನಾವಿಬ್ಬರೂ ಖುಸ್ತುಂತ ನಿಯಾದಿಂದ ಹೊರಟು ಹೋಗೋಣ. ಆಗ, ನಿನಗೆ ನಮ್ಮ ತಾಯಿಯ ಕ್ರೂರತೆಯ ಭಯವೆಳ್ಳಷ್ಟೂ ಇರದು. (ನಾನು ಸುಮ್ಮನಿದ್ದುದನ್ನು ನೋಡಿ ಅತ್ಯುತ್ಸಾಹದಿಂದ) ಹಾಜಿರೇ, ನಾನು ನಿನಗಾಗಿ ಪ್ರಾಣ ಬಿಡುತ್ತಿರುವೆ ನೆಂಬುದು ನಿನಗೆ ಗೊತ್ತಿಲ್ಲವೇ ? ನನ್ನ ಜೀವಾಧಿಕೆ, ಈಗ ನಿನ್ನನ್ನು ಬೇಡಿ ಕೊಳ್ಳುತ್ತಿರುವದು, ನನ್ನ ಸ್ವಾರ್ಥಕ್ಕಾಗಿ ಎಂಬುದನ್ನು ತಿಳಿದುಕೊ—ನೀನು ಇಷ್ಟಪಟ್ಟರೆ ನನ್ನನ್ನು ಉಳಿಸಿಕೊಳ್ಳಬಲ್ಲೆ. ಇಲ್ಲವಾದರೆ ನನಗುಂಟಾಗುವ ಸ್ಥಿತಿಗಿಂತ ಮರಣವು ಲೇಸೆನಿಸುವುದು. ಕಾಮಪೀಡಿತನು ಸಾಯುವುದಿಲ್ಲ ವಾದದರಿಂದ, ನೀನು ನಿರಾಕರಿಸಿದರೆ ನಾನು ಸಾಯುವೆನೆಂದು ಹೇಳಲಾರೆ. ಕೆಲವು ದಿನಗಳ ನಂತರ ನನ್ನ ತಂದೆತಾಯಿಗಳ ಇಚ್ಛಾನುಸಾರವಾಗಿ ಮದುವೆ ಯನ್ನೂ ಮಾಡಿಕೊಳ್ಳಲು ಶಕ್ತನಾಗುವೆನು. ಆದರೆ, ಇವೆಲ್ಲತರಿಂದಲೂ ಆಗುವ ಫಲವೇನು ? ಇಬ್ಬರ ಸ್ವಭಾವಕ್ಕೂ ಭೂಮ್ಯಾಕಾಶಕ್ಕಿರುವಷ್ಟು ವ್ಯತ್ಯಾಸವುಳ್ಳಂಥ ಒಬ್ಬ ಅಪರಿಚಿತ ಸ್ತ್ರೀಯನ್ನು ಮದುವೆಯಾಗುವೆನು. ನನ್ನನ್ನು ಅವಳು, ತನ್ನ ಗಂಡನೆಂದು ಮಾತ್ರ ಭಾವಿಸುವಳು—ನಾನವಳನ್ನು ನನ್ನ ಮಕ್ಕಳಿಗೆ ತಾಯಿಯೆಂದು ಮಾತ್ರ ತಿಳಿಯುವೆನು.

ನಾನು—(ಉಡುಗಿದ ಧ್ವನಿಯಿಂದ) ಆದರೆ ಎಷ್ಟೋ ತುರ್ಕಿ ಹುಡುಗಿಯರು, ನೀವು ಮನಸ್ಸಿನಲ್ಲಿ ಕಲ್ಪಿಸಿಕೊಂಡಿರುವ ಉನ್ನತ ಆದರ್ಶಕ್ಕಿಂತ, ಇನ್ನೂ ಉತ್ಕೃಷ್ಟವಾಗಿರುವರು.

ನಾಫಿಜ್‌ಬೇ—ನೀನು ಹೇಳುವದು ನಿಜ. ನಾನದನ್ನು ಇಲ್ಲವೆನ್ನುವದಿಲ್ಲ—ಆದರೆ ಅವರಲ್ಲೊಬ್ಬಳು ನಿನಗೆ ಖಂಡಿತವಾಗಿ ಸಿಕ್ಕುವಳೆಂಬುದರಲ್ಲಿ ಹೇಗೆ ನಂಬಿಕೆ ನಮ್ಮ ತಾಯಿಯವರು ಹುಡುಗಿಯನ್ನು ನೋಡಲೇನೋ ಹೋಗಬಹುದು ಅವಳು ಕೈಕಾಲುಗಳನ್ನು ಮುದುರಿಕೊಂಡು ಕೆಳಗೆ ನೋಡುತ್ತಾ ಕುಳಿತಿರು ವಾಗ, ಅವಳ ನಡನಳಿಕೆ, ಗುಣಗಳು, ಅವರಿಗೇನು ತಾನೆ ಗೊತ್ತಾಗುವದು ಎಂದು ನೀನೇ ಹೇಳು. ಒಂದು ಸಲ ಹೋದ ಮಾತ್ರಕ್ಕೆ, ಹುಡುಗಿಯರಲ್ಲಿ ಇಂಥ ಸಮಯಗಳಲ್ಲಿ ಕಾಣಬರುವ ಲಜ್ಜಾ ಮಯಾದೆಗಳು, ಸಹಜವಾದವೆ ಅಥವಾ ಕೃತ್ರಿಮವಾದವೇ ಎಂಬುದನ್ನು, ಅವರು ಹೇಗೆ ತಾನೆ ಬೇಧ

ಬಲ್ಲರು. (ನಾನು ಏನನ್ನೊ ಹೇಳಬೇಕೆಂದಿರುವಾಗ ಬೇಗನೆ ತಾನು)ಅದೃಷ್ಟ ವಶದಿಂದ ನನ್ನ ಇಷ್ಟಕ್ಕನುಸಾರವಾಗಿ ಗುಣವತಿಯಾದೊಬ್ಬ ಹುಡುಗಿಯೇ ಸಿಕ್ಕಿದಳೆಂದು ತಿಳಿ-ಆಗ ಇನ್ನೂ ಕೇಡಾಗುವದು-ಯಾಕೆಂದರೆ, ನನ್ನಿಂದ ಅವಳಿಗೆ ಸಲ್ಲಬೇಕಾದ ಪ್ರೀತಿವಿಶ್ವಾಸವನ್ನು ನಾನು ಹೇಗೆತಾನೆ, ಮನಸ್ಸಿನಲ್ಲಿ ಮತ್ತೊಬ್ಬಳಿಗೆ ಯಾವಜ್ಜೀವವೂ ಸ್ಥಾನಕೊಟ್ಟಿರುವಾಗ ತೋರಿಸಲಿ. ಹಾಜಿರೇ, ನಿನ್ನಮೇಲೆ ನನಗಿರುವಂಥ ಪ್ರೀತಿಯು ಒಬ್ಬಳಮೇಲೆ ಇರುವದು-ಮತ್ತ್ಯಾರಮೇಲೂ ಅದು ಸಾಧ್ಯವಿಲ್ಲವು.

ನಾನು ಸಂಕೋಚಿಸುತ್ತ ಕೊಂಚ ಮುಂದೆ ಹೋಗಿ, ಅವನ ಭುಜದ ಮೇಲೆ ಕೈಯಿಟ್ಟೆನು.

ನಾನು—(ಮೆಲ್ಲನೆ ಧ್ವನಿಯಿಂದ) ನಾನು ಸಹ ನಿಮಗೋಸ್ಕರ ಪ್ರಾಣಬಿಡುತ್ತಿರುವೆನು. ಆದರೂ, ಅವಶ್ಯಕವಿದ್ದಾಗ ನಿಮ್ಮನ್ನು ದೂರವಿಡುವಷ್ಟು ಮನಶ್ಶಕ್ತಿ ನನಗಿರುವದು. (ಅವನ ಮುಖದಮೇಲಿನ ಕಿರುನಗೆಯನ್ನು ನೋಡಿ, ನನ್ನ ಮಾತಿನಲ್ಲಿ ಅವನಿಗೆ ನಂಬಿಕೆಯಿರಲಿಲ್ಲವೆಂದು ತಿಳಿದು, ನಿಷ್ಠುರತೆಯಿಂದ) ಏನು, ನಾನು ಎರಡನೇ ಬಾರಿ ಮತ್ತ್ಯಾರನ್ನಾದರೂ ಪ್ರೀತಿಸುವೆನೆಂದು ನೀವು ತಿಳಿದಿರುವಿರಾ. ಹಾಗೇನಾದರೂ ಮಾಡುವದಾಗಿದ್ದರೆ, ದಾವೂದನನ್ನು ಮದುವೆಯಾಗಬೇಕೆ ಒಪ್ಪುತ್ತಿರಲಿಲ್ಲ.

ಹಾಫಿಜ್ ಬೇ—(ಉತ್ಸಾಹದಿಂದ) ಹಾಗಾದರೆ ನೀನವನನ್ನು ಒಪ್ಪಲಿಲ್ಲವೇ? ನಾನಾದರೋ ನೀನಿಲ್ಲಿಗೆ ಅವನೊಡನೆ ವಿವಾಹವಾಗಲು ಕಳುಹಿಸಲ್ಪಟ್ಟಿರುವೆಯೆಂದು ತಿಳಕೊಂಡಿದ್ದೆನು. ಪ್ರಿಯ ಹಾಜಿರೇ, ನಿನಗೆ ನನ್ನ ಮೇಲೆ ನಿಜವಾದ ಪ್ರೀತಿಯಿದ್ದರೆ, ನಮ್ಮಿಬ್ಬರ ಭವಿಷ್ಯದ ಸುಖದುಃಖಗಳು ನನ್ನ ಮಾತಾಪಿತೃಗಳ ಸಮ್ಮತ ಅಸಮ್ಮತ ಆಧಾರದಮೇಲಿರುವದೇಕೆ ಸಂದೇಹಪಡುವೆ?

ನಾನು—ಅವರು ಯಾವಾಗ್ಲೂ ನನ್ನ ಮೇಲೆ ಅನುಗ್ರಹವುಳ್ಳವರಾಗಿದ್ದಾರೆ. ಸ್ವಜನರ್‍ಯಾರೂ ಸಹಾಯಕರೂ ಕ್ಷೇಮಚಿಂತಕರೂ ಇಲ್ಲದೆ, ನಾನು ಮನೆಮಠವಿಲ್ಲದವಳಾಗಿದ್ದಾಗ, ಅವರು ನನಗೆ ತಮ್ಮ ಮನೆಯಲ್ಲಿ ಜಾಗಕೊಟ್ಟು ನನ್ನನ್ನು ಸಲಹಿದರು. ಸಲ್ವತ್ತು ವರ್ಷಗಳಿಂದ ನನ್ನ ಮನೆಯವರಿಗೆ ಅವರಿಂದ ಅನಂತವಾದ ಉಪಕಾರವಾಗಿರುವದು.

ಹಾಫಿಜ್‌ಬೇ—(ಮಾತನ್ನು ತಡೆದು, ಕುಂದಿದ ಮುಖವುಳ್ಳವನಾಗಿ) ಇನ್ನು ಉಪಕಾರದ ಮರುವಾತೆಯು, ಈ ರೀತಿ, ನೀನು ಅನ್ಯಾಯರ ಕೈಯಿಂದ ಮೃತಪ್ರಾಯಳಾಗಿ ತಪ್ಪಿಸಿಕೊಂಡು, ತಂದೆಯವರ ಕೈಯಿಂದ ಮೂರು

ಘಂಟೆ ರಾತ್ರಿಯಲ್ಲಿ ಚೋರರ ಹಾಗೆ ಮನೆಯಿಂದ ಹೊರಡಿಸಿಕೊಳ್ಳಬೇಕಾ ಯಿತು. ನಿಶ್ಚಯವಾಗಿಯೂ ನೀನವರ ಕೃಪೆಗೆ ಪರವಶಳಾಗ ಬೇಕಾನ್ನೇ! ನಾನು ಚೆನ್ನಾಗಿ ಬಲ್ಲೆನು

ನಾನು—(ಮೆಲ್ಲನೆ) ಪಾಷಾಸಾಹೇಬರಿಗೆ ನನ್ನ ಕ್ಷೇಮಚಿಂತನೆಯೇ ಮನಸ್ಸಿ ನಲ್ಲಿ ಮುಂದಾಗಿದ್ದುದರಿಂದ ನಿಮ್ಮ ತಾಯಿಯವರಿಂದ ನನ್ನನ್ನು ರಕ್ಷಿಸಲು ಅಪೇಕ್ಷಿಸುತ್ತಿದ್ದರು.

ನಾಫಿಜ್‌ಬೇ— (ಹೆಚ್ಚು ತಾಳಲಾರದೆ) ಅಯ್ಯೋದೇವರೆ, ಅವರ ಪುರುಷತ್ವ ಪೆಲ್ಲಿಹೋಗಿತ್ತು ಹೇಗು ಪುರುಷರಾಗಿ ಅವಮ್ಮಾವರು ನಿನ್ನನ್ನು ಪೀಡಿಸನಂ ತೇಕೆ ತಡೆಯಲಿಲ್ಲ. ಈ ಸ್ಥಳಕ್ಕೂ, ಅಮ್ಮಾವರು ನಿನ್ನನ್ನು ಹಿಂಬಾಲಿಸುವ ರೆಂಬ ಭಯವಿತ್ತೋ ? ದೋಣಿಯವನೊಡನೆ, ಈ ಸ್ಥಳದ ಹೆಸರನ್ನಾರಿಗೂ ಹೇಳಕೂಡದೆಂದು ಹೇಳಿದ್ದುದರಿಂದ ನಾನವನಿಗೆ ಲಂಚವನ್ನು ಕೊಟ್ಟು ನೀನ್ನಿಲ್ಲಿಗೆ ಬಂದಿರುವದನ್ನು ತಿಳಿದುಕೊಂಡೆನು. (ನಾನು ಏನೋ ಹೇಳ ಲಿಚ್ಛಿಸುತ್ತಿರುವದನ್ನು ಕಂಡು) ಸಾಕಿರಲಿ, ಬಿಡು. ಅಧವಾಬೇಯ ಪ್ರತಿಧ್ವನಿ ಯನ್ನು ಕೇಳಲು ನಾನಿಲ್ಲಿಗೆ ಬರಲಿಲ್ಲ. ಅವರ ಉಪದೇಶವೆಂತಹುದೆಂದರೆ, ಮನುಷ್ಯನಿಗೆ ಇಪ್ಪತ್ತು ವರ್ಷಗಳೊಳಗಾಗಿ ನೀತಿಯಮೇಲೆ ಬೇಸರ ಹುಟ್ಟಿ ಸುತ್ತದೆ. ಹಾಜಿರೇ, ಈಗ ಕಡೇಸಾರಿ ನಿನ್ನೊಡನೆ ನಾನು ಹೇಳಿಬಿಡುವೆನೇ ನೆಂದರೆ, ನೀನು ಒಲ್ಲೆನೆಂದು ಹೇಳಿದರೂ ನಾನು ಒಪ್ಪುವದಿಲ್ಲವೆಂದು. ಈಗ ತಾನೆ ನೀನು ನನ್ನೊಡನೆ, ನಿನಗೆ ನನ್ನ ಮೇಲೆ ಪ್ರೀತಿಯಿರುವದೆಂದು ಹೇಳಿರುವೆ. ಈ ವಿಚಾರದಲ್ಲಿ ನನಗೆ ನಂಬುಕೆಯಿರುವವರೆಗೂ, ನಮ್ಮಿಬ್ಬ ರನ್ನು ಯಾರೂ ಬೇರೆಮಾಡಲಾರರು.

ನಾನು— (ಬೇಗನೆ) ನನ್ನಿಚ್ಛೆಗೆ ವಿರುದ್ಧವಾಗಿ ನೀವು ನನ್ನನ್ನು ಬಲಾತ್ಕಾರ ದಿಂದ ಮದುವೆಯಾಗಲಾಗುತ್ತದೆಯೋ ? ನಿಮ್ಮ ತಂದೆಯವರು ಅನುಮತಿ ಕೊಡುವವರೆಗೂ ನಾನು ನಿಮ್ಮ ಪತ್ನಿಯಾಗುವವಳಲ್ಲ. ಸಾಕು, ಈವಿಚಾರ ಮುಗಿಯಿತು. ಹೆಚ್ಚು ಮಾತಿಂದೇನು ಪ್ರಯೋಜನ ?

ನಾಫಿಜ್‌ಬೇ—(ನಿಕೃಷ್ಟತೆಯಿಂದ) ಅವರನ್ನು ಅನುಮತಿಕೊಡಲು ನಿರ್ಬಂ ಧಿಸಬಹುದೆಂಬಾಶೆ ನಿನಗಿದೆಯೇನು ? ಮೊದಲು, ಯಂತ್ರದ ವಿಚಾರವಲ್ಲಿ ಜಯವಾಯಿತೇನು, ಅವರ ಬಾಗಿಲ ಬಳಿಯೂ ಕಾಗದವನ್ನು ಹೂತಿಟ್ಟಿ ದ್ದೆಯಾ ? ನನಗೆ ಈ ವಿಷಯಗಳಲ್ಲಿ ನಂಬಿಕೆಯಿಲ್ಲದಿದ್ದರೂ, ನಿನಗೆ ನಂಬಿಕೆ ಯಿರುವಂತೆ ಕಾಣಿಸುತ್ತದೆ. ನನ್ನನ್ನು ಮದುವೆಯಾಗುವ ಇಚ್ಛೆಯಿಲ್ಲ ದಿದ್ದಲ್ಲಿ, ಇಷ್ಟು ಕಷ್ಟಸಹಿಸಿಕೊಂಡು ಮಂತ್ರವಾದಿನಿಯ ಮನೆಗೆ ನೀನು

ಹೋಗಿದ್ದುದು ನನಗಾಶ್ಚರ್ಯವನ್ನುಂಟು ಮಾಡುತ್ತದೆ.

ನಾನು ನಾಚಿಕೆಯಿಂದ ನೀರುನೀರಾಗಿಹೋದೆನು. ಆದರೆ ಯತ್ನ ಪೂರ್ವಕವಾಗಿ ಕಣ್ಣೆತ್ತಿ, ಅವನಕಡೆ ಹರ್ಷದಿಂದ ನೋಡಲು ಪ್ರಕ್ರಮಿಸಿದೆನು. ನಾನು— (ಮೆಲ್ಲನೆ) ಆ ಯಂತ್ರವನ್ನು ಬೂಹಾವರೆಯು ಬಾಗಿಲಬಳಿ ಹೂತಿಟ್ಟಿದ್ದಳು. ಬೂಹಾವರೆಯೇ ಷಾಕಿರ್‌ಆಗನನ್ನು ಜತೆಯಲ್ಲಿ ಕರೆದು ಕೊಂಡುಹೋದುದು. ಅವರಿಬ್ಬರೂ ಸುಳ್ಳುಸವಾದವನ್ನು ನನ್ನಮೇಲೆ ಹೊರಿಸಿದರು. ನಾನು ಅಲ್ಲಿ ಹೋಗಿದ್ದುದೇನೋ ನಿಜ. ಆದರೆ ನಾನು ಯಂತ್ರವನ್ನು ತೆಗೆದುಕೊಳ್ಳಲೂ ಇಲ್ಲ. ತೆಗೆದುಕೊಳ್ಳುವ ಇಚ್ಛೆಯೂ ನನಗಿರಲಿಲ್ಲ.

ನಾಫಿಜ್‌ಬೇ—(ಕ್ಲೇಶಗೊಂಡು) ದೇವರಾಣೆಯಾಗಿಯೂ ನಿಜವನ್ನು ಹೇಳುತ್ತೀಯಾ ? ನೀನು ಮಹಾಪಾತಕವೆಂದು ಭಾವಿಸಿರುವ ಕೆಲಸವನ್ನು, ನನ್ನ ಮೇಲಿನ ಪ್ರೀತಿಗಾಗಿ ಕೈಕೊಂಡೆಯೆಂದು ತಿಳಿದಿದ್ದ ನಾನು ಹುಚ್ಚನೇ ಸರಿ. ನಿನ್ನ ಸುಖಕ್ಕೆ ಅಪಾಯತಂದುಕೊಳ್ಳುವಷ್ಟೇನೂ ಪ್ರಗಾಢವಾದ ಪ್ರೇಮವು ನನ್ನ ಮೇಲೆ ನಿನಗಿಲ್ಲ.

ನಾನು— (ಕೋಪದಿಂದ ನನ್ನ ಕಣ್ಣಿನಿಂದ ನೀರು ತೊಟತೊಟನೆ ಹರಿದು ಬಂದಿತು) ನಾಫಿಜ್‌ಬೇ, ನೀವು ಬಹಳ ಅನ್ಯಾಯಕಾರರು. ನೀವದನ್ನು ಚನ್ನಾಗಿ ತಿಳಿದೂ ಇರುವಿರಿ. ನನಗೋಸ್ಕರವಾಗಿ ನಿಮ್ಮನ್ನು ನೀವು, ಯಮನ್ ನಲ್ಲಿಕೊಂಡುಕೊಳ್ಳುವುದು ನನಗಿಷ್ಟವಿಲ್ಲ-ಇದರಿಂದ, ನನ್ನ ಪ್ರೀತಿಯು ನಿರ್ಬಲವಾದುದೆಂದು ನಿರ್ಧರವಾಗುತ್ತದೆಯೇನು ?

ನಾಫಿಜ್‌ಬೇ— (ವೇಗದಿಂದ) ನನ್ನನ್ನು ಯಮನ್‌ಗೆ ಕಳುಹಿಸುವರೆಂದು ನಿನಗಾರು ಹೇಳಿದರು ? (ನಾನು ಸುಮ್ಮನಿರುವನ್ನು ಕಂಡು) ಅಥಮನು ಹೇಳಿರಬಹುದು. ಪ್ರಿಯ ಹಾಜಿರೇ, ಅವರ ಮಾತು ನಿನ್ನ ಮನಸ್ಸಿನಲ್ಲಿ ನೆಡದಿರಲಿ. ಅವರು ಹುಚ್ಚರಾಗಿದ್ದಾರೆ-ಅಥವ ಇನ್ನೂ ಕೇಡೇ ಆಗಿರ ಬಹುದು. ನಮ್ಮಿಬ್ಬರನ್ನೂ ಬೇರೆಮಾಡಲು ಅವರು ಮಾಡುತ್ತಿರುವ ಪ್ರಯತ್ನದ ಕಾರಣವೇನೆಂದರೆ, ಸ್ವತಃ ತಾವು ನಿನ್ನನ್ನು ಮದುವೆಯಾಗಲು ಅಶಕ್ತರಾಗಿರುವದರಿಂದ, ನಾನೂಸಹ ನಿನ್ನನ್ನು ಮದುವೆಯಾಗಬಾರದೆಂದು

ನಾನು— (ಬೇಗನೆ ಮಾತಿಗೆ ಅಡ್ಡಿಬಂದು) ಹಷ್, ನಿಮ್ಮ ಅಣ್ಣಂದಿರ ವಿಚಾರವಾಗಿ ಹೀಗೆ ಅನುಮಾನಪಡಬಾರದು. ಅಥಮ್‌ಬೇಯುವರು ಬಹು ಗೌರವಸ್ಥರು, ಸತ್ಯಸಂಧರು. ಸಮಯದಲ್ಲಿ ಅವರೊಬ್ಬರೇ ನನ್ನ ಮಿತ್ರರಾಗಿದ್ದರು.

ಹಾಫಿಜ್ ಬೇ— (ನಿಕೃಷ್ಟತೆಯಿಂದ) ಯುಕ್ತ! ಒಳ್ಳೇದು, ನಿಮ್ಮಿಬ್ಬರ ಮೈತ್ರಿಯನ್ನು ದೇವರು ಶಾಶ್ವತವಾಗಿಡಲಿ.

ಹೀಗೆಂದು, ಅವನು ಬಾಗಿಲ ಕಡೆ ಹೊರಟು, ಮತ್ತೆ ನಿಂತುಬಿಟ್ಟು, ನನ್ನ ಕಡೆ ಕಾತರತೆಯಿಂದ ನೋಡಹತ್ತಿದನು.

ಹಾಫಿಜ್ ಬೇ— (ಥಟ್ಟನೆ ನನ್ನ ಹತ್ತಿರಬಂದು, ನನ್ನನ್ನು ಎರಡನೇಸಾರಿ ಎದೆಗಾಲಿಂಗಿಸಿಕೊಂಡು) ಹಾಜಿರೇ, ನಿನ್ನ ಕೈಯಿಂದ ನನಗೆ ಈ ವಿಪತ್ತು ಬರಬಾರದೆಂದು ನಿನಗೆ ನಾನು ಹೇಗೆ ತಾನೆ ತಿಳಿಸಲಿ. ನಾನು ನಿನ್ನಲ್ಲಿ ನೈಸರ್ಗಿಕ ಪ್ರೇಮವುಳ್ಳವನಾಗಿರುವೆನು! ಆದರೆ, ನೀನು ನನ್ನ ಪ್ರೀತಿಯನ್ನು ಹಾಸ್ಯಾಸ್ಪದವಾದುದೆಂದು ಭಾವಿಸಿರುವಂತೆ ನನ್ನೊಡನೆ ವರ್ತಿಸುತ್ತಿ. ಪ್ರಿಯತಮೇ ನನ್ನ ಮುಂದಿನ ಸುಖ ಸಂತೋಷಗಳೆಲ್ಲಾ ನಿನ್ನೀ ಮುಷ್ಟಿಗಳಲ್ಲಿರುವದೆಂಬುದನ್ನು ತಿಳಿಯಲಾರೆಯಾ. (ನಾನು ಏನನ್ನೋ ಹೇಳಲಿಚ್ಛಿಸುತ್ತಿರುವದನ್ನು ಕಂಡು) ಹೌದು, ನನ್ನ ತಂದೆಯು ನನ್ನನ್ನು ಯಮನ್‌ಗೆ ಕಳುಹಿಸಿಬಿಡುವೆನೆಂದು ಹೆದರಿಸಿರುವದನ್ನೂ, ಅಲ್ಲಿ, ಜೀವನವು ಬಹು ಕಷ್ಟದಿಂದ ಜರುಗುವದೆಂಬುದರಲ್ಲಿ ಸಂದೇಹವಿಲ್ಲವೆಂಬುದನ್ನೂ, ನಾನು ತಿಳಿದಿರುವೆನು. ಆದರೆ ನೀನು ಯಾರ ಮನಸ್ಸನ್ನು ಸೆಳೆದಿರುವಿಯೊ ಆ ಮನುಷ್ಯನು ಅಲ್ಲಿಗೆ ಹೋಗಲು ಹೆದರಿ ಹಿಂತೆಗೆಯುವಂಥ ಹೇಡಿಯೆಂದು ಭಾವಿಸಿರುವೆಯಾ ?

ನಾನು— ಇಲ್ಲ-ನಿಮ್ಮ ಗೌರವದ ಚಿಂತೆಯಿದ್ದರೆ ನೀವು ಹಾಗೆಂದಿಗೂ ಮಾಡುವದಿಲ್ಲ. ಆದರೆ ದೇಶಭ್ರಷ್ಟತೆಯಿಂದ ನಿಮಗ್ಯಾವ ವಿಧವಾದ ಮರ್ಯಾದೆಯೂ ಸಿಕ್ಕುವದಿಲ್ಲವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ. ಯಮನ್‌ನಲ್ಲಿ ಎಲ್ಲಿಯಾದರು ಕಷ್ಟ ಪ್ರಾಪ್ತಿಯಾದರೆ, ಇಷ್ಟು ಶ್ರಮಪಟ್ಟದ್ದಕ್ಕೂ ಪ್ರತ್ಯುಪಕಾರವಾಗಿ, ನಿಮ್ಮ ಪ್ರಾಣವನ್ನು ರಕ್ಷಿಸಲು ಯಾರೂ ಬೆರಳನ್ನು ಸಹ ಎತ್ತಲಾರರು-ನಿಮಗೆ ಸಲ್ಲಬೇಕಾದ ಮರ್ಯಾದೆಯನ್ನು ಸಹ ತೋರಿಸಲಾರರು. ಯಾಕೆಂದರೆ, ನಸಿರುಲ್ಲಾ ಪಾಷಾರವರು ನಿಮ್ಮ ಮೇಲೆ ಕೋಪಗೊಂಡಿರುವರೆಂಬುದು ಜನರಿಗೆ ತಿಳಿದ ಕ್ಷಣವೇ, ನಿಮ್ಮ ಆಫೀಸರುಗಳಿಗೆ ನಿಮ್ಮ ಮೇಲೆ ಸಿಪಾಯಿಯಾಗಿದ್ದು ಆಫೀಸರಾದೊಬ್ಬ ಮಾಮೂಲಿ ಅನಾತೂಲಿಯದ ನಿವಾಸಿಯ ಮೇಲಿರುವದಕ್ಕಿಂತ ಹೆಚ್ಚು ಮರ್ಯಾದೆ ಇರುವದಿಲ್ಲ.

ಹಾಫಿಜ್ ಬೇ— ಅದೆಲ್ಲಾ ಸರಿ. ಆದರೆ ನಾನದನ್ನು ಲೆಕ್ಕಿಸುವದಿಲ್ಲ. ನನಗೆ ನನ್ನ ಕೆಲಸದಲ್ಲಿ ಪ್ರೀತಿಯಿರುವದು. ನನಗೆ ಧೈರ್ಯ ಹೇಳುತ್ತ, ನನ್ನ ಮನಸ್ಸಿನ ಸುಖಸಮಾಧಾನವನ್ನು ಶಾಶ್ವತವಾಗಿಟ್ಟಿರಲು ನೀನು ನನ್ನೊಡ

ನಿಜ್ವರಿ, ಅದನ್ನು ಇಲ್ಲಿ ಮಾಡುವನು. ಯುಮುನ್‌ನಲ್ಲಿ ಮಾಡುವುದು ಎಲ್ಲಾ ನನಗೇ ಒಂದೇ ಆಗಿರುವದು. ಹಾಜಿರೇ, ನನ್ನ ಜೀವಿತೇಶ್ವರಿ, ನೀನು ನನ್ನೊಡನಿರುವುದಾದರೆ, ನಾನು ನರಕದಲ್ಲಿ ಸಹ ಹೋಗಲು ಸಿದ್ಧ ನಾಗಿರುವೆನು.

ನಾನು – (ಉಡುಗಿದ ಧ್ವನಿಯಿಂದ) ಈಗಲೇನೋ ನೀವು ಹೀಗೆ ಹೇಳುತ್ತಿರುವಿರಿ. ಆದರೆ ಕೆಲವು ವರ್ಷಗಳಾದ ಮೇಲೂ ನಿಮ್ಮ ಧೈರ್ಯವು ಇದೇ ಪ್ರಕಾರವಿರುವುದೇ? ನಿಮ್ಮನ್ನು ಒಂದು ದಿನಕ್ಕೋ ಅಥವ ಒಂದು ತಿಂಗಳಿಗೋ ಅಲ್ಲ-ಹತ್ತೋ ಅಥವ ಇಪ್ಪತ್ತು ವರ್ಷಗಳಿಗಾಗಿ ಯುಮುನ್‌ಗೆ ಕಳುಹಿಸುವರೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ.

ನಾಫಿಜ್‌ಬೇ—ಜನ್ಮಾವಧಿಯಾಗಿದ್ದರೂ ನಾನದನ್ನು ಲೆಕ್ಕಿಸುವನೇ. ಹಾಜಿರೇ, ಸ್ವಲ್ಪ ಯೋಚಿಸಿನೋಡು-ನಾನು ಗೌರವಸ್ಥನು-ಅಲ್ಲಿ ಮೂವತ್ತು ವರ್ಷಗಳಿರಬೇಕಾಗಿದ್ದರೂ, ಪ್ರಾಣವೇ ಹೋಗಲಿ, ನಿನ್ನ ವಿಚಾರ ಮಾತ್ರ ಮೂರು ನನ್ನ ನಾಲಿಗೆಯೊಳಗಾಗಿ ಬರುವದಿಲ್ಲ.

ನಾನು—ಆದರೆ, ಇದರಿಂದ ನಿಮ್ಮ ಕಷ್ಟಗಳೇನೂ ಕಡಿಮೆಯಾಗುವದಿಲ್ಲ. ನೀವು ಗೋಣಿ ಕೊಳ್ಳುವವನ್ನು ನೋಡಿದರೆ ಆಗುವ ದುಃಖಕ್ಕಿಂತ, ಮಾತಿಲ್ಲದೆ ನೀವು ಹೊರಗೆ ಹೋಗುತ್ತಿರುವವನ್ನು ನೋಡಿದರೆ ನನಗೆ ಹೆಚ್ಚು ದುಃಖವಾಗುವದು.

ಅವನು ನನ್ನ ಕೈಗಳನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ನನ್ನನ್ನು ದೃಷ್ಟಿಸಿ ನೋಡಹತ್ತಿದನು.

ನಾಫಿಜ್‌ಬೇ—(ಅತ್ಯುತ್ಸಾಹದಿಂದ) ಹಾಜಿರೇ, ನಿಜವಾಗಿಯೂ ನೀನು ನನ್ನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತೀಯಾ ?

ನಾನು—(ಉಲ್ಲಸತೆಯಿಂದ) ನಿಮ್ಮನ್ನೇ ಪ್ರೀತಿಸುವೆನು.

ನಾನು ಆಗ ಮುಖವನ್ನೆತ್ತಿ ಅವನ ಕಡೆ ನೋಡುತ್ತಿದ್ದೆನು. ಇದ್ದಕ್ಕಿದ್ದ ಹಾಗೆ, ರಾಗಾತಿಶಯದಿಂದ ನನ್ನ ಮನಸ್ಸು ನಿಸ್ವಾಧೀನವಾಗಿ ತಲ್ಲಣಿಸಲಾರಂಭಿಸಿ, ಮತ್ತೊಂದು ಸಲ ನನ್ನಧರಗಳನ್ನು ಅವನಧರಗಳ ಜತೆ ಗಾಢವಾಗಿ ಸೇರಿಸಲಾಶಿಸಿತು. ನಾನೇನು ಮಾಡುತ್ತಿರುವನೆಂಬಾಲೋಚನೆ ಸಹ ಇಲ್ಲದನ್ನು ಪರವಶಳಾಗಿ ಹೋದೆನು. ಅವನ ಕೈಯಿಂದ ನನ್ನ ಕೈಗಳನ್ನು ಬಿಡಿಸಿಕೊಂಡು ಅವನ ಮುಖದ ಮೇಲಿಟ್ಟು, ಅವನ ಶಿರಸ್ಸನ್ನು ನನ್ನ ಕಡೆಗೆ ಬಗ್ಗಿಸಿಕೊಂಡು ಅವನಧರಗಳನ್ನು ಚುಂಬಿಸಿದೆನು.

ನಾನು—ಇಗೋ ಆಯಿತು. ಈಗಲಾದರೂ ನಿಮಗೆ ನನ್ನ ಪ್ರೇಮದಲ್ಲಿ

ನಂಬಿಕೆಯಾಯಿತೇ ?

ಹೀಗೆಂದು, ನಾನವನನ್ನು ಬಿಟ್ಟುಬಿಟ್ಟು ಬೇಗನೆ ಹೋಗಿ ಒಂದು ಕುರ್ಚಿಯ ಮೇಲೆ ಕುಳಿತುಕೊಂಡು, ಲಜ್ಜೆಯಿಂದ ಕೆಂಪಾಗುತ್ತಿದ್ದ ನನ್ನ ಮುಖವನ್ನು ಕೈಗಳಿಂದ ಮುಚ್ಚಿಕೊಳ್ಳಲು ಯತ್ನಿಸಹತ್ತಿದೆನು..

ನಾಫಿಜ್‌ಬೇ—(ನನ್ನ ಹತ್ತಿರ ಬಂದು) ಪ್ರೇಮವೇನೆಂಬುವನ್ನು ನೀನರಿತವಳಾಗಿದ್ದರೆ, ನಿನ್ನನ್ನು ಮದುವೆಯಾಗಿ ನಾನು ಪಶ್ಚಾತ್ತಾಪ ಪಡುವೆನೆಂಬಾಲೋಚನೆಗೆ ಇನ್ನೇಕೆ ಮನಸ್ಸಿನಲ್ಲಿ ಜಾಗಕೊಡುವೆ.

ನಾನು ಮಾಡಿದ ಕೆಲಸದ ನಿಮಿತ್ತ ನಾಚಿಕೆಯಲ್ಲಿ ಮುಳುಗಿ, ನ್ಯಾಯಾನ್ಯಾಯದೃಷ್ಟಿಯು ನನ್ನನ್ನು ನಿಂದಿಸುತ್ತಿರಲು ನಾನೇನುತ್ತರವನ್ನೂ ಕೊಡಲಿಲ್ಲ. ನಾಫಿಜ್‌ಬೇಯು, ನನ್ನ ಮೌನವನ್ನು ಅರ್ಧಾಂಗೀಕಾರವೆಂದು ಅರ್ಥಮಾಡಿ, ಬೊಗ್ಗಿ ನನ್ನಧರೋಷ್ಠಗಳನ್ನು ಚುಂಬಿಸಿದನು.

ನಾಫಿಜ್‌ಬೇ—(ಮುದ್ದಿಸುತ್ತಾ) ನನ್ನ ಪುಟ್ಟ ಹಾಜಿರೇ, ನೀನಿಷ್ಟು ದಿನವೂ ಒಪ್ಪಲು ಸಾವಕಾಶ ಮಾಡುತ್ತಿರುವದು ನಿನ್ನ ವಿಚಾರಶೀಲತೆಗೆ ತೃಪ್ತಿಯುಂಟಾಗಲು ಸಾಕಾಯಿತು. ಇನ್ನು ಈ ಮಾತನ್ನು ಬಿಟ್ಟು ನಾನು ಹೇಳಿದಂತೆ ಕೇಳುವೆನೆಂದು ಹೇಳು–ಮತ್ತು–ನಾಳೆಯೇ ನಮ್ಮಿಬ್ಬರ ವಿವಾಹವಾಗುವದೆಂದು.

ನಾನು—(ಹಠಾತ್ತನೆದ್ದು ನಿಂತು) ಇಲ್ಲ, ಇಲ್ಲ ನಾಫಿಜ್‌ಬೇ. ಈ ಕಷ್ಟಕರವಾದ ವಿಷಯವನ್ನು ಮತ್ತಷ್ಟು ದೊಡ್ಡದುಮಾಡಿ ಏನು ಪ್ರಯೋಜನ ?

ಅವನು ಇನ್ನೂ ಇವಕ್ಕೆ ಜವಾಬು ಕೊಡುವದರಲ್ಲೇ, ಯಾರೋ ಮನೆಯ ಬಾಗಿಲನ್ನು ತಟ್ಟಿದರು. ನಾಫಿಜ್‌ಬೇಯು ಕಿಟಕಿಯ ಬಳಿ ಹೋಗಿ, ಹೊರಗೆ ಕತ್ತನ್ನು ಹಾಕಿಕೊಂಡು ನೋಡಿದನು.

ನಾಫಿಜ್‌ಬೇ–(ಸ್ವಲ್ಪ ವ್ಯಥೆಗೊಂಡ) ಅಧಮ್‌ಬೇಯು. ಅವರೊಡನೆ ಹೇಳಿಬಿಡಬೇಕು–ನೀನು ಶೀಘ್ರದಲ್ಲೇ ಅವರನ್ನೂ ಅವರ ಮನೆತನವನ್ನೂ ಗೌರವಿಸುವವಳಾಗಿರುವೆಯೆಂದು.

ನಾನು ಆಗ ಭಯದಿಂದ ನಡುಗುತ್ತ, ಅಧಮ್‌ಬೇಯುವರು ತನ್ನನ್ನು ಅಲ್ಲಿ ನೋಡಿ ಏನ ಹೇಳುವರೋ ಎಂದು ಯೋಚಿಸುತ್ತಿದ್ದುದರಿಂದ, ಅವನ ಮಾತನ್ನೂ ಕೊಂಚವೂ ಗಮನಿಸಲಿಲ್ಲ.

ನಾನು—[ಕಾತರದಿಂದ] ಅವರು ಬರುವದರೊಳಗೆ ನೀವು ಹೊರಟು ಹೋದರೆ ಒಳ್ಳೆಯದಲ್ಲವೇ ?

ಅಣ್ಣತಮ್ಮಂದಿರಿಬ್ಬರಿಗೂ ಒಬ್ಬರಮೇಲೊಬ್ಬರಿಗೆ ಸಿಟ್ಟಿದ್ದರೂ,

ಹೊರಗಡೆ ಅವರು ಇದುವರೆವಿಗೆ ವ್ಯಾಜ್ಯವಾಡಿರಲಿಲ್ಲ. ಆದರೆ, ಇನತ್ತು ನಾಫಿಜ್‌ಬೇಯು ಬುದ್ಧಿಯು, ಅಥವರ್‌ಬೇಯುವರನ್ನು ಸ್ನೇಹದಿಂದ ಕಾಣು ವಂತಿರಲಿಲ್ಲವಾದುದರಿಂದ, ಅವನ ಇರುವಿಕೆಯು ಖಂಡಿತವಾಗಿ ಘೋರ ಅನಾಹುತಕ್ಕೆ ಕಾರಣವಾಗುವದೆ ದು ನಾನು ಹೆದರಲಾರಂಭಿಸಿದೆನು.

ನಾಫಿಜ್‌ಬೇ—[ಅಲಕ್ಷ್ಯವಾಗಿ] ನಿನಗಾವ ವಿಷಯಕ್ಕಾಗಿ ಭಯ ? ನಾನು ಹೀಗೆ ಅಕಾರಣವಾಗಿ ಬಂದುದಕ್ಕೆ, ನೀನು ಕೊಂಚ ಸಹಕಾರಿಯಾಗಿರುವೆ ಯೆಂದೇನೂ ನಾನೆಂದಿಗೂ ಹೇಳುವದಿಲ್ಲ.

ನಾನು ಬೇಗನುತ್ತರ ಹೇಳಬೇಕೆಂದಿರುವಾಗ ಬಾಗಿಲು ತೆರೆಯಲ್ಪಟ್ಟು, ಅಥವರ್‌ಬೇಯುವರು ಒಳಗೆ ಬಂದರು. ಅವರು ಅಪ್ರಸನ್ನರಾಗಿಯೂ ಕ್ಷುಬ್ಧರಾಗಿಯೂ ಕಾಣಿಸುತ್ತಿದ್ದರಾದರೂ, ತಮ್ಮನು ಅಲ್ಲಿರುವುದನ್ನು ನೋಡಿ ವಿಸ್ಮಯವನ್ನು ತೋರಿಸಲಿಲ್ಲ.

ಅಥವರ್‌ಬೇ—[ನನ್ನ ಹತ್ತಿರ ಬಂದು]ನಾನು ಅಲೀಆಗನನ್ನು ನಿನ್ನ ವಿಚಾರ ಕೇಳಲು, ನೀನು ಇಲ್ಲಿ ನಾಫಿಜ್‌ಬೇಯೊಡನೆ ಇರುವಿಯೆಂದು ಗೊತ್ತಾಯಿತು. ನಾನು ಬರುವದು ನಿನಗೆ ಅಸಮ್ಮತವಾಗಲಾರದೆಂದು ತಿಳಿದುದ್ದರಿಂದ, ಬಂದೆನು.

ನಾನೇನು ಜವಾಬು ಕೊಟ್ಟನೆಂಬುದು ನನಗೇ ಗೊತ್ತಾಗದಂತೆ, ಅಸ್ಫುಟಸ್ವರದಿಂದಲೇನನ್ನೋ ಹೇಳಿದೆನು.

ಅಥವರ್‌ಬೇಯು ನನ್ನ ಹತ್ತಿರ ಬಂದಾಗ, ಅವರ ಮುಖವು ರಕ್ತ ಹೀನವಾಗಿ, ಕೋಪವನ್ನು ಪ್ರಕಟಿಸುತ್ತಿದ್ದುದನ್ನು ಕಂಡು ನಾನು ಘಾಬರಿ ಗೊಂಡೆನು.

ಅಥವರ್‌ಬೇ—ನಾಫಿಜ್‌ಬೇಯು ಸಮಾಗಮದಿಂದ ನಿನ್ನ ಮನಸ್ಸಿಗೆ ಅತ್ಯಂತ ಕ್ಲೇಶವುಂಟಾಗಿರಬಹುದು. ಆದರೆ, ದೇವರದಯದಿಂದ ಇನ್ನು ಮುಂದೆ ಯಾರೂ ನಿನ್ನನ್ನು ಹೀಗೆ ವ್ಯರ್ಥವಾಗಿ ಪೀಡಿಸದಿರಲು ತಕ್ಕ ಔಷಧವನ್ನು ಮಾಡಬಲ್ಲೆನು.

ನಾಫಿಜ್‌ಬೇ—ನಿಮ್ಮ ಶಕ್ತಿವಿನಾದಂಥ ವಾಗ್ದಾನ ಮಾಡಬೇಡಿರಿ. ನಾನಿಲ್ಲಿಗೆ ಬರುವದನ್ನು ತಡೆಯುವಂಥ, ಅದಾವ ಉಪಾಯವು ನಿಮ್ಮ ಬಳಿ ಇರಬಹು ದೆಂದು ನಾನು ಆಶ್ಚರ್ಯಪಡುತ್ತೇನೆ.

ಅಥವರ್‌ಬೇ—[ಗರ್ವಭಾವದಿಂದ] ನಾನು ಹಾಜಿರೆಯನ್ನು, ಇನ್ನು ನೀನವಳನ್ನು ಪೀಡಿಸದಿರುವಂಥ ತಾವಿಗೆ ಕೊಂಡು ಹೋಗಬಲ್ಲೆನು. ಕಳೆದ ಮೂರು ತಿಂಗಳಲ್ಲಿ ನಿನ್ನ ಸ್ವಭಾವವನ್ನು ನಾನು ಚೆನ್ನಾಗಿ ಅರಿತಿರುವೆ

ನಾನುದರಿಂದ ನಿನಗೆಷ್ಟು ವಿಧವಾಗಿ ಗೌರವವನ್ನು ಬೋಧಿಸಿದರೂ ವಿವೇಚನೆಗೆ ದಾರಿಕೊಡೆಂದು ಹೇಳಿದರೂ ನಿನ್ನ ಮೇಲೆ ಅದು ಫಲಕಾರಿಯಾಗುವದೆಂಬ ಆಶೆ ನನಗಿಲ್ಲ.

ನಾಫಿಜ್‌ಬೇ—ಗೌರವಕ್ಕೂ ವಿವೇಚನೆಗೂ ನಾನು ಯಾವ ವಿಧನಲ್ಲಿ ಕುಂದನ್ನುಂಟು ಮಾಡಿದ್ದೇನೆ. ಇಂಥ ಸಾಮ್ಯಗಳಲ್ಲಿ ತಾವು ಬಹಳ ಘಟ್ಟಿಗರೆಂಬುದು ನನಗೆ ಗೊತ್ತುಂಟು. ತಮಗೀ ಅಭಿಪ್ರಾಯವುಂಟಾಗಲು, ಅಂಥಹ ಕೆಲಸವನ್ನು ನಾನಾವುದನ್ನು ಮಾಡಿರುವೆನೆಂದು ತಾವು ಹೇಳಿದಾಣವಾದರೆ, ನಾನು ಈಗಲೇ, ನಾನು ನೀತಿಬಾಹಿರನಾಗಿರುವೆನೆಂದು ಹೇಳಿಕೊಳ್ಳಲು ಸಿದ್ಧನಾಗಿರುವೆನು

ಅಥವರ್‌ಬೇ—ನೀನು ಇದನ್ನು ಕೇಳಬೇಕಾದ ಅವಶ್ಯಕವಿರುವದೇನು ? ಈ ಹುಡುಗಿಗೆ ಬಂದಿರುವ ವಿಪತ್ತುಗಳೆಲ್ಲ ನಿನ್ನ ಸ್ವಾರ್ಥಪರತೆಯು ದೆಸೆಯಿಂದಲೇ ಎಂಬುದು ನಿಜವಾಗಿಯೂ ನಿನಗೇ ಕಾಣಿಸುವದಿಲ್ಲವೇ ? ಇಷ್ಟು ದಿನವೂ ಮಾನದಿಂದಲೂ ಸಂತೋಷದಿಂದಲೂ ಇದ್ದಂಥ ಸ್ಥಳದಿಂದ ಆವಳು ಹೊರಟು ಹೋಗಲು ನೀನೇ ಕಾರಣನಾಗಿರುವೆ.

ನಾಫಿಜ್‌ಬೇ—ನನ್ನ ಸ್ವಾರ್ಥತೆಯು ಅವಳನ್ನು ಮೊದಲಿಗಿಂತಲೂ ಹೆಚ್ಚು ಸಂತೋಷದಿಂದ ಜೀವಿಸಿಕೊಂಡು, ಮಾನದಿಂದಲೂ ಇರುವಂಥ ಮತ್ತೊಂದು ಸ್ಥಳದಲ್ಲಿರಿಸಲು ಇಚ್ಛಿಸುತ್ತದೆ. ನಿಮ್ಮ ನಿಸ್ವಾರ್ಥತೆಯು ಇಷ್ಟು ಮಾಡಬಲ್ಲದೆ.

ಅಥವರ್‌ಬೇಯುವರು ರಭಸದಿಂದ ಹಿಂತಿರುಗಿ, ತಮ್ಮನ ಕಡೆ ತೀಕ್ಷ್ಣವಾಗಿ ನೋಡ ಹತ್ತಿದರು. ತಮ್ಮ ಕೋಪವನ್ನು ಯತ್ನಪೂರ್ವಕವಾಗಿ ತಡೆದು, ಹೀಗೆ ಉತ್ತರ ಕೊಟ್ಟರು,

ನಮ್ಮ ತಂದೆಯುವರು ಹಾಜಿರೆಯ ಸಂರಕ್ಷಣೆಯನ್ನು ನನ್ನ ವಶಕೊಪ್ಪಿಸಿರುವರು. ಕೊನೆಯವರೆಗೂ ಅದು ನಾನು ಮಾಡತಕ್ಕ ಕರ್ತವ್ಯವಾಗಿರುವದು. ನಿನ್ನ ಮಡುಕುತನದ ದೆಸೆಯಿಂದಲೇ ತಂದೆಯುವರು ಅವಳನ್ನು ತಮ್ಮ ಆಶ್ರಯಕ್ಕೆಳೆದುಕೊಂಡಿರುವದರಿಂದ, ನಾನು ಅವಳಿಗಾಗಿ ಇಷ್ಟಾದರೂ ಮಾಡಬೇಕೆಂದು ನನಗೆ ತೋರುತ್ತದೆ. ಅವಳೆಲ್ಲಿಗೆ ಹೋದರೂ, ಅಲ್ಲಿ ಸಾಧ್ಯವಾದಷ್ಟು ಆರಾಮದಿಂದಿರಬೇಕೆಂಬ ವಿಷಯವನ್ನು ನಾನು ಗಮನದಲ್ಲಿಟ್ಟುಕೊಳ್ಳುವೆನು. (ಅವಳ ಕಡೆ ತಿರುಗಿ ನಯದಿಂದ) ಹಾಜಿರೇ, ನಿನ್ನ ಮುಖವು ಅತಿ ಬಿಳಿಚಿಕೊಂಡು ಹೋಗಿರುವದು. ನೀನು ಬಹಳ ಆಯಾಸಗೊಂಡಿರುವೆ. ಕುಳಿತುಕೋ. ಈ ವಿಧವಾದ ಕಲಹಗಳನ್ನು

ಕೇಳಲು ನೀನು ಶಕ್ಯಳೇ? (ಕೋಪದಿಂದ ಸಾಫಿಜ್‌ಬೇಯನ್ನು) ನೀನು ಇಲ್ಲಿಂದ ಹೊರಟು ಹೋಗುವದು ಒಳ್ಳೆಯದೆಂದು ನಿನಗೆ ತಿಳಿಯುವದಿಲ್ಲವೇನು ? ದೇವರೇ ಗತಿ, ನಿನ್ನ ಚೇಷ್ಟೆಗಳಿಂದ ಅವಳು ಪ್ರಾಣಬಿಡುವಳೆಂಬುದು ಸಹ ಕಾಣಿಸದಿರುವನು ಸ್ವಾರ್ಥಪರತೆಯು ನಿನ್ನ ತಲೆಯಲ್ಲಿ ತುಂಬಿರುವದೇನು ? ನಿನ್ನಲ್ಲಿ, ವಿವೇಚನೆಯಾಗಲೀ, ಗೌರವವಾಗಲೀ ಇಲ್ಲವೆಂದು, ಏಕೆ ನಾನು ಹೇಳಿದೆನೆಂದು, ಈಗ ತಾನೆ ನೀನು ನನ್ನನ್ನು ಕೇಳಿದೆ ಅವಳ ಮಿದುಳಿಗೇರಿರುವ ತಾಪದಿಂದ ಅವಳ ದೇಹಸ್ಥಿತಿಯು ಕೆಟ್ಟು ಹೋಗುವದೆಂಬುದನ್ನು ತಿಳಿದೂ, ಜಬರದಸ್ತಿನಿಂದ ಬಂದು ಅವಳ ಮುಂದೆ ಅಡ್ಡಾಡದೆ ನೀನು ನಿಂತಿರುವದು, ಗೌರವವೂ ವಿವೇಚನೆಯೂ ಹೌದೇ ಎಂಬುದನ್ನು ನೀನೇ ಹೇಳು.

ಸಾಫಿಜ್‌ಬೇ—(ಅಷ್ಟೇ ತೀವ್ರತೆಯಿಂದ) ಅವಳು ಖಾಯಿಲೆ ಬಿದ್ದರೆ ಅದಕ್ಕೆ ಕಾರಣರು ತಾವಾಗುವದಿಲ್ಲವೋ ? ಅವಳಿಗೆ ನನ್ನ ಮೇಲೆ ಪ್ರೀತಿಯಿರುವದು—ಆದರೆ, ನಿಮ್ಮ ಉಪದೇಶ ಸಲಹೆಗಳಿಂದ, ಅವಳು ಈ ಪ್ರಣಯವಿಹ್ವಲತೆಯನ್ನು ದಮನ ಮಾಡಲು ಆಶಿಸುತ್ತಾಳಾದ್ದರಿಂದ, ಅವಳ ಆರೋಗ್ಯವು ಕೆಟ್ಟು ಹೋದರೆ ಅದು ಈ ಪ್ರಯತ್ನದಿಂದಲೇ. ನೀವವಳಿಗೆ, ಅವಳ ಪ್ರೇಮವನ್ನು ಕುತ್ತಿಗೆ ಹಿಸುಕಿ ನಮ್ಮ ತಂದೆಯು ಕೆಲಸಕ್ಕೆಬಾರದೊಂದಾಶೆಯನ್ನು ಪೂರ್ತಿಗೊಳಿಸಲು, ಅವಳ ಆಶೆಗಳನ್ನೆಲ್ಲ ಕೊಂದುಹಾಕಲು ಹೇಳುವಿರಿ—ಮತ್ತೆ—ಅವಳ ಶಕ್ತಿಯು ಈ ಸಂಘರ್ಷದಲ್ಲಿ ಉತ್ತರ ಹೇಳುವದಾಗಿದೆಯೆಂದು ಆಶ್ಚರ್ಯಪಡುತ್ತೀರಿ. ನೀವು ನನ್ನನ್ನು ಸ್ವಾರ್ಥಪರಾಯಣನೆಂದು ಕರೆಯುತ್ತೀರಿ—ನೀವವಳಿಗೆ, ನನ್ನನ್ನು ಮದುವೆಯಾಗಲೊಪ್ಪಿದರೆ ಅದು ಬಹಳ ಅನುಚಿತವೆಂದು ಮೊದಲು ಸಲಹೆಯನ್ನಿತ್ತಾಗ ನಿಮ್ಮ ಮನಸ್ಸಿನಲ್ಲಿ ಯಾವ ವಿಧವಾದ ಸ್ವಾರ್ಥಪರತೆಯೂ ಇರಲಿಲ್ಲವೆಂದು ಪ್ರಮಾಣವಾಗಿ ಹೇಳಬಲ್ಲಿರಾ ?

ನಾನು ಭಯಚಕಿತಳಾಗಿ ಕಣ್ಣೆತ್ತಿ ನೋಡಿದೆನು. ಅಥವರ್‌ಬೇಯವರು ಪೈಯ್ಯೊಳಗಾಗಿ ರಕ್ತವಿಲ್ಲದಂತೆ ಬಿಳಿಚಿಕೊಂಡು ಹೋಗಿದ್ದರು. ಅವರು ನನ್ನೆದುರಿಗೆ ಸರಿಯಾಗಿದ್ದುದರಿಂದ ಯಾವುದೋ ಒಂದು ಗೂಢವಾದ ಮನೋವೃತ್ತಿಯೊಡನೆ ಹೋರಾಡುತ್ತಿದ್ದರೆಂಬುದನ್ನು ಕಂಡೆನು. ಅವರು ಅಧೋದೃಷ್ಟಿಯುಳ್ಳವರಾಗಿದ್ದುದರಿಂದ ಅವರ ಕಪ್ಪಾದ ನೀಳನೀಳವಾದ ರೆಪ್ಪೆಗಳು, ಮಾತ್ರ ಕಾಣುತ್ತಿದ್ದವು. ಒಂದು ಘಳಿಗೆಯ ನಂತರ ಅವರು ಮೇಲೆ ನೋಡಲು ಅವರ ಕಣ್ಣುಗಳಿಂದ ಸ್ವದೋಷಾಂಗೀಕಾರವು

ಹೊರ ಸೂಸುತ್ತಿದ್ದುದನ್ನು ಕಂಡು, ನಾನು ಭ್ರಾಂತಿಯುತೆಯಾದೆನು. ನನ್ನ ಪ್ರಜ್ಞೆಯು ಸರಿಯಾಗಿರುವದೋ ಇಲ್ಲವೋ ಎಂಬ ಶಂಕೆಯಾಯಿತು. ಒಂದು ಘಳಿಗೆ ಅವರು ಅನುಮಾನಿಸುತ್ತಿದ್ದು, ಯತ್ನದಿಂದ ಮನಸ್ಸನ್ನು ಅಧೀನಕ್ಕೆ ತಂದುಕೊಂಡು ಹೀಗೆಂದರು.

"ನಿನ್ನ ಅಭಿಪ್ರಾಯವೇನಾಗಿರುವದು ? ಈ ವಿಚಾರದಲ್ಲಿ ನಾನು ಮಾಡಿರುವ ಪ್ರಯತ್ನವೆಲ್ಲ, ಯಾವುದೋ ಒಂದು ಸ್ವಕಾರ್ಯಕ್ಕೆಂದು ನೀನು ಸೂಚಿಸಿರುವದು, ಇದು ಮೂರನೇ ಸಾರಿಯಾಗಿರುವದರಿಂದ, ನಿನ್ನ-ಮಾತಿನ ಅರ್ಥವನ್ನು ಸರಿಯಾಗಿ ತಿಳಿಯಲಪೇಕ್ಷಿಸುತ್ತೇನೆ. ನೀನು ನನ್ನ ಮೇಲೆ ಹೊರಿಸುವ ಅಪರಾಧವೇನೆಂಬುದು, ನನಗೆ ತಿಳಿಯುವಂತೆ ಸ್ಪಷ್ಟವಾಗಿ ಹೇಳು."

ನಾಫಿಜ್‌ಬೇಯು ಹಿಂತೆಗೆದನು. ಅವನ ಸುಶಿಕ್ಷಣವು, ಸಹೋದರನಿಗೆ ಎದುರುಹೇಳಲು ಅಡ್ಡಿಬರುತ್ತಿರುವದನ್ನು, ನಾನು ಸುಲಭವಾಗಿ ತಿಳಿದೆನು. ಆದರೆ ಒಂದು ಘಳಿಗೆಯನಂತರ, ಅವನು ಜವಾಬುಹೇಳಲು ತಯಾರಾಗಿ, ಅತಿ ಸ್ಪಷ್ಟವೂ ಭಾವಗರ್ಭಿತವೂ ಆದ ಶಬ್ದಗಳಿಂದ ಕೂಡಿದೀ ಪ್ರಶ್ನೆಯನ್ನು ಹಾಕಿದನು.

"ನಾನು ಒಂದೇ ವಿಚಾರವನ್ನು ತಿಳಿಯಲಪೇಕ್ಷಿಸುತ್ತೇನೆ-ಒಂದುವೇಳೆ ಹಾಜಿರೆಯ ಸ್ಥಾನದಲ್ಲಿ ಬೂಹಾನರೆಯು ಇದ್ದಿದ್ದರೆ, ಆಗಲೂ ಅಥಮ್‌ಬೇಯವರು ವಿಪತ್ಕಾಲದಲ್ಲಿ ಅವಳಿಗೆ ಇದೇ ರೀತಿ ಸಹಾಯಕರಾಗುತ್ತಿದ್ದರೋ. ಆಗಲೂ ನನ್ನ ಸ್ವಾರ್ಥತೆಯೂ ಅದೂರದರ್ಶತ್ವವೂ, ನಮ್ಮಣ್ಣನವರ ಹೃದಯದಲ್ಲಿ ಇದೇ ಪ್ರಳಯಾಗ್ನಿ ಜ್ವಾಲೆಯನ್ನು ಉದ್ಭವ ಮಾಡುತ್ತಿತ್ತೋ"

ಅನಂತರ ಕೊಠಡಿಯಲ್ಲಿ ಅಧಿಕವಾದ ಮೌನವು ಆವರಿಸಿಕೊಂಡಿತು. ನಾನು ನಾಲ್ಕೂಕಡೆ ದೃಷ್ಟಿಬೀರಿದೆನು. ನಾಫಿಜ್‌ಬೇಯು ಮೇಜಿನೊಂದು ತುದಿಯಕಡೆ ನಿಂತಿದ್ದನು-ಅಥಮ್‌ಬೆಯು ಮತ್ತೊಂದುಕಡೆ. ಇಬ್ಬರ ಮುಖದ ಮೇಲೂ ಸರಿಯಾಗಿ ಬೆಳಕುಬಿದ್ದಿತ್ತು. ತಮ್ಮನ ತುಟಿಗಳ ಮೇಲೆ ಮಂದಸ್ಮಿತಭಾವವಿತ್ತು. ಅವನು ನೆಟ್ಟಗೆ ಅಣ್ಣನಕಡೆ ನೋಡುತ್ತಿದ್ದನು. ಅಥಮ್‌ಬೇಯವರಿಗೆ ಇದು ಗೊತ್ತಾಗದಂತಿರಲಿಲ್ಲ-ಅವರು ನಾಫಿಜ್‌ಬೇಯ ಭುಜದಮೇಲಿಂದ, ಎದುರುಗಡೆಯ ಗೋಡೆಯನ್ನು ನೋಡುತ್ತ ಇದ್ದರು. ಅವರ ಮುಖದಿಂದ, ಅವರಿಗೆ ಅತಿ ಹಿಂಸೆಯಾಗುತ್ತಿದ್ದಂತೆ ಕಂಡಿತು. ತಮ್ಮ ಹತ್ತಿರ ಯಾರಾದರು ಇರುವರೋ ಇಲ್ಲವೋ ಎಂಬುದನ್ನು ಸಹ ಮರೆತಿದ್ದಂತೆ ಕಾಣಿಸುತ್ತಿದ್ದರು. ಅವರು, ತಮ್ಮನ ಪ್ರಶ್ನೆಗೆ ಉತ್ತರವನ್ನೂ ಕೊಡಲಿಲ್ಲ-

ತನ್ನ ಮೇಲೆ ಆರೋಪಿತವಾಗಿದ್ದ ಅಪವಾದವನ್ನು ಅಪಲಪಿಸಲೂ ಇಲ್ಲ. ನಾಫಿಜ್‌ಬೇಯ ಹೃದಯದಲ್ಲಿ ಕರುಣೆ ಹುಟ್ಟಿದಂತಾಗಿ, ಅವನು ತನ್ನ ಪ್ರಶ್ನೆಯನ್ನು ಮರಳಿಹಾಕದೆ, ನನ್ನಕಡೆ ತಿರುಗಿದನು.

ನಾಫಿಜ್‌ಬೇ— ಹಾಜಿರೆ, ನಾನು ಇನ್ನು ಹೊರಡುವೆನು. ನನ್ನ ಜೀವಿತೇಶ್ವರಿ, ನನ್ನ ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಾಳೆ ಬಂದು, ಇದರ ಸರಿಯಾದುತ್ತರವನ್ನು ತೆಗೆದುಕೊಳ್ಳುವೆನು.

ಹೀಗೆಂದು, ಅವನು ಬಾಗಿಲಕಡೆ ಹೊರಡಲು, ಅಧಮ್‌ಬೇಯವರು ಹಿಂದಕ್ಕೆ ಕರೆದರು. ಇಷ್ಟು ಹೊತ್ತಿನ ಒಳಗೆ ಅವರು, ಬುದ್ಧಿಯನ್ನು ಸ್ವಾಧೀನಕ್ಕೆ ತಂದುಕೊಂಡಿದ್ದರು. ಮನಸ್ಸು ಸಮಾಧಾನಕ್ಕೆ ಬಂದಿತ್ತು.

ಅಧಮ್‌ಬೇ— ನನ್ನ ಮೇಲೆ ನೀನು ಹೊರಿಸಿರುವ ಅಪವಾದಕ್ಕೆ ನಾನು ಹೇಳಬೇಕಾಗಿರುವ ಉತ್ತರವನ್ನು, ನೀನು ಖಂಡಿತವಾಗಿ ಕೇಳಬೇಕು. ತಂದೆಯವರ ಇಷ್ಟಕ್ಕೆ ವಿರುದ್ಧವಾಗಿ, ನೀನು ಬೂಹಾವರೆಯನ್ನಾಗಲೀ ಮತ್ತಾರನ್ನೇ ಆಗಲಿ ಮದುವೆಯಾಗಲು ನಿರ್ಧರಿಸಿದ್ದರೆ, ಅವರಿಗೂ ಸಹ ಒಪ್ಪಬೇಡವೆಂದು ಇದೇ ಸಲಹೆಕೊಟ್ಟು, ನನಗೆ ಸರಿಯೆಂದು ತೋರಿದುದನ್ನು ಮಾಡುತ್ತಿದ್ದೆನು. ತಂದೆಯವರು ಅನುಮತಿಕೊಡುವವರೆಗೂ, ನೀನು ಹಾಜಿರೆಯನ್ನು ಮದುವೆಯಾಗಲಾರೆ. ಹಾಗೆ ಮಾಡುವದರಿಂದ, ಮನೆಯಲ್ಲುಂಟಾಗುವ ಉಪದ್ರವವನ್ನು ಪರಿಹರಿಸಲು, ಮುಂದೆ ಯಾವ ಆಶೆಯೂ ಇಲ್ಲದಿರುವದಲ್ಲದೆ, ನಿನ್ನ ಭವಿಷ್ಯದ ಆಕಾಂಕ್ಷೆಗಳೆಲ್ಲ ಮಣ್ಣುಪಾಲಾಗುವದೆಂಬುದನ್ನು ಬಿಡಬೇಕೇನು? ತಂದೆಯವರಿಂದ ಅನುಮತಿಕೊಡಿಸಲು ನಾನು ಮಾಡುವ ಶಿಫಾರಸು ಪ್ರಯೋಜನಕಾರಿಯಾಗುವದಾಗಿದ್ದರೆ,ಅಥವ ಒಂದಲ್ಲ ಒಂದುದಿನ ಅವರೆ ಒಪ್ಪುವರೆಂಬ ಆಶೆ ನನಗಿದ್ದರೆ, ನಾನು ಖಂಡಿತವಾಗಿಯು ಹಾಜಿರೆಗೆ ಧೈರ್ಯಹೇಳಿ ನನ್ನ ಉದ್ದೇಶವನ್ನು ನೆರವೇರಿಸಿಕೊಳ್ಳುತ್ತಿದ್ದೆನು. ಆದರೆ ತಂದೆಯವರ ಸ್ವಭಾವವನ್ನು ನಾನರಿತಿರುವಂತೆಯೇ ನೀನೂ ಸಹ ಅರಿತಿರುವೆ. ಅವರಿಗೆ ಕೋಪ ಬರುವದು ಕಷ್ಟವಾದರೂ, ಅವರ ಮರ್ಜಿಗೆ ವಿರೋಧವಾಗಿ ಯಾವ ಕೆಲಸವಾದರೂ ಮಾಡಲ್ಪಟ್ಟರೆ, ಅವರೆಂದಿಗೂ ಅದನ್ನು ಕ್ಷಮಿಸುವದಿಲ್ಲವೆಂಬುದನ್ನು, ನೀನು ಖಂಡಿತವಾಗಿಯೂ ಒಪ್ಪಿಕೊಳ್ಳುವೆ. ಅವರು, ಒಂದಲ್ಲ ಒಂದುದಿನ ಒಡಂಬಡುವರೆಂಬಾಶೆ ನಿನಗಿರುವದೆಂದು, ಈಗಲಾದರೂ ನೀನು ನಂಬಿಕೆಯಿಂದ ಹೇಳಿದರೆ, ಈ ನಿಮಿಷವೇ ನಿನಗೆ ಸಹಾಯಮಾಡಲು ಸಿದ್ಧನಾಗಿರುವೆನು. ನಾಳೆಯೇ ನಿಮ್ಮ ವಿವಾಹವಾಗಬಹುದು. ನನ್ನ ಮನೋದ್ದೇಶದ ನಿರ್ಮಲತೆಗೆ ಪ್ರಮಾಣವಾಗಿ,

ಇದಕ್ಕಿಂತ ಹೆಚ್ಚಾಗಿ ಏನುತಾನೆ ಹೇಳಬಲ್ಲೆನು.

ನಾಫಿಜ್‌ಬೇಯು ಹರ್ಷೋನ್ಮುಖನಾಗಿ ಅಣ್ಣನಕಡೆ ನೋಡಿದನು.

ನಾಫಿಜ್‌ಬೇ— (ಮುಂದಕ್ಕೆ ಕೈನೀಡಿ) ಅಬೀಯುವರೇ, ನನ್ನ ತಪ್ಪಿಗಾಗಿ ನಾನು ನಿಮ್ಮನ್ನು ಕ್ಷಮಾಪಣೆ ಕೇಳಿಕೊಳ್ಳುತ್ತೇನೆ. ನಿಮ್ಮೊಡನೆ ಈ ರೀತಿ ಮಾತನಾಡಿ, ನಾನು ದೊಡ್ಡ ಅಪರಾಧವನ್ನು ಮಾಡಿದೆನು. ನಿರುದ್ಯೋಗದ ದೆಸೆಯಿಂದಲೂ ಆಶಾಭಂಗದಿಂದಲೂ ನನ್ನ ಮನಸ್ಸು ಕಲ್ಮಷಯುತವಾಗಿ ಹೋಗಿಲ್ಲದಿದ್ದಲ್ಲಿ, ನನ್ನಿಂದ ಎಂದಿಗೂ ಇಂಥ ತಪ್ಪುಮಾಡಲ್ಪಡುತ್ತಿರಲಿಲ್ಲ. ಆದಾಗ್ಯೂ ಈ ವಿಚಾರದಲ್ಲಿ ತಾವು ದೂರವಾಗಿದ್ದುಕೊಂಡು, ನನ್ನನ್ನೂ ತಂದೆಯವರನ್ನೂ ಇದನ್ನು ನಿರ್ವಹಿಸಲು ಬಿಟ್ಟುಬಿಟ್ಟಿದ್ದರೆ, ನಾವಿಬ್ಬರೂ ಒಬ್ಬರಿಗೊಬ್ಬರು ಅಡ್ಡಿ ಬರದೆ, ಸಮಂಜಸವಾಗಿ ಕಂಡುಬಂದ ರೀತಿಯಲ್ಲಿ ಇದನ್ನು ವ್ಯವಸ್ಥೆ ಮಾಡುತ್ತಿದ್ದೆವೆಂಬಾಲೋಚನೆಯು, ನನ್ನ ಮನಸ್ಸಿನಿಂದ ಹೋಗುವದಿಲ್ಲ. ನಿಮ್ಮ ಮಧ್ಯಸ್ಥಿಕೆಯಿಂದ, ನಿಮ್ಮ ವಿಚಾರದಲ್ಲಿ ಈ ವಿಧವಾದ ಸುಳ್ಳುಪ್ರವಾದಗಳು ಹುಟ್ಟುವವಿನಾ, ಬೇರೆ ಮತ್ತಾವ ಪ್ರಯೋಜನವೂ ಇಲ್ಲ. ನೀವು ತಿಳಿದಿರುವಂತೆಯೇ ನಾನು ಸಹ, ತಂದೆಯವರೆಂದಿಗೂ ನನ್ನ ತಪ್ಪನ್ನು ಕ್ಷಮಿಸುವದಿಲ್ಲವೆಂಬುದನ್ನು ತಿಳಿದಿರುವೆನು. ಆದರೆ, ಅವರು ನನ್ನ ಪರವಾಗಿ ಏನೊಂದನ್ನು ಮಾಡಿಲ್ಲವಾದುದರಿಂದ, ಈ ವಿಚಾರದಲ್ಲಿ ನಾನು ಅವರಿಗೆ ವಿಧೇಯತೆಯನ್ನು ತೋರಿಸಿ ಪ್ರತ್ಯುಪಕಾರ ಮಾಡಬೇಕಾದುದು ಅವಶ್ಯಕವಾಗಿಲ್ಲ. ಆದುದರಿಂದ, ತಾವು ಅವರ ಪಕ್ಷವನ್ನೂ ವಹಿಸಬೇಕಾದುದಿಲ್ಲ-ನನ್ನ ಪಕ್ಷವನ್ನೂ ವಹಿಸಬೇಕಾದುದಿಲ್ಲ.

ಅಥಮ್‌ಬೇಯುವರು ಉತ್ತರಕೊಡಲಿಲ್ಲ. ನಾಫಿಜ್‌ಬೇಯು ಕೈನೀಡಿದ್ದುದನ್ನು ನೋಡದಿದ್ದಂತೆ ನಿಂತಿದ್ದರು. ಅವನು ಒಂದು ಕ್ಷಣಕಾದಿದ್ದು, ನೀಡಿದ ಕೈಯನ್ನು ಅಣ್ಣನ ಕೈಗೆ ಸೋಕಿಸದೆಯೇ ತನ್ನ ಸ್ಥಳಕ್ಕೆ ವಾಪಸು ಬಂದುಬಿಟ್ಟನು. ಒಂದು ಘಳಿಗೆ ಎದುರುನೋಡಿ, ಉತ್ತರ ಬಾರದಿರುವದನ್ನು ಕಂಡು, ಹಿಂತಿರುಗಿ ಬಾಗಿಲಕಡೆ ಹೊರಟನು. ಬಾಗಿಲಬಳಿನಿಂತು ಪುನಃ ಅಣ್ಣನಕಡೆ ನೋಡಿದನು.

ನಾಫಿಜ್‌ಬೇ— (ಗರ್ವಿತಭಾವದಿಂದ) ತಾವು ಇದೇಪ್ರಕಾರ ನನ್ನನ್ನು ಎದುರಿಸುತ್ತ ಇದ್ದಲ್ಲಿ, ನಾನು ನಿಮ್ಮನ್ನು ನನ್ನ ವೈರಿಯೆಂದು ಭಾವಿಸಿ, ಕೆಲವು ಸಮಯಗಳಲ್ಲಿ ನಿಮಗೆ ತೋರಿಸಬೇಕಾದ ಮರ್ಯಾದೆಯನ್ನು ತೋರಿಸಲು ಮರೆತರೆ, ಆಶ್ಚರ್ಯಪಡದಿರಿ. ನೀವು ನನ್ನನ್ನು, ನನ್ನ ಕಾರ್ಯದಲ್ಲಿ ತಡೆಯುವದು ಸಾಧ್ಯವಿಲ್ಲವೆಂಬುದನ್ನು ತಿಳಿದುಕೊಳ್ಳುವದು ಉತ್ತಮವು.

ಹೀಗೆಂದು ಹೇಳಿ ಅವನು ಹೊರಟುಹೋದನು. ನಾನು ಮುಖವನ್ನು ಕೈಗಳಿಂದ ಮುಚ್ಚಿಕೊಂಡೆನು. ನಾನು ಆಗ ಒಂಟಿಯಾಗಿರಲು ಮನಸಾ ಇಚ್ಛಿಸುತ್ತಿದ್ದೆನು. ಆದರೆ ಅಥರ್ವ್ ಬೇಗೆ ಹೋಗುವ ಇರಾದೆಯಿದ್ದಂತೆ ಕಾಣಿಸಲಿಲ್ಲ. ಅವರು ಕಿಟಕಿಯ ಹತ್ತಿರ ಹೋಗಿ, ಸಮುದ್ರವನ್ನು ನೋಡುತ್ತ, ನಾಫಿಜ್‌ಬೇಯು ಹೊರಟು ಹೋದುದು ನಿಶ್ಚಯವಾದನಂತರ, ನನ್ನೊಡನೆ ಮಾತನಾಡಲಪೇಕ್ಷೆಯುಳ್ಳವರಂತಿದ್ದರು. ಸ್ವಲ್ಪ ಹೊತ್ತಾದ ನಂತರ ಅವರು ಹಿಂತಿರುಗಿ ನನ್ನ ಹತ್ತಿರಬಂದರು.

ಅಥರ್ವ್ ಬೇ — (ಅವರ ಮುಖವು ಬಿಳಿಚಿಕೊಂಡು ಹೋಗುತ್ತಾ, ದೇಹನೊಂದೊಂದು ನರವೂ ಕಂಪಿಸುತ್ತಿದ್ದುದರಿಂದ, ಧ್ವನಿಯನ್ನು ಸ್ವಾಧೀನಕ್ಕೆ ತರಲು ಯತ್ನಿಸುತ್ತಾ) ಹಾಜಿರೇ, ಇನ್ನು ಇದಕ್ಕಿಂತ ಹೆಚ್ಚಾದ ಕಷ್ಟವನ್ನು ಅನುಭವಿಸಲು ನಿನಗೆ ಶಕ್ತಿಯಿಲ್ಲ. ಆದರೆ, ಅದೃಷ್ಟವಶದಿಂದ, ಇನ್ನು ಮತ್ತೆ ಇಂಥ ಅವಕಾಶ ಬರದಿರಬೇಕು. ನಮ್ಮ ತಾಯಿಯವರು ನಿನಗೆ, ಸುನಿಯಳ ಬಳಿಗೆ ಹೋಗಲು ಅನುಮತಿ ಕೊಟ್ಟಿರುವರೆಂಬುವನ್ನು ಹೇಳಲುಬಂದಿರುವೆನು. ನಾಳೆ, ಆಕಡೆ ಒಂದು ಜಹಜು ಹೊರಡುವದಾಗಿರುವದರಿಂದ, ನೀನು ನಾಳೆಯೇ ಹೊರಡುವದು ಉತ್ತಮವೆಂದು ತಂದೆಯವರು ಅಭಿಪ್ರಾಯ ಪಡುತ್ತಾರೆ. ಅಷ್ಟರಲ್ಲಿ ಸಿದ್ಧಳಾಗಬಲ್ಲೆಯಾ ?

ನಾನು— ಸುಲಭವಾಗಿ. ನಾನು ಇನ್ನೂ ನನ್ನ ಪೆಟ್ಟಿಗೆಗಳನ್ನು ತೆಗೆದು ಸಹ ಇಲ್ಲ. ನಾಳೆ ಪ್ರಾತಃಕಾಲ ತಾನೆ ?

ಅಥರ್ವ್ ಬೇ— ಹೌದು. ನಾನು ಡಾಕ್ಟರನ್ನು ಕರೆದು, ನೀನು ಯಾವಾಗ ಹೇಗೆ ಹೋಗುವಿಯೆಂಬುದನ್ನು ತಿಳಿಸುವೆನು.

ನಾನು ಮೆಲ್ಲನೆ ಎದ್ದುನಿಂತು ಬಾಗಿಲಕಡೆ ಹೊರಟೆನು. ಅವರು ಪುನಃ ಮಾತನಾಡದಿದ್ದುದರಿಂದ ನಾನೇನನ್ನೂ ಹೇಳದೆ, ಅಲ್ಲಿಂದ ಹೊರಟು ನನ್ನ ಕೊಠಡಿಗೆ ಬಂದು, ಬಾಗಿಲಿಗೆ ಬೀಗವನ್ನು ಹಾಕಿ ಮಂಚದ ಮೇಲೆ ಹೋಗಿ ಬಿದ್ದುಕೊಂಡೆನು.

ಹತ್ತನೆಯ ಪರಿಚ್ಛೇದ

ಮಾರನೆಯದಿನ, ಮಲಗಿದ್ದೇಳಲು, ತಲೆಯು ನೋವಿನಾಧಿಕ್ಯದಿಂದ ಚೂರುಚೂರಾಗಿ ಹೋಗುತ್ತಿತ್ತು. ಮುಂದಿನ ಸುಖದುಃಖವ್ಯಾವುದರ ಚಿಂತೆಯೂ ನನಗಿಲ್ಲದಿದ್ದುದರಿಂದ, ನನ್ನ ನೂತನ ಸ್ನೇಹಿತೆಯಾದ ಸುಫಿಯಳು

ನನ್ನನ್ನು ಬೀಳ್ಕೊಡಲು ಕಂಬನಿಸುರಿಸುತ್ತಾ. ಸಲಾವು ಹೇಳುತ್ತಿರುವದನ್ನು ನಾನು ನಿರ್ಲಕ್ಷ್ಯದಿಂದ ನೋಡುತ್ತಾ, ಕೇಳಿಕೊಂಡಿದ್ದೆನು. ಮಧ್ಯಾಹ್ನಕ್ಕೆ ಮೊದಲೇ ನಸಿರುಲ್ಲಾ ಪಾಷಾರವರ ಗುಲಾಮನಾದಸಲೀಮುಆಗನು ನನ್ನನ್ನು ಕರೆದುಕೊಂಡು ಹೋಗಲು ಬಂದು, ನನ್ನ ರಕ್ಷಣೆಗಾಗಿ ಸನಿಯಾಖಾನವು ರವರ ಮನೆಯುವರೆಗೂ ನನ್ನೊಡನೆ ಬರುವೆನೆಂದು ಹೇಳಿದನು. ಅಥವರ್ ಬೇಯುವರು ಸಹ, ಘಟ್ಟದ ಬಳಿ ನನಗಾಗಿ ಬಂದು ಕಾದಿದ್ದರು. ಅವರ ಕೈ ಯನ್ನೇ ಹಿಡಿದುಕೊಂಡು ನಾನು ಮೆಟ್ಟಲನ್ನು ಹತ್ತಿ ಹಡಗನ್ನು ಸೇರಿದೆನು. ಅಥವರ್‌ಬೇ— ಬಾವಾ್ಮ, (ಹೀಗೆಂದು ನನ್ನ ತೋಳನ್ನು ತಮ್ಮ ತೋಳಿನ ಮೇಲೆ ಹಾಕಿಕೊಂಡು ಹಡಗಿನ ಒಂದು ಕೊಠಡಿಯೊಳಕ್ಕೆ ನನ್ನನ್ನು ಕರೆದು ಕೊಂಡುಹೋಗಿ ಕೌಚಿನಮೇಲೆ ಕುಳ್ಳಿರಿಸಿವರು) ನಾಳೆ ಸಾಯಂಕಾಲದ ಒಳಗೇ ನೀನು ಮದೀನವನ್ನು ತಲಪಿರುವೆ. ಆದರಲ್ಲಿಂದ ನೀನೊಬ್ಬಳೇ ಹೋಗುವದು ನನಗಿಷ್ಟವಿಲ್ಲವಾದುದರಿಂದ, ಒಂದೆರಡು ದಿನಗಳು ಖಾಲಿಫಳಿ ಗಾಗಿ ಅಲ್ಲಿ ಕಾದಿರಬೇಕಾಗಬಹುದು. ನಾನು ಸುನಿಯಳಿಗೆ ಕಾಗದ ಬರೆದು ಎರಡು ದಿನಗಳಾದವು. ಆದರೆ, ನಿನ್ನ ಜತೆಗಾಗಿ ಜನರನ್ನು ಕಳುಹಿಸಲು, ಅವಳಿಗೆ ಸಮಯಸಿಕ್ಕುವದೆಂಬ ನಂಬಿಕೆ ನನಗೆ ಇಲ್ಲ. ಸಧ್ಯಕ್ಕೆ, ನೀನು ಹೊರಟಿರುವೆಯೆಂಬಿಷ್ಟುಮಾತ್ರ, ಅವಳಿಗೆ ಗೊತ್ತು. ಆಯುಕ್ತವೂ ವಕ್ರವೂ ಆದ ಪ್ರಶ್ನೆಗಳಿಂದ ನೀನು ತಪ್ಪಿಸಿಕೊಳ್ಳುವಂತೆ, ನಾನೆಲ್ಲ ಸಮಾ ಚಾರವನ್ನೂ ವಿವರಿಸಿ ಬರೆದಿರುವೆನು. (ಅವರು ಮಾತನ್ನು ನಿಲ್ಲಿಸಿದುದರಿಂದ ನಾನು ವಂದನೆ ಹೇಳತೊಡಗಲು, ತಕ್ಷಣವೇ ಮತ್ತೆ ಮಾತನ್ನಾರಂಭಿಸಿದರು) ತಂದೆಯುವರು ನಿನಗೆ ತಮ್ಮ ವಿಶ್ವಾಸವನ್ನು ತಿಳಿಯ ಹೇಳಿರುವರು. ಅವರೇ ಬರುತ್ತಿದ್ದರು, ಆದರೆ ಅವರ ಆಗಮನವು ಗೋಪ್ಯವಾಗಿರುತ್ತಿರಲಿಲ್ಲವಾದುದ ರಿಂದ, ನಾಫಿಜ್‌ನಿಗೆ ನಿನ್ನ ಪತ್ತೆಯು ಹತ್ತುವದೆಂದು ನಿಂತುಬಿಟ್ಟರು. (ನನಗೆ ಒಂದು ಪಾಕೆಟಬುಕ್ಕನ್ನು ಕೊಟ್ಟು) ಅವರು ನಿನಗೀ ಪುಸ್ತಕವನ್ನು ಕೊಟ್ಟಿರುವರು. ಇದರಲ್ಲಿ ಮೂರು ಪೌಂಡುಗಳಿರುತ್ತವೆ. ಆದರೆ ನಿನ್ನ ಹಣವಿದಲ್ಲ. ಆ ಹಣವನ್ನು, ನಿನಗೆ ಅವಶ್ಯಕತೆಯುಂಟಾಗುವ ತನಕ, ತಮ್ಮ ಹತ್ತಿರವೇ ಇಟ್ಟುಕೊಂಡಿರುವರು. ತಾಯಿಯುವರೂ ಈ ಚೀಲವನ್ನು ನಿನಗೆ ಕೊಟ್ಟಿದ್ದಾರೆ. ಇವರಲ್ಲಿ ನಿಮ್ಮ ಅಜ್ಜಿಯ ಒಡವೆಗಳಿರುತ್ತವೆ. ಇದ ರೊಡನೆ ಅವರು ನಿನಗೇನು ಮಾತನ್ನೂ ಹೇಳಿಕಳುಹಿಸದಿರುವದು, ನನಗೆ ವ್ಯಸನವನ್ನುಂಟು ಮಾಡುತ್ತದೆ.

ಇಷ್ಟು ಹೇಳಿ ಅವರು ಸುಮ್ಮನಾಗಿ ಹೋದರು. ನಾನವರ ಕಡೆ ಆಶ್ಚರ್ಯದಿಂದ ನೋಡಹತ್ತಿದೆನು. ಸಾಧಾರಣವಾಗಿ, ಅವರು ಯಾವಾಗ್ಲೂ

ಧಾನವಾಗಿಯೂ ಸ್ಫುಟವಾದ ಸ್ವರದಿಂದಲೂ ಮಾತನಾಡುತ್ತಿದ್ದರು.
ದರಿವತ್ತು, ಅವರ ಕಂಠವು ವಷ್ಪವಾಗಿದ್ದು, ಇಷ್ಟು ಮಾತನ್ನೂ ಬಹು
ೀಗದಿಂದ ಆಡಿದರು. ಅವೂಅಲ್ಲದೆ, ಅವರು ಬಹು ಬಡವಾಗಿ ಕಾಣಸುತ್ತಾ
ಣ್ಣುಗಳ ಕೆಳಗೆ ದೊಡ್ಡದೊಡ್ಡ ಕಪ್ಪುಗೆರೆಗಳು ಬಿದ್ದಿದ್ದುದನ್ನು ನೋಡಿದರೆ,
ಹಿನ ರಾತ್ರಿ ಅವರು ನಿದ್ರಿಸಿಯೇ ಇಲ್ಲದಿದ್ದಂತೆ ತಿಳಿಯಿತು.
ಥವಮ್‌ಬೇ— (ಥಟ್ಟನೆ) ಇಗೋ ನಾನಿನ್ನು ಹೊರಡುವೆನು. ದೇವರು
ನ್ನನ್ನು ಸಂರಕ್ಷಿಸಲಿ. ನಿನ್ನ ವಿಚಾರ ಜಾಗರೂಕಳಾಗಿರಬೇಕು.

ನಾನು ಮರ್ಯಾದಪೂರ್ವಕವಾಗಿ ಅವರ ಕೈಗೆ ಮುದ್ದಿಟ್ಟೆನು.
ದರೆ ಮನಸ್ಸಿನೊಳಗೇ, ಅವರು ನನಗೆ ತೋರಿಸಬೇಕಾದಷ್ಟು ಆದರವನ್ನು
ೋರಿಸಲಿಲ್ಲವೆಂದಂದು ಕೊಂಡೆನು. ನನಗೆ ಆಗ, ಇದ್ದಕ್ಕಿದ್ದಹಾಗೆ
ಾಫೆಜ್‌ಬೇಯ ಸ್ಮರಣೆಯು ಬಂದು, ಒಡನೆಯೇ ನನ್ನ ಅನಾಥತೆಯನ್ನು
ನುಭವ ಮಾಡಿದೆನು. ಆದರೆ ಇದು ಬಹು ಸೂಕ್ಷ್ಮವಿಚಾರವಾಗಿದ್ದುದರಿಂದ.
ದನ್ನು ಕುರಿತು ದೀರ್ಘಾಲೋಚನೆ ಮಾಡಲು, ನನ್ನ ಧೈರ್ಯವು ಅದನ್
ೀಯುವರ ಎದುರಿಸಲ್ಲೇ ಕುಸಿದುಹೋಯಿತು. ಆದಕಾರಣ ಯತ್ನಪೂರ್ವ
ವಾಗಿ ನನ್ನಾಲೋಚನೆಗಳನ್ನು ಆಕಡೆಯಿಂದ ತಿರುಗಿಸಿ, ಕಣ್ಣೆದುರಿಗಿರುವ
ಚಾರಗಳ ಮೇಲೆ ಲಕ್ಷ್ಯವಿಟ್ಟೆನು. ಅಥವಮ್‌ಬೇಯುವರು ಮೌನದಿಂದ
ಮ್ಮ ಕೈಗೆ ಮುದ್ದಿಸಿಕೊಂಡರು. ಅವರ ಕೈ ಮಂಜಿನಂತೆ ಕೊರೆಯು
ತ್ತು. ಕೂಡಲೆ ಅವರು ಬಾಗಿಲಕಡೆ ಹೊರಟು, ಮತ್ತೆ ಥಟ್ಟನೆ ಹಿಂತಿರುಗಿ
ನ್ನೆರಡು ಕೈಗಳನ್ನೂ ತಮ್ಮ ಕೈಲಿ ಹಿಡಿದುಕೊಂಡು, ವಿಹ್ವಲಚಿತ್ತರಾಗಿ,
ಪ್ಪಿತಸ್ಥರಂತೆ ನನ್ನ ಕಡೆ ನೋಡಹತ್ತಿದರು. ಇಷ್ಟು ದೃಢಮನಸ್ಕರಾದ
ುರುಷರನ್ನು ಈ ಸ್ಥಿತಿಯಲ್ಲಿ ನೋಡುವದು ನನ್ನ ಮನಸ್ಸಿಗೆ ಏನೋ ಒಂದು
ಥವಾಗಿತ್ತು.
ಥವಮ್‌ಬೇ— (ಮೆಲ್ಲನೆ) ಹಾಜಿರೇ-ಏನು-ನಾನು ಮಾಡಿರುವದೆಲ್ಲ ನಿನ್ನ
ೀಮಕ್ಕಾಗಿಯೇ ಎಂಬುದರಲ್ಲೂ, ಸಾಧ್ಯವಾಗುವಹಾಗಿದ್ದರೆ ನಾನೇ ಎಲ್ಲರ
ಂತಲೂ ಮೊದಲು ನಿನ್ನನ್ನು ನಾಫೆಜ್‌ನಿಗೆ ಕೊಟ್ಟು ಮದುವೆಮಾಡಿ
ಡುತ್ತಿದ್ದೆನೆಂಬುದರಲ್ಲೂ, ನಿನಗೆ ನಂಬಿಕೆಯಿದೆಯೋ ಇಲ್ಲವೋ ?
ಾನು ಮಾಡಿರುವದರ ವಿನಾ, ಬೇರೆ ಮಾರ್ಗವಿರಲಿಲ್ಲವೆಂಬುದದಲ್ಲಿ ನಿನಗೆ
ಂದೇಹ ಉಂಟೇನು ?
ಾನು—(ನಯವಾಗಿ) ನೀವು ಮಾಡಿರುವದೆಲ್ಲ ನನ್ನ ಒಳ್ಳೆಯದಕ್ಕಾಗಿಯೇ
ಂಬುದರಲ್ಲಿ ನನಗೆ ನಂಬಿಕೆಯಿರುವದು. ಅಥವಮ್‌ಬೇಯುವರೇ, ತಾವು
ಾವಾಗ್ಗೂ ನನ್ನನ್ನು ಬಹು ಕರುಣೆಯಿಂದ ಕಂಡಿರುವಿರಿ. ನಾನು

ಉಪಕಾರವನ್ನು ಮರೆಯುವಂಥವಳಲ್ಲ. ಆಪತ್ಕಾಲದಲ್ಲಿ ತಾವು ನನಗೆ ಕನಿಕರವನ್ನೂ ಸಂತಾಪವನ್ನೂ ತೋರಿ, ಸಹಾಯಕರಾಗಿದ್ದೀರಿ. ತಮ್ಮನ್ನು ನಾನು ಎಂದೆಂದಿಗೂ ನನ್ನ ಪರಮಸಹಕಾರಿಗಳೆಂದೂ ಮಿತ್ರರೆಂದೂ ಭಾವಿಸುವೆನು.

ನಾನು ಹೀಗೆ ಹೇಳುತ್ತಿರುವಾಗ, ಅವರ ಮುಖದಲ್ಲಿನ ವ್ಯಾಕುಲತೆಯ ಚಿಹ್ನೆಗಳು ಕೊಂಚ ಕಡಿಮೆಯಾಗುತ್ತ ಬಂದವು. ನಾನು ಮಾತು ನಿಲ್ಲಿಸಿದ ಮೇಲೆ, ಅವರು ಬೊಗ್ಗಿ ನನ್ನ ಹಣೆಗೆ ಮುದ್ದಿಟ್ಟರು.

ಅಫಮ್‌ಬೇ— ಹಾಜಿರೇ, ನಿನಗೆ ಕೃತಜ್ಞನಾಗಿದ್ದೇನೆ. ನಿನ್ನೀ ಮಾತಿನಿಂದ ನನಗೆ ಬಹಳ ಸಂತೋಷವಾಯಿತು.

ಇಷ್ಟು ಮಾತ್ರ ಹೇಳಿ ಅವರು ಹಿಂತಿರುಗಿ, ಶೀಘ್ರವಾಗಿ ಕೊಠಡಿಯಿಂದ ಹೊರಗೆ ಹೊರಟು ಹೋದರು.

ಹನ್ನೊಂದನೆಯ ಪರಿಚ್ಛೇದ

ಕಟ್ಟಕಡೆಗೆ ನನಗೆ ಒಬ್ಬಳೇ ಇರಲು ಈಗ ಅವಕಾಶ ಸಿಕ್ಕಿತು. ಒಂದು ಘಂಟೆಯ ಕೆಳಗಿದ್ದ ಓಡ್ಯಾಟ, ಅವಸರ ಗದ್ದಲ ಗಲಾಟೆ ಇವುಗಳಿಂದ, ಇಷ್ಟು ದೂರವೂ ಪ್ರಯಾಸಕರವೂ ಆದ ಸಮುದ್ರ ಪ್ರಯಾಣಾನಂತರ ಉಳಿದಿದ್ದ ಅಲ್ಪಸ್ವಲ್ಪ ಶಕ್ತಿಸ್ಫೂರ್ತಿ ಎಲ್ಲವೂ ನಾಶವಾಗಿಯೇ ಹೋಗುವದರಲ್ಲಿತ್ತು. ನಾವು ಸುನಿಯಾಖಾನಮಳ ಊರಿಗೆ ಬಂದುಸೇರಿದ್ದೆವು. ಆಗ ನಾನು ಅಲ್ಲಿಯ ಒಂದು ಛತ್ರದಲ್ಲಿ ಕೌಚಿನಮೇಲೆ ವಿಶ್ರಮಿಸಿಕೊಳ್ಳುತ್ತಿದ್ದೆನು. ಆದರೆ ಹದಿ ನೈದು ದಿವಸಗಳಿಂದಲೂ ಹೇಸರಕತ್ತೆಯ ಬೆನ್ನಿನಮೇಲೆ ಕುಳಿತುತಿನ್ನುತ್ತಿದ್ದ ಪೆಟ್ಟು, ಇನ್ನೂ ತಗುಲುತ್ತಿದ್ದಂತೆ ಕಾಣಿಸುತ್ತಿತ್ತು. ದಾರಿಯಲ್ಲಿ ಅನೇಕ ವಿಘ್ನಗಳೂ ಸಣ್ಣ ಸಣ್ಣ ವಿಪತ್ತುಗಳೂ ಆದನಂತರ, ನಾವು ಸೇರಬೇಕೆಂದಿದ್ದ ಊರು ಇವತ್ತಿನ್ನೂ ಗೋಚರವಾಯಿತು. ಸುನಿಯಾಖಾನಮಳ ಪತಿಯಾದ ಇಜ್ಜತ್‌ಪಾಷಾರವರು ಇಲ್ಲಿಯ ಗೌರ್ನರ್ ಆಗಿದ್ದರು. ಸಲೀಮಳಗನು ನಮ್ಮ ರಹದಾರಿಯಪತ್ರಗಳನ್ನು ಅವರ ಬಳಿಗೆ ತೆಗೆದುಕೊಂಡು ಹೋಗಿದ್ದು ದರಿಂದ, ನಾನು ಅವನನ್ನೇ ಎದುರು ನೋಡುತ್ತ ಆರಾಮದಿಂದ ಕುಳಿತಿದ್ದೆನು. ನಾನು ಬಹು ದುರ್ಬಲಳಾಗಿದ್ದುದರಿಂದ, ನನ್ನ ನೂತನ ಪರಿಪಾಲಕರ ಮುಂದೆ, ನಾನಾಗ ಉಟ್ಟಿದ್ದ ಜೀರ್ಣಮಲಿನ ವಸ್ತ್ರಗಳಲ್ಲಿ ಹೇಗೆತಾನೆ ಹೋಗ ಬಲ್ಲೆನೆಂಬು ಸಹ ಯೋಚಿಸಲಾಗಲಿಲ್ಲ.

ರಹದಾರಿಪತ್ರ= Pass Port

ಹೇಸರಕತ್ತೆಯು ಸವಾರಿಯು ವಿಚಾರವಾಗಿ ನನಗಿಷ್ಟು ಮಾತ್ರ ಜ್ಞಾಪಕ ವಿರುವದು-ಏನೆಂದರೆ, ಅವರ ಹಿಂಸೆಯಿಂದ ತಪ್ಪಿಸಿಕೊಳ್ಳಲು ಕೆಳ ಗಿಳಿದು, ರಸ್ತೆಯ ಪಕ್ಕದಲ್ಲಿ ಮಲಗಿದ್ದು, ಮೃತ್ಯುದೇವತೆಯು ನನ್ನನ್ನು ಸಮಸ್ತಮಾನಸಿಕ ಶಾರೀರಕ ಕಷ್ಟಗಳಿಂದಲೂ ಬಿಡುಗಡೆ ಮಾಡುವವರೆಗೂ ಅಲ್ಲೇ ಸುಮ್ಮನೆ ಬಿದ್ದುಕೊಂಡಿರೋಣನೆಂದು ನಾನು ಮಾಡಿದ ಉನ್ಮತ್ತಾ ಲೋಚನೆಯನ್ನು ಬಹು ಶ್ರಮದಿಂದ ತಡೆದೆನು ಎಂದು. ವಾಸ್ತವಿಕವಾಗಿಯೂ ನಾನು ಬಹಳ ಅಸ್ವಸ್ಥಳಾಗಿದ್ದೆನು. ನನ್ನ ಶ್ರಮಸಹಿಷ್ಣುತೆಯು ಸಂಪೂರ್ಣ ವಾಗಿ ಕುಂದಿಹೋಗುವವರೊಳಗೇ ಇಜ್ಜತ್‌ಪಾಷಾರವರ ನೆರಳಿನಾಶ್ರಯವನ್ನು ಸೇರುವದರ ಆಧಾರದಮೇಲೆ ನನ್ನ ಜೀವದಾಶೆಯು ನಿಂತಿರುವದೆಂದು ನಾನು ತಿಳಿದಿದ್ದೆನು. ಇಂಥಾ ಅವಸ್ಥೆಯಲ್ಲಿ ಮಲಗಿಕೊಂಡು, ಮನಸ್ಸಿನಲ್ಲಿ, ನಿಜ ವಾಗಿಯೂ ನನ್ನ ಮರಣವು ಸಮೀಪಿಸಿರುವದೇ ಎಂದೂ, ಎಲ್ಲ ವಿಚಾರ ಗಳನ್ನೂ ಪರಿಶೀಲಿಸಿ ನೋಡಿದಲ್ಲಿ ಸಮಸ್ತ ಕಷ್ಟಗಳಿಂದಲೂ ಬಿಡುಗಡೆ ಹೊಂದಲು ಆಗ ಸಾಯುವದೇ ಉತ್ತಮಮಾರ್ಗವಾಗಿರುವದಲ್ಲವೇ ಎಂದೂ, ಪ್ರಶ್ನಿಸಿಕೊಂಡೆನು. ಇದಕ್ಕೆ ಉತ್ತರವನ್ನು ಇನ್ನೂ ಯೋಚಿಸುವದರಲ್ಲೇ ಬಾಗಿಲು ತೆರೆಯಲ್ಪಟ್ಟು, ಸಲೀಮ್‌ಆಗನು ಒಳಗೆ ಬಂದನು. ನಾನು ಕಣ್ಣೆತ್ತಿನೋಡಲು, ಅವನು ಅಪೂರ್ವವಾದ ಸಂತೋಷದಿಂದಕೂಡಿ, ಶೂನ್ಯ ವಾದಾ ಕೊಠಡಿಯನ್ನು ನೋಡುತ್ತಾ ಇದ್ದನು. ಅದರ ರೀತಿಯಾದರೋ: ಅದನ್ನು ನೋಡಿ ಯಾರೂ ಆನಂದಿಸುವಂತಿರಲಿಲ್ಲ-ಗೋಡೆಗಳು ಎಲ್ಲಕಡೆ ಯಲ್ಲೂ ಬಿರಿದು, ಬಣ್ಣಹೋಗಿ, ಮಲಿನವಾಗಿದ್ದವು.

ಸಲೀಮ್‌ಆಗಾ — (ಸಂತೋಷದಿಂದ) ಪಾಷಾಸಾಹೇಬರನ್ನು ಕಂಡು ಬಂದೆನು. ನನ್ನನ್ನು ಬಹು ಕರುಣೆಯಿಂದ ಮಾತನಾಡಿಸಿದರು. (ಭಂಗಾರದ ಗಡಿಯಾರವನ್ನೂ ಸರಪಣಿಯನ್ನೂ ತೋರಿಸುತ್ತಾ) ನಿಮ್ಮನ್ನು ಸಂರಕ್ಷಿತ ವಾಗಿ ಕರೆತಂದುದಕ್ಕೆ ಪ್ರತ್ಯುಪಕಾರವಾಗಿ ಈ ರೀತಿ ನನ್ನನ್ನು ಬಹುಮಾನಿ ಸಿದರು. ನಿಮ್ಮನ್ನು ಕರೆದು ಕೊಂಡು ಹೋಗಲು, ಅವರ ಗಾಡಿಯು, ಬಾಗಿಲಬಳಿ ಕಾದಿರುವದು ಸಾಮಾನುಗಳನ್ನು ತೆಗೆದುಕೊಂಡು ಹೋಗಲು ಆಮೇಲೆ ಎತ್ತಿನಬಂಡಿಯು ಬರುವದು. ಇನ್ನು ಹೊರಡಿರಿ.

ನಾನು ಎದ್ದು ನಿಂತು ಮೆಟ್ಟಲನ್ನಿಳಿದು ಕೆಳಗೆ ಹೋದೆನು ಗಾಡಿಯು ಹೊರಗೆ ನಿಂತಿತ್ತು. ಚಿಕ್ಕಚಿಕ್ಕ, ಕನ್ಮಲವಾದ ಮಕ್ಕಳು, ಆಶ್ಚರ್ಯದಿಂದ ಅದನ್ನು ನೋಡುತ್ತ ನಿಂತಿದ್ದವು. ಅದರ ಉತ್ಕೃಷ್ಟಾಶ್ವಗಳು, ನಿಲ್ಲಲಾರದೆ ಆತುರದಿಂದ ನೆಲವನ್ನು ಕಾಲಿನಿಂದ ಬಡಿಯುತ್ತಿದ್ದವು.

ನಾನು ಮೌನದಿಂದ ಗಾಡಿಯೊಳಗೆ ಕುಳಿತುಕೊಂಡೆನು. ಸಲೀಮ್

ಆಗನು ಮುಂದುಗಡೆಯ ಪೆಟ್ಟಿಗೆಯ ಮೇಲೆ ನೆಗೆದು ಕುಳಿತುಕೊಂಡನು. ಮಾತುಮಾತಿನಲ್ಲೇ ನಾವು ಆ ಗಲೀಜು ಗಲ್ಲಿಯನ್ನು ಕಳೆದು, ರಾಜಮಾರ್ಗ ವನ್ನು ಸೇರಿ, ಅತಿವೇಗದಿಂದ ಗೌರ್ನರ ಮಹಲಿನ ಕಡೆ ಹೋಗುತ್ತಿದ್ದೆವು. ನಾನು ಕಣ್ಣುಗಳನ್ನು ಮುಚ್ಚಿಕೊಂಡು ಗಾಡಿಯೊಳಗೆ ಮಲಗಿದ್ದೆನು. ಆದ ನಿಲ್ಲುತ್ತಲೇ, ಅವರ ಓಟದ ವೇಗವನ್ನು ಕಂಡು ಆಶ್ಚರ್ಯಗೊಂಡೆನು.

ನಾಲ್ಕೂ ಕಡೆ ಬೇಗನೆ ದೃಷ್ಟಿ ಬೀರಿ, ನಾವು ಒಂದು ವಿಸ್ತಾರವಾದ ಪ್ರಾಂಗಣದಲ್ಲಿ ನಿಂತಿರುವೆವೆಂಬುದನ್ನು ಕಂಡೆನು. ಎದುರಿನಲ್ಲಿ, ತೆರೆದಿದ್ದ ಸಣ್ಣದೊಂದು ದ್ವಾರವಿತ್ತು. ಅದರಿಂದಾಚೆಗೆ ಹಬ್ಷಿಗಳಿಂದ ತುಂಬಿದ್ದ ಉದ್ದವಾದೊಂದು ಓಣಿಯಿತ್ತು. ಅವರಲ್ಲೊಬ್ಬನಾದ ಹಬ್ಷಿಯು, ಮುಂದೆ ಬಂದು, ನನ್ನನ್ನು ಗಾಡಿಯಿಂದಿಳಿಸಿಕೊಂಡನು. ಕೆಳಗಿಳಿದು, ಶಸ್ತ್ರಸಜ್ಜಿತ ರಾಗಿ ಹರ್ಷದಿಂದ ನನ್ನನ್ನು ನೋಡುವಂತಿದ್ದ ಕೆಲವು ಅರನಾದೂತಿನ ಯುವಕರನ್ನು (ಬಹು ಧೀರರೆಂದು ಹೆಸರುಗೊಂಡಿದ್ದ ರುಮೇಲಿವಾಸಿಗಳ ಒಂದು ಪಂಗಡ) ಕಂಡು, ನಾನು ಬೇಗನೆ ಹಬ್ಷಿಯ ಹಿಂದೆ ಹಿಂದೆಯೇ ಆ ಮಾರ್ಗದಲ್ಲಿ ಹೋದೆನು. ಈ ದಾರಿಯು; ಹೋಗಿ ದೊಡ್ಡದೊಂದು ಉದ್ಯಾನವನದ ಸುತ್ತುಗೋಡೆಯಲ್ಲಿದ್ದ ದ್ವಾರದ ಬಳಿ ಮುಗಿಯುತ್ತಿತ್ತು. ಈ ಉದ್ಯಾನವನದ ಮಧ್ಯೆ, ಅತಿ ದೊಡ್ಡದಲ್ಲದ ಒಂದು ಇಟ್ಟಿಗೆಯ ಬಿಳಿ ಮನೆಯು ಇತ್ತು.

ಹಬ್ಷಿ—ಸಾಷಾಸಾಹೇಬರು ಇಲ್ಲಿರುವರು. ಮನೆಯ ಇತರ ಜನರೆಲ್ಲರೂ, ಪ್ರಾಂಗಣದ ಮತ್ತೊಂದು ಪಾರ್ಶ್ವದಲ್ಲಿರುತ್ತಾರೆ. ಹರಮ ಸರಾದ ಈ ಭಾಗವು ಸುನಿಯಾಖಾನಮ್‌ರಿಗೆ ಸೇರಿದುದು. ಗಂಡಸ ಭಾಗವೂ ಆ ಪಾರ್ಶ್ವದಲ್ಲಿರುವದು.

ನನ್ನೀ ನೂತನ ವಾಸಸ್ಥಾನವನ್ನೂ, ಆಶ್ಚರ್ಯದಿಂದ ಕೂಡಿ ನೋಡ ಹತ್ತಿದೆನು. ತೋಟದ ಮಧ್ಯೆ, ಚೌಕವಾದೊಂದು ಭೂಪ್ರದೇಶದಲ್ಲಿ ಆ ಮನೆಯು ಕಟ್ಟಲ್ಪಟ್ಟಿತು. ತೋಟದ ಪಾಗರದ ಹಿಂದೆ, ಒಂದು ತುದಿಯ ಮಾತ್ರ ಕಾಣುತ್ತಿದ್ದ ಗೌರ್ನರಾಗಾರಕ್ಕೆ ಸೇರಿದಂತಿತ್ತು. ಮನೆಯ ಮುಂಭಾಗವು ಪುಷ್ಪಲತೆಯಿಂದ ಮರೆಯಾಗಿತ್ತು. ಒಳಗೆ ಹೋಗುವ ರಸ್ತೆ ಯಲ್ಲಿ ಹಳೇ ನಮೂನೆಯ ಛಾವಣಿಯೊಂದಿತ್ತು. ಅದರ ಮೇಲೆ ಹಳದಿ ಬಣ್ಣದ ಗುಲಾಬೀ ಹೂವಿನ ಬಳ್ಳಿಯು ಹಬ್ಬಿಸಲ್ಪಟ್ಟಿತ್ತು. ಛಾವಣಿಯ ಜನರಿಂದ ಭರಿತವಾಗಿತ್ತು. ಆದರೆ ನಾನಿದ್ದಷ್ಟು ದೂರದಿಂದ ಪುರುಷರೋ ಸ್ತ್ರೀಯರೋ ಎಂಬುದನ್ನು ಹೇಳುವದಕ್ಕಾಗುತ್ತಿರಲಿಲ್ಲ. ನಾನು ಮುಂದ ಹೋಗುತ್ತಿದ್ದ ಹಾಗೆ, ಯಾರೋ ಬೇಗನೆ ಬಂದು ಅರ್ಧದಾರಿಯಿಂ

ನನ್ನನ್ನು ಎದುರ್ಗೊಂಡರು. ನಾನು ನಾಚಿಕೆಗೊಂಡು ಕಣ್ಣೆತ್ತಿನೋಡಲು, ಅತಿ ಎತ್ತರವಲ್ಲದ ಕಾಂತಿಯುತಳಾದೊಬ್ಬ ಸ್ತ್ರೀಯು ಬರುತ್ತಿದ್ದಳು. ಅವಳ ಕಪ್ಪಾದ ನೇತ್ರಗಳನ್ನೂ ಹದಸಾದ ಸುಂದರವಾದಾಕಾರವನ್ನೂ ನೋಡಿದ ಕೂಡಲೇ, ಅಧಮ್ ಬೇಯುವರ ತಂಗಿಯೆಂಬುದನ್ನು ತಿಳಿದುಕೊಂಡೆನು.

ಸನಿಯಾಖಾನಮ್—(ಕರುಣೆಯಿಂದ) ನನ್ನ ಪ್ರಿಯಳಾದ ಪುಟ್ಟ ಹಾಜಿರೆ.

ಅವಳ, ಮಾಧುರ್ಯಗಾಂಭೀರ್ಯಾದಿಗಳಿಂದ ಕೂಡಿದ ಸ್ವರವನ್ನೂ, ಸರಳತೆಯ ಮಾತನ್ನೂ ಕೇಳಿ ನನ್ನ ಕಣ್ಣುಗಳಲ್ಲಿ ನೀರು ತುಂಬಿಹೋಯಿತು. ನನ್ನ ಆಗಿನ ಮಾನಸಿಕ ಸ್ಥಿತಿಯನ್ನು ಬಹುಶಃ ಅವಳು ತಿಳಿದು, ನಾನು ಸೇವಕರ ಮುಂದೆ ದುಃಖವನ್ನು ಹೊರಪಡಿಸುವದು ಇಷ್ಟವಿಲ್ಲದವಳಾಗಿ ಮತ್ತೆ ಹೆಚ್ಚು ನನ್ನನ್ನು ಮಾತಾಡಿಸಲಿಲ್ಲ. ಆದರೆ ನನ್ನನ್ನು ಪ್ರೀತಿಯಿಂದ ಮುದ್ದಿಸಿ, ದಾಸಿಯರ–ಗುಂಪಿನ ಮಧ್ಯದಿಂದ, ತನ್ನೊಡನೆ ಮನೆಗೆ ಕರೆದು ಕೊಂಡು ಹೋದಳು. ಮೊದಲು, ಕೆಂಪು ಹಂಚಿನ ನೆಲವುಳ್ಳ, ದೊಡ್ಡದಾದೊಂದು ಕೊಟ್ಟೆಯೊಳಕ್ಕೆ ಹೋದೆವು. ಅನಂತರ, ಒಂದು ಸಣ್ಣ ಕೋಣೆ ಯೊಳಕ್ಕೆ ಹೋಗಲು, ಅವಳು ಬೇಗನೆ ನನ್ನ ಕಡೆ ತಿರುಗಿ, ನನ್ನೆರಡು ಕೈಗಳನ್ನೂ ತನ್ನ ಕೈಲಿ ಹಿಡಿದುಕೊಂಡು, ನನ್ನನ್ನು ದೃಷ್ಟಿಸಿ ನೋಡಲಾರಂಭಿಸಿದಳು. ಅವಳು ಏನನ್ನು ನೋಡುತ್ತಿರುವಳೆಂದು ನನಗೆ ಗೊತ್ತಾಗಲಿಲ್ಲ–ಆದರೆ, ನನ್ನ ಮುಖವೇನೋ, ಆಗ ನೋಡುವ ಹಾಗಿರಲಿಲ್ಲವೆಂಬುದನ್ನು ತಿಳಿದಿದ್ದೆನು. ಹದಿನೈದು ದಿನಗಳ ಪ್ರಯಾಣದ ಧೂಳಿನಿಂದ ನಾನು ಬಹಳ ಮಲಿನಳಾಗಿ ಹೋಗಿದ್ದೆನು. ಆಪರಿದನ್ನು ಯೋಚಿಸಲು ಸಹ ಹೊತ್ತಿರದೆ, ಅವಳು ನನ್ನನ್ನು ಯಾವ ರೀತಿ ನೋಡುತ್ತಿದ್ದಳೋ, ನಾನೂ ಅದೇ ರೀತಿ ಅವಳನ್ನು ಉತ್ಸುಕತೆಯಿಂದ ನೋಡಹತ್ತಿದೆನು. ಅವಳ ಮುಖವು ಅತಿಸುಂದರವಾಗಿತ್ತು; ಕಪ್ಪಾದಕೂದಲು, ಗರ್ವಿತಮುಖ, ನನ್ನಲ್ಲಿ ನೆಟ್ಟ, ಪ್ರಫುಲ್ಲಲೋಚನಗಳು. ಅವಳ ಮುಖದ ಅಂದವನ್ನು ನೋಡಿ, ಅಧಮ್ ಬೇಯುವರ ಜ್ಞಾಪಕವು ತಾನುತಾನಾಗಿ ಬಂದಿತು. ಅಣ್ಣತಂಗಿಯರ ರೂಪು ಹೆಚ್ಚುಕಡಿಮೆ ಒಂದೇ ಆಗಿತ್ತು. ವಾಸ್ತವಿಕವಾಗಿ, ಇಬ್ಬರೂ ರೂಪಿನಲ್ಲಿ ತಾಯಿಯನ್ನು ಹೋಲುತ್ತಿದ್ದರೂ, ಅವರಿಂದ ವ್ಯತ್ಯಾಸವಾಗಿ ಕಾಣುತ್ತಿದ್ದುದು ಆಶ್ಚರ್ಯಕ್ಕೀಡಾಗಿತ್ತು. ಏನೆಂದರೆ ಖಾನಮ್ ಆಫಂದಿಯವರ ಮುಖದಲ್ಲಿ ತೋರುತ್ತಿದ್ದ ಹಠವು ಇತರರ ಎದೆಯಲ್ಲಿ ಭಯವನ್ನು ಹುಟ್ಟಿಸುತ್ತಿತ್ತು; ಅಧಮ್ ಬೇಯುವರ ಮುಖವನ್ನೂ ಸನಿಯಾಖಾನಮ್ ಳ ಮುಖವನ್ನೂ ನೋಡಿದರೆ, ಜನರಿಗೆ, ಅವರ ಮೇಲ್ಪಂಕ್ತಿಯಲ್ಲೂ ಬುದ್ಧಿವಾದದಲ್ಲೂ ಭರವಸೆಯಿಟ್ಟು, ಅವರನ್ನೇ ಅನುಸರಿಸಿ ನಡೆಯುವಂತೆ

ಮನಸ್ಸಾಗುತ್ತಿತ್ತು.

ವಲಿಯಾಖಾನಮ್—(ಅಕಸ್ಮಾತ್ ನಕ್ಕು-ಅದರಿಂದ ಅವಳ ಚಿಂತಾಯುಕ್ತವಾದ ಮುಖವು ಪ್ರಕಾಶಮಾನವಾಯಿತು)ನೀನು ಎಷ್ಟು ಪುಟ್ಟದಾಗಿರುವೆ! ಶುದ್ಧ ಬೊಂಬೆಯಂತಿದ್ದೀ! ಒಂದು ತಿಂಗಳಿಂದಲೂ ನಿನಗೆ ತಿನ್ನುವದಕ್ಕೆ ಇಲ್ಲದಂತೆ ಕಾಣಿಸುತ್ತದೆ. ಅಥರ್‌ನು ನಿನ್ನನ್ನು ಇಲ್ಲಿಗೆ ಕಳುಹಿಸಿ ಬಹಳ ಒಳ್ಳೇಕೆಲಸ ಮಾಡಿದನು. ಸರಿಯಾದ ಹೊತ್ತಿಗೂ ಕಳುಹಿಸಿದನು. ಇನ್ನು ತಡಮಾಡಿದ್ದರೆ ನಿನ್ನ ಸ್ಥಿತಿಯು ಸಂಪೂರ್ಣವಾಗಿ ಹಾಳಾಗಿ ಹೋಗುತ್ತಲಿತ್ತು. ಇಗೋ ಇನ್ನು ಬಾ-ಮುಖಾವರಣವನ್ನು ತೆಗೆದುಹಾಕು. ಸ್ನಾನಕ್ಕೆ ಎಲ್ಲವೂ ಸಿದ್ಧವಾಗಿರುವದು. ಆದರೆ ಮೊದಲು ಇದು ಹೇಳು—ತಂದೆಯವರು ಹೇಗಿದ್ದಾರೆ? ಹೊರಡುವದಕ್ಕೆ ಮುಂದೆ ನೀನವರನ್ನು ಖಂಡಿತವಾಗಿಯೂ ನೋಡಿರಬೇಕು.

ಅವಳ ಕಂಠದಿಂದ, ಅವಳ ಹೃದಯದಲ್ಲಿ ಪ್ರೀತಿವಾತ್ಸಲ್ಯತರಂಗವು ಉಕ್ಕಿ ಬರುತ್ತಿದ್ದುದು ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಆದರೆ, ಅವಳು ನಸಿರುಲ್ಲಾ ಸಾಹಾರವರನ್ನು ಕುರಿತು ಏಕೆ, ಮೊದಲು ಪ್ರಶ್ನಿಸಿದಳೆಂದು ನನಗಾಶ್ಚರ್ಯವಾಯಿತು. ಅದಕ್ಕೆ ಕಾರಣವು, ಖಾನಮ್‌ಆಫಂದಿಯವರ ಮಕ್ಕಳು, ಅವರನ್ನು ಗೌರವಿಸುತ್ತಿದ್ದಷ್ಟು, ಅವರನ್ನು ಪ್ರೀತಿಸದಿದ್ದುದೇ ಆಗಿತ್ತು.

ನಾನು—(ಮೆಲ್ಲಗೆ) ತಾಯಿ, ಅವರು ಸೌಖ್ಯರಾಗಿರುತ್ತಾರೆ. ಹೊರಡಲು ಮೂರು ದಿನ ಮುಂಚೆ ನಾನವರನ್ನು ನೋಡಿದ್ದೆನು.

ವಲಿಯಾಖಾನಮ್ (ಮೊದಲಿನಂತೆಯೇ) ಮುದ್ದು ತಂದೆಯೆ! ಅಮ್ಮಾವರೂ ಪುಟ್ಟ ಮಹೀದಳೂ ಹೇಗಿದ್ದಾರೆ? ಹದಿನಾರು ವರ್ಷಗಳಿಂದ ಅವರನ್ನಾಗಲೀ, ನನ್ನ ಹಳೇ ಮನೆಯನ್ನಾಗಲೀ ನೋಡಲಿಲ್ಲ. (ಥಟ್ಟನೆ ಮಾತು ನಿಲ್ಲಿಸಿ) ನಿನಗೆ ನಾನು ಬಹಳ ಹಿಂಸೆ ಕೊಡುತ್ತಿರುವೆನು—ಯಾಕೆಂದರೆ ನಿನ್ನಲ್ಲೀಗ ನಿಲ್ಲಲು ಸಹ ಶಕ್ತಿಯಿಲ್ಲ. [ಚಪ್ಪಾಳೆ ತಟ್ಟಿ] ಮೋಲೀ, ಇವರನ್ನು ಸ್ನಾನಕ್ಕೆ ಕರೆದುಕೊಂಡು ಹೋಗು. [ನನ್ನ ಕಡೆ] ಸ್ನಾನಾನಂತರ ಕೊಂಚ ವಿಶ್ರಮಿಸಿಕೊ. ನೀನು ದುರ್ಬಲಳಾಗಿಯೂ ಅಸ್ವಸ್ಥಳಾಗಿಯೂ ಕಾಣುತ್ತೀ.

ನಾನು ಕೃತಜ್ಞತೆಯಿಂದೊಡಗೂಡಿ ಅವಳಿಗೆ ವಂದಿಸಿ, ದಾಸಿಯೊಡನೆ ಹೊರಟೆನು. ಆದರೆ ಬಾಗಿಲಿನವರೆಗೆ ತಲುಪುವದರಲ್ಲೇ, ತಲೆಯು ಸುತ್ತಲಾರಂಭಿಸಿತು. ಪ್ರಜ್ಞೆಯು ಚದರಲಾರಂಭಿಸಲು, ಯತ್ನವಿಲ್ಲದೆ ಕೈಯನ್ನು ಮುಂದಕ್ಕೆ ನೀಡಿದೆನು. ಆದರೆ ನಾನು ಉದ್ದಿಶ್ಯಪಟ್ಟಂತೆ ಗೋಡೆಯನ್ನು ಹಿಡಿದುಕೊಳ್ಳುವಷ್ಟರಲ್ಲೇ, ಜ್ಞಾನತಪ್ಪಿ ಹಿಂದಕ್ಕೆ ಬಿದ್ದೆನು.

ದ್ವಿತೀಯ
ಭಾಗ

ಹನ್ನೆರಡನೆಯ ಪರಿಚ್ಛೇದ

ಅಂತು ಇಂತು ಬೇಸಿಗೆಯು ಮುಗಿದು, ಈಗ ಮಳೆಗಾಲವು ಬಂದಿತ್ತು. ಊರಿನ ನಾಲ್ಕೂ ದಿಕ್ಕುಗಳ ವಿಶಾಲವಾದ ಮೈದಾನಗಳಲ್ಲಿ, ಗಾಳಿಯು ರಭಸದಿಂದ ಬೀಸುತ್ತಿತ್ತು. ಮೋಡಗಳು ಅವಸರದಿಂವ, ಬೆಟ್ಟಗಳ ತುದಿಗಳ ಮೇಲೆ ಒಟ್ಟುಗೂಡುತ್ತಿದ್ದವು. ಸೂರ್ಯನು, ಜ್ವಾಲಾಮುಜ್ಜದಂತೆ ಕೆಂಡದ ಹಾಗೆ ಕೆಂಪಾಗಿ, ಅಪೂರ್ವಕಾಂತಿಯುನ್ನು ತಾಳಿ ಅಸ್ತಂಗತನಾಗುತ್ತಿದ್ದನು. ಸುತ್ತಮುತ್ತಲಿನ ಎಲ್ಲ ವಸ್ತುಗಳೂ, ರಾತ್ರಿ ಪ್ರವಾತವೇಳುವದೆಂಬುದನ್ನು ಸೂಚಿಸುವಂತಿದ್ದವು. ನಾನು ಆ ಪುರಾತನ ನವುೂನೆಯ ಭಾವಣಿಯಲ್ಲಿ ನಿಂತು, ಕೊಂಚಕೊಂಚ ನಡಗುತ್ತಾ ಇದ್ದೆನು. ಗುಲಾಬಿಯ ಒಣಗಿದೆಲೆಗಳು ವೇಗದಿಂದ ಉದುರುತ್ತಿದ್ದವು. ತೋಟದ ಪ್ರತಿಯೊಂದು ಗಿಡವೂ ಹೂವೂ, ಗಾಳಿಯ ರಭಸದೆದುರಿನಲ್ಲಿ ಅವನತಶಿರವುಳ್ಳದಾಗುತ್ತಿತ್ತು. ನನ್ನೆದುರಿಗೆ ಸರಿಯಾಗಿದ್ದ, ಪುರಾತನವಾದೊಂದು ದೊಡ್ಡ ಬಲೂತ್ ವೃಕ್ಷದ ಮೇಲೆ, ಪಕ್ಷಿಗಳು ಗೂಡುಕಟ್ಟಲು ಸೇರಿ ಗದ್ದಲವೆಬ್ಬಿಸುತ್ತಿದ್ದವು. ನನ್ನ ಸಮೀಪದಲ್ಲಿಯೇ ಇದ್ದ ಒಂದು ಸುುದಿ ಸರೂವೃಕ್ಷವು ಸಿಟ್ಟಿನಿಂದ ತೂಗಾಡುತಲಿತ್ತು. ನಾನದನ್ನು ತಿರುಗಿನೋಡಿದಕೂಡಲೆ, ನನ್ನಾಲೋಚನೆಗಳು ಥಟ್ಟನೆ ಖಸ್‌ತಂತನಿಯಾವನ್ನು ತಲಪಿದವು. ಅಯೂಬ್‌ಸುಲ್ತಾನದ ಖಬರ್‌ಸ್ಥಾನದಲ್ಲಿ ನಾನಿರುವದನ್ನೂ, ನನ್ನ ಪ್ರಿಯತಮನು ಕೋಪದಿಂದ ನನ್ನ ಬಳಿ ನಿಂತಿರುವದನ್ನೂ, ನೋಡಿದೆನು. ಇನ್ನು ಹೆಚ್ಚು ಆಲೋಚಿಸುವದರಲ್ಲೇ, ಗುಲಾಬಿಯ ಒಂದು ಒಣಗಿದಕಡ್ಡಿಯು ನನ್ನ ತಲೆಯಮೇಲೆ ಬೀಳಲು, ನನ್ನಾಲೋಚನೆಗಳೆಲ್ಲಾ ಮತ್ತೆ ತಮ್ಮ ಸ್ಥಾನಕ್ಕೆ ಬಂದು ಬಿಟ್ಟವು. ನಾನೊಂದು ನಿಶ್ವಾಸವನ್ನು ಬಿಟ್ಟು, ಆಕಡೆಯಿಂದ ಮುಖ ತಿರುಗಿಸಿಕೊಂಡುಬಿಟ್ಟೆನು. ಇನ್ನು ನನಗೆ, ಹವಾಹೇಗಿತ್ತೆಂದಾಗಲೀ, ಆಕಾಶವು ನಿರ್ಮಲವಾಗಿತ್ತೆಂದಾಗಲೀ, ಬಿರುಗಾಳಿಯು ಏಳುವದೇ ಎಂದಾಗಲೀ, ಈ ವಿಷಯಗಳಿಂದೇನಾಗಬೇಕಾಗಿತ್ತು—ಯಾಕೆಂದರೆ, ನನಗೆ ಜೀವನದಲ್ಲಿ ಉಳಿದಿದ್ದುದು ತಾನೆ ಏನಿತ್ತು ? ದೀರ್ಘವೂ ಅಂಧಕಾರಮಯವೂ ಆದ ದೌರ್ಭಾಗ್ಯದ ದಿನಗಳನ್ನು, ಯಾವ ರೀತಿಯಲ್ಲಾದರೂ ಕಳೆಯಬೇಕಾಗಿದ್ದುದಷ್ಟೆ.

ನಾನು ಸುನಿಯಾಖಾನಮುಳಬಳಿ ಬಂದು ಎರಡು ತಿಂಗಳಾಗಿದ್ದವು. ನಾನು ಈಗ ಸ್ವಸ್ಥಳಾಗಿದ್ದುದರಿಂದ, ಡಾಕ್ಟರು ನನಗೆ ಇವತ್ತೇ ಮೊದಲನೆ

ದಿನ, ಹೊರಗೆಹೋಗಲು ಅಪ್ಪಣೆಕೊಟ್ಟಿದ್ದರು. ನಾನು ಜ್ಞಾನತಪ್ಪಿ ಸನಿಯಾಖಾನಮಳ ಕಾಲುಗಳಮೇಲೆ ಬಿದ್ದ ದಿವಸದಿಂದ, ನನಗೂ ಮೃತ್ಯುವಿಗೂ ಚೆನ್ನಾಗಿ ಕುಸ್ತಿಯಾಗುತ್ತಲಿತ್ತು. ಅದಕ್ಕೇ ಜಯವಾಗಿದ್ದರೆ ನನಗೆ ಒಳ್ಳೆಯದಾಗುತ್ತಿತ್ತಾದರೂ, ದೈವೇಚ್ಛೆಯು ಹಾಗಿರಲಿಲ್ಲವಾದುದರಿಂದ, ವಿಧಿಬರಹವನ್ನನುಭವಿಸಲು ಮತ್ತೆ ನಾನು ಸನ್ನದ್ಧಳಾದೆನು. ನಾನು ಖಾಯಿಲೆಯಾಗಿದ್ದಾಗ ಎಲ್ಲರೂ ನನ್ನನ್ನು ಅತ್ಯಂತ ಕರುಣೆಯಿಂದ ಕಾಣುತ್ತಿದ್ದರು. ಸನಿಯಾಖಾನಮಳು, ಬಹು ಪ್ರೀತ್ಯಾದರದಿಂದ ನನ್ನ ಸೇವೆಯನ್ನು ಮಾಡಿದಳು. ಖಾಯಿಲೆಯ ಸಮಯದಲ್ಲಿ ಆಕೆಯ ಭೂತದಯೆ, ಪಶ್ಚಾತ್ತಾಪ, ಆದರ, ಕನಿಕರ, ಕಾರುಣ್ಯ, ಸಮಾಧಾನ, ಈ ಗುಣಗಳು ನನಗೆ ಚೆನ್ನಾಗಿ ಗೊತ್ತಾಯಿತಾದುದರಿಂದ ಹೊರಗೆ ಕೊಂಚ ಕಠಿಣಳಾಗಿಯೂ ಪ್ರೀತಿರಹಿತಳಾಗಿಯೂ ಕಾಣಿಸುತ್ತಾ, ಅಂತರ್ಯದಲ್ಲಿ ಅತಿ ದಯಾಪೂರಿತಳಾಗಿದ್ದ, ಈ ಗಂಭೀರಸ್ವಬಾವದ, ರಾಣಿಸದೃಶಳಾದ ಸ್ತ್ರೀಯಮೇಲೆ ನನ್ನ ಹೃದಯದಲ್ಲಿ ಪುತ್ರೀವಾತ್ಸಲ್ಯವು ಹುಟ್ಟಿತು. ಹೊರಗಿನ ಅನಾದರತೆಯು ಯಾವದೋ ಒಂದು ಬಾಹ್ಯಕ ಕಾರಣದಿಂದುಂಟಾಗಿತ್ತೆಂಬುದನ್ನು ನಾನು ಸುಲಭವಾಗಿ ತಿಳಿದುಕೊಂಡೆನು. ಆದರೆ ಅವಳ ವಿಚಾರಗಳಲ್ಲಿ ನಾನಿನ್ನೂ ಅಪರಿಚಯಸ್ಥಳಾಗಿದ್ದುದರಿಂದ, ಅವಳ ಮುಖವು ಸಾಧಾರಣವಾಗಿ ಕಂದಿರುತ್ತಿದ್ದುದಕ್ಕೆ ಮುಖ್ಯಕಾರಣವನ್ನು ಅರಿಯದವಳಾಗಿಹೋದೆನು.

ಈ ವಿಧವಾದ ಆಲೋಚನೆಗಳಲ್ಲಿ ನಾನು ಮಗ್ನಳಾಗಿದ್ದಾಗ, ಅವಳ ಧ್ವನಿಯು ನನ್ನ ಕಿವಿಗೆ ಬಿದ್ದು, ನನ್ನ ಹೃದಯದಲ್ಲಿ ಹರ್ಷಾಧಿಕ್ಯವನ್ನು ಉತ್ಪನ್ನಮಾಡಿತು. ದಯಾಪೂರಿತವಾದ ವಾಕ್ಯಗಳು ದುರ್ಲಭವಾಗಿರುವ ಜನರ ಮೇಲೆ, ಅಂಥಾ ಒಂದು ಶಬ್ದವಾದರೂ ಯಾವ ಗುಣವನ್ನುಂಟು ಮಾಡುವದೆಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬಹುದು.

ಸನಿಯಾಖಾನಮ್ — ಬಾಮ್ಮಾ, ಒಳಗೆ ಬಂದುಬಿಡು. ಹೊರಗಿನ್ನೂ ಛಳಿಯಾಗಿರುವದು. ಈ ಛಳಿಯಹೊಡೆತವನ್ನು ಸಹಿಸುವಷ್ಟು ಶಕ್ತಿ, ನಿನಗೆ ಇನ್ನೂ ಬಂದಿಲ್ಲ.

ನಾನು ಆಜ್ಞೆಯನ್ನಂಗೀಕರಿಸಿ, ಅವಳೊಡನೆ ಮನೆಯ ಒಳಗೆ ಹೋದೆನು. ಚಿಕ್ಕಮನೆಯಲ್ಲಿ ಅಗ್ನಿಯು ಉರಿಯುತ್ತಿತ್ತು. ಅದರ ಶಾಖವು ನನಗೆ ಬಹು ಹಿತಕರವಾಗಿ ಕಂಡುಬಂದುದರಿಂದ, ಹತ್ತಿರಹೋಗಿ ಕೆಳಗೆ ಕುಳಿತುಕೊಂಡೆನು. ಸನಿಯಾಖಾನಮಳು ನನ್ನೆದುರಿಗೆ ಕಾಟಿನ ಮೇಲೆ ಕುಳಿತುಕೊಂಡಳು.

ಸನಿಯಾಖಾನಮ್— (ನಸುನಗುತ್ತಾ) ನೀನು ಇದುವರೆವಿಗೆ ನನ್ನ ಪತಿಯ ನ್ನಾಗಲೀ ಅವನ ಮನೆಯವರನ್ನಾಗಲೀ ನನ್ನ ಮಕ್ಕಳನ್ನಾಗಲೀ ಯಾರನ್ನೂ ನೋಡಲಿಲ್ಲ. ನಿನ್ನನ್ನು, ನನ್ನ ಮಕ್ಕಳನ್ನಾಡಿಸಲು ಅಥವರ್‌ ಬೇಯು ಕಳುಹಿಸಿದನೆಂದು ಯೋಚಿಸಿಕೊಂಡರೆ, ನನ್ಗೆ ನಿನಗೇ ಒಬ್ಬ ದಾಯಿಯ ಅವಶ್ಯಕತೆಯಿರುವದೆಂಬುದನ್ನು ಅವನು ತಿಳಿಯಲಾರದೆ ಹೋದ ನಲ್ಲಾ ಎಂದು ನನಗೆ ಆಶ್ಚರ್ಯವಾಗುತ್ತದೆ.

ಅಥವರ್‌ಬೇಯುವರು, ನನ್ನ ವಿಚಾರವೆಷ್ಟನ್ನು ಸನಿಯಾಖಾನಮಳಿಗೆ ತಿಳಿಸಿರುವರೆಂಬುದಾಗಲೀ, ನಾನು ಮೂರ್ಛೆಹೊಂದಿದ್ದಾಗ ಅಜ್ಞಾನದಲ್ಲಿ ಏನೇನು ಹೇಳಿರುವೆನೆಂಬುದಾಗಲೀ ತಿಳಿಯದೆ, ನಾನು ನಸುನಕ್ಕೆನು.

ಸನಿಯಾಖಾನಮ್— (ಪ್ರೀತ್ಯತಿಶಯದಿಂದ) ಮುದ್ದು ಅಥವರ್‌, ಇಷ್ಟು ದಿನಗಳಲ್ಲಿ ಅವನೇನೂ ಹೆಚ್ಚು ಬದಲಾಯಿಸಿಲ್ಲತಾನೆ? ನಾಫಿಜ್‌ನಂತು ನಾನಿಲ್ಲಿ ಬಂದಾಗ ಕೇವಲ ಎಳೆಯಮಗುವಾಗಿದ್ದನು. ಅವನು ಆಗ ಅತ್ಯಂತ ತುಂಟನಾಗಿದ್ದನೆಂಬುದೂ, ಅಮ್ಮಾವರ ಮುದ್ದು ಅವನನ್ನು ಅತಿ ಯಾಗಿಕೆಡಿಸಿ ಬಿಟ್ಟಿತೆಂಬಷ್ಟು ಮಾತ್ರ ಜ್ಞಾಪಕವಿರುವದು. ತನ್ನ ತುಂಟ ತನದ ನಿಮಿತ್ತ ಅವನು ಯಾವಾಗಲೂ ಒಂದಲ್ಲಒಂದು ವಿಪತ್ತಿನಲ್ಲಿ ಸಿಕ್ಕಿ ಕೊಂಡಿರುತ್ತಿದ್ದನು. ತಂದೆಯವರಿಗೆ ತಿಳಿಯಬಾರದೆಂದು ನಾವು ಬಹು ಜಾಗರೂಕತೆಯಿಂದಿದ್ದು, ಅವನನ್ನು ಅವನ ಚೇಷ್ಟೆಯ ದುಷ್ಪರಿಣಾಮ ಗಳಿಂದ ರಕ್ಷಿಸುತಿದ್ದೆವು. ಈಗ ದೊಡ್ಡವನಾದ ಮೇಲ ಅವನ ರೀತಿ ಹೇಗಿರು ವದೋ ಗೊತ್ತಿಲ್ಲ. ಅಥವರ್‌ಬೇಯು ಬರೆದಿರುವದು ಸರಿಯಾಗಿದ್ದರೆ, ಇನ್ನೂ ಅವನು ತನ್ನ ಹಳೇ ಅಭ್ಯಾಸಗಳನ್ನು ಬಿಟ್ಟಿಲ್ಲವೆಂದು ಕಾಣುತ್ತದೆ.

ನಾನು ನಾಚಿಕೆಯಿಂದ ಬೆವರಿಹೋದೆನು-ಮುಖದ ವರ್ಣವು ಕೆಂಪಾಗಿ ಹೋಯಿತು. ಬೇಗನೆ ಕಣ್ಣೆತ್ತಿ ನೋಡಲು ಸನಿಯಾಖಾನಮಳು ಕುಚೇಷ್ಟೆ ಯಿಂದ ನಗುತ್ತಿದ್ದಳು.

ಸನಿಯಾಖಾನಮ್ — ಯಾಕೆ ? ಸ್ತಬ್ಧಳಾಗಿರುವೆತಾನೆ ? ನಾನು ಅಥವರ್‌ಬೇಯ ಪ್ರೇಮ ಸಹೋದರಿಯಾಗಿರುವದರಿಂದ, ನನ್ನನ್ನು ಅವನು ಎಲ್ಲರಿಗಿಂತಲೂ ಹೆಚ್ಚು ಪ್ರೀತಿಸುತ್ತಾನೆ. ಅದುಕಾರಣ, ನನ್ನಿಂದ ಯಾವ ಮಾತನ್ನಾಗಲಿ ಮರೆಮಾಚುವದು ಅವನಿಗೆ ಹೇಗೆ ಸಾಧ್ಯ? ಪ್ರಿಯ ಹಾಜಿರೇ, ನನಗೆಲ್ಲ ವಿಷಯವೂ ಗೊತ್ತುಂಟು. ಈ ವಿಚಾರವನ್ನೇಕೆ ಇಷ್ಟು ದೊಡ್ಡದನ್ನಾಗಿ ಮಾಡಿದರೆಂಬುದು ನನಗರ್ಥವಾಗುವದಿಲ್ಲ. ನಾಫಿಜ್‌ನು ನಿನ್ನನ್ನು ಮದುವೆಯಾಗಿದ್ದರೆ ಪ್ರತಿಬಂಧಕವೇನಿತ್ತು-ಅಮ್ಮಾವರು ಇಷ್ಟ

ಪಡದಿದ್ದುದರಿಂದ ಇದು ಸಾಧ್ಯವಾಗಲಿಲ್ಲ. ಪುಟ್ಟಹಾಜಿರೇ, ನೀನು ಈ ವಿಚಾರದಲ್ಲಿ ಬಹಳ ಧೈರ್ಯವನ್ನೂ ವಿಶಾಲ ಬುದ್ಧಿಯನ್ನೂ ತೋರಿಸಿರುವೆ. ನಿನಗೂ ಪಾಪ ಆ ಹುಡುಗನಿಗೂ ಎಷ್ಟು ಸಂಕಟಉಂಟಾಗಿರಬಹುದೆಂಬುದನ್ನು ನಾನು ತಿಳಿಯಬಲ್ಲೆನು.

ನಾನು ಎದ್ದು ಅವಳ ತೊಡೆಯಮೇಲೆ ತಲೆಯನ್ನಿಟ್ಟುಕೊಂಡೆನು.

ನಾನು— (ಮೆಲ್ಲನೆ) ಆದರೆ ನಾನು ಮಾಡಿದುದು ಸರಿಯೋ ಅಲ್ಲವೋ ? ಅವನನ್ನು ಯಮನ್‌ಗೆ ಕಳುಹಿಸಿದ್ದರೆ ಎಷ್ಟು ಕಷ್ಟವುಂಟಾಗುತ್ತಿತ್ತು ! ಯಾಕೆಂದರೆ ಮುಂದೆ ಅವನು, ನಸಿರುಲ್ಲಾ ಪಾಷಾರವರು ಸತ್ತರೆ ಸಾಕೆಂದು ತನಗೆ ಅಲ್ಲಿಂದ ಬಿಡುಗಡೆಯಾಗಲೆಂದೂ ಪ್ರಾರ್ಥಿಸಲಾರಂಭಿಸುತ್ತಿದ್ದನು.

ಸನಿಯಾಖಾನಮ್— ಹೌದು, ಹಾಜಿರೆ. ನೀನು ಮಾಡಿದುದು ಸರಿಯೆಂದು ಕಾಣುತ್ತದೆ. (ಒಂದುಘಳಿಗೆ ಸುಮ್ಮನಿದ್ದು) ನಾಫಿಜ್‌ನಿಂದ ತಂದೆಯವರಿಗೆ ವ್ಯಸನ ಉಂಟಾಗುವದು ನನಗೆ ಇಷ್ಟವಿಲ್ಲ. ನಾಫಿಜ್‌ನ ಸ್ವಭಾವವನ್ನು ನಾನು ಚೆನ್ನಾಗಿ ಅರಿತಿಲ್ಲವಾದುದರಿಂದ ಇದೆಲ್ಲದರ ಪರಿಣಾಮವೇನಾಗಬಹುದೆಂಬುದನ್ನೂ ನಾನು ಹೇಳಲಾರೆನು. ಹೂಂ, ನಾಫಿಜ್‌ನಲ್ಲಿ ಅವನಿಗಿರಬೇಕಾದ ಉನ್ನತಗುಣಗಳಿದ್ದು, ತನ್ನ ಮಾತಿನ ಗೌರವತೆಯಿದ್ದು, ಅವನು ನಿಜವಾದ ಪ್ರೇಮಿಕನಾಗಿದ್ದರ, ನೀನು ಅವನೊಡನೆ ಹೇಳಕೇಳದೆಬಂದುಬಿಟ್ಟ ನಿನ್ನ ಈ ರೀತಿಯಾದ ವರ್ತನೆಗೆ ಅವನು ಖಂಡಿತವಾಗಿ ಅರ್ಹನಾಗಿರಲಿಲ್ಲವು. ಆದರೆ ಅಥಮನು, ನಿನಗೆ ಈ ಸಲಹೆಯನ್ನೇ ಇತ್ತಿದ್ದರೆ, ಅವನು ನನಗಿಂತ ಚೆನ್ನಾಗಿ ನಾಫಿಜ್‌ನ ಸ್ವಭಾವವನ್ನು ಅರಿತಿರುವನು. ಹಾಜಿರೇ, ಸ್ವಲ್ಪ ಕೇಳು, ಯಾರೋ ಬರಾಮದೆಯಲ್ಲಿ ಬರುತ್ತಿರುವಂತೆ ಕಾಣುವದರಿಂದ, ಈ ವಿಚಾರವನ್ನು ಕುರಿತು ಈಗ ಮಾತನಾಡುವದು ಬೇಡ. (ಯಾರದೋ ಕೃತ್ರಿಮ ನಗೆಯನ್ನು ಕೇಳಿ) ನನ್ನ ನಾದಿನಿಯು. ಒಂದುವೇಳೆ ಮಕ್ಕಳನ್ನು ದೊಡ್ಡಮನೆಯಿಂದ ಹಿಂದಕ್ಕೆ ಕರೆತರುತ್ತಿರಬಹುದು.

ನಾನು ಬೇಗನೆ ತಲೆಯೆತ್ತಿನೋಡುತ್ತ, ಸನಿಯಖಾನಮಳು ತನ್ನ ತಮ್ಮನಿಗಾಗಿ ಗೊತ್ತುಮಾಡಿದ್ದ ನಾದಿನಿಯು ಇವಳಿರಲಾರದೆಂದು ಯೋಚಿಸಲಾರಂಭಿಸಿದೆನು. ಹಾಫಿಜ್ ಪಾಷಾರವರಿಗೆ ಎಷ್ಟುಮಂದಿ ಹೆಣ್ಣುಮಕ್ಕಳಿದ್ದರೆಂದು ನಾನು ಕೇಳಬೇಕೆಂದಿರುವಷ್ಟರಲ್ಲೇ, ಇಜ್ಜತ್ ಪಾಷಾರವರ ತಂಗಿಯು ಬಂದೇಬಿಟ್ಟಳು. ಅವಳು ಸನಿಯಾಖಾನಮಳಿಗೆ ಸಲಾಮನ್ನು ಮಾಡುತ್ತಿರುವಾಗ, ಅವಳನ್ನು ಚೆನ್ನಾಗಿ ಪರೀಕ್ಷಿಸಿನೋಡಲು ನನಗೆ ಸಮಯ ದೊರೆಯಿತು.

ಅವಳ ವಿಚಾರವಾಗಿ ನನ್ನ ಮನಸ್ಸಿನಲ್ಲಿ ಹುಟ್ಟಿದ ಮೊದಲನೆಯ ಭಾವನೆಯೇನೆಂದರೆ, ಅವಳ ಸೌಂದರ್ಯವನ್ನು ಮನಸ್ಸಿನಲ್ಲಿಯೇ ಕೊಂಡಾಡ ಹತ್ತಿದೆನು. ಅವಳು ಅತ್ಯಂತ ರೂಪವತಿಯಾಗಿದ್ದಳು. ಚಿನ್ನದ ರಂಗಿನ ಉದ್ದವಾದ ತಲೆಯಕೂದಲು, ಬಾದಾಮಿ ಆಕಾರದ ಕಳೆಯಾದ ಕಣ್ಣುಗಳು, ಎತ್ತರವಾದ ನಾಸಿಕವು, ಬಾಯಿಯು-ಮೇಲುಗಡೆಯ ತುಟಿಯು ಕೆಳಗಿನ ತುಟಿಗಿಂತ ಸ್ವಲ್ಪ ಮುಂದಕ್ಕೆ ಬರದಿದ್ದಲ್ಲಿ ಅತಿಸುಂದರವೆಂದೆಣಿಸಲ್ಪಡುತ್ತಿತ್ತು ದುಂಡಾದಮೈ, ಹದನಾದ ಉದ್ದ; ವಿಪರೀತವಾದ ವೈಯ್ಯಾರವೂ ಮೃದುತರವಾದ, ಚಲನೆಗತಿಗಳೂ ನೋಡಲು ಅಪೂರ್ವವೂ ಅತಿಮನೋಹರವೂ ಆಗಿತ್ತು. ನಾನಿನ್ನೂ ಅವಳಕಡೆ ನೋಡುತ್ತಿರುವಾಗ ಅವಳು ತಿರುಗಿ, ನನ್ನನ್ನು ಅಲಕ್ಷ್ಯದಿಂದ ನೋಡಿದಳು.

ಅತಿಯಾಖಾನಮ್— (ಕೌಚಿನಮೇಲೆ ಅಸಡ್ಡೆಯಿಂದ ಕುಳಿತುಕೊಂಡು) ಈ ಹುಡುಗಿಯೇಯೋ ಖಿಸ್ತಂತನಿಯಾದಿಂದ ಬಂದವಳು ?

ಸನಿಯಾಖಾನಮಳು ಮುಗುಳ್ನಗೆ ನಕ್ಕು ಜವಾಬನ್ನಿತ್ತಳು-

"ಹೌದು. ಇವಳೇ ಹಾಜಿರೆಯು. ಪಾಪ,ಬಹಳ ಕಾಯಿಲೆಯಾಗಿದ್ದಳು"

ಅತಿಯಾಖಾನಮಳು ತಲೆಯನ್ನಾಡಿಸಿ ಮುಖವನ್ನು ತಿರುಗಿಸಿಕೊಂಡುಬಿಟ್ಟು ಹೀಗೆಂದಳು.

"ನನಗೆ ಬಹಳ ಆಯಾಸವಾಗಿದೆ. ಇವತ್ತು ಬೆಳಗಿನಿಂದ ನಾವು ಒಬ್ಬರಿಗೊಬ್ಬರು ಜಗಳವಾಡುತ್ತಿದ್ದೆವು. ಪ್ರಾಣವುಳಿಸಿಕೊಳ್ಳಲು ಮಕ್ಕಳನ್ನು ಕರೆದುಕೊಂಡು ನಾನಿಲ್ಲಿಗೆ ಬಂದುಬಿಟ್ಟೆ."

ಅವಳು ಎತ್ತರವಾದ ಸ್ವರದಲ್ಲಿ, ಮೂಗಿನಲ್ಲಿ ಮಾತನಾಡುತ್ತಿದ್ದಳು.

ಸನಿಯಾಖಾನಮ್— (ಅತ್ತ ಇತ್ತ ನೋಡುತ್ತಾ) ಮಕ್ಕಳೆಲ್ಲಿ ? ಹಾಜಿರೇ ನೀನವರನ್ನು ನೋಡಲೆಂದು ನಾನಪೇಕ್ಷಿಸುತ್ತೇನೆ. (ಅತಿಯಾಖಾನಮಳನ್ನು ಕುರಿತು.) ಹಾಜಿರೆಯು ಇನ್ನೂ ಅವರನ್ನು ಪರಿಚಯಮಾಡಿಕೊಂಡಿಲ್ಲ.

ಅತಿಯಾಖಾನಮ್— (ಅಲಕ್ಷ್ಯದಿಂದ) ಹೌದು.

ಹೀಗೆಂದು ಅವಳು ಎದ್ದುನಿಂತುಕೊಂಡಳು. ಪುರುಷನೊಬ್ಬನು ಚಿಕ್ಕ ಮನೆಯೊಳಗೆ ಬಂದು, ಈ ಇಬ್ಬರು ಹೆಂಗಸರ ಸಮೀಪಕ್ಕೆ ಬರುತ್ತಿದ್ದನು. ಸನಿಯಾಖಾನಮಳೂ ಎದ್ದುನಿಂತುದರಿಂದ, ಅದು ಇಜ್ಜಪಾಷಾರವೆಂದು ನಾನು ತಿಳಿದುಕೊಂಡೆನು. ಅವರ ವಿಚಾರವಾಗಿಯೂ ನನ್ನ ಮನಸ್ಸಿಗೆ ಒಳ್ಳೇಭಾವನೆಯುಂಟಾಯಿತು. ಅವರು ಬಹಳ ಗೌವರಸ್ಥರಾಗಿಯೂ ದೊಡ್ಡಮನುಷ್ಯರಾಗಿಯೂ ಕಾಣಿಸುತ್ತಿದ್ದುದರಿಂದ, ನನ್ನ ಮನಸ್ಸು

ತಾನಾಗಿತಾನು ಅವರನ್ನು ಮರ್ಯಾದೆ ಮಾಡಲು ಇಚ್ಛಿಸಿತು. ಅವರು ಕುಳಿತುಕೊಂಡು ನನ್ನ ಕಡೆ ಕರುಣೆಯಿಂದ ನೋಡಿದರು.

ಇಜ್ಜತ್ ಪಾಷಾ—(ನಸುನಗುತ್ತಾ)ಇವಳು ಹಾಜಿರೆಯೇನು ? ನೀನು ಸ್ವಸ್ಥಳಾದುದು ನನಗೆ ಬಹಳ ಸಂತೋಷವಮ್ಮಾ. ಆದರಿನ್ನೂ ನಿನಗೆ ಸಂಪೂರ್ಣವಾಗಿ ಶಕ್ತಿ ಬಂದಿಲ್ಲ.

ನಾನು ಅವರ ಕೈಗೆ ಮುದ್ದಿಟ್ಟು, ಮೌನದಿಂದ ನಿಂತಿದ್ದೆನು. ಅವರು ಮತ್ತೆ ನನ್ನೊಡನೆ ಮಾತನಾಡದೆ, ಪತ್ರಿಕೆಯನ್ನು ತೆಗೆದುಕೊಂಡು ಓದಲಾರಂಭಿಸಿದರು. ಒಂದು ನಿಮಿಷಾನಂತರ ಮೂರು ಸಣ್ಣ ಮಕ್ಕಳು-ಎರಡು ಗಂಡು ಹುಡುಗರೂ ಒಂದು ಹೆಣ್ಣು ಹುಡುಗಿಯೂ, ಚಿಕ್ಕ ಮನೆಯೊಳಗೆ ಬಂದರು. ಎಲ್ಲರಿಗಿಂತ ದೊಡ್ಡವನು ಏಳುವರ್ಷದ ಹುಡುಗನು-ಎಲ್ಲರಿಗಿಂತ ಚಿಕ್ಕವಳು ಮೂರುವರ್ಷದ ಹುಡುಗಿಯು ಭಯಪಡುತ್ತಾ ಅವರುಗಳು ಮುಂದೆ ಬಂದು, ತಂದೆಯ ಹತ್ತಿರಹೋಗಿ ಒಬ್ಬೊಬ್ಬರಾಗಿ ಅವರ ಕೈಗೆ ಮುದ್ದಿಡಲು ಅವರದಕ್ಕೆ ಪ್ರತಿಯಾಗಿ ಒಬ್ಬೊಬ್ಬರನ್ನೂ ಕೊಂಚ ಮುದ್ದಿಸಿದರು. ಅದಾದ ಮೇಲೆಅವರುಗಳು ತಾಯಿಯ ಬಳಿಹೋಗಿ ತಬ್ಬಿಕೊಂಡು ನಿಂತರು.

ನಸಿಯಾಖಾನಮ್-(ನಗುತ್ತಾ)ಹಾಜಿರೇ ಈ ಮಕ್ಕಳು ನಿನ್ನವಶಕ್ಕೆಸೇರಿದವುಗಳು-ಇವನುಅಥನ್‌ನು-ಇವನ ಹೆಸರು ಯೂಸಫ್-ಈ ಚಿಕ್ಕವಳುಜೇಬಾ.

ನಾನು ಮುಂದೆ ಹೋಗಿ, ಅವರ ಬಳಿ ಬೊಗ್ಗಿಕೊಂಡು ಪ್ರೀತಿಯಿಂದ ಮಾತನಾಡಿಸಹತ್ತಿದೆನು. ಆದರೆ ಅವರು, ತಂದೆಯು ಇದ್ದ ಕಾರಣ ಹೆದರುತ್ತಿದ್ದುದರಿಂದ, ನಾನು ಮಾಡಿದ ಉಪಾಯವು ಸಫಲವಾಗದೆ, ನನ್ನೊಂದು ಮಾತಿಗಾದರೂ ಜವಾಬುಸಿಕ್ಕಲಿಲ್ಲ. ಇಜ್ಜತ್ ಪಾಷಾರವರು ಕೋಪಿಷ್ಠರಂತಾಗಲೀ ದುಸ್ವಭಾವದವರಂತಾಗಲೀ ಕಾಣಿಸುತ್ತಿರಲಿಲ್ಲವಾದುದರಿಂದ, ನನಗದನ್ನು ನೋಡಿ ಆಶ್ಚರ್ಯವಾಯಿತು. ಆದರೂ ಅವರ ಮಕ್ಕಳೂ ಅವರ ತಂಗಿಯೂ ಅವರನ್ನೂ ಕಂಡು ಹೆದರುತ್ತಿದ್ದರು. ಅವರನ್ನು ಲಕ್ಷಿಸದಿದ್ದವರು ಅವರ ಹೆಂಡತಿ ಮಾತ್ರ.

ಇಜ್ಜತ್ ಪಾಷಾ—(ಮೇಲೆ ನೋಡಿ) ಅತಿಯಾ ಕುಳಿತುಕೋ. ಈಗ ನಿಮ್ಮ ತಾಯಿ ಹೇಗೆ ಇದ್ದಾರೆ. ನಿನ್ನೆ ಅವರ ಸ್ಥಿತಿಯು ಸುಖವಾಗಿರಲಿಲ್ಲ.

ಅತಿಯಾಖಾನಮ್—(ಕೋಪದಿಂದ ಅವಳ ದರ್ಪಿತವಾದ ಮುಖವು ವಿಕಾರ ಹೊಂದುತ್ತಿರಲು, ಉದ್ವೇಗದಿಂದ) ಸ್ವಾಮಿ, ವಂದನೆ. ಈಗವರು ಸಂಪೂರ್ಣವಾಗಿ ಸೌಖ್ಯವಾಗಿದ್ದಾರೆ. (ಇನ್ನು ಮುಂದೇನ ಹೇಳಬೇಕೆಂದು ಯೋಚಿ

ಸುತ್ತಿರುವಂತೆ ಒಂದು ಘಳಿಗೆ ತಡೆದು) ನೀವಿವತ್ತು ಹರಮ್ ಸರಾಕ್ಕೆ ಹೋಗ ಲಿಲ್ಲ, ಅಲ್ಲವೇ ?

ಇಜ್ಜತ್ ಪಾಷಾ—ಇಲ್ಲ, ಇವತ್ತು ನನಗೆ ಬಹಳ ಕೆಲಸವಿತ್ತು.

ಇಷ್ಟು ಹೇಳಿ ಇಜ್ಜತ್ ಪಾಷಾರವರು, ತನ್ನೊಡನೆ, ಮತ್ತೇನಾದರೂ ಮಾತು ಆಡಲ್ಪಡುವದೇನೋ ಎಂದು ಕಾದಿದ್ದು ಯಾರೂ ಏನೂ ಹೇಳ ದಿದ್ದುದರಿಂದ ಪುನಃ ಪತ್ರಿಕೆಯನ್ನು ತೆಗೆದುಕೊಂಡು ಓದಲಾರಂಭಿಸಿದರು.

ಅತಿಯಾಖಾನಮ್—[ಸಣ್ಣ ಧ್ವನಿಯಲ್ಲಿ] ಗಾಳಿಯು ನಿಂತಿರುವಮ ಮತ್ತೆ ಜೋರಾಗುವದರೊಳಗೇ ನಾನು ಮನೆಗೆ ಹೊರಟು ಹೋಗುವದುತ್ತಮ.

ಸನಿಯಾಖಾನಮ್—ಇವತ್ತು ರಾತ್ರಿ ಬಿರುಗಾಳಿಯೇಳುವದು. ನೀನು ದಾರಿಯಲ್ಲಿ ಹೋಗುತ್ತಿರುವಾಗಲೇ ಗಾಳಿ ಏಳಬಹುದಾದುದ್ದರಿಂದ ಇವತ್ತಿ ಲ್ಲಿಯೇ ಇರು.

ಇಜ್ಜತ್ ಪಾಷಾ—[ಕತ್ತೆತ್ತಿ ನೋಡಿ] ಖಾನಮ್ ಏಕೆ ಏನಾಯಿತು ?

ಸನಿಯಾಖಾನಮ್—[ಯಾವ ವಿಧವಾದ ಘಾಬರಿಯೂ ಇಲ್ಲದೆ] ನಾನು ಅತಿಯಳೊಡನೆ ಇವತ್ತು ರಾತ್ರಿ ಇಲ್ಲೇ ಇರಲು ಹೇಳುತ್ತಿರುವೆನು. ಮಳೆಯು ಬಂದುಬಿಡುವದರಲ್ಲಿರುವದು. ಮನೆಯಲ್ಲೆಲ್ಲರೂ, ಮಳೆಯ ಪೆಸೆಯಿಂದ ಹೊರಡಲಾಗಲಿಲ್ಲನೆಂದು ತಿಳಿದೇ ತಿಳಿದುಕೊಳ್ಳುವರು.

ಇಜ್ಜತ್ ಪಾಷಾ—[ಕೊಂಚ ಉದ್ರೇಕದಿಂದ] ಮಳೆಯೇನೂ ಇನ್ನೂ ಬಂದಿಲ್ಲ. ಆದರೆ ಅವಳಿಗಿಷ್ಟವಿದ್ದರೆ ಇರಬಹುದು. ಏನು ಅತಿಯಾ, ಏನುದ್ದೇಶವಿದೆ ?

ಅತಿಯಾಖಾನಮ್—[ಉಡುಗಿದ ಧ್ವನಿಯಿಂದ] ಹೋಗದಿರಲು ನನಗೆ ಬಹಳ ಇಷ್ಟ. ಯಾಕೆಂದರೆ ನಿಮ್ಮ ಬಳಿ ಇರುವದು ನನಗೆ ಬಹಳ ಸೊಗಸುತ್ತದೆ.

ಈ ಹೊಗಳಿಕೆಯು ಏನೂ ಫಲಕಾರಿಯಾಗಲಿಲ್ಲ-ಇಜ್ಜತ್ ಪಾಷಾ ರವರು ಕೊಂಚ ಅಸಮಾಧಾನದಿಂದ ಭುಜವನ್ನಲ್ಲಾಡಿಸಿ ಮತ್ತೆ ಪತ್ರಿಕೆಯ ನ್ನೋದಲು ಶುರು ಮಾಡಿದರು.

ಸನಿಯಾಖಾನಮ್—[ಬೇಗನೆ] ಹಾಜಿರೆ, ಮಕ್ಕಳೊಡನೆ ಹೇಗಾಯಿತು ? ಆದರೆ, ನಿನಗೆ ಮಕ್ಕಳನ್ನು ಕಂಡರೆ ಇಷ್ಟವೇ ಹೇಳು.

ನಾನು—ಅತ್ಯಂತ—ಏಸ್ ತಂತ್ರನಿಯಾದಲ್ಲಿರುವಾಗ್ಗೆ ಅಧಮ್ ಬೇಯುವರ ಮಕ್ಕಳೂ ಅಲಿಬೇಯುವರ ಮಕ್ಕಳೂ ನನ್ನನ್ನು ಪ್ರೀತಿಸುತ್ತಿದ್ದರು. ನಾನು ಸಹ ಅವರನ್ನು ಮುದ್ದಿಸುತ್ತಿದ್ದೆನು.

ಇಜ್ಜತ್‌ಪಾಷಾ—[ಪತ್ರಿಕೆಯು ಕೆಳಗಿನಿಂದ] ಅಲೀಬೇಯು ಯಾರು ?
ನಾನು—[ಮೆಲ್ಲನೆ-ಅವರ ತಂಗಿಯು ಅವರನ್ನು ಕಂಡು ಎಷ್ಟು ಹೆದರುತ್ತಿದ್ದರೂ ಅವರನ್ನು ನೋಡಿ, ಕೊಂಚವೂ ದಿಗುಲಾಗಲಿಲ್ಲ.] ವಹೀದಾ ಖಾನಮ್‌ಳ ಪತಿ.
ಇಜ್ಜತ್‌ಪಾಷಾ—ಹೌದು ಸರಿ. ಅವರು ಸರ್ಕಾರಿ, ಅಲ್ಲವೇ ?
ನಾನು—ಹೌದು, ಸ್ವಾಮಿ.

ಇದನ್ನು ಕೇಳಿ, ಅವರು ಪತ್ರಿಕೆಯನ್ನೆಸೆದು ಬಿಟ್ಟು, ತಕ್ಷಣವೇ ಈ ವಿಚಾರದಲ್ಲಿ ಸ್ವಾರಸ್ಯವನ್ನು ತೋರಿಸಹತ್ತಿದರು.
ಇಜ್ಜತ್‌ಪಾಷಾ—(ಆಜ್ಞೆ ಮಾಡುವಂತೆ) ಇಲ್ಲಿ ಬಂದು, ನನಗೆ ಖಸ್‌ತಂತನಿಯಾದ ವಿಚಾರವಾಗಿಯೂ, ನಸಿರುಲ್ಲಾಪಾಷಾರವರ ಸಂಸಾರದ ವಿಚಾರವಾಗಿಯೂ, ಕೊಂಚ ವಿಷಯಗಳನ್ನು ವಿವರಿಸಿ ಹೇಳು. ಎಲ್ಲರೂ ಏನು ಮಾಡುತ್ತಿರುವರು ? ಅಥಮ್‌ನಂತೂ ಸರ್ಕಾರೀ ನೌಕರನಾಗಿರಬಹುದೆಂದು ಕಾಣುತ್ತದೆ.

ನಾನು ಆಜ್ಞೆಯ ಮೇರೆಗೆ ಹತ್ತಿರ ಹೋದೆನು. ಅವರು ನಸಿರುಲ್ಲಾ ಪಾಷಾರವರ ವಿಚಾರವಾಗಿಯೂ ಅವರ ಮನೆಯ ಪ್ರತಿಯೊಬ್ಬರ ವಿಚಾರವಾಗಿಯೂ ಪ್ರಶ್ನಿಸಿದರು. ಸುನಿಯಾಖಾನಮ್‌ಳು ನಮ್ಮ ಹತ್ತಿರ, ಒಂದು ಕುರ್ಚಿಯ ಮೇಲೆ ಕುಳಿತುಕೊಂಡು, ನಾವು ಮಾತನಾಡುತ್ತಿರುವಾಗ ಮಧ್ಯೆಮಧ್ಯೆ ಏನನ್ನಾದರೂ ಹೇಳುತ್ತಿದ್ದಳು. ಅತ್ತಕಡೆ ಬಿರುಗಾಳಿಯಾರಂಭವಾಗಿ ಹೋಗಿ, ತನ್ನ ಶಕ್ತಿಸಾಹಸವನ್ನೆಲ್ಲಾ ಹೊರಗೆ ಮರಗಳ ಮೇಲೆ ಮುಗಿಸುತ್ತಿತ್ತು. ಕತ್ತಲಲ್ಲಿ ಮರಗಳು ಆಕಡೆಗೂ ಈಕಡೆಗೂ ಜೋರಿನಿಂದ ತೂಗಾಡುತ್ತಿದ್ದವು. ಇಜ್ಜತ್‌ಪಾಷಾರವರು ಒಂದು ನಿಮಿಷ ಸುಮ್ಮನೆ ಇದ್ದು ಕಿಟಕಿಯಿಂದ ಹೊರಗೆ ನೋಡುತ್ತಾ ಇದ್ದರು.
ಇಜ್ಜತ್‌ಪಾಷಾ—(ಥಟ್ಟನೆ) ನಾನು ಖಸ್‌ತಂತನಿಯಾದಲ್ಲಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ! ಗೌರ್ನರ್ ಕೆಲಸವಲ್ಲೇನೊ ಆನಂದವೂ ಇರುವದು. ಆದರೂ ರಾಜಧಾನಿಯವಾಸದ ಮುಂದೆ ಮತ್ತೆಲ್ಲವೂ ಸಪ್ಪೆಯು. ನಮ್ಮ ಮುದ್ದು ಪುರಾತನ ಬಾಸ್‌ಫರಸ್ ಎಷ್ಟು ರಮ್ಯವಾಗಿರುವದು ! ಏನು, ಖಾನಮ್, ನಿನಗೆ ಅದನ್ನು ಬಿಟ್ಟುಬಂದುದು ವ್ಯಸನವಾಗುತ್ತದೆಯೋ ಇಲ್ಲವೊ. ಅದು ನಿನಗೆ ಜ್ಞಾಪಕಬರುವದೋ ಇಲ್ಲವೇ ಇಲ್ಲವೋ ?

ಸನಿಯಾಖಾನಮ್‌ಳ ಮುಖವು ಮಂದಸ್ಮಿತದಿಂದ ಪ್ರದೀಪ್ತವಾಗಿ ಹೋಯಿತು. ಅದರಲ್ಲಿದ್ದ ಒಂದು ವಿಧವಾದ ಸೂಕ್ಷ್ಮತೆಯ ದೆಸೆಯಿಂದ,

ಮಾತನಾಡುತ್ತಿರುವಲ್ಲೇ ಮುಖದ ಎಂದಿನ ರೀತಿಯು ಬದಲಾಯಿಸಿ ಹೋಯಿತು. ಅವಳು ಯಾವಾಗಲೂ ಯಾವಕಾರಣದಿಂದಲೋ ವ್ಯಸ್ತಚಿತ್ತಳಾಗಿರುತ್ತಿದ್ದರೂ, ತನ್ನ ಪತಿಯುನ್ನು ಕಂಡರೆ ಅಸಂತೋಷಳಾಗಿರಲಿಲ್ಲವೆಂಬ ವಿಷಯುವು ಆಗ ವ್ಯಕ್ತವಾಯಿತು.

ಸನಿಯಾಖಾನಮ್— ಹೌದು, ಒಂದೊಂದು ಸಲ ನಿಜವಾಗಿ ಹಾಗೆ ಆಲೋಚನೆಯಾಗುತ್ತದೆ. ಆದರೂ ಅಲ್ಲಿಗೆ ಒಂಟಿಯಾಗಿ ಹೋಗಲು ಮನಸ್ಸು ಇಷ್ಟಪಡುವದಿಲ್ಲ. ಎಂದು ನಾವಿಬ್ಬರೂ ಒಟ್ಟಿಗೆ ಅಲ್ಲಿಗೆ ಹೋಗುವೆವೋ, ಆಂದಿನ ದಿನವು ನನ್ನ ಜನ್ಮದಲ್ಲೆಲ್ಲಾ ಸುದಿನನೆಂದೆಣಿಸಲ್ಪಡುವದು.

ಇಜ್ಜತ್‌ಪಾಷಾರವರು ಈಸಲ ಕೊಂಚವಾದರೂ ಕೋಪಗೊಳ್ಳದೆ, ನಗುತ್ತಿದ್ದುದನ್ನು ನೋಡಿ ನನಗಾಶ್ಚರ್ಯವಾಯಿತು.

ಇಜ್ಜತ್‌ಪಾಷಾ— ನಿಜ, ಬಹಳ ಚೆನ್ನಾಗಿರುತ್ತದೆ. ನಾವು ಇಲ್ಲಿಗೆ ಬರಲು, ಹಡಗಿನಿಂದ ನಸಿರುಲ್ಲಾಪಾಷಾರವರನ್ನೂ ಅಧನ್‌ಬೇಯನ್ನೂ ಬೀಳ್ಕೊಟ್ಟ ದಿನ, ನಾವು ಇಷ್ಟು ದೀರ್ಘಕಾಲ ಅವರಿಂದ ಅಗಲಿರುತ್ತೇವೆಂದು ಯಾರಿಗೆ ಯೋಚನೆಯಿತ್ತು! (ನನ್ನಕಡೆ ತಿರುಗಿ) ನಾಫಿಜ್‌ಬೇಯು ಏನುಮಾಡುತ್ತಿರುವನು? ಪರಸ್ಕರಿಯತ್‌ನಲ್ಲಿರುವನೆಂದು ಕೇಳಿದೆ. ಇನ್ನವನೂ ಶೀಘ್ರದಲ್ಲೇ ಮದುವೆಮಾಡಿಕೊಳ್ಳುವನೆಂದು ಕಾಣಿಸುತ್ತದೆ.

ಸನಿಯಾಖಾನಮ್— (ಬೇಗನೆ ಮಾತು ತಿರುಗಿಸಿ) ಇಬ್ರಾಹೀಂನು ಬರುತ್ತಿದ್ದಾನೆ. ಈ ಮಳೆಯಲ್ಲಿ ಏನಂಥಾ ಕೆಲಸವಿತ್ತೋ ಕಾಣೆ.

ಇಜ್ಜತ್‌ಪಾಷಾ— ದೇವರೇ ಬಲ್ಲ! ಅವನಿಗೆ ಮಳೆಯಲ್ಲಿ ನೆನೆಯುವದಕ್ಕೆ ಭಯುವಿಲ್ಲವೆಂದು ಕಾಣಿಸುತ್ತದೆ.

ಈ ಸಮಯದಲ್ಲಿ, ಬಾಗಿಲು ತೆರೆಯಲ್ಪಟ್ಟು, ಒಬ್ಬ ಹುಡುಗನು ಒಳಗೆ ಬಂದನು. ಮಳೆಯಿಂದ ಅವನ ಬಟ್ಟೆಗಳು ಪೂರಾ ತೋಯಿದುಹೋಗಿ, ಇಜ್ಜತ್‌ಪಾಷಾರವರ ಮುಂದೆ ಬಂದಾಗ ಕೊಂಚ ನಡುಗುತ್ತಿದ್ದನು.

ಇಜ್ಜತ್‌ಪಾಷಾ— ಏನು?

ಇಬ್ರಾಹೀಂ— (ಅತಿಸಾಖಾನಮಳಂತೆಯೇ ಹೇಳುತ್ತಾ) ಏನೂ ಇಲ್ಲ. ಯಾರೋ ಒಬ್ಬರು ಈ ಕೆಲವು ಕಾಗದಗಳನ್ನು ತಂದಿದ್ದರು. ನಾನೇಬಂದು ನಿಮಗೆ ಕೊಡುವೆನೆಂದು ಯೋಚಿಸಿದೆನು.

ಇಜ್ಜತ್‌ಪಾಷಾ— ನೀನೇಕೆತಕ್ಕೆ ಬಂದೆ? ಯಾರಾದರೊಬ್ಬ ಸೇವಕನ ಜತೆ ಕಳುಹಿಸಿದ್ದರಾಗುತ್ತಿತ್ತು.

ಹೀಗೆಂದು, ಕಾಗದಗಳನ್ನು ತೆಗೆದುಕೊಂಡರು. ಇಬ್ರಾಹೀಂನು

ಹೊರಡುವದಕ್ಕೆ ಹಿಂತಿರುಗಲು, ಸನಿಯಾಖಾನಮ್‌ಳು ನಿಲ್ಲಲು ಸಂಜ್ಞೆ ಮಾಡಿದಳು.

ಸನಿಯಾಖಾನಮ್— ಈ ಅವಸ್ಥೆಯಲ್ಲಿ ನೀನು ಮನೆಗೆ ಹೋಗಲಾರೆ. ಇಲ್ಲೇ ಊಟಮಾಡಿ, ಮಳೆಯು ನಿಂದಿದ್ದರೆ ಇಲ್ಲಿಯೇ ಮಲಗಿಕೊ.

ಇಜ್ಜತ್‌ಪಾಷಾ— (ತೀವ್ರತೆಯಿಂದ) ಶುದ್ಧ ವ್ಯರ್ಥ, ನೆನೆದರೆ ಅವನಿಗೆ ಕೇಡೇನಾಗುತ್ತದೆ! ಇಷ್ಟವಿದ್ದರೆ ಇಲ್ಲಿ ಊಟಮಾಡು–ಆದರೆ ಮನೆಗೆ ಹೋಗಿಮಲಗಿಕೋ. ಮಳೆಯಿಂದ ನಿನಗೇನೂ ಕೆತುಕಾಗುವದಿಲ್ಲ.

ಇಬ್ರಾಹೀಂನು ವಿನಯದಿಂದ ಸಲಾಮನ್ನು ಮಾಡಿ ನಿಂತಿದ್ದನು. ನಾನು ಕನಿಕರದಿಂದ ಅವನಕಡೆ ನೋಡಿದೆನು. ಅವನ ಮುಖದ ಮೇಲೆ ಸ್ವಲ್ಪ ಶಿಡುಬಿನ ಕಲೆಯಿತ್ತು. ಚಿಕ್ಕಚಿಕ್ಕದಾದ ಬೂದಿಬಣ್ಣದ ಕಣ್ಣುಗಳು, ಅವುಗಳಿಂದ ತುಂಟತನವೂ ಚಾಲಾಕಿಯೂ ಹೊರಹೊಮ್ಮುತ್ತಿದ್ದವು–ದಪ್ಪ ತುಟಿಗಳು, ದೊಡ್ಡದೊಡ್ಡ ಕಿವಿಗಳು. ನೆಂದಿದ್ದ ಕಾರಣ ನಡುಗುತ್ತಾ ಒದ್ದಾಡುತ್ತಿದ್ದುದನ್ನು ನೋಡಿದರೆ ಪ್ರತಿಯೊಬ್ಬರಿಗೂ ಕನಿಕರ ಉಂಟಾಗುತ್ತಿತ್ತು.

ಸನಿಯಾಖಾನಮಳಿಗು ಸಹ ಇದೇ ಭಾವನೆಯಾದುದರಿಂದ ಅವಳು ಎದ್ದು, ಅವನನ್ನು ತನ್ನ ಸಂಗಡ ಬರಲು ಸನ್ನೆಮಾಡಿದಳು. ಅವನ ಬಟ್ಟೆಗಳಿಂದ ನೀರುತೊಟ್ಟಿಕ್ಕಿ ನೆಲದಮೇಲೆ ಹರಿಯುತ್ತಿದ್ದುದರಿಂದ, ಅವನನ್ನು ಮೈಒಣಗಿಸಿಕೊಳ್ಳುವಂಥಾ ಸ್ಥಳಕ್ಕೆ ಕರೆದುಕೊಂಡುಹೋಗುತ್ತಿದ್ದಂತೆ ಕಾಣಿಸಿತು. ಇಜ್ಜತ್‌ಪಾಷಾರವರು ಸ್ವಲ್ಪಹೊತ್ತು ತಮ್ಮ ಕಾಗದಗಳನ್ನು ಮೌನದಿಂದ ಓದುತ್ತಿದ್ದು ಅನಂತರ ಮತ್ತೆ ಮೇಲೆ ನೋಡಿದರು.

ಇಜ್ಜತ್‌ಪಾಷಾ— ತಂದೆಯವರು ಹೇಗಿದ್ದಾರೆ ?

ಇಷ್ಟು ಹೇಳಿ ನಿಲ್ಲಿಸಿಬಿಟ್ಟು, ಅತಿಯಾಖಾನಮಳಿಗೆ ಹೀಗೆ ಕೇಳಿದರು–

"ಇಬ್ರಾಹೀಮನು ಎಲ್ಲಿ ?"

ಅತಿಯಾಖಾನಮ್— ಈಗತಾನೆ ಹೋದನು. ಕರೆಯಲೇ ?

ಇಜ್ಜತ್‌ಪಾಷಾ— ಬೇಡ. ಮನೆಗೆ ಹೊರಟುಹೋದನೇನು ?

ಅತಿಯಾಖಾನಮ್— ಇರಬಾರದು. ಪ್ರಾಯಶಃ ಸನಿಯಾಖಾನಮ್‌ಳು ಅವನನ್ನು, ಬಟ್ಟೆಗಳನ್ನು ಒಣಗಿಸಿಕೊಳ್ಳಲು, ಬೇರೆಕೊಠಡಿಗೆ ಕರೆದುಕೊಂಡು ಹೋಗಿರಬಹುದು. ಹೋಗಿ ನೋಡಿಕೊಂಡು ಬರಲೇ ?

ಇಜ್ಜತ್‌ಪಾಷಾ— (ಕುತ್ಸಿತರಾಗಿ) ಅವಶ್ಯಕತೆಯೇನೂ ಇಲ್ಲ. ಇವತ್ತು ನೀನು ತಂದೆಯವರನ್ನು ನೋಡಿದ್ದೆಯಾ ?

ಅತಿಯಾಖಾನಮ್— ಹೌದು, ನಿನ್ನೆ ಸಾಯಂಕಾಲ ಕಳೆಯುವದು ಬಹಳ

ಹಿಂಸೆಗೂಡಾಯಿತು. ಇವತ್ತು ಅವರ ಸ್ಥಿತಿಯು ಇನ್ನೂ ಕೇಡಾಗಿರುವದೆಂದು ಅಮ್ಮಾವರು ಹೇಳುತ್ತಿದ್ದರು.

ಇಜ್ಜತ್‌ಪಾಷಾರವರು ಒಂದುಸಣ್ಣ ನಿಶ್ವಾಸವನ್ನು ಬಿಟ್ಟರು ಹಿಂದಿನ ಗೌರ್ನರಾಗಿದ್ದ ಹಾಫಿಜ್‌ಪಾಷಾರವರು ಈಗ ಪೂರ್ಣವಾರ್ಧಕ್ಯದಿಂದ ನರಳುತ್ತಿದ್ದರೆಂದೂ, ಅವರ ಬುದ್ಧಿಯು ಕೆಟ್ಟುಹೋಗಿತ್ತೆಂದೂ ದಾಸಿಯರಿಂದ ನಾನು ಕೇಳಿದ್ದೆನು. ಅದುಕಾರಣ, ಮನೆಯವರೆಲ್ಲರೂ ಇಜ್ಜತ್‌ಪಾಷಾರವರನ್ನು ಧಣಿಯೆಂದು ಭಾವಿಸುತ್ತಿದ್ದುದರಿಂದ, ಅವರ ಮೇಲಿನ ಭಾರವು ಮತ್ತೂ ಹೆಚ್ಚಾಗಿತ್ತು. ಹಾಫಿಜ್‌ಪಾಷಾರವರಿಗೆ ಹದಿನಾರು ಮಕ್ಕಳೂ ಒಂಭತ್ತುಜನ ಹೆಂಡತಿಯರೂ ಇದ್ದರು. ಇಜ್ಜತ್‌ಪಾಷಾರವರ ತಾಯಿಯು ಕಾಲವಾದ ನಂತರ (ಅದಾಗಿ ಎಷ್ಟೋ ವರ್ಷಗಳಾಗಿ ಹೋಗಿದ್ದವು) ಹಾಫಿಜ್‌ಪಾಷಾರವರು ತಮ್ಮ ಬೇರೆಯಾವ ಹೆಂಡತಿಯನ್ನೂ ಮನೆಗೆ ಯಜಮಾನಿಯನ್ನಾಗಿ ಮಾಡಲಿಲ್ಲ. ಈಗ ಮನೆಗೆ ಯಜಮಾನರ್ಯಾರೂ ಇಲ್ಲದಿದ್ದುದೇ ಮನೆಯವರೆಲ್ಲರೂ ಇಜ್ಜತ್‌ಪಾಷಾರವರನ್ನು ಇಷ್ಟು ಗೌರವಿಸುತ್ತಿದ್ದುದಕ್ಕೆ ಕಾರಣವಾಗಿ ತೋರುತ್ತಿತ್ತು. ಈಗ ಅವರಿಗೆ ಅಣ್ಣತಮ್ಮಂದಿರ ಮೇಲೂ ಮಲತಾಯಿಯರ ಮೇಲೂ ಸರ್ವಾಧಿಕಾರವಿದ್ದುದರಿಂದ, ಅವರುಗಳು ಸಹ ಅತಿಯಾಖಾನಮ್ ಇಬ್ರಾಹೀಮರಂತೆ, ಅವರೊಡನೆ ನಿಜವಾಗಿ ಬಹು ಮರ್ಯಾದೆಯಿಂದ ನಡೆದುಕೊಳ್ಳುತ್ತಿದ್ದರೆಂದು ಕಾಣುತ್ತದೆ.

ಇಷ್ಟರೊಳಗೆ ಸನಿಯಾಖಾನಮಳು ಇಬ್ರಾಹೀಂನನ್ನು ಸಂಗಡ ಕರೆದುಕೊಂಡು ಹಿಂತಿರುಗಿ ಬಂದಳು. ಇಬ್ರಾಹೀಂನ ಸ್ಥಿತಿಯು ಈಗ ಮುಂಚಿಗಿಂತ ಬಹಳ ಉತ್ತಮಗೊಂಡಿದ್ದುದಕ್ಕೆ ನಿದರ್ಶನವೇನೆಂದರೆ ಈಗವನು ನನ್ನನ್ನು ಚೆನ್ನಾಗಿ ದೃಷ್ಟಿಸಿನೋಡಿದನು. ಒಂದು ಘಳಿಗೆಯನಂತರ ಸೇವಕಿಯೊಬ್ಬಳು ಬಂದು, ಭೋಜನ ಸಿದ್ಧವಾಗಿರುವಾದದುದಾಗಿ ಹೇಳಲು, ನಾವೆಲ್ಲರೂ ಎದ್ದುನಿಂತೆವು.

ಇಜ್ಜತ್‌ಪಾಷಾ— (ಹೆಂಡತಿಯೊಡನೆ) ಹಾಜಿರೆಯು ನಮ್ಮ ಜತೆಯೇ ಊಟಮಾಡುತ್ತಾಳೆತಾನೆ ?

ಸನಿಯಾಖಾನಮ್— ಹೌದು.

ನಾನು ಮೆಲ್ಲಗಿರುವ ಧ್ವನಿಯಲ್ಲಿ ಬೇಡವೆಂದು ಹೇಳತೊಡಗಲು, ಆವಳು ಒಂದು ಮುದ್ದಿಟ್ಟು ನನ್ನ ಬಾಯಿಮುಚ್ಚಿಸಿಬಿಟ್ಟಳು.

ಸನಿಯಾಖಾನಮ್— (ಪ್ರೀತಿಯಿಂದ) ಪ್ರಿಯ ಹಾಜಿರೇ, ನೀನು ಇಲ್ಲಿ ನಮ್ಮ ಸ್ನೇಹಿತೆಯಂತೆ ಇರುವೆ. (ಕುಚೇಷ್ಟೆಯಿಂದ) ನಮ್ಮ ವಂಶದಲ್ಲಿ

ಒಬ್ಬನೇ ಒಬ್ಬ ಮನುಷ್ಯನಿಗೆ ದೇವರು ವಿವೇಚನೆ, ನೀತಿ, ಸೌಜನ್ಯ, ಎಲ್ಲವನ್ನೂ ದಯಪಾಲಿಸಿರುವನೆಂಬುದು ತಿಳಿದಿದ್ದೀಯಾ ?

ಹದಿಮೂರನೆಯ ಪರಿಚ್ಛೇದ

ಏಪ್ರಿಲ್ ತಿಂಗಳು– ಛಳಿಗಾಲವು ಹೊರಟುಹೋಗುತ್ತಲಿತ್ತು. ಯಾವ ಯಾವ ವಸ್ತುಗಳನ್ನು ಅದು ಕಾಲಕೆಳಗೆ ತುಳಿದುಹಾಕಿತ್ತೋ, ಅವೆಲ್ಲವಕ್ಕೂ ವಸಂತವು ತನ್ನ ಬಣ್ಣವನ್ನು ಕೊಟ್ಟು, ಹೊಸ ಜೀವವನ್ನು ತುಂಬಲಿಚ್ಛೆಯುಳ್ಳದಾಗಿತ್ತು. ಹೂಬಿಸಗಿಡಗಳ ಮೇಲೆ ಮೊಗ್ಗುಗಳು ಕಾಣಲಾರಂಭಿಸಿದವು. ಛಾವಣಿಯಮೇಲೆ ಹಬ್ಬಿದ್ದ ಗುಲಾಬೀ ಬಳ್ಳಿಯು, ಮೆಲ್ಲಮೆಲ್ಲನೆ ತನ್ನನ್ನು ತಾನು ಹಚ್ಚುಡುಪಿನಿಂದ ಸಿಂಗರಿಸಿಕೊಳ್ಳುತಲಿತ್ತು. ಅಲ್ಲಲ್ಲಿ ಒಂದೊಂದು ಕುಟ್ಮಲವು ಇತರ ಕುಟ್ಮಲಗಳಿಗಿಂತ ಹೆಚ್ಚು ಸುಟಿಯಾಗಿಯೂ ದಿಟ್ಟವಾಗಿಯೂ ಇದ್ದುದರಿಂದ, ಹೆದರುತ್ತಾ ಸಂಕೋಚಪಡುತ್ತಿರುವಂತೆ ಮೆಲ್ಲಮೆಲ್ಲನೆ ತಲೆಯನ್ನು ಹೊರಗಿಕ್ಕುತ್ತಿದ್ದವು. ಹಿಮಂತದಲ್ಲೆಲ್ಲಾ ವೇಗದಿಂದ ಬೀಸುತ್ತಿದ್ದ ವಾಯುವು, ಆ ಕುಟ್ಮಲಗಳ ಉಪಕಾರಕ್ಕಾಗಿಯೇ ಬೇಕೆಂದು ತನ್ನ ವೇಗವನ್ನು ಕಡಮೆ ಮಾಡಿಕೊಂಡಿತ್ತೋ ಎಂಬಂತೆ, ಮೂರು ನಾಲ್ಕು ದಿನಗಳಿಂದ ಮಂದತೆಯನ್ನು ತಾಳಿ ಉಷಃಕಾಲದ ತಂಗಾಳಿಯ ಸೊಬಗನ್ನು ಬೀರುತ್ತಿತ್ತು.

ನಾನಿಲ್ಲಿಗೆ ಬಂದು ಈಗ ಹತ್ತು ತಿಂಗಳುಗಳಾಗಿ ಹೋಗಿದ್ದವು. ನನ್ನ ಹಳೆಯ ಮನೆಯಲ್ಲಿ ಯಾವರೀತಿ ಒಗ್ಗಿಹೋಗಿದ್ದೆನೋ, ಅದೇರೀತಿ ಈ ಹೊಸ ಮನೆಯಲ್ಲೂ ಪಳಗಿಹೋಗಿದ್ದೆನು. ನಾನು ಯಾವ ಜನರೊಡನಿರುತ್ತಿದ್ದೆನೋ ಅವರ ರೀತಿವ್ಯವಹಾರಗಳಲ್ಲೆಲ್ಲಾ ಪರಿಚಯಹೊಂದಿದ್ದೆನು. ಆ ಮತ್ತೊಂದು ಮನೆಗೆ ಹೆಚ್ಚುಕಡಿಮೆ ದಿನಾ ಹೋಗುತ್ತಲಿದ್ದೆನು. ಅವರು ಒಬ್ಬರಿಗೊಬ್ಬರು ಆಡಿಕೊಳ್ಳುತ್ತಿದ್ದ ಲಜ್ಜಾಕರವಾದ ಮಾತುಗಳನ್ನೂ, ಚಾಡಿಮಾತುಗಳನ್ನು ಪರಸ್ಪರ ಕಲಹಗಳನ್ನೂ ನಿಸ್ಸಂಕೋಚವಾಗಿ ಕೇಳುವ ಅಭ್ಯಾಸವಾಗಿ ಹೋಗಿತ್ತು. ಅಲ್ಲಿ ಯಾವಾಗಲೂ ಒಂದು ದೊಂಬಿಗದ್ದಲವೆದ್ದಿರುತ್ತಿದ್ದುದಲ್ಲದೆ, ಅದೇರೀತಿಯಾದ ಕಾಡುಹರಟೆಗಳೂ ಆಗುತ್ತಲಿದ್ದವು–ಅದೂ ಅಲ್ಲದೆ ಮನೆಯವರೆಲ್ಲರೂ ನನಿಯಾ ಖಾನಮಳನ್ನು ಅತಿಯಾಗಿ ಮುಖಸ್ತುತಿಮಾಡುತ್ತಿದ್ದುದನ್ನೂ ಕಂಡೆನು. ಇಜ್ಜತ್ ಪಾಷಾರವರ ಬಳಿ ಯಾರ ಮಾತಾದರೂ

ನಡೆಯುವ ಹಾಗಿದ್ದರೆ ಸನಿಯಾಖಾನವುಳದೊಬ್ಬಳದೇ ಆಗಿದ್ದುದರಿಂದ, ಅವಳನ್ನು ಅಷ್ಟೂ ಅಷ್ಟು ಮನಸ್ಸಿನೊಳಗೆದ್ವೇಷಿಸುತ್ತಲೂ ಇದ್ದರು. ಇಜ್ಜತ್ ಪಾಷಾರವರ ಮನಸ್ಸಿನ ಆಳವನ್ನೂ ಕಂಡುಹಿಡಿದಿದ್ದೆನು. ಅವನು ತಮ್ಮ ಅಣ್ಣತಮ್ಮಂದಿರನ್ನೂ ಮಲತಾಯಿಯವರನ್ನೂ ಸರಿಯಾದ ರೀತಿಯಲ್ಲಿ ಕಾಣದಿದ್ದುದನ್ನು ಈಗ ನಾನು ತಪ್ಪೆನ್ನುತ್ತಿರಲಿಲ್ಲ. ಯಾಕೆಂದರೆ ಅವರ ಬಂಧುವರ್ಗದವರು ಯಾವ ವಿಧವಾದ ಶೀಲಕ್ಕೆ ಬದ್ಧರಾಗಿರಲಿಲ್ಲ. ಎಲ್ಲರಲ್ಲೂ ಅವಿವೇಕ ಅಗೌರವ ಮಿತಿಮೀರಿಯಿತ್ತು. ಇಜ್ಜತ್‌ಪಾಷಾರವರಂಥಾ ಸ್ವಭಾವದ ಮನುಷ್ಯನಿಗೆ, ಇಂಥಹ ಜನರೊಡನೆ ಇರುವದು ಕಷ್ಟಕರವಾಗಿತ್ತೆಂಬುದು ಇದರಿಂದ ಸ್ಪಷ್ಟವಾಗುವದು. ಈ ಕಾರಣದಿಂದ, ಸನಿಯಾಖಾನಮುಳು ಇಲ್ಲಿಯ ಜೀವನದ ರೀತಿಯನ್ನು, ನಸಿರುಲ್ಲಾಪಾಷಾರವರ ಮನೆಯಲ್ಲಿದ್ದ ಐಕಮತ್ಯ, ಹೊಂದಿಕೆ ಇವುಗಳೊಡನೆ ಹೋಲಿಸಿ, ಇದರ ಪರಿಣಾಮವನ್ನು ಕುರಿತು ಯೋಚಿಸುತ್ತಾ, ಯಾವಾಗೂ ವ್ಯಸ್ತಚಿತ್ತಳಾಗಿರುತ್ತಿದ್ದುದೇನೂ ಆಶ್ಚರ್ಯವಾಗಿರಲಿಲ್ಲ. ಆದರೀಗ ನನಗೆ ಇದ್ಯಾವುದರ ಯೋಚನೆಯೂ ಇರದೆ ನನ್ನ ಕೈಯಲ್ಲಿದ್ದ ಕೆಲಸದಲ್ಲಿ ನಾನು ನಿರತಳಾಗಿದ್ದೆನು-ಅದ್ಯಾವುದೆಂದರೆ ಅಥಮನಿಗೆ ಅವನ ಸ್ನೇಹಿತನೊಬ್ಬನು ಕಳುಹಿಸಿದ್ದ ನಾಯಿಮರಿಗಾಗಿ ಒಂದು ಬುಟ್ಟಿಯೊಳಗೆ ಹತ್ತಿಯ ದಿಂಬನ್ನಿಟ್ಟು ಹೊಲಿಯುತ್ತಿದ್ದೆನು.

ಸನಿಯಾಖಾನಮುಳು ಅತಿಯಾಖಾನಮುಳು, ಇಬ್ಬರೂ ಬಲೂತ್ ವೃಕ್ಷದಕೆಳಗೆ ಕುಳಿತುಕೊಂಡಿದ್ದರು. ನಾನು ಅವರ ಹತ್ತಿರವೇ ಹುಲ್ಲಿನ ಮೇಲೆ ಇದ್ದೆನು. ಮಕ್ಕಳು ನನ್ನ ಸುತ್ತಮುತ್ತ ಇದ್ದರು. ನಾಯಿಯೂ ನನ್ನ ಹತ್ತಿರ ಕುಳಿತಿತ್ತು. ನಾನು ಹತ್ತಿಯನ್ನು ತುಂಬಿ, ದಾರವನ್ನು ಹಾಕಿ ಬುಟ್ಟಿಯ ಮಗ್ಗಲಿಗೆ ಮೆತ್ತೆಯನ್ನು ಹೊಲಿದಿದ್ದೆನು. ಇನ್ನು ಕೆಳಭಾಗ ಮಾತ್ರ ಬಾಕಿಯಿತ್ತು. ಆದರೆ ಹತ್ತಿಯು ಉಬ್ಬಿಕೊಂಡು ಬುಟ್ಟಿಯು ಬಹು ಚಿಕ್ಕದಾಗಿ ಕಾಣಿಸುತ್ತಿರಲು, ಸನಿಯಾಖಾನಮ್ ಮತ್ತು ಅತಿಯಾಖಾನಮುಳ ಕಡೆ ನೋಡಿ ಹೀಗೆಂದು ಕೇಳಿದೆನು.

"ಇದು ಚಿಕ್ಕದಾಗುವದಿಲ್ಲ ತಾನೆ ?"

ಸನಿಯಾಖಾನಮ್— ಸ್ವಲ್ಪಬುಟ್ಟಿಗೆ-ನಾಯಿಯನ್ನು ಇಟ್ಟುನೋಡು.

ನಾಯಿಯನ್ನು ಇಟ್ಟುನೋಡಲು ಬುಟ್ಟಿಯು ಸರಿಯಾಗಿತ್ತಾದುದರಿಂದ, ನಾನು ಸುಮ್ಮನೆ ಹೊಲಿಯುತ್ತಾ, ಹಿಂದುಗಡೆಯಿಂದ ಯಾರೋ ಬರುವ ಸದ್ದಾಗುವವರೆಗೂ ಕುಳಿತಿದ್ದೆನು. ತಲೆಯೆತ್ತಿನೋಡಲು ಸನಿಯಾಖಾನಮುಳ ನೈದುನಂದಿರಾದ ಸೈಯದ್‌ಬೇಯೂ ಹುರ್ಶೇಬೇಯೂ ನನ್ನ

ಕಡೆ ಬರುತ್ತಿದ್ದರು.

ನಾನು ಕತ್ತುಬೊಗ್ಗಿಸಿಕೊಂಡು, ಕೋಪದಿಂದ ಸೂಜಿಯನ್ನು ಎಳೆದೆನು. ಯಾಕೆಂದರೆ,ಇವರಿಬ್ಬರನ್ನೂ ಕಂಡರೆ ನನಗೆ ಬದ್ಧದ್ವೇಷವಿತ್ತು-ಅದರಲ್ಲೂ ಹುರ್ಸೇಬೇಯೊಡನೆ-ಅವನು ಸಂಕೋಚವಿಲ್ಲದೆ ನನ್ನನ್ನು ಕಾಮುಕ ದೃಷ್ಟಿಯಿಂದ ನೋಡುತ್ತಿದ್ದನು. ಇಬ್ಬರೂ ಬಂದು ಆಗ ಕುಳಿತುಕೊಂಡರು. ಹುರ್ಸೇಬೇಯು ನನ್ನ ಮೇಲೆ ಬಹಳ ಹೊತ್ತು ದೃಷ್ಟಿಬೀರಿ ನನ್ನನ್ನು ಸನ್ಮಾನಿಸಿದುದರಿಂದ, ನನ್ನ ಮುಖವು ಸಿಟ್ಟಿನಿಂದ ಕೆಂಪಾಗಿಹೋಯಿತು. ಅವನಲ್ಲಿ ದುರ್ಮಾಗವು ತುಂಬಿ, ಪೌರುಷವೆಳ್ಳಷ್ಟಾದರೂ ಇರವಿದ್ದುದರಿಂದ, ನನ್ನನ್ನು ಸುಮ್ಮನೆಲ್ಲಿ ಕೆಣಕುವನೋ, ಎಂಬ ಭಯವು ನಿತ್ಯವೂ ನನಗಿರುತ್ತಿತ್ತು. ಆದರೂ ಸನಿಯಾಖಾನಮಳ ಎದುರಿಗೆ ಅವನು ಸರಿಯಾಗಿರುತ್ತಿದ್ದನೆಂದೂ ನನ್ನನ್ನು ಪೀಡಿಸಲು ಅವನಿಗೆ ಧೈರ್ಯವಿರುತ್ತಿರಲಿಲ್ಲವೆಂದೂ, ನಾನು ಚೆನ್ನಾಗಿ ತಿಳಿದಿದ್ದೆನು. ಸೈಯದ್‌ಬೇಗೆ ಸುಮಾರು ಇಪ್ಪತ್ತು ವರ್ಷವಿದ್ದಿರಬಹುದು, ಅವನೊಬ್ಬನಲ್ಲೇ ಆಮನೆಯಲ್ಲಿ ಕೊಂಚ ಮಾನಮರ್ಯಾದೆಯ ಗಂಧವಿದ್ದು, ಸರಿಯಾದ ನಡವಳಿಕೆ ಇದ್ದುದು. ಆದರೂ, ಅವನಿದನ್ನು ಎಲ್ಲಿ ಕಲಿತನೆಂಬುದು ಹೇಳುವದು ಕಷ್ಟವಾಗಿತ್ತು.

ಸೈಯದ್‌ಬೇ— (ಸನಿಯಾಖಾನಮಳಿಗೆ ಒಂದು ಕಾಗದವನ್ನು ಕೊಟ್ಟು) ಇಜ್ಜತ್‌ಪಾಷಾರವರು ನನ್ನೊಡನೆ ಈ ಕಾಗದವನ್ನು ಕೊಟ್ಟು ಕಳುಹಿಸಿ, ತಮಗೂ ಖುಸ್‌ತಂತನಿಯಾದಿಂದ ಬಂದಿರುವದೆಂದು ಹೇಳಿಕಳುಹಿಸಿರುವರು. ಅವರಿಗೆ ಪುರಸೊತ್ತಾದ ಕೂಡಲೆ ಹರಮ್‌ಸಾರಕ್ಕೆ ಬರುತ್ತಾರೆ.

ಸನಿಯಾಖಾನಮಳು ಬಹು ಶ್ರದ್ಧೆಯಿಂದ ಪತ್ರವನ್ನೋದಿದಳು. ಲಕ್ಕೋಟೆಯು ಅಕಸ್ಮಾತ್ ನನ್ನ ಹತ್ತಿರ ಬಂದು ಬೀಳಲು, ಅಕ್ಷರವನ್ನು ನೋಡಿ, ನಾಫಿಜ್‌ಬೇಯ ಪತ್ರವೆಂದು ಗುರ್ತಿಸಿದೆನು. ಬೇಗನೆ ನಾನು ಕಣ್ಣೆತ್ತಿ ಮೇಲೆ ನೋಡಲು, ಪತ್ರವು ಬಹಳ ದೊಡ್ಡದಾಗಿತ್ತೆಂದು ತಿಳಿಯಿತು. ಅದನ್ನು ಓದುತ್ತಓದುತ್ತ ಸನಿಯಾಖಾನಮಳ ಮುಖವು ಬಿಳಿಚಿಕೊಂಡು ಹೋಯಿತು. ಕಾಗದವನ್ನು ಓದಿ ಪೂರೈಸಿ, ಸನಿಯಾಖಾನಮಳು ಎದ್ದು ನಿಂತು, ಒಳಗೆ ಹೋಗಲುದ್ಯಮಿಸಿ, ನನ್ನನ್ನೂ ಬರಲು ಸನ್ನೆಮಾಡಿದಳು. ಬಹುಶಃ ಯಾವುದೋ ಒಂದು ದುಸ್ಸಮಾಚಾರವಿರಬಹುದೆಂದೂ, ನನಗದನ್ನು ತಿಳಿಸುವದು ಅವಶ್ಯಕವೆಂದು ಅವಳಿಗೆ ಕಂಡಿರಬಹುದೆಂದೂ, ನಾನು ಮನಸ್ಸಿನಲ್ಲಿ ಭಯಪಡುತ್ತಾ ಎದ್ದುನಿಂತೆನು. ನಾವಿಬ್ಬರೂ ಒಟ್ಟಿಗೆ ಡ್ರಾಯಿಂಗ್ ರೂಮನ್ನು ಬಂದುಸೇರಲು, ಸನಿಯಾಖಾನಮಳು ನನ್ನನ್ನು

ಹೀಗೆ ಸಂಬೋಧಿಸಿದಳು-

"ಹಾಜಿರೇ, ಮನೆಯಿಂದ ಕಾಗದ ಬಂದಿರುವದು. ನಿನಗೆ ನಾನು ತಿಳಿಸಬೇಕೆಂದಿರುವೀ ವರ್ತಮಾನದಿಂದ ನಿನಗೆ ವ್ಯಥೆಯುಂಟಾಗಬಹುದು. ಇದು ಸಾಫಿಜ್‌ಜೇಯ ಪತ್ರವು. (ಒಂದು ನಿಮಿಷ ತಡೆದು, ನನ್ನ ಭುಜದ ಮೇಲೆ ಕೈಯಿಟ್ಟು) ಅವನು ಅತಿಯಳನ್ನು ವಿವಾಹವಾಗಲು ಕೇಳಿರುವನು."

ನಾನು ಸುಮ್ಮನೆ ನಿಂತಿದ್ದೆನು. ಆಗ ನನ್ನ ಸ್ಥಿತಿಯು ಹೇಗಿತ್ತೆಂದರೆ, ನನ್ನನ್ನು ಯಾರಾದರೂ ಕೊಲ್ಲುತ್ತಿದ್ದರೂ, ನನ್ನಿಂದ ಅಲ್ಲಾಡಲಾಗುತ್ತಿರಲಿಲ್ಲ. ಕಾಗದವನ್ನು ಓದುತ್ತಿರುವಾಗ, ಸನಿಯಾಖಾನಮಳ ಮುಖವು ವಿವರ್ಣ ವಾದುದಕ್ಕೆ, ನಾನು ಏನೇನು ಕಾರಣವನ್ನು ತಾನೆ ಊಹಿಸಲಿಲ್ಲ. ವಿಧವಿಧ ವಾದ ಊಹೆಗಳಿಗೂ ದುರಾಲೋಚನೆಗಳಿಗೂ ಮನಸ್ಸಿನಲ್ಲಿ ಸ್ಥಾನಕೊಟ್ಟೆನು. ಆದರೆ ನನ್ನ ದೌರ್ಭಾಗ್ಯದಪಾತ್ರೆಯು ತುಂಬಿಹೋಗಲು, ಅವನು ಮದುವೆ ಯಾಗುವದೊಂದೇ ಕಡಿಮೆಯಾಗಿತ್ತೆಂದು, ನನಗೆ ಸಂಶಯ ಕೂಡ ಆಗಲಿಲ್ಲ. ನನ್ನ ಮೇಲೆ, ಇದ್ದಕಿದ್ದಹಾಗೆ ಸಿಡಿಲು ಬಿದ್ದಂತಾಯಿತು-ಹೃದಯವು ನಡೆ ಯುತ್ತಿರುವಹಾಗೆಯೇ ನಿಂತು ಹೋದಂತಾಯಿತು.

ಸನಿಯಾಖಾನಮ್— (ಒಂದು ಘಳಿಗೆಯ ನಂತರ) ಅವನ ಕಾಗದವು ಬಹಳ ಚೆನ್ನಾಗಿರುವದು. ಆದರೆ, ಅವನು ಸಂತೋಷದಿಂದ ಮದುವೆಯಾ ಗುತ್ತಾನೆಯೋ, ಎಂಬುದನ್ನು ನಾನು ತಿಳಿಯಲಾರದವಳಾಗಿರುವೆನು. ಅವನು ಏನು ಬರೆಯುತ್ತಾನೆಂದರೆ, "ನನಗೆ ಬೇಗನೆ ಮದುವೆ ಮಾಡುವ ದೊಂದೇ ನನಗೆ ಔಷಧವೆಂದು ತಂದೆಯವರೂ ಅಮ್ಮಾವರೂ ಯೋಚಿಸು ತ್ತಾರೆ. ಅವರನ್ನು ನಿರಾಕರಿಸುವದರಿಂದ ನನಗಾಗುವ ಅವಸ್ಥೆಯ ಭಯವು ನನಗೆ ಲೇಶವಿಲ್ಲದಿದ್ದರೂ, ನಾನು ಹಾಗೆ ಮಾಡಲಿಚ್ಛಿಸುವದಿಲ್ಲ. ಗುಣಾ ಢ್ಯಳೂ ವಿಶ್ವಾಸಶೀಲೆಯೂ ಆದೊಬ್ಬ ಸ್ತ್ರೀಯು ನನಗೆ ಸಿಕ್ಕಿ, ನಾನವಳನ್ನು ಕ್ರಮೇಣ ಪ್ರೀತಿಸಲಾರಂಭಿಸಿ, ಅವಳು ನನ್ನ ಮೇಲಿರುವ ಅದೂರದರ್ಶಿತ್ವ ವೆಂಬ ಪಿಶಾಚವನ್ನು ಓಡಿಸಲೆಂದು ಆಶಿಸುತ್ತೇನೆ. ನೀನೊಂದುಸಲ, ಅತಿಯಳ ವಿಚಾರವಾಗಿ ಹೇಳಿದ್ದೆ. ಅವಳು ನಿನ್ನ ಹತ್ತಿರವಿರುವದರಿಂದ, ನೀನು ಅವಳನ್ನು ಚೆನ್ನಾಗಿ ಅರಿತಿರುವೆಯಾದಕಾರಣ, ನನ್ನ ಭಾಗ್ಯ ನಿಷ್ಕರ್ಷೆ ಯನ್ನು ನಿನ್ನ ವಶಕ್ಕೊಪ್ಪಿಸಬೇಕೆಂದು ನಾನು ಮನಸ್ಸುಮಾಡಿರುವೆನು. ತಂದೆಯವರು ಇಜ್ಜತ್‌ಪಾಷಾರವರಿಗೆ ಬರೆದಿರುವರು. ಅವರೊಪ್ಪಿದರೆ, ಕಡೇಪಕ್ಷ ಬರುವತಿಂಗಳು ನಾನು ನಿಮ್ಮಲ್ಲಿ ಬಂದು ಸೇರುವೆನು. ಆದರೆ, ನನಗೆ ಒಂದೋ ಅಥವ ಎರಡು ತಿಂಗಳು ಮಾತ್ರ ರಜ ಸಿಕ್ಕುವದೆಂಬುದು

ದಯವಿಟ್ಟು ಜ್ಞಾಪಕವಿರಲಿ. ಆದುದರಿಂದ, ಅವಶ್ಯಕವಾದ ಏರ್ಪಾಡು ಗಳೆಲ್ಲವೂ ಮೊದಲೇ ಸರಿಯಾಗಿ ಮಾಡಲ್ಪಟ್ಟು, ತಡವಾಗದಂತಿರಲಿ. ಪ್ರಿಯ ಸಹೋದರೀ, ನನ್ನನ್ನು ನೀನು ತಿಳಿದಿಲ್ಲವಾದರೂ, ನಿನ್ನ ಮನೆಯವರ ವಿಷಯ ಇಷ್ಟಾದರೂ ಖಂಡಿತವಾಗಿ ತಿಳಿದಿರುವೆ–ಏನೆಂದರೆ ನಿನ್ನ ನಾದಿನಿಗೆ ನಮ್ಮ ಬಳಿ ಯಾವ ತರಹದ ಕಷ್ಟವೂ ಇರುವದಿಲ್ಲವೆಂದು. ನನ್ನ ಅದೃಷ್ಟ ಕ್ಕಾಗಿ ನಾನು ರೋದಿಸುತ್ತಿರುವೆನೆಂಬುದರಲ್ಲಿ ಸಂಶಯವಿಲ್ಲ. ಆದರೆ ನನ್ನ ಹೆಂಡತಿಯ ಮೇಲೆ ಎಂದಿಗೂ ನನ್ನ ಹೃದಯ ಸಂಕಟವನ್ನು ಹೊರಿಸುವ ದಿಲ್ಲ," ಎಂದು.

ಇನ್ನೂ ನನ್ನ ಬಾಯಿಂದ ಒಂದು ಮಾತೂ ಈಚೆಗೆ ಹೊರಡಲಿಲ್ಲ. ಅವನ ಕಾಗದದಲ್ಲಿ ಸಂತೋಷಕ್ಕೆ ಬದಲು ಅತ್ಯಂತ ಹೃದಯಸಂಕಟವು ಕಾಣಬರುತ್ತಿದ್ದುದು, ನನ್ನ ಮನಸ್ಸಿಗೆ ಬಹಳ ತಾಕಿತು. ಅದರಲ್ಲೂ, ನನ್ನ ದೆಸೆಯಿಂದುಂಟಾದ ನೋವನ್ನು ದೂರಗೊಳಿಸಲು, ಅವನು ಮದುವೆಮಾಡಿ ಕೊಳ್ಳುತ್ತಾನೆಂಬುದು ತಿಳಿದುದರಿಂದ, ಮತ್ತಷ್ಟು ಹೆಚ್ಚು ದುಃಖವಾಯಿತು. ನಾನೇ ಸಂತೋಷದಿಂದ ಅವನನ್ನು ಬಿಟ್ಟು ಬಂದಿದ್ದೆನು-ಅವನನ್ನು ಬಿಟ್ಟು ಬರುವಾಗ, ಇದರ ಕೊನೆಯೇನಾಗಬಹುದೆಂಬ ವಿಚಾರವನ್ನು ನಾನು ತಿಳಿಯಲೂ ಬಹುದಾಗಿತ್ತಾದರೂ, ನಾಫಿಜ್‌ಬೇಯ ಮದುವೆಯ ಸಮಾ ಚಾರವು ನನ್ನ ಹೃದಯವನ್ನು ಕಠಿಣವಾಗಿ ಘಾಯಗೊಳಿಸಿತು.

ಸನಿಯಾಖಾನಮ್—(ಅದೇಪ್ರಕಾರ ವ್ಯಥೆಯಿಂದ) ಅವನು, ಅಲ್ಲಿ ಕೆಲವು ಕಾಲದಿಂದ ಸುತ್ತಲಾರಂಭಿಸಿರುವೆನೆಂದೂ ಬರೆಯುತ್ತಾನೆ. ಅಥಮ್‌ಬೇಗೆ ರುಮೇಲಿಯಲ್ಲಿ ಯಾವುದೋ ಒಂದು ಸ್ಥಾನಸಿಕ್ಕಿರುವದಂತೆ. ಅವನು ಹೆಂಡತಿಮಕ್ಕಳೊಡನೆ ಅಲ್ಲಿರುವನಲ್ಲದೆ, ಇನ್ನು ಮೂರುವರ್ಷಗಳವರೆಗೂ ಖುಸ್ತಂತನಿಯಾಕ್ಕೆ ಬರುವದಿಲ್ಲವಂತೆ. (ಒಂದು ನಿಮಿಷಾನಂತರ) ನಾಫಿಜ್‌ನು ಈ ವಿಚಾರದ ಭಾರವನ್ನೆಲ್ಲಾ ಸಂಪೂರ್ಣವಾಗಿ ನನ್ನ ಮೇಲೆ ಬಿಟ್ಟಿರುವದರಿಂದ, ನನಗೆ ಸ್ವಲ್ಪ ಹಿಂತೆಗೆಯುವಂತಾಗುತ್ತಿದೆ. ನಾನು ಅಥಮ್‌ನಿಗೆ ಅತಿಯಳ ವಿಚಾರ ಬರೆದ ಕಾಲದಲ್ಲಿ, ಅವಳ ಗುಣವನ್ನು ಈಗ ತಿಳಿದಿರುವಷ್ಟು ಆಗ ತಿಳಿದಿರಲಿಲ್ಲ. ನಾಫಿಜ್‌ನಿಗೆ, ಅವನ ಪ್ರೀತಿಗೂ ಸನ್ಮಾನಕ್ಕೂ ಅರ್ಹಳಾದಂಥಾ ಹುಡುಗಿಯು ಸಿಕ್ಕಬೇಕಾದುದು ಅವಶ್ಯಕ ವಾಗಿರುವದು. ಅವನ ಹೃದಯದಲ್ಲಿ ಈ ಪ್ರವೃತ್ತಿಗಳನ್ನು ಉತ್ತೇಜನ ಮಾಡುವಂಥಾ ಗುಣಗಳು, ಅತಿಯಳಲ್ಲಿರುವದು ನನಗೆ ಸಂದೇಹವಾಗಿದೆ– ಅದರಲ್ಲೂ, ಅವನದು, ಇಷ್ಟೆಲ್ಲವನ್ನೂ ಪರೀಕ್ಷಿಸುವ ಸ್ವಭಾವವಾಗಿರುವದ

ರಿಂದ, ಸದ್ಯಕ್ಕೆ ಈ ಸಮಯದಲ್ಲಿ ಏನನ್ನು ಹೇಳುವದೂ ಸರಿಯಲ್ಲ-ಯಾಕೆಂದರೆ-ಅತಿಯುಳು ಕೊಂಚ ಹೆಚ್ಚು ಗರ್ವಿಷ್ಟೆಯೂ, ಸ್ವಾರ್ಥಪರಳೂ ಆಗಿರುವ ವಿನಾ, ಮತ್ತ್ಯಾವ ದೋಷ ದುರ್ಗುಣವೂ ಅವಳಲ್ಲಿಲ್ಲ. ಅದೂ ಅಲ್ಲದೆ, ಈಗ ನಾನವನನ್ನು ಬೇಡನೆಂದು ಹೇಳಬೇಕಾದರದು ಅಸಾಧ್ಯವು. ಅವನು ಅತಿಯುಳನ್ನು ವಿವಾಹವಾಗಲು ಕೇಳಿಬಿಟ್ಟಿರುವದರಿಂದ, ಇನ್ನು ಅದನ್ನು ಹಿಂದಕ್ಕೆ ತೆಗೆದುಕೊಳ್ಳುವದು ಸಾಧ್ಯವಿಲ್ಲ.

ನಾನು—(ಮನಸ್ಸನ್ನು ಸ್ವಾಧೀನಕ್ಕೆ ತಂದುಕೊಳ್ಳುತ್ತಾ) ಇಲ್ಲ. ಈಗದು ಸಾಧ್ಯವಿಲ್ಲ. ಆದರೆ, ಅವನಿಲ್ಲಿಗೆ ಬರುವನಾದುದರಿಂದ, ನನ್ನನ್ನು ನೋಡಿಬಿಡುವನು. ಈಗ ನಾನೇನು ಮಾಡಲಿ! ಮತ್ತೆಲ್ಲಿಯಾದರೂ ಹೊರಟು ಹೋಗಲೇ ?

ಕನಿಯಾಖಾನಮ್—ಯಾಕೆ ? ಏನೂ ಅವಶ್ಯಕವಿಲ್ಲ. ಇದಕ್ಕೆ ಸುಲಭವಾದ ಉಪಾಯವಿರುವದು. ತಂದೆಯವರಿಗೂ ಇದರ ಯೋಚನೆಯಿದ್ದೇ ಇರಬಹುದು. ನಾನು ಒಂದಲ್ಲ ಒಂದು ಮಾರ್ಗವನ್ನು ಹುಡುಕುವೆನೆಂದು, ಅವರು ತಿಳಿದಿರುವರು. ನೀನು ಅಮನೆಗೆ ಹೊರಟುಹೋಗು. ನಾಫಿಜ್‌ನು, ಎಲ್ಲವೂ ಶೀಘ್ರವಾಗಿ ಸಿದ್ಧಮಾಡಲ್ಪಟ್ಟಿರಬೇಕೆಂದು ಅಪೇಕ್ಷಿಸಿಟ್ಟಿರುವ ಕಾರಣ, ನಿನ್ನ ಸಹಾಯವು ಅಲ್ಲಿ ಅವಶ್ಯಕವಾಗಿರುವದು. ಅದರಿಂದ, ನೀನು ಇಲ್ಲದಿರುವದು ಯಾರಿಗೂ ತೋರುವದೂ ಇಲ್ಲ. ಅದೂ ಅಲ್ಲದೆ ಅವನ ವಿವಾಹವಾಗುವವರೆಗೆ, ಅವನು ಹಾಫಿಜ್‌ಪಾಷಾರವರ ಹರಮ್‌ಸರಾದೊಳಗೆ ಕಾಲಿಡಲಾರನು.

ಇಷ್ಟು ಹೇಳಿ ಸುಮ್ಮನಾಗಿ, ಅವಳು ನನ್ನ ಹತ್ತಿರ ಬಂದು ನನ್ನ ಸೊಂಟಕ್ಕೆ ತೋಳು ಹಾಕಿ ನನ್ನ ಹತ್ತಿರ ಕರೆದುಕೊಂಡು, ತನ್ನ ಶಿರವನ್ನು ತನ್ನ ಭುಜದ ಮೇಲೆ ಇರಿಸಿಕೊಂಡಳು.

ಕನಿಯಾಖಾನಮ್—(ಪ್ರೀತಿಯಿಂದ) ಪುಟ್ಟ ಹಾಜಿರೇ, ಅತಿಯುಳ ಬದಲು, ನಿನ್ನನ್ನು ನಾನು ನಾಫಿಜ್‌ನಿಗೆ ಕೊಟ್ಟಿದ್ದರೆ, ನನಗೆ ಎಷ್ಟು ಹೆಚ್ಚು ಸಂತೋಷವಾಗುತ್ತಿತ್ತೆಂಬುದನ್ನು ದೇವರು ಅರಿತಿರುವನು. ಆದರೆ, ದುರ್ದೈವದ ದೆಸೆಯಿಂದ ಇದು ಅಸಂಭವವು. ನೀನು ಇಲ್ಲಿಗೆ ಬಂದ ಕೆಲವು ದಿನಗಳನಂತರ, ನಾನು ಅಫಜ್‌ನಿಗೆ, ಇದು ಯಾವ ರೀತಿಯಲ್ಲಾದರೂ ಸಾಧ್ಯವೇ, ಇಲ್ಲವೇ, ಎಂದು ಬರೆದೂ ಇದ್ದೆನು. ಅವನಿಂದ ಬಂದ ಉತ್ತರವು, ನನ್ನ ಮನಸ್ಸಿನಲ್ಲಿ ಉಳಿದಿದ್ದ ಅಲ್ಪಸ್ವಲ್ಪ ಆಶೆಯನ್ನೂ ನಿರ್ಮೂಲಮಾಡಿ ಬಿಟ್ಟಿತು.

ನಾನೇನುತ್ತರವನ್ನು ಕೊಡಲಿಲ್ಲ. ನನ್ನ ಸ್ಥಿತಿಯು ಆಗ ಏನಾಗಿತ್ತೆಂದರೆ, ನನ್ನನ್ನು ಹೆಚ್ಚು ಕರುಣೆಯಿಂದ ಮಾತನಾಡಿಸಿದಷ್ಟೂ ನನ್ನ ಹೃದಯವು ರಕ್ತ ಬಿಂದುವನ್ನು ಹರಿಸುತ್ತಿತ್ತು. ಆದುದರಿಂದ ಇಜ್ಜತ್ ಪಾಷಾರವರ ಧ್ವನಿಯು ಬೇರೆ ಕೊಠಡಿಯಿಂದ ಕಿವಿಗೆ ಬೀಳಲು ನನಗೆ ಅತ್ಯಂತ ಸಂತೋಷವಾಗಿ, ಓಡಿ ನನ್ನ ಹಣೇಬರಹಕ್ಕಾಗಿ ಅಳಲು ಹೋದೆನು.

ಇಜ್ಜತ್ ಪಾಷಾರವರು ನಾಫಿಜ್ ಬೇಗೆ ಅತಿಯಳನ್ನು ಕೊಟ್ಟು ಮದುವೆಮಾಡಲು ಎಂದಿಗೂ ಇಲ್ಲವೆನ್ನುವದಿಲ್ಲವೆಂಬುವದರಲ್ಲಿ ನನಗೆ ಪೂರ್ಣವಾಗಿ ನಂಬಿಕೆಯಿತ್ತು. ನಾಫಿಜ್ ಬೇಯ ವಿಚಾರವಲ್ಲಿ ಜನರಿಗೆ ಮಹತ್ತರವಾದ ಆಶೆಗಳಿದ್ದವು—ಅವನು ಖಸ್ ತಂತನಿಯಾದಲ್ಲಿಯೇ ಒಂದು ಗೌರವ ಸ್ಥಾನವನ್ನಲಂಕರಿಸಿದ್ದನು. ಇಜ್ಜತ್ ಪಾಷಾರವರಿಗೆ, ನಸಿರುಲ್ಲಾ ಪಾಷಾರವರ ಪುತ್ರಿಯನ್ನು ವಿವಾಹವಾಗಿ ಸ್ವತಃ ಇಷ್ಟು ಲಾಭಉಂಟಾಗಿದ್ದಾಗ್ಗೆ ಅವರು ನಸಿರುಲ್ಲಾ ಪಾಷಾರವರ ಮನೆತನದಲ್ಲಿ ಇನ್ನೂ ಹೆಚ್ಚು ಬಾಂಧವ್ಯವನ್ನು ಬೆಳೆಸಲು ಇಲ್ಲವೆನ್ನುವದು ಹೇಗೆ ಸಾಧ್ಯವಾಗಿತ್ತು ? ಅದೂ ಅಲ್ಲದೆ, ಅತಿಯಳು ಒಳ್ಳೇವಂಶದಿಂದ ಬಂದವಳಾಗಿದ್ದುದರಿಂದಲೂ, ಈಗ ಇಜ್ಜತ್ ಪಾಷಾರವರಿಗೆ ಅಷ್ಟೇನೂ ಹೆಚ್ಚು ಪ್ರಖ್ಯಾತಿ ದೊರೆತಿಲ್ಲದಿದ್ದರೂ ಮುಂದೆ ದೊರೆಯುವ ಅವಕಾಶವಿದ್ದುದರಿಂದಲೂ, ಜನರಿಗೆ ಸಹ, ನಿಷ್ಕರ್ಷಿತವಾಗಿದ್ದೀ ವಿವಾಹವು ಅತ್ಯಂತ ಸಮ್ಮತವಾಗಿತ್ತು. ನನ್ನ ಮನಸ್ಸಿಗೆ ಆಳಿಗೆಯಲ್ಲಾದ ನಿರಾಶೆಯನ್ನು ದೂರಗೊಳಿಸಲು, ನಾನು ಬಹು ಪ್ರಯತ್ನಪಟ್ಟೆನಾದರೂ, ನಿಷ್ಪ್ರಯೋಜನವಾಯಿತು. ಒಬ್ಬ ಮನುಷ್ಯನನ್ನು ಮದುವೆಯಾಗುವದಿಲ್ಲವೆಂದು ನಿರಾಕರಿಸಿ, ಆಮೇಲೆ ಅವನು ಯಾವಜ್ಜೀವವೂ ಮತ್ಯಾರನ್ನೂ ಮದುವೆಯಾಗುವದಿಲ್ಲವೆಂದು ಆಶೆಯನ್ನಿಟ್ಟುಕೊಳ್ಳುವದು, ಎಷ್ಟು ವ್ಯರ್ಥವೂ ವಿವೇಕಶೂನ್ಯವೂ ಆದ ಮಾತಾಗಿರುವದು ! ಆದರೂ, ನಾಫಿಜ್ ಬೇಯು ಬೇರೊಬ್ಬ ಹೆಂಗಸಿಗೆ ಪತಿಯಾಗುವನೆಂಬ ಆಲೋಚನೆಯು ನನಗೆ ಸಹಿಸಲು ಆಗಲಿಲ್ಲ.

ಹದಿನಾಲ್ಕನೇಯ ಪರಿಚ್ಛೇದ

ನಾನು—(ಬಾಗಿಲಕಡೆ ತೋರಿಸುತ್ತಾ) ಬಾಗಿಲು ತೆರೆದಿದ್ದರೆ ಒಳ್ಳೆಯದು. ಈ ಚಿಕ್ಕಮನೆಯಲ್ಲಿ ಬಹಳ ಶೆಖೆಯಾಗುತ್ತದೆ.

ಆಗ ನಾನು ರೇಶ್ಮೇಬಟ್ಟೆಗಳ ಒಂದು ರಾಶಿಯ ಮುಂದೆ ಕುಳಿತು,

ಮದುವೆಯ ಬಟ್ಟೆಗಳನ್ನು ಕತ್ತರಿಸುತ್ತಿದ್ದೆನು. ಬಾಗಿಲು ತೆರೆದಿರಬೇಕೆಂಬ ಹೇಳಿದಮಾತು, ನಾನು ಅತಿಯಾಖಾನಮ್‌ಳ ತಾಯಿಯೊಡನೆ ಆಡಿದುದು. ಅತಿಯಾಖಾನಮ್‌ಳ ತಾಯಿಯು ಕುತ್ಸಿತರಾಗಿಯೂ ಅತಿನಷ್ಟರಾಗಿಯೂ ಇದ್ದರು. ಚಿಕ್ಕಮನೆಯು ಬಾಗಿಲಲ್ಲಿ ಮೇಲುಸೆರಗನ್ನು ಬಿಡುತ್ತಾ ನಿಂತುಕೊಂಡಿದ್ದರು.

ಅತಿಯಾಖಾನಮ್ ತಾಯಿ—ಬೇಡ, ಬಾಗಿಲನ್ನು ಹಾಕಿರುವದು ಒಳ್ಳೇದು. ಎಲ್ಲರೂ ಬಂದು ನನ್ನ ಮಗಳ ಸಾಮಾನುಗಳನ್ನು ನೋಡಿ, ಇಜ್ಜತ್‌ಪಾಷಾರವರೊಡನೆ ಹೋಗಿ, ಇಂಥಿಂಥಾ ಪದಾರ್ಥವು ವ್ಯರ್ಥವೆಂದು ಹೇಳುವದು ನನಗಿಷ್ಟವಿಲ್ಲ. ನನಗೆ ಬೇಕಾದ ಪದಾರ್ಥಗಳು ಸಿಕ್ಕುವದೇ ಬಹಳ ಕಷ್ಟವಾಯಿತು.

ಮದುವಣಗಿತ್ತಿಯ ಬಟ್ಟೆಗಳ ತಯಾರಿಯು ಸನಿಯಾಖಾನಮ್‌ಳ ಇಷ್ಟಾನುಸಾರ ಆಗಬೇಕಾಗಿದ್ದುದರಿಂದ, ಹಾಫಿಜ್ ಪಾಷಾರವರ ಹೆಂಡತಿಯರುಗಳೆಲ್ಲಾ ಅವನ್ನು ನೋಡಿದ್ದರೆ ತಾನೆ ಅಭ್ಯಂತರವೇನಿತ್ತೆಂಬುದು ನನಗೆ ತಿಳಿಯಲಿಲ್ಲ. ಆದರೆ ಚಚಿ ಯಿಂದೇನು ಪ್ರಯೋಜನವಾಗುತ್ತಿತ್ತು ? ಅವರು ಬಾಗಿಲನ್ನು ಹಾಕಿಕೊಂಡುಬಿಟ್ಟರು ನಾನು ಏನನ್ನೂ ಹೇಳಲಿಲ್ಲ. ಅವರು ಬಾಗಿಲನ್ನು ಹಾಕಿಕೊಂಡು ಕುಳಿತುಕೊಳ್ಳಲು, ನಾನು ಅವರನ್ನು ನೋಡುತ್ತಾ, ಮತ್ತೆ, (ಈ ಯೋಚನೆಯು ಮೊದಲೇ ನೂರು ಸಾರಿ ನನ್ನ ಮನಸ್ಸಿನಲ್ಲಿ ಬಂದಿತ್ತು) ಅತಿಯಾಖಾನಮ್‌ಳು ಸಹ ಒಂದಾನೊಂದು ಕಾಲಕ್ಕೆ ಅವಳ ತಾಯಿಯಂತೆಯೇ ದಪ್ಪನಾಗಿಯೂ ಮಂದ ಬುದ್ಧಿಯುಳ್ಳವಳಾಗಿಯೂ ಆಗುವಳೇ, ಎಂದು ಯೋಚಿಸಲಾರಂಭಿಸಿದೆನು. ಮಂದತೆಯು ಹೆಚ್ಚಾಗುವ ಸಂಭವವ್ಯಾವುದೂ ಕಾಣಿಸಲಿಲ್ಲ; ಏಕೆಂದರೆ ಈಗಾಗಲೇ ಮಗಳು ತಾಯಿಗೆ ಹೋಲಿಸಲ್ಪಟ್ಟರೆ ಕಡಿಮೆ ಬುದ್ಧಿಯುಳ್ಳವಳಾಗಿದ್ದಳು. ಸ್ಥೂಲತೆಯ ವಿಷಯವಾಗಿ ಹೀಗೆ ಹೇಳುವುದಕ್ಕಾಗುತ್ತಿರಲಿಲ್ಲ—ಯಾಕೆಂದರೆ—ತಾಯಿಯ ಮುಖದಲ್ಲಿ, ಅವರು ತನ್ನ ಕಾಲದಲ್ಲಿ, ಮಗಳಿಗಿಂತ ಹೆಚ್ಚು ಸೌಂದರವತಿಯಾಗಿಲ್ಲದಿದ್ದರೂ ಅಷ್ಟೇ ರೂಪವತಿಯಾಗಿದ್ದಳೆಂಬುದನ್ನು ಖಂಡಿತವಾಗಿ ಸೂಚಿಸುವ ಅನೇಕ ಲಕ್ಷಣಗಳು ಇನ್ನೂ ಕಾಣಿಸುತ್ತಿದ್ದವು. ಈಗ ಇಬ್ಬರನ್ನೂ ಸ್ವಲ್ಪ ದೃಷ್ಟಿಸಿ ನೋಡಿದರೆ ಕಾಣಬರುತ್ತಿದ್ದ ಸಾದೃಶ್ಯವು, ಆ ಕಾಲದಲ್ಲಿ ಅತಿ ಸ್ಪಷ್ಟವಾಗಿದ್ದಿರಬಹುದು.

ನಾನು—(ಖಾಲಿರಾಟೆಯನ್ನು ತೋರಿಸಿ) ಹೊಲಿಯುವದಕ್ಕೆ ಕೆಂಪುರೇಶ್ಮೇ ದಾರವು ಇನ್ನೂ ಬೇಕಾಗಿರುವದು ಸ್ವಲ್ಪ ತರಿಸಿಕೊಡಬೇಕು.

ಅತಿಯಾಖಾನಮ್‌ಳತಾಯಿ— (ಕತ್ತಿನಲ್ಲಿದ್ದ ಚೀಲದಿಂದ ತುಂಬಿದ್ದ ಮತ್ತೊಂದು ಸಣ್ಣ ಚೀಲವನ್ನು ತೆಗೆದು ವಿಶಾಲವಾದ ನನ್ನ ತೊಡೆಯಲ್ಲಿ ಮುಚ್ಚಿಟ್ಟುಕೊಂಡು) ಒಂದು ಪ್ಯಾಸ್ತರ್ ಸಾಕುತಾನೆ ?

ನಾನು—(ಅವರ ಜಿಪುಣತನವನ್ನೂ ದುರಾಸೆಯನ್ನೂ ನೋಡಿ ಜಿಗುಪ್ಸೆ ಹೊಂದಿ, ಹಿಂತೆಗೆಯುತ್ತಾ) ಸಾಲಲಾರದು. ಐದು ಪ್ಯಾಸ್ತರನ್ನು ಕೊಡಬೇಕಾಗುವದು.

ಒಂದು ಘಳಿಗೆ ಅವರು ಸುಮ್ಮನೆ ಚೀಲದ ಕಡೆ ನೋಡುತ್ತಿದ್ದು ಆಮೇಲೆ ಪ್ಯಾಸ್ತರನ್ನು ತೆಗೆದು ನನ್ನ ಕಡೆ ಎಸೆದರು.

ಅತಿಯಾಖಾನಮ್‌ಳತಾಯಿ—(ಮುಖಭಂಗಿ ಮಾಡಿಕೊಂಡು) ಇದನ್ನು ತೆಗೆದುಕೋ. ಆದರೆ ರೇಶ್ಮೆಯನ್ನು ಒಪ್ಪವಾಗಿ ಬಳಸಲೆಂಬುದು ನನ್ನ ಇಷ್ಟ. ನನ್ನ ಹತ್ತಿರ ಖಜಾನೆಯನ್ನು ಬಚ್ಚಿಟ್ಟುಕೊಂಡಿರುವೆನೆಂದು ನೀನು ತಿಳಿದುಕೊಂಡಿರುವಂತಿದೆ.

ನಾನು ಭುಜವನ್ನು ಮಾತ್ರ ಅಲ್ಲಾಡಿಸಿ ಸುಮ್ಮನಾಗಿ ಹೋದೆನು. ಮನಸ್ಸಿನಲ್ಲಾದರೋ, ಹೊಲಿಯುವ ಬಟ್ಟೆಗಳನ್ನೆಲ್ಲಾ ಅವರ ತಲೆಯ ಮೇಲೆ ತೆಗೆದೆಸೆದು, ಹೊರಟುಹೋಗಲೇ ಎಂದೆನಿಸಿತು. ಆದರೆ ವಿವೇಚನೆಯು ಅಡ್ಡಿ ಬಂದುದರಿಂದ ಸುಮ್ಮನೆ ಹೊಲಿಯುತ್ತಾ ಕುಳಿತುಕೊಂಡೆನು.

ಅತಿಯಾಖಾನಮ್‌ಳತಾಯಿ–ಮತ್ತೊಂದು ಸಮಾಚಾರ ನಿನಗೆ ತಿಳಿಯಿತೇ ? ಈಗ ತಾನೆ ಇಜ್ಜತ್‌ಪಾಷಾರವರು ಬಂದಿದ್ದರು. ನಾಫಿಜ್‌ಬೇಯು ಖಸ್ತಂತನಿಯಾದಿಂದ ಹೊರಟು ಬಿಟ್ಟಿರುವನೆಂದೂ, ನಾಳೆಯ ಹೊತ್ತಿಗೆ ಇಲ್ಲಿ ಬಂದು ತಲುಪಿರುವನೆಂದೂ ಹೇಳುತ್ತಿದ್ದರು. ಆದರೆ ಇವತ್ತು ಸಾಯಂಕಾಲವೇ ಬಂದುಬಿಡುವ ಸಂಭವ ಇದೆ–ನೋಡುವದಕ್ಕೂ ಮಾತನಾಡುವದಕ್ಕೂ ಹೇಗಿರುವನೋ ಗೊತ್ತಿಲ್ಲ. ಚೆನ್ನಾಗಿರುವನೇನು ?

ನಾನು—(ನನ್ನ ಹೃದಯವು ಬಡಿದುಕೊಳ್ಳುತ್ತಾ ತಲೆಯು ಸುತ್ತುತ್ತಿರಲು, ಧ್ವನಿಯನ್ನು ಸಾಧ್ಯವಾದಷ್ಟು ಹತೋಟಿಗೆ ತಂದುಕೊಳ್ಳುತ್ತಾ) ಹೌದು, ಬಹಳ ಚೆನ್ನಾಗಿರುವನು.

ಅವರು ಕಳೇಸಕ್ಕೆ ನೂರುಸಾರಿ ನನ್ನನ್ನು ಈ ಮಾತನ್ನು ಕೇಳಿದ್ದುದರಿಂದ, ಇನ್ನು ಈ ತರಹದ ಪ್ರಶ್ನೆಯನ್ನು ಅವರು ಮಾಡುವದಿಲ್ಲವೆಂದು ನಾನು ನಿರೀಕ್ಷಿಸಿಕೊಂಡಿದ್ದುದು ವ್ಯರ್ಥವಾಯಿತು.

ಅತಿಯಾಖಾನಮ್‌ಳತಾಯಿ—(ಸ್ವಲ್ಪ ಹೊತ್ತಾದ ನಂತರ) ಅವನ ಕೂದಲು ಕೆಂಚಗಿರುವದೇನು ನೀನು ಹೇಳುತ್ತೀ. ಸನಿಯಾಖಾನಮ್‌ಳ ಕೂದಲು

ಕಪ್ಪಗಿರುವದರಿಂದ, ಇದು ಆಶ್ಚರ್ಯಕರವಾದ ವಿಷಯವೋ ಅಲ್ಲವೋ.

ನಾನು— (ಬೇಗನೆ ದಾರವನ್ನು ಕಿತ್ತು) ಅವನು ಅವರಂತಿಲ್ಲ.

ಈ ಸಮಯದಲ್ಲಿ ಸನಿಯಾಖಾನಮಳು ಬಂದು ನಿಂತಳು. ನನ್ನ ಸಮೀಪಕ್ಕೆ ಬಂದು ನನ್ನನ್ನು ಪ್ರೀತಿಯಿಂದ ಮುದ್ದಿಸಿದಳು.

ಸನಿಯಾಖಾನಮ್— (ಸಣ್ಣ ನಿಟ್ಟುಸಿರನ್ನು ಬಿಟ್ಟು) ವತ್ಸೇ, ಹಾಜಿರೇ, ಆಯಾಸವಾಯಿತೇ ?– ಸಾಫಿಜ್‌ನು ಇವತ್ತು ಸಾಯಂಕಾಲ ಇಲ್ಲಿಗೆ ಬಂದು ಸೇರುವನು. ಇನ್ನು ಇದೆಲ್ಲಾ ಬೇಗ ಮುಗಿದುಹೋಗುವದು.

ಅತಿಯಾಖಾನಮಳತಾಯಿ— (ಉತ್ಸುಕತೆಯಿಂದ) ನನಗತ್ಯಂತ ಸಂತೋಷವಾಯಿತು. ತಾನು ಬರುವ ವರ್ತಮಾನವನ್ನು ಕೊಡಲು ಯಾರನ್ನಾದರೂ ಕಳುಹಿಸಿರುವನೇನು ?

ಸನಿಯಾಖಾನಮ್— ಹೌದು. ಯಾವನೋ ಒಬ್ಬನು ಬಂದಿರುವನು.

ನಾನು ಎದ್ದುನಿಂತು ಪ್ಯಾಸ್ತರನ್ನು ತೆಗೆದುಕೊಂಡು, ರೇಶ್ಮೇದಾರವನ್ನು ತರಿಸಲು ಹೊರಟೆನು. ಎಲ್ಲರಿಂದಲೂ ಬೇರೆಯಾಗಿ, ನನ್ನ ಚಿಂತೆಗಳೊಡನೆ ಏಕಾಂತದಲ್ಲಿರಲು ನನಗೆ ಬಹಳ ಆಶೆಯಾಗುತ್ತಿತ್ತು. ಎರಡನೇ ಕಾರಣವು ಅಲ್ಲಿಂದ ಆಗ ನಾನು ಹೊರಟು ಬಂದುದಕ್ಕೆ, ಯಾವುದೆಂದರೆ, ಇದು— ಸನಿಯಾಖಾನಮಳು ಸಾಧಾರಣವಾಗಿ ಈ ಮನೆಯಲ್ಲಿ ಹೆಚ್ಚು ನಿಲ್ಲುತ್ತಿರಲಿಲ್ಲ-ಹುಸೇನಬೇಯನು ತನ್ನ ತಾಯಿಯನ್ನು ನೋಡಲು ಬರುವ ಹೊತ್ತು ಇದೇ ಆಗಿತ್ತು-ನಾನು ಈ ಮನೆಗೆ ಬಂದಾರಭ್ಯ, ಸನಿಯಾಖಾನಮಳೊಡನಿರುವ ಸಂದರ್ಭವು ಬಹು ಕಮ್ಮಿಯಾಗಿದ್ದುದರಿಂದ, ಹುಸೇನಬೇಯನು ಮತ್ತೂ ಹೆಚ್ಚು ದುಶ್ಶೀಲನಾಗಿ ಹೋಗಿದ್ದನು. ಅವನ ದುಶ್ಚೇಷ್ಟೆಗಳನ್ನು ತಡೆದಿಡುವದು ನನಗೆ ಬಹು ಪ್ರಯಾಸವಾಗಿತ್ತು. ರೇಶ್ಮೇದಾರವು ಬರುವವರೆಗೂ ನಾನು ನನ್ನ ಚಿಕ್ಕಮನೆಯಲ್ಲೇ ಇದ್ದು, ಆಮೇಲೆ ಅದನ್ನು ತೆಗೆದುಕೊಂಡು, ಹಿಂದಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ಅತಿಯಾಖಾನಮಳ ತಾಯಿಯು ಸಿಕ್ಕಿದರು.

ಅತಿಯಾಖಾನಮಳ ತಾಯಿ– (ಘಾಬರಿಯಿಂದ) ಹಾಜಿರೇ, ನಡಿ. ಸಾಫಿಜ್‌ಬೇಯನು ಬಂದು ಬಿಡುವದರಲ್ಲಿರುವನು. ನಾವೆಲ್ಲರೂ ಅವನನ್ನು ಇಣಿಕಿ ನೋಡಲು ಹೋಗುತ್ತಿದ್ದೇವೆ. ಹಾಫಿಜ್‌ಪಾಷಾರವರ ಚಿಕ್ಕಮನೆಯ ಕಿಡಿಕಿಯಿಂದ, ಮುಂದುಗಡೆಯ ಪ್ರಾಂಗಣವು ಚೆನ್ನಾಗಿ ಕಾಣಿಸುವದು.

ನಾನು ಮಾತನಾಡದೆ, ಸುಮ್ಮನೆ ಅವರ ಹಿಂದೆ ಹೊರಟು, ಹಾಫಿಜ್ ಪಾಷಾರವರ ಕೊಠಡಿಯೊಳಕ್ಕೆ ಹೋದೆನು. ಅಲ್ಲಿ ಪ್ರತಿಯೊಂದು ಕಿಟಕಿಯು

ಬಳಿಯೂ ಹೆಂಗಸರ ಗುಂಪು ಸೇರಿತ್ತು. ಅಲ್ಲವರು ನಿಸ್ವಾಧೀನರಾಗಿ ಜ್ಞಾನ ವಿಲ್ಲದೆ ಬಿದ್ದಿದ್ದರೂ, ಅವರು ಮಲಗುವ ಮನೆಯು ಸಹ ಖಾಲೀಬಿಡಲ್ಪಟ್ಟಿರಲಿಲ್ಲ. ನಾನು ಸುತ್ತಲೂ ನೋಡಿದೆನು-ಎರಡು ಮೂರು ಕಿಡಿಕಿಯಬಳಿ ನನಗಾಗಿ ಜಾಗಮಾಡಲ್ಪಟ್ಟಿತ್ತು. ಆದರೂ ಹಾಫಿಜ್‌ಪಾಷಾರವರ ಈಸ್ಥಿತಿಯನ್ನು ನೋಡಿ, ನನಗಲ್ಲಿ ನಿಂತುಕೊಳ್ಳುವದು ಬಹಳ ಅನುಚಿತವಾಗಿ ಕಂಡು ಬಂದುದರಿಂದ, ಹೊರಟುಹೋಗಬೇಕೆಂದಿರುವಾಗ್ಗೆ, ಕೆಳಗಡೆ ಸಾಮಾನುಗಳನ್ನಿಟ್ಟಿದ್ದೊಂದು ಸಣ್ಣ ಕೋಣೆಯು ಜ್ಞಾಪಕಕ್ಕೆ ಬಂದಿತು. ಅಲ್ಲಿಂದ ಹೊರಗಡೆಯ ಅಂಗಳವು ಚೆನ್ನಾಗಿ ಕಾಣಿಸುತ್ತಿತ್ತೆಂಬುವದನ್ನು ಯೋಚಿಸಿಕೊಂಡು, ನಾನು ಕೆಳಗೆ ಓಡಿಹೋಗಿ, ಬಾಗಿಲನ್ನು ತೆಗೆದು ಒಳಗೆ ಹೊಕ್ಕೆನು. ಮತ್ಯಾರೋ ನನ್ನ ಹಿಂದೆಯೇ ಈ ಕೋಣೆಯೊಳಗೆ ಬಂದರು. ಹಿಂತಿರುಗಿ ನೋಡಲು ಅತಿಯಾಖಾನಮಳಾಗಿದ್ದಳು.

ಅತಿಯಾಖಾನಮ್— (ಘಾಬರಿಯಿಂದ) ಯಾರೊಡನೂ ಹೇಳದಿರುವಷ್ಟು ದಯವಿರಲಿ. ಅವನು ಹೇಗಿರುವನೆಂದು ನಾನೂ ನೋಡಲಪೇಕ್ಷಿಸುತ್ತೇನೆ. ಆದರೆ ನಾನಿಲ್ಲಿಂದ ಇಣಿಕಿ ನೋಡುತ್ತಿರುವೆನೆಂಬುವನು ಜನರಿಗೆ ತಿಳಿಯುವದು ನನಗಿಷ್ಟವಿಲ್ಲ.

ನಾನೊಂದು ಮಾತನ್ನೂ ಆಡದೆ ಅವಳಿಗೆ ಜಾಗಬಿಟ್ಟೆನು. ನಾವೀರ್ವರೂ ಕಿಡಕಿಯ ಹತ್ತಿರ ನಿಂತುಕೊಂಡು, ಇಜ್ಜತ್‌ಪಾಷಾರವರ ಸಹೋದರರೆಲ್ಲರೂ ಹಾಫಿಜ್‌ಬೇಯನ್ನು ಸ್ವಾಗತಿಸಲು ಸೇರಿದ್ದ ಶಿಲಾದ್ವಾರದ ಕಡೆ ನೋಡುತ್ತಿದ್ದೆವು.

ಅತಿಯಾಖಾನಮ್— (ನಿಟ್ಟುಸಿರು ಬಿಟ್ಟು ಮೆಲ್ಲನೆ) ಹುಸೇನನೂ ಆದಿಲನೂ ಅವನಿಗೋಸ್ಕರ ಗಾಡಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಇಜ್ಜತ್‌ಪಾಷಾರವರು ಒಳಗಿದ್ದಾರೆ.

ನಾನು ಆಶ್ಚರ್ಯದಿಂದ ಅವಳಕಡೆ ನೋಡಿದೆನು. ಅವಳು ಉತ್ಸಾಹದಿಂದ ತುಂಬಿದ್ದಳು ; ಹರುಷದಿಂದ ಅವಳ ನೇತ್ರಗಳು ಹೊಳೆಯುತ್ತಿದ್ದವು. ನನ್ನನ್ನು ತನಗಿಂತ ದರ್ಜೆಯಲ್ಲಿ ಕಡಮೆಯವೆಂದು ತಿಳಿದುಕೊಂಡಿದ್ದುದರಿಂದ, ನನ್ನ ಮುಂದೆ ಸಂಕೋಚಪಡಬೇಕಾದುದು ಅವಶ್ಯಕವಿಲ್ಲವೆಂದು ಅವಳು ಭಾವಿಸಿದ್ದಂತಿತ್ತು.

ಗಾಡಿಯ ಸಪ್ಪಳನ್ನು ಕೇಳಿ ನಾವಿಬ್ಬರೂ ಅತ್ತಕಡೆ ತಿರುಗಿ, ಹೊರಗೆ ಬಗ್ಗಿ ನೋಡಹತ್ತಿದೆವು. ಗಾಡಿಯು ಹತ್ತಿರಬಂದು, ಬಾಗಿಲಕಡೆ ತಿರುಗಲು ಒಳಗೆ ಮೂರು ಜನರು ಕುಳಿತಿದ್ದಂತೆ ಕಂಡಿತು. ನಾವಿದ್ದ ಕಿಡಿಕಿಯಿಂದ

ಬಾಗಿಲು ಚೆನ್ನಾಗಿ ಕಾಣಿಸುತ್ತಿತ್ತು. ನಾಫಿಜ್‌ಬೇಯು ಇಳಿದು ತನ್ನ ನೂತನ ಬಂಧುವರ್ಗದವರಿಗೆ ಸಲಾಮನ್ನು ಮಾಡುತ್ತಿರುವಾಗ, ಅವನು ನನಗೆ ಎಷ್ಟು ಸಮೀಪವಾಗಿದ್ದನೆಂದರೆ, ನಾನು ಇಷ್ಟಪಟ್ಟಿದ್ದರೆ ಕಿಡಿಕಿಯನ್ನು ತೆರೆದು ಕೈನೀಡಿ, ಅವನನ್ನು ಮುಟ್ಟಬಹುದಾಗಿತ್ತು. ಅವನ ಬೆನ್ನು ನನ್ನ ಕಡೆಗೆ ತಿರುಗಿದ್ದುದರಿಂದ ಅವನ ಮುಖವನ್ನು ನೋಡಲು ಆಗದಿದ್ದರೂ, ಅವನ ಧ್ವನಿಯು ಸ್ಪಷ್ಟವಾಗಿ ಕೇಳಿಸುತ್ತಿತ್ತು. ನನಗೆ ಅಷ್ಟು ಪರಿಚಯವಾಗಿದ್ದ ಹೃದಯರಂಜಕವಾದ ಆ ಹಳೇ ಧ್ವನಿಯು ಕಿವಿಗೆ ಬೀಳುತ್ತಲೇ, ನನಗೆ ತಾಳಲಾರದಂತಾಗಿ, ಅತಿಯಾಖಾನಮುಳು ನನ್ನ ಮುಖವನ್ನು ನೋಡದಿರಲೆಂದು, ತಲೆಯನ್ನು ಕಿಡಕಿಯ ಮೇಲಿಟ್ಟುಕೊಂಡೆನು.

ನಾಫಿಜ್‌ಬೇ— (ಸೈಯದ್‌ಬೇಯ ಪ್ರಶ್ನೆಗೆ ಉತ್ತರವಾಗಿ) ಹೌದು. ನಾನು ಕುದುರೆಯಮೇಲೆ ಬಂದೆನು. ಒಂಟೆಯ ಮೇಲೆ ಬಂದಿರಬಹುದೆಂದೇನೂ ತಿಳಿದುಕೊಳ್ಳಕೂಡದು. ಒಂದೇಸಲ ಮಾತ್ರ ಒಂಟೆಯ ಮೇಲೆ ಸವಾರಿ ಮಾಡಿ ಇನ್ನು ಎಂದೆಂದಿಗೂ ಹಾಗೆ ಮಾಡುವದಿಲ್ಲವೆಂದು ಪ್ರತಿಜ್ಞೆಮಾಡಿಕೊಂಡಿರುವೆನು.

ಈ ಸಮಯದಲ್ಲಿ ಇಜ್ಜತ್‌ಪಾಷಾರವರು ಹೊರಗೆ ಬಂದರು. ಅವರು ತಮ್ಮ ಮನೆಯವರೊಡನೆ ಹೊರತು, ಮಿಕ್ಕೆಲ್ಲರೊಡನೂ ಇರುತ್ತಿದ್ದಂತೆ, ಅತ್ಯಂತ ಹಸನ್ಮುಖರಾಗಿಯೂ ಹರ್ಷಚಿತ್ತರಾಗಿಯೂ ನಾಫಿಜ್‌ಬೇಯನ್ನು ಬಂದು ಕಂಡರು.

ಇಜ್ಜತ್‌ಪಾಷಾ-ಬಹಳ ಆಯಾಸಗೊಂಡಿರುವೆಯಲ್ಲವೇ ? ಬಾ, ಸ್ವಲ್ಪ ವಿಶ್ರಮಿಸಿಕೊಂಡರೆ, ಅನಂತರ ನಿನ್ನ ಅಕ್ಕನಬಳಿ ಕರೆದುಕೊಂಡು ಹೋಗುವೆನು.

ನಾಫಿಜ್‌ಬೇ— ನಾನಾದರೋ ಈಗಲೇ ಹೊರಡಲು ಸಿದ್ಧನಾಗಿರುವೆನು. ಅವಳನ್ನು ನೋಡಿ ಎಷ್ಟುಕಾಲವಾಗಿ ಹೋಗಿದೆಯೆಂದರೆ, ಅವಳು ಹೇಗಿರುವಳೆಂಬುದು ಸಹ ಜ್ಞಾಪಕವಿಲ್ಲ. ಅವಳನ್ನು ನೋಡಲು ಅತ್ಯಂತ ಕಾತರನಾಗಿದ್ದೇನೆ. ನನ್ನ ಸಾಮಾನುಗಳನ್ನು ಮದೀನದಲ್ಲಿ ಒಬ್ಬನೌಕರನ ಬಳಿ ಬಿಟ್ಟು, ದಾರಿಯ ಕಾವಲಿಗೆ ಸಿಪಾಯಿಯು ಸಿಕ್ಕಿದೊಡನೆಯೇ ಇಲ್ಲಿಗೆ ಬಂದು ಸೇರಬೇಕೆಂದು ಹೇಳಿಬಂದಿರುವೆನಾದುದರಿಂದ, ದಯವಿಟ್ಟು ಯಾರನ್ನಾದರೂ ಅವುಗಳನ್ನು ನೋಡಿಕೊಳ್ಳಲು ಮೊದಲು ಕಳುಹಿಸಬೇಕು.

ಇಜ್ಜತ್‌ಪಾಷಾರವರು ನೌಕರರಿಗೆ ಆಜ್ಞೆಮಾಡಲು ಹಿಂತಿರುಗಿದಾಗ, ನಾಫಿಜ್‌ಬೇಯು ಕೊಂಚ ಮುಂದಕ್ಕೆ ಬಂದು, ಒಂದು ಕಂಭವನ್ನು ಒರಗಿಕೊಂಡು ನಿಂತನು. ಅವನ ಮುಖವು ಈಗ ನನ್ನ ಕಡೆ ತಿರುಗಿತ್ತು.

ಮೊದಲಿಗಿಂತಲೂ ಕೃಶನಾಗಿಯೂ ರಕ್ತಹೀನನಾಗಿಯೂ ಕಾಣಿಸುತ್ತಿದ್ದನು. ಹಣೆಯ ಮೇಲೆ ಒಂದೆರಡು ಗೆರೆಗಳು ಸಹ ಬಿದ್ದಿದ್ದವು! ಅವು ಮೊದಲು ಇರಲಿಲ್ಲ. ಒಂದು ಘಳಿಗೆಯ ನಂತರ ಇಜ್ಜತ್‌ಪಾಷಾರವರು ಅವನೊಡನೆ ಹೀಗೆ ಹೇಳಿದರು.

ಇಜ್ಜತ್‌ಪಾಷಾ—ಬಾ, ನಾನು ಹೊರಡಲು ಸಿದ್ಧನಾಗಿರುವೆನು.

ಹೀಗೆಂದು ಹೇಳಿ ಇಬ್ಬರೂ ಒಟ್ಟಿಗೆ ಅಂಗಳದಿಂದ ಹೊರಡಲುದ್ಯಮಿಸಿದರು. ನಾನು ಕಣ್ಣು ಕಾಣಿಸುವವರೆಗೂ ನಾಫಿಜ್‌ಬೇಯನ್ನು ನೋಡುತ್ತಾ ಇದ್ದೆನು. ಅತಿಯಾಖಾನಮ್‌ಳು, ತಾನಲ್ಲಿರುವದು ಜನರಿಗೆ ಗೊತ್ತಾಗಿ ಬಿಡುವದೋ ಎಂಬ ಭಯದಿಂದ ಹೊರಟು ಹೋಗಿದ್ದಳು. ನನ್ನ ಹೃದಯದಲ್ಲಿ ಆಗ, ಎಂದೂ ಇಲ್ಲದಂತೆ ದುಃಖವು ಉಗ್ಗಡಿಸಿಬರಹತ್ತಿತ್ತು. ಒಂಟಿಯಾಗಿದ್ದೆನಾದುದರಿಂದ ತಡೆದುಕೊಳ್ಳುವ ಆವಶ್ಯಕತೆ ಸಹ ಇರಲಿಲ್ಲ. ಆಯಿತು–ನೆಲದ ಮೇಲೆ ಮಲಗಿಕೊಂಡು ಕಣ್ಣೀರಿನಿಂದ ಮುಖವನ್ನು ಚೆನ್ನಾಗಿ ತೋಯಿಸಿದೆನು. ಏತಕ್ಕಾಗಿ ಸನಿಯಾಖಾನಮ್‌ಳು ಏನನ್ನೂ ಮಾಡದಿರುವಳು? ನಾನಿರುವದು ನಾಫಿಜ್‌ಬೇಗೆ ಗೊತ್ತಾಗಲಾರದೆಂಬುದರಲ್ಲಿ, ಏನೇ ಮಾಡಿದರೂ ನನಗೆ ನಂಬಿಕೆಯಾಗುತ್ತಿರಲಿಲ್ಲ. ಅವನ ನ್ಯೆದುನಂದದಿರಲ್ಲಿ ಒಬ್ಬನೊಬ್ಬನಿಂದ, ಅವನಿಗೆ ಈ ವಿಷಯವು ತಿಳಿಯದಿರುವದು ಹೇಗೆ ತಾನೆ ಸಾಧ್ಯವಾಗಿತ್ತು? ಆದುದರಿಂದ, ಇನ್ನು, ಇಷ್ಟು ದಿನಗಳ ನಂತರ ಅವನೊಡನೆ ಸಮಾಗಮಿಸಬೇಕಾದೀ ಹೊಸ ಶೋಧನೆಗಾಗಿ ನನಗೆ ನಾನು ಧೈರ್ಯ ಹೇಳಿಕೊಳ್ಳುತ್ತಿದ್ದೆನು. ಅವನು ಇಲ್ಲಿಗೆ ಬೇರೊಬ್ಬ ಹೆಂಗಸನ್ನು ಮದುವೆಯಾಗಲು ಬಂದಿದ್ದರೂ, ನನ್ನ ಮೇಲೆ ಅವನಿಗೆ ಮೊದಲಿನಹಾಗೆಯೇ ಪ್ರೀತಿಯಿರುವದೆಂಬುದು ನನಗೆ ಗೊತ್ತಿತ್ತು. ಒಡನೆಯೇ, ಈ ವಿಚಾರವು ಬಹಳ ಬಲಿತುಹೋಗಿದ್ದುದರಿಂದ, ಈ ಸಂಬಂಧ ನಿಲ್ಲಿಸುವ ಯೋಚನೆ ಸಹ ಅವನೆಂದಿಗೂ ಈಗ ಮಾಡುವದಿಲ್ಲನೆಂಬುದನ್ನೂ, ಹಾಗೆ ಮಾಡಿದರೆ ಅವನಿಗೆ ಅಪಖ್ಯಾತಿ ಬರುವದೆಂಬುದನ್ನೂ ತಿಳಿದುಕೊಂಡೆನು.

ಆದರೆ, ಅವನಿಗೂ ನನಗೂ ಸಮಾಗಮವಾಗುವ ಸಮಯವು, ನನಗೆ ಅತ್ಯಂತ ಕಠಿಣವಾದ ಘಳಿಗೆಯಾಗುವದೆಂಬುದನ್ನು ನಾನು ಅರಿತಿದ್ದೆನಾದುದರಿಂದ, ಈ ಪರೀಕ್ಷೆಯಲ್ಲಿ ನಾನು ಸುಲಭವಾಗಿ ಉತ್ತೀರ್ಣಳಾಗುವಂತೆ, ದೇವರು ನನಗೆ ಧೈರ್ಯವನ್ನೂ ಶಕ್ತಿಯನ್ನೂ ಕೊಡಲೆಂಬ ಪ್ರಯತ್ನದಲ್ಲಿ ನಿರತಳಾದೆನು. ಮಾರನೆಯ ದಿನ ನಾನು ಬಹು ಆತುರದಿಂದ ಸನಿಯಾ

ಖಾನಮ್ ಎದುರು ನೋಡುತ್ತಿದ್ದೆನು. ಯಾಕೆಂದರೆ ನಾಫಿಜ್‌ಬೇಯು ಅವಳ ಮನಸ್ಸಿಗೆ ಹೇಗೆ ಕಂಡನೆಂಬುವದನ್ನು ತಿಳಿಯಲು ಕುತೂಹಲಳಾಗಿದ್ದೆನು. ಕಟ್ಟಕಡೆಗೆ ಅವಳು ಬಂದಾಗ, ಅದೃಷ್ಟವಶದಿಂದ ಆತಿಯಾ ಖಾನಮ್‌ಳ ತಾಯಿಯು ನನ್ನೊಡನೆ ಇಲ್ಲದಿದ್ದುದರಿಂದ ನಾನೊಬ್ಬಳೇ ಆಗಿದ್ದೆನು. ಆದರೆ ಅವಳ ಮನಸ್ಸು ಹೆಚ್ಚು ಮಾತನಾಡುವಂತಿರಲಿಲ್ಲ. ಕೊಂಚ ವ್ಯಥೆಯಿಂದ ಕೂಡಿದವಳಂತಾಗಿದ್ದಳು.

ನನಿಯಾಖಾನಮ್—(ಅನುಮಾನಿಸುತ್ತ) ಅವನ್‌ನು ನಾಫಿಜ್‌ನೊಡನೆ ನ್ಯಾಯರೀತಿಯಲ್ಲಿ ವರ್ತಿಸಿಲ್ಲವೆಂದು ನನ್ನ ಮನಸ್ಸಿಗೆ ತೋರುತ್ತದೆ. ನಾಫಿಜ್‌ನಿಗೆ ನಿನ್ನ ಮೇಲೆ ಅಗಾಧವಾದ ಪ್ರೇಮವಿರುವದು. ಅವರು ನನ್ನೊಡನೆ ತನ್ನ ಮನಸ್ಸಿನ ವಿಚಾರವನ್ನು ಹೇಳಲೂ ಇಲ್ಲ-ನೋಡಲು ಅವನು ಅಷ್ಟೇನೂ ಚಿಂತಾಯುತನಾಗಿ ಕಾಣಿಸುವದೂ ಇಲ್ಲ. ಆದರೆ ಇದಕ್ಕೆ ಪ್ರತಿಯಾಗಿ, ಅವನು ಹೊರಗೆ ಬಹಳ ಹರ್ಷಿತನಾಗಿದ್ದರೂ ಅದು ನಿಜವಾದ ಸಂತೋಷವಲ್ಲವೆಂದೂ ಸುಮ್ಮನೆ ನಟಿಸುತ್ತಿರುವನೆಂದೂ ನನ್ನ ಮನಸ್ಸು ಹೇಳುತ್ತದೆ. ಏನಾದರೂ ಆಗಲಿ ಮಕ್ಕಳನ್ನು ಕಂಡರೆ ಅವನಿಗೆ ಬಹಳ ಪ್ರೀತಿ ಈಗಾಗಲೇ ನನ್ನ ಮಕ್ಕಳು ಅವನನ್ನು ಅತ್ಯಂತವಾಗಿ ಪ್ರೀತಿಸಲಾರಂಭಿಸಿರುವವು. (ಅವಸರದಿಂದ) ನೀನಿಲ್ಲಿರುವನು ಅವನಿಗೆ ಗೊತ್ತಾಗಿರುವದರಿಂದ, ನೀನೂ ಅಲ್ಲಿಯೇ ಬಂದುಬಿಡುವದು ಒಳ್ಳೆಯದೆಂದು ನನಗೆ ತೋರುತ್ತದೆ.

ನಾನು—(ಆಶ್ಚರ್ಯ ಚಕಿತಳಾಗಿ) ಅವನೊಡನೆ ಯಾರು ಹೇಳಿದರು ?

ನನಿಯಾಖಾನಮ್—ಜೇಬಳು ಈಗ ತಾನೆ ನಾನು ಹೇಳಿದಂತೆ, ಜೇಬಳು ಅವನೊಡನೆ ಬಹಳ ಹೊಂದಿಕೊಂಡು ಹೋಗಿದ್ದಾನೆ. ಮೊದಲು ಅವಳು ಅವನಿಗೆ ಆ ನಾಯಿಯನ್ನು ತೋರಿಸಿದಳು. ಆಮೇಲೆ ನೀನು ಮಾಡಿದ ಬುಟ್ಟಿಯನ್ನು ತಂದುತೋರಿ, ಹಾಜಿರಿಯು ಮಾಡಿದುದೆಂದು ಹೇಳಿಬಿಟ್ಟಳು. ನಿನ್ನ ಹೆಸರನ್ನು ಕೇಳಿದಕೂಡಲೆ, ಅವನು ಚಮಕಿತನಾದನು. ನಾನು ಬೇಗನೆ ಬೇರೆ ಪ್ರಸ್ತಾಪವನ್ನೆತ್ತಿದರಾದರೂ ಅವನು ಕೇಳುವನೇನು ! ಜೇಬಳೊಡನೆ, ಹಾಜಿರಿಯು ಯಾರೆಂದೂ, ಎಲ್ಲಿಂದ ಬಂದಿರುವಳೆಂದೂ ಕೇಳಿದನು. ಅವಳು, ನೀನು ನನ್ನ ದಾಯಿಯು ಹೊಮ್ಸ್‌ಗಳಿಂದೂ ಖುಸ್ತುಂತುನಿಯಾದಿಂದ ಬಂದಿರುವಳೆಂದೂ ಬಿಡಿಬಿಡಿಸಿ ಹೇಳಿಬಿಟ್ಟಳು. ಇದಾದ ಮೇಲೆ ನನ್ನ ಪತಿಯೂ ಈ ವಿಚಾರವನ್ನು ಸ್ವೀಕರಿಸಿ, ನೀನು ಬಂದ ತಾರೀಖನ್ನು ಸಹ ಸರಿಯಾಗಿ ಹೇಳಿಬಿಟ್ಟರು. ನಾಫಿಜ್‌ನು ಆಗ ಏನನ್ನೂ ಹೇಳಲಿಲ್ಲ. ಆದರೆ ನಾವೆಲ್ಲರೂ ಮಲಗುವದಕ್ಕೆ ಹೊರಟಾಗ ನನ್ನನ್ನು ಸುಮ್ಮನೆ

ಹೀಗೆಂದು ಕೇಳಿದನು,

"ಪಾಷ ಆ ಹುಡುಗಿಯನ್ನು ಎಲ್ಲಿ ಮುಚ್ಚಿಟ್ಟಿರುವೇ ? ಅಥವಾ ಬೇಯು ನನ್ನನ್ನು ಚಿತ್ರಿಸಿರುವಂತೆ, ನೀನು ದಯವಿಟ್ಟು ತಿಳಿದುಕೊಳ್ಳದೆ, ಆ ಹುಡುಗಿಯನ್ನು ಬಂಧನದಿಂದ ಬಿಡು. ಅವಳನ್ನು ನುಂಗಿಹಾಕಲು ನಾನೇನು ಭೂತವಲ್ಲ. ನನ್ನ ವಿಷಯದಲ್ಲಿ ನೀನೇನೂ ಭಯಪಡಬೇಕಾದು ದಿಲ್ಲ-ಈಗ ಮಾಡಲು ಹೊರಟಿರುವ ಕಾರ್ಯದಿಂದ ಇನ್ನು ಕೈ ಹಿಂದಕ್ಕೆ ತೆಗೆಯುವಹಾಗಿಲ್ಲ.

ನಾನು—(ಬೇಡಿಕೊಳ್ಳುವಂತೆ) ಆದರೂ ನಾನು ಇಲ್ಲಿರುವದೇ ಒಳ್ಳೆಯ ದಲ್ಲವೇ ?

ಸನಿಯಾಖಾನಮ್—ಇಲ್ಲ, ಅವನ ವಿವಾಹವಾಗುವವರೆಗೆ, ರಾತ್ರಿಯ ಹೊತ್ತು ನೀನಿಲ್ಲೇ ಇರಬೇಕಾಗಿದ್ದರೂ, ನೀನೊಂದು ಸಲ ಅವನನ್ನು ನೋಡ ಲೆಂದು ನಾನು ಅಭಿಪ್ರಾಯಪಡುತ್ತೇನೆ. ಈಗೇನಾಗಿರುವದೆಂದರೇ ನೀನು ಅವನ ಮನೆಯಲ್ಲಿ ಪಾಲಿಸಲ್ಪಟ್ಟಿರುವದು ಪ್ರತಿಯೊಬ್ಬರಿಗೂ ಗೊತ್ತಿರುವದ ರಿಂದ, ನೀನು ಅವನನ್ನು ನೋಡಲು ಹೋಗದಿದ್ದರೆ, ಏನೋ ಹುಳುಕಿರ ಬಹುದೆಂದು ಜನರು ಆಡಿಕೊಳ್ಳುವರು. ಹಾಜಿರೇ, ನಿನಗೆ ಇದು ಅತ್ಯಂತ ಕಷ್ಟವಾಗುವದೆಂಬುದನ್ನು ನಾನು ತಿಳಿದಿರುವನು. ಆದರೆ ಅದನ್ನು ತಾಳಲು ನಿನಗೆ ಶಕ್ತಿಯಿಲ್ಲವೆಂದು ನಿನಗೆ ಕಾಣಿಸುತ್ತದೆಯೋ ?

ನಾನು—(ಅನುಮಾನಿಸುತ್ತಾ) ಒಳ್ಳೇದು, ಪ್ರಯತ್ನಿಸುವೆನು. ಹಾಗಾದರೆ ಯಾವಾಗ ಹೋಗಲಿ.

ಸನಿಯಾಖಾನಮ್—ಇವತ್ತೇ, ನಾನಿಲ್ಲಿಂದ ಹೋಗುತ್ತಿದ್ದಹಾಗೆಯೇ ನೀನು ಬಂದುಬಿಡು. ಧೈರ್ಯಮಾಡಿ, ನಾಫಿಜ್‌ಬೇಯನ್ನು ನೋಡಲು ಹೋಗುತ್ತೇನೆಂದು ಹೇಳಿ ಬರಬೇಕು.

ಕೊಂಚ ಹೊತ್ತಾದನಂತರ ಅವಳು ಹೊರಟುಹೋದಳು. ನಾನು ಎದ್ದು ಕಿಟಕಿಯಬಳಿ ಹೋಗಿ ನಿಂತುಕೊಂಡೆನು. ನಾನು ಯಾವ ವಿಷಯ ಕ್ಕಾಗಿ ಹೆದರುತ್ತಿದ್ದೆನೋ, ಅದು ಸಂಘಟಿಸಿದುದೂ ಅಲ್ಲದೆ, ಆಗಬೇಕಾದು ದಕ್ಕಿಂತ ಮೊದಲೆಯೇ ಆಯಿತು. ಅನನ್ನು ಕುರಿತು ಚಿಂತಿಸಿ ಚಿಂತಿಸಿ ಮನಸ್ಸು ಕುಸಿದುಹೋಗಿ, ಯಾವ ರೀತಿಯಲ್ಲೂ ಧೈರ್ಯ ಉಂಟಾಗಲಿಲ್ಲ. ಆದರೆ ಬೇರೆ ಮಾರ್ಗವ್ಯಾವುದಿತ್ತು ? ಹೇಗಾದರೂ ನಾಫಿಜ್‌ಬೇಯೊಡನೆ ಸಮಾಗಮಿಸಲೇ ಬೇಕಾಗಿತ್ತು. ಅಷ್ಟು ಹೊತ್ತಿಗೆ ಹಾಫಿಜ್‌ಪಾಷಾರವರ ಪತ್ನಿಯು ಬಂದುದರಿಂದ ಅವರೊಡನೆ ಅವರುನೆಗೆ ಹೋಗುವೆನೆಂದು ಹೇಳಿದನು.

ನಾನು—(ಒಣಗಿಹೋದ ಗಂಟಲಿನಲ್ಲಿ, ನನ್ನದಲ್ಲವೆಂಬಂತೇ ತೋರುತ್ತಿದ್ದ ದಪ್ಪ ಧ್ವನಿಯಿಂದ) ನಾನು ನಾಫಿಜ್‌ಬೇಯನ್ನು ನೋಡಲು ಹೋಗುತ್ತೇನೆ.
ಅತಿಯಾಖಾನಮ್‌ಳತಾಯಿ—ಹೋಗಿ ಬಂದು, ನಿಮ್ಮಲ್ಲಿ ನಡೆಯುವ ಮಾತುಕಥೆಯನ್ನೆಲ್ಲಾ ನನಗೆ ಹೇಳಬೇಕು. ಹುರ್ಸೇನು ಹೇಳುತ್ತಾನೆ-ಅವನು ಬಹು ಹರ್ಷಚಿತ್ತನೆಂದೂ, ಇಜ್ಜತ್‌ಪಾಷಾರವರೇ ಅವನನ್ನು ನೋಡಿ ಬಹಳ ಸಂತೋಷಗೊಂಡಿರುವನೆಂದೂ, ನಾನು ಏನುತ್ತರವನ್ನೂ ಹೇಳದೆ ಹೊರಟೆನು. ಸನಿಯಾಖಾನಮ್‌ಳ ತೋಟದ ಬಾಗಿಲನ್ನು ತಲು ಪಲು, ನನ್ನ ಕೈಗಳು ನಡುಗಲಾರಂಭಿಸಿದವು; ಬಾಗಿಲನ್ನು ತೆಗೆಯುವುದು ಕಷ್ಟವಾಯಿತು. ಆದರೆ ಮನೆಯ ಹತ್ತಿರ ಬರಬರುತ್ತಾ, ಮರದ ಕೆಳಗೆ, ಹುರ್ಸೇಬೇ ಮತ್ತು ಸನಿಯಾಖಾನಮ್‌ಳ ಜೊತೆ ನಾಫಿಜ್‌ಬೇಯು ಕುಳಿತಿರುವದನ್ನು ಕಂಡು, ಬುದ್ಧಿಯು ಕೊಂಚ ಸಮಾಧಾನಕ್ಕೆ ಬಂದಿತು. ಮನಸ್ಸನ್ನು ಘಟ್ಟಮಾಡಿಕೊಂಡು ಅವರ ಕಡೆ ಹೋದೆನು. ಆದರೂ ಕಣ್ಣೆತ್ತಲು ಧೈರ್ಯವಿಲ್ಲದೆ ಹೋಯಿತು. ಬಹಳ ಹತ್ತಿರ ಹೋದಮೇಲೆ, ನಾಫಿಜ್‌ಬೇಯು ನನ್ನನ್ನು ನೋಡಿ ಎದ್ದು ನಿಂತಿದ್ದನೆಂಬುದನ್ನು ಕಂಡೆನು. ಹುರ್ಸೇಬೇಗೆ ಇದು ಆಶ್ಚರ್ಯವನ್ನುಂಟು ಮಾಡಿತು.
ನಾಫಿಜ್‌ಬೇ—(ವೇಗದಿಂದ) ಹಾಜಿರೆಯೇ ?

ಅವನು ಬಹಳ ಸಮಾಧಾನದಿಂದ ಈ ಪ್ರಶ್ನೆಯನ್ನು ಹಾಕಿದ್ದರೂ, ಅವನ ಧ್ವನಿಯು ಕಂಪಿತವಾಗಿದ್ದುದನ್ನು ಕೇಳಿ, ನನ್ನ ಶರೀರದಲ್ಲಿ ಮುಳ್ಳು ಚುಚ್ಚಿದಂತಾಯಿತು. ಅವನ ಕೈಗೆ ನಾನು ಮುದ್ದಿಡಲಿಲ್ಲ-ಅವನಿಗಿದು ಇಷ್ಟವಿರಲಿಲ್ಲವೆಂಬುದನ್ನು ತಿಳಿದಿದ್ದೆನು. ಆದುದರಿಂದ ಬರೀ ಸಲಾಮನ್ನು ಮಾತ್ರ ಮಾಡಿದೆನು. ಅವನು ನನ್ನ ಸಲಾಮಿಗೆ ಜವಾಬುಕೊಟ್ಟು, ಕುರ್ಚಿಯನ್ನು ನನ್ನ ಕಡೆ ತಳ್ಳಿದನು.
ನಾಫಿಜ್‌ಬೇ—ಕುಳಿತುಕೊ.

ನಾನು ಮೌನದಿಂದ ಕುಳಿತುಕೊಂಡೆನು. ಇದುವರೆವಿಗೆ ಅವನ ಕಡೆ ನೋಡುವಷ್ಟು ಸಹ ಧೈರ್ಯ ನನಗಿರಲಿಲ್ಲ. ಆದರೆ, ಈಗ ಏಕಾಏಕಿ, ಅವನನ್ನು ಧೈರ್ಯಮಾಡಿ ಕಣ್ಣುತುಂಬ ನೋಡಬೇಕೆಂದು ಆಶೆಪಡಲು, ನಾನು ಹಾಗೆಯೇ ಮಾಡಿದೆನು. ಅವನು ಕುರ್ಚಿಯ ಮೇಲೆ ಕುಳಿತುಕೊಂಡು, ಸಮಾಧಾನದಿಂದ ಸೀಗರೇಟನ್ನು ಹೊತ್ತಿಸಿಕೊಳ್ಳುತ್ತಿದ್ದನು, ಮುಖವು ವಿವರ್ಣವಾಗುತಲಿತ್ತು. ಉರಿಯುತ್ತಿದ್ದ ಕಡ್ಡಿಯಿದ್ದ ಕೈಯ್ಯು, ನಡುಗುತ್ತಿತ್ತು.

ನಾಫಿಜ್‌ಬೇ—(ನನ್ನ ಕಡೆ ತಿರುಗಿ ನನ್ನನ್ನು ನೋಡಿ) ಏನು, ಹಾಜಿರೇ. ಈಗ ನೀನು ಮತ್ತೆ ಆಸ್ಪತ್ರೆಯಿಂದ ಕ್ಕೆ ಬಂದಿರುವೆಯಲ್ಲಾ ನಿನ್ನ ಊರಾದ ಕಿಷ್ತಗಾಜವನ್ನು ಹೋಗಿ ನೋಡಿದ್ದೆಯೋ ಇಲ್ಲವೋ ?

ನಾನು —(ಅವನಂತೆಯೇ ನಾನೂ ಸಹ ಸಮಾಧಾನದಿಂದ ಮಾತನಾಡಲು ಯತ್ನಿಸಿದರೂ ಪ್ರಯೋಜನವಾಗಲಿಲ್ಲ) ಇಲ್ಲ, ಪ್ರಭು. ಇಲ್ಲಿಂದ ಬಹಳ ದೂರವಿರುವದು.

ನಾಫಿಜ್‌ಬೇ—ನಿಜ. ಆದರೆ ಯಾವಾಗಲಾದರೂ ಹೋಗಿ ನೋಡಿ ಬರ ಬೇಕು ನಾನು ಅಲ್ಲಿಗೆ ಹೋಗಿ ಇನ್ನೂ ಸ್ವಲ್ಪದಿನಗಳು ಮಾತ್ರ ಆದವು.

ಹುಸೇಣಬೇ—(ಆಶ್ಚರ್ಯದಿಂದ) ಕಿಷ್‌ಆಗಾಜ್‌ಗೇ ? ಅದಕ್ಕಿಂತ ಸಾವಿರ ಪಾಲು ಉತ್ತಮವಾಗಿರುವ ಸ್ಥಳಗಳನ್ನು ನೀವು ನೋಡಬಹುದಾಗಿದ್ದಾಗ, ಅಲ್ಲಿಗೇಕೆ ಹೋದಿರಿ. ಅದೊಂದು ಸಣ್ಣ ಹಳ್ಳಿ.

ನಾಫಿಜ್‌ಬೇ—ಅದು ಬಹಳ ಸಣ್ಣ ಹಳ್ಳಿಯೆಂಬುದರಲ್ಲಿ ಸಂದೇಹವಿಲ್ಲ. ಅದರಲ್ಲಿ ಬೆಟ್ಟದ ಅಂಚುಅಂಚಿನಲ್ಲಿ, ಸುಮಾರು ಹತ್ತು ಮನೆಗಳು ಮಾತ್ರ ವಿರಬಹುದಾದುದರಿಂದ, ಹಳ್ಳಿಯೆಂದು ಕರೆಯಿಸಿಕೊಳ್ಳುವದು ಸಹ ಕಷ್ಟ.

ಹುಸೇಣಬೇ—ನಾನಾದರೋ ಇಂಥಾ ಸ್ಥಳಕ್ಕೆ ಹೋಗಲು ಯಾವಾಗೂ ಇಷ್ಟ ಪಡುವದಿಲ್ಲ. ನಿಮ್ಮ ಮನಸ್ಸು ಅಲ್ಲಿ ಬಹಳ ಬೇಸರಗೊಂಡಿರ ಬಹುದೆಂದು ನನಗೆ ಕಾಣಿಸುತ್ತದೆ.

ನಾಫಿಜ್‌ಬೇ—ಬಹಳ ನಿಶ್ಶಬ್ದವಾದ ಸ್ಥಳ. ನಾನು ಒಂದೇ ರಾತ್ರಿ ಅಲ್ಲಿದ್ದೆನಾದುದರಿಂದ, ಮನಸ್ಸಿಗೆ ಬೇಸರವಾಗಲು ಅವಕಾಶ ದೊರೆಯಲಿಲ್ಲ. ಒಂದು ಪದಾರ್ಥವನ್ನು ಮತ್ತೊಂದರೊಡನೆ ಹೋಲಿಸುವದರಲ್ಲಿ ಯಾವಾಗೂ ಆನಂದವಿರುತ್ತದೆ. ನಾನು ಮಾಂಟಿಕಾರ್ಲೋಯಿಂದ ನೇರವಾಗಿ ಅಲ್ಲಿಗೆ ಹೋದುದರಿಂದ, ಬಿಸಿ ನೀರಿನಿಂದ ತಣ್ಣೀರಿನ ಸ್ನಾನಕ್ಕಿಳಿದ ಹಾಗಾಯಿತು. ಅಲ್ಲಿಯ ಛಳಿಯು ಅತ್ಯಂತ ಕಠಿಣವಾಗಿದ್ದುದರಿಂದ, ಘನೀಭೂತರಾಗಿ ಹೋಗುವೆನ್ನೋ ಎಂಬ ಭಯವಿತ್ತು.

ಸೈಯದ್‌ಬೇ —(ಈಗತಾನೆ ಬಂದು ಕುಳಿತಿದ್ದನು) ಇತ್ತೀಚೆಗೆ ನೀವು ಯೂರೋಪಿಗೆ ದಯಮಾಡಿಸಿದ್ದಿರಾ ?

ನಾಫಿಜ್‌ಬೇ—ಹೌದು, ನಾನು ನಾಲ್ಕು ತಿಂಗಳು ರಜಾ ತೆಗೆದುಕೊಂಡು, ಆ ಸಮಯದಲ್ಲಿ ಸುತ್ತಾಡಿ, ಅಲೆದು ಕೊಂಚ ಪ್ರಪಂಚವನ್ನು ನೋಡುವದು ಒಳ್ಳೆಯದೆಂದು ಯೋಚಿಸಿದೆನು. ಒಂದು ತಿಂಗಳು ಪ್ಯಾರಿಸ್‌ನಲ್ಲಿದ್ದೆನು. ಉಳಿದ ಮೂರು ತಿಂಗಳಲ್ಲಿ ಜರ್ಮನಿ, ಸ್ವಿಟ್ಸರ್ಲೆಂಡನ್ನು ಸುತ್ತಿಕೊಂಡು

ಕೊನೆಗೆ ಕಿಸ್ ಆಗಾಜಿಗೆ ಬಂದನು. ನಾನು ಒಂದು ತಿಂಗಳಿಗಿಂತ ಹೆಚ್ಚು ಇಲ್ಲಿ ಇರಲಾಗದಿರುವದಕ್ಕೆ, ಈ ವರ್ಷ ನನ್ನ ರಜವು ಪೂರೈಸಿಹೋಗಿರುವದೇ ಒಂದು ಕಾರಣವಾಗಿರುವದು ಈ ಒಂದು ತಿಂಗಳು ಸಹ, ಮುಂದೆಗೋಸ್ಕರ ಬೇಕಾಗಿರುವದೆಂದು ನಾನು ಹೇಳಿದನಂತರ ಸಿಕ್ಕಿತು.

ಹೀಗೆಂದು, ಅವನು ನಾಯಿಯ ತಲೆಯನ್ನು ಸವರಲು ಬೊಗ್ಗಿದುದರಿಂದ, ನನಗೆ ಅವನ ಮುಖವನ್ನು ನೋಡಲು ಆಗದೆ ಹೋಯಿತು.

ನಾಫಿಜ್ ಬೇ—(ಹುರ್ಸೇದಿಯೊಡನೆ) ಇಲ್ಲಿ ಶಿಕಾರಿಯು ಯಾವ ರೀತಿ ದೊರೆಯುವದು!

ಹುರ್ಸೇದಿ ಬೇ—ಚೆನ್ನಾಗಿರುವದು. ಆದರೆ ಇದು ಕಾಲವಲ್ಲ.

ನಾಫಿಜ್ ಬೇ—ಹೌದು, ನನಗೆ ಗೊತ್ತು. ಇದು ಶಿಕಾರಿಯಕಾಲವಲ್ಲವಾಗಿರುವದಕ್ಕೆ ನಾನು ಸಂತೋಷಪಡುವನೆಂಬುದೂ ನಿಜವು. ನನಗೆ ಯುರೋಪಿನ ಬೇಟೆಯಾಟವು ಅತ್ಯಂತ ಸೊಗಸುವದು. ಅಲ್ಲಿ ದಿನವೆಲ್ಲಾ ಶ್ರಮಪಟ್ಟನಂತರ, ರಾತ್ರಿ ವಿಶ್ರಮಿಸಿಕೊಳ್ಳಲು ಸ್ಥಳಸಿಕ್ಕುವದು. ನನ್ನ ಶೋಕಿಗೂ ಸುಖಾಭಿಲಾಷೆಗೂ, ದಿನವೆಲ್ಲಾ ಮೃಗದ ಹಿಂದೆ ಬಿಕ್ಕಟ್ಟು ಅಲೆದು, ಆಮೇಲೆ ರಾತ್ರಿ ಬರೀ ಹುಲ್ಲಿನ ಹಾಸಿಗೆಗೋ, ಅಥವಾ ಅದೃಷ್ಟ ಬಲವಾಗಿದ್ದರೆ ಕೊಳಕಾದೊಂದು ಜೋಪಡಿಗೋ, ಸಂತುಷ್ಟನಾಗುವಷ್ಟು ಧೈರ್ಯ ನನಗೆಲ್ಲಿ ಬಂತು? ಶಿಕಾರಿಯ ಒಂದೆರಡು ಹಕ್ಕಿಗಳು, ರಾತ್ರಿಯ ಮೃಷ್ಟಾನ್ನಭೋಜನಕ್ಕೆ ಸಮ ಬರುವದಿಲ್ಲವೆಂಬುದು, ನಿಜವಾದ ಸಂಗತಿಯಾಗಿರುವದು.

ಸುನಿಯಾಖಾನಮ್—(ನಕ್ಕು) ಎಂಥಹ ಸ್ವಕುಕ್ಷಿಸೇವಕನು! ನೀನು ಇಷ್ಟು ಸೂಕ್ಷ್ಮಸ್ವಭಾವದವನೆಂಬುದು ನನಗೆ ಗೊತ್ತಿದ್ದರೆ, ನನ್ನ ಗೃಹಕೃತ್ಯದ ವಿಧಾನಶೋಭೆಯಲ್ಲಿ ಕಳಂಕವೆಲ್ಲಿ ಬರುವದೋ, ಎಂದು ನಾನು ನಡುಗಿ ಹೋಗುತ್ತಿದ್ದೆನು.

ನಾಫಿಜ ಬೇ—ನೀನು ದೊಡ್ಡ ತಪ್ಪನ್ನು ಮಾಡುತ್ತಿರುವೆ, ಯಾಕೆಂದರೆ, ನೀನು ಯಾವ ತಾಯಿಯ ಮಗಳು ಹೇಳು. ನಿನ್ನ ಗೃಹಕೃತ್ಯ ನಿರ್ವಾಹದಲ್ಲಿ ತಪ್ಪು ಕಂಡುಹಿಡಿಯಲು ಯಾರಿಗೂ ಸಾಧ್ಯವಾಗಲಾರದು. ಒಳ್ಳೇದು ಇಷ್ಟೇ ಎಲ್ಲಾ. ತಾಯಿಯವರ ಆರೋಗ್ಯವು ಅಷ್ಟು ಸರಿಯಾಗಿಲ್ಲವೆಂಬುದು ನಿನಗೆ ಗೊತ್ತೇ?

ಸುನಿಯಾಖಾನಮ್—ನನಗೆ ಗೊತ್ತಿಲ್ಲ. ಏನು, ಬಹಳ ಕೇಡಾಗಿರುವದೇ?

ನಾಫಿಜ್ ಬೇ—ಹೇಳಲಾರೆನು. ಈಚೆಗೆ ಅವರು ಬಹಳ ವಯಸ್ಸಾದಂತೆ

ಕಾಣಿಸುತ್ತಿರುವರು. ಆದರೆ ಮತ್ತ್ಯಾರೂ ಇನ್ನೂ ಇದನ್ನು ಕಂಡುಹಿಡಿದಿಲ್ಲ. ಯೂರೋಪನ್ನು ಸುತ್ತಿಕೊಂಡು ನಾನು ಮನೆಗೆ ಹಿಂತಿರುಗಿ ಬಂದಾಗ, ಅವರ ಬದಲಾಯಿಸಿದ್ದ ರೂಪನ್ನು ನೋಡಿ, ನನಗೆ ಅತ್ಯಂತ ಆಶ್ಚರ್ಯ ವಾಯಿತು. ತಮ್ಮ ವಯಸ್ಸಿಗಿಂತ ಇನ್ನೂ ಮುವತ್ತು ವರ್ಷಗಳು ಹೆಚ್ಚಾಗಿ ಕಾಣಿಸುತ್ತಿದ್ದರು. ಅವರು ಹೇಳಿಕೊಳ್ಳದಿದ್ದರೂ, ಮೊದಲಿನಂತೆ ಅವರು ದೃಢಕಾಯರಾಗಿಯೂ ಇಲ್ಲ. ಇಲ್ಲಿಗೆ ಬರುವ ಮೊದಲು ನಾನು ಈ ವಿಚಾರ ವನ್ನು ತಂದೆಯವರೊಡನೆ ಹೇಳಲು, ಅವರು, ಅದಕ್ಕೆ ಮೊದಲು ತಮಗೆ ಎಂದೂ ಇದರ ಯೋಚನೆ ಸಹ ಆಗಲಿಲ್ಲವೆಂದೂ, ಅಮ್ಮಾವರ ಮೈಗೆ ಚೆನ್ನಾಗಿಲ್ಲವೆಂದು ಅವರಿಗೆ ಯಾವತ್ತೂ ತೋಚಲೇ ಇಲ್ಲವೆಂದೂ ಒಪ್ಪಿ ಕೊಂಡು ತಕ್ಷಣವೇ ಡಾಕ್ಟರನ್ನು ಕರೆಸಿದರು. ಆದರೆ ಅಮ್ಮಾವರು ಚಿಕಿತ್ಸೆ ಮಾಡಿಸಿಕೊಳ್ಳುವದಿಲ್ಲವೆಂದು ಖಂಡಿತವಾಗಿ ಹೇಳಿಬಿಟ್ಟರು. ನನಗಾದರೋ ಅವರು ಆದಿಲಳ ಕೈಯಿಂದ ಚಿಕಿತ್ಸೆಹೊಂದುತ್ತಿದ್ದಾರೆಂದು ತೋರುತ್ತದೆ, ಯಾಕೆಂದರೆ ಅವರು ಯಾವಾಗ್ಗೂ ಡಾಕ್ಟರ ಔಷಧಿಗಿಂತ ಆ ಮುದುಕಮ್ಮನ ಔಷಧಿಗೇ ಹೆಚ್ಚು ಪ್ರಶಸ್ತಿಕೊಡುತ್ತಾ ಬಂದಿದ್ದಾರೆ.

ನಾನು ಕೊಂಚ ಕ್ಷೋಭೆಗೊಂಡು ಅವನ ಕಡೆ ನೋಡಿದೆನು. ಈ ರೋಗವಾದರೋ, ತಮ್ಮ ಪ್ರೇಮಪುತ್ರನೊಡನೆ ವೈಮನಸ್ಯ ಉಂಟಾದ ದುಃಖದ ದೆಸೆಯಿಂದೇನಾದರೂ ಬಂದಿತ್ತೋ ? ಪ್ರಾಯಶಃ ನಾಫಿಜ್‌ಬೇಗೂ ಇದೇ ದಿಗುಲಿದ್ದಿರಬೇಕು, ಆದುದರಿಂದಲೇ ಅವನು ಕೊಂಚ ವ್ಯಸನಾಕ್ರಾಂತ ನಾಗಿ ಕಾಣಿಸುತ್ತಿದ್ದುದು.

ನಾನು—ಇದೆಂತಹ ರೋಗವು ?

ನಾಫಿಜ್‌ಬೇ—(ಬೇಗನೆ ನನ್ನ ಕಡೆ ತಿರುಗಿ ವ್ಯಥೆಯಿಂದ) ನನ್ನ ಬುದ್ಧಿಗೆ ಏನೂ ಗೊತ್ತಾಗುವದಿಲ್ಲ. ಆದರೆ ನೋಡಲೇನೋ ಯಾವುದೋ ಒಂದು ವಿಧವಾದ ಹೃದಯ ವೇದನೆಯಂತೆ ಕಾಣಿಸುತ್ತದೆ. ಅವರಿಗೆ ಆಗಾಗ್ಗೆ ವಾಯುಬರುತ್ತಿದ್ದುದು ನಿನಗೆ ಜ್ಞಾಪಕವಿರಬಹುದು. ತಂದೆಯವರು, ಅವರನ್ನು ಡಾಕ್ಟರ ಔಷಧಿಯನ್ನು ತೆಗೆದುಕೊಳ್ಳಲು ನಿರ್ಬಂಧಪಡಿಸಿದರೆ ಒಳ್ಳೆಯದು. ಆದರೆ, ನನ್ನ ಊಹೆಯು ತಪ್ಪಾಗಿರಲೆಂದು ಪ್ರಾರ್ಥಿಸಿಕೊ. ಮಕ್ಕಳೆಲ್ಲಾ ಏನಮಾಡುತ್ತಿರುವರು ?

ನಾನು—ಉಪಾಧ್ಯಾಯರ ಬಳಿ ಇರುವರು. ಊಟದ ಸಮಯವಾದುದ ರಿಂದ ಇನ್ನೇನು ಬಂದು ಬಿಡಬಹುದು.

ನಾಫಿಜ್‌ಬೇ—ಏನು, ಊಟದ ಸಮಯವಾಯಿತೇ ? ನಾನಿನ್ನು

ಹೊರಡುವೆನು. ನಿಮ್ಮೂರಿನ ಒಬ್ಬ ದೊಡ್ಡ ಮನುಷ್ಯರು ಇವತ್ತು ನನ್ನನ್ನು ಊಟಕ್ಕೆ ಕರೆಸಿರುವರು–ಯಾರೋ ಷೇಕನೋ ಅಥವಾ ಅಂಥ ಹುದ್ದೇ ಏನೋ ಒಂದನ್ನು ಇಜ್ಜತ್ ಪಾಷಾರವರು ಹೇಳುತ್ತಿದ್ದರು. ನಾನು ಹೊಸದಾಗಿ ಖಿಸ್ತಂತನಿಯಾದಿಂದ ಬಂದಿರುವೆನಾದುದರಿಂದ, ಬಹುಶಃ ನನಗೆ ಇಷ್ಟು ಪುರಸ್ಕಾರ ಸಿಗೆಯುತ್ತಿರಬಹುದು. ರಾಜಧಾನಿಯಲ್ಲಿ ವಾಸಿಸುವ ಜನರು ಸೂಬೆಯಜನರಿಗಿಂತ ಶ್ರೇಷ್ಠರೆಂದು ಗಣಿಸಲ್ಪಡುವದಕ್ಕೆ ಕಾರಣವೇನೆಂಬ ವಿಷಯವು, ನನಗೆ ಕಂಡುಹಿಡಿಯಲು ಬಹಳ ಪ್ರಯಾಸವಾಗಿದೆ. ನಾನು ಹೋಗಿದ್ದ ದೇಶಗಳಲ್ಲಿಯೂ ಇದೇ ಭಾವನೆಯನ್ನು ಕಂಡೆನು. ರೋಮ ದೇಶದೊಂದು ಪ್ರತ್ಯೇಕಭಾಗದಲ್ಲಿ ಹುಟ್ಟಿದುದರ ಫಲವು, ಆ ಪ್ರದೇಶದ ಜನರು, ಇತರ ಪ್ರದೇಶದ ಜನರಿಗಿಂತ ಹೆಚ್ಚು ಗಣ್ಯರೆಂದೇಕೆ ಭಾವಿಸಲ್ಪಡುವರೆಂಬುದು, ನನಗೆ ಅರ್ಥವಾಗುವದಿಲ್ಲ.

ಹೀಗೆ ಹೇಳಿ ಅವನು ಎದ್ದು ನಿಂತು ನನ್ನ ಕಡೆ ನೋಡಿ ಹೀಗೆಂದನು,

"ಹಾಜಿರೇ, ನೀನು ಆ ಮನೆಯಲ್ಲಿ ಬಹಳ ಕೆಲಸದಲ್ಲಿ ತೊಡಗಿರುವೆಯೆಂದು ನಾನು ಕೇಳಿದೆನಾದುದರಿಂದ, ಬಹುಶಃ ನಿನ್ನನ್ನು ಇವತ್ತು ಮತ್ತೆ ನಾನು ನೋಡಲಾರೆನು. (ಕೊಂಚ ನಿಲ್ಲಿಸಿ) ನೀನು ದಣದಿರುವಂತೆ ಕಾಣುತ್ತಿರುವೆ. ನಿನ್ನ ಶಕ್ತಿಮೀರಿ ಕೆಲಸಮಾಡಬೇಡ. ಎಲ್ಲಿ ಯಾವ ಕೆಲಸವಿದ್ದರೂ, ಅದನ್ನು ಮಾಡಲು, ನೀನು ತನುಮನ ಸಹಿತ ಸಿದ್ಧಳಾಗುತ್ತೀ ಎಂಬುದನ್ನು ನಾನು ಚೆನ್ನಾಗಿ ಅರಿತಿರುವೆನು. ಆದರೆ ನಮ್ಮ ಮನೆಯಲ್ಲಿ ನೀನು ಮರ್ಯಾದೆಯುಸಲುವಾಗಿ ಏನನ್ನೂ ಹೇಳದಿದ್ದಂತೆ, ಇಲ್ಲಿ ಮಾಡಬೇಡ."

ತದನಂತರ ಅವನು ಬೇಗನೆ ನನ್ನ ಕೈಯೊಡನೆ ಕೈಜೋಡಿಸಿ ಅದನ್ನು ಸ್ವಲ್ಪ ಒತ್ತಿ ಹಿಂತಿರುಗಿ ಹೊರಟುಹೋದನು.

ಹದಿನೈದನೆಯ ಪರಿಚ್ಛೇದ

ಮದುವೆಯ ಸಾಮಾನೆಲ್ಲವೂ ಅಣಿಮಾಡಲ್ಪಟ್ಟಿತ್ತು–ವಧುವಿನ ಹಸೇಮಣೆಯು ತಯಾರಾಗಿ ಹೋಗಿತ್ತು–ವರನ ಬಟ್ಟೆಗಳು ಹೊಲಿದಾಗಿ ಹೋಗಿದ್ದವು–ಲಗ್ನಪತ್ರಿಕೆಗಳನ್ನು ಕಳುಹಿಸಿ ಆಗಿತ್ತು–ಕಾಬೀನ್‌ನಾಮವು ಸಹ ನಿನ್ನೆ ಬರೆಯಲ್ಪಟ್ಟಿತು–ನಾನು, ನಾಳೆ, ಮದುವೆಯ ದಿನ, ಧರಿಸಿಕೊಳ್ಳಬೇಕಾಗಿದ್ದ

*ಕಾಬೀನ್‌ನಾಮ = ಬಳುವಳಿಯಪಟ್ಟಿ

ನನ್ನ ಆಕಾಶವರ್ಣದ ರೇಶ್ಮೆ ಉಡುಪಿಗೆ ಕೊನೆಯ ಹೊಲಿಗೆಗಳನ್ನು ಹಾಕುತ್ತಿದ್ದೆನು. ಅದನ್ನು ಮುಗಿಸಿ ಮಡಿಸಿಟ್ಟು, ಕೈಕಟ್ಟಿ ಕುಳಿತುಕೊಂಡೆನು. ನನ್ನ ತಲೆಯು ಬಹಳ ನೋಯುತ್ತಿತ್ತಾದುದರಿಂದ, ಸಂಜೆಯೇ ನನ್ನ ಕೊಠಡಿಗೆ ಹೋಗಿ ಒಳಗಿನಿಂದ ಬೀಗವನ್ನು ಹಾಕಿಕೊಂಡು ಬಿಟ್ಟಿದ್ದೆನು. ಇಂದು ಸಂಜೆ, ಎಲ್ಲರೊಡನೆ ಬಹಳ ಹೊತ್ತಿನವರೆಗೆ ಮಾತನಾಡುವದು ಒಳ್ಳೆಯದಾಗಿರಲಿಲ್ಲ, ಯಾಕೆಂದರೆ ನಾಳೆಯದಿನ ನನಗೆ ನನ್ನಲ್ಲಿರುವ ಶಕ್ತಿ· ಧೈರ್ಯ, ಎಲ್ಲವೂ ಅವಶ್ಯಕವಾಗುವವು. ಇವತ್ತು ಹೆಚ್ಚು ಮಾತುಕಥೆಯನ್ನಾಡುವದರಿಂದ ನನ್ನೊಳಗೆ ತುಂಬಿರುವ ಆತ್ಮಶಕ್ತಿಯೆಲ್ಲವೂ ಮುಂಚೆಯೇ ವ್ಯಯವಾಗಿ ಹೋಗುವದು. ನನಗೂ ನಾಫಿಜ್‌ಬೇಗೂ, ಹಿಂದಿನ ಅಧ್ಯಾಯದಲ್ಲಿ ವಿವರಿಸಿರುವ ಆದೊಂದು ಸಮಾಗಮ ಮಾತ್ರವೇ ಆಗಲಿಲ್ಲ. ನಾನು ಅವನ ಮುಂದೆ ಹೋಗುತ್ತೇನೆಂಬುದು ಈಗ ಗೊತ್ತಾಗಿ ಹೋಗಿದ್ದುದರಿಂದ, ಅನೇಕಾವರ್ತಿ ನನಗೆ ಸನಿಯಾಖಾನಮಳ ಮನೆಗೆ ಹೋಗುವ ಅವಶ್ಯಕತೆ ಬಿದ್ದು, ಆದರಿಂದ ಅವನನ್ನು ಎಷ್ಟೋಬಾರಿ ಸಂಧಿಸುವ ಅವಕಾಶವುಂಟಾಯಿತು. ಆದರೆ, ನನ್ನೊಡನೆ ಸಮಾಗಮಿಸಲು, ಅವನು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದ್ದ ರೀತಿಯಲ್ಲಿ ಎಳ್ಳಷ್ಟಾದರೂ ವ್ಯತ್ಯಾಸವುಂಟಾಗಲಿಲ್ಲ. ಅವನು, ನನಗೆ ತೋರಿಸುತ್ತಿದ್ದ, ಒಂದು ವಿಧವಾದ ಪ್ರೀತಿಯುತವಾದ ಸರಳತೆಯು, ಹೊರಗೆ ಅತಿಶಯವಾಗಿ ಕಾಣುತ್ತಿದ್ದರೂ, ಒಳಗೆ ಅದಕ್ಕೇನೂ ಅರ್ಥವಿರುತ್ತಿರಲಿಲ್ಲ. ಒಂದು ಸಾರಿಯಾದರೂ ಅವನು, ಕಳೆದು ಹೋದ ವಿಚಾರಗಳನ್ನೆತ್ತಿ ಆಡಲಿಲ್ಲ. ನನ್ನ ನಿರಾಕರಣೆಗೆ ಈಗ ಸಂಧಿತನಾಗಿ ಹೋಗಿದ್ದು ಅದರ ಮೇರೆಗೆ, ಅವನು ಹೀಗೆ ನಡೆದುಕೊಳ್ಳುತ್ತಿದ್ದಂತೆ ಕಂಡಿತು. ನಾನು ಸಹ, ನನ್ನ ಪರವಾಗಿ, ಅವನ ವರ್ತನೆಯನ್ನೇ ಅನುಸರಿಸಿದೆನು. ನಮ್ಮಿಬ್ಬರನ್ನೂ ಒಟ್ಟಿಗೆ ನೋಡಿ, ಯಾರಿಗೂ, ನಮ್ಮಲ್ಲಿ ಬೇರೆ ಮತ್ಯಾವ ವಿಧವಾದ ಸಂಬಂಧವಾದರೂ ಇತ್ತೇ ಇಲ್ಲವೇ, ಎಂಬಾಲೋಚನೆ ಲೇಶವೂ ಆಗುತ್ತಿರಲಿಲ್ಲ.

ನಾನು ಎದ್ದು ಕಿಟಕಿಯ ಹತ್ತಿರ ಹೋಗಿ ನಿಂತುಕೊಂಡೆನು. ಆಗ ನನ್ನ ಮನಸ್ಸಿನಲ್ಲಿ, ಅವನು ಸರ್ವದಾ ಬೇರೆಯವಳವನಾಗಿ ಹೋಗುವದಕ್ಕೆ ಮೊದಲು, ಒಂದು ಸಾರಿ ಅವನನ್ನು, ಮತ್ತೆ ನೋಡಬೇಕೆಂಬ ಭ್ರಾಂತಿಯು ತಲೆದೋರಿತು. ಈ ಭ್ರಾಂತಿಯು ಎಷ್ಟು ಪ್ರಬಲಿಸಿಕೊಂಡಿತೆಂದರೆ, ನನ್ನೀ ಅವಿವೇಕತೆಯನ್ನು ಕುರಿತು ದೀರ್ಘಾಲೋಚನೆ ಮಾಡುವಷ್ಟು ಕೂಡ ನನಗೆ ಸಹನೆಯಿರಲಿಲ್ಲ. ತಕ್ಷಣವೇ ಕಿಟಕಿಯ ತಟ್ಟಿಗೆಯನ್ನು ಓರೆಮಾಡಿಕೊಂಡು

ತೋಟದೊಳಕ್ಕೋದು, ಬಾಗಿಲಹತ್ತಿರ ಹೋಗಿ, ಮೆಲ್ಲನೆ ಅದನ್ನು ತೆರೆದು ಇಣುಕಿ ನೋಡಿದೆನು.

ವರಾಂಡದಲ್ಲಿ ಒಂದು ದೀಪವು ಉರಿಯುತ್ತಿತ್ತು. ಅದರ ಬೆಳಕು ಆಗ ಅಲ್ಲಿ ಕುಳಿತಿದ್ದ ಎರಡು ವ್ಯಕ್ತಿಗಳ ಮೇಲೆ ಬಿದ್ದಿತ್ತು. ರಾತ್ರಿಯು ಕತ್ತಲಾಗಿತ್ತಾದುದರಿಂದ, ನಾನು ಮೆಲ್ಲಮೆಲ್ಲನೆ ಹೋಗಿ ಕುಳಿತುಕೊಂಡೆನು. ವರಾಂಡದಿಂದ ನಾನು ಎಷ್ಟು ದೂರವಾಗಿದ್ದೆನೆಂದರೆ, ಅಲ್ಲಿಯ ಧ್ವನಿಯು ಕೇಳಿಸುತ್ತಿರಲಿಲ್ಲವಾದರೂ, ಅಲ್ಲಿ ಸನಿಯಾಖಾನಮಳೂ ನಾಫಿಜ್‌ಬೇಯೂ ಕುಳಿತುಕೊಂಡು, ರಾತ್ರಿಯ ತಂಗಾಳಿಯನ್ನು ಸೇವಿಸುತ್ತಿದ್ದರೆಂಬುದನ್ನು ಗುರ್ತಿಸಿದೆನು. ನನಗೂ ಅವರಿಗೂ ಮಧ್ಯೆ, ಒಂದು ಕೆಂಪು ಗುಲಾಬೀಗಿಡವಿದ್ದುದರಿಂದ, ನಾನು ಅವರ ದೃಷ್ಟಿಗೆ ಗೋಚರವಾಗದಂತಿದ್ದೆನು. ಇಬ್ಬರೂ ಮಾತನಾಡುತ್ತಿದ್ದಂತಿರಲಿಲ್ಲ. ನಾಫಿಜ್‌ಬೇಯು, ಒಂದು ಆರಾಮ ಕುರ್ಚಿಯಮೇಲೆ ಕುಳಿತಿದ್ದನು. ಕೈಗಳೆರಡೂ ತಲೆಯ ಕೆಳಗಿದ್ದವು. ಕಾಲುಗಳು, ಮುಂದುಗಡೆ, ಒಂದು ಟಿಪಾಯಿಯ ಮೇಲೆ ಇಡಲ್ಪಟ್ಟಿದ್ದವು. ಕಣ್ಣುಗಳು, ಎದುರಿಗೆ ವರಾಂಡದ ಮೇಲೆ ಹಬ್ಬಿಕೊಂಡು ಅದನ್ನು ಸಂಪೂರ್ಣವಾಗಿ ಮರೆಮಾಡುತ್ತಿದ್ದ ಪುಷ್ಪಗಳಿಂದ ಭರಿತವಾಗಿದ್ದ ಗುಲಾಬೀ ಬಳ್ಳಿಯ ಮೇಲೆ ನೆಟ್ಟಿದವು.

ನಾನು ಅವನ ಕಡೆ ಅತ್ಯಂತ ಕಾತರತೆಯಿಂದ ನೋಡಿದೆನು. ನಾಳೆ ಈ ಕಥೆಯು ಮುಗಿದು ಹೋಗುವದು–ನನ್ನ ಹೃದಯದಲ್ಲಿ ಇದುವರೆಗೆ ತರುಣವಾಗಿದ್ದ ಅಂತ್ಯಾಶೆಯ ಕುಟ್ಮಲವು ಸಂಪೂರ್ಣವಾಗಿ ಒಣಗಿ ಹೋಗುವದು–ಮದುವೆಯಾಗಿ ಒಂದು ವಾರವಾದಕೂಡಲೆ, ಅವನು ಖುಸ್‌ತಂತನಿಯಾಕ್ಕೆ ಹೊರಟು ಹೋಗುವನು–ನನ್ನ ಆಕಾಂಕ್ಷೆಗಳೆಲ್ಲವೂ ಮನಸ್ಸಿನಲ್ಲಿಯೇ ಉಳಿದುಕೊಳ್ಳುವವು–ನಾಫಿಜ್‌ಬೇಯಿಂದಲೂ ಅತಿಯಾಖಾನಮಳಿಂದಲೂ ಪತ್ರ ಬಂದಾಗ, ಸನಿಯಾಖಾನಮಳು ಅವುಗಳನ್ನು ಓದಿಹೇಳಿದಾಗ, ನನ್ನ ಘಾಯವು ಮತ್ತೆ ಹಸಿಯಾಗುವದು–ಅದರಲ್ಲಿ ಯಾವಾಗೂ ಒಂದು ಹೊಸ ನೋವು ಹುಟ್ಟುತಲೇ ಇರುವದು–ನಾನು ಮತ್ತೆ ಅದೇ ದಾಯಿಯಾಗಿಯೇ ಇರುವೆನು–ನನ್ನ ಆಯುಸ್ಸೆಲ್ಲವೂ ನಿರರ್ಥಕತೆಯಲ್ಲಿ ಕಳೆದುಹೋಗುವದು–ಆದರೆ ಈ ಒಂದು ಘಳಿಗೆಯ ಆನಂದವಸ್ಮರಣೆ ಮಾತ್ರ ಬಾಕಿ ಉಳಿಯುವದು. ಹೀಗೆಂದು ಯೋಚಿಸುತ್ತ, ನಾನು ಕತ್ತು ಬೊಗ್ಗಿಸಿಕೊಂಡು, ನಿಧಾನವಾಗಿ ಕಣ್ಣೀರಿನ ಪ್ರವಾಹವನ್ನು ಹರಿಸಿದೆನು. ಈ ಸಮಯದಲ್ಲಿ ಅವನೆದೆಗೆ ಆಲಿಂಗಿಸಿಕೊಳ್ಳಲ್ಪಟ್ಟುಕೊಂಡು ನಿಂತು, ಅವನ ಭುಜದ

ಮೇಲೆ ತಲೆಯನ್ನಿರಿಸಿ, ಅವನ ನಯನಗಳೆದುರಿಗೆ ರೋದಿಸಿ ರೋದಿಸಿ, ನನ್ನ ಸಂಕಟವನ್ನು ಪರಿಹಾರ ಮಾಡಿಕೊಳ್ಳುವೆನೇ ಎಂದು ಹೃದಯವು ದಿಕ್ಕು ತೋಚದೆ ಆಶಿಸಿತು.

ಇದರಲ್ಲಿ ತಪ್ಪೇನಿರುತ್ತಿತ್ತು ? ಈ ವಿಚಾರದಲ್ಲಿ ನಾನು ವಿಧಿಯನ್ನು ಸಹಾಯಕ್ಕೆ ಕರೆದಿದ್ದರು ಸಹ, ಈ ಅಂತ್ಯ ಸಮಾಗಮವು ಈ ರೀತಿಯದೇ ಆಗಿರಬೇಕಾಗಿತ್ತು-ಯಾಕೆಂದರೆ, ದೇವರು ಮನಸ್ಸು ಮಾಡದಿದ್ದರೆ, ಸಾಫಿಜ್‌ಬೇ ಮತ್ತು ಅತಿಯಳ ವಿವಾಹವು ಈಗ ನಿಂತುಹೋಗಬಹುದಾಗಿತ್ತು. ಎರಡನೆಯದಾಗಿ, ಅತಿಯಾಖಾನಮಳಿಗೂ ಸಹ, ತನಗೆ ಸರ್ವಕಾಲಕ್ಕೂ ದೊರಕಲಿರುವ ಸಂತೋಷ ಪರಿಪೂರ್ಣ ಪಾತ್ರೆಯೊಳಗಿನಿಂದ, ನನಗೆ ಒಂದು ತೊಟ್ಟು ಕೊಡಲು ಹಿಂತೆಗೆಯುವದು ಯುಕ್ತವಾಗಿರಲಿಲ್ಲ.

ವರಾಂಡದಿಂದ ಒಂದು ಧ್ವನಿಯು ಕೇಳಿಸಲು, ನಾನು ಕತ್ತೆತ್ತಿದೆನು. ಸಾಫಿಜ್‌ಬೇಯು ವಿಷಣ್ಣನಾಗಿ ಅತ್ತಲೂ ಇತ್ತಲೂ ಸುತ್ತುತ್ತಿದ್ದನು. ಮದುಮಗನಿರಬೇಕಾದ ರೀತಿಯಲ್ಲಿ ಆವನು ಹರ್ಷಚಿತ್ತನಾಗಿರಲೇ ಇಲ್ಲ. ಒಂದು ಘಳಿಗೆಯನಂತರ ಅವನ ಅಕ್ಕನೂ ಎದ್ದು ನಿಂತಳು. ಇಬ್ಬರೂ ತೋಟಕ್ಕೆ ಹೋದರು.

ಸಾಫಿಜ್‌ಬೇ—(ವ್ಯಸ್ತನಾಗಿ) ನೀನು ಆಮನೆಗೆ ಹೊರಟುಹೋಗುವದು ಒಳ್ಳೆಯದು, ಇಲ್ಲವಾದರೆ ಮದುವೆಯ ಹುಡುಗಿಯ ಅಣ್ಣಂದಿರಲ್ಲಿ ಯಾವ ನಾದರೊಬ್ಬನು ಬಂದು ನನ್ನನ್ನು ಕಾಡಿಸುವದು ಖಂಡಿತ. ನನ್ನ ಹೆಂಡತಿಯು, ತನ್ನ ತಮ್ಮಂದಿರಂತೆ ಆಗದಿರಲೆಂದು ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಹಿಂದೆ ಎಂದೂ, ಇಂಥಾ ಅಪ್ರಯೋಜಕರೂ, ಅಮರ್ಯಾದಸ್ಥರೂ ಆದ ಹುಡುಗರನ್ನು ನೋಡಲಿಲ್ಲ. ಇಜ್ಜತ್ ಪಾಷಾರವರ ತಮ್ಮಂದಿರು ಹೀಗೇಕೆ ಆದರೆಂಬುದು ನನಗೆ ಗೊತ್ತಾಗುವದಿಲ್ಲ.

ಸನಿಯಾಖಾನಮ್—(ನಿಟ್ಟುಸಿರನ್ನು ಬಿಟ್ಟು) ನಿಜವನ್ನು ಹೇಳುತ್ತೆ. ಈ ಹುಡುಗರು ಯೋಗ್ಯರಲ್ಲ. ಆದರೆ ಪಾಪ, ಅವರದೇನೂ ತಪ್ಪಿಲ್ಲ. ಯಾಕೆಂದರೆ ಹುಟ್ಟಿದಾರಭ್ಯ ಇಲ್ಲೇ ಇದ್ದುಬಿಟ್ಟಿರುವರಲ್ಲದೆ, ಅವರ ತಂದೆಯು, ಅಹಂಕಾರದ ದೆಸೆಯಿಂದ, ಮಕ್ಕಳ ವಿದ್ಯಾಬುದ್ಧಿ ಶಿಕ್ಷಣೆಯನ್ನು ಸರಿಯಾಗಿ ಮಾಡಿಸಲಿಲ್ಲ. ಇದೋ ನಾನು ಇನ್ನು ಹೊರಡುತ್ತೇನೆ. ನೀನೊಬ್ಬನೇ ಏನ ಮಾಡುವೆ ?

ಸಾಫಿಜ್‌ಬೇ—ನನ್ನ ಚಿಂತೆಮಾಡಬೇಡ. ಮರದಾನ್‌ಖಾನೆಗೆ ಹೋಗಿ, ಸಿಗರೇಟನ್ನು ಸೇದುತ್ತಾ ಕಾಲಹರಣವನ್ನು ಮಾಡಿ, ನಿದ್ದೆ ಹೋಗುವೆನು.

ಇಂದು ಸಂಜೆ ನನ್ನ ಮನಸ್ಸು ಏನೋ ಒಂದು ವಿಧವಾಗಿ ಚಿಂತಾಗ್ರಸ್ತವಾಗಿ ರುವದಾದುದರಿಂದ, ನನ್ನ ಸಹವಾಸವು ಯಾರಿಗೂ ರುಚಿಸುವಹಾಗಿಲ್ಲ.

ಸನಿಯಾಖಾನಮ್—ಒಳ್ಳೇದು, ಹೋಗಿಬರುವೆನು.

ಇಬ್ಬರೂ ಒಬ್ಬರಿಗೊಬ್ಬರು ಮುದ್ದಿಟ್ಟ ನಂತರ, ಸನಿಯಾಖಾನಮಳು ಹೊರಟು ಹೋದಳು. ಸಾಫಿಜ್‌ಬೇಯು ಕೊಂಚಹೊತ್ತು ಸುಮ್ಮನೆ ನಿಂತಿದ್ದು, ಆಮೇಲೆ ಪುನಃ ಸಿಗರೇಟನ್ನು ಹೊತ್ತಿಸಿಕೊಂಡು ತಾನು ಹೊರಟು ಹೋದನು. ನಾನು ಏಕಾಕಿನಿಯಾಗಿ ಉಳಿದೆನು.

ನನಗೆ ಅಲ್ಲಿಂದ ಹೋಗಲು ಮನಸ್ಸಿರಲಿಲ್ಲವಾದುದರಿಂದ, ಆ ಮರದ ಕೆಳಗೇ ಕುಳಿತಿದ್ದೆನು. ಗಾಳಿಯು ಶೀತಲವಾಗಿಯೂ ಆಹ್ಲಾದಕರವಗಗಿಯೂ ಇತ್ತು. ಆದರೆ ಸ್ವಲ್ಪಹೊತ್ತಾದ ನಂತರ, ನಾನೂ ಸಹ ಅಲ್ಲಿಂದ ಎದ್ದು, ವರಾಂಡದ ಬಳಿ ಹೋಗಿ ಒಂದು ಬೆಂಚಿನ ಮೇಲೆ ಮಲಗಿಕೊಂಡು, ನನ್ನ ಆಲೋಚನೆಗಳಲ್ಲಿ ಮಗ್ನಳಾದೆನು. ಆಗ ನಾನು, ಸಾಫಿಜ್‌ಬೇಯು ಅಂದು ಸಂಜೆ ಉಲೂಕವನ್ನು ಶಿಕಾರಿಮಾಡಿದ ನಂತರ ನನ್ನೊಡನೆ ಸರೋವರದ ದಡದಲ್ಲಿ ಕುಳಿತು ಆಡಿದ ಮಾತುಗಳನ್ನು ಜ್ಞಾಪಕಮಾಡಿಕೊಂಡು, ಅವನ ದೃಢಸಂಕಲ್ಪಗಳನ್ನು ಅತ್ಯಂತ ದುಃಖದಿಂದ ಮನಸ್ಸಿನಲ್ಲಿ ಚಿರಿಪಿಹಾಕುತ್ತಿದ್ದೆನು. ಅಯ್ಯೋ, ಆ ಸಂಕಲ್ಪಗಳೆಲ್ಲವೂ ಏನಾಗಿ ಹೋದವು! ನಾಳೆ ಅವನ ಮದುವೆಯ ದಿನ! ಇನ್ನು ಸ್ವಲ್ಪ ಅವನು ತಾಳಲಾಗದಿತ್ತೆ? ಒಂದು ವರ್ಷ ಸಂಪೂರ್ತಿಯಾಗುವದರೊಳಗೆ ಬೇರೊಬ್ಬಳೊಡನೆ ವಿವಾಹವು ಸರಿಪಟ್ಟಿತೆ? ನನ್ನನ್ನು ಮದುವೆಯಾಗಲು ಇದ್ದ ಅಭ್ಯಂತರಗಳಿಂದ, ಅವನು ಎಷ್ಟು ಬೇಗನೆ ಹಿನ್ನೆಟ್ಟಿದನು! ಏನಿಲ್ಲದಿದ್ದರೂ ನನ್ನನ್ನು ಹುಡುಕಿ ಯಾದರೂ ಹುಡುಕಬಹುದಾಗಿತ್ತು! ಅವನು ತನ್ನ ಪ್ರತಿಜ್ಞೆಯನ್ನು ದೃಢವಾಗಿ ಹಿಡಿದಿದ್ದರೆ, ಕೊನೆಗೆ ನಸಿರುಲ್ಲಾಪಾಷಾರವರಿಗೆ ನಿರ್ವಾಹವಿಲ್ಲದಂತಾಗಿ, ಅವರು ಅನುಮತಿ ಕೊಡದಿರುತ್ತಿದ್ದರೆಂದು ಯಾರು ಹೇಳುತ್ತಾರೆ? ಅವನ ಮಾತಾಪಿತೃಗಳಿಗೆ ಮನಸ್ಸಿರಲಿಲ್ಲವೆಂಬುದರ ವಿನಾ, ಬೇರೆ ಯಾವ ಆಕ್ಷೇಪಣೆಯನ್ನೂ ಯಾರೂ ಮಾಡಲಿಲ್ಲ. ಆದುದರಿಂದ, ಈಗ ಅವನು, ತನಗೂ ನನಗೂ ಮಧ್ಯೆ ಎಂದೆಂದಿಗಾಗಿ ಹಾಕಿಕೊಳ್ಳುತ್ತಿರುವ ಗೋಡೆಯು ಸ್ವಯಂಕೃತವೇ ಆಗಿತ್ತು. ಅವನು ತಾನಾಗಿ ಒಪ್ಪದಿದ್ದರೆ, ಅವನನ್ನು ಆಕೆಯಳನ್ನು ಮದುವೆಯಾಗಲು ಯಾರೂ ನಿರ್ಬಂಧಿಸಲಾಗುತ್ತಿರಲಿಲ್ಲ.

ಇದ್ದಕ್ಕಿದ್ದಂತೆ ಯಾರದೋ ಹೆಜ್ಜೆಯ ಸದ್ದು ಕೇಳಿಸಿತು:- ಯಾರೋ ನನ್ನ ಬಳಿ ಬಂದು ನಿಂತಂತಾಯಿತು. ನಾನು ಬೇಗನೆ ತಲೆಯೆತ್ತಿ ನೋಡಿ

ಘಾಬರಿಯಿಂದ ಎದ್ದು ನಿಂತೆನು. ಹುರ್ಶೀಬೇಯು!

ಹುರ್ಶೀಬೇ—(ನಗುತ್ತಾ) ಇಷ್ಟು ಹೊತ್ತಿನಲ್ಲಿ ಇಲ್ಲೇನ ಮಾಡುತ್ತಿದ್ದೀ? ನಿನಗೆ ಮೈಯ್ಯಸರಿಯಾಗಿರಲಿಲ್ಲದಿದ್ದುದರಿಂದ, ಆಗಲೇ ಮಲಗಲು ಹೊರಟು ಹೋದೆಯೆಂದು ಕೇಳಿದೆ.

ನಾನು—(ತಡೆಯಿಂದ) ಹೇಗೆಯೋ ತೋಟದೊಳಗೆ ಬಂದೆನು.

ಅವನು ನಶೆಯನ್ನೇರಿದ್ದನೆಂದು ತಿಳಿದುದರಿಂದ ಕೈಲಾದಷ್ಟು ಬೇಗನೆ ಅಲ್ಲಿಂದ ಓಡಿಹೋಗಲಪೇಕ್ಷೆಯುಳ್ಳವಳಾದೆನು.

ಹುರ್ಶೀಬೇ—ನನಗಿದು ಮತ್ತಷ್ಟು ಒಳ್ಳೆಯದೇ ಆಯಿತು-ನಾನು ಬಂದಿರುವ ಕಾರ್ಯವನ್ನು ಮುಗಿಸಿಕೊಂಡು ನಿನ್ನೊಡನೆ ಮಾತನಾಡಲು ಅನುಕೂಲವಾಯಿತು. ಇಜ್ಜತ್‌ಪಾಷಾರವರು ತಮ್ಮ ಹೆಂಡತಿಯನ್ನು ಬರಹೇಳುತ್ತಾರೆ-ಅವರೆಲ್ಲಿದ್ದಾರೆ?

ನಾನು—ಅಮನೆಗೆ ಹೋಗಿದ್ದಾರೆ. ನಾನು ಕೂಡ ಅವರ ಬಳಿ ಹೋಗಬೇಕಾಗಿರುವದು. ನನ್ನನ್ನು ಹೋಗಲು ಬಿಡಿ. (ಅವನು ನನ್ನೆದುರಿಗೆ ಸರಿಯಾಗಿ ರಸ್ತೆಯನ್ನು ಅಡ್ಡಗಟ್ಟಿ ನಿಂತಿದ್ದನು)

ಹುರ್ಶೀಬೇ—(ನನ್ನನ್ನು ತಡೆಯಲು ತನ್ನ ಕೈಯನ್ನು ನನ್ನ ಭುಜದ ಮೇಲಿಟ್ಟು) ಇಲ್ಲ-ನಿನ್ನನ್ನು ನಾನು ಹೋಗಲು ಬಿಡುವದಿಲ್ಲ. ಇಲ್ಲೇ ಇರು. (ಅನ್ಯಾಯ ಮಾಡಲ್ಪಟ್ಟವನಂತೆ ಮುಖಮಾಡಿಕೊಂಡು) ಅದೆಷ್ಟು ಧೈರ್ಯ! ನನ್ನನ್ನು ಕಂಡರೇಕೆ ನೀನು ಹೀಗೆ ಹೇಗುತ್ತೀ?

ನಾನು ಜವಾಬನ್ನು ಕೊಡದಿದ್ದುದರಿಂದ ಅವನು ಬಗ್ಗಿ ನನ್ನ ಮುಖವನ್ನು ದುರದುರನೆ ನೋಡಹತ್ತಿದನು.

ಹುರ್ಶೀಬೇ—(ಆಕರಣ ಮಾಡುವ ರೀತಿಯಲ್ಲಿ) ಹಾಜೀರೇ, ಸಾಕು. ಇಷ್ಟು ಮೂರ್ಖಳಾಗಬೇಡ. ಬಾ, ಒಂದಾಗೋಣ. ನಾನು ನಿನ್ನ ಪ್ರೇಮಿಕನಾಗಿರುವೆನು. ಸಾಕು ಇದರಿಂದಲೇ ತಿಳಿದುಕೊ-ನಿನ್ನನ್ನು ನಾನೆಷ್ಟು ಪ್ರೀತಿಸುವೆನೆಂಬ ಒಂದು ಮುತ್ತನ್ನು ಕೊಟ್ಟು, ನೀನೂ ನನ್ನನ್ನು ಅಷ್ಟೇ ಪ್ರೀತಿಸುವೆಯೆಂದು ಹೇಳಿಬಿಡು-

ಮನಸನುಕಪ್ಟೆಯೆ | ಮುತ್ತನು ಕೊಡಲಿ |
ಹಣಕಾಸೊಂದೂ | ಬೇಕಿಲ್ಲನಕೆ ||

(ಕೋಪದಿಂದ ನನ್ನ ಮೈಯೊಳಗಿನ ರಕ್ತವು ಕುದಿಯಲಾರಂಭಿಸಲು, ನಾನು ಮತ್ತೆ ಜವಾಬನ್ನು ಕೊಡಲಿಲ್ಲ. ನಾನು ಏನನ್ನಾದರೂ ಹೇಳುವಷ್ಟರಲ್ಲೇ ಅವನು ಹೀಗೆನ್ನಲಾರದನು)

"ಯಾರಿಗೂ ಇವರ ಸಮಾಚಾರ ಸಹ ಗೊತ್ತಾಗುವದಿಲ್ಲ. ನಾನು ಈ ರಹಸ್ಯವನ್ನು ಗುಟ್ಟಾಗಿಟ್ಟಿರಬಾರದೆಂದು ನೀನು ತಿಳಿದುಕೊಂಡಿದ್ದೀಯಾ- ನೀನು ನನಗೊಂದು ಮುತ್ತನ್ನು ಕೊಟ್ಟರೆ ನಾನು ಯಾರೊಡನೂ ಈ ವಿಚಾರವನ್ನೆತ್ತುವದಿಲ್ಲ"

ಹೀಗೆಂದು ಅವನು ನನ್ನ ಸೊಂಟವನ್ನು ಹಿಡಿದುಕೊಂಡನು. ಇನ್ನಂತು ನನಗೆ ಸಹಿಸಲಾರದಂತಾಗಿ, ಅವನ ಕೈಯನ್ನು ಕೊಡವಿ ದೂರ ತಳ್ಳಿಬಿಟ್ಟೆನು.

ನಾನು—(ಉಸಿರುಹತ್ತಿ ಬರುತ್ತಿರಲು) ನನ್ನನ್ನು ಹೋಗಲು ಬಿಡು, ಜೋಕೆ ಇನ್ನು ಯಾವತ್ತೂ ಇಂಥಾ ಮಾತುಗಳನ್ನಾಡಬೇಡ. ನನ್ನನ್ನು ಏನೆಂದು ಭಾವಿಸಿಕೊಂಡಿರುವೀ ?

ಹುಸೇನಬೇ—(ನಗುತ್ತಾ) ಯಾಕೆ, ಪ್ರಿಯೇ, ಸ್ವಸ್ಥಳಾಗಿದ್ದೀ ತಾನೆ. ಏನಾಯಿತು ಪ್ರಾಣಪ್ರಿಯೆ, ಸಾಕು, ಇಂಥ ನಟನೆಯನ್ನು ಮಾಡಬೇಡ. ಏನಾಗುವದು. (ಹೀಗೆಂದು ಅವನು ನನ್ನನ್ನು ಕಂಕುಳಲ್ಲಿ ಎತ್ತಿಕೊಂಡು, ಪಕ್ಕೆಯನ್ನು ಚಿವುಟಿದನು) ನೋಡು. ನಾನು ಎಂಥಾ ಒಳ್ಳೇ ಶಿಕ್ಷೆ ಕೊಟ್ಟೆನು. ಈಗ ನೀನೊಪ್ಪದಿದ್ದರೂ ಬಿಟ್ಟರು ನಿನ್ನನ್ನು ಚುಂಬಿಸಿಯೇ ಬಿಡುವೆನು.

ಹೀಗೆಂದು ಅವನು ತನ್ನ ಮುಖವನ್ನು ನನ್ನ ಮುಖದ ಹತ್ತಿರ ತಂದನು. ನಾನು ತಪ್ಪಿಸಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸುತ್ತಿರುವಾಗ ಉದ್ಯಾನವನದ ದಾರಿಯಲ್ಲಿ ಯಾರೋ ಬರುತ್ತಿರುವ ಸದ್ದು ಕಿವಿಗೆ ಬಿದ್ದಿತು. ಅದನ್ನು ಕೇಳಿ ಅವನು ನಿಂತುಬಿಟ್ಟು, ಹಿಂದೆ ಮುಂದೆ ನೋಡಲಾರಂಭಿಸಿದನು. ನಾನವನನ್ನು ಕಂಡು ಓಡಲನುವಾಗಿ, ನಾಫಿಜ್ ಬೇಯು ನನ್ನ ಕಡೆ ಬರುತ್ತಿರುವದನ್ನು ನೋಡಿ, ಇನ್ನೂ ಹೆಚ್ಚು ಓಡಿದೆನು. ಆ ಸಮಯದಲ್ಲಿ ನಾನೆಷ್ಟು ಜ್ಞಾನಶೂನ್ಯಳಾಗಿದ್ದೆನೆಂದರೆ, ನಾನೇನ ಮಾಡತ್ತಿರುವೆನೆಂಬುದು ಸಹ ನನಗೆ ತಿಳಿಯಲಿಲ್ಲ. ಒಮ್ಮೆ ಅವನ ಆಲಿಂಗನದಲ್ಲಿ ಆಶ್ರಯ ಹೊಂದಬೇಕೆಂಬ ಭ್ರಾಂತಿಯು ಮತ್ತೆ ನನ್ನ ಹೃದಯದಲ್ಲಿ ಜನಿಸಿತು. ಕ್ಷಣಮಾತ್ರದಲ್ಲಿ ಈ ಆಲೋಚನೆಯು ಅತಿ ಪ್ರಬಲಿಸಿಕೊಂಡು, ನಾನು ನಿಸ್ವಾಧೀನಳಾಗಿ, ಓಡಿಹೋಗಿ ಅವನೆದೆಯನ್ನು ತಬ್ಬಿಕೊಂಡು ಬಿಟ್ಟೆನು.

ನಾನು—(ಉಸಿರುಹತ್ತಿ ಬರುತ್ತಿರಲು) ನನ್ನನ್ನು ಕಾಪಾಡಿ. ಹುಸೇನಬೇಗೆ ನನ್ನ ಮಾನಭಂಗ ಮಾಡುವಷ್ಟು ಧೈರ್ಯವೇ! ತನ್ನ ಮುದ್ದನ್ನು ತನ್ನಲ್ಲಿ

ನಾಯಕರಿಗೂ ಬೀರಿಕೊಂಡು ತಿರುಗಲು, ನಾನೇನು ಲೌಂಡಿಯಲ್ಲವೆಂಬುದನ್ನು ಅವನಿಗೆ ಹೇಳಿಬಿಡಿ.

ಈಗ ನನ್ನ ಮನೋಭಿಲಾಷೆಯೆಲ್ಲವೂ ಸಫಲವಾದಂತಾಯಿತು, ಯಾಕೆಂದರೆ, ನಾಫಿಜ್‌ಬೇಯು ನನ್ನನ್ನು ಯಾತನೆಯಾಗುವಷ್ಟು ಬಿಗಿಯಾಗಿ ಎದೆಗಪ್ಪಿಕೊಂಡು ಬಿಟ್ಟಿದ್ದನು. ನಾನವನ ಕಡೆ, ಭೀತಿಯಿಂದ ನೋಡುತ್ತಾ ಇದ್ದೆನು. ಎಷ್ಟೋ ಹೊತ್ತಾದ ನಂತರ ನನಗೆ, ಅವನು ಹುಸೇನಬೇಯ ತಂಗಿಯನ್ನು ವಿವಾಹವಾಗುವವನಾಗಿರುವನೆಂದೂ, ಅವರಲ್ಲಿ ಬೇಧವನ್ನು ಕಲ್ಪಿಸುವ ಬದಲು, ನನ್ನ ಕಷ್ಟಗಳನ್ನು ನಾನು ಅನುಭವಿಸಿಕೊಳ್ಳುವದು ಒಳ್ಳೆಯದೂ, ಎಂಬ ಆಲೋಚನೆಯು ತಲೆದೋರಿತು.

ಹುಸೇನಬೇ—(ನಿರ್ಲಜ್ಜೆಯಿಂದ) ನಾನು ವಿನೋದ ಮಾತ್ರ ಮಾಡುತ್ತಿದ್ದೆ.

ನಾಫಿಜ್‌ಬೇಯು ಅವನನ್ನು ಗದರಿಸಿ ತಡೆದು ಹೀಗೆಂದನು:-

"ಈ ಹುಡುಗಿಯು ನನ್ನ ಅಕ್ಕನ ಬಳಿ ಅತಿಥಿಯಾಗಿರುವಳಲ್ಲದೆ ನಮ್ಮ ತಂದೆಯವರ ಸ್ವೀಕಾರಪುತ್ರಿಯಾಗಿದ್ದಾಳೆ. ಇವಳು ಹಾಫಿಜ್‌ಪಾಷಾರವರ ಲೌಂಡಿಯೂ ಅಲ್ಲ, ಅವರ ಅಧೀನಳೂ ಅಲ್ಲ. ಇನ್ನು ಮೇಲೆ ನಿನ್ನ ವಿನೋದವನ್ನು, ನಿನ್ನ ಮನೆಯವರಷ್ಟರೊಳಗೇ ಇಟ್ಟುಕೊಳ್ಳುವದು ಒಳ್ಳೆಯದು-ಯಾಕೆಂದರೆ ಅವರಿಗೇ ಅದು ರುಚಿಸುವದು"

ಹುಸೇನಬೇ—(ಮುಖಭಂಗಿ ಮಾಡಿಕೊಂಡು) ಇವಳಿಗೆ ಯಾವ ತರಹದಲ್ಲಾದರೂ ಅಪಮಾನ ಮಾಡಬೇಕೆಂಬುದು ಎಂದಿಗೂ ನನ್ನ ಉದ್ದೇಶವಾಗಿರಲಿಲ್ಲದಿದ್ದುದೂ ಅಲ್ಲದೆ, ಇಷ್ಟು ಸಣ್ಣ ವಿಚಾರವನ್ನು ಇಷ್ಟು ದೊಡ್ಡದಾಗಿ ಮಾಡುತ್ತಾಳೆಂದು ನಾನು ಯೋಚಿಸಿಯೂ ಇರಲಿಲ್ಲ. ಇವಳು ಇತರ ಹುಡುಗಿಯರಿಗಿಂತ ಹೆಚ್ಚು ಶುದ್ಧಳೆಂಬುದನ್ನು ನಾನು ಹೇಗೆ ತಿಳಿಯು ಬೇಕಾಗಿತ್ತು ?

ನಾಫಿಜ್‌ಬೇ—ಒಳ್ಳೇದು, ಈಗ ನಿನಗೆ ಗೊತ್ತಾಯಿತಲ್ಲ. ಇನ್ನು ಮುಂದೆ ಇದನ್ನು ಜ್ಞಾಪಕದಲ್ಲಿಟ್ಟುಕೊ. ಆಯಿತು, ಇನ್ನು ಈ ಕ್ಷಣವೇ ಇಲ್ಲಿಂದ ಹೊರಟುಹೋಗು. ನೀನಿಲ್ಲಿದ್ದರೇನೂ ಪ್ರಯೋಜನವಾಗುವದಿಲ್ಲ.

ಹುಸೇನಬೇಯು, ಆಜ್ಞೆಯ ಮೇರೆ ನಡೆದುಕೊಳ್ಳುವದೊಳ್ಳೆಯದೆಂದು ಯೋಚಿಸಿ ಹೊರಟುಹೋದನು. ಅವನು ಕಣ್ಣಿಂದ ಮರೆಯಾಗುವವರೆಗೂ ನಾಫಿಜ್‌ಬೇಯು ಅವನನ್ನು ನೋಡುತ್ತಾ ಇದ್ದು, ಅನಂತರ ಬಿಸುಸುಯ್ದು ಕಾರುಣ್ಯತೆಯಿಂದ ಕೂಡಿದ ಮುಖದಿಂದ ನನ್ನನ್ನು ಈಕ್ಷಿಸಲಾರಂಭಿಸಿದನು.

ನಾಫಿಜ್‌ಬೇ—(ವ್ಯಂಗ್ಯತೆಯಿಂದ) ಅಥನಾ್‌ಬೇಗೆ, ಖಂಡಿತವಾಗಿ, ತಾನು

ಮಾಡಿದ ಕೆಲಸಕ್ಕಾಗಿ ತನಗೇ ಜಂಭವಿರಬಹುದೆಂದು, ನಾನು ಯೋಚಿಸುತ್ತೇನೆ. ಅವನು ನಿಜವಾಗಿಯೂ ಸ್ತೋತ್ರಾರ್ಹವಾದ ಕಾರ್ಯವನ್ನು ಮಾಡಿರುವನು ! ನಿನ್ನನ್ನು, ನನ್ನ ದೃಷ್ಟಿಯಿಂದ ರಕ್ಷಿಸಲು ಮನೆಯಿಂದ ಕಳುಹಿಸಿಬಿಟ್ಟು. ಈ ಶ್ಲಾಘನಕ್ಕೆ ನಿನ್ನ ಮೇರೆ ಅತ್ಯಾಚಾರ ಮಾಡಲು ಅವಕಾಶವಾಗುವದೆಂಬುದನ್ನು ಅವನು ಯೋಚಿಸಲಿಲ್ಲ.

ನಾನೇನುತ್ತರವನ್ನೂ ಕೊಡಲಿಲ್ಲ-ನನ್ನ ಉಸಿರು ವೇಗದಿಂದ ಬರುತ್ತಿರಲು, ಭಯದಿಂದಲೂ ವ್ಯಾಕುಲತೆಯಿಂದಲೂ ಕಂಪಿಸುತ್ತಿದ್ದೆನು.

ಇನ್ನೂ ಅವನು ನನ್ನನ್ನು ಎದೆಗಪ್ಪಿಕೊಂಡೇ ಇದ್ದನು. ಇದ್ದಕ್ಕಿದ್ದ ಹಾಗೆ, ತನ್ನ ತಲೆಯುಕೂದಲು ನನ್ನ ಕೂದಲನ್ನು ಸೋಕುವಷ್ಟು, ನನ್ನ ಕಡೆ ತನ್ನ ತಲೆಯನ್ನು ಬೊಗ್ಗಿಸಿದನು. ಇದನ್ನು ಕಂಡು, ಅವನು ನನ್ನನ್ನು ಚುಂಬಿಸಲಿಚ್ಛೆಯುಳ್ಳವನಾಗಿದ್ದಾನೆಯೋ ಎಂಬ ಭೀತಿ ನನಗೆ ಆಗಿ, ನನ್ನಲ್ಲಿ ಒಂದು ವಿಧವಾದ ಮೌನವುಂಟಾಯಿತು. ಆದರವನು ಥಟ್ಟನೆ ತಡೆದುಕೊಂಡು, ನನ್ನನ್ನು ಮೆಲ್ಲನೆ ಬೇರೆಮಾಡಿ ಬಿಟ್ಟನು.

ನಾಫಿಜ್‌ಬೇ—(ಪ್ರಯಾಸದಿಂದ ಧ್ವನಿಯನ್ನು ಸ್ವಾಧೀನಕ್ಕೆ ತಂದುಕೊಳ್ಳುತ್ತಾ) ನೀನು ಇಲ್ಲಿಗೇಕೆ ಬಂದೆ ? ಇೀನು ಆ ಮನೆಯಲ್ಲಿ ಮಲಗುತ್ತಿಎಂದು ನಾನು ತಿಳಿದಿದ್ದೆನು.

ನಾನು—(ಭಯದಿಂದ) ಹೌದು, ನಾನು ಅಲ್ಲಿಯೇ ಮಲಗುತ್ತೇನೆ. ಆದರೆ ಸ್ವಲ್ಪ ತಿರುಗಾಡಲು ಅಪೇಕ್ಷೆಯಾದುದರಿಂದ ಇಲ್ಲಿಗೆ ಬಂದೆನು.

ನಾಫಿಜ್‌ಬೇ—(ವ್ಯಸ್ತನಾಗಿ) ಆ ಮೂರ್ಖನು ನಿನಗಿಲ್ಲಿ ಸಿಕ್ಕಿ ನಿನ್ನ ಚುಂಬನವನ್ನು ಬೇಡುವಷ್ಟು ಧೈರ್ಯಮಾಡಿದನೋ ? ಮೊದಲೂ ಎಂದಾದರು ಅವನು ಈ ವಿಧವಾದ ಮಾತುಗಳನ್ನಾಡಿದ್ದನೋ ?

ನಾನು—(ಬೇಗನೆ) ಈ ವಿಧವಾಗಿ ಇಲ್ಲ-ಇಷ್ಟು ಅಚಾತುರತೆಯನ್ನು ಮೊದಲೆಂದೂ ಅವನು ಮಾಡಲಿಲ್ಲ.

ನಾಫಿಜ್‌ಬೇ—(ಕೋಪದಿಂದ) ಆದರೂ ಆ ದುರುಳನು ನಿನ್ನೊಡನೆ ಪ್ರೇಮವನ್ನು ಪ್ರದರ್ಶನ ಮಾಡುವಷ್ಟು ಧೈರ್ಯವನ್ನೇನೋ ಮಾಡಿದನು. ಯುಕ್ತವೂ ಸ್ವಚ್ಛವೂ ಆದ ನನ್ನ ಪ್ರೇಮವೆಂಬ ಸುಖತಿರುಗಿಸಿಕೊಂಡು ಬಿಟ್ಟು ಇಂಥಹವರ ಪ್ರೀತಿಗೆ ಆಸ್ಪದಕೊಡುವೆ. ನಿಜ-ಪ್ರಿಯರನ್ನು ತಿಳಿದುಕೊಳ್ಳುವದು ಬಹು ಕಷ್ಟ.

ನಾನು—(ಗರ್ವದಿಂದ) ಆದರೆ ನಾನೆಂದಿಗೂ ಹುಸೇಬೇಯನ್ನು ಈ

ವಿಚಾರದಲ್ಲಿ ಪ್ರೋತ್ಸಾಹಿಸಲಿಲ್ಲ. ಈ ಮಾತು ನಿಮ್ಮ ಮನಸ್ಸಿನಲ್ಲಿ ಯಾಕೆ ತಾನೆ ಹುಟ್ಟಿತು. ನೀವು ಹೇಗೆ ನನ್ನ ವಿಷಯುವಲ್ಲಿ ಈರೀತಿ ದುರಭಿಪ್ರಾಯ ಪಟ್ಟಿರಿ ?

ನಾಫಿಜ್‌ಬೇ—ಒಪ್ಪಿದೆ ಆದರೆ, ನನ್ನನ್ನು ದೂಷಿಸಲು ನಿನಗೆ ಬಾಧ್ಯತೆ ಇರುವಪಕ್ಕೆ, ನೀನು ಎಂದು ತಾನೆ ನನ್ನೊಡನೆ ಸರಿಯಾಗಿ ನಡೆದು ಕೊಂಡಿದ್ದೆ ?

ನಾನು ಉತ್ತರಕೊಡದೆ ಸುಮ್ಮನೆ ತಲೆಯನ್ನು ಬಗ್ಗಿಸಿಕೊಂಡಿದ್ದೆನು. ಒಂದು ಘಳಿಗೆ ಅವನು ನನ್ನನ್ನು ಉಲ್ಲಾಸಭರಿತವಾದ ದೃಷ್ಟಿಯಿಂದ ನೋಡುತ್ತಿದ್ದು ಆಮೇಲೆ ಮುಖವನ್ನು ತಿರುಗಿಸಿಕೊಂಡುಬಿಟ್ಟನು.

ನಾಫಿಜ್‌ಬೇ—(ನಿಷ್ಕಾರುಣ್ಯತೆಯಿಂದ) ನೀನು ಸಹ, ನೀನು ಮಾಡಿದ ಕೆಲಸಕ್ಕಾಗಿ ಜಂಭಪಡುತ್ತಿರುವೆಯೆಂದು ನಾನು ತಿಳಿದಿದ್ದೇನೆ. ನನ್ನ ಜೀವನವನ್ನು ನಾಶಮಾಡಿದುದು ಅಲ್ಲದೆ ನೀನೂ ಸಹ ನಾಶವಾಗಿಹೋದೆ. ನನ್ನಲ್ಲಿ ಕೊಂಚ ನಂಬಿಕೆಯನ್ನು ನೀನು ಇಟ್ಟಿದ್ದೇ ಆಗಿದ್ದರೆ, ಇಂದು ನನಗೆ ಅಪರಿಚಿತಳಾದೀ ಸ್ತ್ರೀಯನ್ನು ಮದುವೆಯಾಗಬೇಕಾದ್ದೂ ಇರುತ್ತಿರಲಿಲ್ಲ-ನಾನು ಹೊರಟು ಹೋದನಂತರ ಇನ್ನೂ ಹೆಚ್ಚಾಗುವ ಆ ಶ್ವಾನದ ತುಂಟತನವನ್ನು ನೀನು ಅನುಭವಿಸಬೇಕಾದ್ದೂ ಇರುತ್ತಿರಲಿಲ್ಲ.

ನಾನು—(ಬೇಗನೆ) ಅವನು ಮತ್ತೆ ಹೀಗೆ ಮಾಡಿದರೆ ನಾನು ಸನಿಯಾಖಾನುಮಳೊಡನೆ ಖಂಡಿತವಾಗಿಯೂ ಹೇಳಿಬಿಡುವೆನು. ಅವಳು ಬೇಡವೆಂದು ಹೇಳದಿರಳು.

ನಾಫಿಜ್‌ಬೇ—(ವ್ಯಂಗ್ಯತೆಯಿಂದ) ನಿಜವನ್ನು ಹೇಳುತ್ತೀ ! ಅವಳು ಇಜ್ಜತ್ ಪಾಷಾರವರೊಡನೆ ಇವರ ಪ್ರಸ್ತಾಪಮಾಡುವಳು-ವ್ಯರ್ಥವಾಗಿ ಒಂದು ಗದ್ದಲವೇಳುವದು. ಆದರೆ ಅವರ ಬೆನ್ನು ತಿರುಗಿದ ಕೂಡಲೆ ಅವನು ಮತ್ತೆ ನಿನ್ನೊಡನೆ ಮೊದಲಿಗಿಂತಲೂ ಕೇಡಾದ ರೀತಿಯಲ್ಲಿ ವರ್ತಿಸುವನು. ಬೈಸಿಕೊಂಡಮೇಲೆ ಅವನು ತನ್ನ ಚೇಷ್ಟೆಗಳನ್ನು ಬಿಟ್ಟುಬಿಡುವನೆಂದು ನೀನು ತಿಳಿದುಕೊಂಡಿದ್ದರೆ, ಇಂಥಾ ಜನರ ಸ್ವಭಾವವನ್ನು ನೀನು ಚೆನ್ನಾಗಿ ಅರಿತವಳಾಗಿಲ್ಲ.

ನಾನು ಉತ್ತರ ಕೊಡಲಿಲ್ಲ. ಅವನೂ ಸಹ ಸ್ವಲ್ಪ ಹೊತ್ತು ಮೌನವಾಗಿದ್ದನು. ಆಗ ಅವನು ಒಂದು ಕೌಚಿನ ಮೇಲೆ ಕುಳಿತುಕೊಂಡಿದ್ದನು. ನನ್ನನ್ನೂ ಅಲ್ಲಿ ಕುಳಿತುಕೊಳ್ಳಲು ಸಂಜ್ಞೆ ಮಾಡಿದನು.

ನಾನು ಮೌನದಿಂದ ಆಜ್ಞೆಯನ್ನಂಗೀಕರಿಸಿದೆನು. ನಾವಿಬ್ಬರೂ

ಪಕ್ಕಪಕ್ಕದಲ್ಲಿ ಕುಳಿತುಕೊಂಡಿದ್ದೆವು. ಅವನ ತೋಳು ನನ್ನ ಹಿಂದುಗಡೆ ನೀಡಲ್ಪಟ್ಟಿದ್ದುದರಿಂದ, ಅವನ ಬೆರಳುಗಳು ನನ್ನ ಕೊರಳನ್ನು ಕೊಂಚ ಕೊಂಚ ಸೋಕುತ್ತಿದ್ದವು. ನನ್ನ ಮನಸ್ಸಿಗೆ ಆಗ ಅಸಾಧಾರಣವಾದ ಶಾಂತಿಯು ಉಂಟಾಗಿತ್ತು. ಕ್ಷಣಮಾತ್ರದ ಆ ಸೌಖ್ಯವು ನನ್ನ ಸಮಸ್ತ ದೌರ್ಭಾಗ್ಯಗಳನ್ನೂ ಪರಿಹರಿಸಲು ಸಾಕಾಗುವಂತೆ ತೋರುತ್ತಿತ್ತು. ನಾನು ಲಜ್ಜೆಯಿಂದ ಅವನ ಕಡೆ ನೋಡಲು, ಅವನು ವ್ಯಸನಾಕ್ರಾಂತನಾಗಿಯೂ ಆಕುಲಿತಮನನಾಗಿಯೂ ಕಾಣಿಸುತ್ತಿದ್ದನು. ಆಗ ಅವನ ಆಲೋಚನೆಗಳು ನನ್ನಾಲೋಚನೆಗಳು ಇದ್ದಂತೆ ಕಾಣಿಸುತ್ತಿರಲಿಲ್ಲ.

ನಾಫಿಜ್ ಬೇ—(ಕಷ್ಟ ಪ್ರಯತ್ನದಿಂದ) ನೀನು ನಿನ್ನ ಹಳೇ ಮನೆಯ ವಿಚಾರವೇನನ್ನೂ ಕೇಳಲಿಲ್ಲ. ಹಳಬರನ್ನು ಮರೆತುಬಿಡುವಷ್ಟು ನಿನಗಿಲ್ಲಿ ಹೊಸ ಸ್ನೇಹಿತರುಗಳು ದೊರೆತಿರುವರೇನು ?

ನಾನು—(ಮೆಲ್ಲನೆ) ಎಂದಿಗೂ ಇಲ್ಲ. ನಾನಾದರೊ ಎಲ್ಲರ ವಿಚಾರವನ್ನೂ ಕೇಳಲು ಹೃತ್ಪೂರ್ವಕವಾಗಿಯೂ ಆಶಿಸುತ್ತಿರುವೆನು. ಅಥವ್ ಬೇಯವರು ವಲಿಯಾಖಾನಮಳನ್ನೂ ತನ್ನೊಡನೆ ರುಮೇಲಿಗೆ ಕರೆದುಕೊಂಡು ಹೋಗಿರುವರೇ ?

ನಾಫಿಜ್ ಬೇ—ಹೌದು, ಅವಳೂ ಹೋಗಿರುವಳು. ಅವಳಿಲ್ಲದಿರುವ ಕಾರಣ ಮನೆಯು ಬಹಳ ಶೂನ್ಯವಾಗಿ ಹೋಗಿರುವದು. ಒಳ್ಳೇದು–ಇಷ್ಟೇ ಎಲ್ಲವು. ನಾನು ಬೂಹಾವರೆಯ ಮುಂದೆ ಆ ಮಂತ್ರವಾದಿನಿಯನ್ನು ಕರೆತಂದು, ಯಂತ್ರದ ವಿಚಾರದಲ್ಲಿ ಬೂಹಾವರೆಯ ಸುಳ್ಳನ್ನು ತೋರಿಸಿ ಕೊಟ್ಟೆನು. ಇದಾದನಂತರ ಅವಳು ಮಾರಲ್ಪಟ್ಟಳು. ಒಬ್ಬ ಪಾಷಾನು ಅವಳನ್ನು ಕರೆದುಕೊಂಡು ತತ್ಕ್ಷಣವೇ ಮದುವೆ ಮಾಡಿಕೊಂಡುಬಿಟ್ಟನು.

ನಾನು—(ನನ್ನ ಕಷ್ಟಕಾಲಗಳಲ್ಲಿ ಖಂಜೆಯು ಮಾಡಿದ ಸಹಾಯಗಳನ್ನು ಸ್ಮರಿಸಿಕೊಂಡು) ಖಂಜೆಯು ಅಥವ್ ಬೇಯವರೊಡನೆ ಹೋಗಿರುವಳೇ ?

ನಾಫಿಜ್ ಬೇ—ಇಲ್ಲ. ಅವಳನ್ನು ಸಲೀಮಾಗನೆಂಬ ಗುಲಾಮನು ಮದುವೆ ಮಾಡಿಕೊಂಡುಬಿಟ್ಟನು. ಅವನು ನಿನ್ನನ್ನು ಇಲ್ಲಿ ಬಿಡುವದಕ್ಕೆ ಬಂದಿದ್ದನೆಂದು ಇಜ್ಜತ್ ಪಾಷಾರವರಿಂದ ತಿಳಿಯಿತು. ತಂದೆಯವರು ಅವನಿಗೆ ಕೊಂಚ ವರಮಾನವನ್ನು ಕಲ್ಪಿಸಿಕೊಟ್ಟು ಅವನನ್ನು ನೌಕರನನ್ನಾಗಿ ಮಾಡಿಕೊಂಡಿರುವರು. ಇಬ್ಬರೂ ಬಹಳ ಹರ್ಷದಿಂದಿರುವರು ಆಲೀಬೇಯೂ ಇತ್ತೀಚೆಗೆ ಅಲ್ಲಿಲ್ಲ–ಅವರಿಗೆ ಕೌನಸ್‌ನಲ್ಲಿ ಒಂದು ಸ್ಥಾನಸಿಕ್ಕಿರುವದು.

ನಾನು—ವಹೀದಾಖಾನಮಳೂ ಅವರ ಜತೆ ಹೋಗಿರುವಳೇ ?

ನಾಫಿಜ್‍ಬೇ—ಸಂದೇಹವಿಲ್ಲದೆ ಕೌನ್ಸ್‍ನ ಚಂದ್ರಮುಖಿಯಾವಳಾದ ರೊಬ್ಬಳು ಅವರನ್ನು ಪ್ರೇಮಪಾಶದಲ್ಲಿ ಸಿಕ್ಕಿಹಾಕಿಸಿಕೊಂಡು ಬಿಡಲೆಂದು ಅವರನ್ನು ಅವಳು ಅಲ್ಲಿಗೆ ಒಂಟಿಯಾಗಿ ಹೋಗಲು ಬಿಡುವಳೇ. ಅಲೀಬೇ ಯವರು ಅಲ್ಲಿಗೆ ಹೋಗುವದು ತಂದೆಯುವರಿಗೆ ಇಷ್ಟವಿರಲಿಲ್ಲವಾದರೂ ಅವರು ದೃಢಮನಸ್ಸನ್ನು ಮಾಡಿಬಿಟ್ಟಿದ್ದರು. ಅವರು ನನ್ನೊಡನೆ, ವಲಿಯಾ ಖಾನಮಳೂ, ನೀನೂ ಹೊರಟುಹೋದಾಗಿನಿಂದ ಮನೆಯು ಶೂನ್ಯವಾಗಿ ಹೋಯಿತೆಂದು ಹೇಳಿಕೊಂಡರು. ನನಗೂ ಅದು ಒಪ್ಪಿತವಾಗಿದ್ದುದರಿಂದ ನಾನವರನ್ನು ತಡೆಯಲಿಲ್ಲ.

ಹೀಗೆಂದು ಹೇಳಿ ಅವನು ಕೊಂಚ ಸುಮ್ಮನಿದ್ದು ಮತ್ತೆ ನಗುತ್ತಾ ಇಂತೆಂದನು:—

"ನೀನು ಖಿಸ್‍ತಂತನಿಯಾದಿಂದ ಓಡಿ ಬಂದುಬಿಟ್ಟ ನಂತರ, ನಾನು ಏನೇನ ಮಾಡಿದೆನೆಂಬ ವಿಚಾರವನ್ನು ತಿಳಿಯಲಿಷ್ಟಪಡುತ್ತೀಯಾ ? ನೀನು ಹೊರಟುಬಂದ ಮೂರನೆಯ ದಿನವೇ, ನಾನು ನಿನ್ನನ್ನು ಹುಡುಕುತ್ತಾ ಡಾಕ್ಟರ ಮನೆಗೆ ಬಂದು, ನಿನ್ನ ವಿಷಯ ವಿಚಾರಿಸಿದೆನು. ಅವರಿಗೆ ತಿಳಿದಿರ ಲಿಲ್ಲವೋ ಅಥವ ಮರೆಮಾಚಬೇಕೆಂದೋ, ಅವರು, ನೀನು ಅಥಮ್‍ಬೇಯ ಅಪ್ಪಣೆಯ ಮೇರೆಗೆ ಅಲ್ಲಿಂದ ಹೊರಟುಹೋದೆಯೆಂದಿಷ್ಟು ಮಾತ್ರ ಹೇಳಿದರು. ಅದನ್ನು ಕೇಳಿ ನನಗೆ ಮೈಮೇಲೆ ಜ್ಞಾನವಿಲ್ಲದಷ್ಟು ಕೋಪ ವುಂಟಾಗಿ, ಮನೆಗೆ ಬಂದು ಅಥಮ್‍ಬೇಯೊಡನೆ ಚೆನ್ನಾಗಿ ಜಗಳವಾಡಿದೆನು. ಪ್ರತಿಬಂಧಕವಿದ್ದರೂ ಹರಮ್‍ಸರಾದೊಳಗೆ ಬಲಾತ್ಕಾರದಿಂದ ನುಗ್ಗಿ, ಅಮ್ಮಾವರನ್ನು, ನೀನು ಗುಪ್ತವಾಗಿರತಕ್ಕ ಸ್ಥಳವನ್ನು ತಿಳಿಸಲು ಬಹಳವಾಗಿ ಬೇಡಿಕೊಂಡೆನು. ಅಂದು ನಾನು ಎಲ್ಲರೊಡನೆ ಅತ್ಯಂತ ಹುಚ್ಚುತನದಿಂದ ವರ್ತಿಸಿ, ಬಾಯಿಗೆಬಂದ ಒಳ್ಳೇದು ಕೆಟ್ಟದೆಲ್ಲವನ್ನೂ ಆಡಿರುವೆನೆಂದು ನನಗೆ ಚೆನ್ನಾಗಿ ಗೊತ್ತು. ಆದರೆ ಅವರೆಲ್ಲರೂ ಸಮಾಧಾನದಿಂದಿದ್ದು ನನ್ನ ಮಾತಿಗೆ ಪ್ರತಿಮಾತನಾಡದಿದ್ದುದು ಉಪಕಾರವಾಯಿತು. ಸಾಧ್ಯವಾದ ಮತ್ತು ಅಸಾಧ್ಯವಾದ ಸ್ಥಳಗಳಲ್ಲೆಲ್ಲಾ ನಿನ್ನನ್ನು ಹುಡುಕಿ, ಆಮೇಲೆ ನಿನ್ನ ವಿಚಾರದಲ್ಲಿ ಕೈತೊಳೆದು ಕುಳಿತುಕೊಂಡು, ಇನ್ನು ಹೆಚ್ಚು ನಿನ್ನನ್ನು ಹುಡುಕುವ ಪ್ರಯತ್ನ ಮಾಡುವದಿಲ್ಲವೆಂದು ಮನಸ್ಸು ಮಾಡಿಕೊಂಡೆನು. ನನಗಿನ್ನೂ ಸರಿಯಾಗಿ ಶಕ್ತಿ ಬಂದಿರಲಿಲ್ಲದಿದ್ದುದರಿಂದ, ಖಿಸ್‍ತಂತನಿಯಾ ವನ್ನು ಬಿಟ್ಟು ಹೊರಗೆಹೋಗಿ, ಕೊಂಚ ಸುತ್ತಿದರೆ ಒಳ್ಳೆಯದಾಗುವದೆಂಬ ಆಲೋಚನೆಯಾಯಿತು. ರಜವನ್ನು ತೆಗೆದುಕೊಂಡು, ಪ್ಯಾರಿಸ್, ವಿಯನ್ನಾ,

ಸ್ಪಿಡ್ಬರ್ಗ್ನಿಂಡನ್ನು ತಿರುಗಿದೆನು. ಆದರೆ ವ್ಯರ್ಥ-ಅಸೂಯೆ ಮತ್ತು ಕಾಮುಕ ವೈಮನಸ್ಯಂಬ ಪಿಶಾಚವು ನನ್ನ ತಲೆಯಿಂದ ಇಳಿದು ಹೋಗಲಿಲ್ಲ-ಇಲ್ಲವೇ ಇಲ್ಲ. ಈ ವಿಧವಾದ ಆಲೋಚನೆಗಳಿಗೆ ಮನಸ್ಸಿನಲ್ಲಿ ಜಾಗಕೊಟ್ಟುದು ನನ್ನ ಅವಿವೇಕತೆಯೇ ಸರಿ-ಯಾಕೆಂದರೆ, ಒಂದು ವೇಳೆ ಅಫಮ್‌ಬೇಯು ಸ್ವಂತ ಉದ್ದೇಶವ್ಯಾವುದಕ್ಕಾದರೂ ನಿನ್ನನ್ನು ಕಳುಹಿಸಿದ್ದರೂ, ತಂದೆಯವ ರೆಂದಿಗೂ ಈ ವ್ಯಾಜವನ್ನು ಒಪ್ಪುತ್ತಿರಲಿಲ್ಲವೆಂಬಿಷ್ಟನ್ನಾದರೂ ನಾನೂ ತಿಳಿದುಕೊಳ್ಳಬೇಕಾಗಿತ್ತು. (ಈ ಸಮಯದಲ್ಲಿ ನಾನು ಅವನ ಕಡೆ ನೋಡಿ ದೆನು, ಯಾಕೆಂದರೆ ಅವನ ನಿಷ್ಕಾರಣವಾದ ಅನುಮಾನವನ್ನು ಕೇಳಿ ನನಗೆ ಅತ್ಯಾಶ್ಚರ್ಯವಾಯಿತು. ಅವನು ನಗಲಾರಂಭಿಸಿ ಪುನಃ ತನ್ನ ಮಾತನ್ನು ಶುರುಮಾಡಿದನು,) ಹೌದು, ಆ ಕಾಲದಲ್ಲಿ ನನಗದೇ ಅನುಮಾನವಿತ್ತು. ನಿಜವಾದ ಸಂಗತಿಯು ನನಗೆ ಗೊತ್ತಾಗಿದ್ದರೆ, ನಿನ್ನನ್ನು ಹುಡುಕುವದನ್ನು ಬಿಡುತ್ತಲೂ ಇರಲಿಲ್ಲ-ಈಗ ಇಲ್ಲಿ ಯಾವಳೋ ಒಬ್ಬ ಹೆಂಗಸಿಗೆ ಗಂಡನಾ ಗಲು ಕುಳಿತಿರುತ್ತಲೂ ಇರಲಿಲ್ಲ. ಕಡೆಗೆ ಒಂದು ಹೊಸ ಆಲೋಚನೆಯು ನನ್ನ ಮನಸ್ಸಿನಲ್ಲಿ ಹುಟ್ಟಿತು-ಯಾವುದೆಂದರೆ, ಬಹುಶಃ ನೀನು ನಿನ್ನ ಹಳ್ಳಿ ಯಾದ ಕಿಷ್‌ಆಗಾಜ್‌ನಲ್ಲಿ ಸಿಕ್ಕುವೆಯೆಂದು ನಾನು ಆಗ ಮಾಂಟಿಕಾರ್ಲೋ ವಿನ ಒಂದು ಕ್ಲಬ್‌ನಲ್ಲಿ ಇದ್ದುಕೊಂಡು ಜೂಜುಗಾರರ ಆಟವನ್ನು ನೋಡುತ್ತಾ ಹೊತ್ತು ಕಳೆದುಕೊಂಡಿರುವಾಗ್ಗೆ, ಇದ್ದಕ್ಕಿದ್ದ ಹಾಗೆ, ನನಗೂ ಸಹ, ಖಸ್‌ತಂತನಿಯಾದಲ್ಲಿ ನೂರಾರುಗಟ್ಲೆ ಹಣ ಕಳೆದುಕೊಳ್ಳುವ ಸ್ಥಿತಿ ಬಂದಿದ್ದುದೂ, ತಂದೆಯವರು ನನ್ನ ಸಾಲವನ್ನು ತೀರಿಸಿದುದೂ ಆ ಕಾಲ ವೆಲ್ಲವೂ ಜ್ಞಾಪಕ ಬಂದಿತು. ಆಮೇಲೆ, ಅಂದು ನಾಟ್ಯವಾದ ಮರುದಿನ ನನಗೂ ನಿನಗೂ ಬರಾಮಡೆಯಲ್ಲಿ ನಡೆದ ಮಾತುಕಥೆಯು ನೆನಪಿಗೆ ಬಂದಿತು. ಆ ಸಂಭಾಷಣೆಯು ನೆನಪಿಗೆ ಬಂದ ಒಡನೆಯೇ ಕಿಷ್‌ಆಗಾಜವು ಜ್ಞಾಪಕ ಬಂದು, ಈ ಹೆಸರು ಖಸ್‌ತಂತನಿಯಾದಲ್ಲೇ ಏತಕ್ಕೆ ನೆನಪಿಗೆ ಬರಲಿಲ್ಲವೆಂದು ಬಹಳ ಆಶ್ಚರ್ಯವಾಯಿತು. ಅದಕ್ಕೆ ಕಾರಣವೇನೆಂದರೆ, ನೀನು ಖಸ್‌ತಂತನಿಯಾದಿಂದ ಹೊರಗೆಂದಿಗೂ ಹೋಗಿರಲಾರೆಯೆಂದು ನಾನು ತಿಳಿದುಕೊಂಡಿದ್ದುದೇ ಆಯಿತು. ನಾನು ಆ ಕ್ಷಣವೇ ಕ್ಲಬ್ಬಿನಿಂದ ಹೊರಟು, ನಾನು ಇಳಿದುಕೊಂಡಿದ್ದ ಹೋಟೇಲಿಗೆ ವಾಪಸು ಬಂದು, ನೌಕರನೊಡನೆ ನನ್ನ ಸಾಮಾನುಗಳನ್ನು ಕಟ್ಟಲು ಹೇಳಿ ರೈಲಿನ ಮೂಲಕ ಮಾರ್‌ಸೇಲ್‌ಗೆ ಬಂದೆನು. ಅಲ್ಲಿಂದ ನೆಟ್ಟಗೆ ಸಮರ್‍ನಾಕ್ಕೆ ಹೋಗಿ, ಹನ್ನೆರಡು ದಿನಗಳನಂತರ ಕಿಷ್‌ಆಗಾಜವನ್ನು ತಲುಪಿದೆನು. ಆದರೆ ದುರಾ

ದೃಷ್ಟಪೇತಾಗಿತ್ತೆಂದರೆ, ಅಲ್ಲಿಂದಲೂ ಸಹ ನಿರಾಶಿತನಾಗಿ ಪರಾಜಿತನಾಗಿ ಹಿಂತಿರುಗಿ ಬಂದು, ನಿನ್ನ ಯೋಚನೆಯನ್ನು ಶುದ್ಧವಾಗಿ ಮನಸ್ಸಿನಿಂದ ದೂರಮಾಡಿಬಿಡುವೆನೆಂದು ನಿರ್ಧಾರಮಾಡಿಕೊಂಡೆನು. ನನ್ನೀ ಪ್ರತಿಜ್ಞೆಯನ್ನು ಎಷ್ಟು ದೃಢವಾಗಿಟ್ಟುಕೊಂಡಿದ್ದೆನೆಂಬುವನ್ನು ನೀನೇ ನೋಡು-ಈಗ ನಿನ್ನ ಮಗ್ಗುಲಿಗೆ ತಗುಲಿಕೊಂಡು ಕುಳಿತಿರುವೆನು-ನಾಳೆ ಬೇರೊಬ್ಬ ಹೆಂಗಸಿನೊಡನೆ ನನ್ನ ವಿವಾಹವಾಗುವದಾಗಿರುವದು. ಕೊನೆಯ ಘಳಿಗೆಯಲ್ಲಿ, ಈ ವಿವಾಹವು ನನಗೆ ಬೇಡವೆಂದು ಹೇಳಿ, ನನ್ನನ್ನು ನಾನು ಹಾಳುಮಾಡಿಕೊಳ್ಳುವದಕ್ಕಿಂತ ಗುಂಡಿನಿಂದ ತಲೆಯನ್ನು ಹೊಡೆದುಕೊಂಡು ನಾಶಮಾಡಿಕೊಳ್ಳುವದು ಉತ್ತಮವೆಂದು ಯೋಚಿಸುತ್ತಿರುವೆನು."

ಅವನು ಈಗ ಅತ್ಯಂತ ಕ್ಷೋಭಿತನಾಗಿದ್ದನು. ನೋಡನೋಡುತ್ತಲೇ ಅವನ ರೀತಿಯಲ್ಲಿ ವಿಚಿತ್ರಕರವಾದ ಬದಲಾವಣೆಯುಂಟಾಗಿ ಹೋಗಿತ್ತು. ನಾನು ಕೈಯನ್ನು ಮುಂದಕ್ಕೆ ನೀಡಿ ಅವನ ಮಗ್ಗುಲನ್ನು ಸ್ಪರ್ಶಿಸಿದೆನು.

ನಾನು—(ಕಂಪಿಸುತ್ತಿರುವ ಧ್ವನಿಯಿಂದ) ಇಂಥಾ ಮಾತನ್ನಾಡಬೇಡಿ. ಇದೇನ ಯೋಚಿಸಿರುವಿರಿ !

ಸಾಫಿಜ್‌ಬೇ—(ಅತ್ಯಂತ ವಿಷಾದದಿಂದ) ಏತಕ್ಕಾಗಬಾರದು ? ಈ ತಿಂಗಳೊಳಗೆ ನನ್ನ ಮನಸ್ಸಿನಲ್ಲಿ ಏನೇನು ನಡೆದಿರುವದೆಂಬುದು ನಿನಗೇನು ಗೊತ್ತು ? ಪ್ರಾಣೇಶ್ವರಿ, ಒಂದೊಂದು ಸಮಯ, ನಿನ್ನನ್ನು ಎಲ್ಲರ ಮುಂದೂ ಎದೆಗಪ್ಪಿಕೊಂಡು ಯಥೇಷ್ಟವಾಗಿ ಕಣ್ಣೀರನ್ನು ಸುರಿಸಲೇ ಎಂಬುದನ್ನೇ ಮನಸ್ಸು ಆಶಿಸುತ್ತಿತ್ತು. ಒಂದೊಂದು ಸಲ, ಕೊನೆಯ ಘಳಿಗೆಯಲ್ಲಿ ಮದುವೆಯ ವಿಚಾರದಿಂದ ಕೈಕೊಡವಿ ತನ್ಮೂಲಕ ತಂದೆಯವರನ್ನು ಅಪಮಾನಿತರನ್ನಾಗಿ ಮಾಡಿ, ನಿನ್ನನ್ನು ಯಾರಿಗೂ ತಿಳಿಯದಿರುವಂಥ ಒಂದು ಸ್ಥಳಕ್ಕೆ ಎತ್ತಿಕೊಂಡು ಹೋಗಿ, ಅಲ್ಲಿ ಶಾಂತಿಯಿಂದ ಮದುವೆಯಾಗುವದು ಉಚಿತವೂ, ನ್ಯಾಯಸಮ್ಮತವೂ ಎಂದೂ ಮನಸ್ಸಿಗೆ ತಿಳಿಯ ಹೇಳಿರುವೆನು. ಹಾಜಿರೇ, ನಾನು ಒಂದೊಂದು ಸಮಯ ಘಾಬರಿಗೊಂಡು, ಅವಸರದಿಂದ ನಿನ್ನನ್ನು ಬಿಟ್ಟು ಹೊರಟು ಹೋಗುತ್ತಿದ್ದುದಕ್ಕೆ ಕಾರಣವೇನೆಂಬುದು ನಿನಗೆ ಗೊತ್ತೇ ? ನಿನ್ನ ಜೊತೆಯಲ್ಲಿ ಹೆಚ್ಚಾಗಿದ್ದರೆ ಏನಾದರೊಂದು ಅಕೃತ್ಯ ಮಾಡುವ ಸಂಭವವಿರುತ್ತಿದ್ದುದೇ.

ನಾನು—(ನಿಶ್ಚಿಷ್ಟತೆಯಿಂದ) ನಿಮ್ಮ ವಿಚಾರವು ನನಗೆ ತಿಳಿಯುತ್ತಿರಲಿಲ್ಲವೆಂದು ಯೋಚಿಸುತ್ತೀರಾ-ಮತ್ತು ಇಷ್ಟು ಕಾಲದಲ್ಲಿ ನಾನು ಸಹ ಕಷ್ಟವನ್ನೂ ದುಃಖವನ್ನೂ ಅನುಭವಿಸಲಿಲ್ಲವೇ ? ನಾಳೆಯಿಂದ ನೀವು ನನಗೆ

ಹೊರಗಿನವರಾಗಿ ಹೋಗಿ, ನಿಮ್ಮನ್ನು ಬೇರೊಬ್ಬ ಸ್ತ್ರೀಯ ಪತಿಯೆಂದು ಭಾವಿಸಿಕೊಳ್ಳುವದು ನನಗೆ ಸುಲಭವಾದ ಕಾರ್ಯವೆಂದು ತಿಳಿದುಕೊಂಡಿರುವಿರಾ ?

ಈ ವಿಧವಾದ ದುಃಖದಾಯಕವಾದ ಆಲೋಚನೆಗಳು ಆಗ ನನ್ನ ಮನಸ್ಸನ್ನು ಆವರಿಸಿಕೊಂಡು ಬಂದುದರಿಂದ, ನಾನು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಧಾರಾಕಾರವಾಗಿ ಅಳಲಾರಂಭಿಸಿದೆನು.

ಒಂದು ಘಳಿಗೆ ಅವನು ಸುಮ್ಮನಿದ್ದು, ಆಮೇಲೆ ನನ್ನ ಕಡೆ ಬಂದು ನನ್ನನ್ನು ಎದೆಗಪ್ಪಿಕೊಂಡನು.

ಸಾಫೆಜ್‌ಬೇ—(ಆವೇಶದಿಂದ) ಪ್ಯಾರಿ, ನಿಲ್ಲಿಸು-ನನ್ನಿಂದ ಇದ ನೋಡಲು ಆಗುವದಿಲ್ಲ. ಹಾಜಿರೇ, ನಮ್ಮಿಬ್ಬರಿಗೂ ಅಗಲಿಕೆಯಿರಕೂಡದು. ಜೀವಾಧಿಕೆ, ನಡಿ, ಇಲ್ಲಿಂದ ಓಡಿ ಹೊರಟುಹೋಗೋಣ. ಮದುವೆಯ ಹುಡುಗಿಗೆ ಇದರಿಂದೇನೂ ಕೆಡುಕಾಗುವದಿಲ್ಲ-ಯಾಕೆಂದರೆ ಅವಳಿಗೆ ನನ್ನ ಪರಿಚಯು ವಿಲ್ಲದಿರುವದರಿಂದ ಪ್ರೀತಿಯೂ ಇರುವದಿಲ್ಲ. ಅವಳಿಗೆ ನಾನು ಯಾವದಾದರೊಂದು ಊರಿನಿಂದ, ಬರೆಯಲು ಪೇಪರ್‌ನು ಸಿಕ್ಕಿದರೆ ತಲಾಕ್‌ನಾಮೆವನ್ನು ಕಳುಹಿಸಿಬಿಡುವೆನು. ಇದರಿಂದ ಯಾರಿಗೂ ಏನೂ ನಷ್ಟವಾಗುವದಿಲ್ಲ. ಹಾಜಿರೇ, ನಾನು ಇನ್ನು ನಿನ್ನನ್ನು ಬಿಟ್ಟಿರಲು ಶಕ್ತನಲ್ಲ.

ನನ್ನ ಹೃದಯದಲ್ಲೂ ಆಶೆಯು ಹುಟ್ಟಿದುದರಿಂದ ನಾನು ಮಾತನಾಡಲಿಲ್ಲ. ಅವನನ್ನು ಮತ್ತೆ ಕೈಯಿಂದ ತಪ್ಪಿಸಿಕೊಂಡು ಹೋಗಲು ಬಿಡಲಾಗುತ್ತಿತ್ತೇ ?

ಸಾಫಿಜ್‌ಬೇ-(ಉತ್ಸುಕತೆಯಿಂದ) ಇದರಲ್ಲಿ ಅಭ್ಯಂತರ ತಾನೆ ಏನಿರುವುದು ? ನಾನು ಓಡಿಹೋದರೆ ಜನರು ನನ್ನದು ತಪ್ಪೆಂದು ಹೇಳುವರೇ ವಿನಾ, ಮದುವೆಯ ಹುಡುಗಿಗೆ ಇದರಿಂದ ಏನೂ ನಷ್ಟವಾಗುವದಿಲ್ಲ. ಜೀವಿತೇಶ್ವರಿ ಪುನಃ ನನ್ನ ಅಗಲಿಕೆಯನ್ನು ಸಹಿಸಿಕೊಳ್ಳುವಷ್ಟು ನಿನ್ನಲ್ಲಿ ಶಕ್ತಿಯಿರುವದೇ ?

ನಾನು—(ಬಿಕ್ಕುಬರುತ್ತಿರಲು) ಇಲ್ಲ, ಇಲ್ಲ, ಇನ್ನು ನಾನು ನಿಮ್ಮನ್ನು ಬಿಟ್ಟಿರಲಾರೆನು. (ಅನಂತರ ಮನಸ್ಸನ್ನು ಸಮಾಧಾನಕ್ಕೆ ತಂದುಕೊಂಡು, ವ್ಯಥೆಯಿಂದ) ಪ್ರಾಣಾಧಿಕ, ಇಲ್ಲ, ಹಾಗೆ ಮಾಡಕೂಡದು-ಅದು ಆಗುವದಿಲ್ಲ. (ಅವನೇನನ್ನೋ ಹೇಳಲಿಚ್ಛಿಸುತ್ತಿರುವದನ್ನು ಕಂಡು) ನೀವು ಹೇಳುವದು ನನ್ನಿಂದ ಆಗುವದಿಲ್ಲ. ನನ್ನ ದೆಸೆಯಿಂದ ನೀವು ಹಾಳಾಗಿಹೋಗುವದನ್ನು ನಾನೆಂದಿಗೂ ಒಪ್ಪಲಾರೆನು. ನಿಮ್ಮ ಅಪಕೀರ್ತಿಗೆ ಕಾರಣಳಾಗಿ, ನಿನುಗೆ

*ತಲಾಕ್‌ನಾಮ = ಗಂಡನು ಹೆಂಡತಿಯನ್ನು ಬಿಡುವದು

ಮುಖವನ್ನು ಹೇಗೆ ತೋರಿಸಲಾಗುವದು ?

ಅವನು ಉತ್ತರ ಹೇಳಬೇಕೆಂದಿರುವಾಗ ತೋಟದ ಬಾಗಿಲು ತೆರೆಯಲ್ಪಟ್ಟಿತು. ಅವನು ನನ್ನನ್ನು ಮರೆಯಾಗಲು ಸನ್ನೆಮಾಡಿದನು. ನಾನು ಮರದ ಹಿಂದುಗಡೆ ಹೋಗಲು, ಸನಿಯಾಖಾನಮಳು ತಮ್ಮನ ಕಡೆ ಬರುತ್ತಿರುವದು ಕಂಡಿತು.

ಸನಿಯಾಖಾನಮ್—ಓಹೋ, ಇನ್ನೂ ಇಲ್ಲಿಯೇ ಇರುವೆಯಾ ? ಮಲಗುವದಕ್ಕೆ ಹೊರಟುಹೋಗಿರುವೆಯೆಂದು ತಿಳಿದಿದ್ದೆನು.

ನಾಫಿಜ್‌ಬೇ—(ಮೆಲ್ಲನೆ) ಇಲ್ಲ, ನಾನು ಸಿಗರೇಟನ್ನು ಸೇದುತ್ತಿದ್ದೆನು, ಒಳಗೆ ನಡಿ-ನೀನೇನ ಮಾಡುತ್ತಿದ್ದೆಯೆಂಬುದನ್ನು ಹೇಳು.

ಇಬ್ಬರೂ ಜತೆಯಲ್ಲಿ ಹೊರಟುಹೋದರು. ಅವರು ಮರೆಯಾದ ಕೂಡಲೆ ನಾನು ಈಚೆಗೆ ಬಂದು ಮನೆಯೊಳಗೆ ಓಡಿಹೋದೆನು.

ಹದಿನಾರನೆಯ ಪರಿಚ್ಛೇದ

ಅತಿಯಾಖಾನಮ್—(ಬಹು ಮೆಲ್ಲನೆ) ಏನು, ನಾನು ಚೆನ್ನಾಗಿ ಕಾಣಿಸುತ್ತಿರುವೆನೋ ಇಲ್ಲವೋ ? ಇಲ್ಲಿ ಮತ್ತೊಂದು ಸೂಜಿಯನ್ನು ನೀನು ಸಿಕ್ಕಿಸಿದರೆ, ಬಹುಶಃ ಅದು ಬಿದ್ದು ಹೋಗುವದು.

ಆಗ ಅತಿಯಾಖಾನಮಳು ತನ್ನ ವಧೂನೇಪಥ್ಯದಿಂದ ಅಲಂಕೃತಳಾಗಿ ಕನ್ನಡಿಯ ಮುಂದೆ ನಿಂತಿದ್ದಳು. ಹಸೇಮಣೆಯ ಮೇಲೆ ಕುಳಿತುಕೊಳ್ಳಲು ಅವಳು ಸಿದ್ಧಳಾಗಲೆಂದು ನಾನು ಅವಳ ಮುಖಾವರಣವನ್ನು ಸರಿಪಡಿಸುತ್ತಿದ್ದೆನು. ಶಾಸ್ತ್ರರೀತ್ಯ, ವಧುವು ಈ ಹಸೇಮಣೆಯ ಮೇಲೆ, ಸಾಯಂಕಾಲ ವರನು ಬರುವವರೆಗೂ ಕುಳಿತು ಇರುವಳು. ಅತಿಯಾಖಾನಮಳ ಮುಖದಿಂದ ಆಗ ಸೌಂದರ್ಯದ ಕಾಂತಿಯು ಚೆಲ್ಲುತ್ತಿತ್ತು. ತುರ್ಕಿಯವರಲ್ಲಿ ವಧುವಿನ ಉಡುಪು ಎಷ್ಟು ದಿವ್ಯವಾಗಿರುತ್ತದೆಂದರೆ, ಧರಿಸಿರುವವರು ಸಾಮಾನ್ಯವಾಗಿ ಅದರ ಪ್ರಕಾಶದ ಮುಂದೆ ಅಣುವಿನಂತೆ ಕಾಣಿಸುವರು. ಆದರೆ, ಅತಿಯಾಖಾನಮಳ ರಾಜಸದೃಶ್ಯವಾದ ರೂಪು, ಅದರ ದೆಸೆಯಿಂದ ಇನ್ನೂ ದ್ವಿಗುಣವಾಗಿ ಹೋಗಿತ್ತು. ನೀಳವಾದ ಭಾರೀಕಲಾಪತ್ತಿನ ಕೆಲಸದ ಸುಂದರವಾದ ನಿಲುವಂಗಿ-ಕೊರಳಿನ ಸುತ್ತಲೂ ಮಿನುಗುತ್ತಿರುವ ವಜ್ರಗಳು-ಧವಳ ವರ್ಣದ ಅವಕುಂಠನವನ್ನು ಶಿರಸ್ಸಿನಮೇಲೆ ನಿಲ್ಲಿಸುತ್ತಿದ್ದ ವಜ್ರಹೂಳದ ಕಿರೀಟ ಸದೃಶವಾದ ಆಭರಣವು-ಎರಡು ಪಾರ್ಶ್ವದಲ್ಲೂ ಎರಡು

ಕರ್ಣಗಳ ಮೇಲೂ ಬಿದ್ದಿದ್ದ ಅವಳ ವಕ್ರಾಳಕದ ಎರಡು ಗುಚ್ಛಗಳು. ಇವೆಲ್ಲವೂ ಅವಳ ಸೌಂದರ್ಯವನ್ನು ಅದ್ಭುತತರವನ್ನಾಗಿ ಮಾಡಿಬಿಟ್ಟಿತ್ತು. ಇಂಥಾ ರೂಪಾತಿಶಯವು ನಾಫಿಜ್‌ಬೇಯನ್ನು ಮರಳುಗೊಳಿಸದಿದ್ದರೆ ಅವನು ಮನುಷ್ಯನಲ್ಲ-ದೇವತಾಪುರುಷನಾಗಿರಬೇಕು. ಈ ಸೌಂದರ್ಯದ ಜೇಟಿಗೆ ನಾಫಿಜ್‌ಬೇಯು ತುತ್ತಾಗದಿರುವದು. ಸಾಧ್ಯವಾಗಿರಲಿಲ್ಲವೆಂಬುದನ್ನು ಯೋಚಿಸಿ ಯೋಚಿಸಿಕೊಂಡು ನನ್ನ ಹೃದಯವು ಜರ್ಝರಿತವಾಗಿ ಹೋಗುತ್ತಿತ್ತು.

ಆದರೆ ಈ ಆಲೋಚನೆಯು ಎಷ್ಟು ಶೀಘ್ರವಾಗಿ ಹುಟ್ಟಿತೋ ಅಷ್ಟೇ ಶೀಘ್ರವಾಗಿ ಹೊರಟುಹೋಯಿತು. ನಾನು ಅತಿಯಾಖಾನಮಳ ಸೌಂದರ್ಯವನ್ನು ಮನಃಪೂರ್ವಕವಾಗಿ ಕೊಂಡಾಡಿ, ಅವಳೊಡನೆ ಪೂರ್ತಿಯಾಗಿ ಮದುವಣಗಿತ್ತಿಯಾದೆಯೆಂದು ಹೇಳಿದೆನು.

ಅತಿಯಾಖಾನಮ್—ಒಳ್ಳೇದು, ಎಲ್ಲರನ್ನೂ ಕರೆ; ನನ್ನನ್ನು ಬಿಟ್ಟುಬಿಡು.

ನಾನು ಬಾಗಿಲಬಳಿ ಹೋಗಿ ದಾಸಿಯರನ್ನು ಕೂಗಲು, ಎಲ್ಲರೂ ಬಂದು ಅತ್ಯುತ್ಸುಕತೆಯಿಂದ ಅವಳನ್ನು ಹೊಗಳಲಾರಂಭಿಸಿದರು. ಅದನ್ನು ಕೇಳಿ, ನನ್ನ ಮನಸ್ಸಿನಲ್ಲಿ ಪುನಃ ಅದೇ ಆಲೋಚನೆಯು ಆವೇಗದಿಂದ ಜನಿಸಿತು-ವಾಸ್ತವಿಕವಾಗಿಯೂ ಅವಳದು ನಿರ್ದೋಷವಾದ ಸೌಂದರ್ಯವಾಗಿತ್ತು. ನಾನು ಅವಳ ಮುಂದೆ ಹೇಗಿದ್ದೆನೆಂದರೆ, ನಾಫಿಜ್‌ಬೇಯ ದೃಷ್ಟಿಯಲ್ಲಿ ಅವಳೊಡನೆ ಹೋಲಿಸಲ್ಪಡಲೂ ಯೋಗ್ಯಳಾಗಿರಲಿಲ್ಲ.

ಜನರು ಬಂದುಬಿಟ್ಟಿದ್ದರು. ಮದುವಣಗಿತ್ತಿಯನ್ನು ಪೀಠದ ಮೇಲೆ ಕುಳ್ಳಿರಿಸಿ, ನಾವುಗಳೆಲ್ಲರೂ ಬಂದಿದ್ದವರನ್ನು ಸತ್ಕರಿಸುವದರಲ್ಲಿ ಉದ್ಯುಕ್ತರಾದೆವು. ಒಬ್ಬನು ಸಿಗರೇಟನ್ನು ಹಂಚುವದರಲ್ಲಿ ತೊಡಗಿದ್ದನು-ಒಬ್ಬನಿಗೆ ಭೋಜನದ ಏರ್ಪಾಡು ಒಪ್ಪಿಸಲ್ಪಟ್ಟಿತ್ತು. ಮತ್ತೆ ಕೆಲವರು ನಮ್ಮಲ್ಲಿ, ರೂಢಿಯ ಪ್ರಕಾರ ಆಹ್ವಾನವಿಲ್ಲದೆ ಬಂದು, ವಧುವನ್ನು ಮಾತ್ರ ನೋಡಿಕೊಂಡು, ಏನನ್ನೂ ಉಣ್ಣದೆ ತಿನ್ನದೆ ಹೊರಟುಹೋಗುವವರನ್ನು ಉಪಚರಿಸುತ್ತಿದ್ದೆವು.

ಈ ಕಾರ್ಯಗಳೆಲ್ಲದರಲ್ಲೂ ನಾನು ಕಾಲ ಕಳೆದುಕೊಂಡು ಸಂಜೆಯ ಹೊತ್ತಿಗೆ ಮಾನಯನವಾದಾಗ ತೊಟ್ಟಿಯೊಳಗೆ ಹೋಗಿ ನಿಂತುಕೊಂಡೆನು. ಅವನು ವಧುವಿನೊಡನೆ ಯಾವರೀತಿ ವರ್ತಿಸುವನೆಂಬುದನ್ನು ನೋಡಲಪೇಕ್ಷೆಯುಳ್ಳವಳಾಗಿದ್ದೆನು. ಇನ್ನೂ ನಾನು ಹೋಗಿ ಸರಿಯಾಗಿ ನಿಲ್ಲುವಷ್ಟರೊಳಗೇ ಏಕಾಏಕೀ ವಾದ್ಯಗಳ ಶಬ್ದವು ಕಿವಿಗೆ ಬಿದ್ದಿತು. ವರನು

ಬರುತ್ತಿರುವನೆಂಬ ಗದ್ದಲವೆದ್ದುದನ್ನು ಕೇಳಿದೊಡನೆಯೇ ನನ್ನ ನಾಡಿಯು ನಿಂತು ಹೋದಂತಾಯಿತು.

ಹಾಫಿಜ್‌ಪಾಷಾರವರ ಒಬ್ಬ ಪತ್ನಿ—(ನನ್ನ ಹತ್ತಿರ ನಿಂತಿದ್ದವರು) ನಿನ್ನ ಮುಖವೇಕೆ ಇಷ್ಟು ಬಿಳಿಚಿಕೊಂಡು ಹೋಗಿದೆ? ನೀನು ವಿತಿಮೀರಿ ಆಯಾಸಗೊಂಡಿರುವೆಯೆಂದು ನನಗೆ ಕಾಣಿಸುತ್ತದೆ. ಆದರೆ, ದೇವರ ದಯದಿಂದ, ಈ ಹೋರಾಟವು ಮುಗಿದು, ಮದುವೆಯು ಆಗಿ ಹೋಯಿತು (ಸುಮ್ಮನಾಗಿ ಮತ್ತೆ ಅತ್ಯುತ್ಸಾಹದಿಂದ) ನೋಡು, ಅಗೋ ವರನು ಬರುತ್ತಿರುವನು.

ನಾನು ಬಗ್ಗಿನೋಡಲು, ನಾಫಿಜ್‌ಬೇಯು ಮೆಟ್ಟಲನ್ನು ಹತ್ತಿ ಬರುತ್ತಿದ್ದನು. ಅವನ ಎರಡು ಪಾರ್ಶ್ವದಲ್ಲೂ, ಹಬ್ಸಿ ಗುಲಾಮರು ಮಶಾಲುಗಳನ್ನೂ ದೀಪಗಳನ್ನೂ ಹಿಡಿದಿದ್ದರು. ಮೇಲೆ ತಲುಪಿದಕೂಡಲೆ, ವಾದ್ಯಗಳು ಮೊದಲಿಗಿಂತ ಹೆಚ್ಚು ಭರದಿಂದ ಮೊಳಗಲಾರಂಭಿಸಿದವು. ಅವನು ಆದಿಲ್‌ಬೇ ಮತ್ತು ಸೈಯದ್‌ಬೇಯೊಡನೆ ವಧುವಿನ ಕೊಠಡಿಯನ್ನು ಪ್ರವೇಶಿಸಿದನು. ಅವನು ಒಳಗೆ ಬಂದ ಕೂಡಲೆ, ನನ್ನ ಜತೆಗಾತಿಯರು ನನ್ನ ಕೈಯನ್ನು ಹಿಡಿದುಕೊಂಡು, ಪರದೆಯಬಳಿ ಕರೆದುಕೊಂಡು ಹೋದರು. ಕೊಠಡಿಯಲ್ಲಿ ಆಗ ನಡೆಯುತ್ತಿದ್ದ ಶಾಸ್ತ್ರವನ್ನು ನೋಡಲು, ಆಗಿನಿಂದಲೂ ಪರದೆಯ ಹತ್ತಿರ ಹೆಂಗಸರು ಸೇರಿದ್ದರು. ಆದರೆ ನನ್ನ ಸಣ್ಣ ಶರೀರವು ನನಗೆ ಸಹಾಯಕವಾದುದರಿಂದ, ಚಿಕ್ಕಮನೆಯು ಚೆನ್ನಾಗಿ ಕಾಣಿಸುವಂತೆ ನನಗೆ ಒಂದು ಮೂಲೆಯು ಸಿಕ್ಕಿತು.

ನಾನು ಪರದೆಯ ಬಳಿ ಹೋಗಿ ನಿಂತುಕೊಂಡ ಸಮಯದಲ್ಲಿ, ನಾಫಿಜ್‌ಬೇಯು ನಮಾಜನ್ನು ಮಾಡುತ್ತಿದ್ದನು. ಅದನ್ನು ತೀರಿಸಿಕೊಂಡು, ಅವನು ಹಸೆಮಣೆಯ ಮೆಟ್ಟಲನ್ನು ಹತ್ತಿ, ವಧುವಿಗೆ ಒಂದು ವಜ್ರದ ಆಭರಣವನ್ನು ತೊಡಿಸಿ, ಅವಳ ಮುಖದಿಂದ ಅವಕುಂಠನವನ್ನು ತೆಗೆದನು. ಆಗ ಅವಳು ನನ್ನ ಕಣ್ಣಿಗೆ ಎಷ್ಟು ಸುಂದರಳಾಗಿಯೂ, ರಮಣೀಯಳಾಗಿಯೂ ಕಂಡಳೋ ಅಷ್ಟು ಮೊದಲೆಂದೂ ಕಾಣಿಸಿರಲಿಲ್ಲ. ಹಸ್ತಗಳೆರಡನ್ನೂ ಮುಂಭಾಗದಲ್ಲಿ ಜೋಡಿಸಿಕೊಂಡು ಲಜ್ಜೆಯಿಂದ ಕಣ್ಣುಗಳನ್ನೂ ಕೆಳಗೆ ಮಾಡಿಕೊಂಡು ನಿಂತಿದ್ದಳು. ಎಣ್ಣೆಗೆಂಪಿನ ಉಡುಗೆಯ ಮುಂದೆ ಅವಳ ವಕ್ಷವು ಅತಿಶುಭ್ರವಾಗಿ ಕಾಣಿಸುತ್ತಾ, ಅಪೂರ್ವವಾದ ಮನೋಹರತೆಯಿಂದ ಉಬ್ಬುತ್ತಲೂ ಇಳಿಯುತ್ತಲೂ ಇತ್ತು. ಮುಖವೂ ಚಿತ್ರಪ್ರತಿಮೆಯಂತೆ ನಿಶ್ಚಲವಾಗಿಯೂ ಶಾಂತವಾಗಿಯೂ ಇತ್ತು. ಕೆನ್ನೆಗಳಲ್ಲಿ ಮಾತ್ರ ಹೆಸರಿಗೆ

ಸ್ವಲ್ಪವಿನ್ನ ಕೆಂಪಿನಿಂದ ಆಪೇಳೆಯಲ್ಲಿ ಅವಳ ಮನಃಸ್ಥಿತಿಯು ಹೇಗಿತ್ತೆಂಬುದು ವಿಶದವಾಗುತ್ತಿತ್ತು. ಆ ಸಮಯದಲ್ಲಿ ಅವಳ ಪ್ರತಿಭೆಯು ಹೇಗಿತ್ತೆಂದರೆ, ನಾಫಿಜ್‌ಬೇಯು ಒಬ್ಬ ರಾಜನು ಮುಂದೆ ಪಾದಸೇವೆಗಾಗಿ ಶಿರಬಾಗಲು ಸಿದ್ಧನಾಗಿರುವನೋ ಎಂಬಂತೆ ಕಾಣಿಸುತ್ತಿದ್ದನೇ ಹೊರತು, ನೂತನ ವಧುವು ತನ್ನ ಪತಿಸೇವೆಗಾಗಿ ನಿಂತುಕೊಂಡಿದ್ದಂತಿರಲಿಲ್ಲ. ನಾಫಿಜ್‌ಬೇಯು ಬಹಳ ಹೊತ್ತು ತನ್ನ ಸತಿಯ ಕಡೆ ನೋಡುತ್ತಾ ಇದ್ದು, ಮತ್ತೆ ಪುನಃ ಅವಳ ಮುಖದ ಮೇಲೆ ಘೂಂಘಟವನ್ನು ಹಾಕಿ ಕುಳಿತುಕೊಳ್ಳಲು ಹೊರಟಾಗ, ಅತಿಯಾಖ್ಯಾನವೂ, ಮುಖಾವರಣವು ವಜ್ರದಹಾರದಲ್ಲಿ ಸಿಕ್ಕಿಕೊಂಡಿತಾ ದುದರಿಂದ ಅದನ್ನು ಬಿಡಿಸಲು ಕೈಯನ್ನು ಮುಂದಕ್ಕೆ ನೀಡಬೇಕಾಯಿತು. ಇದುವರೆಗೆ ಅವಳು ಕಣ್ಣನ್ನು ಎತ್ತಿ ನಾಫಿಜ್‌ಬೇಯನ್ನು ನೋಡಿರಲಿಲ್ಲ. ಆದರೆ ಕೈನೀಡುವ ಸಮಯದಲ್ಲಿ ವರನ ಮುಖದ ಕಡೆ ದೃಷ್ಟಿ ಬೀರಿದಳು. ವಧೂವರರ ನೇತ್ರಗಳು ಸೇರಿದವು. ನಾಫಿಜ್‌ಬೇಯು ಥಟ್ಟನೆ ಮುಖವನ್ನು ತಿರುಗಿಸಿಕೊಂಡು ಬಿಟ್ಟು ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಂಡು ಬಿಟ್ಟನು

ನಾನು ಮೆಲ್ಲನೆ, ಮದುವಣಗಿತ್ತಿಯ ಉಡುಗೆಯನ್ನು ಬದಲಾಯಿಸುವ ಕೊಠಡಿಯಕಡೆ ಹೊರಟೆನು-ಯಾಕೆಂದರೆ ಅವಳಿಗೆ ನೂತನ ವಸ್ತ್ರವನ್ನು ಧಾರಣೆಮಾಡಿಸಲು ನಾನು ಬೇಕಾಗಬಹುದೆಂದು ತಿಳಿದಿದ್ದೆನು. ಅಲ್ಲಿ ಹೋಗಿ ಕುಳಿತುಕೊಂಡು ಕೈಗಳಿಂದ ಮುಖವನ್ನು ಮುಚ್ಚಿಕೊಂಡೆನು. ನಾನು ಆಗ ಬಹಳ ಚಿಂತಾಗ್ರಸ್ತಳಾಗಿದ್ದೆನು. ರಾತ್ರಿ ನಡೆದ ಸಂಗತಿಯನ್ನು ಸ್ಮರಿಸಿಕೊಂಡು ಮನಸ್ಸು ಇಳಿದುಹೋಗುತ್ತಿತ್ತು. ಹೇಗೆ ನಾನು, ರಾತ್ರಿ ದಾರಿತಪ್ಪಿ ನಡೆಯುವುದರಲ್ಲಿದ್ದು ಅಷ್ಟರೊಳಗೆ ಉಳಿದುಕೊಂಡೆನೆಂಬುದನ್ನು ಯೋಚಿಸಿಕೊಂಡು ಭಯದಿಂದ ನಡುಗಿ ದೇವರನ್ನು ವಂದಿಸಿದೆನು. ನಿನ್ನೆ ರಾತ್ರಿಯಂಥಾ ಅವಮಾನಕರವಾದ ಕಾರ್ಯಕ್ಕೆ ಕರ್ತಳಾಗುವದಕ್ಕಿಂತ, ಇಲ್ಲಿ ಒಬ್ಬಂಟಿಯಾಗಿ ಕುಳಿತುಕೊಂಡು ಅಳುವದು ಎಷ್ಟೋ ಮೇಲಾಗಿತ್ತು. ಆಗಿನ ಮಾತುಗಳು ಜ್ಞಾಪಕಬರಲು ಮಿತಿಮೀರಿದ ನಾಚಿಕೆಯಿಂದ ತಲೆಯನ್ನು ಬೊಗ್ಗಿಸಿದೆನು. ನಾನೇ ಅವನನ್ನು ರಾತ್ರಿ ದುಷ್ಪಥಕ್ಕೆ ಎಳೆಯುತ್ತಿದ್ದೆನು-ನನ್ನ ಕೈಯಿಂದಲೇ ಅವನನ್ನು ಅಪಯಶಸ್ಸಿನ ಹೊಳೆಯಲ್ಲಿ ತಳ್ಳಿ ಬಿಡುವದರಲ್ಲಿದ್ದೆನು. ಯಾವಾಗ ನಾನು ಒಂದು ಸಲ ನನ್ನ ಪೂರ್ವ ಸಂಕಲ್ಪವನ್ನು ದೃಢವಾಗಿ ನಡೆಸಲಿಲ್ಲವೋ, ಮುಂದೆ ಸ್ಥಿರಮನಸ್ಕಳಾಗಿರುವೆನೆಂಬುದು ಹೇಗೆ ಸಾಧ್ಯವು ? ನನ್ನ ಮನಸ್ಸನ್ನು, ಸ್ವಾಧೀನದಲ್ಲಿಟ್ಟು

ಕೊಳ್ಳುತ್ತಿದ್ದೆನೆಂದೇ ಒಂದು ವೇಳೆ ಭಾವಿಸಿಕೊಂಡರೂ, ನನ್ನ ಇರುವಿಕೆಯೇ ಅವನ ವ್ಯಥೆಗೂ ಹಿಂಸೆಗೂ ಕಾರಣವಾಗುವದಿಲ್ಲವೇ ? ಈಗಲೇ, ಅವನು ನನ್ನನ್ನು ಕೆಲದಿನಗಳ ಹಿಂದೆ ಯೋಚಿಸಲಾರಂಭಿಸಿದ್ದಂತೆ, ಅದೃಶ್ಯಳಾಗಿ ಹೋದೆನೆಂದು ತಿಳಿಯುವದು ಒಳ್ಳೆಯದಲ್ಲವೆ ? ಮತ್ತೆ ಹುರ್ಸೇಬೇಯು! ಅವನ ವಿಚಾರವಾಗಿ ನಾಫಿಜ್‌ಬೇಯು ಹೇಳಿದ ಮಾತುಗಳು ಜ್ಞಾಪಕ ಬಂದೊಡನೆಯೇ ನಾನು ಭಯದಿಂದ ಕಂಪಿಸಲಾರಂಭಿಸಿದೆನು. ನಾನು ಸಂಪೂರ್ಣವಾಗಿ ಅವನ ಕೈಕೆಳಗಾಗುವೆನು. ಇಜ್ಜತ್‌ಪಾಷಾರವರೊಡನೆ ದೂರು ಹೇಳಿದರೂ, ಅದರ ಫಲವು ಏನಾಗುವದೆಂದರೆ, ಅವನ ಕೋಪವು ಮತ್ತೂ ಮೇಲಕ್ಕೆದ್ದು ಜ್ವಲಿಸುವದು ಮಾತ್ರವಾಗುವದು. ಹೇಳದೆ ಹೋದಲ್ಲಿ, ಅವನು ಯಾವ ಕಾರ್ಯವನ್ನು ತಾನೆ ಮಾಡಲು ಹಿಂತೆಗೆಯು ತ್ತಿದ್ದನು ? ಈ ಆಲೋಚನೆಗಳಲ್ಲಿ ನಾನು ಸಿಕ್ಕಿ ಒದ್ದಾಡುತ್ತಿರುವಾಗ ಯಾರದೋ ಭಯಾನಕವಾದ ಕೂಗು ಕಿವಿಗೆ ಬಿದ್ದಿತು. ಅದನ್ನು ಕೇಳಿ ವಿಪರೀತ ನಡುಗಿಹೋದೆನು. ಅನಂತರ ಬಿಡದೇ ಅದೇ ವಿಧವಾದ ಕೂಗು ಬರಲಾರಂಭಿಸಿತು. ಆಮೇಲೆ ಜನರು ಅತ್ತ ಇತ್ತ ಓಡುತ್ತಿರುವ ಸದ್ದು ಕೇಳ ಹತ್ತಿತ್ತು. ನಾನು ಓಡಿಹೋಗಿ ಬಾಗಿಲನ್ನು ತೆಗೆದೆನು. ತೆರೆದಕೂಡಲೇ ಒಂದು ಧಡೇರೆಂಬ ಶಬ್ದವು ಕೇಳಿಸಿತು. ಮನೆಯೆಲ್ಲವೂ ಭೂಕಂಪದಿಂದ ಚಲಿಸುವಂತೆ ಅಲ್ಲಾಡಿಹೋಯಿತು. ಕೊಂಚ ಹೊತ್ತು ನನಗೆ ಏನೂ ಕಾಣಿಸದೆ, ಆಮೇಲೆ ಇದ್ದಕ್ಕಿದ್ದಹಾಗೆ ಒಂದು ಉರಿಯು ಕಂಡುಬಂದಿತು. ಅದರ ಬೆಳಕಿನಿಂದ, ತೊಟ್ಟಿಯ ನಡುವೆ ದೊಡ್ಡದೊಂದು ರಂಧ್ರವು ಆಗಿರುವ ದನ್ನು ಕಂಡೆನು. ವರನ ಮೇಲೆ ಎಸೆಚಾಡುತ್ತಿದ್ದ ಚಿನ್ನ ಬೆಳ್ಳಿಗಳನ್ನು ಬಾಚಿಕೊಳ್ಳಲು ಸೇರಿದ್ದ ಗುಂಪಿನ ತುಳಿದಾಟದ ಭರದಿಂದ, ಮಾಳಿಗೆಯ ಒಂದು ತೊಲೆಯು ಮುರಿದು ಹೋಯಿತೆಂದು ತಿಳಿಯಿತು. ಮನೆಯು ಬಹಳ ಹಳೆಯದಾಗಿದ್ದುದರಿಂದ ಒಂದೇ ಏಟಿಗೆ ಮಾಳಿಗೆಯು ಕುಸಿದು ಕೊಂಡಿತು. ಒಡನೆಯೇ ಆದ ಅನಾಹುತವೇನೆಂದರೆ ಮಾಳಿಗೆಗೆ ನೇತು ಹಾಗಿದ್ದ ಕಂದೀಲು ಕಳಚಿಕೊಂಡು ಕೆಳಗೆಬಿದ್ದು ಪರದೆಗಳಿಗೆ ಬೆಂಕಿ ಹತ್ತಿ ಕೊಂಡು, ಅವು ಈಗ ಅತಿವೇಗದಿಂದ ಉರಿಯುತ್ತಿದ್ದವು.

ನಾನು ಭಯಗ್ರಸ್ತಳಾಗಿ ಘಾಬರಿಯಿಂದ ಆಕಡೆ ಈಕಡೆ ನೋಡಿದೆನು. ನಾಫಿಜ್‌ಬೇಯು ಇರಲಿಲ್ಲ. ಅವನು ಸಹ ಎಲ್ಲಿಯಾದರು, ನನ್ನ ಕಣ್ಣ ಮುಂದೆ ಆಚ್ಛಾದಿತರಾಗಿ ಬಿದ್ದಿರುವ ಆ ನತವೃಷ್ಟ. ಜನರೊಡನೆ ಹೂಳಿ ಹೋಗಿರುವನೋ ? ಆಗ ನನಗೆ ನನ್ನ ಜೀವದ ಮೇಲಿನ ಆಶೆ ಲೇಶವಾಗಲೀ,

ಬೇರೆಯವರ ಸ್ಥಿತಿಯನ್ನು ಕಂಡು ಕನಿಕರವಾಗಲೀ ಇರಲಿಲ್ಲ. ಯಾಕೆಂದರೆ ಆ ನಿಮಿಷದಲ್ಲಿ ನಾಫಿಜ್ ಬೇಯ ಚಿಂತೆಯೊಂದೇ ನನಗೆ ಹಿಡಿದು, ಆ ಚಿಂತೆಯಲ್ಲಿ ಯಾವ ವಿಧವಾದ ಗದ್ದಲ ಗಲಾಟೆಯೂ ಕೇಳಿಸುತ್ತಿರಲಿಲ್ಲ. ಇದೇ ಕಾತರಸ್ಥಿತಿಯಲ್ಲಿ ನಾನು, ನನ್ನ ಕಾಲಿನ ಹತ್ತಿರವೇ ಇದ್ದ ಆ ಕಂಧರದೊಳಗೆ ನೋಡುತ್ತಿರುವಾಗ ಇದಕ್ಕಿದ್ದ ಹಾಗೆ ಯಾರೋ ನನ್ನ ಸಮೀಪದಲ್ಲಿ ವಾಯುವೇಗದಿಂದ ಹೋದರು. ನಾನು ಬೇಗನೆ ತಿರುಗಿನೋಡಲು ನಾಫಿಜ್ ಬೇಯ ದಿವ್ಯತೇಜಸ್ಸು ಕಂಡಿತು. ಮೂರ್ಛಿತರಾದವರ್ಯಾರನ್ನೋ ಎತ್ತಿಕೊಂಡು ಓಡಿಹೋಗುತ್ತಿದ್ದನು. ಬಿಳೀ ಮುಖಪರದೆಯಿಂದ ಅತಿಯಾಖಾನಮಳೆಂದು ಗುರ್ತಿಸಿದೆನು.

ನಾನು ನನ್ನ ಜಾಗದಿಂದ ಅಳ್ಳಾಡಲಿಲ್ಲ. ನಾಫಿಜ್ ಬೇಯು ಸುರಕ್ಷಿತವಾಗಿದ್ದುದನ್ನು ಕಂಡು, ಮೊದಲಿದ್ದ ಕಳವಳದ ಬದಲು ತಕ್ಷಣವೇ ಉಂಟಾದ ಸಮಾಧಾನವು ನನ್ನನ್ನು ಕೊಂಚವೂ ಚಲಿಸಗೊಡಲಿಲ್ಲ. ಆಮೇಲೆ ವ್ಯಥೆಯೂ ನಿರಾಶೆಯೂ ಪ್ರವಾಹರೂಪವಾಗಿ ಉಕ್ಕಿಬರಲಾರಂಭಿಸಲು ನಾನದರಲ್ಲಿ ಮುಳುಗಿಯಾಡಲಾದೆನು, ನಾಫಿಜ್ ಬೇಗೆ ಅತಿಯಾಖಾನಮಳ ಯೋಚನೆ ಯಾವದೋ ಆಯಿತು—ನಾನು ಬದುಕಿರುವೆನೋ ಸತ್ತಿರುವೆನೋ ಎಂಬ ನನ್ನ ಯೋಚನೆ ಸ್ವಲ್ಪವೂ ಆಗಲಿಲ್ಲ. ಈಗಾಗಲೇ ನನ್ನನ್ನು ಮರೆತುಬಿಟ್ಟನೇ! ಇಷ್ಟು ಬೇಗನೆ ನನ್ನ ಗೆಳತಿಯು ಅವನ ಹೃದಯದಲ್ಲಿ ಸ್ಥಾನಮಾಡಿಕೊಂಡುಬಿಟ್ಟಳೇ! ನಾನು ಆ ರಂಧ್ರದಿಂದ ಕೊಂಚ ಜರುಗಿಕೊಂಡು ಅಲ್ಲಿಯೇ ನೆಲದಮೇಲೆ ದೊಪ್ಪನೆ ಕುಳಿತುಕೊಂಡುಬಿಟ್ಟು, ಕೈಗಳಿಂದ ಮುಖವನ್ನು ಮುಚ್ಚಿಕೊಂಡೆನು. ನನ್ನ ಸುತ್ತಮುತ್ತಲೂ ಸೇರಿದ್ದ ಜನರೆಲ್ಲರೂ ನಾಫಿಜ್ ಬೇಯೊಡನೆಯೇ ಓಡಿಬಿಟ್ಟು ನನ್ನನ್ನು ನನ್ನ ಅದೃಷ್ಟಕ್ಕೆ ಗುರಿಮಾಡಿ ಹೊರಟುಹೋಗಿದ್ದುದರಿಂದ ಆಗ ನಾನು ಅಲ್ಲಿ ಒಬ್ಬಳೇ ಆಗಿದ್ದೆನು.

ಇದ್ದಕ್ಕಿದ್ದ ಹಾಗೆ ಯಾರೋ. ನನ್ನ ಹೆಸರನ್ನು ಹಿಡಿದು ಕೂಗಲು, ನಾನು ಅವನ ಧ್ವನಿಯನ್ನು ಗುರ್ತಿಸಿ ಬೇಗನೆ ಕತ್ತೆತ್ತಿದೆನು. ನಾನಿನ್ನೂ ಉತ್ತರಕೊಡುವಷ್ಟರಲ್ಲೇ ಅವನು ನನ್ನನ್ನು ಎತ್ತಿಕೊಂಡು ಓಡುತ್ತಾ, ನೌಕರರ ಗೃಹದ ಕಡೆ ಹೋಗುವ ಮೆಟ್ಟಲಿನ ಮೇಲೆ ಹೋದನು. ಬೆಂಕಿಯು ಇದುವರೆವಿಗೂ ಇನ್ನೂ ಅಲ್ಲಿಗೆ ಮುಟ್ಟಿರಲಿಲ್ಲ. ಅಲ್ಲಿಗೆ ಕರೆದುಕೊಂಡು ಹೋಗಿ ನನ್ನನ್ನು ಅವನು ಇಳಿಸಿದನು. ಅವನ ಮುಖವು ಹೊಗೆಯಿಂದ ಕಪ್ಪಾಗುತ್ತಿದ್ದರೂ ಕಣ್ಣುಗಳು ಪ್ರೇಮಾವೇಶದಿಂದ ಹೊಳೆಯುತ್ತಿರುವವನ್ನು ಕಂಡೆನು.

ನಾಫಿಜ್‌ಬೇ—(ಸಣ್ಣ ಧ್ವನಿಯಿಂದ) ಹಾಜಿರೇ ಈ ಘಟನೆಯು ಉಂಟಾದ ಸಮಯದಲ್ಲಿ ನಾನು ನಿನ್ನನ್ನು ಕೇಳಲು, ನೀನು ಅಮನೆಯಲ್ಲಿರುವೆಯೆಂದು ಗೊತ್ತಾದುದರಿಂದ, ಸುರಕ್ಷಿತವಾಗಿರುವೆಯೆಂದು ತಿಳಿದು ಇತರರ ಪ್ರಾಣ ವನ್ನು ರಕ್ಷಿಸುವವರಲ್ಲಿ ಉದ್ಯುಕ್ತನಾದೆನು. ಆದರೆ ನಿನ್ನನ್ನು ಹೊರಗೆ ಹುಡುಕಲು ನೀನಿನ್ನೂ ಈ ಮನೆಯಲ್ಲೇ ಇರುವೆಯೆಂದು ಜನರು ಹೇಳಿದರು. ಆದರೆ, ನಾನು ಹೊತ್ತಿಗೆ ಸರಿಯಾಗಿ ಬಂದು, ನಿನ್ನ ಪ್ರಾಣ ಉಳಿದುದು ದೇವರ ಅನುಗ್ರಹವು.

ನಾನುತ್ತರವನ್ನು ಕೊಡಲಿಲ್ಲ, ನಾನಿನ್ನೂ ಅವನಿಂದ ಆಲಿಂಗಿಸಿಕೊಳ್ಳ ಲ್ಪಟ್ಟುಕೊಂಡು ಕಂಪಿಸುತ್ತಲಿದ್ದೆನು. ಪ್ರಾಣಭಯವು ಕಳೆದುಹೋದ ನಂತರ ನನಗೆ ಎಂಥಹ ವಿಪತ್ತುಂಟಾಗಿತ್ತೆಂಬುದನ್ನು ಈಗ ತಿಳಿದುಕೊಂಡೆನು.

ಅವನು ನನ್ನನ್ನು ಹಜಾರಕ್ಕೆ ಕರೆದುಕೊಂಡು ಹೋಗುತ್ತಿರುವಾಗ ನಾನು ಹೀಗೆಂದು ಕೇಳಿದೆನು,

“ನಿಮ್ಮ ಅಕ್ಕನೋ ?”

ನಾಫಿಜ್‌ಬೇ—ದೇವರ ದಯದಿಂದ ಅವಳು, ಮಕ್ಕಳೂ ಎಲ್ಲರೂ ಕ್ಷೇಮದಿಂದಿ ರುವರು. ಇದೋ, ಪ್ಯಾರಿ, ಇಲ್ಲಿ ಕುಳಿತುಕೊ.

ಅವನು ನನ್ನನ್ನು ಬಾಗಿಲಬಳಿ ಒಂದು ಬೆಂಚಿನಮೇಲೆ ಕುಳ್ಳಿರಿಸಿದನು. ಹಜಾರದಲ್ಲಿ ಆಗ ನೂರಾರು ಜನರು ಸೇರಿದ್ದರು.

ನಾನು—(ಭಯಗ್ರಸ್ತಳಾಗಿ) ಏನು, ಪುನಃ ಆ ಅಪಾಯಕರವಾದ ಸ್ಥಳಕ್ಕೆ ಹೋಗುತ್ತಿರುವಿರಾ ?

ನಾಫಿಜ್‌ಬೇ—(ಮೆಲ್ಲನೆ) ಹೌದು, ನೋಡು, ನನ್ನ ಮೈದುನನೂ ಭಾವ ನವರೂ ಇನ್ನೂ ಅಲ್ಲಿ ಇದ್ದಾರೆ. ಯಾವ್ಯಾವುದನ್ನು ಕಾಪಾಡಲಾಗು ತ್ತದೆಯೋ ಅವನ್ನು ಉಳಿಸಬೇಕು.

ಹೀಗೆಂದು ಹೇಳಿ ಅವನು ಹೊರಟು ಹೋಗಲು, ನಾನು ಕೂಡಲೆ ಸಸಿಯಾಖಾನಮಳ ಬಳಿ ಹೋಗಿಸೇರಿಕೊಂಡೆನು. ಅವಳುಕೊಂಚ ದೂರ ದಲ್ಲಿ, ಬೊಗ್ಗಿಕೊಂಡು, ಜ್ಞಾನತಪ್ಪಿ ಮಲಗಿದ್ದ ಅತಿಯಾಖಾನಮ್‌ಳನ್ನು ನೋಡುತ್ತಾ ಇದ್ದಳು. ಅವಳೊಂದ ಕೊಂಚದೂರದಲ್ಲಿ, ಬಂದಿದ್ದವರೂ, ದಾಸಿಯರೂ ಚಾಕರರೂ ಒಂದು ಸ್ಥಳದಲ್ಲಿ ಒಬ್ಬರ ಮೇಲೊಬ್ಬರು ಬಿದ್ದು ಕೊಂಡಿದ್ದರು. ಎಲ್ಲ ಕಡೆಗಳಿಂದಲೂ ಕೋಲಾಹಲಶಬ್ದವು ಕೇಳಬರುತ್ತಿತ್ತು- ಗಂಡಸರು ಒಳಗೂ ಹೊರಗೂ ಓಡ್ಯಾಡುತ್ತಿದ್ದರು.

ನಾನು, ಅತಿಯಾಖಾನಮಳಿಗೆ ಜ್ಞಾನಬರಿಸುವ ಪ್ರಯತ್ನದಲ್ಲಿ

ಸನಿಯಾಖಾನಮ್‌ಗೆ ಸಹಾಯಕಳಿರುವಾಗ್ಗೆ, ಇದ್ದಕ್ಕಿದ್ದಂತೆ ಗದ್ದಲವು ಇನ್ನೂ ಅಧಿಕವಾಯಿತು ಹಿಂತಿರುಗಿ ನೋಡಲು, ಈ ವಿಪತ್ತಿಗೆ ಗುರಿಯಾಗಿ ಮೃತಿಹೊಂದಿದ್ದವರನ್ನು ಜನರು ಎತ್ತಿಕೊಂಡು ಹೊರಗೆ ತಂದು ಹಾಕುತ್ತಿದ್ದರೆಂದು ಗೊತ್ತಾಯಿತು. ಅವರೊಳಗೆ ಇಬ್ಬರುಮೂವರಲ್ಲಿ ಇನ್ನೂ ಜೀವವು ಉಳಿದಿತ್ತು. ಅವರ ನರಳುವಿಕೆಯೂ ಸಂಕಟಪಡುವಿಕೆಯೂ ಎದೆಯನ್ನು ಮತ್ತಷ್ಟು ಒಡೆಯುವಂತಿತ್ತು. ಆತಿಯಾಖಾನಮ್‌ಳನ್ನು ಬಿಟ್ಟು ನಾನು ಆನುವಮಸ್ಥಾನಗಳ ಕಡೆ ಹೋಗಲು ಮದುವಣಗಿತ್ತಿಯ ತಾಯಿಯೂ ಅದರೊಳಗಿದ್ದಳೆಂಬುದನ್ನು ಕಂಡೆನು. ಅವಳು ಅಂಗತಂಗನಾಗಿ ಮಲಗಿಕೊಂಡಿದ್ದಳು. ನಾನು ಕೆಳಗೆ ದಿಂಬನ್ನು ಇರಿಸಲೋಸ್ಕರ ತಲೆಯನ್ನು ಎತ್ತಲು ಗಟ್ಟಿಯಾಗಿ ನರಳಿದಳು. ಅಷ್ಟು ಹೊತ್ತಿಗೆ ನಾಫಿಜ್ ಬೇಯು ಬಂದನು. ಅವನ ತೋಳಿನ ಮೇಲೆ ಬಹಳ ಜಜ್ಜಿಹೋಗಿ ಕ್ಷೀಣದೆಶೆಯಲ್ಲಿದ್ದ ಒಬ್ಬ ಮನುಷ್ಯನು ಇದ್ದನು.

ನಾಫಿಜ್‌ಬೇ—(ವೇಗದಿಂದ) ಇಲ್ಲಿಂದ ಹೊರಟುಹೋಗು ಈ ದೃಶ್ಯವು ನೀನು ನೋಡುವಂತಹುದಲ್ಲ. ನೀನಿರುವದರಿಂದ ಪ್ರಯೋಜನವೇನೂ ಕಾಣಿಸುವದಿಲ್ಲ.

ನಾನು ಅವನು ಹೇಳಿದಂತೆ ಕೇಳಿ ಹೊರಟುಬಂದೆನು. ನನಗೆ ಆಗ ಶರೀರದಲ್ಲಿ ಅಸ್ವಸ್ಥತೆಯು ಕಂಡುಬರುತ್ತಿರಲು ಸನಿಯಾಖಾನಮ್‌ಳನ್ನು ಬಿಟ್ಟುಬಂದಿದ್ದಲ್ಲಿಗೆ ಹೋದೆನು. ಆದರೆ ಅಲ್ಲಿ ಯಾರೂ ಇರಲಿಲ್ಲ. ಬಹುಶಃ ಅವಳು ಮರದಾನ್‌ಖಾನೆಗೆ ಹೋಗಿದ್ದಿರಬಹುದು. ನಾನು ಮೊದಲು ಕುಳಿತಿದ್ದ ಬೆಂಚಿನಮೇಲೆಯೇ ಕುಳಿತುಕೊಂಡು ಕಣ್ಣುಗಳನ್ನು ಮುಚ್ಚಿಕೊಂಡು ಮತ್ತೆ ತಲೆಯನ್ನೆತ್ತಲಿಲ್ಲ. ನಾಫಿಜ್‌ಬೇಯ ಧ್ವನಿಯು ಪುನಃ ನನ್ನ ಕಿವಿಗೆ ಬಿದ್ದಿತು. ಅವನೂ ಸೈಯದ್‌ನೂ ಆದಿಲ್‌ನೂ ಚೈತನ್ಯವಿಲ್ಲದೊಬ್ಬ ಮನುಷ್ಯನನ್ನು ಹೊತ್ತುಕೊಂಡು ಬಂದು ಒಂದು ಬೆಂಚಿನ ಮೇಲೆ ಮಲಗಿಸಿದರು. ಅವರು ಹಾಫಿಜ್ ಪಾಷಾರವರಾಗಿದ್ದರು. ಅವರ ಕೊರಳಿಗೆ ಬೆಂಕಿಯು ಬಂದು ಬಿಡುವದರಲ್ಲಿತ್ತು.

ಸೈಯದ್‌ಬೇ-ಬೆಂಕಿಯು ಬಹಳ ವೇಗದಿಂದ ಹರಡುತ್ತಿರುವದು. ಆರಿಸಿಯಾರಿಸುತ್ತಲೇ ಎಲ್ಲಿಯಾದರೂ ಮರದಾನ್‌ಖಾನೆಯವರೆಗೂ ಮುಟ್ಟುವದೋ ಎಂಬ ಭಯವು ನನಗಿರುವದು.

ನಾಫಿಜ್‌ಬೇ—(ತಿರಸ್ಕಾರದಿಂದ ಮುಖವನ್ನು ತಿರುಗಿಸಿಕೊಂಡು ಬಿಟ್ಟು) ಆದರೆ ಇಂಥಾಸ್ಥಳದಲ್ಲಿ ಏನುತಾನೆ ಮಾಡಲಾಗುತ್ತದೆ. ಬೆಂಕಿಯನ್ನಾರಿಸುವ

ಇಂಜನ್‌ಗಳ ಹೆಸರು ಒಂದೂ ಇಲ್ಲ. ನಡೆಯಿರಿ, ಇನ್ನು ಹೊರಡೋಣ. ಅವು ಇಲ್ಲದೆಯೇ ಎಷ್ಟರಮಟ್ಟಿಗೆ ಏನನ್ನಾದರೂ ಮಾಡಬಹುದೆಂಬುದನ್ನು ನೋಡೋಣ.

ಹೀಗೆಂದು ಹೇಳಿ ಅವನು ಪುನಃ ಮನೆಯ ಕಡೆ ಹೊರಟು ಹೋಗಲು ನಾನು ಇನ್ನೊಂದು ಘಂಟೆಯಹೊತ್ತು ಒಬ್ಬಳೇ ಕುಳಿತಿದ್ದೆನು. ಘಾಯ ಗೊಂಡ ಗಂಡಸರೆಲ್ಲರೂ ಮರದಾನ್‌ಖಾನೆಗೆ ಕಳುಹಿಸಲ್ಪಟ್ಟಿದ್ದರು. ಹೆಂಗಸ ರೆಲ್ಲರೂ ಲಾಯದಲ್ಲಿ ತುಂಬಿದ್ದರು. ನಾನು ಹಾಫಿಜ್‌ಪಾಷಾರವರನ್ನು ಒಂಟಿಯಾಗಿಬಿಡಲು ಇಷ್ಟವಿಲ್ಲದವಳಾಗಿ, ಎಲ್ಲಿದ್ದೆನೋ ಅಲ್ಲೇ ಇದ್ದೆನು ಅವರು ಬೆಂಚಿನಮೇಲೆ ಬಾಧೆಯಿಂದ ಜಿಹಾಸೆಪಡುತ್ತಾ ಇದ್ದುದರಿಂದ, ನಾನು ಅವರನ್ನು ಕೆಳಗೆ ಬೀಳದಂತೆ ಹಿಡಿದುಕೊಂಡಿರಬೇಕಾಯಿತು. ಅವರಿಗೆ ವ್ಯಾಧಿಯ ಯಾತನೆಯು ಬಂದಿದ್ದಂತಿದ್ದುದರಿಂದ, ಯಾರೋ ಅಲ್ಲಿ ಬರು ತ್ತಿದ್ದುದನ್ನು ಕಂಡು ನನಗೆ ಬಹಳ ಸಂತೋಷವಾಯಿತು.

ನಾನು—(ಅವಸರದಿಂದ) ಇಲ್ಲಿ ಬನ್ನಿ. ಇವರ ಸ್ಥಿತಿಯು ಹೀಗೆ ಆದಾಗೆಲ್ಲ ಏನು ಔಷಧ ಕೊಡಲ್ಪಡುತ್ತದೆ.

ಹುಸ್ಸೇಬೇ—(ಬೆಂಕಿಯು ಆರಿಹೋಗುತ್ತಿದ್ದ ಕಾರಣ ಕತ್ತಲಾಗುತ್ತಿದ್ದುದ ರಿಂದ, ನಾನು ಅವನನ್ನು ಮೊದಲು ಗುರ್ತಿಸಲಿಲ್ಲ) ಏನೂ ಇಲ್ಲ. ಏತಕ್ಕೆ- ಹಾಜಿರೇ, ನೀನು ಎಲ್ಲಿ ಅವಿತುಕೊಂಡಿದ್ದೆ ?

ನಾನು—(ಆತುರದಿಂದ) ನಾನಿಲ್ಲೇ ಇದ್ದೆನು. ನೋವಿನ ಹಿಂಸೆಯು ಕಡಿಮೆ ಯಾಗಲು ಇವರಿಗೆ ಏನು ಔಷಧವನ್ನೂ ಕೊಡುವುದಿಲ್ಲವೇ ?

ಹುಸ್ಸೇಬೇ —(ಅದೇ ರೀತಿಯಲ್ಲಿ) ಅವರಿಗೋಸ್ಕರ ನೀನೇಕೆ ಇಷ್ಟು ಘಾಬರಿ ಯಾಗುತ್ತಿರುವೆ ಎಂಬುದು ನನಗೆ ಗೊತ್ತಾಗುವುದಿಲ್ಲ. ಅವರಾದರೋ ಸ್ವಸ್ಥ ರಾಗಿರುವರು. ಅವರ ಸ್ಥಿತಿಯು ಆಗಾಗ್ಗೆ ಹೀಗೆ ಆಗುತ್ತಲೇ ಇರುತ್ತದೆ. ಅದು ನೋವಲ್ಲ, ಹುಚ್ಚು—ಅಷ್ಟೇ. ನಿನ್ನ ಮಾನಮರ್ಯಾದೆಯಿಲ್ಲ ಎಷ್ಟು ಒಳ್ಳೆಯದು ! ಈ ಬೂಟಾಟಿಕೆಗೆ ಕಾರಣವೇನೆಂಬುದು ನನಗೆ ಗೊತ್ತಾ ಯಿತು. ನನಗೆ ಮುತ್ತುಕೊಡಲು ನಿನಗೆ ಆಗುವುದಿಲ್ಲ—ಆದರೆ ನಿನ್ನ ಗೆಳೆಯ ನೊಡನೆ ಸುಲಭವಾಗಿ ಸೇರಬಹುದೆಂದು, ಅವನಿಗೆ ನನ್ನ ತಂಗಿಯನ್ನು ಮದುವೆಮಾಡಿಸುವುದರಲ್ಲಿ ನಿನಗೆ ನಾಚಿಕೆಯಾಗಲಿಲ್ಲ ?

ನಾನು ಕೋಪದಿಂದಲೂ ಆಶ್ಚರ್ಯದಿಂದಲೂ ಕೂಡಿ ಅವನ ಕಡೆ ನೋಡಿದೆನು. ನನ್ನ ವಿಹ್ವಲತೆಯನ್ನು ಕಂಡು ಅವನು ಗಹಗಹಿಸಿ ನಕ್ಕನು.

ಹುಸ್ಸೇಬೇ—ನಿನ್ನ ನಡವಳಿಕೆಯನ್ನು ನಾನು ತಿಳಿದುಕೊಂಡುಬಿಟ್ಟೆನೆಂದು

ನಿನಗೆ ಆಶ್ಚರ್ಯವಾಯಿತಲ್ಲವೇ? ಆದರೆ ಇದು ಅವನ ತಪ್ಪು. ಯಾವ ನಾವರೊಬ್ಬ ಮನುಷ್ಯನು, ನೀನು ಬೆಂಕಿಯಲ್ಲಿ ಸುಟ್ಟು ಹೋಗಿದ್ದರೆ ತಾನು ಮನೆಮಠನೆಲ್ಲವನ್ನೂ ತ್ಯಜಿಸಿ ಹೊರಟುಹೋಗುವೆನೆಂದೂ, ಮತ್ತೆ ಬದುಕಿರುವವರೆಗೆ ತನ್ನ ಬಂಧುಗಳ ಸ್ತ್ರೀಮುಖವನ್ನೂ ನೋಡುವದಿಲ್ಲವೆಂದೂ ಕೂಗಿ ಹೇಳುವದರಿಂದ ಜನರು ಯಥಾರ್ಥವನ್ನು ತಿಳಿಯುವದು ಸರಿಯೇ. ನಾಫಿಜ್ ಬೇಯು ಹೀಗೆ ಹೇಳಿದುದನ್ನು ಕೇಳಿದವನು ನಾನೊಬ್ಬನೇ ಅಲ್ಲ—ಇಜ್ಜತ್ ಪಾಷಾರವರು ಸನಿಯಾಖಾನಮ್ಮಳು ಇಬ್ಬರೂ ಎದುರಿಗಿದ್ದರು. ಆದರೆ, ನಿನ್ನ ತಂತ್ರಯುತವಾದ ಚಾಲಿನಲ್ಲಿ ಸನಿಯಾಖಾನಮಳೂ ಸೇರಿರುವಳೆಂದು ಕಾಣುತ್ತದೆ. ಯಾಕೆಂದರೆ, ನಾಫಿಜ್‌ಬೇಯು ಮಾತನ್ನು ಕೇಳಿ, ಅವಳು ಕೊಂಚವಾದರೂ ಆಶ್ಚರ್ಯಗೊಳ್ಳದೆ, ಅವನನ್ನು, ನೀನು ತೋಟದೊಳಗೆ ಹಾದು ಮನೆಯಿಂದ ಹೊರಟುಹೋದೆಯೆಂದಿಷ್ಟು ಮಾತ್ರ ಹೇಳಿ ಸಮಾಧಾನ ಗೊಳಿಸಿದಳು. ತದನಂತರ ನಮ್ಮ ಅಣ್ಣನು ಅವಳ ಕಡೆ ಯಾವ ರೀತಿ ನೋಡಿದನೆಂದರೆ, ಅವನು ಈ ವಿಚಾರದಲ್ಲಿ ಸನಿಯಾಖಾನಮಳಿಂದ ಸರಿಯಾದ ಉತ್ತರ ತೆಗೆದುಕೊಳ್ಳುವಂತೆ ಕಾಣುತ್ತದೆ.

ನಾನು ಇದುವರೆನಗೆ ಅವನ ಮಾತಿಗೆ ಅಡ್ಡಿ ಬರಲಿಲ್ಲ. ಆದರೆ ಅವನು ಸುಮ್ಮನಾದನಂತರವೂ ನನ್ನ ಬಳಿ ಏನುತ್ತರವೂ ಇರಲಿಲ್ಲ. ಅವನಂತೆಯೇ ಪ್ರತಿಯೊಬ್ಬರೂ ಸಂಶಯಪಡುವರೆಂಬುದೂ, ನಾನಾಗಲೀ ನಾಫಿಜ್‌ಬೇಯಾಗಲೀ ಅದನ್ನು ಪರಿಹಾರ ಮಾಡಲಾರದವರಾಗಿದ್ದೆವೆಂಬುದೂ ಅತಿ ಸ್ಪಷ್ಟವಾಗಿತ್ತು.

ಹುರ್ಸೀಬೇ—(ಹಂಗಿಸುವಂತೆ) ಇನ್ನು ನಿಜವನ್ನು ಒಪ್ಪಿಕೊಳ್ಳುವದು ಒಳ್ಳೆಯದು. ನಸಿರುಲ್ಲಾ ಪಾಷಾರವರು ನಿನ್ನನ್ನು ಇಲ್ಲಿಗೆ ಕಳುಹಿಸಿಬಿಟ್ಟುದಕ್ಕೆ ಇದೇ ಕಾರಣವಾಗಿತ್ತೋ—ನಿನ್ನ ಗೆಳೆಯನಿಗೂ ಸಹ, ಒಳ್ಳೆಯದೋ ಕೆಟ್ಟದೋ ಯಾವುದಾದರೊಂದು ರೀತಿಯಲ್ಲಿ ಇಲ್ಲಿಗೆ ಬಂದು ನಿನ್ನೊಡನೆ ಸೇರಬೇಕಾದುದು ಅವಶ್ಯಕವಾಗಿತ್ತೋ? ಒಳ್ಳೇದು! ಈಗ ನಿನ್ನ ಕಾಲಿಗೆ ನೀನೇ ಕೊಡಲಿಯನ್ನು ಹಾಕಿಕೊಂಡಿರುವೆ. ನನ್ನ ಸಲಹೆಯನ್ನು ಕೇಳುವದಾದರೆ, ಇಲ್ಲಿಂದ ತಲೆಮರಸಿಕೊಂಡು ಹೊರಟುಹೋಗುವದರಲ್ಲೇ ನಿನಗೆ ಕ್ಷೇಮವಿರುವದು. ನಿನ್ನ ವಲ್ಲಭನಾಗಲೀ, ಸನಿಯಾಖಾನಮಳಾಗಲೀ ಯಾರೂ ನಿನ್ನನ್ನು ರಕ್ಷಿಸಲಾರರು. ನೀನು ಬಹಳ ಅಪಮಾನಕ್ಕೆ ಗುರಿಯಾಗಿ, ಇಲ್ಲಿಂದ ಹೊರಡಿಸಿಕೊಳ್ಳಲ್ಪಡುವೆಯಾದುದರಿಂದ ನೀನೇ ಹೊರಟುಹೋಗುವದು ಉತ್ತಮ.

ನೀನು ಬೆಂಕಿಯಲ್ಲಿ ಸುಟ್ಟು ಸತ್ತುಹೋದೆಯೆಂದು ಎಲ್ಲರೂ ತಿಳಿದು ಕೊಳ್ಳುವರು. ಈ ವಿಚಾರವು ಇಂತಿಲ್ಲಿಯೇ ಮುಚ್ಚಲ್ಪಡುವದು.

ಹೀಗೆಂದು ಹೇಳಿ ಅವನು ಹೊರಟುಹೋದನು. ಅವನು ನನ್ನ ಕಣ್ಣಿಂದ ಸಂಪೂರ್ಣವಾಗಿ ಮರೆಯಾಗುವವರೆಗೂ ನಾನು ಕಾದಿದ್ದು, ಆನಂತರ ಹತ್ತಿರದಲ್ಲೇ ಇದ್ದ ಒಬ್ಬ ಸಿಪಾಯಿಯೊಡನೆ, ಹಾಫಿಜ್ ಪಾಷಾರವರ ಬಳಿ ಬಂದು ನಿಂತುಕೊಂಡಿರಲು ಹೇಳಿದೆನು. ನಾನು ಮಾಡಬೇಕಾದುದೇ ನೆಂಬುದನ್ನು ಮನಸ್ಸಿನಲ್ಲಿ ನಿರ್ಧರಿಸಿಕೊಂಡು ಬಿಟ್ಟೆನು. ಇಷ್ಟೆ, ಹುಸೇ ಬೇಯು ಸಲಹೆಗನುಸಾರವಾಗಿ ಅಲ್ಲಿಂದ ಹೊರಟು ಹೋಗಿ, ನಸಿರುಲ್ಲಾ ಪಾಷಾರವರ ಮನೆತನದಿಂದ ಜನ್ಮವನ್ನು ತೊಡೆದುಕೊಳ್ಳುವೆನೆಂದು ಮನಸ್ಸುಮಾಡಿಕೊಂಡು ಬಿಟ್ಟೆನು. ಯಾಕೆಂದರೆ ನನ್ನಂತಹ ಪ್ರಾಣಿ ಯಿಂದ ಅವರಿಗೆ ಇದುವರೆವಿಗೆ ದುಃಖ ವಿನ ಮತ್ತಾವ ಲಾಭವೂ ದೊರೆಯಲಿಲ್ಲ.

ಆಮನೆಗೆ ಹೋಗಿ, ನನ್ನ ಕೊಠಡಿಯೊಳಗೆ ಹೋದೆನು. ನಸಿರುಲ್ಲಾ ಪಾಷಾರವರು ಕೊಟ್ಟಿದ್ದ ಆ ನೂರು ಪೌಂಡುಗಳು ಇನ್ನೂ ನನ್ನ ಹತ್ತಿರ ಇತ್ತು. ಬೇರೆ ಬಟ್ಟೆಗಳನ್ನು ಧರಿಸಿಕೊಂಡು, ಹೊರಗೆ ಮೇಲಂಗಿಯನ್ನು ತೊಟ್ಟುಕೊಂಡು, ಆಭರಣಭಂಗಾರಗಳನ್ನು ಅವಸರದಿಂದ ಒಂದು ವಸ್ತ್ರದಲ್ಲಿ ಕಟ್ಟಿ ಎದೆಯೊಳಗೆ ಬಚ್ಚಿಟ್ಟುಕೊಂಡು, ಅಂಗಳವನ್ನು ದಾಟಿಹೋದೆನು. ಬೆಂಕಿಯು ಆರಿಹೋಗಿತ್ತು. ಹಾಫಿಜ್ ಬೇಯು ಮರದಾನ್ ಖಾನೆಯ ಬಾಗಿಲಲ್ಲಿ ನಿಂತುಕೊಂಡು ಸೈಯದ್ ನೊಡನೆ ಮಾತಾಡುತ್ತಾ ಇದ್ದನು. ಅವನು ನನ್ನನ್ನು ನೋಡಲಿಲ್ಲ. ನಾನು ಕಣ್ಮರೆಸಿಕೊಂಡು ಬೇಗನೆ ಮನೆಯ ಹೊರಗೆ ಬಂದುಬಿಟ್ಟೆನು.

ರಸ್ತೆಗೆ ಬಂದು ಒಂದು ಘಳಿಗೆ ಉಸಿರು ತೆಗೆದುಕೊಂಡು, ಯಾವಕಡೆ ಹೋಗಬೇಕೆಂದು ಯೋಚಿಸಿ, ಮೊದಲು ಹೇಗಾದರೂ ಊರಿನಿಂದ ಹೊರಟು ಹೋಗಬೇಕೆಂದೂ, ಮೊಟ್ಟಮೊದಲು ಯಾವ ಹಳ್ಳಿಯು ಸಿಕ್ಕುವದೋ ಅಲ್ಲಿ ಯಾವದಾದರೊಂದು ವಾಹನವು ಸುಲಭವಾಗಿ ದೊರಕಿದರೆ ಬೇರೆ ಒಂದು ಪಟ್ಟಣವನ್ನು ಸೇರುವೆನೆಂದೂ, ಅಲ್ಲಿಂದ ಸಮುದ್ರಾಕ್ಕೆ ಹೋಗುವ ಪ್ರಯಾಣಿ ಕರ ಗುಂಪು ಯಾವುದಾದರೊಂದು ಸಿಕ್ಕಿದರೆ ಅವರೊಡನೆ ನನ್ನ ಹಳ್ಳಿಯಾದ ಕೆಷ್ ಆಗಾಜನ್ನು ಸುರಕ್ಷಿತವಾಗಿ ಬಂದು ಸೇರುವೆನೆಂದೂ ಮನಸ್ಸುಮಾಡಿ ಕೊಂಡೆನು. ಆದರೆ ನಾನು ಕಾಲ್ನಡಿಗೆಯಲ್ಲಿ, ಊರನ್ನು ಬಿಟ್ಟು ಬಹಳ ದೂರ ಬಂದಮೇಲೆ, ನನ್ನ ಸಾಹಸವು ನನ್ನ ಕೈಬಿಡಲಾರಂಭಿಸಿತು. ಆದರೂ

ನಿಲ್ಲದೆ ನಡೆಯುತ್ತಲೇ ಇದ್ದು, ಒಂದು ಹಳ್ಳಿಯನ್ನು ತಲುಪಿದೆನು. ಅಲ್ಲಿ ಒಂದು ಕುದುರೆಯೂ ಒಬ್ಬ ಸೇವಕನೂ ಸಿಕ್ಕಿದರು. ಸಮರ್ರಾವನ್ನು ಹದಿನೈದು ದಿವಸಗಳಲ್ಲಿ ತಲಪುವೆನೆಂದು ತಿಳಿಯಿತು.

ಹದಿನೇಳನೆಯ ಪರಿಚ್ಛೇದ

"ಬಟ್ಟೆಗಳನ್ನೆಲ್ಲ ಒಗೆದು, ನೀವು ಹೇಳಿದ ಪ್ರಕಾರ ಅಂಗಳದಲ್ಲಿ ಒಣಗಲು ಹರವಿದ್ದೇನೆ. ಮತ್ತೇನಾದರು ಕೆಲಸವಿದ್ದರೆ ಅದನ್ನೂ ಹೇಳಿರಿ, ಯಾಕೆಂದರೆ, ಈಗ ನನ್ನ ಅವಶ್ಯಕತೆಯಿಲ್ಲದಿದ್ದರೆ, ನಾನು ಕೊಂಚ ಹೊತ್ತು ಬೀಯೆಹಿದಿಯಳ ಬಳಿ ಹೋಗಿಬರುವೆನು. ನಾನು ಆಕೆಗೆ ಒಂದು ಪತ್ರ ಬರೆದುಕೊಡಲು ಮಾತುಕೊಟ್ಟಿರುವೆನು."

ಹೀಗೆಂದು ಹೇಳಿ, ನಾನು ಅಡಿಗೆಮನೆಯ ಬಾಗಿಲನ್ನು ಒರಗಿಕೊಂಡು ನಿಂತುಕೊಂಡು, ಉಗ್ರಮುಖಿಯಾದ ವೃದ್ಧೆಯು ಆಗ ಒಲೆಯ ಮೇಲೆ ತಲೆಯನ್ನಿಟ್ಟು ಏನನ್ನೋ ಬೇಯಿಸುತ್ತಿರಲು, ಅವಳ ಕಡೆ ಸ್ತೋತ್ರಪೂರ್ವಕ ದೃಷ್ಟಿಯಿಂದ ನೋಡಹತ್ತಿದೆನು. ನನ್ನ ಮಾತನ್ನು ಕೇಳಿ ಅವಳು ಮುಖ ಸೊಟ್ಟಮಾಡಿಕೊಂಡು ಮೇಲೆ ನೋಡಿದಳು.

ವೃದ್ಧೆ—ನಿನಗೆ ಮನಸ್ಸಿದ್ದರೆ ಹೋಗು. ಆದರೆ ನನ್ನ ಕಾಲದಲ್ಲಿ ಹೆಣ್ಣು ಮಕ್ಕಳು ಕಾಗದಗಳನ್ನು ಬರೆಯುತ್ತಿರಲಿಲ್ಲ. ಆ ಕೆಲಸವನ್ನು ಗಂಡಸರು ಮಾಡುತ್ತಿದ್ದರು. ಹೆಂಗಸರು ಮನೆಗೆಲಸವನ್ನು ಮಾತ್ರ ನೋಡಿ ಕೊಳ್ಳುತ್ತಿದ್ದರು.

ನಾನು—(ನಕ್ಕು) ಆದರೆ, ನಾವು ಎರಡು ಕೆಲಸಗಳನ್ನೂ ಮಾಡಿದರೆ ಅಭ್ಯಂತರವೇನು ? ಅಪ್ಪನವರ ಅಭಿಪ್ರಾಯವೇನೆಂಬುದು ನಿಮಗೆ ಗೊತ್ತೇ ? ನಾನು ಅಡುಗೆಯನ್ನು ಎಷ್ಟು ಚೆನ್ನಾಗಿ ಮಾಡುತ್ತೇನೆಯೋ ಅಷ್ಟೇ ಓದುಬರಹದಲ್ಲೂ ನನಗೆ ಜಾಣತನವಿರುವದೆಂದು ಅವರು ಹೇಳುತ್ತಾರೆ.

ಬೀಗುಲ್‌ಫಿದಳ ಹೃದಯವು ಬಹಳ ಒಳ್ಳೆಯದಾಗಿತ್ತೆಂಬುದನ್ನು ನಾನು ಚೆನ್ನಾಗಿ ಅರಿತಿದ್ದೆನಾದುದರಿಂದ, ಅವಳ ತಿರುಳಿಲ್ಲದ ಮಾತುಗಳನ್ನು ಸುಮ್ಮನೆ ಕೇಳಿಕೊಂಡಿರುತ್ತಿದ್ದೆನು.

ಗುಲ್‌ಫಿದಾ—(ವ್ಯಂಗ್ಯವಾಗಿ) ಯಾಕಿಲ್ಲ ? ಅವರಾದರೋ ನಿನ್ನನ್ನು ಸಕಲ ವಿದ್ಯದಲ್ಲೂ ಪಾರಂಗತಳೆಂದು ತಿಳಿದುಕೊಂಡಿದ್ದಾರೆ. ನಿನಗೂ ಸಹ ನಿನ್ನ ವಿಷಯದಲ್ಲಿ ಇದೇ ಅಭಿಪ್ರಾಯವಿರಬಹುದಲ್ಲವೇ ?

ನಾನು—(ಸಮೀಪಕ್ಕೆ ಹೋಗಿ) ನೀವು ಹಾಗೆ ಭಾವಿಸಿಲ್ಲವೇನು ? ಅಂದು ರಾತ್ರಿ ನಾನು ನಿಮ್ಮ ಮನೆಯ ಬಾಗಿಲನ್ನು ತಟ್ಟಿ, ನಿಮ್ಮೊಡನೆ, ಇನ್ನು ಮೇಲೆ ನಾನು ಯಾವಾಗ್ಲೂ ಈ ಹಳ್ಳಿಯಲ್ಲೇ ಇರುವೆನೆಂದು ಹೇಳಿದಾಗ ನಿಮಗೆ, ನಿಮ್ಮ ಜೀವಮಾನದಲ್ಲೆಲ್ಲಾ ಅಂದಿನಿಂದ ಹೆಚ್ಚಾದ ಸಂತೋಷ ವುಂಟಾಯಿತೆಂಬುವನ್ನು, ಒಂದು ಸಲವಾದರೂ ಒಪ್ಪಿಕೊಂಡುಬಿಡಿ.

ಗುಲ್‌ಫಿದಾ—(ನಗುತ್ತಾ) ಒಳ್ಳೇದು, ಒಳ್ಳೇದು. ಆಯಿತು, ಇನ್ನು ಓಡುತ್ತ ಹೋಗಿ ಊಟದಹೊತ್ತಿಗೆ ವಾಪಸು ಬಂದುಬಿಡಬೇಕು.

ನಾನು ಬಾಗಿಲಕಡೆ ಓಡಿಕೊಂಡು ಹೋಗುತ್ತಿರಲು, ಮಕ್ಕಳು ಪಾಠ ವನ್ನು ಗಟ್ಟಿಮಾಡಿಕೊಳ್ಳುತ್ತಿರುವ ಸದ್ದು ಕಿವಿಗೆ ಬಿದ್ದಿತು. ಪಾಠ ಹೇಳು ತ್ತಿದ್ದ ವೃದ್ಧ ಷೇಕರು ಖಂಡಿತವಾಗಿಯೂ, ಪಾಠವನ್ನು ಕೇಳಕೇಳುತ್ತ ತೂಕ ಡಿಸುತ್ತಿರಬಹುದೆಂದು ಯೋಚಿಸಿಕೊಂಡು, ನನ್ನೊಳಗೆ ನಾನೇ ನಗೆದು ಕೊಂಡೆನು. ನಾನು ಕಿಷ್‌ಅಗಾಜ್‌ಗೆ ಬಂದು ಇವತ್ತಿಗೆ ಐದು ವರ್ಷಗಳಾಗಿ ಹೋದವು. ಇಜ್ಜತ್‌ಪಾಷಾರವರ ಮನೆಯಿಂದ ಹೊರಟುಬಂದ ನಂತರ, ಒಂದು ದಿನ ರಾತ್ರಿ ಇದೇ ನನ್ನ ಪೂರ್ವದುಃಖಭಾಗಿಗಳಾದ ಷೇಕರ ಮನೆಯ ಬಾಗಿಲನ್ನು ತಟ್ಟಿದುದು ಜೂನ್‌ತಿಂಗಳಲ್ಲಿ. ಅಂದಿನಿಂದ ಇವತ್ತಿನವರೆಗೂ, ನಾನು ಗುಣಶೀಲರಾದೀ ದಂಪತಿಗಳೊಡನೆ ಇರುತ್ತಿರುವೆನು. ಈರ್ವರೂ ನನ್ನನ್ನು ಮಗಳಂತೆ ಕಾಣುವರು. ನಾನು ಸಹ ಅವರನ್ನು ಅತಿಯಾಗಿ ಪ್ರೀತಿಸುವೆನು. ಆದರೂ ಒಂದೊಂದು ಸಲ ಖುಸ್‌ತಂತನಿಯಾವು ಜ್ಞಾಪಕ ಬಂದು ಬಿಡುವದು. ಈಗಲೂ ಸಹ ಬಾಗಿಲಿನಿಂದ ಬೆಟ್ಟಗಳ ಕಡೆ ನೋಡುತ್ತ, ಖಾಜಿಯು ಹಿಂದಿನ ಸಂಜೆ ನಮ್ಮ ಮನೆಯಲ್ಲಿ ಆಡಿದ ಮಾತನ್ನು ಕುರಿತು ಆಲೋಚಿಸಿಕೊಂಡು, ರಷ್ಯಾದೊಡನೆ ಯುದ್ಧವು ಪ್ರಾರಂಭವಾಗಿಹೋಗಿ, ಸಾಫಿಜ್‌ಬೇಯು ಅದಕ್ಕೆ ಸೇರಿಕೊಂಡರೆ, ಅವನ ಜೀವದ ವಿಷಯವಾಗಿ ನನಗುಂಟಾಗುವ ಚಿಂತೆಯಲ್ಲಿ ನಾನು ಹೇಗೆ ತಾನೆ ಪ್ರಾಣವನ್ನಿಟ್ಟುಕೊಳ್ಳು ವೆನು, ಎಂದು ನನ್ನ ಮನಸ್ಸಿನಲ್ಲಿ ಪ್ರಶ್ನಿಸಿಕೊಳ್ಳುತ್ತಿರುವೆನು.

ಇದೇ ಆಲೋಚನೆಯಲ್ಲಿ ನಾನು ಮೆಟ್ಟಿಲನ್ನಿಳಿದು, ಬೆಟ್ಟದಕಡೆ ಹೊರಟೆನು. ಮರಗಳ ಮಧ್ಯದಿಂದ ಹೋಗಿ ಬೆಟ್ಟವನ್ನು ಹತ್ತುತ್ತಿರುವಾಗ ಇದ್ದಕ್ಕಿದ್ದ ಹಾಗೆ ನರಿಗಳ ಶಬ್ದವು ಕೇಳಿಸಿತು. ನಾನು ಸಿಪಾಯಿಗಳ ವಿಚಾರ ಯೋಚಿಸುತ್ತಿರುವ ಸಮಯದಲ್ಲೇ, ಈ ವಾದ್ಯವು ಕೇಳಿಸಿದುದಕ್ಕಾಗಿ ನನಗೆ ಅತ್ಯಂತ ಆಶ್ಚರ್ಯವಾಯಿತು. ಒಂದು ನಿಮಿಷಾನಂತರ, ಬೇಗ ಬೇಗನೆ ಜನರು ನಡೆಯುತ್ತಿರುವ ಸದ್ದೂ ಸ್ಪಷ್ಟವಾಗಿ ಕೇಳಹತ್ತಿ, ನನ್ನ

ಕಡೆಯೇ ಬರುತ್ತಿರುವಂತೆ ತೋರಿತು. ಅವರು ಹತ್ತಿರ ಬರಲು, ಸಿಪಾಯಿಗಳ ಒಂದು ಸಮುದಾಯವಾಗಿತ್ತೆಂಬುದನ್ನೂ, ಇಬ್ಬರು ಆಫೀಸರುಗಳು ಕುದರೆಗಳ ಮೇಲೆ ಕುಳಿತು ಅದನ್ನು ನಡೆಸುತ್ತಿದ್ದರೆಂಬುದನ್ನೂ ಕಂಡೆನು. ಅವರಿಬ್ಬರಲ್ಲಿ ಮುಂದಿದ್ದವರನು ಗುರುತುಕಂಡ ಮುಖವಾಗಿತ್ತು. ಅದನ್ನು ನೋಡಿ, ನನ್ನ ಹೃದಯವು ನಿಲ್ಲದೆ ಬಡಿದುಕೊಳ್ಳಲಾರಂಭಿಸಿತು. ಆತನು ನಾನು ನಿಂತಿದ್ದಲ್ಲಿ ಬಂದಾಗ, ನನ್ನನ್ನು ನೋಡಿ ಆಶ್ಚರ್ಯದಿಂದ ಕೂಗಿ ನಾನು ಬೇಗನೆ ಕಣ್ಣೆತ್ತಿನೋಡಲು ಅಲೀಬೇಯಾಗಿದ್ದರು. ಅವರು ಥಟ್ಟನೆ ಕುದರೆಯಿಂದ ಕೆಳಗೆ ಧುಮುಕಿ, ತಮ್ಮಜತೆಗಾರರೊಡನೆ ಏನನ್ನೋ ಹೇಳಿ ನನ್ನ ಹತ್ತಿರ ಬಂದರು.

ಅಲೀಬೇ—(ಆಶ್ಚರ್ಯದಿಂದ) ಹಾಜಿರೇ, ವತ್ಸೇ, ಆಗಿನಿಂದಲೂ ನೀನು ಇಲ್ಲೇ ಇರುವೆಯಾ ?

ನಾನು—(ಕೊಂಚ ನಾಚುತ್ತ) ಹೌದು, ಸ್ವಾಮಿ, ತಮಗೆ ಇದು ಗೊತ್ತುಂಟೆ-ಏನೆಂದರೆ........

ಅಲೀಬೇ—(ಮಾತು ಪೂರೈಸುವದರಲ್ಲೇ) ನನಗೆಲ್ಲವೂ ಗೊತ್ತು. ಆಸಮಯದಲ್ಲಿ ನೀನು, ಓಡಿಹೋಗುವದರಲ್ಲೇ ನಿನಗೆ ಕ್ಷೇಮವಿರುವದೆಂದು ಕಂಡು, ನಾಫಿಜ್‌ಬೇಯನ್ನು ಸ್ವಕೃತಾಪರಾಧವನ್ನು ಅನುಭವಿಸಿಕೊಳ್ಳಲು ಬಿಟ್ಟುಬಿಟ್ಟೆ. ಆಲೋಚನೆಯೇನೋ ಇದು ಒಳ್ಳೆಯದಾಗಿತ್ತು-ಯಾಕೆಂದರೆ ಸ್ವಲ್ಪ ದಿನಗಳಮಟ್ಟಿಗೆ ಎಲ್ಲ ವಿಧದ ಕಲಹವು ನಿಂತುಹೋಗಿತ್ತು.

ಸಿಪಾಯಿಗಳು ಮುಂದೆ ಹೊರಟುಹೋಗಿದ್ದುದರಿಂದ ನಾವಿಬ್ಬರೇ ಇದ್ದೆವು.

ನಾನು—(ಹುಲ್ಲಿನಮೇಲೆ ಕುಳಿತುಕೊಂಡು) ಎಲ್ಲರೂ ಹೇಗಿರುವರು ? ಪ್ರತಿಯೊಬ್ಬರ ವಿಚಾರವನ್ನೂ ನನಗೆ ಹೇಳಿರಿ. ಮನೆಯ ಕ್ಷೇಮಸಮಾಚಾರವನ್ನು ತಿಳಿದುಕೊಳ್ಳಲು ನಾನು ಅತ್ಯಂತ ಕುತೂಹಲಳಾಗಿರುವೆನು.

ಅಲೀಬೇ—ಖಾಸಮ್ ಆಫಂದಿಯವರ ಹೊರತು ಮತ್ತೆಲ್ಲರೂ ಚೆನ್ನಾಗಿರುವರು.

ನಾನು—(ಘಾಬರಿಯಿಂದ) ಏನು, ಅವರು ಅಸ್ವಸ್ಥರಾಗಿರುವರೇ ? ವ್ಯಾಧಿಯು ಎಂಥಹುದು ?

ಅಲೀಬೇ—ಈಗ ಎಂಥಹ ವ್ಯಾಧಿಯೂ ಅವರನ್ನು ಪೀಡಿಸಲಾರದು. ಹೋದವರುಷ ಅವರು ಮರಣವನ್ನೈದಿದರು.

ನಾನು ಕೈಯ್ಯೊಳಗೆ ತಲೆಯನ್ನಿಟ್ಟುಕೊಂಡೆನು. ಈ ಸಮಾಚಾರವನ್ನು ಕೇಳಿ ನನಗೆ ಅತ್ಯಂತ ಶೋಕಉಂಟಾಯಿತು. ಎಷ್ಟೋ ಘಳಿಗೆಗಳ

ನಂತರ ಅವರ ಮರಣದಲ್ಲಿ ನಂಬಿಕೆಯಾಯಿತು, ಯಾಕೆಂದರೆ ಖಾನಮ್ ಅಫಂದಿಯವರ ಗರ್ವಿತಭಾವದ ಮುಖವೂ ನೀಳಾಕಾರವೂ ಇನ್ನೂ ನನ್ನ ಕಣ್ಣ ಮುಂದೆ ನಿಂತಿದ್ದಂತಿರಲು ಅವರು ಸತ್ತರೆಂಬ ಭಾವನೆಯೇ ಆಗುತ್ತಿರಲಿಲ್ಲ.

ನಾನು—(ಘಾಬರಿಯಿಂದ) ಬಹಳ ಅನ್ಯಾಯವಾಯಿತು. ಯಾವ ರೋಗದಿಂದ ಸತ್ತರು ?

ಅಲೀಬೇ—ಅವರ ಮನಸ್ಸಿಗೆ ಬಹಳ ವೇದನೆಯು ತಟ್ಟಿತು. ಮೊದಲು ಸಾರಿ, ಅವರು, ನಾಫಿಜ್‌ನು ಪ್ಯಾರಿಸ್‌ಗೆ ಹೋದಾಗ ಖಾಯಿಲೆಯಾದರು. ಅತಿಯಳನ್ನು ಮದುವೆಯಾದ ಮೇಲೆ ಅವರ ಸ್ಥಿತಿಯು ಕೊಂಚ ಮೇಲೇ ನಿಸಿತು. ಆದರೆ ನಾಫಿಜ್‌ನ ಕಷ್ಟದುಃಖಗಳನ್ನು ಅವರಿಂದ ನೋಡಲು ಸಾಧ್ಯವಾಗುತ್ತಿರಲಿಲ್ಲ. (ನನ್ನ ಮುಖದ ಕಳವಳವನ್ನು ಕಂಡು) ನಾಫಿಜ್‌ನು ನಾನಾ ವಿಧವಾದ ಕಷ್ಟಗಳನ್ನನುಭವಿಸಿದನು. ಆ ವಿವಾಹದ ಪರಿಣಾಮವು ಸರಿಯಾಗಲಿಲ್ಲ. ಅತಿಯಾಖಾನಮಳು ದುಸ್ಸಹವಾಸದಲ್ಲಿ ಬಿದ್ದು, ಅವಳ ನಡತೆಯು ದಿನೇ ದಿನೇ ಕೆಟ್ಟುಹೋಗುತ್ತ ಬಂದಿತು. ಖಾನಮ್ ಅಫಂದಿಯವರಿಗೂ ಸಹ ಅವಳ ಜತೆ ಸರಿಬೀಳದೆ ಹೋದುದರಿಂದ, ಕಡೆಗೆ, ನಾಫಿಜ್ ಬೇಯು ಮನೆಯನ್ನು ಬಿಟ್ಟು ಬೇರೆ ಇರಲಾರಂಭಿಸಿದನು. ಅತಿಯಾಖಾನಮಳ ಮೇಲೆ ಅವನಿಗೆ ಪ್ರೀತಿಯಿರಲಿಲ್ಲದಿದ್ದರೂ, ಅವನು ಸಮಾಧಾನದಿಂದಲೂ ದೃಢತೆಯಿಂದಲೂ ಅವಳೊಡನೆ ಸರಿಯಾಗಿ ವರ್ತಿಸುತ್ತಿದ್ದನು. ಅವಳ ವಿಲಾಪಗಳನ್ನು ಕೇಳಿಕೇಳಿ ಅವನಿಗೆ ಬಹಳ ವ್ಯಥೆಯುಂಟಾಗುತ್ತಿತ್ತು. ಪ್ರಥಮದಲ್ಲಿ, ಅವನು ಅತಿಯಳನ್ನು ದುರಭ್ಯಾಸಗಳಿಂದ ತಡೆಯಲು ಪ್ರಯತ್ನಿಸಿದನು. ಅದರ ಫಲಿತಾಂಶವೇನಾಯಿತೆಂದರೆ, ಅವಳು ಅವನನ್ನು ಕಂಡು ದಿಗಿಲುಮಾತ್ರ ಪಡಲಾರಂಭಿಸಿ, ಹಿಂದೆ ಎಂದೂ ಮಾಡದಿದ್ದಂಥಾ ಕಾರ್ಯಗಳನ್ನು ರಹಸ್ಯದಲ್ಲಿ ಮಾಡಿದಳು. ಕೊನೆಗೆ ಸ್ಥಿತಿಯು ಎಷ್ಟರ ಮಟ್ಟಿಗಾಯಿತೆಂದರೆ, ಅತಿಯಳು ಒಂದು ದಿನ, ತಾನು ಈರೀತಿ ಖೈದಿಯಂತೆ ಅವನೊಡನೆ ಇರುವವಳಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟಳು. ಇಬ್ಬರೂ ಬೇರೆಯಾಗಿಬಿಟ್ಟರು. ಕೆಲದಿನಗಳ ನಂತರ ಅತಿಯಳು ಸುಲ್ತಾನನ ಏಡಿಕಾಂಗನೊಬ್ಬನನ್ನು ಮದುವೆಯಾಗುವ ಉದ್ದೇಶದಿಂದ ಖುಲಾವನ್ನು ಅಪೇಕ್ಷಿಸಲು, ನಾಫಿಜ್‌ನು ಒಪ್ಪಿದನು. ಈ ಕೊನೆಯ ಪೆಟ್ಟು ಹೇಗಿತ್ತೆಂದರೆ, ಖಾನಮ್ ಅಫಂದಿಯವರು ಅದನ್ನು ಕಳೆದುಳಿಯಲಿಲ್ಲ. ನಾಫಿಜ್‌ನು ಎಂದೂ ಅವ

*ಖುಲಾ = ಹೆಂಡತಿಯು ಗಂಡನನ್ನ ಬಿಡುವದು

ಕೂಡನೆ ಕಷ್ಟವನ್ನು ಹೇಳಿಕೊಳ್ಳದಿದ್ದರೂ, ಅವರು, ನಾಫಿಜ್‌ನ ಜನ್ಮವನ್ನು ತಾನೇ ಹಾಳುಮಾಡಿದೆನೆಂಬುದನ್ನು ಖಂಡಿತವಾಗಿ ಮನಸ್ಸಿನಲ್ಲಿ ತಿಳಿದು ಕೊಂಡುಬಿಟ್ಟಿದ್ದರು. ಇದಾದನಂತರ ಅವರು ಇನ್ನು ಸ್ವಲ್ಪದಿನಗಳು ಬದುಕಿದ್ದು, ಹೃದಯಕ್ಕೆ ಒಂದು ವಿಧವಾದ ಪೆಟ್ಟುತಗಲಿದಂತಾಗಿ ಅದ ರಿಂದಲೇ ಪ್ರಾಣಬಿಟ್ಟರು.

ಇದನ್ನು ಕೇಳಿ ನಾನು ಬಹಳ ಅತ್ತೆನು. ಕೊಂಚ ಹೊತ್ತು ನಾವಿಬ್ಬರೂ ಮೌನವಾಗಿ ಕುಳಿತಿದ್ದೆವು. ಆಮೇಲೆ ಅಲೀಬೇಯು ಪುನಃ ಮಾತನಾಡಿದಾಗ ಅವರ ಧ್ವನಿಯಿಂದ ಏನೆಯೋ ಒಳ್ಳೆ ಸಮಾಚಾರವನ್ನು ಹೇಳುವರೆಂದು ತೋರಿತು.

ಅಲೀಬೇ—ನಾಫಿಜನು ಈಚೆಗೆ ತರಾಬ್ಜದಲ್ಲಿರುವನು. ಯುದ್ಧ ಪ್ರಾರಂಭ ವಾಗುವವರೆಗೂ ನನ್ನ ದಂಡಿಗೆ ಅಲ್ಲೇ ಇರಲು ಅಜ್ಞೆಯಾಗಿರುವದು. ಆದುದರಿಂದ ನಾನು ಅವನನ್ನು ನೋಡುವದು ಖಂಡಿತವು. ನೀನು ಅಕಸ್ಮಾತ್ ನನಗೆ ಸಿಕ್ಕಿದುದರ ವಿಚಾರವನ್ನು ಅವನಿಗೆ ತಿಳಿಸಿ, ಮನೆಗೂ ಸಹ ಬರೆಯುವೆನು, ಯಾಕೆಂದರೆ ನಿನ್ನ ಕ್ಷೇಮಸಮಾಚಾರವನ್ನು ಕೇಳಿ ನಸಿರುಲ್ಲಾ ಪಾಷಾರವರು ಹರ್ಷಗೊಳ್ಳುವರು. ನಿನ್ನ ಕಡೆಯಿಂದೇನಾದರೂ ಬರೆಯಬೇಕಾಗಿದ್ದರೆ ಹೇಳು.

ನಾನು—(ನಾಚಿಕೆಯಿಂದ) ನನ್ನ ಕಡೆಯಿಂದ ಎಲ್ಲರಿಗೂ ಪ್ರೀತಿಪುರಸ್ಸರ ವಚನಗಳನ್ನು ತಿಳಿಸಿರಿ-ಮತ್ತೂ ನಾನು ಪ್ರತಿನಿಮಿಷವೂ ಅವರ ಕೃಪೆಗೆ ಪರವಶಳಾಗಿದ್ದೆನೆಂದೂ ಮತ್ತು ಎಂದೆಂದಿಗೂ ಇರುವೆನೆಂದು.

ಅಲೀಬೇ—ಒಳ್ಳೆದು, ನಾಫಿಜ್‌ಸಿಗೆ ಏನು ಹೇಳಲಿ? ಅನಾತೂಲಿಯದ ತುರಕನ್ಯಾರನ್ನೂ ನೀನು ಮದುವೆಯಾಗಿಲ್ಲದಿದ್ದರೆ, ನಾಫಿಜ್‌ನನ್ನು ಈಗ ಮದುವೆಯಾಗಲು ಯಾವ ವಿಚಾರವೂ ಅಡ್ಡಿಬರದೆಂಬುದನ್ನು ಜ್ಞಾಪಕ ದಲ್ಲಿಟ್ಟುಕೊ.

ನಾನು—(ನನ್ನ ಹೃದಯದಲ್ಲಿ ಆಗ ಹೊಸ ಆಶೆಗಳು ಮೂಡಿಬರುತ್ತಾ, ಜಗತ್ತೆಲ್ಲ ಕಣ್ಣಿಗೆ ಅಪೂರ್ವವಾದ ಸೌಂದರ್ಯದಿಂದ ಕೂಡಿ ಕಾಣುತ್ತಿದ್ದರು ಕೂಡ, ಅರ್ಥೋಕ್ತಿಯಿಂದ) ಆದರೆ ಪ್ರಾಯಶಃ ಅವರ ಮನಸ್ಸು ಹಾಗಿರ ಲಾರದು.

ಅಲೀಬೇ—(ಜೋರಾಗಿ ನಕ್ಕು) ಸಾಕು ಇಷ್ಟು ತಾನೆ. ಹಾಗಾದರೆ ಅವನೂ ತನ್ನ ಪೂರ್ವಸಂಕಲ್ಪವನ್ನು ದೃಢವಾಗಿ ಇಟ್ಟುಕೊಂಡಿದ್ದ ಪಕ್ಷದಲ್ಲಿ, ಮದುವೆ ಯಾಗಲು ನಿನಗೆ ಅಭ್ಯಂತರವಿಲ್ಲವೆಂದು ಹೇಳಿಬಿಡಲೋ ? (ನಾನು ಲಜ್ಜಿತ

ಳಾಗುತ್ತಿರುವದನ್ನು ಕಂಡು, ನನ್ನನ್ನು ಉದ್ದಿಸಿ) ಅಥವರ್‌ಬೇಯು ಆ ಕಾಲದಲ್ಲಿ ಒಂದು ದಿನ ನಿನ್ನ ಮಾನಸಿಕಸ್ಥಿಯನ್ನು ಕೇಳಿ ನಿನಗೆ ಮುದ್ದಿಟ್ಟಿದ್ದರು. ನಿನ್ನ ಮಿತ್ರನಾಗಿರುವ ಸಂಬಂಧದ ಮೇಲೆ, ಈ ಸಮಯದಲ್ಲಿ ಅವರನ್ನು ಅನುಸರಿಸಲು ನನಗೂ ಸ್ವತಂತ್ರವಿರುವದೆಂದು ನಾನು ತಿಳಿದಿರುವೆನು. ಇದೋ ಹೋಗಿಬರುವೆನು. ಇನ್ನು ನಾನು ನನ್ನ ಸೈನ್ಯದೊಡನೆ ಹೋಗಿ ಸೇರಿಕೊಳ್ಳಬೇಕು.

ಹದಿನೆಂಟನೆಯ ಪರಿಚ್ಛೇದ

ಅಲೀಬೇಯೊಡನೆ ಸಮಾಗಮಿಸಿದನಂತರ, ಒಂದು ತಿಂಗಳು ಮಾತು ಮಾತಿನಲ್ಲಿ ಕಳೆದುಹೋಯಿತು. ಯುದ್ಧವು ಈಗ ಜೋರಿನಿಂದ ನಡೆಯುತ್ತಿತ್ತು. ನಾಫಿಜ್‌ಬೇಯ ಜೀವಿಕೆಯ ವಿಚಾರವಾಗಿ ಭಯವು ಪ್ರತಿದಿನವೂ ನನ್ನನ್ನು ಹೊಸರೀತಿಯಲ್ಲಿ ಭಾಧಿಸುತ್ತಿತ್ತು. ಖಸ್ತಂತನಿಯಾದಿಂದಾಗಲೀ, ನಾಫಿಜ್‌ಬೇಯ ಬಳಿಯಿಂದಾಗಲೀ ಯಾವ ವಿಧವಾದ ಪತ್ರ ಸಮಾಚಾರವೂ ಬರದಿದ್ದ ಕಾರಣ, ಅಲೀಬೇಯವರು, ಮನೆಯಲ್ಲಿ ಎಲ್ಲರೂ ನನ್ನನ್ನು ನೋಡಲು ಅತ್ಯಂತ ಕಾತುರರಾಗಿರುವರೆಂದು ತಪ್ಪು ಯೋಚಿಸಿದರೋ, ಎಂದು ನನ್ನ ಮನಸ್ಸಿನಲ್ಲಿ ಸಂದೇಹಹುಟ್ಟಾಯಿತು. ಆದರೆ ಒಂದು ದಿನ ಬೆಳಿಗ್ಗೆಯಹೊತ್ತು ನಾನು ಅಡಿಗೆಮನೆಯಲ್ಲಿದ್ದಾಗ, ಯಾರೋ ಬಾಗಿಲನ್ನು ತಟ್ಟಿದರು. ಒಂದು ಘಳಿಗೆಯ ನಂತರ ಬೀಗುಲ್‌ಫಿದಳು ಘಾಬರಿಯಿಂದ ಕೂಡಿದವಳಾಗಿ ನನ್ನ ಹತ್ತಿರ ಬಂದಳು.

ಬೀಗುಲ್‌ಫಿದಾ—ಯಾರೋ ನಿನ್ನನ್ನು ನೋಡಲಪೇಕ್ಷಿಸುತ್ತಾರೆ. ನಸಿರುಲ್ಲಾ ಪಾಷಾರವರ ಬಳಿಯಿಂದ ಬಂದಿರುವೆನೆಂದು ಹೇಳುತ್ತಾರೆ.

ನಾನು ಬೇಗನೆ ಓಡಿಹೋಗಿ, ಅದು ಅಥವರ್‌ಬೇಯುವರಾಗಿದ್ದುದನ್ನು ಕಂಡೆನು.

ಅಥವರ್‌ಬೇ—(ನನ್ನ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು, ಘಟ್ಟಿಯಾಗಿ ಅದುಮಿ) ಹಾಜಿರೇ, ನಾನು ನಿನ್ನನ್ನು ಮನೆಗೆ ಕರೆದುಕೊಂಡು ಹೋಗಲು ಬಂದಿರುವೆನು. ನಾಫಿಜ್‌ನಾದರೋ ಈಗ ಯುದ್ಧರಂಗದಲ್ಲಿರುವನು, ಆದರೆ ತಂದೆಯವರು ನನ್ನನ್ನು ಕಳುಹಿಸಿ, ತಾವು ಈಗ ನಿನ್ನನ್ನು ನಾಫಿಜ್‌ಬೇಯ ವಧುವಾಗಿ ಹಿಂದಕ್ಕೆ ಕರೆಯುವರೆಂದು ಹೇಳಿರುವರು.

ನನ್ನ ಮುಖವು ನಾಚಿಕೆಯಿಂದ ಕೆಂಪಾಗಿಹೋಯಿತು. ಅಥವರ್‌ಬೇಯು

ಅವಸರದಿಂದ ನನ್ನ ಕೈಯನ್ನು ಬಿಟ್ಟು ಕಿಟಕಿಯಕಡೆ ಹೋಗಿ ಒಂದು ಘಳಿಗೆಯ ನಂತರ ಪುನಃ ನನ್ನ ಹತ್ತಿರ ಬಂದರು.

ಅಧರ್ಮ್‌ಬೇ—ಏನಮ್ಮಾ, ನಾಳೆ ಹೊರಡುವದೇ? ನಾನು ಬೇಗನೆ ಹಿಂತಿರುಗಿ ಹೋಗಬೇಕು.

ಮಾರಣೆಯದಿನ ಬೀಗುಲ್‌ಫಿದಳಿಗೂ, ಷೇಕರಿಗೂ ಹೃತ್ಪೂರ್ವಕವಾದ ವಂದನೆಯನ್ನು ಮಾಡಿ, ನಾವಿಬ್ಬರೂ ಅಲ್ಲಿಂದ ಹೊರಟೆವು. ಖುಸ್ತಂತನಿಯಾದಲ್ಲಿ, ಪಲಿಯಾಖಾನಮಳೂ ವಹೀದಾಖಾನಮಳೂ ಬಹಳ ಹರ್ಷದಿಂದ ನನ್ನನ್ನು ಸ್ವಾಗತಿಸಿ, ನನ್ನನ್ನು ಕಂಡು ಹಿಗ್ಗಿಹೋದರು. ಈ ಸಂತೋಷವನ್ನು ಇಮ್ಮಡಿಮಾಡಲು, ಸನಿಯಾಖಾನಮಳೂ ಇಜ್ಜತ್ ಪಾಷಾರವರ ಸಮೇತ ಅಲ್ಲಿ ಬಂದು ಇದ್ದಳು. ಈ ಬೆಂಕಿಯ ಅನಾಹುತವಾದ ಐದಾರು ತಿಂಗಳನಂತರ ಹಾಫಿಜ್‌ಪಾಷಾರವರು ದೈವಾಧೀನರಾದರೆಂದೂ, ಸನಿಯಾಖಾನಮಳು ಖುಸ್ತಂತನಿಯಾಕ್ಕೆ ಬಂದುಬಿಟ್ಟಳೆಂದೂ ತಿಳಿಯಿತು. ನಸಿರುಲ್ಲಾಪಾಷಾರವರು ನನ್ನನ್ನು ಅತ್ಯಂತ ಕರುಣೆಯಿಂದ ಕಂಡು ಬಹು ಪ್ರೀತಿಯಿಂದ ಮುದ್ದಿಸಿದರು.

ನಸಿರುಲ್ಲಾಪಾಷಾ—ಹಾಜಿರೇ, ನೀನು ನಮ್ಮೆಲ್ಲರನ್ನೂ ಕ್ಷಮಿಸಲು ಸಾಧ್ಯವೆ? ನಮ್ಮಿಂದ ನೀನು ಅಪಾರವಾದ ಕಷ್ಟಗಳನ್ನು ಅನುಭವಿಸಬೇಕಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ನಿನ್ನ ಜೀವಮಾನವೂ ಪಾಪ, ಆ ಹುಡುಗನ ಜೀವಮಾನವೂ ನಮ್ಮ ದೆಸೆಯಿಂದಲೇ ಇದುವರೆವಿಗೆ ಇಷ್ಟು ಕೆಟ್ಟುಹೋದುದು.

ನಾನು—(ನಾಚಿಕೆಗೊಂಡು) ತಾವು ಇದೇನನ್ನು ನುಡಿಯುತ್ತಿರುವಿರಿ? ತಮ್ಮ ಕೃಪೆಯನ್ನೂ ಅಧರ್ಮ್‌ಬೇಯವರ ಕೃಪೆಯನ್ನೂ ನಾನು ಯಾವ ರೀತಿ ಮರೆಯಬಲ್ಲೆನು. ಪೂಜ್ಯರಾದ ತಾವಿಬ್ಬರೇ, ನಾನು ಇಲ್ಲಿಗೆ ಹಿಂತಿರುಗಿ ಬರಲು ಕಾರಣರಾದಿರಿ. ಇಲ್ಲದಿದ್ದರೆ, ನನ್ನ ಜನ್ಮವೆಲ್ಲ, ನಾಫಿಜ್‌ಬೇಯ ದುಃಖಕ್ಕೂ ದುರಾದೃಷ್ಟಕ್ಕೂ ನಾನೇ ಕಾರಣವಾದೆನೆಂಬ ಚಿಂತೆಯಲ್ಲಿ ಕಳೆಯುತ್ತಿತ್ತು.

ಇದಾದನಂತ, ಬಹುದಿನಗಳು ಚಿಂತೆಯಲ್ಲೂ ವ್ಯಾಕುಲತೆಯಲ್ಲೂ ಕಳೆದವು. ಯುದ್ಧಸಮಾಚಾರಗಳು ವಿಶೇಷ ಉತ್ಸಾಹದಿಂದಲೂ ಆಶೆಯಿಂದಲೂ ಓದಲ್ಪಡುತ್ತಿದ್ದವು. ನಾಫಿಜ್‌ಬೇ, ಅಲೀಬೇ ಇಬ್ಬರೂ ಪಲೋನಾದಲ್ಲಿದ್ದರು. ಅಲ್ಲಿಯ ಅದ್ವಿತೀಯ ರಣಧಾಳಿಯ ವಿಷಯ ನಾವುಗಳು ಬಹಳ ಗರ್ವದಿಂದ ಓದುತ್ತಿದ್ದೆವು. ಕಟ್ಟಕಡೆಗೆ ಆಶಾಪ್ರಭಾತವು ಉದಯವಾಗಿ, ಅವರಿಬ್ಬರ ಕ್ಷೇಮಸಮಾಚಾರವು ತಿಳಿಯಿತು. ಎಲ್ಲರೂ ದೇವರಿಗೆ

ಹರ್ಷದಿಂದ ನಮಸ್ಕರಿಸಿದರು. ಅವರು ಹಿಂತಿರುಗಿ ಬರಲು ಇನ್ನೂ ಬಹಳ ಕಾಲವಿತ್ತಾದರೂ, ದೇವರು ಆ ದಿನವನ್ನೂ ತ್ವರಿತದಲ್ಲೇ ತೋರಿಸಿದನು. ನಾವು ಹಳ್ಳಿಮನೆಯಲ್ಲಿದ್ದೆವಾದುದರಿಂದ, ಅವರನ್ನು ಕರೆದುಕೊಂಡುಬರಲು ದೋಣಿಯು ಕಳುಹಿಸಲ್ಪಟ್ಟಿತ್ತು. ನಾನು ಉದ್ಯಾನವನಕ್ಕೆ ಹೋಗಿ ಅವರ ಬರುವಿಕೆಯನ್ನು ಕಾದುಕೊಂಡಿದ್ದೆನು. ಅವನು ತನ್ನ ಪತ್ರ ವ್ಯಾವುದರಲ್ಲೂ ನನ್ನ ವಿಷಯ ಬರೆಯದಿದ್ದುದರಿಂದ ನನ್ನನ್ನೆಲ್ಲಿಯಾದರೂ ಮರೆತುಬಿಟ್ಟಿರುವನೋ ಎಂಬ ಶಂಕೆಯು ನನ್ನ ಮನಸ್ಸಿಗೆ ಇತ್ತು ಸಮುದ್ರದ ಕಡೆ ನೋಡಿ ನೋಡಿ ಕಣ್ಣುಗಳು ನೋಯಲಾರಂಭಿಸಿದವು. ಅವನು ನಿಜವಾಗಿಯೂ ನನ್ನನ್ನು ಮರೆತುಬಿಟ್ಟಿದ್ದರೆ ನನ್ನ ವಿಷಯವಾಗಿ ಏನು ತಿಳಿದುಕೊಳ್ಳುವನು ? ತನ್ನಿಂದ ಕರೆಯಿಸಿಕೊಳ್ಳಲ್ಪಡದೆ ಇಲ್ಲಿಗೆ ಬಂದಿರುವೆನೆಂದು-ಇಷ್ಟೇ. ಈ ಕಾರಣದಿಂದ ಅವನು ನನ್ನನ್ನು ದಾಕ್ಷಿಣ್ಯ ರಹಿತಳೆಂದು ತಿಳಿದರೆ, ಅದು ಅನುಚಿತವಾಗಲಾರದು. ನಾನು ಮನಸ್ಸಿನಲ್ಲಿ ಈ ವಿಧವಾದ ಆಲೋಚನೆಗಳನ್ನು ಮಾಡಿಕೊಳ್ಳುತ್ತಿರುವಾಗ, ಯಾರೋ ಬರುತ್ತಿರುವ ಸದ್ದು ಕೇಳಿಸಿತು. ನಾನು, ಇದ್ದ ಸ್ಥಳದಿಂದ ಕೊಂಚವಾದರೂ ಅಲುಗುವಷ್ಟರೊಳಗೆ, ಯಾರೋ ನನ್ನನ್ನು ಭರದಿಂದ ಅಪ್ಪಿಕೊಳ್ಳಲು, ನನ್ನ ಸಂದೇಹವೆಲ್ಲ ನಿವಾರಣೆಯಾಯಿತು. ಕೆಲ ನಿಮಿಷಗಳನಂತರ ನಾನು ತಲೆಯನ್ನೆತ್ತಿ ಅವನೊಡನೆ ಕಣ್ಣುಗಳನ್ನು ಐಕ್ಯ ಮಾಡಿದೆನು. ಅವನ ದೃಷ್ಟಿಯು ಸಂತೋಷಾಧಿಕ್ಯದಿಂದ ನನ್ನ ಮೇಲೆ ಯಾವ ರೀತಿ ನೆಟ್ಟಿತ್ತೆಂದರೆ, ನನ್ನ ಕಣ್ಣುಗಳಲ್ಲೂ ಆನಂದದಿಂದ ಬಾಷ್ಪವು ಸುರಿಯಲಾರಂಭಿಸಿತು. ಅದರಿಷ್ಟರಲ್ಲೇ, ನಾನು, ಅವನ ಮುಖವು ಮೊದಲಿಗೆ ಹೋಲಿಸಿದರೆ ಎಷ್ಟು ಬದಲಾಯಿಸಿತ್ತೆಂಬುದನ್ನು ತಿಳಿದುಕೊಂಡೆನು. ಮೊದಲಿನ ಆ ಸಂತೋಷವೂ ಆ ಹರ್ಷಚಿತ್ತವೂ ಮುಖದಲ್ಲಿ ಕಾಣಿಸುತ್ತಿರಲಿಲ್ಲ. ಅತಿ ನಿಸ್ತೇಜಕನಾಗಿ ಹೋಗಿದ್ದನು. ವ್ಯಥೆಯನ್ನೂ ವ್ಯಾಕುಲತೆಯನ್ನೂ ಸೂಚಿಸುವ ದೊಡ್ಡ ಸುಕ್ಕುಗಳು ಹಣೆಯ ಮೇಲೆ ಬಿದ್ದಿದ್ದವು. ಆದರೆ ಈಗ ಅವನನ್ನು ಮತ್ಯಾರು ರೂಪವಂತನೆಂದು ಕರೆಯುತ್ತಿರಲಿಲ್ಲವಾದರೂ, ನಾನು ಅವನನ್ನು ಇನ್ನೂ ನನ್ನ ಮಜನೂನ್* ನೆಂದು ಭಾವಿಸಿ, ನಾನು ಅವನ ಲೈಲಳಾಗಿದ್ದೆನು.*


ನಾನು—(ಅತಿ ಮೆಲ್ಲಗಿರುವ ಧ್ವನಿಯಲ್ಲಿ ಬಹು ಪ್ರೀತಿಯಿಂದ) ಜೀವಾಧಿಕ,

*ಮಜನೂನ್ | ಪ್ರಸಿದ್ಧವಾದ ಪುರಾತನ ಫಾರ್ಸಿಕಾವ್ಯದ ಕಥಾನಾಯಕರು
*ಲೈಲ |

ಕೊನೆಗೆ ನಾವಿಬ್ಬರೂ ಮತ್ತೆ ಸೇರಿದೆವು! ಈಸಾರಿ ಇದು ಸ್ವಪ್ನವೇನೂ ಅಲ್ಲ. ನಾಫಿಜ್‌ಬೇ—(ಬೇಗನೆ) ಪ್ಯಾರಿ, ಅಲ್ಲ. ಜಗದೀಶ್ವರನಿಗೆ ಕೋಟಿಕೋಟಿ ವಂದನೆಗಳು. ಇನ್ನು ಪುನಃ ನಾನು ನಿನ್ನ ಅಗಲಿಕೆಯನ್ನು ತಾಳುವವನಾಗಿಲ್ಲ.

ಸೂರ್ಯನು ಅಸ್ತಮಯನಾಗಿ ಹೋಗಿದ್ದನು. ಆದರೆ ಸಂಧ್ಯಾರಾಗವಿನ್ನೂ ಸ್ವಲ್ಪ ಉಳಿದಿರುವಾಗಲೇ, ನಾವಿಬ್ಬರೂ, ಒಬ್ಬರೊಬ್ಬರ ಆಲಿಂಗನದ ಸೌಖ್ಯವನ್ನನುಭವಿಸುತ್ತ ಮನೆಯೊಳಗೆ ಹೋದೆವು.





* * *





ಣಾಜಿಗಾ

